ಹುಲಿ–ಭಾರತದ ರಾಷ್ಟ್ರೀಯ ಮೃಗ

ಸಿ ಎಚ್ ಬಸಪ್ಪ



1977

ಕನ್ನಡ ಅಧ್ಯಯನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಪ್ರಕಟಣೆ: 71

ಹುಲಿ-ಭಾರತದ ರಾಷ್ಟ್ರೀಯ ಮೃಗ

ಸಿ. ಎಚ್. ಬಸಪ್ಪನವರ
ಡೆಪ್ಯೂಟಿ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್

1977
ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು - 560024.

ಹುಲಿ–ಭಾರತದ ರಾಷ್ಟ್ರೀಯ ಮೃಗ (ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಿಂದ ಸಿದ್ಧಗೊಂಡು ಸಂವಹನ ಸಮಿತಿ ಪ್ರಕಾಶಿತ). ಪ್ರಥಮ ಮುದ್ರಣ 1977. ಪ್ರತಿಗಳು 1000. ಪುಟಗಳು xii + 184

ಬೆಲೆ: ಸಾದಾ ಪ್ರತಿ ರೂ 20–00

ಕ್ಯಾಲಿಕೊ ಪ್ರತಿ ರೂ 24–00

ಪ್ರಧಾನ ಸಂಪಾದನೆ

ವೀ. ಚ. ಹಿತ್ತಲಮನಿ

ಕನ್ನಡ ಪ್ರಾಧ್ಯಾಪಕರು

ತಾಂತ್ರಿಕ ಪರಿಶೀಲನೆ

ಜಿ. ಆರ್. ಮಾವಿನಕುರ್ವೆ

ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆಯ

ಮುಖ್ಯ ಕನ್ಸರ್ವೇಟರರು

ಕಲೆ

ಎ. ಫಿಲಿಪ್ ರಾಜು

ಮುದ್ರಕರು: ಡಬ್ಲ್ಯು. ಕ್ಯು. ಜಡ್ಜ್ ಪ್ರೆಸ್, ಬೆಂಗಳೂರು-560025.

ಕುಲಪತಿಗಳ ಹಾರೈಕೆ

ಇಂದಿನ ವಿಶ್ವದಲ್ಲಿನ ಹಲವಾರು ಸಮಸ್ಯೆಗಳಿಗೆ ಕೃಷಿ ಉತ್ಪಾದನೆಯ ಹೆಚ್ಚಳವೇ ಬಹುಮಟ್ಟಿಗೆ ಪರಿಹಾರ ಒದಗಿಸಲು ಸಾಧ್ಯ. ಕೃಷಿ ಉತ್ಪಾದನೆಯ ಹೆಚ್ಚಳವು ಕೃಷಿ ಸಂಶೋಧನೆಗಳ ಫಲಿತಾಂಶಗಳನ್ನಳವಡಿಸುವಿಕೆಯನ್ನು ಅವಲಂಬಿಸಿದೆ. ಕಳೆದ ಒಂದು ದಶಕದಲ್ಲಿ ಕೃಷಿ ಸಂಶೋಧನೆಯು ನಾನಾ ಮುಖವಾಗಿ ಬೆಳೆದಿದೆ. ಅದರ ಪ್ರಯೋಜನವನ್ನು ಕೆಲವು ರೈತರು ಪಡೆದಿದ್ದಾರೆ. ಅವರಲ್ಲಿ ಕೆಲವರು ಹೆಚ್ಚಿನ ಪ್ರಗತಿಯನ್ನು ಸಾಧಿಸಿ ಜಾಗತಿಕ ಗರಿಷ್ಠ ಸಾಧನೆಯನ್ನು ನಾವೂ ಸಾಧಿಸಲು ಭರವಸೆಯ ದೃಷ್ಟಾಂತವೆನಿಸಿದ್ದಾರೆ. ಈ ಅಳವಡಿಕೆ ಹಾಗೂ ಸಾಧನೆಗಳು ಕೆಲವರ ಸ್ವತ್ತಾಗಿ ಉಳಿಯದೆ ಸಾರ್ವತ್ರಿಕವಾಗಬೇಕು. ಆಗ ರಾಷ್ಟ್ರದಲ್ಲಿ ನಿಜವಾದ ಕೃಷಿ ಪ್ರಗತಿ ಹಾಗೂ ಸಾಮಾಜಿಕ ಕಲ್ಯಾಣ ಮೂಡಿಬರುತ್ತದೆ. ಈ ಕಾರ್ಯಸಾಧನೆಯಲ್ಲಿ ಕೃಷಿ ವಿಜ್ಞಾನ ಸಾಹಿತ್ಯ ರಚನೆಯು ಮಹತ್ವದ ಅಂಶವಾಗಿದೆ. ಈ ದೃಷ್ಟಿಯಲ್ಲಿ ಕೃಷಿ ವಿಜ್ಞಾನ ಪುಸ್ತಕಗಳು ಪ್ರಾದೇಶಿಕ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಔಚಿತ್ಯಪೂರ್ಣವಾಗಿದೆ.

ಸ್ವಾತಂತ್ರ್ಯಾನಂತರದ ಅಭ್ಯುದಯದ ಹಲವಾರು ಯತ್ನಗಳಲ್ಲಿ ರಾಷ್ಟ್ರೀಯ ಭಾಷೆಗಳ ಅಭಿವೃದ್ಧಿಯೂ ಒಂದು. ಹಿಂದಿ ಭಾಷೆಯೊಂದಿಗೇನೇ ಇತರ ಎಲ್ಲ ಪ್ರಾದೇಶಿಕ ಭಾಷೆಗಳ ಬೆಳವಣಿಗೆ ನಡೆಯಬೇಕೆಂದು ಸಂಸತ್ತು ನಿರ್ಧರಿಸಿದೆ. ಹಲವಾರು ಭಾಷೆಗಳು ಬಳಕೆಯಲ್ಲಿರುವ ನಮ್ಮ ರಾಷ್ಟ್ರದಲ್ಲಿ ಎಲ್ಲ ಭಾಷೆಗಳೂ ಸಮತೂಕವಾಗಿ ಬೆಳೆದು ಬಂದಾಗಲೇ ರಾಷ್ಟ್ರದ ಸಮಗ್ರತೆ ಬೆಳೆದುಬರುತ್ತದೆ. ಈ ಭಾಷೆಗಳು ಸಾಕಷ್ಟು ಅಭಿವೃದ್ಧಿ ಹೊಂದಿದಾಗ ಶಿಕ್ಷಣ ಮಾಧ್ಯಮಗಳಾಗಲು ಸಮರ್ಥವಾಗುತ್ತವೆ. ನಾಡಿನ ಭಾಷೆಗಳೆಲ್ಲವನ್ನೂ ಶಿಕ್ಷಣ ಮಾಧ್ಯಮಗಳಾಗುವಂತೆ ಬಲಗೊಳಿಸುವ ಹೊಣೆ ವಿವಿಧ ವಿಶ್ವವಿದ್ಯಾನಿಲಯಗಳದ್ದು. ಅದಕ್ಕನುಗುಣವಾಗಿ ಪ್ರಾದೇಶಿಕ ಭಾಷೆಗಳು ಕೃಷಿ ಶಿಕ್ಷಣ ಮಾಧ್ಯಮಗಳಾಗುವಂತೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾದದ್ದು ಕೃಷಿ ವಿಶ್ವವಿದ್ಯಾನಿಲಯಗಳ ಕೆಲಸವಾಗಿದೆ. ನಮ್ಮ ಕೃಷಿ ವಿಶ್ವವಿದ್ಯಾನಿಲಯವು ಈ ಕಾರ್ಯಸಾಧನೆಗೋಸುಗ ಕನ್ನಡದಲ್ಲಿ ಕೃಷಿ ಸಾಹಿತ್ಯ ನಿರ್ಮಾಣ ಕೈಗೆತ್ತಿಕೊಂಡಿದೆ. ಇಷ್ಟು ದಿನ ಇಂಗ್ಲಿಷ್ ಭಾಷೆಯಲ್ಲಿಯೇ ಶಿಕ್ಷಣ ಪಡೆದು, ಬಳಿಕ ನಡೆಯಿಸಿದ ಶಿಕ್ಷಕ ಹಾಗೂ ವಿಜ್ಞಾನಿಗಳಿಗೆ ಒಮ್ಮೆಲೇ ಪ್ರಾದೇಶಿಕ ಭಾಷೆಗಳಲ್ಲಿ ಗ್ರಂಥರಚನೆ ಮಾಡುವುದು ಸುಲಭ ಕಾರ್ಯವೇನಲ್ಲ. ಇಂಥದರಲ್ಲಿ ಈ ಕೆಲಸ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭವಾದ ಅಲ್ಪಾವಧಿಯಲ್ಲಿ ಮುಕ್ಕಾಲು ಶತಗ್ರಂಥಗಳು ಪ್ರಕಟಗೊಂಡು ಜನಪ್ರಿಯವಾದುದು ಅತ್ಯಂತ ಹೆಮ್ಮೆಯ ಸಾಧನೆ.

ಉಪಯುಕ್ತ ಸಂಶೋಧನಾಧಾರಿತ ಆಳ ಅಭ್ಯಾಸದ ಫಲವಾಗಿ ಸೃಷ್ಟಿಗೊಂಡ ಕೃಷಿ ವಿಜ್ಞಾನ ಗ್ರಂಥಗಳು ನಮ್ಮ ರಾಜ್ಯದ ಕೃಷಿ ವಿದ್ಯಾರ್ಥಿ ಹಾಗೂ ಕೃಷಿಕರಿಗೆ ಅಮೂಲ್ಯ ಕೊಡುಗೆಗಳಾಗುವುದರಲ್ಲಿ ಸಂದೇಹವಿಲ್ಲ. ಈ ಕಾರ್ಯ ಮಿಂಚಿನ ವೇಗ ದಿಂದ ನಡೆಯಲೆಂದು ನಾನು ಹಾರೈಸುತ್ತೇನೆ.

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560024
ತಾ॥ 1-9-1977

ಹ. ರಾ. ಅರಕೇರಿ
ಕುಲಪತಿಗಳು

ಸಂಪಾದಕರ ಮಾತು

ಕೃಷಿ ವಿಜ್ಞಾನ ಪ್ರಾಮುಖ್ಯವಾಗಿ ವ್ಯವಸಾಯ, ಪಶುಸಂಗೋಪನೆ ಹಾಗೂ ಪಶುವೈದ್ಯಕೀಯ, ಗೃಹವಿಜ್ಞಾನ, ಮತ್ಸ್ಯಶಾಸ್ತ್ರ, ಅರಣ್ಯಶಾಸ್ತ್ರ ಮತ್ತು ಸಂಬಂಧಪಟ್ಟ ಹಲವಾರು ಅಂಗಗಳನ್ನು ಒಳಗೊಂಡಿದೆ. ವ್ಯವಸಾಯ ಹಾಗೂ ಅರಣ್ಯಶಾಸ್ತ್ರಗಳಿಗೆ ಅನ್ಯೋನ್ಯ ಸಂಬಂಧವಿದೆ. ಅರಣ್ಯಗಾರಿಕೆಯನ್ನು ವ್ಯವಸಾಯದ ಸಾಕುತಾಯಿಯೆಂದು ಕರೆಯುವ ಪರಿಪಾಠವಿದೆ.

ಅರಣ್ಯಗಾರಿಕೆಯು ಶಾಸ್ತ್ರೀಯವಾಗಿ ಕಾಡು ಬೆಳೆಸುವಿಕೆ, ನಿರ್ವಹಿಸುವಿಕೆ ಹಾಗೂ ವಿನಿಯೋಗಿಸುವಿಕೆಗಳನ್ನು ಒಳಗೊಂಡಿದೆ. ಕಾಡಿನಲ್ಲಿಯ ಸಸ್ಯಸಂಪತ್ತು ಹಾಗೂ ವನ್ಯ ಜೀವನಗಳಲ್ಲಿ ಪರಸ್ಪರ ಸಹಜೀವನ ನೆಲೆಸಿರುತ್ತದೆ. ಇವೆರಡನ್ನೂ ಕಾಪಾಡಿಕೊಂಡು ವೃದ್ಧಿಗೈಯ್ಯುವುದೇ ಸಂಪದ್ಭರಿತವಾದ ಅರಣ್ಯಸಾಧನೆ.

ಅರಣ್ಯಗಳಲ್ಲಿ ಗಿಡಮರಗಳನ್ನು ಬೆಳೆಸಿ ನಿರ್ವಹಿಸುವಂತೆಯೇ ವನ್ಯಮೃಗಪಕ್ಷಿಗಳನ್ನು ಪೋಷಿಸಿ ಜೋಪಾಸನೆಗೈಯ್ಯುವುದು ನಿಸರ್ಗಸಂರಕ್ಷಣೆಯ ಒಂದು ಪ್ರಮುಖ ಕಾರ್ಯವೆನಿಸಿದೆ. ನಮ್ಮ ಅರಣ್ಯಗಳು ಬಹು ಬೆಲೆಯುಳ್ಳ ವೃಕ್ಷರಾಜಗಳನ್ನು ಪಡೆದಿರುವಂತೆ ಅತ್ಯಮೂಲ್ಯ ಹಾಗೂ ವಿರಳವಾದಂತಹ ಖಗಮೃಗ ಸಂಪತ್ತನ್ನೂ ಪಡೆದಿದೆ. ಮೃಗರಾಜನೆನಿಸಿಕೊಂಡ ಸಿಂಹಗಳಿಗೆ ತವರು ಭಾರತ. ಸಿಂಹದ ಸಮಾನ ಎತ್ತರದಲ್ಲಿ ನಿಲ್ಲಬಹುದಾದ ಇನ್ನೊಂದು ಪ್ರಾಣಿ ಹುಲಿ. ಸ್ವಾತಂತ್ರ್ಯಾನಂತರದ ಪ್ರಾರಂಭದ ಕೆಲವು ವರ್ಷ, ರಾಷ್ಟ್ರೀಯ ಮೃಗದ ಪಟ್ಟ ಸಿಂಹದ್ದಾಗಿದ್ದರೆ ಇಂದು ಆ ಪಟ್ಟ ಹುಲಿಯದಾಗಿದೆ. ರಾಷ್ಟ್ರೀಯ ಮೃಗವಾಗಿದ್ದರೂ ಹುಲಿಗಳ ಸ್ಥಿತಿ ಹೇಳಿಕೊಳ್ಳುವಂತಹುದಾಗಿಲ್ಲ. ಈ ಬಗೆಗೆ ಸಾರ್ವಜನಿಕರ ಅಭಿಪ್ರಾಯ ಕುದುರಿಸಿ ಹುಲಿಯ ಸಂರಕ್ಷಣೆಯ ಏನೆಲ್ಲ ಪ್ರಯತ್ನಗಳನ್ನು ಮಾಡುವುದು ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಆದ್ಯತೆಯದಾಗಿದೆ. ಈಗ ಪ್ರಕಟವಾಗುತ್ತಿರುವ ಈ ಪುಸ್ತಕ ಈ ದಿಸೆಯಲ್ಲಿ ಮಹತ್ವದ ಪಾತ್ರ ನಿರ್ವಹಿಸುವುದರಲ್ಲಿ ಸಂದೇಹವಿಲ್ಲ.

ಹುಲಿಗಳ ಸಾಮಾನ್ಯ ಪರಿಚಯದಿಂದ ಪ್ರಾರಂಭವಾಗಿ ಅಂಗರಚನೆ ಹಾಗೂ ಶರೀರಶಾಸ್ತ್ರ, ವಿಶೇಷ ಗುಣಸ್ವಭಾವ, ಆಹಾರ, ಬೇಟೆ, ಸಂತತಿ ಕ್ಷೀಣತೆ, ಹುಲಿಗಳ ಸಂರಕ್ಷಣೆಯ ರಾಷ್ಟ್ರೀಯ ಕಾರ್ಯಕ್ರಮ ಈ ಹಲವಾರು ವಿಷಯಗಳ ಚರ್ಚೆ ಈ ಪುಸ್ತಕದಲ್ಲಿದೆ. ಓದುಗರ ಆಸಕ್ತಿಯನ್ನು ಕೆರಳಿಸಲು ಸಂಬಂಧಪಟ್ಟ ಉಚಿತ ರೇಖಾ ಹಾಗೂ ಛಾಯಾಚಿತ್ರಗಳೂ ಈ ಗ್ರಂಥದಲ್ಲಿವೆ.

ಈ ಪುಸ್ತಕವು ಅರಣ್ಯಶಾಸ್ತ್ರಾಭ್ಯಾಸಿಗಳಿಗೂ, ನಿಸರ್ಗಸೌಂದರ್ಯೋಪಾಸಕರಿಗೂ, ಅರಣ್ಯ ಇಲಾಖೆಯ ಸಿಬ್ಬಂದಿ ವರ್ಗದವರಿಗೂ ಹೆಚ್ಚು ಪ್ರಯೋಜನ ಒದಗಿಸುವುದರಲ್ಲಿ ಸಂದೇಹವಿಲ್ಲ.

ಅರಣ್ಯ ಇಲಾಖೆಯಲ್ಲಿ ಡೆಪ್ಯೂಟಿ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ಸ್ ಆಗಿರುವ ಶ್ರೀ ಸಿ. ಎಚ್. ಬಸಪ್ಪನವರು ಅತ್ಯಂತ ಶ್ರಮವಹಿಸಿ ಈ ಪುಸ್ತಕ ರಚಿಸಿಕೊಟ್ಟಿದ್ದಾರೆ.

ಈ ಪುಸ್ತಕದ ತಾಂತ್ರಿಕ ಸಂಪಾದನೆಯನ್ನು ಕರ್ನಾಟಕ ರಾಜ್ಯದ ಅರಣ್ಯ ಇಲಾಖೆಯ ಮುಖ್ಯ ಸಂರಕ್ಷಣಾಧಿಕಾರಿಗಳಾದಂಥ ಶ್ರೀ ಜಿ. ಆರ್. ಮಾವಿನಕುರ್ವೆ ಅವರು ನಿರ್ವಹಿಸಿದ್ದಾರೆ. ಈ ಪುಸ್ತಕವನ್ನು ಅಚ್ಚಿಗೆ ಸಿದ್ಧಪಡಿಸಿ ಕರಡೋದಿಕೆಯನ್ನು ನಿರ್ವಹಿಸುವಲ್ಲಿ ಸಂಶೋಧನ ಸಹಾಯಕರಾದ ಶ್ರೀಮತಿ ಉಷಾಕಿರಣ್ ಅವರು ನೆರವಾಗಿದ್ದಾರೆ. ಸ್ವಚ್ಛಪ್ರತಿಯನ್ನು ಕು. ರಂಗಮಣಿಯುವರು ಸಿದ್ಧಪಡಿಸಿದ್ದಾರೆ. ಮುಖಚಿತ್ರದ ರಚನೆಯಲ್ಲಿ ಶ್ರೀ ಎ. ಫಿಲಿಪ್‌ರಾಜು ಮತ್ತು ಶ್ರೀ ಬಿ. ಎಂ. ವೆಂಕಟೇಶ್. ಒಳಗಿನ ಹಲವಾರು ಚಿತ್ರಗಳ ಹೊಂದಿಸುವಿಕೆಯಲ್ಲಿ ಶ್ರೀ ಅಮರೇಂದ್ರಕುಮಾರ್ ಸಹಕರಿಸಿದ್ದಾರೆ. ಈ ಪುಸ್ತಕವನ್ನು ಮುದ್ರಿಸಿಕೊಟ್ಟವರು ಡಬ್ಲ್ಯು. ಕ್ಯೂ. ಜಡ್ಜ್ ಪ್ರೆಸ್‌ನವರು. ಇವರೆಲ್ಲರಿಗೂ ನಮ್ಮ ಅನಂತ ವಂದನೆಗಳು.

ಶ್ರಾವಣ ಮಾಸ, ಪಿಂಗಳನಾಮ ಸಂವತ್ಸರ.
ಶಾಲಿವಾಹನ ಶಕ 1898
ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560024

ವೀ. ಚ. ಹಿತ್ತಲಮನಿ
ಕನ್ನಡ ಪ್ರಾಧ್ಯಾಪಕರು
ಹಾಗೂ
ಕನ್ನಡ ಅಭಿವೃದ್ಧಿ ಸಮಿತಿ ಕಾರ್ಯದರ್ಶಿಗಳು

ಲೇಖಕರ ಮಾತು

ಇಂದಿನ ಬದಲಾಗುತ್ತಿರುವ ಸ್ಥಿತಿಗಳನ್ನು ಗಮನಿಸಿದರೆ ನಮ್ಮ ಮೌಲಿಕ ಹಾಗೂ ವಾಸ್ತವಿಕ ನಿಲವು ಬದಲಾಗದಿದ್ದರೆ ವನ್ಯಜೀವಿಗಳು ಅದರಲ್ಲೂ ಭಾರತದ ಹುಲಿಗಳು ಐದಾರು ವರ್ಷಗಳಲ್ಲಿ ಕಣ್ಮರೆಯಾಗುವುದು ಖಂಡಿತ. ಈ ಹುಲಿಗಳ ಮಹತ್ವವನ್ನು ಬಿಂಬಿಸಲು ಹಾಗೂ ವಿನಾಶದಿಂದ ಹುಲಿಗಳನ್ನು ಉಳಿಸಲು ಈ ಗ್ರಂಥ ರಚನೆಗೆ ಕೈಹಾಕಿದ್ದೇನೆ.

ಭಾರತದ ಹುಲಿಗಳ ಮತ್ತು ಅವುಗಳ ಬೇಟೆಪ್ರಾಣಿಗಳ ನಿರಾಶಾದಾಯಕ ಸ್ಥಿತಿಯ ಅರಿವು ಕೆಲವು ಪ್ರಕೃತಿಶಾಸ್ತ್ರಜ್ಞರನ್ನುಳಿದು ಇತರರಿಗೆ ಇರುವುದಿಲ್ಲ. ನಮ್ಮ ದೇಶದಲ್ಲಿ ವನ್ಯಜೀವಿ ಸಂರಕ್ಷಣೆಯ ಬಗ್ಗೆ ಸರಿಯಾದ ಸ್ಪಷ್ಟ ತಿಳಿವಳಿಕೆಯೇ ಸಾರ್ವಜನಿಕರಲ್ಲಿ ಮೂಡಿಲ್ಲ. ಹೀಗಾಗಿ, ಪ್ರಾಣಿಸಂರಕ್ಷಣೆ ಬಗ್ಗೆ ಅವರಲ್ಲಿ ಆಸಕ್ತಿಯೇ ಇಲ್ಲ. ವಿಶ್ವದ ಜನತೆಯೂ ಇಂದು ಹುಲಿಯ ಉಳಿವಿನ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಮಾಡಿದೆ. ಹುಲಿಗಳ ಸಂರಕ್ಷಣೆಗಾಗಿ ಹಲವು ಮೂಲಗಳಿಂದ ಧನಸಹಾಯ ಹಾಗೂ ತಜ್ಞರ ಸಲಹೆಗಳು ದೊರೆತಿವೆ. ಶೀಘ್ರಗತಿಯಲ್ಲಿ ಅವನತಿಯತ್ತ ಹೆಜ್ಜೆ ಹಾಕುತ್ತಿರುವ ಭಾರತದ ಹುಲಿಗಳ ಸಂರಕ್ಷಣೆಗೆ ಜನತೆಯ ಅಭಿಪ್ರಾಯ ಹಾಗೂ ಧನಸಹಾಯಗಳೆರಡೂ ಅವಶ್ಯವಾಗಿವೆ. ಭಾರತೀಯರೆಲ್ಲರಿಗೂ ಎಂದಿಗಿಂತ ಇಂದು ಹುಲಿಗಳ ಸಂರಕ್ಷಣೆಯ ವಿಷಯ ಸರಿಯಾಗಿ ತಿಳಿಯಬೇಕಾಗಿದೆ.

ಅಂತರರಾಷ್ಟ್ರೀಯ ಪ್ರಕೃತಿ ಹಾಗೂ ಪ್ರಾಕೃತಿಕ ಸಂಪನ್ಮೂಲ ಸಂರಕ್ಷಣಾ ಸಂಸ್ಥೆ (ಐ.ಯು.ಸಿ.ಎನ್.)ಯು ದ್ವಿತೀಯ ವಿಶ್ವಯುದ್ಧಾನಂತರ ಅತ್ಯಂತ ಚೇತನಭರಿತವಾಗಿ ಕಾರ್ಯಮಾಡಲು ಪ್ರಾರಂಭಿಸಿದೆ; ಅದು ಸರ್ಕಾರ ಮತ್ತು ಸಾರ್ವಜನಿಕರಿಬ್ಬರಿಗೂ ತಮ್ಮ ಪಾಲಿನ ಸಂರಕ್ಷಣ ಸಮಸ್ಯೆಗಳ ಅರಿವನ್ನು ಉಂಟುಮಾಡಿದೆ. ಈ ಸಂಸ್ಥೆ, 1962ರಲ್ಲಿ ಎಲ್ಲ ಸರ್ಕಾರಗಳೂ ಹುಲಿಗಳಿಗೆ ಸಂಪೂರ್ಣ ರಕ್ಷಣೆ ಕೊಡಬೇಕೆಂದು ಮನವಿ ಮಾಡಿತು. ಈ ಮನವಿಯನ್ವಯ **ಭಾರತೀಯ ವನ್ಯಜೀವಿ ಮಂಡಳಿ**ಯವರು ಎಲ್ಲ ರಾಜ್ಯಗಳಿಗೂ ಸೂಚನೆಗಳನ್ನು ಕಳಿಸಿ ಕಡೆಯ ಪಕ್ಷ 5 ವರ್ಷಗಳವರೆಗಾದರೂ ಹುಲಿಗಳ ಬೇಟೆಯನ್ನು ನಿಷೇಧಿಸಬೇಕೆಂದು ಸಲಹೆ ನೀಡಿತು. ಅದರಂತೆ 1970 ಜುಲೈವರೆಗೆ ಭಾರತದಾದ್ಯಂತ ಹುಲಿಬೇಟೆಯನ್ನು ನಿಷೇಧಿಸಲಾಗಿತ್ತು. ಆ ಕಟ್ಟಳೆ ಇಂದಿಗೂ ಮುಂದುವರೆದಿದೆ. **ವಿಶ್ವ ವನ್ಯಜೀವಿ ನಿಧಿ (ಡಬ್ಲ್ಯು. ಡಬ್ಲ್ಯು. ಎಫ್),** ವನ್ಯಮೃಗಗಳ ಸಂರಕ್ಷಣೆಗಾಗಿ ದಾನಿಗಳಿಂದ ಹಣವನ್ನು ಸಂಗ್ರಹಿಸುವ ಕಾರ್ಯ ನಿರ್ವಹಿಸುತ್ತಿದೆ. ವನ್ಯಮೃಗಗಳ ಸಂರಕ್ಷಣೆಯಲ್ಲಿ ಐ.ಯು.ಸಿ.ಎನ್. ಮತ್ತು ಡಬ್ಲ್ಯು.ಡಬ್ಲ್ಯು.ಎಫ್.ಗಳ ನಡುವೆ ನಿಕಟ ಸಹಕಾರವಿರುವುದು ಸಂತೋಷದ ವಿಷಯ. ಐ.ಯು.ಸಿ.ಎನ್. ವೈಜ್ಞಾನಿಕ ಹಾಗೂ ತಾಂತ್ರಿಕ ಶಕ್ತಿಯಾಗಿದ್ದರೆ, ಡಬ್ಲ್ಯು.ಡಬ್ಲ್ಯು.ಎಫ್. ಸಹಾಯಧನ ಸಂಗ್ರಹಣೆ ಹಾಗೂ ಚಳುವಳಿ ಶಕ್ತಿಯಾಗಿದೆ.

ಡಬ್ಲ್ಯು.ಡಬ್ಲ್ಯು.ಎಫ್. ಕೇಂದ್ರ ಮತ್ತು ಸ್ಥಳೀಯ ಸರ್ಕಾರಗಳ ಸಹಕಾರದಿಂದ **'ಪ್ರಾಜೆಕ್ಟ್ ಟೈಗರ್'** ಭಾರತದಲ್ಲಿ 1973 ಏಪ್ರಿಲ್‌ನಲ್ಲಿ ಆಚರಣೆಯಲ್ಲಿ ಬಂದಿದೆ. ಈ ಸಕಾಲಿಕ ಕ್ರಮದಿಂದ ಭಾರತದ ಹುಲಿಗಳು ಭರದಿಂದ ಕಾಣೆಯಾಗುವುದು ಬಹುಮಟ್ಟಿಗೆ ತಪ್ಪಿದೆ.

ಶಿಲಾಯುಗದ ಕಾಲದಿಂದಲೂ ತಾನೇನು ಮಾಡುತ್ತಿರುವೆನೆಂಬುದರ ಅರಿವಿಲ್ಲದೆಯೇ ಮನುಷ್ಯ ಆಗಾಗ್ಗೆ ಅನೇಕ ಅಕೃತ್ಯಗಳನ್ನು ನಡೆಸಿದ್ದಾನೆ. ಪರಿಣಾಮವಾಗಿ 358 ಬಗೆಯ ಸಸ್ತನಿಗಳು ಹಾಗೂ ಪಕ್ಷಿಗಳ ಪ್ರತಿ ಜೀವಿಯೂ ನಾಶವಾಗಿವೆ. ಈಚೆಗೆ ಜನತೆಗೆ ವನ್ಯಪ್ರಾಣಿಪಕ್ಷಿಗಳ ಅವನತಿಯ ಅರಿವಾಗುತ್ತಿದೆ. ಅವುಗಳಿಂದ ಹೆಚ್ಚುತ್ತಿರುವ ಸೌಂದರ್ಯ ಹಾಗೂ ಆರ್ಥಿಕ ಲಾಭಗಳನ್ನು ಗ್ರಹಿಸಿದ್ದಾರೆ. ಭಾರತದ ಜನತೆಗೆ, ಅದರಲ್ಲಿಯೂ ಯುವಜನತೆಗೆ ವನ್ಯಮೃಗಗಳ ಸಂರಕ್ಷಣೆಯ ಅವಶ್ಯಕತೆ ಮನವರಿಕೆಯಾಗಬೇಕು. ಆಗ ಅವರೇ ಈ ಪ್ರಾಣಿಗಳ ರಕ್ಷಣೆಗೆ ಮುಂದಾಗುತ್ತಾರೆ.

ಇದು ನನ್ನ ಪ್ರಪ್ರಥಮ ಕೃತಿ. ಈ ಪುಸ್ತಕದಲ್ಲಿ ಹುಲಿಯ ಬಗೆಗೆ ಹಲವಾರು ವಾಸ್ತವ ವಿವರಗಳನ್ನು ನೀಡಲು ಯತ್ನಿಸಿದ್ದೇನೆ. ಈ ಗ್ರಂಥ ಪ್ರತಿ ಓದುಗರಿಗೂ ಆಸಕ್ತಿ ಹುಟ್ಟಿಸಿ ಹುಲಿಯ ಬಗ್ಗೆ ಹಲವಾರು ವಿಷಯಗಳ ಪರಿಚಯಮಾಡಿಕೊಡುತ್ತದೆ. ಅರಣ್ಯ ಇಲಾಖೆಯ ಕಾರ್ಯಕರ್ತರಿಗೆ, ಅವರ ಹಲವಾರು ತರಬೇತಿಗಳಿಗೆ ಪಠ್ಯಪುಸ್ತಕವಾಗಿಯೂ ಉಪಯೋಗವಾಗುತ್ತದೆ.

ಈ ಪುಸ್ತಕ ರಚನೆಗೆ ನನ್ನನ್ನು ಎಲ್ಲ ರೀತಿಯಿಂದಲೂ ಪ್ರೋತ್ಸಾಹಿಸಿ ಮುನ್ನಡೆಸಿದ ಪ್ರಾಧ್ಯಾಪಕರಾದ ಶ್ರೀ ವೀ.ಚ. ಹಿತ್ತಲಮನಿ ಅವರಿಗೆ ನಾನು ಋಣಿಯಾಗಿದ್ದೇನೆ. ಹಾಗೆಯೇ ಈ ಪುಸ್ತಕದ ತಾಂತ್ರಿಕ ಸಂಪಾದನೆ ನಿರ್ವಹಿಸಿಕೊಟ್ಟ ಅರಣ್ಯಗಳ ಮುಖ್ಯ ಸಂರಕ್ಷಣಾಧಿಕಾರಿಗಳಾದ ಶ್ರೀ ಜಿ. ಆರ್. ಮಾವಿನಕುರ್ವೆಯವರಿಗೂ ನನ್ನ ವಂದನೆಗಳು. ಈ ಪುಸ್ತಕದಲ್ಲಿ ಉಪಯೋಗಿಸಿದ ಕೆಲವು ಹುಲಿ ಹಾಗೂ ಹುಲಿಯ ಬೇಟೆ ಪ್ರಾಣಿಗಳ ಛಾಯಾಚಿತ್ರಗಳನ್ನು ನಮ್ಮ ರಾಜ್ಯದ ಆರ್ಥಿಕ ಮಂತ್ರಿಗಳಾದ ಸನ್ಮಾನ್ಯ ಶ್ರೀ ಎಂ. ವೈ. ಘೋರ್ಪಡೆ ಅವರು ಹಾಗೂ ಶ್ರೀ ಇ. ಹನುಮಂತರಾವ್ ಅವರು ಒದಗಿಸಿದ್ದಾರೆ. ಇವರಿಗೂ ನನ್ನ ಅಭಿನಂದನೆಗಳು.

ಬೆಂಗಳೂರು
ದಿ॥ 1-9-1977

ಸಿ. ಎಚ್. ಬಸಪ್ಪನವರ

ಪರಿವಿಡಿ

ಚಿತ್ರಗಳ ಪಟ್ಟಿ

ಕೋಷ್ಟಕಗಳ ಪಟ್ಟಿ

ಹುಲಿ-ಭಾರತದ ರಾಷ್ಟ್ರೀಯ ಮೃಗ

ತಪ್ಪು—ಒಪ್ಪೋಲೆ

ಪುಟ-ಸಾಲು	ತಪ್ಪು	ಒಪ್ಪು
2—18	ಕಣಿವೆ	ಕಡವೆ
14—29	ಉತ್ತರಕ್ಕಿಂತ	ಉತ್ತರಕಿದ್ದ
36— 3	ಸಸ್ಯಸಂಬಂಧಿಯನ್ನು	ಸಸ್ಯಸಂಬಂಧವನ್ನು
42—12	ಆಸ್ಥಿಬಂಧಕದಿಂದ	ಅಸ್ಥಿಬಂಧಕದಿಂದ
53—10	ಲಾಂಗೂಲ	ಲಾಂಗೂರ
56—22	ವಿಷವೃತ್ತ	ವಿಷಮವೃತ್ತ
75—22	ಬಲಿ	ಬೇಟೆಯ
103—16	ಮರವು	ಮರೆ
106—10	ಒಸ್ಮಾರ	ಬಸ್ಮಾರ
112—8	ಕಾಮನಾಯಿ	ಕಾಡುನಾಯಿ
142—8	(ನೈಸರ್ಗಿಕ	ನೈಸರ್ಗಿಕ
146—19	ಹಿಡಿದು ಜಾಡು	ಜಾಡು ಹಿಡಿದು
173—26	ಮಂಡಿಗೆ	ಮುಂಡಿಗೆ
145—(ಎದುರು)	ಚಿತ್ರ: 25	ಚಿತ್ರ: 24

ಅಧ್ಯಾಯ 1

ಹುಲಿಗಳ ಸಾಮಾನ್ಯ ಪರಿಚಯ

ಹುಲಿಯು ಭಾರತದ ರಾಷ್ಟ್ರೀಯ ಮೃಗ. ವಿಶ್ವದ ಅನೇಕ ದೇಶಗಳಲ್ಲಿಯೂ ಹುಲಿಯು ರಾಷ್ಟ್ರಮಟ್ಟದ ಪ್ರಮುಖ ಪ್ರಾಣಿಯಾಗಿದೆ. ಕೊರಿಯಾ ಜನರಿಗೆ ಹುಲಿ ಮೃಗರಾಜ; ನೈಜೀರಿಯಾದ ಜನರಲ್ಲಿ ಹುಲಿ ಬೇಟೆ ಪರಂಪರಾಗತವಾಗಿ ಬಂದ ವಿಷಯ. ಚೀನದಲ್ಲಿ ಬಹಳಷ್ಟು ಮನೆಗಳ ಗೋಡೆಗಳ ಮೇಲೆ ಸಣ್ಣಳತೆಯ ಹುಲಿ ಚಿತ್ರಗಳಿವೆ. ಅವರು ಅವುಗಳನ್ನು ಶಾಸ್ತ್ರೀಯ ಸಾಹಿತ್ಯ ಸಂಪತ್ತೆಂದು ಬಣ್ಣಿಸುತ್ತಾರೆ. ಮಲಯಾ ಹಾಗೂ ಸಿಂಗಪುರಗಳಲ್ಲಿ ಹುಲಿ ಇಂದಿಗೂ ರಾಷ್ಟ್ರೀಯ ಲಾಂಛನಗಳಲ್ಲಿ ರಾರಾಜಿಸುತ್ತದೆ.

ಪ್ರಾಣಿಪ್ರಪಂಚದಲ್ಲಿ ಹುಲಿ

ಹುಲಿ(ವ್ಯಾಘ್ರ)ಯು ಸಸ್ತನಿ ವರ್ಗದಲ್ಲಿ ಮಾಂಸಾಹಾರಿ ತರಗತಿಗೆ ಸೇರಿದ ಬೆಕ್ಕುಗಳ ಕುಟುಂಬದ ಚಿರತೆಯ ಜಾತಿಗೆ ಸೇರಿದೆ. ಇದರ ಪ್ರಾಣಿನಾಮ **'ಪ್ಯಾಂಥೇರಾ ಟೈಗ್ರಿಸ್'.** ಇದರಲ್ಲಿ ಅನೇಕ ಉಪಪ್ರಭೇದಗಳಿವೆ. ಪ್ರಾಣಿಪ್ರಪಂಚದಲ್ಲಿ ಹುಲಿಯು ಸೇರುವ ವರ್ಗ, ತರಗತಿ, ಕುಟುಂಬ ಜಾತಿ ಹಾಗೂ ಪ್ರಭೇದಗಳ ವಿವರ ಕೆಳಗಿನಂತಿದೆ:

ವರ್ಗ	—	ಮ್ಯಾಮೆಲಿಯಾ
ಉಪವರ್ಗ	—	ಥೇರಿಯಾ
ತರಗತಿ	—	ಕಾರ್ನಿಯಾ
ಉಪತರಗತಿ	—	ಫಿಸ್ಸಿಫಿಡಿಯಾ
ಕುಟುಂಬ	—	ಫೆಲಿಡಿ
ಜಾತಿ	—	ಪ್ಯಾಂಥೇರಾ
ಪ್ರಭೇದ	—	ಟೈಗ್ರಿಸ್

ಹುಲಿಗಳ ನೆಲೆ


ಹುಲಿ ಸಾಕಷ್ಟು ನೀರು, ಆಹಾರ, ತಂಪಾದ ವಸತಿ ಹಾಗೂ ರಕ್ಷಣೆಗೊಳಪಟ್ಟ ಕಾಡುಗಳಲ್ಲಿ ಕಂಡುಬರುತ್ತದೆ. ಇಂಥ ಪರಿಸರ ಅದರ ನೆಲಸುವಿಕೆಗೆ ಅಗತ್ಯ. ಇದರ ತವರು ಉತ್ತರ ಧ್ರುವದ ಹತ್ತಿರವಿರುವ ಸೈಬೀರಿಯದ ದ್ವೀಪಗಳ ದಕ್ಷಿಣ ಪ್ರದೇಶ. ಹಿಮಭರಿತ ಲ್ಯಾಕೋವ್(ಅಕ್ಷಾಂಶ 70°)ದ ಉತ್ತರಪ್ರದೇಶ, ಏಷ್ಯಾಖಂಡದ ಮಧ್ಯಪ್ರದೇಶ ಹಾಗೂ ಚೀನದ ಉತ್ತರ ಭಾಗಗಳ ಪರ್ವತ ಪ್ರಾಂತಗಳಾಗಿರಬೇಕು. ಕೊನೆಯ ಪ್ಲಿಯೋಸಿನ್‌ಯುಗಕ್ಕೆ (10,00,000 ವರ್ಷಗಳ ಹಿಂದೆ) ಸಂಬಂಧಿಸಿದ

ಬಾಗುಕತ್ತಿಹಲ್ಲುಳ್ಳ ಹುಲಿಯ ತಲೆಬುರುಡೆಯ ಅವಶೇಷಗಳು ಚೀನದ ಸಜಚ್ವಾನ್ ಪ್ರಾಂತದಲ್ಲಿ ಸಿಕ್ಕಿವೆ. ಮೂಲಹುಲಿ ಹೇಗಿತ್ತೆಂಬುದು ಸರಿಯಾಗಿ ತಿಳಿಯದು. ಅದಕ್ಕೂ ಈಗಿನ ಹುಲಿಗೂ ಸ್ವಲ್ಪ ಹೋಲಿಕೆ ಮಾತ್ರ ಇದ್ದಿರಬಹುದೆಂದು ಹೇಳುತ್ತಾರೆ. ಪೂರ್ವಜ ಹುಲಿ ಬೆಕ್ಕಿನ ಕುಟುಂಬದ ಈಗ ನಿರ್ನಾಮವಾಗಿರುವ ಮ್ಯೊಖೈರೋಡಸ್ ಜಾತಿಗೆ ಸೇರಿತ್ತು. ಇದರ ಅನೇಕ ಉಪಪ್ರಭೇದ ಮಾಂಸಾಹಾರಿ ಪ್ರಾಣಿಗಳು ಯೂರೋಪ್, ಏಷಿಯ, ಆಫ್ರಿಕ ಹಾಗೂ ದಕ್ಷಿಣ ಅಮೇರಿಕಗಳಲ್ಲಿ ಇದ್ದುದಾಗಿ ತಿಳಿದುಬಂದಿದೆ. ಬಾಗುಕತ್ತಿಹಲ್ಲುಳ್ಳ ಹುಲಿ ಮಹಾಬಲಶಾಲಿ, ಭಯಂಕರ ಆಕಾರ ಹೊಂದಿದ್ದ, ಮೇಲಿನ ಕೋರೆಹಲ್ಲುಗಳನ್ನು ಪಡೆದಿದ್ದ ಪ್ರಾಣಿಯಾಗಿರಬೇಕು. ಈ ಹಲ್ಲುಗಳ ಸಹಾಯದಿಂದ ಹಿಮಯುಗದ ನಿಧಾನವಾಗಿ ಚಲಿಸುವ ಹಾಗೂ ಅತಿ ದಪ್ಪ ಮೈದೊಗಲುಳ್ಳ ಸಸ್ಯಾಹಾರಿ ಪ್ರಾಣಿಗಳನ್ನು ಹಿಡಿದು ಕೊಂದು ತಿನ್ನಲು ಅನುಕೂಲವಾಗಿರಬೇಕು. ಹಿಮಯುಗ ಮುಗಿಯುವ ಸಮಯಕ್ಕೆ ಈ ಹುಲಿ ನಿರ್ನಾಮವಾಗಿರಬೇಕೆಂದು ಕಾಣುತ್ತದೆ: ಬಾಗುಕತ್ತಿಹಲ್ಲುಳ್ಳ ಹುಲಿಯ ಸಮೀಪದ ಸಂಬಂಧಿ ಪ್ರಾಣಿಯೆಂದರೆ ಇಂದು ಜೀವಿಸಿರುವ ಮೇಘಚಿರತೆ. ಇದಕ್ಕೆ ಗಿಡ್ಡ ಕಾಲುಗಳಿರುತ್ತವೆ: ಉದ್ದ ಕೋರೆ ಹಲ್ಲುಗಳಿರುತ್ತವೆ. ಇದರ ವಾಸ ಮರಗಳ ಮೇಲೆ. ಇದು ಮಾಂಸಾಹಾರಿ ಪ್ರಾಣಿ.

ಪ್ಲಿಸ್ಟೋಸೀನ್ (5.00.000 ವರ್ಷಗಳ ಹಿಂದೆ) ಹಿಮಪ್ರವಾಹದ ಯುಗದಲ್ಲಿ ಹುಲಿ ಏಷ್ಯಾಖಂಡದ ಎಲ್ಕ್ ಕಣಿವೆ, ಹಿಮಸಾರಂಗ ಹಾಗೂ ದೊಡ್ಡ ಹರಿಣಗಳಿಂದ ಕೂಡಿದ ದಟ್ಟಕಾಡುಗಳಲ್ಲಿ ನೆಲೆಸಿದ್ದಿತು. ಆ ಯುಗದ ಹುಲಿಯ ಅವಶೇಷಗಳು ಜಪಾನದಲ್ಲಿ ಸಿಕ್ಕಿವೆ. ಕಾಲಾನುಕ್ರಮದಲ್ಲಿ ಹುಲಿಗಳು ಕ್ರಮೇಣ ವಲಸೆಹೊರಟು ದಕ್ಷಿಣ ದಿಕ್ಕಿನ ಕಡೆ ಹರಡಿದಂತೆ ತೋರುತ್ತದೆ.

ಇಂದು ಹುಲಿಗಳು ಏಷ್ಯಾಖಂಡದ ಮಧ್ಯ ಉತ್ತರ ಭಾಗಗಳಲ್ಲಿ ಪೂರ್ವ ತುರ್ಕಿಯಲ್ಲಿರುವ ಅರಾರತ್ ಶಿಖರ, ಕ್ಯಾಸ್ಪಿಯನ್ ಸಮುದ್ರದ ತೀರಪ್ರದೇಶ, ಕಾಕೋಸಸ್ ಮತ್ತು ಎಲ್ಬರ್ಸ್ ಪರ್ವತಗಳ ಪೂರ್ವಭಾಗದ ಇಳಿಜಾರಿನಲ್ಲಿರುವ ಓಕ್ ಮರದ ಕಾಡು, ಅಮೂರ ನದಿ ಹಾಗೂ ಅದರ ಮುಖಜಭೂಮಿ ಸೈಬೇರಿಯ, ಓಕ್‌ಟಸ್ಕ್ ಸಮುದ್ರ, ಮಂಗೋಲಿಯ ಮತ್ತು ಮಾಂಚೂರಿಯವರೆಗೂ ಪಶ್ಚಿಮ ಆವರಣದಲ್ಲಿ ಅಫ್ಘಾನಿಸ್ತಾನದ ಉತ್ತರ ಭಾಗ, ಇರಾನ್ ಮತ್ತು ಸೋವಿಯತ್ ರಷ್ಯಾದವರೆಗೂ, ಉತ್ತರ ದಿಕ್ಕಿನ ಭಾಗದಲ್ಲಿ ಬಾಲಕಷ್ ಸರೋವರದಿಂದ ಅಕ್ಸಸ್ ನದಿ ಮತ್ತು ಅದರ ಮುಖಜಭೂಮಿ ಊರಲ್ ಮತ್ತು ಕ್ಯಾಸ್ಪಿಯನ್ ಸಮುದ್ರದವರೆಗೂ, ಪೂರ್ವ ದಿಕ್ಕಿನ ಭಾಗದಲ್ಲಿ ಮಾಂಚೂರಿಯ, ಕೋರಿಯ, ಚೀನಾದ ಪೂರ್ವಭಾಗಗಳಿಗೂ, ದಕ್ಷಿಣ ಪೂರ್ವಭಾಗದ ಏಷ್ಯಾ, ಇಂಡೋಚೀನಾ, ಸಯ್ಯಾಂ, ಇಂಡೋನೇಷ್ಯ, ಜಾವ, ಬಾಲಿ, ಸುಮಾತ್ರ, ಮಲೇಷಿಯ, ಬರ್ಮ, ಸಿಕ್ಕಿಂ, ಭೂತಾನ, ನೇಪಾಳ, ಭರತಖಂಡ ಮತ್ತು ಬಾಂಗ್ಲಾದೇಶಗಳವರೆಗೂ ವ್ಯಾಪಿಸಿದ್ದವು. ಹುಲಿಗಳು ಸುಮಾತ್ರಾ, ಜಾವಾ ಮತ್ತು ಬಾಲಿ ದ್ವೀಪಗಳಲ್ಲಿ ಕಂಡುಬರುತ್ತಿರುವುದು ಅವುಗಳ ಸಾಹಸದ ಕಥೆಯೇ

ಸರಿ. ಪಕ್ಕದ ಪ್ರದೇಶಗಳಿಂದ ಸಾಗಿ ಸಮುದ್ರಗಳ ಮುಂಖಾಂತರ ಈಜಿಕೊಂಡು ಹೋಗಿ ಈ ಪ್ರದೇಶಗಳಲ್ಲಿ ನೆಲೆಗೊಂಡಿವೆ. ಹುಲಿಗಳು ಬೋರ್ನಿಯ ದ್ವೀಪಕ್ಕೆ ಹೋಗಲಿಲ್ಲ; ಕೆಳಗಡೆ ಇರುವ ಶ್ರೀಲಂಕಾ ದ್ವೀಪವನ್ನೂ ತಲುಪಲಿಲ್ಲ. ಕಾರಣ ತಿಳಿದಿಲ್ಲ.



ಚಿತ್ರ 1: ವಿಶ್ವದಲ್ಲಿನ ಹುಲಿಗಳ ವಲಯಗಳನ್ನು ತೋರಿಸುವ ನಕ್ಷೆ
ಈ ಚಿತ್ರದಲ್ಲಿ ? ಚಿಹ್ನೆಇರುವೆಡೆ ಹುಲಿ ಇರುವಿಕೆ ಅನುಮಾನಾಸ್ಪದ

ಹುಲಿಗಳು ವಿವಿಧ ಪ್ರಕಾರದ ವಾತಾವರಣಕ್ಕೆ ಹೊಂದಿಕೊಳ್ಳುವ ಸಾಮರ್ಥ್ಯ ಪಡೆದಿದ್ದು ಚೀನದಲ್ಲಿ ಸೂಚಿಪರ್ಣಿ ಕಾಡುಗಳು ಹಾಗೂ ಎತ್ತರವಾದ ದಟ್ಟ ಹುಲ್ಲು ಗಾವಲು ಪ್ರದೇಶಗಳನ್ನು ಆಕ್ರಮಿಸಿದ್ದವು. ಅವು ಪಶ್ಚಿಮ ವಲಯದಲ್ಲಿ ಟ್ಯಾಮರಿಸ್ಕ್ ಕಾಡುಗಳಲ್ಲಿ ದಟ್ಟವಾಗಿ ಬೆಳೆದ ಗಲಗು ಹಾಗೂ ಜವುಳು ಪ್ರದೇಶಗಳಲ್ಲಿ ಕಂಡುಬಂದಿವೆ. ಮಂಚೂರಿಯ ಗುಡ್ಡಗಾಡು ಪ್ರದೇಶದ ಬರ್ಚ್, ಚಿಕ್ಕ ಓಕ್ ಮತ್ತು ವಾಲ್ನಟ್

ಜಂಗಲಿಗಳಲ್ಲಿ, ಇಂಡೋಚೀನ, ಬರ್ಮಾ ಮತ್ತು ಮಲಯಗಳ ಹೆಚ್ಚು ಮಳೆ ಬೀಳುವ ಕಾಡು, ಕಾಂಬೋಡಿಯಾ ಹಾಗೂ ಥೈಲ್ಯಾಂಡಿನ ದಟ್ಟಹುಲ್ಲುಗಾವಲು ಪ್ರದೇಶ, ಸುಮಾತ್ರ, ಭಾರತ ಮತ್ತು ಬಾಂಗ್ಲಾ ದೇಶಗಳಿಗೆ ಸಂಬಂಧಪಟ್ಟ ಸುಂದರಬನ ಗಳಲ್ಲಿಯ ತೇವದಿಂದ ಕೂಡಿದ ಮ್ಯಾಂಗ್ರೂವ್(ಗುಲ್ಮ್‌ಮರ) ಕಾಡು ಮತ್ತು ಭಾರತದ ಒಣ ಮುಳ್ಳು ಕಂಟಿಗಳಿಂದ ಕೂಡಿದ ಕಾಡು ಹಾಗೂ ಸತತ ಹಚ್ಚ ಹಸುರು ಇರುವ ವಿಷುವೃತ್ತ ಕಾಡುಗಳಲ್ಲಿಯೂ ಕಂಡುಬರುತ್ತವೆ. ಮಂಚೂರಿಯಾದ (30°ಫ) ಇರುವಂತಹ ಅಧಿಕ ಬರ್ಫ(ಮಂಜು)ದಲ್ಲಿಯೂ ಹಾಗೂ ಹಿಮಾಲಯ ಪರ್ವತ ಪ್ರದೇಶ, ಸಿಕ್ಕಿಂ ಹಾಗೂ ನೇಪಾಳಗಳ ಮಧ್ಯವಿರುವ 13.000 ಅಡಿ ಎತ್ತರ ಪ್ರದೇಶ ಗಳಲ್ಲಿಯೂ ಅವುಗಳ ಹೆಜ್ಜೆಗಳ ಗುರುತುಗಳು ಮೂಡಿದ್ದು ಕಂಡಿವೆ. ಈ ಎಲ್ಲ ವಿವಿಧ ಪ್ರದೇಶಗಳಲ್ಲಿ ಹುಲಿ ಒಂದು ಪ್ರಭಾವಿತ ಬೇಟೆಯಾಡುವ ಪ್ರಾಣಿಯಾಗಿದೆ.

ಭರತಖಂಡಕ್ಕೆ ಹುಲಿಬಂದ ಕಾಲ

ಸಂಸ್ಕೃತ ಸಾಹಿತ್ಯದಲ್ಲಿ ವಿವರಣೆಯಿರುವ 'ವ್ಯಾಘ್ರ' ಆಗಿನ ಆರ್ಯ ಜನಾಂಗಕ್ಕೆ ಅಪರಿಚಿತವಾಗಿರಲಿಲ್ಲ. ಋಗ್ವೇದದಲ್ಲಿ ಹುಲಿಯ ಉಲ್ಲೇಖವಿದೆ. ಮಹಾಭಾರತದ ನಳದಮಯಂತಿ ಕಥೆಯಲ್ಲಿ 'ಗೋಮುಖವ್ಯಾಘ್ರ'ದ ಪ್ರಯೋಗವಿದೆ. ಆ ಕಥೆಯಲ್ಲಿ ಬ್ರಾಹ್ಮಣನಾದವನು ಯಾವುದೇ ರೀತಿಯಿಂದಾದರೂ ಸರಿಯೇ ಹಸುವನ್ನು ಹುಲಿಯ ಬಾಯಿಂದ ಹಾಗೂ ಕಳ್ಳರಿಂದ ಸಂರಕ್ಷಿಸಬೇಕೆಂಬ ಹಾಗೂ ಕುದುರೆಯ ಕಳ್ಳರು ಮುಂದಿನ ಜನ್ಮದಲ್ಲಿ ಹುಲಿಯ ರೂಪದಲ್ಲಿ ಹುಟ್ಟುತ್ತಾರೆಂದು ವಿವರಿಸುವ ಅಂಶಗಳೂ ಇವೆ.

ಸಿಂಧುಕೊಳ್ಳದ ಹರಪ್ಪ ಹಾಗೂ ಮೋಹಂಜೋದಾರೊಗಳಲ್ಲಿ ದೊರಕಿದ ಐತಿಹಾಸಿಕ ಹುಲಿಮುದ್ರೆ ಹಾಗೂ ಹುಲಿ ಗುರುತುಗಳ ಪುರಾವೆಗಳಿಂದ ಕ್ರಿ.ಪೂ.2500 ವರ್ಷಗಳಿಗೆ ಮೊದಲೇ ಹುಲಿ ಭಾರತದಲ್ಲಿ ಜೀವಿಸಿತ್ತೆಂದು ಹೇಳಬಹುದು. ಭಗವಾನ್ ಬುದ್ಧ ಹುಲಿಯ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದ. ಬೌದ್ಧ ಗ್ರಂಥಗಳಲ್ಲಿ ಅನೇಕ ಕಡೆ ಹುಲಿಯ ಉಲ್ಲೇಖ ತೋರಿಬರುತ್ತದೆ. ಇತಿಹಾಸದಲ್ಲಿ ಛತ್ರಪತಿ ಶಿವಾಜಿಯು ಅಫಜಲ್‌ಖಾನನನ್ನು ಹುಲಿಯ ಉಗುರುಗಳಿಂದ ಕೊಂದ ವಿಷಯ ಎಲ್ಲರಿಗೂ ತಿಳಿದೇ ಇದೆ.

'ವನರಾಜ'ನೆಂದು ಪ್ರಸಿದ್ಧಿ ಪಡೆದ ಹುಲಿಯ ಮೂಲಸ್ಥಾನ ಭಾರತವಲ್ಲ. ಹುಲಿಗಳು ಭಾರತಕ್ಕೆ ಹೊರಗಿನಿಂದ ವಲಸೆ ಬಂದಿರಬೇಕು. ಹಿಮಯುಗದ ನಂತರ ಉತ್ತರ ಏಷ್ಯಾಖಂಡದಿಂದ ಸಾಗಿಬಂದು ಚೀನದ ಮುಖಾಂತರ ಪೂರ್ವದಿಕ್ಕಿನಲ್ಲಿಯ ಹಿಮಾಲಯ ಪರ್ವತ ಸಾಲುಗಳನ್ನು ದಾಟಿ ನೈರುತ್ಯ ಭಾರತದಲ್ಲಿ ಮೊದಲು ಪ್ರವೇಶ ಮಾಡಿದಂತೆ ಕಾಣುತ್ತದೆ. ಕ್ರಿ.ಶ. 1953ರಲ್ಲಿ ದಲಾಯಿಲಾಮಾ ಟಿಬೆಟ್ಟಿನಿಂದ ಭಾರತಕ್ಕೆ ಬಂದ ಹಾದಿಯಲ್ಲೇ ಹುಲಿಗಳು ಬಂದಿರಬಹುದು. ಅನಂತರ ಅವು

ಉತ್ತರದಲ್ಲಿ ಆಸಾಮ್, ಭೂತಾನ, ನೇಪಾಳ, ಬಂಗಾಲ, ಬಿಹಾರ, ಹಿಮಾಚಲ ಪ್ರದೇಶ, ರಾಜಸ್ಥಾನ ಮತ್ತು ದಕ್ಷಿಣದಲ್ಲಿ ಮಹಾರಾಷ್ಟ್ರ, ಕರ್ನಾಟಕ, ಕೇರಳ, ತಮಿಳು ನಾಡು ರಾಜ್ಯಗಳಿಗೂ ಹರಡಿರಬಹುದೆಂದು ಉಲ್ಲೇಖಗಳ ಆಧಾರವಿದೆ. ಆದರೆ ಹುಲಿ ಭರತಖಂಡಕ್ಕೆ ಯಾವಾಗ ಪಾದಾರ್ಪಣ ಮಾಡಿತು ಎಂಬುದನ್ನು ನಿಶ್ಚಿತವಾಗಿ ಹೇಳುವುದು ಸಾಧ್ಯವಿಲ್ಲ. ಒಂದು ಕಾಲದಲ್ಲಿ ಸಿಂಹಳವು ಭಾರತ ದ್ವೀಪಕಲ್ಪಕ್ಕೆ ಹೊಂದಿಯೇ ಇತ್ತು. ಇಂದು ಸಿಂಹಳದಲ್ಲಿ ಹುಲಿಯಿಲ್ಲ. ಇದರಿಂದ ಸಿಂಹಳ ದ್ವೀಪ ಭಾರತ ದ್ವೀಪಕಲ್ಪದಿಂದ ಬೇರ್ಪಟ್ಟನಂತರ ಭಾರತಕ್ಕೆ ಹುಲಿ ಬಂದಿರಬೇಕೆಂಬ ಒಂದು ಊಹೆ ಇದೆ.

ಭಾರತದಲ್ಲಿ ಹುಲಿಯ ವ್ಯಾಪಕತೆ

ಈಗ ಭಾರತ ಹುಲಿಯ ತಾಯಿನಾಡಾಗಿದೆ. ಕನ್ಯಾಕುಮಾರಿಯಿಂದ ಹಿಮಾಲಯ ದವರೆಗೆ ಅರಣ್ಯಗಳ ವರ್ಗೀಕರಣವನ್ನವಲಂಬಿಸಿ ದಟ್ಟ, ಹೇರಳ, ಇಲ್ಲವೆ ವಿರಳ ಅರಣ್ಯಗಳಲ್ಲಿ ಭಾರತದ ತುಂಬೆಲ್ಲ ಹುಲಿಗಳು ಕಂಡುಬರುತ್ತವೆ. ಹಿಮಾಲಯ ಪರ್ವತ ಪ್ರದೇಶದಲ್ಲಿನ ಹುಲಿಗಳು ಏಳರಿಂದ ಎಂಟುಸಾವಿರ ಅಡಿಗಳಷ್ಟು ಎತ್ತರ ಪ್ರದೇಶದಲ್ಲಿ ಕಂಡುಬರುತ್ತವೆ. ಕ್ರಿ.ಶ. 1889ರಲ್ಲಿ ಒಸ್‌ಮಸ್ಟನ್ ಹಿಮಾಲಯ ಪರ್ವತ ಪ್ರದೇಶದ ಚಕ್ರಾತದ ಹತ್ತಿರ ಹತ್ತುಸಾವಿರ ಅಡಿ ಎತ್ತರದಲ್ಲಿರುವ ಮಂಡಾಲಿ ಎಂಬಲ್ಲಿ ಒಂದು ನರಭಕ್ಷಕ ಹುಲಿಯನ್ನು ಕೊಂದ ಉಲ್ಲೇಖವಿದೆ. ಭಾರತದಲ್ಲಿಯ ಹುಲಿಗಳು ಎರಡು ತೆರನಾಗಿವೆ. ಮೊದಲನೆಯವು ಗುಡ್ಡಗಾಡು ಪ್ರದೇಶದಲ್ಲಿ ತೋರಿಬರುವಂತಹವು. ಅವು ತುಲನಾತ್ಮಕವಾಗಿ ಅಧಿಕ ಗಾತ್ರದವಾಗಿರುತ್ತವೆ. ಎರಡನೆಯವು ಮೈದಾನದ ಹುಲ್ಲುಗಾವಲು ಅರಣ್ಯಪ್ರದೇಶಗಳಲ್ಲಿ ತೋರಿಬರುವಂತಹವು. ಅವುಗಳ ಮೈಕಟ್ಟು ತೆಳುವು; ದೇಹ ಉದ್ದ. ಎರಡನೆಯ ತೆರನಾದ ಹುಲಿಗಳಿಗೆ 'ಬಂಗಾಲ ಹುಲಿ' ಗಳೆಂದು ತಪ್ಪಾಗಿ ಕರೆಯುತ್ತಾರೆ. ಈ ಹುಲಿಗಳು ನೇಪಾಳ, ಉತ್ತರ ಪ್ರದೇಶದ ಹುಲ್ಲುಗಾವಲು ಪ್ರದೇಶ, ಅಸಾಮುದ ದಕ್ಷಿಣದ ಗುಡ್ಡಗಾಡು, ಬಾಂಗ್ಲಾದೇಶದ ಸುಂದರಬನ ಪ್ರದೇಶ ಹಾಗೂ ಬ್ರಹ್ಮದೇಶಗಳಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಸಿಂಧು ಹಾಗೂ ಗಂಗಾನದಿಗಳ ಬೈಲಿನಲ್ಲಿ ಸುಮಾರು ಒಂದೂವರೆ ಸಾವಿರ ಮೈಲುದ್ದ ಪ್ರದೇಶದಲ್ಲಿ ವಿಶಾಲವಾಗಿ ಹಬ್ಬಿದ ಹುಲ್ಲುಗಾವಲು ಹಾಗೂ ಸಾಲಜಾತಿಯ ಮರ ಗಳಿಂದ ಕೂಡಿದ ಅರಣ್ಯಪ್ರದೇಶ ಜಗತ್ತಿನಲ್ಲಿಯೇ ಅತಿಶ್ರೇಷ್ಠ ಬೇಟೆಯ ಧಾಮ ವಾಗಿದ್ದು ಹುಲಿಗಳ ಜೀವನಕ್ಕೆ ಅತಿ ಯೋಗ್ಯವಾದ ಕಾಡುಬೀಡಾಗಿದೆ. ತದನಂತರ ಮಧ್ಯಭಾರತದ ದಟ್ಟಕಾಡುಗಳು ಹುಲಿಗಳ ವಸತಿಗೆ ಹೆಸರುವಾಸಿಯಾಗಿವೆ. ಮುಖ್ಯ ವಾಗಿ ಹುಲಿಗಳು ಉತ್ತರದಲ್ಲಿ ಸಾಲ ಜಾತಿಯ ಮರ ಹಾಗೂ ದಕ್ಷಿಣದಲ್ಲಿ ಸಾಗವಾನಿ ಮರಗಳಿಂದ ಕೂಡಿದ ಅರಣ್ಯಗಳಲ್ಲಿ ವಿಶೇಷವಾಗಿ ಬಹುಸಂಖ್ಯೆಯಲ್ಲಿ ಕಂಡುಬರುತ್ತವೆ. ಉತ್ತರದಲ್ಲಿರುವ ರೇವಾದಿಂದ ದಕ್ಷಿಣಕ್ಕಿರುವ ಚಾಂದಾ ಹಾಗೂ ದಂಡಕಾರಣ್ಯ, ಪೂರ್ವದಲ್ಲಿ ಓಡಿಸಾ ಹಾಗೂ ಛೋಟಾನಾಗಪುರ ಮತ್ತು ಪಶ್ಚಿಮಕ್ಕಿರುವ ಗ್ವಾಲೇರ್ ಹಾಗೂ ಹೋಷಾಂಗಾಬಾದ್‌ಗಳಲ್ಲಿ ಹುಲಿಗಳು ವ್ಯಾಪಿಸಿವೆ. ಹುಲಿಗಳು 100 ರಿಂದ

200 ಸೆಂಟಿಮೀಟರ್ ಮಳೆಬೀಳುವ ಅರಣ್ಯ ಪ್ರದೇಶದಲ್ಲಿ ಹೆಚ್ಚಾಗಿದ್ದು ಇದಕ್ಕೂ ಜಾಸ್ತಿಮಳೆ ಬೀಳುವ ಅರಣ್ಯ ಪ್ರದೇಶಗಳಲ್ಲಿ ವಿಶೇಷ ಕಂಡುಬರುವುದಿಲ್ಲ.

ದಕ್ಷಿಣ ಭಾರತದ ಕರ್ನಾಟಕ. ಕೊಂಕಣ. ಮಲಬಾರ, ನೀಲಗಿರಿ ಪರ್ವತ ಹಾಗೂ ಸಹ್ಯಾದ್ರಿಘಟ್ಟಗಳ ಪೂರ್ವ ಭಾಗದಲ್ಲಿರುವ ಅರಣ್ಯಗಳಲ್ಲಿ ಹುಲಿಗಳು ವ್ಯಾಪಿಸಿದ್ದು ವಿಶೇಷವಾಗಿ ಕರ್ನಾಟಕ, ಕೊಂಕಣ ಹಾಗೂ ಮಲಬಾರ ಕಾಡುಗಳಲ್ಲಿ ಇವು ಹೆಚ್ಚು ಸಂಖ್ಯೆಯಲ್ಲಿವೆ. ಪೂರ್ವ ಘಟ್ಟಗಳಲ್ಲಿಯ ಅರಣ್ಯಗಳಲ್ಲಿಯೂ ಹುಲಿಗಳಿದ್ದು ಅವುಗಳ ಸಂಖ್ಯೆ ತೀರ ಕಡಮೆ ಹಾಗೂ ಅವುಗಳ ಆಕಾರ ಹಾಗೂ ಬಣ್ಣ ಅಷ್ಟೊಂದು ಆಕರ್ಷಣೀಯವಾಗಿಲ್ಲ. ಗುಜರಾತ್ (ಪಂಚಮಹಾಲ ಹೊರತುಪಡಿಸಿ), ಪಂಜಾಬ್ ಹಾಗೂ ಕಾಶ್ಮೀರಗಳಲ್ಲಿ ಹುಲಿಗಳು ಕಂಡುಬರುವುದಿಲ್ಲ. ಗುಜರಾತದಲ್ಲಿ ಹುಲಿಗಳ ಇಲ್ಲದಿರುವಿಕೆ ಅಲ್ಲಿದ್ದ ಸಿಂಹಗಳ ನೆಲೆಯಿಂದ ಎಂದು ಕಾಣುತ್ತದೆ. ಆಹಾರ ಹಾಗೂ ವಾಸಸ್ಥಳಗಳ ಬಗೆಗಿನ ಪೈಪೋಟಿಯನ್ನು ತಪ್ಪಿಸುವುದಕ್ಕೋಸ್ಕರ ಹುಲಿ ಅಲ್ಲಿಂದ ಬೇರೆಡೆ ಹೋಗಿರಬೇಕು. ಗುಜರಾತದ ಗೀರ ಜಂಗಲ್‌ದಲ್ಲಿ ಭಾರತದಲ್ಲಿಯೇ ಪ್ರಸಿದ್ಧವಾದ ಸಿಂಹಗಳಿವೆ. ಅದೇ ಗುಜರಾತಕ್ಕೆ ಹೊಂದಿರುವ ರಾಜಸ್ಥಾನದಲ್ಲಿ ಅನೇಕ ಹುಲಿಗಳಿವೆ. ಇವು ಉದಯಪುರ. ಜಯಪುರ ಹಾಗೂ ಆಳವಾರ ಜಂಗಲ್‌ಗಳಲ್ಲಿ. ಜಾಸ್ತಿ ಸಂಖ್ಯೆಯಲ್ಲಿ ಇರದಿದ್ದರೂ ಆಗಾಗ ಕಂಡುಬರುತ್ತವೆ. ಈ ಹುಲಿಗಳ ಉದ್ದ ಸ್ವಲ್ಪ ಚಿಕ್ಕದು: ಎತ್ತರ ಹೆಚ್ಚು; ಗಾತ್ರ ಕಿರಿದು. ಕರ್ನಾಟಕ ರಾಜ್ಯದಲ್ಲಿ ಬಂಡೀಪುರ. ನಾಗರಹೊಳೆ. ಜಾಗೋರಕೊಳ್ಳ. ತುಂಗಭದ್ರಾ ನದಿಯ ದಂಡೆಯ ಘಟ್ಟದ ಪ್ರದೇಶ. ಕಾಳೀನದಿ ಕೊಳ್ಳಗಳ ಅರಣ್ಯಪ್ರದೇಶಗಳಲ್ಲಿನ ವಟ್ಟಿ ಹಾಗೂ ಎತ್ತರ ಗಿಡಮರಗಳ ಮಧ್ಯೆ ಹಾಗೂ ಸಾಗುವಾನಿ. ಬಿದಿರುಗಳ ಮಧ್ಯೆ ಕಂಡುಬರುವ ಹುಲಿಗಳು ತೋರ ಹಾಗೂ ಗಡುತರ ಇರುತ್ತವೆ. ಒಂದಾನೊಂದು ಕಾಲದಲ್ಲಿ ಕರ್ನಾಟಕದ ಪೂರ್ವದ ಹುಲ್ಲುಗಾವಲು ಅರಣ್ಯ ಪ್ರದೇಶದಲ್ಲಿ ಕಂಡುಬರುತ್ತಿದ್ದ ತೆಳುವಾದ ಉದ್ದ ದೇಹದ ಹುಲಿಗಳು ಈಗ ಕಂಡುಬರುತ್ತಿಲ್ಲ.

ಹುಲಿಯು ನೆಲಸಿದ್ದ ಇಲ್ಲವೆ ಕಂಡುಬಂದ ಪ್ರದೇಶಗಳಿಗೆ ಹುಲಿಗಳೊಂದಿಗೆ ಸಂಬಂಧ ಬರುವ ಹೆಸರುಗಳು ಭಾರತದಲ್ಲಿ ಅನೇಕಕಡೆ ಕಂಡುಬರುತ್ತವೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಹುಲಿಯೂರು. ಹುಲಿಯೂರುದುರ್ಗ, ಹುಲಿಬಂಡೆ. ಹೂಲಿಹಳ್ಳಿ ಇತ್ಯಾದಿ. ಭಾರತದಲ್ಲಿ ಅನೇಕ ಜಾತಿಯ ಜನ ತಮ್ಮ ಕುಟುಂಬದವರನ್ನು ಹಾಗೂ ಮಕ್ಕಳನ್ನು ಹುಲಿಯ ಹೆಸರಿಂದ ಕರೆಯಲು ಅಭಿಮಾನಪಡುತ್ತಾರೆ.

ಹುಲಿಗಳ ಜಾತಿಗಳು

ಹುಲಿಗಳು ಅವು ನೆಲಸಿರುವ ಪರಿಸರ, ವಾಯು, ಭೂಗುಣಗಳಿಗೆ ಹೊಂದಿಕೊಂಡು ವಿವಿಧ ಮೈಬಣ್ಣ ಹಾಗೂ ಗಾತ್ರಗಳನ್ನು ಹೊಂದಿವೆ. ಉತ್ತರದ ಶೀತ ಪ್ರದೇಶಗಳಲ್ಲಿನ ಸೈಬೀರಿಯದ ಹುಲಿಗಳ ಆಕಾರ ದೊಡ್ಡದು; ಅವು ಹದಿಮೂರು

ಅಡಿವರೆಗೆ ಉದ್ದವಿದ್ದು ದಟ್ಟಕೂದಲುಗಳಿಂದ ಕೂಡಿದ ವೈಭವದ ತಿಳಿವರ್ಣದ ಪ್ರಾಣಿಗಳಾಗಿವೆ. ದಕ್ಷಿಣಕ್ಕೆ ಬಂದಂತೆ ಅವುಗಳ ಆಕಾರ ಕಿರಿದಾಗುತ್ತದೆ: ಕೂದಲುಗಳ ಉದ್ದ ಕಡಮೆ: ಮೈಬಣ್ಣ ಗಾಢ. ಸಾಮಾನ್ಯವಾಗಿ ನಡುಗಡ್ಡೆ ಅಥವಾ ದ್ವೀಪಗಳಲ್ಲಿಯ ಹುಲಿಗಳು ಚಿಕ್ಕವಿದ್ದು ಹೆಚ್ಚು ಕಪ್ಪು ಹಾಗೂ ಗಿಡ್ಡ ಮೈಕೂದಲು ಹೊಂದಿರುತ್ತವೆ. ಭಾರತದಲ್ಲಿಯ ಉತ್ತರಭಾಗದ ಹುಲಿಗಳು ಚಳಿಗಾಲದಲ್ಲಿ ವಿಶೇಷ ತುಪ್ಪಳ ಹೊಂದಿದ್ದು ಸಾಮಾನ್ಯ ತುಪ್ಪಳಕ್ಕಿಂತ ಅದು ದಟ್ಟ ಹಾಗೂ ಆಕರ್ಷಣೀಯ ಬಣ್ಣದ್ದಾಗಿರುತ್ತದೆ. ಬೇಸಿಗೆಯ ದಿನಗಳು ಸಮೀಪಿಸಿದಂತೆ ಆ ತುಪ್ಪಳ ಉದುರಿಹೋಗುತ್ತದೆ. ಒಟ್ಟಿನಲ್ಲಿ ಹುಲಿಗಳು ಮಂಜುರಿಯದ ಶೀತಪ್ರದೇಶ, ಭಾರತದ ಉಷ್ಣಪ್ರದೇಶ, ಬರ್ಫ(ಹಿಮ)ಬೀಳುವ ಉತ್ತರಖಂಡ, ಸುಂದರಬನದ ಜವುಗು ಪ್ರದೇಶ, ಹೆಚ್ಚು ಮಳೆಬೀಳುವ ಪಶ್ಚಿಮಘಟ್ಟ, ಧಾರಾಕಾರವಾಗಿ ಮಳೆ ಸುರಿಯುವ ಅಸಾಮ್ ಕಾಡುಪ್ರದೇಶ ಎಲ್ಲಿ ಇದ್ದರೂ ಆಯಾ ಪರಿಸರ, ಪರಿಸ್ಥಿತಿ ಹಾಗೂ ಹವಾಗುಣಗಳಿಗೆ ಹೊಂದಿಕೊಂಡು ಸುಖವಾಗಿ ಚರಿತಾರ್ಥ ನಡೆಯಿಸಿವೆ.

ಹುಲಿಗಳು ಎಂಟು ಜಾತಿಯವುಗಳಾಗಿವೆ. ಒಂದು ಕಾಲದಲ್ಲಿ ಹಲವಾರು ಲಕ್ಷ್ಯಸಂಖ್ಯೆಯಲ್ಲಿದ್ದ ಹುಲಿಗಳು ಇಂದು ಇಡೀ ಜಗತ್ತಿನಲ್ಲಿ ಕೇವಲ 5,000 ಮಾತ್ರವೆಂದು ಜಾಗತಿಕ ವನ್ಯಜೀವಿ ಸಂಸ್ಥೆ ಪ್ರಕಟಿಸಿದೆ.

1. ಬಾಲಿದ್ವೀಪದ ಹುಲಿ (ಪ್ಯಾಂಥೆರಾ ಟೈಗ್ರಿಸ್ ಬಾಲಿಕಾ)

ಕೆಲವರ್ಷಗಳಿಂದ ಬಾಲಿದ್ವೀಪದ ಪಶ್ಚಿಮ ಭಾಗದಲ್ಲಿ 3 ಅಥವಾ 4 ಈ ಜಾತಿಯ ಹುಲಿಗಳು ಮಾತ್ರ ಜೀವಂತವಾಗಿದ್ದು ಸರ್ಕಾರದ ರಕ್ಷಣೆಯಲ್ಲಿದ್ದವು. ಈ ಕುಲದ ಹುಲಿಯನ್ನು ಪೂರ್ವಕಾಲದಲ್ಲಿ ಜನರು ಜಾವಾದ್ವೀಪದಿಂದ ತಂದು ಬಾಲಿದ್ವೀಪದಲ್ಲಿ ಬಿಟ್ಟರೆಂದು ನಂಬಲಾಗಿದೆ. ಇತ್ತೀಚಿನ ವರದಿ ಪ್ರಕಾರ ಈ ಹುಲಿ ನಿರ್ಮೂಲವಾಗಿದೆ.

2. ಸೈಬೀರಿಯ ಹುಲಿ (ಪ್ಯಾಂಥೆರಾ ಟೈಗ್ರಿಸ್ ಅಲ್ಟೈಕಾ)

ಇವು ಅತಿದೊಡ್ಡಗಾತ್ರದ ಪ್ರಾಣಿಗಳು. ಉದ್ದ 3–4 ಮೀಟರ್ (1 ಮೀಟರ್ ಉದ್ದಬಾಲ ಸಮೇತ). ಹಿಮಭರಿತ ಪ್ರದೇಶದಲ್ಲಿ ಚಳಿ ತಡೆಯುವ ಈ ತಳಿಯ ಬೂದುಬಣ್ಣದ ಉದ್ದನೆಯ ದಪ್ಪತುಪ್ಪಳ. ಮಿಶ್ರಕೂದಲು ಹಾಗೂ ಹೆಚ್ಚು ಗಡ್ಡದ ಕೂದಲು ಹೊಂದಿದೆ: ಪಂಜಗಳ ಕೆಳಗೆ ದಟ್ಟಕೂದಲಿರುವುದರಿಂದ ಹಿಮರಾಶಿಯಲ್ಲಿ ನಡೆಯಲು ಇವುಗಳಿಗೆ ಅನುಕೂಲವಾಗಿದೆ. ಇವುಗಳ ಹೆಗಲಿನ ಎತ್ತರ 1 ಮೀಟರ್; ಮೈತೂಕ 300 ಕಿಲೋ. ಈ ಹುಲಿಗೆ ಹಿಮದ ರಾಶಿಯಲ್ಲಿ ಹೊರಳಾಡಲು ಮತ್ತು ಕೊರೆಯುವ ತಣ್ಣೀರಿನಲ್ಲಿ ಈಜಲು ಬಲು ಇಷ್ಟ.

ಏಷ್ಯಾದ ಉತ್ತರಭಾಗದ ಸೂಚಿಪರ್ಣ(ಪೈನ್)ಮರದ ಕಾಡು, ಬಾಲಕುಷ್ ಸರೋವರದಿಂದ ಲೀನಾ ನದಿವರೆಗೂ ಟ್ರಾನ್ಸಬೈಕಾಲಿಯದಿಂದ ಅಮೂರ್ ಮತ್ತು

ಯುಸ್ಸೂರಿ ನದಿಗಳ ಕಣಿವೆ ಪ್ರದೇಶಗಳು, ಮಂಗೋಲಿಯದ ಪೂರ್ವಭಾಗ, ಚಿಹಿಲಿ, ಮಂಚೂರಿಯ, ಕೋರಿಯ ಮತ್ತು ಹೂಹಾಂಗ ಹೂನದಿ ಪ್ರದೇಶಗಳಲ್ಲಿ ಇವು ಹರಡಿವೆ. ಕೋರಿಯ ಗಿರಿಪ್ರದೇಶ, ಮಂಚೂರಿಯ ಮತ್ತು ರಷ್ಯಾದ ಯುಸ್ಸೂರಿ ನದಿಯ ಪೂರ್ವಭಾಗಗಳು ಹುಲಿಗಳು ಹಾಲಿ ನೆಲೆಸಿರುವ ಪ್ರದೇಶಗಳಾಗಿವೆ. ಯುಸ್ಸೂರಿಯಲ್ಲಿ 100–120 ಹುಲಿಗಳಿದ್ದವು. ಮೊದಲನೆಯ ಮಹಾಯುದ್ಧದ ನಂತರದ ಅವಧಿಯಲ್ಲಿ ಈ ಪ್ರದೇಶದಲ್ಲಿ ಹುಲಿಗಳು ಅಳಿದುಹೋಗುವ ಸ್ಥಿತಿಯಲ್ಲಿದ್ದವು.. ಈಗ ಸೋವಿಯತ್ ರಷ್ಯ ಸರ್ಕಾರದ ವಿಶೇಷ ರಕ್ಷಣೆ ದೊರೆತು ಅವುಗಳ ಸಂತಾನಾಭಿವೃದ್ಧಿಯಲ್ಲಿ ಹೆಚ್ಚಳ ಕಂಡುಬಂದಿದೆ.

3. ಚೀನದ ಹುಲಿ (ಪ್ಯಾಂಥೆರಾ ಟೈಗ್ರಿಸ್ ಅಮೊಯೆನ್‌ಸಿಸ್)

ಚೀನದ ಪೂರ್ವ, ದಕ್ಷಿಣ ಹಾಗೂ ಮಧ್ಯಪ್ರದೇಶ ಮತ್ತು ಮಧ್ಯಭಾಗದ ಪರ್ವತ ಪ್ರಾಂತ ಯುನಾನಿನ ದಕ್ಷಿಣ ಭಾಗಗಳಲ್ಲಿ ಈ ಹುಲಿಗಳು ವ್ಯಾಪಿಸಿವೆ. ಇವುಗಳ ಸಂಖ್ಯೆ ಬಹಳ ಕಡಮೆ. ಚೀನದ ಜನರು ಈ ಹುಲಿಯ ಎಲುಬನ್ನು ಪುಡಿಮಾಡಿ ಶಕ್ತಿವರ್ಧಕ ರೂಪದಲ್ಲಿ ವಿಶೇಷವಾಗಿ ಉಪಯೋಗಿಸುತ್ತಾರೆ. ಇವರು ಇಂತಹ ಅಪರೂಪ ಪ್ರಾಣಿಯನ್ನು ಸಂರಕ್ಷಿಸಲು ತುಂಬ ಪ್ರಯತ್ನಪಟ್ಟರೂ ಇದನ್ನು ಬದುಕಿಸಿಕೊಳ್ಳಲಿಕ್ಕೆ ಅವರಿಗೆ ಆಗಿಲ್ಲ. ಈ ಹುಲಿಗಳು ಹೆಚ್ಚು ಜನಸಾಂದ್ರತೆಯ ಪ್ರದೇಶದಲ್ಲಿ ಕಂಡುಬರುತ್ತಿದ್ದವು. ಅವರು ಇವುಗಳನ್ನು ಅಪಾಯಕಾರಿ ಪ್ರಾಣಿಗಳೆಂದೂ ಘೋಷಿಸಿದ್ದರು.

4. ಕಾರ್ಬೆಟ್ ಹುಲಿ (ಪ್ಯಾಂಥೆರಾ ಟೈಗ್ರಿಸ್ ಕಾರ್ಬೆಟ್ಟಿ)

ಈ ಜಾತಿಯ ಹುಲಿಗಳನ್ನು ಮೊದಲಿಗೆ ಬಂಗಾಳಹುಲಿ ಅಂದರೆ **ಪ್ಯಾಂಥೆರಾ ಟೈಗ್ರಿಸ್ ಟೈಗ್ರಿಸ್** ಕುಲಕ್ಕೆ ಸೇರಿಸಿದ್ದರು. ಇತ್ತೀಚೆಗೆ ಇವುಗಳನ್ನು ಪ್ರತ್ಯೇಕ ಬಗೆಯೆಂದೆ ವರ್ಗೀಕರಿಸಲಾಗಿದೆ. ಇದು ದಕ್ಷಿಣ ಭಾಗದ ಚೀನ, ವಿಯಟ್‌ನಾಂ, ಮಲೇಷಿಯ, ಕಾಂಬೋಡಿಯ, ಥೈಲ್ಯಾಂಡ್ ಮತ್ತು ಬರ್ಮಾದ ಪೂರ್ವಭಾಗಗಳಲ್ಲಿ ವ್ಯಾಪಿಸಿದೆ. ಇಂದು ಇವುಗಳ ಸಂಖ್ಯೆ ಸುಮಾರು 2,000.

5. ಸುಮಾತ್ರ ಹುಲಿ (ಪ್ಯಾಂಥೆರಾ ಟೈಗ್ರಿಸ್ ಸುಮಾತ್ರಾ)

ಇವು ಅತಿ ಸಣ್ಣಗಾತ್ರದ ಪ್ರಾಣಿಗಳು; ದೇಹದ ಉದ್ದ $2–2\frac{1}{4}$ ಮೀಟರ್; ಹೆಗಲಿನ ಎತ್ತರ $\frac{3}{4}$ ಮೀಟರ್; ಮೈತೂಕ 125 ಕಿಲೋ. ಮೈಬಣ್ಣ ಕಿತ್ತಳೆ. ಮೈಮೇಲೆ ಕರಿಪಟ್ಟೆಗಳು; ಅಗಲವಾಗಿ ಹೆಚ್ಚಿನ ಸಂಖ್ಯೆಯಲ್ಲಿವೆ. ಈ ಹುಲಿಗಳಿಗೆ ಹೆಚ್ಚಿನ ಶೆಖೆ ಸಹಿಸುವ ಶಕ್ತಿ ಇದೆ.

6. ಜಾವ ಹುಲಿ (ಪ್ಯಾಂಥೆರಾ ಟೈಗ್ರಿಸ್ ಸೊಂಡೈಕಾ)

ಇವು ಜಾವಾ ದ್ವೀಪದ ಯಾಡ್‌ಜಾಂಗ್‌ತುಲಾನ್ ರಕ್ಷಿತ ಕಾಡಿನಲ್ಲಿ ಕಂಡುಬರುತ್ತವೆ. ಆದಿಕಾಲದಲ್ಲಿ ಈ ಕುಲದ ಹುಲಿಗಳು ಸುತ್ತಲಿನ ಪ್ರದೇಶಗಳಿಂದ

ಈಜಿಕೊಂಡು ಹೋಗಿ ಜಾವಾದ್ವೀಪದಲ್ಲಿ ನೆಲೆಸಿರುವಂತೆ ತಿಳಿದುಬರುತ್ತದೆ. ಇವುಗಳ ಮೈಮೇಲಿರುವ ಕರಿಪಟ್ಟೆಗಳು ಒಡಕಲಾಗಿವೆ. ಈ ಹುಲಿಗಳ ಸಂಖ್ಯೆ ಅತಿ ಕಡಮೆ. ಕೇವಲ 9 ಮಾತ್ರ. ಈಗ ಈ ಹುಲಿ ಸಂತಾನವನ್ನು ವೃದ್ಧಿಗೊಳಿಸುವ ಯೋಜನೆಯನ್ನು ಜಾವಾ ಸರ್ಕಾರ ಕೈಗೊಂಡಿದೆ. ಈ ಹುಲಿಗಳು ಕುಳ್ಳಗಿದ್ದು ಹೆಚ್ಚು ಉಜ್ವಲ ಬಣ್ಣ ಹೊಂದಿವೆ.

7. ಕ್ಯಾಸ್ಪಿಯನ್ ಹುಲಿ (ಪ್ಯಾಂಥೆರಾ ಟೈಗ್ರಿಸ್ ವಿರ್ಗೇಟಾ)

ಈ ಹುಲಿಗಳ ಮೈಯಮಗ್ಗಲು ಹಾಗೂ ಕುಂಡಿ ಮೇಲಿರುವ ಪಟ್ಟೆಗಳು ಕಂದುಮಿಶ್ರಿತ ಕಪ್ಪುವರ್ಣದವು: ಅಪ್ಪಟ ಕಪ್ಪಲ್ಲ. ಇವು ತಕ್ಕಮಟ್ಟಿಗೆ ಭಾರತದ ಹುಲಿಯನ್ನು ಹೋಲುತ್ತವೆ. ಈ ಹುಲಿ ಹೆಚ್ಚಾಗಿ ಮಧ್ಯ ಏಷ್ಯಾಖಂಡ, ಟ್ರಾನ್ಸ್‌ಕಾಕೇಶಿಯ, ಇರಾನಿನ ಉತ್ತರ ಭಾಗ, ಖಿಜಕಿಸ್ತಾನ ಮತ್ತು ತುರ್ಕಮೇನಿಯಗಳಲ್ಲಿ ಪಸರಿಸಿದೆ. ಇರಾನಿನ ಮಜನ್ ದರಾನ್, ಗಿಲಾನ್, ಗೊರಾನ್ ಮತ್ತು ಗುಂಬತೇಖಬಸ್ ವನ್ಯಧಾಮಗಳಲ್ಲಿ ಸುಮಾರು ನೂರು ಹುಲಿಗಳಿದ್ದ ದಾಖಲೆ ಇದೆ. ಕ್ಯಾಸ್ಪಿಯನ್ ಸಮುದ್ರದ ತೀರದ ಭಾಗಗಳಲ್ಲಿ ಮಲೇರಿಯ ಜ್ವರ ವ್ಯಾಪಕವನ್ನು ತಡೆಗಟ್ಟಲು ಹಾಗೂ ಜನರಿಗೆ ಪುನರ್ವಸತಿ ಕಲ್ಪಿಸಿಕೊಡಲು ಕಾಡುಗಳನ್ನು ಕಡಿದು ಅಲ್ಲಿದ್ದ ಹುಲಿಗಳನ್ನು ಮೂಲೋತ್ಪಾಟನ ಮಾಡಲಾಯಿತು. ಸುಮಾರು 70 ವರ್ಷಗಳ ಹಿಂದೆ ಕ್ಯಾಸ್ಪಿಯನ್ ಸಮುದ್ರದಿಂದ ರಷ್ಯಾದ ಮಂಚೂರಿಯ ನಡುವಿನ ಭೂಪ್ರದೇಶದಲ್ಲಿ ಸುಮಾರು ಒಂದು ಲಕ್ಷ ಹುಲಿಗಳು ಇದ್ದ ದಾಖಲೆಗಳಿವೆ.

8. ಬಂಗಾಳ ಹುಲಿ (ಪ್ಯಾಂಥೆರಾ ಟೈಗ್ರಿಸ್ ಟೈಗ್ರಿಸ್)

ಇದು ಭಾರತ, ಬರ್ಮಾ ಮತ್ತು ಇಂಡೋಚೀನಗಳಲ್ಲಿ ಪಸರಿಸಿದೆ. ಹೆಸರುವಾಸಿಯಾದ ಈಸ್ಟ್ ಇಂಡಿಯಾ ಕಂಪೆನಿಯ ಇಂಗ್ಲಿಷ್ ಶಿಕಾರಿಗಳು ಇವನ್ನು ಮೊದಲಬಾರಿಗೆ ಬಂಗಾಲದಲ್ಲಿ 1758 ರಲ್ಲಿ ನೋಡಿದರು. ಇವು ಭಾರತದ ಭವ್ಯ ಬಲಿ ತೆಗೆದುಕೊಳ್ಳುವ ಪ್ರಾಣಿಗಳಾಗಿವೆ. ಬಂಗಾಲದ ರಾಜಾರ್ಹತೆಯುಳ್ಳ ಹುಲಿ (ರಾಯಲ್ ಬೆಂಗಾಲ್ ಟೈಗರ್) ಎಂದು ಇದರ ಖ್ಯಾತಿ. ಪ್ರಾಣಿ ಶಾಸ್ತ್ರಜ್ಞರು ಈ ಬಿರುದಿಗೆ ಮಾನ್ಯತೆ ನೀಡಿಲ್ಲ. ಈಗ ಇದಕ್ಕೆ ಭಾರತದ 'ರಾಷ್ಟ್ರೀಯ ಪ್ರಾಣಿ'ಯೆಂದು ಅಭಿಧಾನ ನೀಡಲಾಗಿದೆ. ಕ್ರಿ.ಶ. 1972ನೆಯ ಗಣತಿ ಪ್ರಕಾರ ಭಾರತದಲ್ಲಿ 1,827 ಹುಲಿಗಳಿದ್ದ ವರದಿಯಿದೆ. ಪಾಕಿಸ್ತಾನದ ಸಿಂಧುನದಿ ಕಣಿವೆಯಲ್ಲಿದ್ದ ಹುಲಿಗಳು ಕ್ರಿ.ಶ. 1886 ರಲ್ಲಿ ಅಳಿದುಹೋದವು. ಆದರೆ ಈ ಹುಲಿಗಳ ಈಗಿನ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಇವುಗಳ ಸಂಖ್ಯೆ ಕ್ರಮೇಣ ಕ್ಷಯಿಸುತ್ತಿರುವುದರಿಂದ ಇತ್ತೀಚೆಗೆ ಇದರ ಹೆಸರು 'ಕೆಂಪು ಗ್ರಂಥ'ದಲ್ಲಿ ದಾಖಲಾಗಿದೆ. ಈಗ ಈ ಹುಲಿ ಭಾರತದಲ್ಲಿ ಮಾತ್ರ ಕಂಡುಬರುತ್ತದೆ. ಎಲ್ಲ ಹುಲಿ ವರ್ಗಗಳಲ್ಲಿ, ಭಾರತದ ಭವ್ಯ ರಾಜಾರ್ಹತೆಯುಳ್ಳ ಬಂಗಾಲದ ಹುಲಿ ಕೆಂಪು ಗ್ರಂಥಕ್ಕೆ ಸೇರುವಿಕೆಯಲ್ಲಿ ಕೊನೆಯದಾಗಿದೆ.

ಈಗಿನ ಹುಲಿಯ ಸ್ಥಿತಿಗತಿಯ ಬಗ್ಗೆ ಸಮಂಜಸವಾದ ಮಾಹಿತಿ ಲಭಿಸುವುದು ಕಷ್ಟ. ಇವು ದೊಡ್ಡ ಆಕಾರದ ಪ್ರಾಣಿಗಳಾಗಿದ್ದರೂ ಸುಲಭವಾದ ರೀತಿಯಲ್ಲಿ ಎಣಿಕೆ ಮಾಡುವುದು ಕಷ್ಟಸಾಧ್ಯ. ಇತರ ವನ್ಯಮೃಗಗಳಾದ ಜಿಂಕೆ, ಖಡ್ಗಮೃಗ, ಕಾಟಿಮೃಗ. ಆನೆಗಳನ್ನು ಎಣಿಕೆಮಾಡಿ ಇಲ್ಲವೆ ವಿಮಾನದಿಂದ ಫೋಟೋ ತೆಗೆದು ಲೆಕ್ಕಹಾಕಿ ಅವುಗಳ ಸಂಖ್ಯೆಯ ಬಗ್ಗೆ ಖಚಿತವಾಗಿ ಒಂದು ನಿರ್ಧಾರಕ್ಕೆ ಬರುವುದು ಅಷ್ಟೇನೂ ಕಷ್ಟಕರವಲ್ಲ. ಆದರೆ ನಾಚಿಕೆ ಸ್ವಭಾವದ ಹಾಗೂ ಸಾಕಷ್ಟು ಮರಸುಳ್ಳ, ಮನುಷ್ಯರು ಸಮೀಪಿಸಲಾಗದ ದುರ್ಗಮ ಪ್ರದೇಶದಲ್ಲಿ ಜೀವಿಸುವ ಹುಲಿಯಂತಹ ಮಾಂಸಾಹಾರಿ ಪ್ರಾಣಿಯನ್ನು ಲೆಕ್ಕಮಾಡುವುದು ತುಂಬಾ ಪ್ರಯಾಸದ ಕೆಲಸ.

ಎಂಟು ತೆರನಾದ ಹುಲಿಗಳಲ್ಲಿ ಬಾಲಿ ಹುಲಿಗಳು ಈಗಾಗಲೇ ನಿರ್ನಾಮವಾಗಿವೆ. ಕ್ರಿ.ಶ. 1914 ರಲ್ಲಿ ಕೆಲವು ಈ ಹುಲಿಗಳು ಕಂಡಿದ್ದವು. ಕ್ರಿ.ಶ. 1920 ರ ಹೊತ್ತಿಗೆ ಅವು ಅತಿ ಕ್ವಚಿತ್ತಾಗಿದ್ದವು. ಅದನ್ನು ಸಂರಕ್ಷಿಸುವ ಯಾವುದೇ ಕಾರ್ಯಕ್ರಮ ಹಾಕಿಕೊಳ್ಳದ್ದರಿಂದ ಕ್ರಿ.ಶ. 1937ರ ಸುಮಾರಿಗೆ ಈ ಜಾತಿಯ ಕೊನೆಯ ಹುಲಿಯು ಶಿಕಾರಿಗಳ ಗುಂಡಿಗೆ ಆಹುತಿಯಾಯಿತು.

ಸೈಬೀರಿಯಾದ ಹುಲಿಗಳು ಮಹಾಶಕ್ತಿಯುಳ್ಳ ಪ್ರಾಣಿಗಳು. ಬೇರೆ ಜಾತಿಯ ಹುಲಿಗಳಿಗಿಂತ ದಾರ್ಢ್ಯ ತಲೆ. ವಿಶಾಲ ಎದೆ ಹಾಗೂ ಪಕ್ಕೆಗಳನ್ನು ಹೊಂದಿದ್ದು, ಉದ್ದ ಕೂದಲುಗಳನ್ನು ಪಡೆದಿವೆ. ಒಂದಾನೊಂದು ಕಾಲಕ್ಕೆ ಇವು ಸೋವಿಯತ್ ದೇಶದ ಉಪನದಿಗಳಾದ ಬುರೇಯಾ. ಜೇಯಾ. ಉಸ್ಸೂರಿ ಮತ್ತು ಸುಂಗಾರಿನೊನ್ನಿಗಳನ್ನೊಳಗೊಂಡು ಸಂಪೂರ್ಣ ಅಮೂರ್ ನದಿಯ ತಗ್ಗು ಹಾಗೂ ಜಲಾನಯನ ಪ್ರದೇಶಗಳಲ್ಲೆಲ್ಲ ಪಸರಿಸಿದ್ದವು. ಇಂದು ಸೋವಿಯತ್ ದೇಶದ ಪೂರ್ವ ಪ್ರದೇಶಗಳಾದ ಕೆಲವು ಅಮೂರ್ ಕಂದರದ ಅಲ್ಲಲ್ಲಿಯ ಪ್ರದೇಶಗಳಾದ ಬುರೇಯಾ ವಲಯದ ದಕ್ಷಿಣಕ್ಕೆ ಜೋರ್‌ದ ಮಧ್ಯ ಹಾಗೂ ಎತ್ತರ ಪ್ರದೇಶಗಳು ಮತ್ತು ಸಿಖೋಟ್-ಅಲಿನ್ ಪರ್ವತಗಳ ಮಧ್ಯ ಹರಿಯುವ ಬಿಕ್ಕಿನ್ ನದಿಗಳ ದಂಡೆಗಳಲ್ಲಿ ಕಂಡುಬರುತ್ತವೆ. ಚೀನ ದೇಶದ ಆಗ್ನೇಯಕ್ಕೆ ಹಾಗೂ ಕಿರಿನ್ ಮತ್ತು ಹೀಲುಂಕಿಯಾಂಗ ಪರ್ವತಗಳಲ್ಲಿ ಇಂದಿಗೂ ಕೆಲವು ಹುಲಿಗಳು ವಾಸವಾಗಿರಬಹುದೆಂದು ತಿಳಿದುಬಂದಿದೆ. ಕೋರಿಯಾದಲ್ಲಿ ಕ್ರಿ.ಶ. 1957–66ರ ಅವಧಿಯಲ್ಲಿ ಈ ಜಾತಿಯ ಐದು ಹುಲಿಗಳು ಮಾತ್ರ ಇದ್ದವು. ತದನಂತರದ ಮಾಹಿತಿ ತಿಳಿದಿಲ್ಲ. ಇತ್ತೀಚಿನ ಅಂದಾಜಿನ ಪ್ರಕಾರ (ಕ್ರಿ.ಶ. 1972) ಪೂರ್ವ ಸೋವಿಯತ್ ದೇಶದಲ್ಲಿ ಒಟ್ಟು ಜೀವಂತ ಇದ್ದ ಹುಲಿಗಳ ಸಂಖ್ಯೆ 130. ಆಗ್ನೇಯ ಚೀನ ಹಾಗೂ ಕೋರಿಯದಲ್ಲಿ ಒಂದು ವೇಳೆ ಇದ್ದರೂ ಅವುಗಳ ಸಂಖ್ಯೆ ಕೇವಲ ಅತ್ಯಲ್ಪ. ಕೋರಿಯ ಯುದ್ಧದಲ್ಲಿ ಅನೇಕ ಹುಲಿಗಳು ಸತ್ತವೆಂಬ ಶಂಕೆಯಿದೆ.

ಇಂದು ಉಳಿದಿರುವ ಸೈಬೀರಿಯದ ಹುಲಿಗಳನ್ನು ಸಂರಕ್ಷಿಸಲು ಸೋವಿಯತ್ ದೇಶದಲ್ಲಿ ಪ್ರಯತ್ನಗಳು ನಡೆದಿವೆ. ಅವುಗಳಿಗೆ ಕ್ರಿ.ಶ. 1948ರಲ್ಲಿ ಕಾನೂನು ರೀತ್ಯ

ಸಂರಕ್ಷಣೆ ನೀಡಲಾಗಿದೆ. ಆದರೂ ಅವು ಬಹು ಸಂಖ್ಯೆಯಲ್ಲಿಲ್ಲ. ಸಿಖೋಟ್-ಅಲಿನ್ ಹಾಗೂ ಸುಡ್‌ಝುಖಿ ಮೀಸಲು ಧಾಮಗಳಲ್ಲಿ ಎರಡು ಅಲೆಯುತ್ತಿರುವ ಹುಲಿಗಳ ಹೆಜ್ಜೆಗಳ ಗುರುತುಗಳು ಮಾತ್ರ ಇತ್ತೀಚೆಗೆ ಕಂಡಿದ್ದವು. ಸಿಖೋಟ್-ಅಲಿನ್ ಮೀಸಲು ಧಾಮದಲ್ಲಿ ಈ ಜಾತಿಯ ಹುಲಿಗಳನ್ನು ರಕ್ಷಿಸಿ ಪುನರ್ವಸತಿ ಕಲ್ಪಿಸಿಕೊಡಲು ಅದೆಷ್ಟೇ ಯತ್ನಿಸಿದರೂ ಕೆಲವೇ ಹುಲಿಗಳು ಮಾತ್ರ ಬದುಕಿರಬಹುದಾಗಿದೆ.

ಪಕ್ಕದ ಚೀನದ ಹುಲಿಗಳು ಆಕಾರದಲ್ಲಿ ಚಿಕ್ಕವಾಗಿದ್ದು ಅವುಗಳಿಗೆ ಗಿಡ್ಡ ಕೂದಲು ಗಳಿರುತ್ತವೆ. ಅವುಗಳ ಮೈಬಣ್ಣ ಅಗಲವಾದ ಪಟ್ಟೆಗಳಿಂದ ಕೂಡಿದ್ದು ಹೆಚ್ಚು ವೈಭವಯುಕ್ತವಾಗಿವೆ. ಆದರೆ ಭಾರತದಲ್ಲಿನ ಹುಲಿಗಳಿಗಿಂತ ಇವುಗಳ ಕೂದಲು ಉದ್ದವಿದ್ದು ಹೆಚ್ಚು ಮೃದುವಾಗಿವೆ. ಯುನ್ನಾನ್‌ದ ದಕ್ಷಿಣಕ್ಕೆ ಕ್ವಾಂಗ್ಸಿ ಮತ್ತು ಕ್ವಾತುಂಗ್ ಪ್ರಾಂತಗಳಲ್ಲಿ ಇಂಡೋಚೀನದ ಜಾತಿಯ ಹುಲಿಗಳು ಕಂಡುಬಂದಿವೆ. ಈ ಹುಲಿಗಳೂ ಅತಿವಿರಳವಾಗಿವೆ. ಅಂತರರಾಷ್ಟ್ರೀಯ ನಿಸರ್ಗ ಸಂರಕ್ಷಣೆ ಸಂಘ (ಐ.ಯು.ಸಿ.ಎನ್) ಇವುಗಳನ್ನು ಅಪಾಯಕ್ಕೊಳಗಾದ ಜಾತಿಗಳೆಂದು ಪರಿಗ್ರಹಿಸಿ ಕೆಂಪು ಗ್ರಂಥದಲ್ಲಿ ಸೇರಿಸಿದೆ. ಚೀನ ಸರಕಾರದ ನೀತಿಯಂತೆ 'ಹುಲಿ ಮನುಷ್ಯನ ಜೀವನಕ್ಕೆ ತೊಂದರೆಯೊಡ್ಡಿ ಬೇಸಾಯ ಹಾಗೂ ಹುಲ್ಲುಗಾವಲುಗಳ ಪ್ರಗತಿಗೆ ಅಡಚಣೆಯೊಡ್ಡುವ ಪ್ರಾಣಿ' ಎಂದು ಘೋಷಿಸಿ ಅವುಗಳ ಕೊಲೆಗೆ ಅಲ್ಲಿ ಪ್ರೋತ್ಸಾಹಿಸ ಲಾಗಿದೆ. ಮೇಲಾಗಿ ಅಲ್ಲಿ ಹುಲಿಯ ದೇಹದ ಪ್ರತಿಯೊಂದು ಅಂಗಾಂಗವೂ ಔಷಧ ಕ್ಕೆಂದು ಹೆಚ್ಚು ಬೆಲೆಬಾಳುವ ವಸ್ತುವಾಗಿದೆ. ಅಲ್ಲಿಯ ಜನರು ಮೊದಲಿನಿಂದಲೂ ಈ ವಸ್ತುಗಳಿಗಾಗಿ ಹುಲಿಗಳನ್ನು ಕೊಲ್ಲುತ್ತ ಬಂದಿದ್ದಾರೆ.

ಶೀಘ್ರದಲ್ಲಿಯೇ ಬಾಲಿ ಹುಲಿಗಳಂತೆ ಚೀನದ ಹುಲಿಯೂ ನಿರ್ನಾಮದ ಹಂತವನ್ನು ಸೇರುವಲ್ಲಿ ಯಾವ ಸಂದೇಹವೂ ಉಳಿದಿಲ್ಲ. ಇಂದು ಕೇವಲ 15 ಚೀನದ ಹುಲಿಗಳು ಚೀನ ಹಾಗೂ ಸೋವಿಯತ್ ದೇಶಗಳಲ್ಲಿಯ ಪ್ರಮುಖ ಮೃಗಾಲಯ ಗಳಲ್ಲಿವೆ (ಬಹುಶಃ ಇವು ಬೇರೆ ಜಾತಿಯ ಹುಲಿಗಳ ಸಂಕರಗೊಂಡ ಮಿಶ್ರತಳಿಯ ಸಂತತಿಯಾಗಿರಲು ಸಾಕು). ಈ ತಳಿಯನ್ನು ಊರ್ಜಿತಗೊಳಿಸುವ ಸಾಧ್ಯತೆಯೂ ಸೊನ್ನೆಯೆಂದೇ ಹೇಳಬೇಕು.

ಅದೃಷ್ಟವಶಾತ್ ಇಂಡೋಚೀನದ ತಳಿಯದು ಸರ್ವಸಾಧಾರಣವಾಗಿ ಹರ್ಷದ ಚಿತ್ರವಾಗಿದೆ. ಸಾಮಾನ್ಯವಾಗಿ ಹುಲಿಗಳ ಪೀಳಿಗೆ ಎಲ್ಲೆಡೆಯಲ್ಲಿಯೂ ಕ್ಷೀಣಿಸುತ್ತಿರು ವಾಗ ಕ್ರಿ.ಶ. 1954ರಲ್ಲಿ ಅಂದಾಜು ಲೆಕ್ಕಮಾಡಿದ ಪ್ರಕಾರ 3000 ಈ ಜಾತಿಗಳ ಹುಲಿಗಳಿದ್ದದ್ದು ಸಂತಸದ ಮಾತೇ ಅಲ್ಲವೇ? ಇದರ ವಲಯ ಹಂಚಿಕೆ ಅತಿ ಹೆಚ್ಚಿದ್ದು ಚೀನ ದೇಶದ ದಕ್ಷಿಣದಿಂದ ಇಂಡೋಚೀನದ ವಿಯಟ್ನಾಮ್. ಲಾವೋಸ್. ಕ್ಯಾಂಬೋ ಡಿಯಾ. ಪೂರ್ವ ಬರ್ಮ. ಥೈಲ್ಯಾಂಡ್ ಮತ್ತು ಮಲಯ ದ್ವೀಪಕಲ್ಪದಿಂದ ಸಿಂಗಾಪುರದ ವರೆಗೆ ಹಬ್ಬಿದೆ: ಉತ್ತರದಿಂದ ದಕ್ಷಿಣದವರೆಗೆ ಸುಮಾರು 2000 ಮೈಲಿಗಳು. ಈ ಕೆಲವು ರಾಷ್ಟ್ರಗಳ ವಿಶಾಲ ಪ್ರದೇಶಗಳ ಇತ್ತೀಚಿನ ದಿನಗಳಲ್ಲಿ ಮಹಾಯುದ್ಧಗಳ

ಪ್ರಯುಕ್ತ ಅತಿ ಶಕ್ತಿಯುಳ್ಳ ಮುಸಿಗುಂಡು, ಫಿರಂಗಿ ಹಾಗೂ ಬಾಂಬು ಮತ್ತು ಮೇಲಿಂದ ಮೇಲೆ ಸಿಂಪಡಿಸಿದ ಆರ್ಸೆನಿಕಲ್‌ದಿಂದ ಸಂಪೂರ್ಣ ಧ್ವಂಸಗೊಂಡಿವೆ. (ಅರಣ್ಯಗಳ ಎಲೆಗಳನ್ನು ಉದುರಿಸಲು ಈ ಕ್ರಮ ಕೈಗೊಳ್ಳಲಾಗುತ್ತಿತ್ತು). ಇದರಿಂದ ಪ್ರತಿಯೊಂದು ಜೀವಿಯ ಮೇಲೂ ಲೆಕ್ಕವಿಲ್ಲದಷ್ಟು ಹಾನಿ ಸಂಭವಿಸಿದೆ. ಅನೇಕ ಅರಣ್ಯ ಪ್ರದೇಶಗಳು ನಿರ್ಜೀವ ಮರಳುಗಾಡುಗಳಾಗಿ ಪರಿವರ್ತನೆ ಹೊಂದಿವೆ. ಮನುಷ್ಯರ ಮೇಲೂ ಈ ವಿಷದ ಪರಿಣಾಮವಾಗಿದೆ. ಅತ್ಯಾಧುನಿಕ ಔಷಧೋಪ ಚಾರದಿಂದಲೂ ಸಹ ಪರಿಹಾರ ದೊರೆತಿಲ್ಲ. ಅಂದ ಮೇಲೆ ಹುಲಿಗಳ ಪಾಡೇನು? ಮಹಾಯುದ್ಧದ ಸಮಯಕ್ಕೆ ಸೇನೆಯ ಜವಾನರು ಠಿಕಾಣಿ ಹಾಕಿದಲ್ಲೆಲ್ಲ ಈ ಪ್ರಾಣಿಗಳು ಅವರ ಗುಂಡಿನೇಟಿಗೆ ಸುಲಭವಾಗಿ ಬಹುಸಂಖ್ಯೆಯಲ್ಲಿ ಆಹುತಿಯಾಗಿರಲಿಕ್ಕೂ ಸಾಕು. ಯುದ್ಧವೆಂದರೆ ಮನುಷ್ಯರಂತೆ ವನ್ಯಮೃಗಗಳಿಗೂ ದುರ್ದಿನವೇ ಸರಿ.

ಬರ್ಮಾದೇಶ ಹಾಗೂ ಥೈಲ್ಯಾಂಡುಗಳ ಅನೇಕ ಅರಣ್ಯ ಪ್ರದೇಶಗಳಲ್ಲಿ ಇಂಡೋಚೀನ ಹುಲಿಗಳು ಕಂಡುಬರುತ್ತವೆ. ಅವರೆ ಅರಣ್ಯಕಡಿತ, ರಸ್ತೆನಿರ್ಮಾಣ, ಕಳ್ಳಬೇಟೆ ಹಾಗೂ ಚರ್ಮ ವ್ಯಾಪಾರಗಳು ಹೆಚ್ಚಿನ ಪ್ರಮಾಣದಲ್ಲಿ ಹುಲಿಯ ಆಹುತಿ ತೆಗೆದುಕೊಂಡಿವೆ. ಹುಲಿಗಳು ಬದುಕಿ ಜೀವಿಸಬೇಕಾದರೆ ವಿಶಾಲ ಆರೋಗ್ಯ ಹಾಗೂ ಸಂಪೂರ್ಣ ಸಂರಕ್ಷಣೆಯುಳ್ಳ ಪ್ರದೇಶಗಳನ್ನು ಮೀಸಲಾಗಿಡಬೇಕಾಗುತ್ತದೆ. ಈಗ ಹುಲಿಗಳಿಗಿರತಕ್ಕಂತಹ ಪ್ರಸ್ತುತ ಮೀಸಲು ಪ್ರದೇಶಗಳೆಂದರೆ ಬರ್ಮಾದಲ್ಲಿ ಪಿಡಾಂಗ್, ಥೈಲ್ಯಾಂಡ್‌ನಲ್ಲಿ ಖಾವೊಸಲೋಬ ಮತ್ತು ಖಾವೊಯಾಯಿ. ಮಲೇಶಿಯಾದಲ್ಲಿ ತಮನ್‌ನೇಗರಾ ಪ್ರದೇಶಗಳು ಅಷ್ಟೊಂದು ಸಂರಕ್ಷಣೆಗೊಳಪಟ್ಟಿರುವುದಿಲ್ಲ. ಈ ಹುಲಿಗಳೂ ಕೂಡ ಇತರ ಜಾತಿಯವುಗಳಂತೆ ಶೀಘ್ರದಲ್ಲಿಯೇ ವಿನಾಶವಾಗುವ ಕಾಲ ಸನ್ನಿಹಿತವಾಗಿದೆ: ಹೆಚ್ಚಿನ ಸಂರಕ್ಷಣೆ ಕೊಡದೆ ಹೋದಲ್ಲಿ ಪ್ರಸ್ತುತ ಸ್ಥಿತಿಗಳ ಮೇಲಿಂದ ಹೇಳುವುದಾದರೆ ಈ ಶತಮಾನದ ಅಂತ್ಯಕ್ಕೆ ಇವು ನಿರ್ನಾಮವಾಗುವುದರಲ್ಲಿ ಸಂದೇಹ ವಿಲ್ಲ.

ಸುಮಾತ್ರ ಹುಲಿ ಆಕಾರದಲ್ಲಿ ಚಿಕ್ಕವಿದ್ದು ಇಂಡೋಚೀನ ಅಥವಾ ಭಾರತದ ಹುಲಿಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪಟ್ಟೆಗಳನ್ನು ಹೊಂದಿರುತ್ತದೆ. ಬಿಳಿ ಗುರುತುಗಳು ಕಡಮೆ. ಅವುಗಳ ಪಟ್ಟೆಗಳು ಹೆಚ್ಚಿದ್ದು ಅವುಗಳಲ್ಲಿ ಚುಕ್ಕೆಗಳು ಕಂಡುಬರುತ್ತವೆ. ಅದರ ತಲೆಬುರುಡೆ ವಿಶಿಷ್ಟ ರೀತಿಯಲ್ಲಿ ಚಪ್ಪಟೆಯಾಗಿದೆ. ಕ್ರಿ.ಶ. 1936ರ ಸಮಯಕ್ಕೆ ಇವು ಹೆಚ್ಚಿನ ಸಂಖ್ಯೆಯಲ್ಲಿದ್ದು ಜನನಿಬಿಡ ಪ್ರದೇಶಗಳ ಸಮೀಪ ವಾಸಿಸುತ್ತಿದ್ದವು. ಈಗ ಅವುಗಳ ಸಂಖ್ಯೆ ತಕ್ಕಮಟ್ಟಿಗೆ ಕ್ಷೀಣಿಸಿದೆ. ಕ್ರಿ.ಶ. 1965ರ ಸುಮಾರಿಗೆ ಇವುಗಳ ಸ್ಥಿತಿ ಚಿಂತಾಜನಕವಾಗಿತ್ತು. ಇಂದು ಇವು ನಡುಗಡ್ಡೆಯ ಉತ್ತರ ಪ್ರದೇಶ ಹಾಗೂ ಈಶಾನ್ಯ ದಿಕ್ಕಿನ ಗುಡ್ಡಗಾಡು ಪ್ರದೇಶಗಳಲ್ಲಿ ಮಾತ್ರ ಉಳಿದಿವೆ. ಸರಿಯಾದ ಲೆಕ್ಕ ಸಿಗುತ್ತಿಲ್ಲವಾದರೂ ಕೆಲವೇ ನೂರು ಮಾತ್ರ ಈ ಜಾತಿಯ ಹುಲಿಗಳು ಇರಬಹುದೆಂದು ಅಂದಾಜುಮಾಡಲಾಗಿದೆ. ಸುಮಾತ್ರದ ಗುನುಂಗ್ ಲೀಸರ್ ಹುಲಿಯ ಸಂರಕ್ಷಣೆಯ ಮೀಸಲು ಪ್ರದೇಶ. ಇದಲ್ಲದೆ ಇತರ ಪ್ರದೇಶಗಳೂ ಹುಲಿ ಸಂರಕ್ಷಣೆಗೆ ಒಳಪಟ್ಟಿವೆ.

ಆದಾಗ್ಯೂ ಇವು ಮುಂದಿನ 25 ವರ್ಷಗಳವರೆಗೆ ಉಳಿದು ಜೀವಿಸಿದರೆ ಅತಿ ಆಶ್ಚರ್ಯದ ಸಂಗತಿಯೆಂದೇ ಹೇಳಬೇಕು.

ಜಾವಾದಲ್ಲಿಯ ಹುಲಿಗಳ ಸ್ಥಿತಿ ಅತಿ ಚಿಂತಾಜನಕವಾಗಿದೆ. ಜಾವಾದ ಹುಲಿಗಳು, ನಿಜವಾಗಿ ಹೇಳುವುದಾದರೆ, ತಮ್ಮ ಕೊನೆಯ ಹಂತದಲ್ಲಿವೆ. ಸುಮಾತ್ರದ ಜಾತಿಯವುಗಳಂತೆ ಇವು ತೀರ ಚಿಕ್ಕ ಆಕಾರವಿದ್ದು ಮೈಬಣ್ಣ ಸಾಮಾನ್ಯವಾಗಿ ಸ್ವಲ್ಪ ಕಪ್ಪು. ಪಟ್ಟೆಗಳು ನೀಳವಾಗಿ ಹಾಗೂ ಒಂದಕ್ಕೊಂದು ಹತ್ತಿರವಾಗಿವೆ; ಚುಕ್ಕೆಗಳಲ್ಲಿ ಕೊನೆಗಾಣುತ್ತವೆ. ಕಾಲುಗಳ ಒಳಭಾಗ ಹಾಗೂ ಹಿಂದಿನ ಭಾಗಗಳಲ್ಲಿ ಸುಮಾತ್ರದವುಗಳಿಗಿಂತ ಕಪ್ಪುಕಡಮೆ. ತಲೆಬುರುಡೆಯ ಹಿಂಭಾಗ ಕುಗ್ಗಿದಂತಿದ್ದು ಉಳಿದ ಹುಲಿ ಜಾತಿಗಳಿಗಿಂತ ಭಿನ್ನವಿರುತ್ತದೆ. ಕ್ರಿ.ಶ. 1851ರಲ್ಲಿ ಜಾವಾದ ಬಹುತೇಕ ಪ್ರದೇಶಗಳಲ್ಲಿ ಯಥೇಚ್ಛ ಹುಲಿಗಳಿದ್ದವು. ಅಲ್ಲಿಯ ಸ್ಥಳೀಯ ಜನಾಂಗ ಹೆಚ್ಚಾಗಿ ಈಗಲೂ ಹುಲಿಗಳನ್ನು 'ತಮ್ಮ ಅಗಲಿದ ಸಂಬಂಧಿಕರ ಆತ್ಮಗಳ ಪುನರ್ಜನ್ಮ' ಎಂದು ಭಾವಿಸುತ್ತಾರೆ. ಆದ್ದರಿಂದ ಹುಲಿಗೆ ಸಂಪೂರ್ಣ ಸಂರಕ್ಷಣೆ ಕೊಡದಿದ್ದರೂ ಹುಲಿಯ ಬಗೆಗೆ ಪೂಜ್ಯಭಾವನೆಯಿಂದ ವರ್ತಿಸಿ ಹಿಂಸಿಸದಂತೆ ನೋಡಿಕೊಳ್ಳುತ್ತಾರೆ. ಆದರೆ ಇತ್ತೀಚೆಗೆ ಎಲ್ಲ ಕಡೆಯಲ್ಲೂ ಅತಿ ಸಂಭ್ರಮದಿಂದ ಬೇಟೆ ಪ್ರಾರಂಭವಾಗಿದೆ. ಕ್ರಿ.ಶ. 1930ರ ಸುಮಾರಿಗೆ ಇವುಗಳ ಸಂಖ್ಯೆ ಅತಿ ಕಡಮೆಯಾಯಿತು. 1921ರಲ್ಲಿ ನೇದರ್‌ಲ್ಯಾಂಡ್ ಇಂಡೀಜ ಸರಕಾರ ಉದ್ಜಂಗ್ ತುಲಾನ್ ರಿಸರ್ವನ್ನು ಅನುಷ್ಠಾನಕ್ಕೆ ತಂದು ಆ ಪ್ರದೇಶದಲ್ಲಿ ನಶಿಸುತ್ತಿರುವ ಜಾವಾದ ಖಡ್ಗಮೃಗ, ಬಾಂಟೆಂಗ್ ಹಾಗೂ ಹುಲಿಗಳನ್ನು ಸಂರಕ್ಷಿಸಲು ವ್ಯವಸ್ಥೆಮಾಡಿದೆ. ಆದರೆ ನಡುಗಡ್ಡೆಯ ಇನ್ನುಳಿದ ಪ್ರದೇಶಗಳಲ್ಲಿ ಹುಲಿಯನ್ನು ಸಂರಕ್ಷಿಸಲು ಯಾವುದೇ ಪ್ರಯತ್ನ ಮಾಡಿರಲಿಲ್ಲ. ಕ್ರಿ.ಶ. 1940ರ ವೇಳೆಗೆ ಅವುಗಳ ಸಂಖ್ಯೆ ವಿರಳವಾದಾಗ ಹುಲಿಗಳ ಬೇಟೆಯನ್ನು ಹತೋಟಿಗೆ ತಂದಿತು. ಆದರೂ ಸ್ಥಳೀಯ ಜನತೆ ಹುಲಿಗಳನ್ನು ಬಲೆ, ಬೋನುಗಳಿಂದ ಹಿಡಿಯುವುದೂ ಹಾಗೂ ಮಾರಕ ವಿಷಗಳಿಂದ ಕೊಲ್ಲುವುದೂ ನಡೆಸಿಯೇ ಇದ್ದವು. ಪರಿಣಾಮವಾಗಿ ಅವುಗಳ ನಿರ್ನಾಮ ಸನ್ನಿಹಿತವಾಗಿತ್ತು. ಕ್ರಿ.ಶ. 1955 ರ ಸಮಯಕ್ಕೆ 20 ರಿಂದ 25 ಹುಲಿಗಳು ಮಾತ್ರ ಉಳಿದಿದ್ದವು. ಅವುಗಳಲ್ಲಿ ಸುಮಾರು ಹನ್ನೆರಡರಷ್ಟು ಉದ್ಜಂಗ್ ತುಲಾನ್ ರಿಸರ್ವದಲ್ಲಿದ್ದವು. ಕ್ರಿ.ಶ. 1964ರಲ್ಲಿ ಇಡೀ ನಡುಗಡ್ಡೆಯಲ್ಲಿ ಬದುಕಿದ್ದ ಹುಲಿಗಳ ಸಂಖ್ಯೆ 12 ಆಗಿದ್ದರೆ ಇತ್ತೀಚಿನ ವರದಿ ಪ್ರಕಾರ ಅದು 5ಕ್ಕೆ ಇಳಿದಿದೆ. ಅವೆಲ್ಲವೂ ಬೇತಿರಿ ಮೀಸಲು ಅರಣ್ಯದಲ್ಲಿವೆ. ಅವು ಈಗ ಕಾನೂನಿನಿಂದ ಸಂರಕ್ಷಿಸಲ್ಪಟ್ಟಿದ್ದರೂ ಅವುಗಳ ಸುರಕ್ಷತೆ ಆಶಾದಾಯಕವಾಗಿಲ್ಲ. ಈ ದೇಶದ ಕೆಲವು ಮೃಗಾಲಯಗಳಲ್ಲಿ ಹೆಣ್ಣು ಹುಲಿಗಳಿವೆ. ಇಂಡೋನೇಷಿಯ ಸರಕಾರ ಉಳಿದಿದ್ದ ಜಾವಾ ಹಾಗೂ ಸುಮಾತ್ರ ಹುಲಿಗಳನ್ನು ರಕ್ಷಿಸಲು ಕೊನೆಗಳಿಗೆಯ ಪ್ರಯತ್ನ ಮಾಡುತ್ತಿರುವುದು ಸಂತೋಷದ ಸಂಗತಿ.

ಕ್ಯಾಸ್ಪಿಯನ್ ಹುಲಿಯ ಭವಿಷ್ಯವೂ ಉಳಿದವುಗಳಂತೆಯೇ ನಿರುತ್ಸಾಹಗೊಳಿಸುವಂತಹದು. ಈ ಪ್ರಾಣಿಗಳು ಮಧ್ಯಮ ಆಕಾರವಿದ್ದು ಕಂದುವರ್ಣ ಹಾಗೂ

ಹತ್ತಿರಹತ್ತಿರ ಪಟ್ಟೆಗಳನ್ನು ಹೊಂದಿವೆ. ಕೂದಲು ದಟ್ಟವಿದ್ದು ಚಳಿಗಾಲದಲ್ಲಿ ಉದ್ದವಾಗಿರುತ್ತವೆ. ಸೋವಿಯತ್ ದೇಶದಲ್ಲಿ ಕ್ರಾಂತಿಯ ನಂತರ ಹೆಚ್ಚಿನ ಪ್ರಮಾಣದಲ್ಲಿ ಮರಗಳ ಕಡಿತ ಹಾಗೂ ಮಾನವ ಪುನರ್ವಸತಿ ನಡೆದವು. ಈ ಮೊದಲು ಕ್ಯಾಸ್ಪಿಯನ್ ಹುಲಿಗಳು ದಟ್ಟಪ್ರದೇಶಗಳಾದ ಅರಾರತ್ ಪರ್ವತ, ಕ್ಯಾಸ್ಪಿಯನ್‌ದ ಪೂರ್ವಕ್ಕೆ ಇರಾನ್ ಹಾಗೂ ಅಫಘಾನಿಸ್ತಾನದಿಂದ ಸಿಂಕಿಯಾಂಗ್ ಮತ್ತು ಅರಾಲ ಸಮುದ್ರದ ಉತ್ತರಕ್ಕೆ ಬಲಖಾಷ್ ಸರೋವರ, ಅಲ್ಟಾಯಿ ಮತ್ತು ಇರ್ಟಿಸ್ ತಗ್ಗು ಪ್ರದೇಶಗಳಲ್ಲಿ ವಾಸಿಸಿದ್ದವು. ರಷ್ಯಾದ ಅನೇಕ ಪಂಚವಾರ್ಷಿಕ ಯೋಜನೆಗಳನ್ವಯ ಅರಣ್ಯ ಸವರಿ ಬಹಳ ಭೂಮಿಯು ಸಾಗುವಳಿಗೆ ತರಲ್ಪಟ್ಟಿದೆ ಹಾಗೂ ಹುಲ್ಲುಗಾವಲು ಅಭಿವೃದ್ಧಿಗಳಿಗೆ ಕೊಡಲ್ಪಟ್ಟಿದೆ. ಪರಿಣಾಮವಾಗಿ ಬಹಳ ವನ್ಯಮೃಗಗಳು ನಾಶವಾಗಿವೆ. ಅನೇಕ ಬೇಟೆಗಾರರು ಆಕಾಶ ಬಾಣಗಳನ್ನು ಹಾರಿಸಿದರು. ವಿಶೇಷ ಸೇನೆಯ ಜವಾನರಿಗೆ ಹುಲಿಗಳನ್ನು ಕೊಲ್ಲುವ ಕಾರ್ಯದಲ್ಲಿ ನಿರತರಾಗಲು ಆದೇಶ ನೀಡಲಾಗಿತ್ತು. ಕೆಲವೇ ವರ್ಷಗಳಲ್ಲಿ ಇಡೀ ರಷ್ಯಾದ ಕಾಡುಗಳಲ್ಲಿ ಹೇಳಹೆಸರಿಲ್ಲದಷ್ಟು ವನ್ಯಮೃಗ ನಾಶವಾದವು. ಅದೇ ಸಮಯಕ್ಕೆ ಹಿಂದೆ ಹುಲಿಗಳಿದ್ದ ಉತ್ಕೃಷ್ಟವಾದ ಕ್ಯಾಸ್ಪಿಯನ್ ತೀರಪ್ರದೇಶಗಳು ಬತ್ತ, ಚಹಾ ಮತ್ತು ಹತ್ತಿ ಬೆಳೆಗಳ ಪ್ರದೇಶಗಳಾಗಿ ಮಾರ್ಪಟ್ಟವು. ಕ್ರಿ.ಶ. 1950ರ ವೇಳೆಗೆ ಸೋವಿಯತ್ ದೇಶದ ಯಾವುದೇ ಭಾಗದಲ್ಲಿ ಒಂದು ಹುಲಿಯೂ ಉಳಿಯಲಿಲ್ಲ. ಕೆಲವು ಸಂಚಾರಿ ಹುಲಿಗಳು ಇರಾನದಿಂದ ಅಥವಾ ಅಫಘಾನಿಸ್ತಾನದಿಂದ 1964ರವರೆಗೆ ಗಡಿದಾಟಿ ಆಗಾಗ ಬರುತ್ತಿದ್ದವು. ಕಟ್ಟುನಿಟ್ಟಿನ ಹುಲಿಯ ಸಂರಕ್ಷಣೆಯ ಕಾರ್ಯಕ್ರಮ ಸೋವಿಯತ್ ದೇಶ ಇಂದು ಹಾಕಿಕೊಂಡಿದೆ ಯಾದರೂ ಅದು ಬಹು ತಡವಾಗಿದೆ.

ಇರಾನದಲ್ಲಿ ಕ್ಯಾಸ್ಪಿಯನ್ ಹುಲಿ ಸಂಪೂರ್ಣ ಸಂರಕ್ಷಣೆ ಪಡೆದಿದೆ. ಆದರೆ ಅಲ್ಲಿಯೂ ಈ ಸಂರಕ್ಷಣೆ ಕ್ರಮ ಬಹಳ ತಡವಾಗಿ ಜಾರಿಯಲ್ಲಿ ಬಂತು. ಸುಮಾರು 15 ಹುಲಿಗಳು ಇಂದು ಎಲ್ಬುರ್ಝ ಪರ್ವತಗಳಲ್ಲಿ ಹಾಗೂ ಗೊರ್ಗಾನ್‌ದ ದಕ್ಷಿಣ ಪ್ರದೇಶಗಳಲ್ಲಿ ಇರಬಹುದೆಂದು ನಂಬಲಾಗಿದೆ. ಹುಲಿಗಳ ಮುಖ್ಯ ಬೇಟೆ ಪ್ರಾಣಿಗಳಾದ ಕಾಡುಹಂದಿಗಳ ಕೊಲೆ ಇಂದಿಗೂ ಅವ್ಯಾಹತವಾಗಿ ನಡೆಯುತ್ತಲೇ ಇದೆ. ಪರಿಣಾಮವಾಗಿ ಹುಲಿಗಳ ಕೊನೆಯೂ ತ್ವರಿತಗತಿಯಿಂದ ನಡೆದಂತಾಗಿದೆ.

ಕ್ಯಾಸ್ಪಿಯನ್ ಹುಲಿಯನ್ನು ಉಳಿಸಿಕೊಳ್ಳಲು ಅಫಘಾನಿಸ್ತಾನದಲ್ಲಿ ಕೆಲವು ಕ್ರಮ ಕೈಕೊಳ್ಳಲಾಗಿದೆ. ಸುಮಾರು ಒಂದು ನೂರರಷ್ಟಾದರೂ ಹುಲಿಗಳು ಎತ್ತರದ ಅಮುದರ್‍ಯಾದ ತೀರ ಉತ್ತರಕ್ಕಿಂತ ತುಗಾಯಿ ಕಾಡುಗಳಲ್ಲಿ ಮತ್ತು ಪ್ಯಾಂಡ್‌ಝಾ ತಗ್ಗುಪ್ರದೇಶಗಳಲ್ಲಿ ಕೆಲವರ್ಷಗಳ ಹಿಂದೆ ಇದ್ದವು. ಅಲ್ಲಿಯೂ ಇಂದು ಇವುಗಳು ಬಹುಮಟ್ಟಿಗೆ ನಾಶಗೊಂಡಿವೆ. ಇಂದು ಅವುಗಳಲ್ಲಿ ಎಷ್ಟು ಬದುಕಿವೆಯೆಂಬುದು ಸರಿಯಾಗಿ ತಿಳಿಯದು. ಜರ್ಮನಿಯ ವೈಜ್ಞಾನಿಕ ತಂಡದ ಒಬ್ಬ ಥರ್ಕತ್‌ದಲ್ಲಿಯ ಒಕ್ಸಸ್‌ದ ದಂಡೆಯ ಮೇಲೆ ಕೆಲವು ಹುಲಿಗಳ ಹೆಜ್ಜೆಗಳ ಗುರುತುಗಳನ್ನು ಕಂಡನೆಂದು

ಕ್ರಿ.ಶ. 1965ರಲ್ಲಿ ಹೇಳಿದ್ದಾನೆ. ಕ್ಯಾಸ್ಪಿಯನ್ ಹುಲಿ ಎಲ್ಲೆಡೆಯಲ್ಲಿಯೂ ನಿರ್ನಾಮವಾಗುತ್ತಿದೆ ಎಂಬ ಸಂಶಯ ದಿಟ.

ವಿಶ್ವದಲ್ಲಿಯೇ ಪ್ರಖ್ಯಾತಿ ಹೊಂದಿದ ಭಾರತದ ಹುಲಿ ಶತಮಾನಗಳಿಂದ ರಾಜ ಮಹಾರಾಜರ, ರಾಜಕುಮಾರರ ಹಾಗೂ ಬೇಟೆಗಾರರ ಅಚ್ಚುಮೆಚ್ಚಿನ ಪ್ರಾಣಿ; ವಿಜಯ ಸ್ಮಾರಕ ಚಿಹ್ನೆಯೂ ಆಗಿತ್ತು. ಹುಲಿಯನ್ನು ಕೊಲ್ಲುವಲ್ಲಿ ಮನುಷ್ಯನ ಮೂರ್ಖತನ ಮತ್ತು ಅತ್ಯಾಶೆ ಪ್ರದರ್ಶನಗಳು ಲೆಕ್ಕವಿಲ್ಲದಷ್ಟು ಇತಿಹಾಸದ ಪುಟಗಳಲ್ಲಿ ದೊರೆಯುತ್ತವೆ. ಒಬ್ಬ ಶಿಕಾರಿ ತನ್ನ ಜೀವಮಾನದಲ್ಲಿ 300–400ರಷ್ಟು ಹುಲಿಗಳನ್ನು ಕೊಂದಿರುವುದು ಅಸಾಮಾನ್ಯವೇನಲ್ಲ. ದೊಡ್ಡ ದೊಡ್ಡ ಬೇಟೆಗಳನ್ನಾಡಲು ಭಾರತದ ರಾಜಕುಮಾರರಲ್ಲಿ ಪೈಪೋಟಿಯೇ ನಡೆದಿತ್ತು. ಕ್ರಿ.ಶ. 1965ರಲ್ಲಿ ಒಬ್ಬ ಮಹಾರಾಜನು ತನ್ನ ಜೀವನದಲ್ಲಿ ಕನಿಷ್ಟ 1150 ಹುಲಿಗಳನ್ನು ಕೊಂದ ಬಗ್ಗೆ ಸ್ವತಃ ಉಲ್ಲೇಖಿಸಿದ್ದಾನೆ. ಬ್ರಿಟಿಷ್‌ರ ರಾಜ್ಯದಾಡಳಿತ ಸಮಯದಲ್ಲಿ ಹುಲಿಯ ಬೇಟೆಯಾಡುವುದೆಂದರೆ ಎಲ್ಲ ಸೇನಾ ಸಿಬ್ಬಂದಿಗೆ, ಸರಕಾರಿ ನೌಕರರಿಗೆ ಅದೊಂದು ವಿನೋದದಾಟವಾಗಿತ್ತು.

ಭಾರತದ ಹುಲಿಗೆ ಇತರ ಹುಲಿಗಳಿಗಿಂತ ಗಿಡ್ಡ ಹಾಗೂ ಹೊಳಪುಳ್ಳ ಕೂದಲುಗಳಿದ್ದು ಕುತ್ತಿಗೆಯಿಂದ ಬಾಲದ ಬುಡದವರೆಗೆ 18 ರಿಂದ 20ರಷ್ಟು ಕಪ್ಪುಪಟ್ಟೆಗಳಿರುತ್ತವೆ. ಪಟ್ಟೆಗಳು ಹೆಚ್ಚಾಗಿ ಜೋಡಿಯಲ್ಲಿರುತ್ತವೆ. ಅದರ ಉದ್ದವಾದ ಕಾಲುಗಳು ವೈಭವಯುಕ್ತವಾದ ಮೈಬಣ್ಣ ಮತ್ತು ಲೀನವಾದ ಮೈಕಟ್ಟು ಹೊಂದಿದ ಈ ಹುಲಿಗಳು ವಿಶ್ವದ ಬೆಕ್ಕಿನ ಜಾತಿಗೆ ಸೇರಿದ ಇತರ ಪ್ರಾಣಿಗಳಿಗಿಂತ ಹೆಚ್ಚು ಸುಂದರವಾಗಿವೆ. ಗಿಡ್ಡ ಹಾಗೂ ಸಾಟಿನ್‌ನಂತೆ ಇರುವ ಮೃದುಕೂದಲು ಉತ್ತರ ವಲಯದ ಹುಲಿಯ ಒರಟು ಕೂದಲಿಗಿಂತ ಬೇರೆ ತೆರನಾಗಿದೆ. ಮಧ್ಯಾಹ್ನದ ಬಿಸಿಲಲ್ಲಿ ನೆರಳನ್ನು ಹುಡುಕಿಕೊಂಡು ಹುಲಿಗಳು ಹೋಗುವುದರಿಂದ ಹೆಚ್ಚಿನ ಉಷ್ಣತೆಯನ್ನು ಅವು ಸಹಿಸಲಾರವೆಂದು ಹೇಳಬೇಕು. ಹೆಚ್ಚಿನ ಚಳಿ(ಹಿಮ)ಯನ್ನೂ ಅವು ಸಹಿಸಲಾರವು.

ಮೊದಲಿಗೆ ಹುಲಿಗಳು ಇಂದಿನ ಪಾಕಿಸ್ತಾನದ ಸಿಂಧುನದಿಯ ಕೊಳ್ಳದಲ್ಲಿ ವಿಶೇಷವಾಗಿದ್ದವು. ಆಗ ಅಲ್ಲಿ ವಿಸ್ತಾರವಾದ ಬಿದಿರಿನ ಕಾಡು, ಮುಳ್ಳುಕಂಟಿಗಳು ಬೆಳೆದು ನಿಂತಿದ್ದವು. ಈಗ ಅದು ವಿಶಾಲವಾದ ಮರುಭೂಮಿಯಾಗಿದೆ. ಈ ಪ್ರದೇಶದಲ್ಲಿ ಕ್ರಿ.ಶ. 1886ರಲ್ಲಿ ಕೊನೆಯ ಹುಲಿಯನ್ನು ಕೊಂದರು. ಅತಿ ಎತ್ತರವಾದ ಹಿಮಾಲಯ ಪರ್ವತ ಹಾಗೂ ಮರುಭೂಮಿ ಹೊರತುಪಡಿಸಿ ಹುಲಿ ಇಡೀ ಭಾರತವನ್ನು ಆಕ್ರಮಿಸಿದೆ. ನೇಪಾಳ, ಸಿಕ್ಕಿಂ, ಭೂತಾನ ಮತ್ತು ಪಶ್ಚಿಮ ಬ್ರಹ್ಮದೇಶ, ಇಂಡೋಚೀನದ ತಳಿಗಳೊಂದಿಗೆ ಇವುಗಳ ಸಮ್ಮಿಶ್ರಣವೂ ನಡೆದಿದೆ. ಹುಲಿಗಳ ಸಂಖ್ಯೆ ಮೊದಲಿಗಿಂತಲೂ ಭಾರತದಲ್ಲಿ ಬಹಳ ಕುಗ್ಗಿದೆ. ಈಗ ಅವು ಸಣ್ಣ ಸಣ್ಣ ಗುಂಪುಗಳಲ್ಲಿದ್ದು ವಲಯಪ್ರದೇಶಗಳು ತುಂಡುತುಂಡಾಗಿ ವಿಂಗಡಿಸಲ್ಪಟ್ಟಿವೆ. ಐ.ಯು.ಸಿ.ಎನ್. 'ಬದುಕಿ ಉಳಿದ ಪ್ರಾಣಿ ಸೇವಾಮಂಡಲಿ' (ಸರ್ವೈವಲ್ ಸರ್ವೀಸ್

ಕಮೀಶನ್) ಪ್ರಕಾರ ಹೇಳುವುದಾದರೆ ಹುಲಿಯಂತಹ ಪ್ರಾಣಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಉಳಿಸಿಕೊಂಡು ಬರಬೇಕಾದರೆ ಆಯಾ ಪ್ರದೇಶಗಳಲ್ಲಿ 300 ಪ್ರಾಣಿಗಳಾದರೂ ಸತತವಾಗಿ ಇರಬೇಕಾದ್ದು ಅತ್ಯಾವಶ್ಯಕ. ಭಾರತದಲ್ಲಿ ಈಗ ಎಲ್ಲ ಪ್ರಾಣಿಗಳ ಸಂಖ್ಯೆ ಅತಿಕಡಮೆಯಾಗಿ ಅವುಗಳಿರುವ ಪ್ರದೇಶಗಳೂ ದೂರದೂರ ಪಸರಿಸಿವೆ. ಪರಿಣಾಮವಾಗಿ ಅವುಗಳಲ್ಲಿ ಸತತವಾಗಿ ಸಂಕರವಾಗಲು ಸಾಧ್ಯವಾಗದಾಗಿದೆ. ಆದ್ದರಿಂದ ಈಗಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಭಾರತದಲ್ಲಿ ಹುಲಿ ಹಾಗೂ ಇತರ ಯಾವುದೇ ಪ್ರಾಣಿಯ ಪೀಳಿಗೆಯನ್ನು ಸಾಕಷ್ಟು ಸಂಖ್ಯೆಯಲ್ಲಿ ಸತತವಾಗಿ ಉಳಿಸಿಕೊಂಡು ಬರುವುದು ಸಾಧ್ಯವಿಲ್ಲವಾಗಿದೆ.

ವಿವಿಧ ಬಗೆಯ ಹುಲಿಗಳು, ಅವುಗಳ ಅಂದಾಜು ಸಂಖ್ಯೆ ಹಾಗೂ ಅವು ಇರುವ ಸ್ಥಳಗಳು

1. **ಭಾರತ (ಬಂಗಾಲ)ದ ಹುಲಿ:** ಭಾರತ 1827; ಬಂಗ್ಲಾದೇಶ 100; ನೇಪಾಳ 150; ಭೂತಾನ 180; ಸಿಕ್ಕಿಂ ಹಾಗೂ ಪಶ್ಚಿಮ ಬ್ರಹ್ಮದೇಶಗಳಲ್ಲಿ ಕೆಲವು. ಅತಿ ಪ್ರಯಾಸದಿಂದ ಇವುಗಳನ್ನು ಬಹುಕಾಲ ಬದುಕಿಸಬಹುದು.

2. **ಸೈಬೀರಿಯಾದ ಹುಲಿ:** ಬಹುಶಃ 130 ಹುಲಿಗಳು ಮಾತ್ರ. ಸೋವಿಯತ್ ದೇಶದ ಪೂರ್ವಕ್ಕೆ ಹಾಗೂ ಕೆಲವು ಆಗ್ನೇಯ ಚೀನ ದೇಶದಲ್ಲಿರಬಹುದು. ಇವು ದೀರ್ಘಕಾಲ ಬದುಕುವುದು ಸಂಶಯಾಸ್ಪದ.

3. **ಚೀನದ ಹುಲಿ:** ಅಲ್ಲಲ್ಲಿ ಅಳಿದುಳಿದ ಹುಲಿಗಳನ್ನು ಹೆಚ್ಚಾಗಿ ತೊಂದರೆಗೀಡುಮಾಡಲಾಗಿದೆ. ಬಹುಶಃ ಇವೂ ಇಷ್ಟರಲ್ಲಿ ನಿರ್ನಾಮವಾಗಿರಬೇಕು.

4. **ಇಂಡೋಚೀನದ ಹುಲಿ:** 2000 ಹುಲಿಗಳು ವಿಶಾಲ ಪ್ರದೇಶದಲ್ಲಿ ಅಲ್ಲಲ್ಲಿ ಹರಡಿರಬೇಕು. ಯುದ್ಧದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೊಲ್ಲಲ್ಪಟ್ಟವು. ಬಹುಶಃ ಕೆಲವು ಮಲಯಾದಲ್ಲಿ ಸುರಕ್ಷಿತವಾಗಿರಲು ಸಾಧ್ಯ.

5. **ಕ್ಯಾಸ್ಪಿಯನ್‌ದ ಹುಲಿ:** ಬಹುಶಃ ಇರಾನದಲ್ಲಿ ಮಾತ್ರ ಕೆಲವು ಹುಲಿಗಳು ಬದುಕಿರಬೇಕು. ಇಂದು ಅವು ನಿರ್ನಾಮವಾಗಿರಲಿಕ್ಕೂ ಸಾಕು.

6. **ಸುಮಾತ್ರದ ಹುಲಿ:** ಕೆಲವು ಮಾತ್ರ ಇರಬಹುದು. ಇವು ದೀರ್ಘಕಾಲ ಬದುಕುವುದು ಸಂಶಯಾಸ್ಪದ.

7. **ಜಾವಾದ ಹುಲಿ:** ಬಹುಶಃ 5 ಅಥವಾ 10 ಉಳಿದಿರಬೇಕು. ಹೆಚ್ಚಾಗಿ ಅವು ಕೂಡ ಇಂದು ನಿರ್ನಾಮವಾಗಿರಲಿಕ್ಕೂ ಸಾಕು.

8. **ಬಾಲಿ ಹುಲಿ:** ಈಗಾಗಲೇ ನಿರ್ನಾಮವಾಗಿದೆ.

ಬಹುವಾಗಿ ನಾಶವಾಗುತ್ತಿರುವ ಜಾವಾದ ಹುಲಿ ಹಾಗೂ ಕ್ಯಾಸ್ಪಿಯನ್ ಹುಲಿಗಳ ರಕ್ಷಣೆಯ ಬಗ್ಗೆ ಕೂಡಲೇ ಸೂಕ್ತಕ್ರಮ ಕೈಕೊಂಡಲ್ಲಿ ಅವುಗಳನ್ನು ಈಗಲೂ ಉಳಿಸಿ

ಕೊಳ್ಳಲು ಸಾಧ್ಯ. ಕೊನೆಯ ಪಕ್ಷ ಈಗ ಅಳಿದುಳಿದ ಹುಲಿಗಳನ್ನು ಸೆರೆಹಿಡಿದು ಸೆರೆವಾಸದಲ್ಲಿಯೇ ಅವುಗಳ ಸಂತತಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇಂತಹ ಅನೇಕ ನಶಿಸಿ ಹೋಗುತ್ತಿದ್ದಂತಹ ಪ್ರಾಣಿಗಳನ್ನು ವಿಶ್ವದ ಪ್ರಮುಖ ಮೃಗಾಲಯಗಳಲ್ಲಿ ವೈಜ್ಞಾನಿಕವಾಗಿ ಸಂತಾನಾಭಿವೃದ್ಧಿ ಮಾಡಿದ ದಾಖಲೆಗಳಿವೆ. ಇದರಿಂದ ಪೀಳಿಗೆಗಳನ್ನು ಶುದ್ಧತಳಿಯಲ್ಲಿ ಕಾಪಾಡಿಕೊಂಡು ಬರಲೂ ಸಾಧ್ಯ. ಕೆಲವು ಸಮಯ ಮೀಸಲು ಕಾಡು ಇದ್ದರೆ ಅಲ್ಲಿಯೂ ಸಂತತಿವೃದ್ಧಿ ನಡೆಸಬಹುದು. ಸೆರೆವಾಸದಲ್ಲಿ ಹುಟ್ಟಿಬೆಳೆದ ಹುಲಿಗಳು ಕಾಡಿನಲ್ಲಿ ಬೇಟೆಯಾಡಿ ತಮ್ಮ ಬಲಿಗಳನ್ನು ಕ್ರಮೇಣ ತರಬೇತಿಯಿಂದ ಹಿಡಿದು ಕೊಲ್ಲಲು ಸಾಧ್ಯ ಎಂಬುದು ಧೃಢಪಟ್ಟಿದೆ. ಆದರೆ ಕಾಡಿನಲ್ಲಿಯ ಹುಲಿಮರಿ ಎರಡು ವರ್ಷಗಳವರೆಗೆ ಕಠಿಣಶಿಕ್ಷೆ ಹಾಗೂ ತರಬೇತು ತಾಯಿಯಿಂದ ಪಡೆಯುತ್ತದೆ.

ಭಾರತದ ಉತ್ತರ ಗಡಿಯಿಂದಾಚೆಗೆ ಮೂರು ಚಿಕ್ಕರಾಜ್ಯಗಳಾದ ನೇಪಾಳ, ಸಿಕ್ಕಿಂ, ಭೂತಾನಗಳಲ್ಲಿಯೂ ಹುಲಿಗಳು ಅಪಾರ ಸಂಖ್ಯೆಯಲ್ಲಿದ್ದವು. ಇಂದು ನೇಪಾಳದಲ್ಲಿ ಹೆಚ್ಚೆಂದರೆ 150 ಮತ್ತು ಭೂತಾನದಲ್ಲಿ 150 ಇವೆ. ಸಿಕ್ಕಿಂ ರಾಜ್ಯ ಬಹು ಚಿಕ್ಕದಿದ್ದರೂ ಅಲ್ಲಿ ಕೆಲವು ಹುಲಿಗಳು ಇನ್ನೂ ಇರಲಿಕ್ಕೆ ಸಾಕು.

ಬಾಂಗ್ಲಾದೇಶದಲ್ಲಿ ಭಾರತದ ಹುಲಿಗೆ ವಿಶೇಷವಾಗಿ ಗಂಗಾ, ಬ್ರಹ್ಮಪುತ್ರಾ ನದಿಗಳ ಸುಂದರಬನ ಮುಖಪ್ರದೇಶ ಮತ್ತು ಚಿತ್ತಗಾಂಗ್ ಪರ್ವತಗಳ ಸಾಲು ಭದ್ರವಾದ ನೆಲೆಯಾಗಿತ್ತು. ಬಹುಶಃ ಈಗ ಬಾಂಗ್ಲಾದೇಶದ ಸುಂದರಬನದಲ್ಲಿ ಒಂದು ನೂರು ಹುಲಿಗಳು ಇರಬಹುದು. ಇನ್ನುಳಿದ ಕಡೆ ದಟ್ಟ ಕಾಡಿದ್ದ ಸಿಲ್‌ಹೆಟ್ ಮುಖಾಂತರ ಮ್ಯೆಮೆನ್‌ಸಿಂಗದ ಪರಿಸರದಲ್ಲಿ ಹುಲಿ ಹೇಳಹೆಸರಿಲ್ಲದೆ ನಶಿಸಿದೆ. ಇಂದು ಅಸ್ಸಾಮದಿಂದ ತ್ರಿಪುರಾದವರೆಗಿನ ಪ್ರದೇಶದಲ್ಲಿ ಮಾತ್ರ ಆಗಾಗ ಅಲೆಯುವ ಹುಲಿಗಳು ಕಾಣುತ್ತವೆ.

ಭಾರತದಲ್ಲಿ ಹುಲಿಗಳ ಸಂಖ್ಯೆ

ನಿಸರ್ಗರಕ್ಷಕ ಇ. ಪಿ. ಗೀ ಸುಮಾರು ಒಂದು ಲಕ್ಷ ಹುಲಿಗಳು ಭಾರತದಲ್ಲಿವೆ ಎಂದು ಕ್ರಿ.ಶ. 1920ರಲ್ಲಿ ಅಂದಾಜು ಮಾಡಿದ್ದ. ಅದೇ ನಿಸರ್ಗರಕ್ಷಕನ ಅಂದಾಜಿನ ಮೇರೆಗೆ ಕ್ರಿ.ಶ. 1930ರಲ್ಲಿ ಈ ಸಂಖ್ಯೆ 40,000ಕ್ಕೆ ಇಳಿದಿತ್ತು. ಕ್ರಿ.ಶ. 1931ರಲ್ಲಿ ಜಿಮ್ ಕೊರ್ಬೆಟ್ ಈ ಸಂಖ್ಯೆ ಇನ್ನೂ ಇಳಿದು 30,000 ದಷ್ಟಿತ್ತೆಂದು ಹೇಳಿದ್ದಾನೆ. ಪುನಃ ಇ. ಪಿ. ಗೀ ಕ್ರಿ.ಶ. 1964ರಲ್ಲಿ ಅಂದಾಜು ಮಾಡಿದಾಗ ಭಾರತ ದ್ವೀಪಕಲ್ಪದಲ್ಲಿನ ಹುಲಿಗಳ ಸಂಖ್ಯೆ 4,000 ಮಾತ್ರ ಆಗಿತ್ತು. ಕ್ರಿ.ಶ. 1969ರಲ್ಲಿ ಹೊಸದಿಲ್ಲಿಯಲ್ಲಿ ಅಂತರ ರಾಷ್ಟ್ರೀಯ ನಿಸರ್ಗ ಸಂರಕ್ಷಣಾ ಸಂಸ್ಥೆಯ ಕಾಂಗ್ರೆಸ್ ಅಧಿವೇಶನ ಸೇರಿದಾಗ ದಿಲ್ಲಿ ಮೃಗಾಲಯದ ನಿರ್ದೇಶಕನಾಗಿದ್ದ ಕೆ. ಎಸ್. ಸಾಂಖಾಲಾ ಹುಲಿಯ ಸಂಖ್ಯೆ 2000-3000 ಗಳಿಗೆ ಇಳಿದಿದೆ ಎಂದು ಘೋಷಿಸಿದನು. ಈ ಸಂಖ್ಯೆ

ಬಿ. ಶೇಷಾದ್ರಿ ಕ್ರಿ.ಶ. 1968ರಲ್ಲಿ ಅಂದಾಜುಮಾಡಿದ 2800 ಹುಲಿಗಳ ಸಂಖ್ಯೆಗೆ ನಿಕಟವಾಗಿತ್ತು. ಅದೇ ಕಾಂಗ್ರೆಸ್ ಅಧಿವೇಶನದಲ್ಲಿ ಐ.ಯು.ಸಿ.ಎನ್‌ದ ಅಪಾಯಕ್ಕೀಡಾದ ಪ್ರಾಣಿಗಳ ಕೆಂಪು ಗ್ರಂಥದ ಟಿಪ್ಪಣಿಗೆ ಭಾರತದ ಹುಲಿಯನ್ನೂ ಸೇರಿಸಬೇಕೆಂದು ಗೊತ್ತುವಳಿ ಮಾಡಲಾಯಿತು. ಅಂದಿನಿಂದ ಬಂಗಾಲಹುಲಿ ಕೂಡ ಅಪಾಯಕ್ಕೀಡಾದ ಇತರ ಪ್ರಾಣಿಗಳಂತೆ ಶೀಘ್ರ ಅಂತರ ರಾಷ್ಟ್ರೀಯ ಕೃಪೆಗೆ ಒಳಪಟ್ಟಿದೆ.

ಕ್ರಿ.ಶ. 1970ರಲ್ಲಿ ವಿಶ್ವವನ್ಯಮೃಗ ನಿಧಿಯ ನೆರವು ಪಡೆದು ಭಾರತದ ರಾಷ್ಟ್ರೀಯ ಮನವಿಯ ಪ್ರಕಾರ ರಿಚರ್ಡ್ ಪಾಲ್ಲರ್ ಪ್ರತಿಯೊಂದು ರಾಜ್ಯಕ್ಕೂ ಭೇಟಿಕೊಟ್ಟು ಅಂಕಿಗಳನ್ನು ಕೂಡಿಹಾಕಿದ. ಅದು ವೈಜ್ಞಾನಿಕ ಸಮೀಕ್ಷೆ ಎಂದು ನಟಿಸಿದವನೆಂದರೆ ಇವನೇ ಮೊದಲಿನವನು. ಭಾರತದಲ್ಲಿ ಹುಲಿಗಳು ಜೀವಿಸಿರುವೆಡೆಗಳಲ್ಲೆಲ್ಲ ಭೇಟಿ ಇತ್ತು, ಆಯಾ ರಾಜ್ಯಗಳ ವನ್ಯಮೃಗ ರಕ್ಷಣಾಧಿಕಾರಿಗಳು ಒದಗಿಸಿದ ಅಂಕಿಗಳನ್ನು ಕಲೆಹಾಕಿ ಅವನು ಲೆಕ್ಕಹಾಕಿದ. ಅವನ ಮೇರೆಗೆ ಒಟ್ಟು ಹುಲಿಗಳ ಸಂಖ್ಯೆ 1960. ಭಾರತದ ವನ್ಯಮೃಗ ಸಮಿತಿಯ ಪರವಾಗಿ ಕ್ರಿ.ಶ. 1972ರಲ್ಲಿ ಮೊದಲಬಾರಿಗೆ ವಿವರವಾದ ಸಮೀಕ್ಷೆ ನಡೆಯಿತು. ನುರಿತ ಹಿರಿಯ ಸಂಶೋಧನಾಧಿಕಾರಿಯಾದ ಎಸ್. ಆರ್. ಚೌಧರಿ ತರಬೇತು ಪಡೆದ ಅರಣ್ಯಾಧಿಕಾರಿಗಳ ಸಹಾಯದಿಂದ ಈ ಕಾರ್ಯನಿರ್ವಹಿಸಿದನು. ಈ ನಂಬಲರ್ಹವಾದ ಫಲಿತಾಂಶದಿಂದ 1827 ಹುಲಿಗಳು ಭಾರತದಲ್ಲಿ ಅಂದು ಜೀವಂತವಾಗಿ ಬದುಕಿದ್ದವೆಂದು ತಿಳಿದುಬಂತು.


ಚಿತ್ರ 2ರಲ್ಲಿನ ವಿವರಗಳಿಂದ ಇತ್ತೀಚಿನ ಮೂರು ದಶಕಗಳಲ್ಲಿ ಹುಲಿಯ ಅವನತಿ ಶೀಘ್ರವಾಗಿ ನಡೆದಿದೆಯೆಂಬುದು ಖಚಿತವಾಗುತ್ತದೆ.

ವ್ಯಾಘ್ರಗಣತಿ

ಅರಣ್ಯಖಾತೆಯ ಸಿಬ್ಬಂದಿಯವರು ಸಾಮಾನ್ಯವಾಗಿ ನೀರಿನ ಮಡವುಗಳ ಸುತ್ತಲೂ ಮೇ–ಜೂನ್ ತಿಂಗಳುಗಳಲ್ಲಿ ಹೆಜ್ಜೆಗಳ ಗುರುತುಗಳ ಅಳತೆಮಾಡಿ ಹುಲಿಗಳ ಸಂಖ್ಯೆ ಅಂದಾಜುಮಾಡುತ್ತಾರೆ. ಇದು 'ಹುಲಿ ದಿನಕ್ಕೆ ಒಂದು ಬಾರಿ ನೀರು ಕುಡಿಯುತ್ತದೆ ಮತ್ತು ಪ್ರತಿಯೊಂದು ಹುಲಿಯ ಹೆಜ್ಜೆಗಳು ಭೇದ ತೋರಿಸುತ್ತವೆ' ಎಂಬ ನಂಬಿಗೆಯನ್ನು ಆಧರಿಸಿದೆ. ಆದರೆ ಈ ವಿಧದಲ್ಲಿ ಕೆಲವು ಲೋಪದೋಷಗಳಿವೆ. ಹುಲಿಗಳ ಹೆಜ್ಜೆಗಳು ಆಕಾರದಲ್ಲಿ ಹೆಚ್ಚಾಗಿ ಒಂದೇ ತೆರನಾಗಿ ಕಾಣುತ್ತವೆ ಮತ್ತು ಅವಸರದಲ್ಲಿ ಅಳತೆ ಮಾಡಿದಾಗ ಈ ಹೆಜ್ಜೆಗಳ ಗುರುತು ಹಾಗೂ ಮತ್ತೊಂದು ಪ್ರಾಣಿಯ ಹೆಜ್ಜೆಯ ಗುರುತುಗಳ ನಡುವೆ ಅಂತರ ಕಂಡುಹಿಡಿಯುವುದು ಅತಿ ಕಷ್ಟದ್ದಾಗುವುದು. ಹಲವು ಸಲ ಕಾರಣಾಂತರಗಳಿಂದ ಗುರುತುಗಳು ವ್ಯತ್ಯಾಸವಾಗಿರಲೂ ಸಾಧ್ಯವಿದೆ. ಮುಂದಿನ ಪಂಜಗಳು ಹಿಂದಿನ ಪಂಜಗಳಿಗಿಂತ ದೊಡ್ಡವಿರುತ್ತವೆ; ಸಣ್ಣ ಹುಲಿಗಳ ಗುರುತುಗಳು ಚಿರತೆಗಳ ಹೆಜ್ಜೆಯ ಗುರುತುಗಳಂತೆಯೇ ಇರುತ್ತವೆ.

ಹುಲಿಗಳ ಎಣಿಕೆಯ ಅಂದಾಜು ಲೆಕ್ಕ ಅಂದಾಜೇ. ಹುಲಿಗಳು ದಟ್ಟಕಾಡಿನಲ್ಲಿ ವಾಸವಾಗಿರುತ್ತವೆ ಹಾಗೂ ಅವು ನಿಶಾಚರ. ಪ್ರತ್ಯಕ್ಷವಾಗಿ ಅವುಗಳನ್ನು ಎಣಿಸು

ವುದು, ಯಾವುದೇ ಅಂತರದಿಂದ ವಾಯುಮಂಡಲ ನಿರೀಕ್ಷಣೆ ಹಾಗೂ ಛಾಯಾ ಗ್ರಹಣ ಅಸಾಧ್ಯ. ಆದ್ದರಿಂದ ಕಾಡಿನಲ್ಲಿ ನುಗ್ಗಿ ಹುಲಿಗಳು ನಡೆದಾಗ ಮೂಡಿದ ಹೆಜ್ಜೆಗಳ ಗುರುತುಗಳನ್ನು ಅವಲಂಬಿಸಿ ಅಂದಾಜು ಮಾಡುವುದೊಂದೇ ಮಾರ್ಗ.



ಚಿತ್ರ 2: ಭಾರತದಲ್ಲಿಯ ಹುಲಿಗಣತಿಯ ಸಂಖ್ಯೆಗಳು

ದೇಶದಲ್ಲಿ ಹುಲಿಗಣತಿ ಮಾಡಲು ವಾಷಿಂಗ್‌ಟನ್ನಿನ ಸ್ಮಿಥ್ ಸೋನಿಯನ್ ಸಂಸ್ಥೆಯ ನೆರವನ್ನು ಕೋರಿದಾಗ ಅದರಿಂದ ತೃಪ್ತಿಕರ ಉತ್ತರ ಬಾರದ್ದರಿಂದ, ಭಾರತೀಯ ವನ್ಯಜೀವಿ ಸಮಿತಿಯವರೇ ದೇಶದ ಅರಣ್ಯಾಧಿಕಾರಿಗಳು ಮತ್ತು ಪ್ರಾಣಿ ತಜ್ಞರ ನೆರವಿನಿಂದ 'ಕೋಆಪರೇಷನ್ ಸೆನ್ಸಸ್ ಆ್ಯಂಡ್ ಟೈಗರ್ ಟ್ರೇಸರ್' ಎಂಬ


ವಿಧಾನವನ್ನು ಬಳಸಿ ಕ್ರಿ.ಶ. 1972ರ ಏಪ್ರಿಲ್–ಮೇ ಸಮಯದಲ್ಲಿ ಮೊದಲಿಗಿಂತ ಹೆಚ್ಚು ವೈಜ್ಞಾನಿಕ ರೀತಿಯಲ್ಲಿ ವ್ಯಾಘ್ರಗಣತಿಯನ್ನು ಕೈಗೊಂಡರು.

ಕೋಷ್ಟಕ 1

ಭಾರತ ಸರ್ಕಾರ ನಡೆಸಿದ ಪ್ರಾಂತವಾರು ಹುಲಿಗಣತಿ

ರಾಜ್ಯಗಳ ಹೆಸರು	ಹುಲಿಗಣತಿ ಸಂಖ್ಯೆ			
	1966	1969	1970	1972
1. ಅಸಾಮ್	500	500	380	147
2. ಮೇಘಾಲಯ	—	—	—	32
3. ಅರುಣಾಚಲ ಪ್ರದೇಶ	100	100	60	69
4. ನಾಗಾಲ್ಯಾಂಡ್	—	—	—	80
5. ಮಣಿಪುರ	—	—	—	1
6. ತ್ರಿಪುರ	—	—	—	7
7. ಪಶ್ಚಿಮಬಂಗಾಳ (ಸುಂದರಬನದ $\frac{4}{5}$ ಕ್ಷೇತ್ರ ಬಿಟ್ಟು)	110	110	40	73
8. ಬಿಹಾರ	90	90	70	85
9. ಒಡಿಸಾ	326	326	150	142
10. ಮಧ್ಯಪ್ರದೇಶ	600–1400	600	480	457
11. ಉತ್ತರಪ್ರದೇಶ	400–500	500	350	262
12. ರಾಜಸ್ಥಾನ್	90	90	30	74
13. ಮಹಾರಾಷ್ಟ್ರ	329	329	180	160
14. ಆಂಧ್ರಪ್ರದೇಶ	40	40	30	35
15. ಕರ್ನಾಟಕ	114	100	70	102
16. ತಮಿಳುನಾಡು	81	15	15	33
17. ಕೇರಳ	20	20	15	60
18. ಗುಜರಾತ್	—	—	—	8
ಒಟ್ಟು ಹುಲಿ ಸಂಖ್ಯೆ	2,825	2,805	1,872	1,827

ಮಳೆಗಾಲದ ಆಗಮನವನ್ನು ಅನುಲಕ್ಷಿಸಿ ಭಾರತವನ್ನು ಮೂರು ಪ್ರದೇಶಗಳನ್ನಾಗಿ ವಿಭಾಗಿಸಲಾಯಿತು. ಎಣಿಕೆ ಒಂದೊಂದು ಪ್ರದೇಶದಲ್ಲಿ ಒಂದೇ ವಾರದಲ್ಲಿ ಮಾಡಲ್ಪಟ್ಟಿತು. ಏಪ್ರಿಲ್ 22 ರಿಂದ 28ರವರೆಗೆ ಪೂರ್ವಭಾಗದಲ್ಲಿ ಹಾಗೂ ಮೇ 15 ರಿಂದ 21ರವರೆಗೆ ಇನ್ನುಳಿದ ಎರಡು ಭಾಗಗಳಲ್ಲಿ. ಆ ಸಮಯದಲ್ಲಿ ಹುಲಿಗಣತಿ



ಚಿತ್ರ 3 : ವಿಶೇಷಹುಲಿ ಸಂರಕ್ಷಣಾ ಧಾಮಗಳು ಹಾಗೂ ಹುಲಿಗಳ ಸಂಖ್ಯಾನಕ್ಷೆ

ಯನ್ನು ಮಾಡಲಾಗದ ಪಶ್ಚಿಮ ಬಂಗಾಲದ ಸುಂದರಬನದಲ್ಲಿ ಹುಲಿಗಳ ಸಂಖ್ಯೆ ಗಣನೀಯವಾಗಿದೆ ಎಂದು ಹೇಳಲಾಗಿದೆ. ಮೀರ್ಶೋರಾಮದಲ್ಲಿಯೂ ಹುಲಿಗಳಿರುವ ಸಾಧ್ಯತೆ ಇದೆ. ಕಾರಣ 1972ರಲ್ಲಿ ಭಾರತದಲ್ಲಿದ್ದ ಹುಲಿಗಳ ಒಟ್ಟು ಸಂಖ್ಯೆ ಸುಮಾರು 2,000 ಎಂದು ಹೇಳಬಹುದು.

ಹುಲಿಗಣತಿಯಲ್ಲಿ ತರಬೇತಿ ಹೊಂದಿದ ಸಿಬ್ಬಂದಿ ಪ್ರತಿಯೊಂದು ಅರಣ್ಯ ಭಾಗದಲ್ಲಿ ಹುಲಿಯ ಹಿಂದಿನ ಎಡಗಾಲಿನ ಹೆಜ್ಜೆಗಳ ಗುರುತುಗಳನ್ನು 8″ × 6″ ಅಳತೆಯುಳ್ಳ ಗಾಜಿನ ಮೇಲೆ ತೀಡಿಕೊಂಡು ಅಳತೆಮಾಡಿದ ನಂತರ ಎಣಿಕೆ ಮಾಡಿದರು. ಹುಲಿಗಳ ಹೆಜ್ಜೆಯ ಗುರುತುಗಳಿಂದ ಹಾಗೂ ಅವುಗಳ ಮಾರುಗಾಲಿನ ಅಂತರದಿಂದ ಹುಲಿಗಳನ್ನು ಒಂದರಿಂದ ಮತ್ತೊಂದು ಬೇರ್ಪಡಿಸಲು ಸಾಧ್ಯವಾಯಿತು. ಹೆಣ್ಣು ಹುಲಿಗಳನ್ನು ಅವುಗಳ ಉದ್ದವಾದ ಪಾದ ಹಾಗೂ ಬಾದಾಮಿ ಆಕಾರದ ಕಾಲ್ಬೆರಳು ಗಳ ಗುರುತುಗಳಿಂದ ಕಂಡುಹಿಡಿಯಬಹುದು. ಅನೇಕ ಸಾರಿ ಹೆಣ್ಣುಹುಲಿಗಳ ಹೆಜ್ಜೆ ಗಳ ಗುರುತುಗಳೊಂದಿಗೆ ಮರಿಗಳ ಹೆಜ್ಜೆಗಳ ಗುರುತುಗಳು ಮೂಡಿದ್ದುದು ಕಂಡು ಬಂತು. ಇದರೊಂದಿಗೆ ಸ್ಥಳೀಯ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷವಾಗಿ ಕೂಡಿಹಾಕಿದ ಮಾಹಿತಿಗಳಿಂದ ದೊರೆತ ಸಂಖ್ಯೆಗಳ ಪರಿಶೀಲನೆಯೂ ನಡೆಯಿತು.

ಇದು ಭಾರತದಲ್ಲಿ ಮೊದಲಬಾರಿಗೆ ವ್ಯವಸ್ಥಾನುಸಾರವಾಗಿ ಮಾಡಿದ ಹುಲಿ ಗಣತಿ. ಇದು ಮೊದಲಸಲವಾದ್ದರಿಂದ ಅದರಲ್ಲಿ ಕೆಲವು ಕುಂದುಕೊರತೆಗಳು ಕಂಡು ಬಂದರೂ ಅತಿ ಉಪಯುಕ್ತ ಹಾಗೂ ನಂಬಲರ್ಹವಾದ ಮಾಹಿತಿ ದೊರೆತಿದೆ. ಈ ಎಣಿಕೆಯ ಪ್ರಕಾರ ಇಡೀ ಭಾರತದಲ್ಲಿಯ 1827 ಹುಲಿಗಳಲ್ಲಿ, ಹೆಚ್ಚೆಂದರೆ 457 ಮಧ್ಯ ಪ್ರದೇಶದಲ್ಲಿದ್ದು 102 ಮಾತ್ರ ಕರ್ನಾಟಕದಲ್ಲಿವೆ ಎಂಬುದು ತಿಳಿದುಬಂದಿದೆ. ಇದು ಬಹಳ ಕಳವಳಕಾರಕ ಅಂಶ.

ಈ ಹುಲಿಗಣತಿ ಆದ ಎರಡು ವರ್ಷಗಳ ನಂತರ ಕೇರಳ ರಾಜ್ಯದ ತೆಕ್ಕಡಿ ವನ್ಯಮೃಗಧಾಮದಲ್ಲಿ ಎಣಿಕೆ ಮಾಡಿದಾಗ ಶೇಕಡಾ 250ರಷ್ಟು ಹುಲಿಗಳ ಸಂಖ್ಯೆ ಅಭಿವೃದ್ಧಿಯಾದದ್ದು ಅತಿ ಸಂತೋಷದ ಸಂಗತಿ. ಈ ಎಣಿಕೆಯನ್ನು ವ್ಯಾಘ್ರ ಪ್ರಯೋಜನೆ(ಪ್ರಾಜೆಕ್ಟ್ ಟೈಗರ್) ಸಿಬ್ಬಂದಿ ಮಾಡಿದೆ.

ತೆಕ್ಕಡಿ ಸರೋವರದಿಂದ ಸುತ್ತುವರಿಯಲ್ಪಟ್ಟ 150 ಚದರ ಮೈಲಿಗಳಷ್ಟು ಅರಣ್ಯ ಪ್ರದೇಶವನ್ನು ಹೊಂದಿ ಈ ವನ್ಯಮೃಗಧಾಮದಲ್ಲಿ ಕನಿಷ್ಠ 35 ಹುಲಿಗಳು (ಮರಿಗಳನ್ನೂ ಸೇರಿದಂತೆ) ಇದ್ದಬಗ್ಗೆ ಅವುಗಳ ಹೆಜ್ಜೆಗಳ ಗುರುತುಗಳ ಮೇಲಿಂದ ಮಾಹಿತಿ ದೊರೆತಿದೆ. ಕ್ರಿ.ಶ. 1972ರ ಮೇ ತಿಂಗಳಲ್ಲಿ ಎಣಿಕೆ ಮಾಡಿದಾಗ ಕೇರಳ ರಾಜ್ಯದ 60 ಹುಲಿಗಳ ಸಂಖ್ಯೆಗಳ ಪೈಕಿ 14 ಹುಲಿಗಳು ತೆಕ್ಕಡಿ ವನ್ಯಮೃಗಧಾಮ ದಲ್ಲಿಯೇ ಇದ್ದ ಬಗ್ಗೆ ವರದಿಯಾಗಿತ್ತು. ಮೇಲಿನ ಹುಲಿಗಳ ಸಂಖ್ಯೆಯ ಪೈಕಿ 10 ಹೆಣ್ಣುಹುಲಿಗಳ ಹೆಜ್ಜೆಗಳೊಂದಿಗೆ ಮರಿಗಳ ಹೆಜ್ಜೆಗಳ ಗುರುತುಗಳು ಇದ್ದದ್ದು ಕಂಡುಬಂದಿದೆ.

ಇತ್ತೀಚೆಗೆ 'ಪ್ರೊಜೆಕ್ಟ್ ಟೈಗರ್'ದ ಅನೇಕ ಹುಲಿಗಳ ಮೀಸಲು ಕಾಡುಗಳಲ್ಲಿ ಹುಲಿಗಳ ಸಂಖ್ಯೆ ಹೆಚ್ಚುತ್ತಿರುವ ಬಗ್ಗೆ ವರದಿ ಬಂದಿದೆ. ಇದು ಅತಿ ಸಂತಸದ ಸುದ್ದಿ. ಕರ್ನಾಟಕದ ಬಂಡೀಪುರದಲ್ಲಿ 1972ರಲ್ಲಿ 17 ಹುಲಿಗಳಿದ್ದು ಅವು ಈಗ

24ಕ್ಕೆ ಅಂದರೆ ಈ ಸಂಖ್ಯೆ ಶೇಕಡಾ 70ರಷ್ಟು ಏರಿದೆ. ಇದರಂತೆ ಮಹಾರಾಷ್ಟ್ರದ ಮೇಲ್ಘಾಟದಲ್ಲಿ 27ರಿಂದ 32ಕ್ಕೆ (ಶೇಕಡಾ 84ರಷ್ಟು) ಆಸ್ಸಾಮದ ಮನಾಸ್ ಎಂಬ ಮೀಸಲು ಕಾಡಿನಲ್ಲಿ 31ರಿಂದ 41ಕ್ಕೆ (ಶೇಕಡಾ 73ರಷ್ಟು) ಏರಿವೆ. ಉತ್ತರ ಪ್ರದೇಶದ ಕೊರ್ಬೆಟ್ ನ್ಯಾಶನಲ್ ಪಾರ್ಕ್‌ದಲ್ಲೂ ಹಾಗೂ ರಾಜಸ್ಥಾನದ ರಣ್‌ಥಂ ಬೋರ್ ಎಂಬಲ್ಲಿಯೂ ಹುಲಿಗಳ ಸಂಖ್ಯೆ ಏರುತ್ತಿದೆ ಎಂದು ಗೊತ್ತಾಗಿದೆ. ಅಂದರೆ ಇಡೀ ಭಾರತದಲ್ಲಿ ಹೆಚ್ಚು ಕಡಮೆ ಸರಾಸರಿ ಶೇಕಡಾ 75ರಷ್ಟು ಹುಲಿಗಳ ಸಂಖ್ಯೆ ಹೆಚ್ಚಿದೆ ಎಂದು ತಿಳಿಯಬಹುದು. ಇದು ಸ್ವಲ್ಪ ಆಶಾದಾಯಕವೇ ಸರಿ. ಈ ಆಶಾದಾಯಕ ಬೆಳವಣಿಗೆಗೆ ಹೆಚ್ಚು ವ್ಯವಸ್ಥಿತವಾಗಿ ಕೈಗೊಂಡಿರುವ ವನ್ಯಜೀವಿಗಳ ಸಂರಕ್ಷಣೆಯೇ ಕಾರಣ.

ಕೊರ್ಬೆಟ್ ಪಾರ್ಕ್‌ದಲ್ಲಿ ಹುಲಿಗಳ ಸಂಖ್ಯೆ ಪರಮಾವಧಿ ಪ್ರಮಾಣವನ್ನು ತಲುಪಿದೆ ಎಂದು ಗೊತ್ತಾಗಿದೆ. ಈ ಏರಿಕೆಗೆ ಪರಿಣಾಮಕಾರಿಯಾದ ಹುಲಿಯ ತಳಿ ಅಭಿವೃದ್ಧಿಯೇ ಕಾರಣ ಎಂದು ಹೇಳಬಹುದು. ಇದೂ ಅಲ್ಲದೆ ಪಕ್ಕದ ಪ್ರದೇಶ ಗಳಿಂದ ಅಲೆಯುವ ಹುಲಿಗಳು ವಲಸೆ ಬಂದು ಸುರಕ್ಷಿತವಾದ ಈ ಪಾರ್ಕ್‌ದಲ್ಲಿ ನೆಲೆ ಸಿರುವುದು ಇನ್ನೊಂದು ಕಾರಣ. ಭಾರತದ ಇತರ ಹುಲಿಗಳ ಮೀಸಲು ಪ್ರದೇಶ ಗಳಲ್ಲಿಯೂ ಈ ಕಾರ್ಯಕ್ರಮ ಪರಿಣಾಮಕಾರಿಯಾಗಿ ನಿರ್ವಹಣೆಗೊಂಡಿದೆ.


ಅಧ್ಯಾಯ 2

ಅಂಗರಚನೆ ಹಾಗೂ ಶರೀರಕ್ರಿಯಾಶಾಸ್ತ್ರ


ಹುಲಿ ಮಾಂಸಾಹಾರಿ ವರ್ಗಕ್ಕೆ ಸೇರಿದ ಪ್ರಾಣಿ. ಹುಲಿಯ ಕಣ್ಣುಗಳು ಮುಂದಕ್ಕೆ ಚಾಚಿರುತ್ತವೆ. ಪಾದಗಳು ಸಿಂಬೆಗಳನ್ನು ಹೊಂದಿರುತ್ತವೆ. ನಡಿಗೆ ನಿಶ್ಶಬ್ದ. ಮಿಕ್ಕ ಇಂದ್ರಿಯಗಳು ಬಲಿಷ್ಠವಾಗಿರುತ್ತವೆ. ಹುಲಿ ಉತ್ತಮ ಬೇಟೆಗಾರ ಪ್ರಾಣಿ. ಬಲಿಷ್ಠವಾದ ಶರೀರವನ್ನೂ ಮತ್ತು ಹರಿತವಾದ ಪಂಜಗಳನ್ನೂ ಹೊಂದಿರುವುದರಿಂದ ಬಲಿಪ್ರಾಣಿಗಳ ಮೇಲೆ ಒಮ್ಮಿಂದೊಮ್ಮೆ ಎರಗಿ ಮಾಂಸವನ್ನು ಹರಿದು ತಿನ್ನುವುದು ಅದಕ್ಕೆ ಬಲು ಸುಲಭ.

ಬಾಹ್ಯಲಕ್ಷಣಗಳು: ಇಡೀ ಶರೀರವು ಕೂದಲಿನಿಂದ ಅಂದರೆ ತುಪ್ಪಳದಿಂದ ಆವರಿಸಲ್ಪಟ್ಟಿದೆ. ತಲೆಯ ಆಕಾರ ದುಂಡಗೆ, ಗಿಡ್ಡ ಹಾಗೂ ದಪ್ಪಕೊರಳು. ಕಿರಿಯಗಲವಾದ ಕಬಂಧ. ಉದ್ದನೆಯ ಮತ್ತು ಬೇಕಾದಂತೆ ಹಿಗ್ಗಿಸಲು ಇಲ್ಲವೆ ಕುಗ್ಗಿಸಲು ಅನುಕೂಲವಾದ ಬಾಲ. ಪ್ರತಿಯೊಂದು ಮುಂಗಾಲಿಗೆ ನಾಲ್ಕುನಾಲ್ಕು ಬೆರಳುಗಳು ಹಾಗೂ ಒಂದೊಂದು ಹೆಬ್ಬೆರಳು. ಪ್ರತಿಯೊಂದಕ್ಕೂ ಮಾಂಸದ ಸಿಂಬೆಗಳು ಮತ್ತು ಬಾಗಿದ ಹರಿತ ಹಾಗೂ ಹಿಂದಕ್ಕೆಳೆದುಕೊಳ್ಳಲು ಅನುಕೂಲವಾದ ಉಗುರುಗಳು. ಮುಂಗಾಲು ಹಾಗೂ ಹಿಂಗಾಲುಗಳು ಹೆಚ್ಚು ಸುದೃಢವಾಗಿರುತ್ತವೆ. ಕಾಲುಗಳು ಸಂಚಾಲನದ ಪ್ರಮುಖ ಶಕ್ತಿಕೇಂದ್ರವಾಗಿವೆ. ಪ್ರತಿ ಹಿಂಗಾಲಿನಲ್ಲಿ ನಾಲ್ಕು ಬೆರಳುಗಳೂ ಅವುಗಳಿಗೆ ಹರಿತ ಉಗುರುಗಳೂ ಇರುತ್ತವೆ. ಹುಲಿ ನಡೆದಾಡುವುದು ಕಾಲ್ಬೆರಳುಗಳ ಮೇಲೆ. ಅಂತೆಯೇ ಅದಕ್ಕೆ 'ಅಂಗುಲಿಗಾಮಿ' ಎಂದು ಹೆಸರು.

ಮೂಗಿನ ತುದಿಯಲ್ಲಿ ಎರಡು ಅಗಲವಾದ ಹೊಳ್ಳೆಗಳು. ಬಾಯಿಯ ಅಂಚಿಗೆ ತೆಳುವಾದ ಕಪ್ಪು ತುಟಿಗಳಿರುತ್ತವೆ. ಪ್ರತಿಯೊಂದು ಕಣ್ಣಿಗೆ ಮಾಂಸದ ಎವೆಗಳಿರುತ್ತವೆ; ಅದಕ್ಕೆ ಸುಣುಪು ಕೂದಲುಗಳ ರೆಪ್ಪೆಗಳು. ಕಣ್ಣೆವೆಗಳ ಕೆಳಗೆ ಪಾರದರ್ಶಕದಂತೆ ಮಿಟುಕುವ ತೆಳುಪೊರೆಯಿರುತ್ತದೆ. ಈ ತೆಳುಪೊರೆಯು ಕಣ್ಣುಗುಡ್ಡೆಗಳಿಗೆ ಅಡ್ಡವಾಗಿ ಹೊರಕೋನದಿಂದ ಚಲಿಸುತ್ತದೆ. ಕಣ್ಣುಗಳ ಮೇಲೆ ಮತ್ತು ಮೂಗಿನ ಎರಡೂ ಬದಿಗೆ ಉದ್ದನೆಯ ಜ್ಞಾನಗ್ರಾಹಿ ಕೂದಲುಗಳು ಇರುತ್ತವೆ. ಅವುಗಳಿಗೆ 'ಹುಲಿಯ ಮೀಸೆಗಳು' ಎಂದು ಕರೆಯುತ್ತಾರೆ. ಕಣ್ಣುಗಳ ಹಿಂದೆ ಎರಡು ಮಾಂಸದ ಹೊರಗಿವಿಗಳು; ಪ್ರತಿಯೊಂದಕ್ಕೂ ಬಾಹ್ಯಶ್ರವಣ ನಾಳವಿರುವುದು; ಅಲ್ಲಿಂದ ಆ ನಾಳ ತಲೆಯವರೆಗೂ ಹೋಗಿರುತ್ತದೆ. ಕಬಂಧದಲ್ಲಿ ಕಿರಿಯಗಲದ ಎದೆ ಅಥವಾ ಎದೆಗೂಡು, ಮುಂಭಾಗದಲ್ಲಿ ಪಕ್ಕೆಲುಬುಗಳಿಂದಲೂ ಹಾಗೂ ಹಿಂಭಾಗದಿಂದ ಅಗಲವಾದ ಹೊಟ್ಟೆಯಿಂದಲೂ ಆವೃತವಾಗಿರುತ್ತದೆ. ಹೆಣ್ಣುಹುಲಿಯ ಹೊಟ್ಟೆಯ ಮೇಲ್ಬದಿಯಲ್ಲಿ




ಚಿತ್ರ 4 : ಸಾಮಾನ್ಯ ಹುಲಿಯ ಹೊರನೋಟ




ಚಿತ್ರ 5 : ಹುಲಿಯ ಅಸ್ಥಿಪಂಜರ

1. ಕಪಾಲ 2. ಕೆಳದವಡೆ 3. ನಾಲಿಗಲ 4. ಶಿರಾಧಾರ 5. ಅಚ್ಚು 6. ಹೆಗಲೆಲುಬು
7. ಮೊಟ್ರೆಲುಬು ಕೀಲಕ 8. ತೋಳೆಲುಬು 9. ಅರೆಲುಬು 10. ಮೊಣಮೂಳೆ 11. ಮಣಿ
ಕಟ್ಟಿನ ಎಲುಬುಗಳು 12. ಮೊಣಕಾಲ್ಮೂಳೆ 13. ಮುಂಗಾಲ ಬೆರಳೆಲುಬು 14. ಹಿಮ್ಮೊಣಕಾ
ಲ್ಮೂಳೆ 15. ಹಿಮ್ಮಣಿಕಟ್ಟು 16. ಹಿಂಗಾಲ ಬೆರಳೆಲುಬು 17. ಎದೆ ಎಲುಬುಗಳು 18. ಪಕ್ಕೆ
ಎಲುಬುಗಳು 19. ಮೃದು ಪಕ್ಕೆ ಎಲುಬುಗಳು 20. ಟೊಂಕೆಲುಬು 21. ಹಿಂಗಾಲು ತೊಡೆ
ಎಲುಬು 22. ಮಂಡಿಚಿಪ್ಪು 23. ಕಣಕಾಲೆಲುಬು 24. ಕೊಳಕ ಮೂಳೆ 25. ಗುಂಜೆಲುಬು
26. ಕುಂಡೆಲುಬು.



ಚಿತ್ರ 6 : ಹುಲಿಯ ಸ್ನಾಯು ಸಂಯೋಜನೆ

1. ಮೆಲ್ಲುಗ ಸ್ನಾಯು 2, 3. 4. ಕಿವಿ ಬದಿಯ, ಕೆಳದವಡೆಯ, ನಾಲಗೆ ಕೆಳಗಿನ – ಲಾಲಾರಸ ಗ್ರಂಥಿ ಸ್ನಾಯುಗಳು 5. ಎದೆಪಕ್ಕ ಚೂಚುಕಂದ ಸ್ನಾಯು 6. ಕೀಲಕ ಒರೆಮಣಿಕ ತೋಳ ಸ್ನಾಯು 7. ಮುಮ್ಮೂಲೆ ತೆರೆದ ಸ್ನಾಯು 8. ಒರೆ ಮಣಿಕ ಸ್ನಾಯು 9. ಬೆನ್ನಿನ ಅಗಲತಮ ಸ್ನಾಯು 10. ದೊಡ್ಡ ಗರಗಸಕ ಸ್ನಾಯು 11. ಹೊರ ಬಾಗಿದ ಸ್ನಾಯು 12. ಮುಮ್ಮೂಲೆ ತೋಳಿನ ಸ್ನಾಯು 13. ಬಿಗುಸ್ನಾಯು 14. ತೊಡೆಯ ಇತ್ತಲೆಗ ಸ್ನಾಯು 15. ಕೋಮಲಿ ಸ್ನಾಯು 16. ಮೊಣಕಾಲಿನ ಸ್ನಾಯು 17. ಸೀದನಿ ಸ್ನಾಯು 18. ಪೃಷ್ಠ ನಡುವಿನ ಸ್ನಾಯು 19. ಪೃಷ್ಠದ ಮಹತ್ತಮ ಸ್ನಾಯು 20. ಬಾಲಬದಿಯ ತೊಡೆ ಸ್ನಾಯು 21. ಅರೆಕಂಡರವಾದ ಸ್ನಾಯು 22. ಬಾಲಬಳಿಯ ಸ್ನಾಯು 23. ಒಳಬಾಗಿದ ಸ್ನಾಯು 24. ಅಡ್ಡಾದ ಸ್ನಾಯು 25. ಕಾಲ್ಬಂಡ ಸ್ನಾಯು 26. ಬೆರಳಿನ ಉದ್ದ ಹೊರಸ್ನಾಯು 27. ಮೊಣಕಾಲು ಮುಂದಿನ ಸ್ನಾಯು 28. ನೀಡಿಹರಡಿದ ಮುಂಗೈ ಸ್ನಾಯು 29. ಬೋರಲಾದ ದುಂಡು ಸ್ನಾಯು 30. ಬಾಗಿದ ಹರಡಿದ ಮುಂಗೈಸ್ನಾಯು 31. ಅಂಗೈಯ ನೀಳ ಸ್ನಾಯು 32. ಬೆರಳಿನ ನೀಡಿದ ಸಾಮಾನ್ಯ ಸ್ನಾಯು 33. ಮಗ್ಗುಲ ಬದಿಯ ಬೆರಳಿನ ಸ್ನಾಯು 34. ಮುಂಗೈ ಮೊಣಕೆ ಉಬಿನ ಸ್ನಾಯು 35. ಬಾಗಿದ ಆಳವಾಗಿ ಬೇರೂರಿದ ಬೆರಳಿನ ಸ್ನಾಯು 36. ಮುಂಗೈ ಮೊಣಕೆಉಬಿನ ಸ್ನಾಯು.



ಚಿತ್ರ 7: ಹುಲಿಯ ಮಿದುಳು, ರಕ್ತಾಭಿಸರಣ, ಶ್ವಾಸೋಚ್ಛ್ವಾಸ, ನಿರ್ನಾಳಗ್ರಂಥಿ, ಪಚನೇಂದ್ರಿಯಗಳು

1. ನಿಡುಮಿದುಳು 2. ಕಿರುಮಿದುಳು 3. ಮಿದುಳ್ತಳಕಾಂಡ ಮಜ್ಜೆ 4. ಉಸಿರಾಟದ ಒಳಾವರಣ 5. ಅಂಗಳ 6. ಬಾಯಿಯ ಒಳಾವರಣ 7. ದನಿನಾಳ 8. ಕ್ಯಾರೊಟಿಡ್ ಅಪಧಮನಿ 9. ಉಸಿರ್ನಾಳ 10. ಅನ್ನನಾಳ 11. ಬೆನ್ನೆಲುಬಿನ ಚೂಪುಭಾಗಗಳು 12. ಹೃದಯ 13. ಶ್ವಾಸಕೋಶ 14. ಪಿತ್ತಕೋಶ 15. ಯಕೃತ್ತು 16. ಜಠರ 17. ನರತಂತು 18. ಒಡಲ ಅಪಧಮನಿ 19. ಅಡ್ರಿನಲ್ ಗ್ರಂಥಿ 20. ಪ್ಲೀಹ 21. ಮೂತ್ರಪಿಂಡ 22. ಸಣ್ಣಕರುಳು 23. ಮೂತ್ರಕೋಶ 24. ದೊಡ್ಡಕರುಳು 25. ಹಿಂಬದಿಯ ಮಹಾಧಮನಿ 26. ಕೆಳಸಿರಕೊಳ್ಳ 27. ಮೂತ್ರಕನಾಳ 28. ಪ್ರಾಸ್ಟೇಟ್ ಗ್ರಂಥಿ 29. ಸೊಂಟದ ಅಪಧಮನಿ ಮತ್ತು ಅಭಿಧಮನಿ 30. ಬಾಲದ ಮಹಾಧಮನಿ ಮತ್ತು ಅಭಿಧಮನಿ 31. ಗುದದ್ವಾರ 32. ಶಿಶ್ನ 33. ವೃಷಣ 34. ರೇತುಸಾಗು ನಾಳ 35. ಕೌಪರನ ಗ್ರಂಥಿ 36. ಹೊಟ್ಟೆಯ ಗುಳಿ 37. ವಪೆ 38. ಎದೆಗೂಡ ಒಳಾವರಣ 39. ಯಕೃತ್ತಿನ ಅಭಿಧಮನಿ 40. ಯಕೃತ್ತಿನಲ್ಲಿ ಸಾಗುವ ಅಭಿಧಮನಿ 41. ಮೇಲಿನ ಸಿರಕೊಳ್ಳ 42. ಪುಪ್ಪುಸದ ಅಪಧಮನಿ ಮತ್ತು ಅಭಿಧಮನಿಗಳು 43. ಎದೆಯೆಲುಬು.

ಐದು ಸ್ತನ ಅಥವಾ ಮೊಲೆಗಳು ಇರುತ್ತವೆ; ನಾಲ್ಕು ಮಾತ್ರ ಹಾಲಿನಿಂದ ತುಂಬಿರುತ್ತವೆ. ಐದನೆಯದು ಅಪೂರ್ಣಾವಸ್ಥೆಯಲ್ಲಿರುತ್ತದೆ. ಹುಲಿ ಒಂದು ಸೂಲಿಗೆ ನಾಲ್ಕಕ್ಕಿಂತ ಹೆಚ್ಚು ಮರಿಗಳನ್ನು ಪೋಷಣೆ ಮಾಡಲಾರದು. ಗುದದ್ವಾರವು ಬಾಲದ ಹಿಂಭಾಗದಲ್ಲಿರುವುದು. ಅದರ ಸಮೀಪದಲ್ಲಿ ಮೂತ್ರಜನಕಾಂಗದ ಬಾಯಿಯು ಇರುತ್ತದೆ. ಗಂಡು ಹುಲಿಗಳಿಗೆ ವೃಷಣಗಳುಳ್ಳ ವೃಷಣಕೋಶವು ಗುದದ್ವಾರದ ಕೆಳಗೆ ಜೋತಾಡುತ್ತಿರುತ್ತದೆ. ಅದರ ಕೆಳಗೆ ಮೂತ್ರಜನಕಾಂಗ ಜೋತಾಡುತ್ತಿರುತ್ತದೆ.

ಮೈಹೊದಿಕೆ: ಚರ್ಮವು ಮಿದುವಾದುದು ಮತ್ತು ತೆಳುವಾದುದು; ಪಾದಗಳ ಸಿಂಬೆಗಳ ಎಡೆಯಲ್ಲಿ ಮಾತ್ರ ಬಿರುಸಾಗಿರುವುದು. ಒಂದಕ್ಕೊಂದು ದಟ್ಟವಾಗಿ ಬೆಳೆದ ಕೂದಲುಗಳಿಂದ ಮೈಯೆಲ್ಲ ಆವರಿಸಲ್ಪಟ್ಟಿರುತ್ತದೆ. ಈ ಹೊದಿಕೆಗೆ ತುಪ್ಪಳವೆಂತಲೂ ಕರೆಯುತ್ತಾರೆ.

ಪ್ರತಿಯೊಂದು ಕೂದಲೂ ಚರ್ಮದಲ್ಲಿ ಸೇರಿರುವ ಮತ್ತು ತೆಳುಚರ್ಮದಿಂದ ಸುತ್ತುವರಿದ ಆಳವಾದ ರೋಮಕುಹರದ ಬುಡದಲ್ಲಿ ಬೆಳೆಯುತ್ತದೆ. ಪ್ರತಿಯೊಂದು ರೋಮಕುಹರವೂ ಚಿಕ್ಕ ಗ್ರಂಥಿಗೆ ಜೋಡಿಸಲ್ಪಟ್ಟಿದ್ದು ಆ ಗ್ರಂಥಿಯಿಂದ ಕೂದಲನ್ನು ನಯಗೊಳಿಸಲು ಒಂದು ಎಣ್ಣೆಯಂಥ ಸ್ರಾವವನ್ನು ಹೊಮ್ಮುತ್ತದೆ. ಈ ರೋಮಕುಹರಗಳು ಚರ್ಮದಲ್ಲಿ ಓರೆಯಾಗಿ ಬೆಳೆಯುತ್ತವೆ. ಪ್ರತಿಯೊಂದಕ್ಕೆ ಒಂದು ನಿಗುರು ಸ್ನಾಯುವನ್ನು ಜೋಡಿಸಲಾಗಿರುತ್ತದೆ. ಆದರಿಂದಾಗಿ ಹುಲಿಗೆ ಕೋಪ ಬಂದಾಗ ಅಥವಾ ಇತರ ಸಮಯಗಳಲ್ಲಿ ಕೂದಲುಗಳು ಸೆಟೆದು ನಿಂತು ನಿಮಿರುತ್ತವೆ. ಕೂದಲುಗಳ ಬೆಳವಣಿಗೆಯಾದ ಮೇಲೆ ಚರ್ಮದ ಮೇಲಿನ ನಿರ್ಜೀವವಾದ ಪರೆ ಒಣಗಿ ಹೋಗಬಹುದು. ಪುನಃ ಸಾಮಾನ್ಯವಾಗಿ ಚಳಿಗಾಲದಲ್ಲಿ ಹುಟ್ಟಿಕೊಳ್ಳುತ್ತದೆ. ರೋಮಗಳು ಕೂಡ ನಿರ್ದಿಷ್ಟಕಾಲದ ಅಂತರದಲ್ಲಿ ಒಂದೊಂದಾಗಿ ಉದುರಿಬೀಳುತ್ತವೆ ಹಾಗೂ ರೋಮಕುಹರಗಳಿಂದ ಹೊಸ ರೋಮಗಳು ಮೂಡುತ್ತವೆ. ಕೂದಲುಗಳ ಅಂದರೆ ತುಪ್ಪಳದ ಬಣ್ಣ ರಗಟೆಯಲ್ಲಿರುವ ರಂಜಕವನ್ನು ಅವಲಂಬಿಸಿರುತ್ತದೆ. ಈ ಬಣ್ಣ ಕಪ್ಪು, ಕಂದು, ಕೆಂಪು ಅಥವಾ ಹಳದಿ ಆಗಿರುತ್ತದೆ. ಕಪ್ಪು ಹುಲಿಗಳ ಬಣ್ಣ ರಗಟೆಯಲ್ಲೂ ಹಾಗೂ ಹೊರಪೊರೆಯಲ್ಲೂ ಇರುವ ರಂಜಕ ಹಾಗೂ ಪ್ರಕಾಶ ಅಂತರಣ ಕ್ರಿಯೆಯ ಒಟ್ಟು ಪರಿಣಾಮದಿಂದ ಉಂಟಾಗುತ್ತದೆ.

ಅಸ್ಥಿಪಂಜರ: ಅಸ್ಥಿಪಂಜರವು ಮೂಳೆಗಳಿಂದ ಕೂಡಿರುತ್ತದೆ. ಸಂಧಿಗಳ ಮೇಲ್ಭಾಗದಲ್ಲಿ ಪಕ್ಕೆಲುಬುಗಳ ಭಾಗದಲ್ಲಿ ಮತ್ತು ಇನ್ನು ಕೆಲವೆಡೆಗಳಲ್ಲಿ ಉಪಾಸ್ಥಿಗಳಿರುತ್ತವೆ. ಉಪಾಸ್ಥಿ ಮತ್ತು ಸೂಕ್ಷ್ಮಚರ್ಮದ ಮೂಳೆಗಳ ಹೊರತಾಗಿ, ಕೆಲವು ಬಿಗುಪಟ್ಟಿಗಳು 'ತಿಲಕಲ್ಪಅಸ್ಥಿ'(ಎಳ್ಳುಬೀಜದಾಕಾರದ ಎಲಬು)ಗಳೆಂದು ಕರೆಯಬಹುದಾದ ಎಲುಬೀಕರಣಗಳನ್ನು ಒಳಗೊಂಡಿರುತ್ತವೆ. ಅವುಗಳಲ್ಲಿ ಎದ್ದುಕಾಣುವುದೆಂದರೆ ಮಂಡಿಚಿಪ್ಪು; ಉಳಿದವುಗಳು ಪಾದಗಳ ಮೇಲೆ ಕಂಡುಬರುತ್ತವೆ. ಮುಂಡಗಿನ ತಲೆಬುರುಡೆಯು

ಒಂದು ಗಟ್ಟಿ ವಸ್ತು. ಅದರಲ್ಲಿರುವ ಎಲ್ಲ ಮೂಳೆಗಳೂ ಹಲವಾರು ಸಂದುಗಳಿಂದ ಜೋಡಿಸಲ್ಪಟ್ಟಿವೆ. ಈ ಸಂದುಗಳು ಕಾಲಾಂತರದಲ್ಲಿ ಕಾಣದಾಗುತ್ತವೆ. ಮುಖಭಾಗ ದಲ್ಲಿ, ಮುಂದೆ ಮೂಗಿನ ಹೊರಳೆಗಳು. ಕಣ್ಣುಗೋಲಗಳು ಹಾಗೂ ಎದ್ದುಕಾಣುವ ಒಂದು ಅಡ್ಡಪಟ್ಟಿಯೂ ಇರುತ್ತವೆ. ಈ ಅಡ್ಡಪಟ್ಟಿಗೆ 'ಸಂಧಿವೃತ್ತಖಂಡ' ಎಂದು ಕರೆಯುತ್ತಾರೆ. ಮುಂಭಾಗದಲ್ಲಿ, ದೊಡ್ಡದಾದ ಫೊರಾಮೆನ್ ಮ್ಯಾಗ್ನಮ್ ಇರುತ್ತದೆ. ಆ ಮೂಲಕ ನರತಂತುವು ಮಿದುಳನ್ನು ಸೇರುತ್ತದೆ. ಇದರ ಎರಡೂ ಕಡೆಗಳಲ್ಲಿ ಒಂದೊಂದು ಮೂಳೆಯ ತಲೆ ಭಾಗವಿರುತ್ತದೆ. ತಲೆಬುರುಡೆಯು ಕಶೇರುವಿನ ಅಗ್ರಾಸ್ಥಿಗೆ ಕೀಲಿನಿಂದ ಜೋಡಿಸಲ್ಪಟ್ಟಿರುತ್ತದೆ. ಕೆಳಗಿನ ದವಡೆಯು (ಅದೂ ಹಲ್ಲುಗಳನ್ನು ಹೊಂದಿರುತ್ತದೆ) ಎರಡೂ ಕಡೆಗಳಲ್ಲಿ ಒಂದೊಂದೇ ಮೂಳೆಯನ್ನು ಹೊಂದಿರುವುದು; ಅಲ್ಲದೆ, ಅದು ಕಪಾಲಕ್ಕೆ ಕೀಲಿನಿಂದ ಜೋಡಿಸಲ್ಪಟ್ಟಿರುತ್ತದೆ.

ಕಶೇರು ಅಥವಾ ಬೆನ್ನುಹುರಿಯು ಶರೀರಕ್ಕೆ ಹಿಗ್ಗುವ ಮತ್ತು ಕುಗ್ಗುವ ಅನುಕೂಲವುಳ್ಳ ಆಧಾರ. ನರತಂತು ಅದರಲ್ಲಿ ಆಶ್ರಯ ಪಡೆದಿರುತ್ತದೆ. ಒಂದಕ್ಕೊಂದು ಸಮೀಪದಲ್ಲಿರುವ ಕಶೇರುಗಳು. ದಟ್ಟವಾದ ತಂತುಮೆಲ್ಲೆಲುಬುಗಳ ಅಂತರ ಕಶೇರು ಖಂಡಗಳಿಂದ ಐದು ವಿಭಾಗಗಳಾಗಿರುತ್ತವೆ: (1) 7 ಕಂಠ ಕಶೇರುಗಳಿಂದ ಚಿಕ್ಕಕೊರಳು, (2) ಚಲಿಸುವ ಪಕ್ಕೆಲುಬುಗಳ ಕೀಲುಗಳಿಂದ ಜೋಡಿಸಲಾಗಿರುವ 13 ಎದೆಗೂಡಿನ ಕಶೇರುಗಳು, (3) ಕೆಳಬೆನ್ನಿನ 6 ಸೊಂಟದ (ಕಿಬ್ಬದಿಯ) ಕಶೇರುಗಳು. (4) ಕಟಿಭಾಗದ ಪಟ್ಟಿಗೆ ಜೋಡಿಸುವಂತೆ ಒಂದುಗೂಡಿಸಲಾದ 3 ಪಾವನಿಯ ಕಶೇರುಗಳು ಮತ್ತು (5) ತುದಿಯಲ್ಲಿ ಚೂಪಾಗುತ್ತಹೋಗುವ ಬಾಲದಲ್ಲಿರುವ ಕೋಮಲವಾದ ಬಾಲದ ಕಶೇರುಗಳು (16–20) ಪಕ್ಕೆಲುಬುಗಳ 13 ಜೋಡಿಗಳು ಕೋಮಲವಾದ ನಡುಒಡಲಿನ ಎದೆಲುಬು ಹಿಗ್ಗಲು ಮತ್ತು ಕುಗ್ಗಲು ಅನುಕೂಲವಾದ ಎದೆಗೂಡಿನ ಬುಟ್ಟಿಯಾಗಿದೆ. ಈ ವ್ಯವಸ್ಥೆಯು ಒಳಗಿನ ಜೀವಾಳದ ಅವಯುವಗಳನ್ನು ರಕ್ಷಿಸುವುದಲ್ಲದೆ, ಶ್ವಾಸೋಚ್ಛ್ವಾಸದ ಚಟುವಟಿಕೆಗಳನ್ನು ನೆರವೇರಿಸುತ್ತದೆ.

ಎದೆಕವಚದ ಪಟ್ಟಿಯು ಎದೆಗೆ ಸ್ನಾಯುಗಳ ಮೂಲಕ ಜೋಡಿಸಲ್ಪಟ್ಟಿದೆ ಮತ್ತು ಮುಂಗಾಲುಗಳಿಗೆ ಆಧಾರವಾಗಿದೆ. ಎರಡೂ ಕಡೆಗಳಲ್ಲಿ ಒಂದು ಚಪ್ಪಟೆಯಾದ ತ್ರಿಕೋನಾಕಾರದ ತೋಳುಮೂಳೆ ಅಥವಾ ಡುಬ್ಬದೆಲುಬು ಇರುತ್ತದೆ. ಅದು ಭುಜದ ಎಲುಬಿಗೆ ಮುಟ್ಟುತ್ತದೆ ಮತ್ತು ಕೋಮಲವಾದ ಸಮೀಪದ ಸ್ನಾಯುಗಳಲ್ಲಿರುವ ಕೊರಳಎಲುಬಿಗೂ ಹೊಂದಿಕೊಳ್ಳುತ್ತದೆ. ಮುಂಗಾಲಿನಲ್ಲಿ ಭುಜದ ಎಲುಬು ಹಾಗೂ ಒಳಎಲುಬು. 7 ಮಣಿಕಟ್ಟಿನ ಎಲುಬುಗಳು, 5 ಅಂಗಾಲು ಎಲುಬುಗಳು (ಒಳಗಿನ ಚಿಕ್ಕೆಲುಬುಗಳು) ಮತ್ತು ಬೆರಳು ಎಲುಬುಗಳಿರುತ್ತವೆ. ಕಿಬ್ಬೊಟ್ಟೆಯ ಪಟ್ಟಿಯು ತ್ರಿಕಾಸ್ಥಿಗೆ ಗಟ್ಟಿಯಾಗಿ ಜೋಡಿಸಲ್ಪಟ್ಟಿರುತ್ತದೆ. ರೊಂಡಿ ಎಲುಬಿನ ಪ್ರತಿ ಅರ್ಧದಲ್ಲಿ (ಮುಂದಲ ಬೆನ್ನಿನ ಟೊಂಕೆಲುಬು) ಹಿಂಭಾಗದ ಗುಬಟೊಳ್ಳ ಕಟಿ ಭಾಗ ಇರುತ್ತದೆ (ಇದರ ಆಧಾರದ ಮೇಲೆಯೇ ಹುಲಿ ಕುಳಿತುಕೊಳ್ಳುವುದು). ಇದಲ್ಲದೆ ಒಡಲಿನ ಗುಂಜೆಲುಬು ಸಹ ಇರುವುದು. ಮೂರು ಮೂಳೆಗಳು ಕೂಡುವ

ಎಡೆಯಲ್ಲಿ ಒಂದು ಕಪ್ಪಿನಾಕಾರದ ಗುಳಿ ಅಥವಾ ಎಲುಬಿನ ಕುದುರು ಇರುತ್ತದೆ. ಅದರಲ್ಲಿ ತೊಡೆಯೆಲುಬಿನ ತಲೆಯು ಕೀಲುಗಳಿಂದ ಜೋಡಿಸಲ್ಪಟ್ಟಿದೆ. ಎರಡು ಗುಂಜೆಲುಬು ಹಾಗೂ ಕುಂಡೆಲುಬು ಮತ್ತು ರೊಂಡಿಗಳು ಕಶೇರುಗಳ ಕೆಳಗೆ ಉದರದಲ್ಲಿ ಅಂಟಿಕೆಯಾಗುತ್ತವೆ. ಹಿಂಗಾಲಿನಲ್ಲಿ ತೊಡೆಯೆಲುಬು, ಮೊಣಕಾಲೆಲುಬು, ಕುಣಿಕಾಲಲ್ಲಿಯ ಹೊರಗಡೆ ಎಲುಬು, ಮೊಣಕಾಲಿನ 7 ಹಿಮ್ಮಣಿಕಟ್ಟು, 4 ಉದ್ದ ಅಂಗಾಲೆಲುಬು ಮತ್ತು ಬೆರಳೆಲುಬುಗಳು ಇರುತ್ತವೆ.

ಸ್ನಾಯುಗಳು: ಕೆಳಗಿನ ವರ್ಗದ ಕಶೇರುಕಗಳಿಗೆ ಹೋಲಿಸಿದರೆ, ಸಸ್ತನಿಗಳಿಗೆ ಕಶೇರು ಮತ್ತು ಪಕ್ಕೆಲುಬುಗಳ ಮೇಲೆ ವೃತ್ತಖಂಡಾಕಾರದ ಕಡಮೆ ಸ್ನಾಯುಗಳು ಇರುತ್ತವೆ. ತಲೆ, ಕೊರಳು ಮತ್ತು ಕಾಲುಗಳಲ್ಲಿ ಹೆಚ್ಚು ವಿಕಸಿತವಾದ ಸ್ನಾಯುಗಳಿರುತ್ತವೆ. ಮುಖದಲ್ಲಿ ಉತ್ತಮ ಅಭಿವ್ಯಕ್ತಿಯನ್ನುಂಟುಮಾಡುವ ಸ್ನಾಯುಗಳ ಹೊಂದಾಣಿಕೆಯಿರುತ್ತದೆ. ತನ್ನ ಅಸ್ಥಿಪಂಜರದ ಕೀಲುಜೋಡಣೆ ಮೂಲಕ ಒದಗುವ ಅನಿರ್ಬಂಧ ಅನುಕೂಲದಿಂದ 'ಎಲ್ಲ ಕಾಲುಗಳಿಂದ ಜಿಗಿಯುವ' ಸಾಮರ್ಥ್ಯವನ್ನು ಹುಲಿ ಹೊಂದಿದೆ. ಎಲ್ಲ ಸಸ್ತನಿಗಳಂತೆ ಹುಲಿಯು ಹೊರಬಿಗಿಪರೆಯಿಂದ ಆವೃತವಾದ ಗುಮ್ಮಟದಾಕಾರದ ಸ್ನಾಯು ವಿಭಾಜಕ ಅಥವಾ ವಪೆಯನ್ನು ಹೊಂದಿರುತ್ತದೆ. ಅದು ಸೀಲಮ್ಮ, ಹೃದಯ ಮತ್ತು ಪುಪ್ಪುಸಗಳನ್ನು ಒಳಗೊಂಡ ಹಿಂಭಾಗದ ಎದೆಯ ಕುಹರವನ್ನು ಬೇರ್ಪಡಿಸುತ್ತದೆ.

ಹಲ್ಲುಗಳು: ಸಸ್ತನಿಗಳ ಹಲ್ಲುಗಳು ಗುಳಿಯಲ್ಲಿ ಜೋಡಿಸಿದ್ದು, ನಿಶ್ಚಿತ ಸಂಖ್ಯೆಯವುಗಳಾಗಿರುತ್ತವೆ. ವಿವಿಧ ಸಸ್ತನಿಗಳಲ್ಲಿ ಹಲ್ಲುಗಳು ರೂಪದಲ್ಲಿ ವಿಶಿಷ್ಟವಾಗಿರುವುದಲ್ಲದೆ, ಉಪಯೋಗಿಸಿದ ಆಹಾರಕ್ಕನುಗುಣವಾಗಿ ಕೆಲಸಮಾಡುತ್ತವೆ. ಹುಲಿಯ ಹಲ್ಲುಗಳು ಮಾಂಸವನ್ನು ಕಡಿಯಲು, ಹರಿದು ತಿನ್ನಲು ಅನುಕೂಲವಾಗುವಂತೆ ರೂಪಿತವಾಗಿವೆ. ಪ್ರತಿಯೊಂದು ಹಲ್ಲಿನ ಹೊರಕಾಣುವ ಭಾಗ ಅಥವಾ ದಂತಾಗ್ರವು ಮಿದುಕುಹರವನ್ನೊಳಗೊಂಡ ಮೂಳೆಯಂಥ ದಂತದ್ರವ್ಯದ ಗಟ್ಟಿಯಾದ ಗಡಸು ಪೊರೆಯನ್ನು ಹೊಂದಿರುತ್ತದೆ.

ಒಸಡುಗಳ ಕೆಳಗಿರುವ ಹಲ್ಲುಗಳ ಮೂಲ ಅಥವಾ ಬೇರು ದವಡೆಯೊಳಗಿನ ಗುಳಿಯಲ್ಲಿ ಮೂಳೆಯಂಥ ಹಲ್ಲುಗಾರೆಯಿಂದ ಗಟ್ಟಿಯಾಗಿ ಜೋಡಿಸಲ್ಪಟ್ಟಿದೆ. ಹಲವಾರು ಸಸ್ತನಿಗಳಂತೆ ಹುಲಿಗೂ, ಮೂರು ಬಗೆಯ ಹಲ್ಲುಗಳಿರುತ್ತವೆ. ಮರಿಗಳಲ್ಲಿ ಹಾಲುಹಲ್ಲುಗಳಾದ ಬಾಚಿಹಲ್ಲು, ಕೋರೆಹಲ್ಲು ಮತ್ತು ದವಡೆಹಲ್ಲುಗಳೆಲ್ಲ ಬಿದ್ದು ಬೇರೆ ಹಲ್ಲುಗಳು ಬರುತ್ತವೆ. ಹಲ್ಲುಗಳು ಎರಡೂ ಕಡೆಯಲ್ಲಿ ಒಂದೇ ಬಗೆಯಾಗಿರುತ್ತವೆಯಾದರೂ ಮೇಲ್ಗಡೆ ಮತ್ತು ಕೆಳಗಡೆ ದವಡೆಗಳಲ್ಲಿ ವಿಭಿನ್ನವಾಗಿರುತ್ತವೆ. ಎಲ್ಲ ಹಲ್ಲುಗಳೂ ಒಟ್ಟುಗೂಡಿ ದಂತವ್ಯವಸ್ಥೆಯೆನಿಸಿಕೊಳ್ಳುವುದು. ಅವುಗಳ ಸಂಖ್ಯೆಯನ್ನು ಮುಂದಿನ ಪುಟದಲ್ಲಿಯ ದಂತಸೂತ್ರದಲ್ಲಿ ತೋರಿಸಲಾಗಿದೆ:

	ಬಾಚಿಹಲ್ಲು	ಕೋರೆಹಲ್ಲು	ದವಡೆಹಲ್ಲು
ಹುಲಿಮರಿಯಲ್ಲಿ:	$\frac{3}{3}$	$\frac{1}{1}$	$\frac{2}{2} \times 2 = 24$
ಹುಲಿಯಲ್ಲಿ:	$\frac{3}{3}$	$\frac{1}{1}$	$\frac{3}{3} \times 2 = 28$

ಮೇಲಿನ ಸಂಖ್ಯೆಯು ಮೇಲಿನ ಹಾಗೂ ಕೆಳಗಿನ ಸಂಖ್ಯೆಗಳು ಕೆಳಗಿನ ಹಲ್ಲು ಗಳನ್ನು ಸೂಚಿಸುತ್ತವೆ. ಇವು ಬಾಯಿಯಲ್ಲಿಯ ಅರ್ಧಭಾಗದಲ್ಲಿನ ಹಲ್ಲುಗಳು. ಒಟ್ಟು ಹಲ್ಲುಗಳ ಸಂಖ್ಯೆ 28.

ಹುಲಿಮರಿಗಳು ಇಪ್ಪತ್ತರಿಂದ ಇಪ್ಪತ್ನಾಲ್ಕು ವಾರದವುಗಳಾದಾಗ ಹಾಲು ಹಲ್ಲುಗಳು ಉದುರಿಬೀಳಲಾರಂಭಿಸುತ್ತವೆ. ಆಗ ವಸಡುಗಳಿಂದ ಕೆಲವು ಬಾರಿ ಸ್ವಲ್ಪ ರಕ್ತ ಸುರಿಯಬಹುದು. ಹಾಗೆ ಹಲ್ಲುಬಿದ್ದ ಸ್ಥಾನಗಳಲ್ಲಿ ಶಾಶ್ವತ ಹಲ್ಲುಗಳು ಬೆಳೆಯಲು ಪ್ರಾರಂಭಿಸುತ್ತವೆ. ವಸಡು, ಕೋರೆ ಹಾಗೂ ದವಡೆಯು ಎಲ್ಲ ಸ್ಥಿರ ಹಲ್ಲುಗಳೂ ಸಂಪೂರ್ಣವಾಗಿ ಹುಟ್ಟಿ ಬೆಳೆಯಬೇಕಾದರೆ ಹದಿನಾರರಿಂದ ಇಪ್ಪತ್ತು ತಿಂಗಳು ಬೇಕಾಗು ವವು. ಹಾಲು ಹಲ್ಲುಗಳು ಪೊಳ್ಳಾಗಿದ್ದು, ಅವು ಬಿದ್ದನಂತರ ಹುಟ್ಟಿದ ಶಾಶ್ವತ ಹಲ್ಲುಗಳು ಗಟ್ಟಿಯಾಗಿರುತ್ತವೆ.

ಪಚನೇಂದ್ರಿಯಗಳು: ಮುಖ ಕುಹರದ ಅಂಚಿನಲ್ಲಿ ತೆಳು ಮತ್ತು ಮಿದು ವಾದ ತುಟಿಗಳು, ಒಳಗೆ ಹಲ್ಲುಗಳ ಬೇರುಗಳ ಸುತ್ತ ಮಾಂಸಲವಾದ ಒಸಡುಗಳು ಇರುತ್ತವೆ. ತುಟಿ ಮತ್ತು ಕುಹರದ ಅಂಚಿಗೆ ಮಿದುವಾದ ಲೋಳೆಯ ಸೂಕ್ಷ್ಮ ಚರ್ಮ ಅಥವಾ ಹೊರಪೊರೆಯಿರುತ್ತದೆ. ನಾಲಗೆಯು ಹಿಗ್ಗುವ ಹಾಗೂ ಕುಗ್ಗುವ ಸ್ನಾಯುಯುಕ್ತ ಅವಯವ ಒಡಲೆಡೆಗೆ ಜೋಡಿಸಲಾಗಿದೆ ಮತ್ತು ನಾಲೆಗಲ ಮೂಳೆ ಗಳ ಆಧಾರ ಹೊಂದಿದೆ. ಅದರ ಒರಟಾದ ಮತ್ತು ಕೊಂಪರೆಯಾದ ಮೇಲ್ಮೈಯು ನಾಲ್ಕುಬಗೆಯ ಗ್ರಂಥಿಗಳನ್ನು, ಸೂಕ್ಷ್ಮವಾದ ರುಚಿಮೊಗ್ಗುಗಳನ್ನು ಒಳಗೊಂಡಿದೆ. ಮುಖಕುಹರದ ಮೇಲ್ಭಾಗದಲ್ಲಿ ಅಂಗುಳು(ತಾಲ) ಇದೆ. ಅಂಗುಳಿನ ಹಿಂಭಾಗವು ಗಟ್ಟಿಯಾದ ಮೂಳೆಯಿಂದ ರಚಿತವಾಗಿರುತ್ತದೆ ಮತ್ತು ಅಡ್ಡವಾಗಿ ಮಾಂಸಲ ಉಬ್ಬುಗಳನ್ನು ಹೊಂದಿದೆ. ಇದರಿಂದ ಆಹಾರವನ್ನು ಹಿಡಿದುಕೊಳ್ಳಲು ಅನುಕೂಲ. ಆಹಾರವನ್ನು ನುಂಗುವಾಗ, ಹಿಂದಿನ ಮಿದುವಾದ ಅಂಗುಳು ಮೇಲ್ಗಡೆಯಿಂದ ಶ್ವಾಸೋಚ್ಛ್ವಾಸ ಮಾರ್ಗವನ್ನು ಮುಚ್ಚುತ್ತದೆ. ಮಿದು ಅಂಗುಳದ ಎರಡೂ ಕಡೆ ಗಳಲ್ಲಿ ಕೆಂಪುಬಣ್ಣದ ದುಗ್ಧರಸದ ಅಂಗಾಂಶಗಳ ಗಲಗ್ರಂಥಿಯಿರುತ್ತದೆ. ನಾಲ್ಕು ಜೋಡಿ ಲಾಲಾರಸ ಗ್ರಂಥಿಗಳು ನೀರಿನಂತಹ ಮತ್ತು ಲೋಳೆಯಂತಹ ಸ್ರಾವವನ್ನು ನಾಳಗಳ ಮೂಲಕ ಬಾಯಿಗೆ ಹರಿಸುತ್ತದೆ. ಆ ಮೂಲಕ ಆಹಾರವು ತೇವಗೊಳ್ಳು ವುದು; ಆ ಗ್ರಂಥಿಗಳು ನಾಲ್ಕು ತೆರನಾಗಿವೆ:

(1) ಕಿವಿಗಳ ಕೆಳಗಿರುವ ಕರ್ಣೋಪಾಂತ ಗ್ರಂಥಿನಾಳ

(2) ಕೆಳದವಡೆಗಳ ಹಿಂದಿನ ಮೇಲ್ಗಡೆ ಕೆಳಗಿನವುಗಳು

(3) ನಾಲಗೆಯಡಿಯವುಗಳು

(4) ಕಣ್ಣುಗಳ ಕೆಳಗಡೆ ಇರುವ ಗೋಲದ ಕೆಳಗಿನವುಗಳು

ಶ್ವಾಸಮಾರ್ಗ ಮತ್ತು ಅನ್ನಮಾರ್ಗಗಳು ಒಂದಕ್ಕೊಂದು ಅಡ್ಡಹಾಯುವಲ್ಲಿ ಬಾಯಿಯ ಕೆಳಗೆ ಗಂಟಲು ಕುಹರವಿರುತ್ತದೆ. ಅದರ ಪೃಷ್ಠಭಾಗದ ಮೇಲ್ಮೈಯಲ್ಲಿ, ಅಂಗುಳದ ಮೇಲ್ಗಡೆಯಿರುವ ನಾಸಿಕಕುಹರದಿಂದ ಅಂತರಿತ ಮೂಗುಹೊಳ್ಳೆಗಳು ತೆರೆಯುತ್ತವೆ. ಅವುಗಳ ಹಿಂದೆ ಅಲಿಕಾನಾಳಗಳ (ನೀಳುಗ್ರಂಥಿ) ಬಾಯಿಗಳಿವೆ. ನಾಲಗೆ ಮತ್ತು ಒಡಲೆಡೆಗಳ ಆಚೆಗೆ ಗಂಟಲ್ಕುಳಿಯಲ್ಲಿ ಶ್ವಾಸೋಚ್ಛ್ವಾಸದ ಮಾರ್ಗ ಅಂದರೆ ಶ್ವಾಸನಾಳವಿರುತ್ತದೆ. ಆಹಾರವು ಸಾಗುತ್ತಿರುವಾಗ ಇದು ಕಿರುನಾಲಿಗೆಯಿಂದ ಮುಚ್ಚಿಕೊಳ್ಳುತ್ತದೆ. ಇದೇ ಕಿರ್ನಾಲಿಗೆ ಅನ್ನನಾಳ. ವಪೆಯ ಹಿಂದೆ ವಿಕಸನವಾದ ಹೊಟ್ಟೆಯಿಂದ ಎದೆಯ ಮೂಲಕ ಹೋಗುವ ಕಿರಿಯಗಲದ ಸ್ನಾಯುನಾಳವು ಹೊಟ್ಟೆಯ ಅನ್ನಾಗಸೆಯ ಕವಾಟದ ಮೂಲಕ ಕೃಶವಾದ ಮತ್ತು ಸುರುಳಿ ಸುತ್ತಿರುವ ಸಣ್ಣಕರುಳಿಗೆ ಕೂಡಿಕೊಳ್ಳುತ್ತದೆ. ಸಣ್ಣಕರುಳಿನ ಹಿಂಭಾಗಕ್ಕೆ ಪಚನಗ್ರಂಥಿಗಳ ನಾಳಗಳನ್ನು ಅನೇಕ ಹಾಲೆಗಳುಳ್ಳ ಕಂದುಬಣ್ಣದ ದೊಡ್ಡಗಾತ್ರದ ಯಕೃತ್ತು ಮತ್ತು ಚಿಕ್ಕದಾದ ಬಿಳಿ ಮೇದೋಜೀರಕ ರಸಾಶ್ರಯ ಮಾಂಸಲಿಗಳಿಗೆ ಜೋಡಿಸಲಾಗಿದೆ. ದೊಡ್ಡಕರುಳು ಮತ್ತು ಸಣ್ಣಕರುಳು ಕೂಡುವ ಎಡೆಯಲ್ಲಿ ಒಂದು ಚಿಕ್ಕದಾದ ಆದಿಮಾರ್ಗ ಅಥವಾ ಒಂದು ತುದಿಮುಚ್ಚಿದ ಕೊಳವೆಯುಂಟು. ಆದರೆ ತುದಿಗರುಳು ಇರುವುದಿಲ್ಲ. ದೊಡ್ಡಕರುಳು ಉದರದ ಬಲಬದಿಗೆ ಮತ್ತು ಅಡ್ಡವಾಗಿ ಮೇಲಕ್ಕೆ ಹರಿಯುತ್ತದೆ ಮತ್ತು ಅಲ್ಲಿಂದ ಎಡಗಡೆಗೆ ತಿರುಗಿ ಗುದದ್ವಾರದಲ್ಲಿರುವ ಸ್ನಾಯುಯುಕ್ತವಾದ ಗುದನಾಳದ ಬಾಯಿಯವರೆಗೂ ಹೋಗುತ್ತದೆ. ಸಸ್ತನಿಗಳಲ್ಲಿ ಅಧಿಕಾಂಶಕ್ಕೆ ಮಲಕೂಪವಿರುವುದಿಲ್ಲ. ಪಚನ, ಮಲವಿಸರ್ಜನೆ ಮತ್ತು ಪುನರುತ್ಪಾದನ ವ್ಯವಸ್ಥೆಗಳಿಗೆ ಪ್ರತ್ಯೇಕ ಬಾಹ್ಯ ಬಾಯಿಗಳಿರುತ್ತವೆ.

ರಕ್ತಾಭಿಸರಣ: ಸಸ್ತನಿಗಳ ಕೆಂಪುರಕ್ತಕಣಗಳು ದುಂಡಗೆ ದ್ವಿನಿಮ್ನ ಮತ್ತು ಕೇಂದ್ರಕ ರಹಿತವಾಗಿದ್ದು, ಎಲ್ಲ ಕೆಳವರ್ಗದ ಕಶೇರುಕ ಪ್ರಾಣಿಗಳಿಗಿಂತ ಭಿನ್ನವಾಗಿದೆ. ಎದೆಗೂಡಿನಲ್ಲಿರುವ ಹೃದಯವು ಗುಂಡಿಗೆ ಸುತ್ತರೆಯ ನಾಜೂಕಾದ ಕೋಶದಲ್ಲಿ ಆವೃತವಾಗಿದೆ. ಅದರಲ್ಲಿ ಹಕ್ಕಿಗಳಲ್ಲಿರುವಂತೆ ನಾಲ್ಕು ವಿಭಾಗಗಳಿವೆ. ಅದರಲ್ಲಿ ಎರಡು ಹೃತ್ಕರ್ಣಗಳೂ ಎರಡು ದಪ್ಪಸ್ನಾಯುರಚಿತ ಹೃತ್ಕುಕ್ಷಿಗಳೂ ಇರುತ್ತವೆ. ಹಕ್ಕಿಗಳಲ್ಲೂ, ಹುಲಿಯಲ್ಲೂ ಎದೆ ಮತ್ತು ಪುಪ್ಪುಸಗಳೊಳಗಿಂದ ನಡೆಯುವ ರಕ್ತಾಭಿಸರಣವು ಒಂದೇ ರೀತಿಯಾಗಿರುತ್ತದೆ. ಆದರೆ ಸಸ್ತನಿಯಲ್ಲಿ ಎಡಗಡೆಯ ಮಹಾಧಮನಿಯ ಕಮಾನಿನ ಮೂಲಕ ಎದೆಯ ಎಡಗಡೆಯ ಹೃತ್ಕುಕ್ಷಿಯನ್ನು ಬಿಡುತ್ತದೆ. ಸ್ವಲ್ಪ ಸಮಯದಲ್ಲಿ, ಈ ಕಮಾನು ಒಂದು ಅನಾಮಧೇಯ ಅಪಧಮನಿಯನ್ನು (ಬಲ ಕಮಾನಿನಿಂದ ಬೇರ್ಪಟ್ಟಿರುವುದು) ಹೊಮ್ಮಿಸುತ್ತದೆ; ಅಲ್ಲಿಂದ ತಲೆಗೆ ರಕ್ತ ಪ್ರವಹಿಸುವ ಎರಡು ಅಪಧಮನಿಗಳು ಮೂಡುತ್ತವೆ ಮತ್ತು ಒಂದು ಅನಾಮಧೇಯ ಅಪಧಮನಿಯು ಬಲಗಡೆಯ ಮುಂಭಾಗದ ಅವಯವಗಳಿಗೆ ಕುತ್ತಿಗೆಯ ಕೆಳಗಿನ

ಅಡ್ಡೆಲುಬಿನ ಕೆಳಗಣ ಅಪಧಮನಿಯಾಗಿ ಮುಂದುವರಿಯುತ್ತದೆ. ಈ ಕಮಾನು ಒಂದು ಎಡಗಡೆಯ ಕುತ್ತಿಗೆ ಕೆಳಗಿನ ಅಡ್ಡೆಲುಬಿನ ಕೆಳಗಣ ಅಪಧಮನಿಯನ್ನು ಹೊಮ್ಮಿಸಿ, ಆ ತರುವಾಯ ಹಿಂಬದಿಯ ಮಹಾ ಅಪಧಮನಿಯಾಗಿ ತಿರುಗಿಕೊಳ್ಳುತ್ತದೆ. ಅದು ಹಿಂಭಾಗದಲ್ಲಿ ಮುಂದುವರಿಯುತ್ತದೆ. ಆ ಅಪಧಮನಿಯ ಒಳಗಿನ ಅವಯುವಗಳಿಗೆ, ಶರೀರಕ್ಕೆ ಮುಂದಿನ ಅವಯುವಗಳಿಗೆ ಶಾಖೆಗಳನ್ನು ನೀಡುತ್ತದೆ ಮತ್ತು ಬಾಲದ ಅಪಧಮನಿಯಾಗಿ ಮುಂದುವರಿಯುತ್ತದೆ.

ಮಲಿನ ರಕ್ತವಹನ ವ್ಯವಸ್ಥೆಯಲ್ಲಿ ತಲೆ ಮತ್ತು ಕುತ್ತಿಗೆಯಿಂದ ಹೊರಡುವ ಮುಂಗೊರಳ ಅಭಿಧಮನಿಗಳು ಮುಂದಿನ ಅವಯುವಗಳಿಂದ ಹೊರಡುವ ಕೀಲಿ ಕದಡಿಯ ಅಭಿದಮನಿಗಳಾಗುತ್ತವೆ ಮತ್ತು ಬಲಗಡೆ ಹೃತ್ಕರ್ಣವನ್ನು ಸೇರುತ್ತವೆ. ಕೆಳಸಿರಕೊಳ್ಳದ ಅಭಿಧಮನಿಗಳು ಬಾಲ, ಹಿಂದಿನ ಅವಯುವ, ಮೂತ್ರಪಿಂಡ, ಜನನ ಗ್ರಂಥಿ ಮತ್ತು ಹಿಂಬದಿಯ ಸ್ನಾಯುಗಳಿಂದ ರಕ್ತವನ್ನು ತಿರುಗಿ ಕಳುಹಿಸುತ್ತವೆ. ಪಾಚಕ ಅವಯುವಗಳಿಂದ ಯಕೃತ್ತಿನ ತೂರುಗೊಂದಿಯ ವ್ಯವಸ್ಥೆಯು ಯಕೃತ್ತಿಗೆ ರಕ್ತವನ್ನು ಒಯ್ಯುತ್ತದೆ. ಅಲ್ಲಿಂದ ಯಕೃತ್ತಿನ ಅಭಿಧಮನಿಗಳು, ಬಲಗಡೆಯ ಹೃತ್ಕರ್ಣಿಯನ್ನು ಸೇರುತ್ತಿರುವ ಕೆಳಸಿರಕೊಳ್ಳದ ಅಭಿಧಮನಿಗಳನ್ನು ಕೂಡುತ್ತವೆ. ಪ್ಲೀಹವು ಹೊಟ್ಟೆಯ ಹಿಂಬದಿಯಲ್ಲಿರುವ ಕೃಶವಾದ ಕಪ್ಪು ಮುದ್ದೆಯಾಗಿರುತ್ತದೆ.

ಶ್ವಾಸೋಚ್ಛ್ವಾಸ: ಲೋಳೆಯಂಥ ಮೇಲ್ಪರೆಯಿಂದ ಆವೃತವಾದ ಸುರುಳಿ ಸುತ್ತಿದ ಮೂಳೆಗಳ ವ್ಯೂಹದಿಂದ, ಅಂಗುಳದ ಮೇಲಕ್ಕೆ ಸಾಗಲು ಹವೆಯು ಹೊರಳಿಗಳನ್ನು ಸೇರುತ್ತದೆ; ಅಲ್ಲಿ ಬೆಚ್ಚಗಾಗುತ್ತದೆ; ಶುದ್ಧವಾಗುತ್ತದೆ. ಮೆದು ಅಂಗುಳದ ಹಿಂದಕ್ಕೆ ಶ್ವಾಸನಾಳದ್ವಾರವನ್ನು ಸೇರಲು ಗಂಟಲ ಕುಹರವನ್ನು ದಾಟಿಹೋಗುತ್ತದೆ. ಇದು ಧ್ವನಿಸಂಪುಟ ಅಥವಾ ಗಂಟಲ ಕುಹರದ ದ್ವಾರ ಮತ್ತು ಧ್ವನಿ(ಸ್ವರ)ತಂತುಗಳನ್ನು ಒಳಗೊಂಡ ಅನೇಕ ಮೃದುಅಸ್ಥಿಗಳ ಬಂಧವಾಗಿದೆ; ಅದರಿಂದ ಹುಲಿಯ ಕರೆಗಳೂ ಕೂಗುಗಳೂ ಉತ್ಪಾದನೆಯಾಗುತ್ತವೆ. ಗಂಟಲನಾಳದಿಂದ ಹವೆಯು ಹಿಗ್ಗುವ ಅಥವಾ ಕುಗ್ಗುವ ಅನುಕೂಲವಿರುವ ವಾಯುನಾಳಕ್ಕೆ ಇಳಿಯುವುದು. ಈ ನಾಳಕ್ಕೆ ಸರಳರೇಖೆಯಾಕಾರದ ಮೃದ್ವಸ್ಥಿಯ ಒತ್ತಡದಿಂದ ರಕ್ಷಣೆ ಒದಗುವುದು. ವಾಯುನಾಳವು ಎದೆಗೂಡಿನೊಳಕ್ಕೂ ಮುಂದುವರಿದು ಅದನ್ನು ಎರಡು ಸೂಕ್ಷ್ಮ ಶ್ವಾಸನಾಳಗಳಲ್ಲಿ ಬೇರ್ಪಡಿಸುತ್ತದೆ. ಇವೆರಡೂ ಪುಪ್ಪುಸಗಳ ಸೂಕ್ಷ್ಮಗಾಳಿಗೂಡಿನಲ್ಲಿ ಕೊನೆಮುಟ್ಟುವ ಶಾಖೋಪಶಾಖೆಗಳ ಮಾರ್ಗವಾಗಿ ಹವೆಯನ್ನು ವಿತರಣೆ ಮಾಡುತ್ತದೆ. ಗಾಳಿಗೂಡುಗಳ ಸುತ್ತ ಪುಪ್ಪುಸದ ಸೂಕ್ಷ್ಮಲೋಮನಾಳಗಳು ಇರುತ್ತವೆ. ಅವುಗಳಲ್ಲಿ ಆಮ್ಲಜನಕ ವಾಯು ವಿನಿಮಯದ ಶ್ವಾಸೋಚ್ಛ್ವಾಸ ಕ್ರಿಯೆಯು ನಡೆಯುತ್ತದೆ. ಪುಪ್ಪುಸಗಳು ಸ್ಪಂಜಿನಂತೆ ಹಿಗ್ಗುವ ಮತ್ತು ಕುಗ್ಗುವ ರಚನೆಯಾಗಿರುತ್ತವೆ; ಪ್ರತಿಯೊಂದಕ್ಕೂ ಮೂರು ಭಾಗಗಳು ಇರುತ್ತವೆ. ಪುಪ್ಪುಸಗಳ ಹೊರಭಾಗ ಮತ್ತು ಎದೆಯ ಒಳಭಾಗ ನುಣುಪಾದ ಹೊರಬಿಗಿಪರೆಯಿಂದ ಆವರಿಸಲ್ಪಟ್ಟಿದೆ; ಅದಕ್ಕೆ 'ಪಕ್ಕೆಪರೆ' ಎಂದು ಹೆಸರು.

ಮೂತ್ರವಿಸರ್ಜನೇಂದ್ರಿಯಗಳು: ಎರಡು ಮೂತ್ರಪಿಂಡಗಳು ಹೊರ ಬಿಗಿ ಪರೆಯಿಂದ ಮೇಲ್ಗಡೆ ಕಿಬ್ಬದಿಯ(ಸೊಂಟದ) ಪ್ರದೇಶದಲ್ಲಿರುತ್ತವೆ. ದ್ರವರೂಪದ ಮೂತ್ರವು ಪ್ರತಿಯೊಂದು ಮೂತ್ರಪಿಂಡದಿಂದ ಕೆಳಗೆ ಮೂತ್ರನಾಳದ ಕಡೆಗೆ ಹರಿಯುತ್ತದೆ. ಅಲ್ಲಿಂದ ಮುಂದೆ ಊದಿಕೊಂಡ ಆಕಾರದ ಮೂತ್ರಚೀಲದಲ್ಲಿ ಸೇರುತ್ತದೆ. ಮೂತ್ರಚೀಲವು ಗುದದ್ವಾರದ ತಳದಲ್ಲಿ ಇರುವುದು. ಕಾಲಕಾಲಕ್ಕೆ ಒಂದೇ ಮೂತ್ರವಿಸರ್ಜನೆ ನಾಳದ ಮಾರ್ಗವಾಗಿ ಮೂತ್ರವನ್ನು ಸಾಗಿಸಲು ಮೂತ್ರ ಚೀಲದ ಸ್ನಾಯುವಿನ ಬದಿಗಳು ಸ್ವಇಚ್ಛೆಯಿಂದ ಆಕುಂಚನಗೊಳ್ಳುತ್ತವೆ. ಹೆಣ್ಣು ಹುಲಿಯಲ್ಲಿ ಮೂತ್ರಜನಕಾಂಗದ ಚಾಚುಭಾಗದಲ್ಲಿ ವಿಸರ್ಜನೆಯಾಗುತ್ತದೆ. ಆದರೆ ಗಂಡು ಹುಲಿಯಲ್ಲಿ ಮೂತ್ರವಿಸರ್ಜನ ನಾಳವು ಶಿಶ್ನದವರೆಗೂ ಮುಂದುವರೆಯುವುದು.

ನರಮಂಡಲ ಮತ್ತು ಮಿದುಳು: ಭೂಚರ ಕಶೇರುಕಗಳಿಗೆ ಹೋಲಿಸಲಾಗಿ ಮಿದುಳು ದೊಡ್ಡದಾಗಿರುವುದು. ಘ್ರಾಣ ಸಂಬಂಧಿಯಾಗಿ ಪಾಲಿಗಳು ಮತ್ತು ಮಿದುಳಿನ ಕಾಂಡವು ಬಹು ವಿಸ್ತಾರವಾದ ಮಿದುಳಿನ ಅರ್ಧಗೋಳಗಳಿಂದ ಆವೃತ ವಾಗಿವೆ. ಇವುಗಳ ಹೊರಮೈಯು, ತಗ್ಗುಗಳಿಂದ ಪ್ರತ್ಯೇಕಿಸಲಾದ ಉಬ್ಬುಗಳಿಂದಾಗಿ ಸುರುಳಿ ಸುತ್ತಿಕೊಂಡಿರುತ್ತದೆ. ಮಿದುಳಿನ ಅಂಗಾಂಶ ಊತಕಗಳ ಆಧಿಕ್ಯದ ಕಾರಣ, ಹುಲಿ ಹೆಚ್ಚಿನ ಬುದ್ಧಿವಂತಿಕೆಯನ್ನು ತೋರಿಸುತ್ತದೆ. ಇವೆರಡೂ ಗೋಲಾರ್ಧಗಳನ್ನು ತಂತುಗಳ ಅಡ್ಡಸ್ನಾಯು(ಅಸ್ಥಿದ್ರವ್ಯದ ಅಂಗಭಾಗ)ವಿನ ಮೂಲಕ ಒಳಗಡೆ ಜೋಡಿಸ ಲಾಗಿದೆ. ಈ ಅಂಗಭಾಗವು ಅಂದರೆ ಅಡ್ಡಸೇರುದಿಂಡು, ಸಸ್ತನಿಗಳಿಗೆ ವಿಶಿಷ್ಟ ವಾದುದು. ಹಿಮ್ಮಿದುಳು ಸಹ ದೊಡ್ಡದಾಗಿರುತ್ತದೆ ಹಾಗೂ ಎದ್ದುಕಾಣುವಂತೆ ಸುರುಳಿ ಸುತ್ತಿಕೊಂಡಿರುತ್ತದೆ. ಮಧ್ಯ ಮತ್ತು ಪಕ್ಕದ ಪಾಲಿಗಳಿಂದ ರಚಿತವಾಗಿರುತ್ತದೆ. ಇದರ ಅಧಿಕ ವಿಕಸನದ ಮೂಲಕವೇ ಹುಲಿಯ ಚಟುವಟಿಕೆಗಳಲ್ಲಿ ಸೊಗಸಾದ ಸಾಮರಸ್ಯವು ಉಂಟಾಗಿರುತ್ತದೆ.


ಹನ್ನೆರಡು ಜೋಡಿ ಕಪಾಲ ನರಗಳು ಇವೆ ಮತ್ತು ನರರಜ್ಜುವಿನಿಂದ ಬೆನ್ನುಹುರಿ ನರಗಳ ಒಂದು ಜೋಡಿಯು ಪ್ರತಿಯೊಂದು ಸಂಧ್ಯಂತರ ಖಂಡಕ್ಕೆ ಹೋಗುತ್ತದೆ. ಸಂವೇದನಾ ವ್ಯವಸ್ಥೆ ಕಾಂಡಗಳು ಕಶೇರುಕಗಳಿಗೆ ಸಮೀಪದಲ್ಲಿ ಕೆಳಗೆ ನೆಲಸಿರುತ್ತವೆ.

ರುಚಿ (ರಸನಾ), ಘ್ರಾಣ, ದೃಷ್ಟಿ ಮತ್ತು ಶ್ರವಣ ಇಂದ್ರಿಯಗಳು ಮನುಷ್ಯನಲ್ಲಿ ಯಾವ ಭಾಗದಲ್ಲಿರುತ್ತವೋ ಹುಲಿಯಲ್ಲಿಯೂ ಅದೇ ಭಾಗದಲ್ಲಿರುತ್ತವೆ. ಅದೇ ಬಗೆಯ ಕಾರ್ಯಗಳನ್ನು ಮಾಡುತ್ತವೆ. ಚಲಿಸುವ ಬಾಹ್ಯ ಕಿವಿಗಳು ಸಂಗ್ರಹಿಸಿದ ಶಬ್ದತರಂಗಗಳು ಬಾಹ್ಯಶ್ರವಣನಾಳಕ್ಕೆ ಪ್ರವೇಶಿಸುತ್ತವೆ. ಅಲ್ಲಿಂದ ಮುಂದೆ ಕರ್ಣ ಪಟಲಕ್ಕೆ ತಲುಪುತ್ತವೆ. ಇದಕ್ಕೆ 'ನಡುಕಿವಿಯ ಹರೆ'(ತೆಳುಪೊರೆ) ಎಂದು ಹೆಸರು. ಸಸ್ತನಿಯ ನಡುಕಿವಿಯಲ್ಲಿ ಶ್ರವಣದ ಮೂರು ಕಿರುಮೂಳೆಗಳು ಇರುತ್ತವೆ. ಈ ಮೂಳೆಗಳನ್ನು 'ಕೊಡತ ಅಡಿಮೂರ್ಳೆ ಮತ್ತು ರಿಕಾಪಿ' ಎಂದು ಕರೆಯುತ್ತಾರೆ. ಇವು ಕಂಪನಗಳನ್ನು ಒಳಕಿವಿಗೆ ಮುಟ್ಟಿಸುತ್ತವೆ. ಅಲ್ಲಿಂದ ಮುಂದೆ ಸುತ್ತಿಕೊಂಡಿರುವ

ಕರ್ಣಶಂಖದವರೆಗೂ ಒಯ್ಯುತ್ತವೆ. ಈ ವ್ಯವಸ್ಥೆಯು ಪಕ್ಷಿ, ಸರೀಸೃಪ ಮತ್ತು ಉಭಯ ಜೀವಿಗಳಲ್ಲಿರುವ ವ್ಯವಸ್ಥೆಗೆ ಭಿನ್ನವಾಗಿರುತ್ತದೆ. ಅವುಗಳಲ್ಲಿ ಒಂದೇ ಒಂದು ರಸರೇಚಕ ಇರುತ್ತದೆ.

ನಿರ್ನಾಳ ಗ್ರಂಥಿಗಳು: ಹುಲಿಯ ಶರೀರದಲ್ಲಿ ಕಫಸ್ರಾವ (ಪಿಟ್ಯೂಟರಿ). ಗುರಾಣಿಕ (ಥೈರಾಯ್ಡ್) ಬದಿಗುರಾಣಿಕ(ಪ್ಯಾರಥೈರಾಯ್ಡ್). ಅಡ್ರಿನಲ್ (ಮೂತ್ರ ಪಿಂಡೋತ್ತರ) ಮತ್ತು ಲ್ಯಾಂಗರ್‌ಹಾನ್ಸ್ ಊತಕ ಗುಂಪುಗಳೇ ಮುಂತಾದ ನಿರ್ನಾಳ ಗ್ರಂಥಿಗಳು ಇರುತ್ತವೆ.

ಸಂತಾನ ಇಂದ್ರಿಯಗಳು: ಗಂಡುಹುಲಿಗೆ ವೃಷಣಕೋಶದಲ್ಲಿ ಎರಡು ವೃಷಣಗಳು ಇರುತ್ತವೆ. ಗುದದ್ವಾರದ ಕೆಳಗೆ ನೇತಾಡುವ ಚರ್ಮದ ಹೊದಿಕೆಯುಳ್ಳ ಉದರಕುಹರದ ಇಮ್ಮಡಿ ವಿಸ್ತರಣೆಯೇ ಈ ವೃಷಣಕೋಶ. ಪ್ರತಿಯೊಂದು ವೃಷಣದಿಂದ ಹೊರಟ ರೇತ್ರಾಣುಗಳು ಮೇಲಿನ ತೆಳುಚರ್ಮದಲ್ಲಿರುವ ಸೂಕ್ಷ್ಮನಾಳ



ಚಿತ್ರ 8: ಹುಲಿಯ ಜನನೇಂದ್ರಿಯಗಳು

ಗಳ ಮೂಲಕವಾಗಿ ರೇತ್ರನಾಳವನ್ನು ಸೇರುತ್ತವೆ. ಇದಕ್ಕೆ 'ಶುಕ್ರನಾಳ' ಎಂದು ಹೆಸರು. ಈ ನಾಳವೂ ರಕ್ತನಾಳಗಳೂ, ನರಗ್ರಂಥಿಗಳೂ ಸೇರಿ 'ಶುಕ್ರಹುರಿ' ಆಗಿರುತ್ತದೆ. ಇದು ತೊಡೆ ಸಂದಿಯಲ್ಲಿರುವ ನಾಳದ ಮೂಲಕ ಉದರವನ್ನು ಸೇರುತ್ತದೆ. ಎರಡೂ ಶುಕ್ರರಜ್ಜುಗಳು ಮೂತ್ರನಾಳದ ತಳಕ್ಕೆ ಸೇರುತ್ತವೆ. ಇದು ಗಂಡಿನ

ಜನನೇಂದ್ರಿಯದ ಅಂದರೆ, ಶಿಶ್ನದ ಒಳಗಿನಿಂದ ಹಾದುಹೋಗುವ ಮೂತ್ರ ಹಾಗೂ ಶುಕ್ರಾಣು ಸಾಗಿಬರುವ ಸಾಮಾನ್ಯ ನಾಳವಾಗಿರುವುದು. ಶಿಶ್ನದಲ್ಲಿರುವ ಈ ಸಾಮಾನ್ಯ ನಾಳವು ಮೈಥುನದ ಸಮಯದಲ್ಲಿ ಶುಕ್ರಾಣುಗಳನ್ನು ಯೋನಿಯಲ್ಲಿ ಸಾಗಿಸಲು ಸಹಾಯಕವಾಗುತ್ತದೆ. ಎರಡು ಸಹಾಯಕ ಗ್ರಂಥಿಗಳು ಮೂತ್ರನಾಳದ ತಳದಲ್ಲಿ ರುವ ಮೂತ್ರಗ್ರಂಥಿ ಹಾಗೂ ಮುಂಭಾಗದಲ್ಲಿರುವ ಮೂತ್ರನಾಳ ಬುಡ್ಡಿಯ ಗ್ರಂಥಿ ಗಳು ಶುಕ್ರಾಣುಗಳ ವರ್ಗಾವಣೆಗೆ ಸಹಾಯಕವಾಗುವ ಸ್ರವಗಳನ್ನು ಒದಗಿಸುತ್ತವೆ.

ಹೆಣ್ಣುಹುಲಿಗೆ ಮೂತ್ರಪಿಂಡಗಳ ಹಿಂದೆ ಎರಡು ಚಿಕ್ಕಅಂಡಾಶಯುಗಳು ಇರು ತ್ತವೆ. ಪ್ರತಿಯೊಂದು ಅಂಡಾಶಯದ ಪಕ್ಕದಲ್ಲಿ ಅಂಡಾಶಯನಾಳಕ್ಕೆ ಸೇರುವ ಅಸ್ಥಿಗಳು ಇವೆ. ಅಂಡಾಶಯನಾಳವು ಹಿಂದಕ್ಕೆ ಸಾಗಿ ಗರ್ಭಾಶಯಕ್ಕೆ ಜೋಡಿ ಸಲ್ಪಟ್ಟಿದೆ. ಈ ನಾಳವು ಸ್ಪರ್ಶತಂತುವಾಗಿ ಮುಂದುವರೆದು ನಾಳಗಳ ಎರಡೂ ಶಾಖೆಗಳು ಮುಂಭಾಗದಲ್ಲಿ ಕೂಡುತ್ತವೆ. ಅದೇ ಗರ್ಭಾಶಯದ ಶರೀರ. ಅಲ್ಲಿಂದ ಯೋನಿಯು ಮೂತ್ರಚೀಲದ ಮತ್ತು ಗುದನಾಳದ ನಡುವಣ ಭಾಗದಿಂದ ಮೂತ್ರ ಜನಕಾಂಗದ ದ್ವಾರದವರೆಗೆ ಚಾಚಿಕೊಂಡಿರುತ್ತದೆ; ಎರಡನೆಯದರಲ್ಲಿ ಒಂದು ಸೂಕ್ಷ್ಮ ಕಂಬಿಯಂಥ ಅವಯುವವಿರುತ್ತದೆ. ಅದು ಗಂಡಿನ ಶಿಶ್ನವನ್ನು ಹೋಲುವ ಯೋನಿ ಲಿಂಗ (ಭಗಾಂಕುರ).

ಗರ್ಭಧಾರಣೆಯ ಕಾಲದಲ್ಲಿ ಗ್ರಾಫಿಯನ್ ಕಿರುಕುಹರಗಳಿಂದ ಅಂಡಗಳು ಚಿಮ್ಮಿ ಅಸ್ಥಿಯನ್ನು ಸೇರುತ್ತವೆ. ಅಂಡಾಶಯ ನಾಳದಲ್ಲಿ, ಅವು ಮೈಥುನದ ತರುವಾಯ ಯೋನಿಯಿಂದ ಮೇಲಕ್ಕೆ ಸಾಗುವ ಶುಕ್ರಾಣುಗಳಿಂದ ಗರ್ಭದಾನ ಪಡೆಯುತ್ತವೆ. ಗರ್ಭಧಾರಣೆ ಹೊಂದಿದ ಅಂಡಗಳು ಗರ್ಭಾಶಯದ ಸ್ಪರ್ಶತಂತುಗಳ ಒಳಬದಿಯಲ್ಲಿ ಪ್ರತ್ಯೇಕವಾಗಿ ನೆಲಸಿ ಅಲ್ಲಿಯೇ ಉಳಿಯುತ್ತವೆ. ಬೆಳೆಯುತ್ತಿರುವ ಭ್ರೂಣದ ಸುತ್ತಲೂ ಇರುವ ತೆಳು ಹೊದಿಕೆಯೇ ಭ್ರೂಣದ ಪೊರೆ. ಆ ಮೂಲಕ ಭ್ರೂಣವು ಪ್ರಾಣ ವಾಯುವನ್ನೂ ಮಾತೃಕರೋಧ ವಸ್ತುವನ್ನೂ ಪಡೆಯುತ್ತದೆ. ತಾಯಿಯ ರಕ್ತಾಭಿ ಸರಣ ವ್ಯವಸ್ಥೆಯೇ ಭ್ರೂಣದಿಂದ ಬೇಕಿಲ್ಲದ ವಸ್ತುವನ್ನು ಹೊರದೂಡುತ್ತದೆ. ಹುಲಿಯಲ್ಲಿ ಗರ್ಭಧಾರಣೆಯಿಂದ ಮರಿಹಾಕುವ(ಈಯುವ)ವರೆಗಿನ ಗರ್ಭಾವಸ್ಥೆ ಅವಧಿ 92 ದಿನಗಳು.


ಕಾವಿನಲ್ಲಿರುವ ಹೆಣ್ಣುಹುಲಿಯ ಶರೀರದೊಳಗಿನ ಪರಿವರ್ತನೆ: ಸೂಕ್ತ ವಾತಾವರಣ, ವಾಯುಗುಣ ಮತ್ತು ಸಾಕಷ್ಟು ಆಹಾರ ಹೆಣ್ಣುಹುಲಿಯ ಶರೀರ ದೊಳಗೆ ಮತ್ತು ಲೈಂಗಿಕಕ್ರಿಯೆ ಚಕ್ರದಲ್ಲಿ ಪರಿವರ್ತನೆ ತರುತ್ತವೆ. ಬೆದೆಯ ತಾಪ ದಲ್ಲಿರುವ ಹೆಣ್ಣುಹುಲಿಯ ಬಯಕೆ, ಶರೀರದ ಆಕರ್ಷಣೆ, ಲೈಂಗಿಕ ಲಕ್ಷಣ, ಗಂಡಿನ ಜೊತೆಗೂಡುವ ಪ್ರವೃತ್ತಿ ಮತ್ತು ಜನನೇಂದ್ರಿಯದ ನಾಳಗಳ ಪರಿಸ್ಥಿತಿ ಅದರ ಅಂಡಾಶಯದ ನಿರ್ನಾಳ ಅಥವಾ ಅಂತರ್‌ಗ್ರಂಥಿಗಳಿಂದ ಉತ್ಪನ್ನವಾದ ಪುಷ್ಟಿಕಾರಕ ತತ್ವಗಳುಳ್ಳ ಪ್ರದೀಪಕ ಸ್ರಾವಗಳಿಂದ ನಿಯಂತ್ರಿಸಲ್ಪಡುತ್ತದೆ. ಅಂಡಾಶಯವು ಮೆದು

ಳಿನ ಮಧ್ಯೆ ಇರುವ ನೆತ್ತಿಗ್ರಂಥಿಯ ಮುಂಭಾಗದ ಪಾಲಿನಲ್ಲಿ ಸ್ರವಿಸುವ ಕೆಲವು ಪ್ರದೀಪಕ ಸ್ರಾವ (ಪ್ರಚೋದಕ ಸ್ರಾವ)ಗಳ ಅಥವಾ ಹಾರ್ಮೋನುಗಳ ಪ್ರಭಾವಕ್ಕೆ ಒಳಪಟ್ಟಿದೆ. ಅಂಡಾಶಯದಲ್ಲಿರುವ ಒಂಟಿ ಅಂಡಾಣುವುಳ್ಳ ಅಂಡಕೋಶಗಳ ಬೆಳವಣಿಗೆ ಮತ್ತು ಅವುಗಳ ಪಕ್ವತೆಗಳನ್ನು ನೆತ್ತಿಗ್ರಂಥಿ ಮತ್ತು ಅಂಡಕೋಶಗಳ ಅಂತರ್-ಗ್ರಂಥಿಗಳ ಪ್ರಚೋದಕ ಸ್ರಾವಗಳು ಉತ್ತೇಜನಗೊಳಿಸುತ್ತವೆ. ನೆತ್ತಿಗ್ರಂಥಿ, ಅಂಡಾಶಯಗಳ ಹಾರ್ಮೋನುಗಳ ಪ್ರಭಾವ ಪೋಷಣೆಗಳಿಂದ ಹೆಣ್ಣುಹುಲಿಯ ವಿಶಿಷ್ಟವಾದ ಸಹಾಯಕ ಲೈಂಗಿಕ ಲಕ್ಷಣಗಳು ಮತ್ತು ಬೆದೆಯ ಕಾವು ಹೆಚ್ಚುವರಿಯಾಗುತ್ತವೆ. ಅಂಡಾಶಯದಲ್ಲಿ ಪ್ರತಿಯೊಂದು ಗುಂಡಗಿರುವ ಅಂಡಾಣು ತನ್ನ ಸ್ವಂತ ಅಂಡಕೋಶ ಪುಟಿಕದಲ್ಲಿ ಬೆಳೆಯುತ್ತದೆ. ಪುಟಿಕದ ಸುತ್ತಲೂ ಇರುವ ಅನೇಕ ಜೀವಕಣಗಳು ಅಂಡಾಣುವನ್ನು ಪೋಷಿಸುವುದಲ್ಲದೆ ಭೋಗದ ಕಾವನ್ನು ಉದ್ರೇಕಿಸುವ ಈಸ್ಟ್ರೋನ್ ಮತ್ತು ಈಸ್ಟ್ರಾಡಿಯಲ್ ಸಕ್ರಿಯ ವಸ್ತುಗಳುಳ್ಳ ಈಸ್ಟ್ರೋಜನಿಕ್ ಪ್ರಚೋದಕ ಸ್ರಾವಗಳನ್ನು ಉತ್ಪನ್ನಮಾಡುತ್ತವೆ. ಈ ಪ್ರಚೋದಕ ಸ್ರಾವಗಳು ಯೋನಿ ತೆರಪಿನ ಪಕ್ಕಕ್ಕಿರುವ ಲೇಬಿಯ ಮೇಜರ್ ಹಾಗೂ ಲೇಬಿಯ ಮೈನರ್ ಸ್ನಾಯುಗಳು ಯೋನಿ ನಿಕೇತನವನ್ನು ಸುತ್ತುಗಟ್ಟಿವೆ ಮತ್ತು ಈ ಸ್ನಾಯುಗಳು ಪದರುಪದರುಗಳಾಗಿದ್ದು ಅವುಗಳ ಅಂಚಿನಲ್ಲಿ ರಕ್ತಸಂಚಾರ ಹೆಚ್ಚಾಗಿ ಯೋನಿ ತೆರಪನ್ನು ದಪ್ಪನಾಗಿ ಉಬ್ಬಿಸುತ್ತದೆ ಮತ್ತು ಸ್ನಾಯುಗಳಲ್ಲಿರುವ ಗಡ್ಡೆಯಂತಿರುವ ಬಾರ್ಥೋಲಿನ್ ಗ್ರಂಥಿಗಳ (ಗಂಡಿನ ಶಿಶ್ನದ ಮೂತ್ರದ್ವಾರದೊಳಗಿರುವ ಕೌಪರನ ಗ್ರಂಥಿಗಳಂತೆ) ಸ್ರವಗಳಿಂದ ಯೋನಿನಾಳದೊಳಗಿನ ಮಾರ್ಗವನ್ನು ನುಣುಪಾಗಿ ಚಲನ ಸೌಲಭ್ಯಒದಗಿಸಲೂ ಮತ್ತು ಇತರ ಗ್ರಂಥಿಗಳು ಗಂಡಿಗೆ ಅತಿ ಮೋಹಕವಾದ ಅಥವಾ ಕಾಮೋದ್ರೇಕ ವಿಶಿಷ್ಟ ಉಗ್ರವಾಸನೆಯುಳ್ಳ ಸ್ರವಗಳನ್ನು ತಯಾರಿಸಲೂ ಪ್ರಚೋದಿಸುತ್ತವೆ; ಅಲ್ಲದೆ ಅವು ಗರ್ಭಾಶಯ ಮತ್ತು ಅದರ ನಾಳದಲ್ಲಿ ರಕ್ತಪರಿಚಲನೆ ಹೆಚ್ಚಿಸಿ ಅದನ್ನು ದಪ್ಪನಾಗಿಯೂ ಬಲವಾಗಿಯೂ ಇರುವ ಹಾಗೆ ಮಾಡಿ ಗರ್ಭಪಿಂಡ ಅಥವಾ ಭ್ರೂಣವನ್ನು ಹೊಂದಲು ಸಜ್ಜುಗೊಳಿಸುತ್ತವೆ. ಮೂತ್ರಪಿಂಡಗಳ ಹತ್ತಿರವಿರುವ ಅಡ್ರಿನಲ್ ಗ್ರಂಥಿಗಳು ಅನುವಂಶಿಕವಾದ ಭೋಗದ ಕಾವಿನ ನಿರ್ದಿಷ್ಟ ಕಾಲಾವಧಿಯ ಚಕ್ರವನ್ನು ವರ್ಷದ ನಿರ್ದಿಷ್ಟ ಋತುವಿನಲ್ಲೂ ಅಥವಾ ವರ್ಷದ ಸಕಲ ಋತುಗಳಲ್ಲೂ ತಾಳಬದ್ಧವಾಗಿ ನಡೆಸಲು ಸಹಾಯಕವಾಗಿವೆ. ಭೋಗದ ಕಾವು ಆರಿದ ಮೇಲೆ ಜನನೇಂದ್ರಿಯ ನಿರ್ದಿಷ್ಟ ಕಾಲಾವಧಿಯವರೆಗೆ ಶಾಂತವಾಗಿರುತ್ತದೆ.

ಹೆಣ್ಣುಹುಲಿಯು ಭೋಗದ ಕಾವಿನ ಪೂರ್ಣಾವಸ್ಥೆಯಲ್ಲಿದ್ದಾಗ ಅಂಡಕೋಶಗಳಿಂದ ಬಲಿತ ಅಂಡಾಣುಗಳು ಇತರ ಪ್ರಾಣಿಗಳಲ್ಲಿರುವ ಹಾಗೆ ಸ್ವತಃ ಪ್ರವರ್ತಿಯಾಗಿ ಅಂಡಕೋಶವನ್ನು ಒಡೆದು ಹೊರಕ್ಕೆ ಬರದೆ ರತಿ ಸಂಯೋಗದಲ್ಲಿ ಮಾತ್ರ ಅಂಡೋತ್ಸರ್ಗವಾಗಿ ಹೊರಕ್ಕೆ ಬಂದು ಫೆಲ್ಲೋಪಿಯನ್ ನಾಳ ಅಥವಾ ಗರ್ಭನಾಳದ ಮುಖಾಂತರ ಗರ್ಭಕೋಶವನ್ನು ತಲುಪುತ್ತದೆ.



ಚಿತ್ರ 9: ಆನೆ–ಹುಲಿಯನ್ನು ಅಂಜಿಸಿಕೊಂಡಿರುವ ಏಕೈಕ ವನ್ಯಮೃಗ



ಚಿತ್ರ 10: ಬಲಿಹಿಡಿದ ತಾಯಿ ಹುಲಿ ಹಾಗೂ ಅದರ ಮರಿಯ ನೀರಿನಲ್ಲಿ ಚೆಲ್ಲಾಟ



ಚಿತ್ರ 11: ನೀರುಕೊಳದ ಅಂಚಿನಲ್ಲಿ ಹುಲಿ

ಅಧ್ಯಾಯ 3

ವಿಶೇಷ ಗುಣಗಳು

ಅದ್ಭುತ ಮೈಕಟ್ಟು, ಕಿರಿಯ ಕತ್ತು, ಅಚ್ಚುಕಟ್ಟಾದ ದಪ್ಪ ದುಂಡುತಲೆ, ಅದಕ್ಕೆ ತಕ್ಕ ಮುಖ, ತೆಳ್ಳಗಿನ ಕಪ್ಪುತುಟಿ, ಬಲವಾದ ಸ್ನಾಯು, ಅಗಲವಾದ ಗೋಲಕಣ್ಣು. ಚೂಪು ತುದಿಗಳುಳ್ಳ ಕರಿ ಪಟ್ಟಿಗಳಿಂದ ಕೂಡಿದ ಕಂದು ಮೈಬಣ್ಣ ಹಾಗೂ ಬಿಳಿ ಮೀಸೆಗಳಿಂದ ಹುಲಿಯು ಬಲು ಆಕರ್ಷಣೀಯವಾಗಿರುತ್ತದೆ. ಗಾತ್ರದಲ್ಲಿಯೂ ದೊಡ್ಡ ಪ್ರಾಣಿ. ಮೇಲ್ಮೈಯಲ್ಲಿ ಗಿಡ್ಡ ನಿಬಿಡ ಕೂದಲುಗಳು, ಹೊಟ್ಟೆ, ಕಿವಿ, ಮುಖ ಹಾಗೂ ಇನ್ನೂ ಕೆಲವು ಅಂಗಾಂಗಗಳ ಒಳಭಾಗ ಬಹುಮಟ್ಟಿಗೆ ಬಿಳಿದಾಗಿಯೇ ಇದ್ದು ಅಲ್ಲಿ ಕಪ್ಪುಪಟ್ಟೆಗಳು ಕಡಮೆ. ದೇಹದ ಮಿಕ್ಕೆಲ್ಲ ಭಾಗ ಹಾಗೂ ಹಿಂದಿನ ಕಾಲುಗಳ ಮೇಲೆ ಕಪ್ಪುಬಣ್ಣದ ಪಟ್ಟೆಗಳಿರುತ್ತವೆ. ಈ ಪಟ್ಟೆಗಳು ಅಲ್ಲಲ್ಲಿ ಟಿಸಿಲೊಡೆದಿರುತ್ತವೆ. ಕ್ರಮವಿಲ್ಲದ ಆಕಾರದಲ್ಲಿ ತೋರಿಬರುತ್ತವೆ. ಒಂದೇ ರೇಖೆಯಿಂದಾದ ಕುಣಿಕೆಯ ರೂಪದಲ್ಲಿಯೂ ಹಾಗೂ ವಿಶಾಲವಾದ ಪಟ್ಟೆಗಳ ರೀತಿಯಲ್ಲಿಯೂ ಮುದ್ರಿಸಲ್ಪಟ್ಟಂತೆ ಕಂಡುಬರುತ್ತವೆ. ಈ ಕಪ್ಪುಪಟ್ಟೆಗಳು ಮುಂದಿನ ಕಾಲುಗಳ ಹೊರಭಾಗದಲ್ಲಿ ಬಹು ತೇಕವಾಗಿ ಇರುವುದಿಲ್ಲ; ಇದ್ದರೂ ಅವು ಕಡಮೆ. ತಲೆಯ ಸುತ್ತಲೂ ಇವು ತೀರ ಹತ್ತಿರಹತ್ತಿರದಲ್ಲಿ ಇರುತ್ತವೆ. ಕಿವಿಗಳ ಹಿಂಭಾಗ ಕಪ್ಪು ಬಣ್ಣದಿಂದ ಕೂಡಿರುತ್ತದೆ. ಪ್ರತಿಯೊಂದು ಕಿವಿಯ ಹಿಂಭಾಗದಲ್ಲಿ ವೈಶಿಷ್ಟ್ಯಪೂರ್ಣವಾದ ಒಂದು ಬಿಳಿ ಚುಕ್ಕೆ ಕಂಡುಬರುತ್ತದೆ. ಬಾಲವು ಪಟ್ಟೆಗಳಿಂದ ಸುತ್ತುಗಟ್ಟಲ್ಪಟ್ಟಿರುತ್ತದೆ. ತುತ್ತತುದಿಯ ಭಾಗ ಕಪ್ಪಾಗಿದ್ದು ಗೋಡೆಯಂತೆ ತೋರುತ್ತದೆ.

ಹುಲಿಯ ಬಣ್ಣ, ಅದರ ಲಿಂಗ, ವಯಸ್ಸು, ಅದು ವಾಸಿಸುವ ಪರಿಸರ, ಅಲ್ಲಿ ದೊರೆಯುವ ಮುಖ್ಯ ಆಹಾರ ಹಾಗೂ ಹವಾಮಾನಗಳನ್ನು ಅವಲಂಬಿಸಿರುತ್ತದೆ. ಹುಲಿಯ ತುಪ್ಪಳದ ಮೇಲಿನ ಪಟ್ಟೆಗಳು ಮನುಷ್ಯನ ಅಂಗೈ ಗೆರೆಗಳಂತೆ ವ್ಯತ್ಯಾಸ ತೋರಿಸುವುದುಂಟು. ಕಪ್ಪುಪಟ್ಟೆಗಳ ಮುದ್ರೆಗಳ ಶ್ರೇಣಿ ಒಂದು ಹುಲಿಯಿಂದ ಮತ್ತೊಂದು ಹುಲಿಗೆ ಭಿನ್ನವಾಗಿರುತ್ತವೆ. ಪಕ್ಕೆಗಳಲ್ಲಿಯ ಪಟ್ಟೆಗಳಲ್ಲಿ ನಿಶ್ಚಿತವಾದ ಒಂದು ಹೊಂದಾಣಿಕೆ ಇರುವುದಿಲ್ಲ. ಕಣ್ಣುಗಳ ಮೇಲ್ಬದಿಯಲ್ಲಿ ಬಿಳಿಬಣ್ಣದ ಚಿಕ್ಕ ಮಚ್ಚೆಗಳಿರುತ್ತವೆ. ಅದರ ಮೇಲೆ ಕಪ್ಪುಬಣ್ಣದ ಗೆರೆಗಳಿವೆ. ಹುಲಿಗಳನ್ನು ಸುಲಭ ವಾಗಿ ಗುರುತಿಸಲು ಈ ಗುರುತುಗಳೇ ಆಧಾರ. ಕೆಲವು ಹುಲಿಗಳು ಬಿಳಿ ಇಲ್ಲವೆ ಕಪ್ಪು ಬಣ್ಣದವಿರುತ್ತವೆ. ಅವು ಅತಿ ವಿರಳ. ಅದರಲ್ಲಿಯೂ ಕಪ್ಪು ಹುಲಿಗಳು ಇದ್ದ ದಾಖಲೆಗಳೇ ಇಲ್ಲ. 1881ರಲ್ಲಿ 'ಫೀಲ್ಡ್' ಎಂಬ ಪತ್ರಿಕೆಯಲ್ಲಿ ಚಿತ್ರಗಾಂಗದಲ್ಲಿ ತಾನು ಕಂಡ ಕಪ್ಪುಹುಲಿಯ ಬಗ್ಗೆ ಒಕ್‌ಲ್ಯಾಂಡ್ ಎಂಬುವನು ಉಲ್ಲೇಖಿಸಿದ್ದಾನೆ. ಆದರೆ ಅದರ ವಸ್ತುಸ್ಥಿತಿಯ ಬಗ್ಗೆ ನಂಬುವುದು ಕಷ್ಟ. ಈ ತೆರನಾದ ಬಣ್ಣಗಳಿಗೆ

ಚರ್ಮದಲ್ಲಿರುವ ವರ್ಣದ್ರವ್ಯಗಳೇ ಕಾರಣ. ಹೆಚ್ಚಾಗಿ ಪ್ರಾಣಿಗಳ ಚುಕ್ಕೆಗಳು ಹಾಗೂ ಪಟ್ಟೆಗಳು ಸಸ್ಯಸಂಬಂಧಿಯನ್ನು ಹೊಂದಿರುತ್ತವೆ. ಹುಲಿಯ ಪಟ್ಟೆಗಳು ಅದು ವಾಸವಾಗಿರತಕ್ಕಂತಹ ದಟ್ಟವಾಗಿ ಬೆಳೆದ ಎತ್ತರವಾದ ಹುಲ್ಲು ಜಾತಿಗಳ ದೇಟು ಹಾಗೂ ಮರಗಳ ರೆಂಬೆ ಒಣಗಿದ ಎಲೆಗಳ ಬಣ್ಣದಂತೆಯೂ ಇರುತ್ತವೆ. ಅದರಿಂದ ಶಿಕಾರಿಗಳಿಗೆ ಹುಲಿಯು ಎಲ್ಲೆಡೆಯಲ್ಲಿಯೂ ಇರುವಂತೆ ಭಾಸವಾಗುತ್ತದೆ.

ವರ್ಣಸಾಮರಸ್ಯ

ಒಣಗಿದ ಎಲೆ, ಕಟ್ಟಿಗೆತುಂಡು, ಒಣಹುಲ್ಲು ಹಾಗೂ ಸುಟ್ಟುಳಿದ ಮರದ ಮೋಟುಗಳ ಬಣ್ಣಗಳಂತೆಯೇ ಪಟ್ಟೆಗಳಿಂದ ಕೂಡಿದ ಹುಲಿಯ ತುಪ್ಪಳ ಸಾಧಾರಣವಾಗಿ ತೋರಿಬರುತ್ತದೆ. ಹೀಗಾಗಿ ಹುಲಿಯ ಮೈಬಣ್ಣ ಸುತ್ತಮುತ್ತಣ ಪ್ರದೇಶದಲ್ಲಿ ಕಂಡುಬರುವ ವರ್ಣದಂತೆಯೇ ಇದ್ದು ಅದು ವಾಸಿಸುವ ಪರಿಸರದೊಂದಿಗೆ ಸಾಮರಸ್ಯ ಹೊಂದುತ್ತದೆ. ಈ ತೆರನಾದ ಹಿನ್ನೆಲೆಯಿರುವ ಪ್ರದೇಶದಲ್ಲಿ ಹುಲಿ ನಿಶ್ಶಬ್ದವಾಗಿ ಹೆಜ್ಜೆ ಇಡುತ್ತ ತನ್ನ ಬೇಟೆಪ್ರಾಣಿಗಳನ್ನು ಸಮೀಪಿಸುತ್ತದೆ. ಕೆಲಸಮಯ ಹಿಮ್ಮೆಟ್ಟಿ ಮೇಲೆ ಬೀಳುತ್ತದೆ. ಹುಲಿ ಮನುಷ್ಯನಿಗಾಗಲಿ ಇಲ್ಲವೆ ಬೇರೆ ಪ್ರಾಣಿಗಳಿಗೇ ಆಗಲಿ ಕಾಣಿಸಿಕೊಳ್ಳದೆ ಕೆಲವೇ ಹೆಜ್ಜೆಗಳ ಅಂತರದಲ್ಲಿ ಹೊಂಚಿ ಕುಳಿತುಕೊಳ್ಳುವುದು ವಾಡಿಕೆ.

ಹುಲಿಯನ್ನು ಅದರ ನೈಸರ್ಗಿಕ ಸ್ಥಿತಿಯಲ್ಲಿ ಗಮನಿಸಿದ್ದೇ ಆದರೆ ಅದು ಕಾಡಿನಲ್ಲಿ ಕಾಣಿಸಿಕೊಳ್ಳದಂತೆ ನೋಡುವವರ ಕಣ್ಣಿಗೆ ದೃಷ್ಟಿ ಭ್ರಮೆಯನ್ನುಂಟುಮಾಡಿಯಾಗಲಿ ಅಥವಾ ಹೊರವಲಯದ ಪ್ರದೇಶದೊಂದಿಗೆ ಏಕತೆ ಹೊಂದಿಯಾಗಲಿ ಅಡಗಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಆದ್ದರಿಂದ ಅದನ್ನು ಕಂಡುಹಿಡಿಯುವುದು ಬಹಳ ಕಷ್ಟದ ಸಂಗತಿ. ಅದರಂತೆಯೇ ಕಾಡಿನಲ್ಲಿ ಮನುಷ್ಯನು ಚಲನವಲನ ಮಾಡುವವರೆಗೆ ಹುಲಿಗೆ ಗೋಚರವಾಗುವುದಿಲ್ಲ. ಆದ್ದರಿಂದ ಮನುಷ್ಯ ತನ್ನ ಉಸಿರಾಟವನ್ನು ಬಿಗಿಹಿಡಿದು ಕಂಬದಂತೆ ನಿಂತರೆ ಹುಲಿಯ ಕಣ್ಣಿಗೆ ಅವನು ಬೀಳಲಾರ. ಆನೆಯ ಮೇಲೆ ಅಥವಾ ಒಂಟೆಯ ಮೇಲೆ ಅಥವಾ ಜೀಪಿನಲ್ಲಿ ಅಥವಾ ಕಾರಿನಲ್ಲಿ ಕುಳಿತ ಮನುಷ್ಯನ ರಚನೆಯನ್ನು ಹುಲಿ ತಿಳಿದುಕೊಳ್ಳಲಾರದು. ಸಾಮಾನ್ಯವಾಗಿ ಹುಲಿಗಳು ತಕ್ಷಣ ಹಿಮ್ಮೆಟ್ಟಿ ಅಡಗಿ ಪುನಃ ತಮ್ಮಲ್ಲಿಯ ಕುತೂಹಲತೆಯಿಂದ ನೋಡಲು ನಿಂತಾಗ ಶಿಕಾರಿಗಳು ಗುಂಡಿಕ್ಕಿ ಕೊಲ್ಲುವುದುಂಟು. ಸಾಮಾನ್ಯವಾಗಿ ಮನುಷ್ಯನನ್ನು ಸರಿಯಾಗಿ ನೋಡಲು ಹುಲಿ ನಿಂತುಕೊಳ್ಳುತ್ತದೆ. ವಿಶೇಷವಾಗಿ ಬಿಳಿ ಬಟ್ಟೆಗೆ ಅದು ಭಯ ಬೀಳುತ್ತದೆ. ಏಕೆಂದರೆ ಕಾಡಿನಲ್ಲಿ ಯಾವುದೂ ಬಿಳಿಬಣ್ಣದ ವಸ್ತು ಇರುವುದಿಲ್ಲ.

ದೃಷ್ಟಿಭ್ರಮೆಯಲ್ಲಿ ಈ ಕೆಲವು ಕ್ರಿಯೆಗಳು ನಡೆಯುತ್ತವೆ: ಮೊದಲನೆಯದಾಗಿ, ವಸ್ತುವಿನ ಆಕಾರ ರೇಖೆಯು ಭೇದಿಸಲ್ಪಡುವುದು; ಎರಡನೆಯದಾಗಿ, ಛಾಯೆಯಿಂದ ವಸ್ತು ತನ್ನ ನಿಶ್ಚಿತ ಸ್ಥಿತಿಯಲ್ಲಿ ಕಾಣದೆ ತಪ್ಪಿಹೋಗುವುದು; ಮೂರನೆಯದಾಗಿ, ಆಕಾರವು ಅಳಿಸಿಹೋಗುತ್ತದೆ ಇಲ್ಲವೆ ವಂಚನೆಯಾಗುತ್ತದೆ; ನಾಲ್ಕನೆಯದಾಗಿ ವರ್ಣಸಾಮರಸ್ಯ ಸಾಧಿಸಲ್ಪಡುತ್ತದೆ.

ಪ್ರಾಣಿಯ ದೇಹದ ಮೇಲಿರುವ ಚುಕ್ಕೆಪಟ್ಟೆ ಹಾಗೂ ಅಕ್ರಮ ಕಲೆಗಳು ಅದರ ಸಾಮಾನ್ಯ ಹಿನ್ನೆಲೆಯ ಮೈಬಣ್ಣಕ್ಕಿಂತ ಬಹುವಾಗಿ ಭಿನ್ನತೆ ಹೊಂದಿದ್ದರೂ ಕೂಡ ಈ 'ನೈಸರ್ಗಿಕ ಆಕಾರರೇಖೆ' ಕಣ್ಣನ್ನು ವಂಚಿಸುತ್ತದೆ.

ಹಿಂಸ್ರ ಪಶುಗಳ ದೇಹದ ಮೇಲಿನ ಕಲೆ ಅಥವಾ ಚಿನ್ಹೆಗಳು ನೋಡುವವನ ಕಣ್ಣಿಗೆ ಕಾಣಿಸಿಕೊಂಡಾಗ್ಯೂ ಅವನಲ್ಲಿ ಒಂದು ಬಗೆಯ ದೃಷ್ಟಿಭ್ರಮೆಯಾಗುತ್ತದೆ. ಆ ಪ್ರಾಣಿಗಳು ಅಲ್ಲಿದ್ದುದು ಅವನಿಗೆ ಗೋಚರವಾಗುವುದೇ ಇಲ್ಲ. ಈಗ ಚಿರತೆಯ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಅದರ ಮೈಬಣ್ಣದ ರಚನೆ ಹಾಗೂ ಅದರಲ್ಲಿಯ ಚುಕ್ಕೆಗಳಿಂದಾಗಿ ಅದು ಸಾಮಾನ್ಯವಾಗಿ ನೆಲದಮೇಲೆ ಮಲಗಿದ್ದರೂ ಕಲ್ಲುಹರಳುಗಳ ಗುಂಪಿನಂತೆ ಕಾಣಿಸುತ್ತದೆ. ಅದು ಒಂದು ಕಲ್ಲುಬಂಡೆಯ ಮೇಲೆ ಮಲಗಿದ್ದರೆ ಒಂದು ಮುದ್ದೆಗಲ್ಲಿನ ತುಣುಕಿನಂತೆ ತೋರಿಬರುತ್ತದೆ. ಅದು ಎಲೆಗಳಿಂದ ಕೂಡಿದ ಟೊಂಗೆಯಮೇಲೆ ಕುಳಿತಿದ್ದರೆ ಎಲೆಗಳಲ್ಲಿ ತೂರಿಬರುವ ಸೂರ್ಯನ ಪ್ರಕಾಶ ಸೂಸುತ್ತಿರುವಂತೆ ಭಾಸವಾಗುತ್ತದೆ. ಅದು ದಾರಿಯ ಮಧ್ಯದಲ್ಲಿ ಅಡ್ಡವಾಗಿ ಮಲಗಿದ್ದರೆ ಅದು ನೆಲದ ಬಣ್ಣದಲ್ಲಿ ಲೀನವಾಗಿ ಅಲ್ಲಿ ಏನೂ ಇಲ್ಲವೆಂಬಂತೆಯೇ ಅನ್ನಿಸುತ್ತದೆ. ಜೀವಶಾಸ್ತ್ರ ವಿಜ್ಞಾನಿಗಳು ಈ ಸುತ್ತಮುತ್ತಲಿನ ವಸ್ತುವಿನೊಂದಿಗೆ ಸೇರಿಹೋಗುವಿಕೆಗೆ 'ಭಂಗವರ್ಣವಿನ್ಯಾಸ' ಎಂದು ಕರೆಯುತ್ತಾರೆ. ಇದು ದೃಷ್ಟಿಭ್ರಮೆಯ ಒಂದು ವಿಧ.

ಇನ್ನೊಂದು ಮುಖ್ಯ ವಿಷಯವೆಂದರೆ 'ಪ್ರಕೃತಿಛಾಯೆ'ಯ ಪರಿಣಾಮವನ್ನು 'ಪ್ರತಿಕೂಲಛಾಯೆ' ವಿಧಾನವು ವಿರೋಧಿಸುತ್ತದೆ. ಅದು ಹೇಗೆಂಬುದು ಈ ಕೆಳಗಿನ ದೃಷ್ಟಾಂತವನ್ನು ಗಮನಕ್ಕೆ ತೆಗೆದುಕೊಂಡಾಗ ಸ್ಪಷ್ಟವಾಗುವುದು.

ಎಲ್ಲ ಕಡೆಯಲ್ಲೂ ಒಂದೇ ತೆರನಾದ ಕಂದುಬಣ್ಣ ಹಚ್ಚಿದ ಆಟಿಗೆ ಪ್ರಾಣಿಯನ್ನು ಬಿಸಿಲಲ್ಲಿ ಇಟ್ಟಾಗ, ಅದರ ಬೆನ್ನು ತಿಳಿ, ಹೊಟ್ಟೆ ದಟ್ಟ ಹಾಗೂ ಪಕ್ಕೆಗಳು ತಿಳಿಯಿಂದ ದಟ್ಟಕಂದು ಬಣ್ಣದವರೆಗೆ ಅನೇಕ ಛಾಯೆಗಳಲ್ಲಿ ಕಂಡುಬರುವುದು. ನಿಸರ್ಗದಲ್ಲಿಯೂ ಕಂದು ಬಣ್ಣದ ಪ್ರಾಣಿಯ ಬೆನ್ನು ಹೆಚ್ಚು ಕಪ್ಪಿನಿಂದ ಕೂಡಿದ ಕಂದು ಬಣ್ಣದ್ದಿದ್ದು ಕೆಳಗಿನ ಅಂಗಾಂಗಗಳು ನಸುಹಳದಿ ವರ್ಣದಿಂದ ಬಿಳಿಯ ಛಾಯೆಯವುಗಳಾಗಿರುತ್ತವೆ. ಅದರ ಪಕ್ಕೆಗಳು ಮೇಲಿನಿಂದ ಕಪ್ಪುಕಂದು ಬಣ್ಣದಿಂದೊಡಗೂಡಿ ಕೆಳಗೆ ಹೋದಂತೆ ನಸುಹಳದಿಯಾಗಿ ಕೊನೆಗೆ ಬಿಳಿ ಬಣ್ಣದೊಂದಿಗೆ ಲೀನವಾಗುತ್ತದೆ. ಮೂರು ಪರಿಮಾಣಗಳ ತೋರಿಕೆಯ ಪರಿಣಾಮದಿಂದಾಗಿ ಪ್ರಾಣಿಯ ಇಡೀ ದೇಹ ಬೇರೆ ಬೇರೆ ತೆರನಾದ ಬಣ್ಣದಿಂದ ತೋರದೆ ಕಂದು ಬಣ್ಣದ ಒಂದೇ ಸಪಾಟ ಘನ ಆಕೃತಿಯಾಗಿ ತೋರುತ್ತದೆ. ಅಂತೆಯೇ ಪ್ರಾಣಿಯು ತನ್ನ ದೇಹದ ಛಾಯೆಗಳಿಂದ ಯಥಾಸ್ಥಿತಿಯಲ್ಲಿ ಕಾಣುವುದನ್ನು ತಪ್ಪಿಸುತ್ತದೆ. ಇದೂ ಸಹಿತ 'ದೃಷ್ಟಿಭ್ರಮೆ'. ಈ ಛಾಯೆಯ ಹಿನ್ನೆಲೆಯಲ್ಲಿ ಇತರರ ದೃಷ್ಟಿಯಿಂದ ಅದು ಸಂಪೂರ್ಣ ತಪ್ಪಿಸಿಕೊಳ್ಳುತ್ತದೆ.

ಪ್ರಾಣಿಗಳು ಭೂಮಿಗೆ ಹೊಂದಿ ಅವಿತುಕೊಂಡು ಅಥವಾ ವಿಶೇಷ ಸ್ಥಿತಿಯಲ್ಲಿ ತಮ್ಮ ಆಕಾರವನ್ನು ಅಡಗಿಸಿಕೊಳ್ಳುವ ಚಾತುರ್ಯವನ್ನು ಹೊಂದಿರುತ್ತವೆ. ಇದನ್ನು 'ಆಕಾರ ಅಳಿಸಿ ಬಿಡುವಿಕೆ' ಅಥವಾ 'ಆಕಾರ ವಂಚಿಸುವಿಕೆ' ಎಂದು ಕರೆಯಬಹುದು.

ಕೆಲವು ಪ್ರಾಣಿ ಹಾಗೂ ಪಕ್ಷಿಗಳು ವಿಶ್ರಮಿಸುವ ಸ್ಥಳಗಳಾದ ಗಿಡಮರ, ಕಲ್ಲು, ಮಣ್ಣುಗಳ ಮಧ್ಯೆ ಸರಿಯಾದ ಹೊಂದಾಣಿಕೆಯಿಂದ ಅವುಗಳಂತೆಯೇ ತೋರಿಬರುತ್ತವೆ. ಇದು 'ವರ್ಣಸಾಮರಸ್ಯ.'

ಹುಲಿಯು ಈ ಎಲ್ಲ ಗುಣಗಳನ್ನು ಪಡೆದು ಅಡವಿಯಲ್ಲಿ ಅಡಗಿಕೊಳ್ಳುವುದರಲ್ಲಿ ಪೂರ್ಣ ಚತುರತೆ ಪಡೆದಿರುತ್ತದೆ. ವರ್ಣಸಾಮರಸ್ಯ, ವಿಶೇಷತಃ ತುಂಡುರೇಖೆ, ಅನೇಕ ವರ್ಣ, ಒಂದುಗೂಡುವ ಛಾಯೆ ಹಾಗೂ ಅಸಮವಾಗಿ ಹರಡಿದ ಪಟ್ಟೆಗಳ ಗುರುತು, ಇವೆಲ್ಲವೂ ಸೇರಿ, ಅದು ನಸುಬೆಳಕಿನಲ್ಲಿ ತನ್ನ ಬೇಟೆಗಾಗಿ ಅಲೆದಾಡುತ್ತಿರುವಾಗಲೂ ಇತರ ಪ್ರಾಣಿಗಳಿಗಾಗಲಿ, ಮನುಷ್ಯನಿಗಾಗಲಿ ಅದರ ಇರುವಿಕೆ ತತ್‌ಕ್ಷಣ ಗೋಚರವಾಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಹುಲಿಯಿಂದ ಕೆಲವೇ ಅಡಿಗಳ ಅಂತರದಲ್ಲಿ ನಡೆದುಹೋದರೂ ಅಥವಾ ಅತಿ ಸನಿಯದಲ್ಲಿ ಅಂದರೆ ಎರಡು ಮೀಟರ್ ಸಮೀಪ ಕುಳಿತರೂ ಅಂಥ ಭಯಂಕರ ಪ್ರಾಣಿಯ ಸಾನ್ನಿಧ್ಯ ಮನುಷ್ಯನಿಗೆ ಗೊತ್ತಾಗದೇ ಹೋಗಬಹುದು. ಏಕೆಂದರೆ ಭೂಮಿಗೆ ಸಮನಾಗಿ ಹೊಂದಿ ಅಡಗಿಕೊಳ್ಳುವ ಅದರ ಪ್ರವೃತ್ತಿ ಮಹಾ ಅದ್ಭುತ ಹಾಗೂ ಚಮತ್ಕಾರಪೂರಿತವಾದುದು.

ವನರಾಜ

ಹುಲಿ ತನ್ನದೇ ಆದ 'ಸಿಂಹನಾರಿ'ಯ ಭಂಗಿಯಲ್ಲಿ ಕುಳಿತಾಗ ಅದೆಷ್ಟು ಪ್ರತಿಭಾಶಾಲಿಯಾಗಿ ಕಾಣುತ್ತದೆಂಬುದನ್ನು ವರ್ಣಿಸಲಸಾಧ್ಯ. ಅದರ ಗಂಭೀರತೆ ಹಾಗೂ ಸ್ವಸ್ಥಚಿತ್ತಗಳು ಅತುಲ್ಯ. ಹುಲಿ ಮನುಷ್ಯನಿಗೆ ಕಂಡಾಗೆಲ್ಲ ಅತ್ಯಂತ ಮೋಹಕವಾಗಿ ತೋರುತ್ತದೆ. ಮಾನವನು ಹುಲಿಯನ್ನು 'ವನರಾಜ'ನೆಂದು ಕರೆದುದು ಅದರ ಸ್ವೈರಣೆಯ ಅರಸತನದ ಸಂಕೇತ. ಅದು ಬೇರೆ ಪ್ರಾಣಿಗಳ ಮೇಲೆ ಬೇಟೆಯಾಡಿ ಜೀವಿಸುವ ಮಾಂಸಾಹಾರಿ ಪ್ರಾಣಿ, ನಿಜ. ಇಂತಹ ಪ್ರಾಣಿ ನಿಸರ್ಗದಲ್ಲಿಯ ವನ್ಯಪ್ರಾಣಿಗಳ ಸಮತೋಲನವನ್ನು ಕಾದುಕೊಂಡು ಹೋಗಲು ಅತ್ಯಾವಶ್ಯಕ. ಮಾನವನಿಗೆ ವಿನಾಕಾರಣ ತೊಂದರೆ ಕೊಡುವ ಉದ್ದೇಶವೇನೂ ಹುಲಿಗಿಲ್ಲ. ಮನುಷ್ಯ ಅದರ ಚರ್ಮಕ್ಕೆಂದು ತೊಂದರೆ ಮಾಡುವ ಗೋಜಿಗೆ ಹೋಗದಿದ್ದರೆ ಹಾಗೂ ಅದಕ್ಕೆ ನೈಸರ್ಗಿಕ ಆಹಾರ ಸಿಕ್ಕುತ್ತಿರುವವರೆಗೆ ಅವನ ಮೇಲೆ ಇಲ್ಲವೆ ಅವನ ದನಕರುಗಳ ಮೇಲೆ ಆಕ್ರಮಣ ಮಾಡುವುದಿಲ್ಲ. ಅನಾವಶ್ಯಕವಾಗಿ ಅವನನ್ನು ಕೊಲ್ಲುವ ಗೋಜಿಗೂ ಹೋಗುವುದಿಲ್ಲ.

ತಾನು ವಾಸಿಸುವ ಪರಿಸರ ಹಾಗೂ ಪ್ರದೇಶದಲ್ಲಿ ಹುಲಿಯದು ಎತ್ತಿದ ಕೈ. ಅದು ಆ ಜಂಗಲಿನಲ್ಲಿ ವಾಸಿಸುವ ಪ್ರಾಣಿಗಳ ಒಡೆಯ, ರಾಜ ! ಆನೆ

ಯೊಂದನ್ನು ಹೊರತುಪಡಿಸಿ ಉಳಿದೆಲ್ಲ ಪ್ರಾಣಿಗಳಿಗೆ ಅದನ್ನು ಕಂಡರೆ ಭೀತಿ. ಆನೆ ಹಾಗೂ ಹುಲಿ ಪರಸ್ಪರ ಒಂದರ ಗೋಜಿಗೆ ಒಂದು ಸಾಮಾನ್ಯವಾಗಿ ಹೋಗುವುದಿಲ್ಲ. ಕೆಲವು ವೇಳೆ ಆನೆಗಳು ಹುಲಿಗಳನ್ನು ಕೆಣಕುತ್ತವೆ. ಆಗ ಗಂಡು ಹಾಗೂ ಹೆಣ್ಣು ಹುಲಿಗಳು ಸೇರಿ ಆನೆಯಮೇಲೆ ಆಕ್ರಮಣಮಾಡಿ ಕೊಲ್ಲುವುದುಂಟು.

ಸ್ವಭಾವ ವೈಚಿತ್ರ್ಯ

ಮನುಷ್ಯರಂತೆ ಹುಲಿಗಳು ತಮ್ಮ ವರ್ತನೆ, ಸ್ವಭಾವ ಹಾಗೂ ಸಂಪ್ರದಾಯ ಗಳಲ್ಲಿ ತೀರ ಏಕವ್ಯಕ್ತಿತ್ವ ಪ್ರಾಣಿ. ಇದು ಆಶ್ಚರ್ಯಕರವಾಗಿ ತೋರಿದರೂ ಪ್ರತಿಯೊಂದು ಹುಲಿ ತನ್ನದೇ ಆದ ವಿಶಿಷ್ಟ ಸ್ವಭಾವ ವೈಚಿತ್ರ್ಯ ಹೊಂದಿದೆ. ಇದು ಕಾಡಿನ ಹತ್ತಿರ ದಲ್ಲಿ ವಾಸಿಸುವ ಹಳ್ಳಿಯ ಜನರಿಗೆ ಚೆನ್ನಾಗಿ ಮನವರಿಕೆಯಾಗುತ್ತದೆ. ಹುಲಿಗಳಲ್ಲಿ ಬಹಳಷ್ಟು ಪ್ರಾಣಿಗಳು ಹೆಚ್ಚು ಧೈರ್ಯಶಾಲಿಗಳಾಗಿವೆ. ಕೆಲವು ದುಡುಕು ಹಾಗೂ ಕೆಲವು ಅತಿ ಕಪಟ ಸ್ವಭಾವದವೂ ಆಗಿರುತ್ತವೆ. ಇನ್ನೂ ಕೆಲವು ಉಗ್ರ ಹಾಗೂ ವಕ್ರ ಸ್ವಭಾವದವುಗಳಾಗಿರುತ್ತವೆ. ಹಲವು ಹುಲಿಗಳು ಸೌಮ್ಯ ಹಾಗೂ ಸಾಧು ಸ್ವಭಾವದವುಗಳಾಗಿರುತ್ತವೆ.

ಹುಲಿಗಳ ನಡತೆ ವಿಲಕ್ಷಣ. ಈ ನಡತೆಯಿಂದ ಅವುಗಳ ಸ್ವಭಾವ ಗುರುತಿಸಲು ಸಾಧ್ಯವಿದೆ. ಕೆಲವು ವಿಶೇಷವಾಗಿ ವಯಸ್ಸಾದ ಹುಲಿಗಳು ಮನುಷ್ಯರ ಮುಖಾಮುಖಿ ಭೆಟ್ಟಿಯಾದಾಗ ಗರ್ಜಿಸುತ್ತ ಅವರ ದಾರಿಗೆ ಅಡ್ಡಬರುತ್ತವೆ: ಕೆಲವು ತಮ್ಮ ಶೌರ್ಯ ವನ್ನು ತೋರಿಸುತ್ತ ಆಕ್ರಮಣ ಮಾಡಿದಂತೆ ನಟಿಸುತ್ತವೆ. ಆದರೆ ಹೆಚ್ಚಾಗಿ ಪಲಾಯನ ಮಾಡುವವುಗಳೇ ಜಾಸ್ತಿ.

ಎತ್ತರ ಹುಲ್ಲುಗಾವಲು ಪ್ರದೇಶಗಳಲ್ಲಿ ವಾಸಿಸುವ ಹುಲಿಗಳು ಗಿಡಮರಗಳಿಂದ ಕೂಡಿದ ಕಾಡಿನಲ್ಲಿ ವಾಸಿಸುವ ಹುಲಿಗಳಿಗಿಂತ ಸರ್ವಸಾಧಾರಣವಾಗಿ ಹೆಚ್ಚು ಅಪಾಯ ಕಾರಿಯಾಗಿರುತ್ತವೆ. ಏಕೆಂದರೆ ಈ ಪ್ರದೇಶಗಳಲ್ಲಿ ಮನುಷ್ಯನು ಅಡಗಿರುವ ಹುಲಿ ಗಳನ್ನು ಕಾಣಲಾರ. ಹುಲಿಯು ಮನುಷ್ಯನನ್ನು ದೂರಿಂದಲೆ ಕಂಡು ದೂರವಾಗುವ ಸಾಧ್ಯತೆ ಕಡಮೆ. ಇಂತಹ ಸನ್ನಿವೇಶಗಳಲ್ಲಿ ಹುಲಿಗೆ ತನ್ನ ಸಂರಕ್ಷಣೆಗೆ ಹಠಾತ್ ಆಕ್ರಮಣ ಮಾಡುವುದೊಂದೆ ಮಾರ್ಗ ಉಳಿಯುತ್ತದೆ. ಆದರೆ ಅದೇ ಮರಗಳಿಂದ ಕೂಡಿದ ಕಾಡಿನಲ್ಲಿದ್ದ ಹುಲಿಯು ದೂರದಿಂದ ಸಮೀಪಿಸುತ್ತಿರುವ ಮನುಷ್ಯನನ್ನು ಕಂಡಾಗ ಸಾಮಾನ್ಯವಾಗಿ ಕಣ್ಣುತಪ್ಪಿ ಕಾಲ್ಕಿಗೆಯುವದೇ ವಾಡಿಕೆ.

ಈಜುಗಾರ ಮಲ್ಲ: ಹುಲಿಯಲ್ಲಿ ಒಂದು ವಿಶೇಷ ಗುಣ ಗುರುತಿಸಬಹುದು. ಅದಕ್ಕೆ ಬೇಸಿಗೆಯ ಬಿಸಿಲಿನ ಬೇಗೆ ಸಹಿಸಲಾಗುವುದಿಲ್ಲ. ಬೇಸಿಗೆಯಲ್ಲಿ ಅದು ಸದಾ ಚಡಪಡಿಸುತ್ತಲೇ ಇರುತ್ತದೆ. ಅದಕ್ಕೆ ಮೇಲಿಂದ ಮೇಲೆ ಬಾಯಾರಿಕೆಯಾಗುತ್ತದೆ. ಬಿಸಿಲಿನ ತಾಪದಿಂದ ಸದಾ ದಣಿದಂತೆ ತೋರುತ್ತದೆ. ನಡೆಯುವಾಗ ಸುಡುತ್ತಿರುವ

ಭೂಮಿಯ ಮೇಲ್ಮೈ ಅದರ ಪಾದಗಳನ್ನು ಕಮರಿಸುತ್ತದೆ. ಬಿಸಿಲಿನ ಬೇಗೆಯಿಂದ ಕಾದ ಕಲ್ಲಿನ ಮೇಲೆ ನುಗ್ಗಲು ಬಲಾತ್ಕರಿಸಿದಾಗ ಹುಲಿಯ ಪಾದ ಹಾಗೂ ಕಾಲ್ಬೆರಳುಗಳ ಮೇಲೆ ಗುಳ್ಳೆಗಳು ಕಂಡುಬಂದ ದಾಖಲೆ ಇದೆ. ನೀರು ಹುಲಿಗೆ ಅತ್ಯಾವಶ್ಯಕ ವಸ್ತು. ಸುಲಭವಾಗಿ ನೀರು ಸಿಗುವಂತಿದ್ದರೆ ಬೇಸಿಗೆ ಕಾಲದಲ್ಲಿ ಅದು ಅಲೆದಾಟವನ್ನೇ ಮಾಡುವುದಿಲ್ಲ.

ಬೆಕ್ಕು ಹಾಗೂ ಚಿರತೆಗಳು ನೀರಿಗೆ ಭಯಬೀಳುತ್ತವೆ. ಆದರೆ ಹುಲಿಗೆ ನೀರೆಂದರೆ ಪ್ರಾಣ. ಹುಲಿ ಬೆಕ್ಕಿನ ವಂಶಕ್ಕೆ ಸೇರಿದಾಗ್ಯೂ ಆಳವಿಲ್ಲದ ನೀರಿನಲ್ಲಿ ಒಂದು ವಿಶೇಷ ರೀತಿಯ ಆಡಂಬರದಿಂದ ಹೊರಳಾಡುವುದರಲ್ಲಿ ಬೆಕ್ಕಿಗಿಂತ ಬೇರೆಯಾಗಿರುತ್ತದೆ. ಹುಲಿಯ ಈ ಸ್ವಭಾವ ಗೊತ್ತಿದ್ದೂ ಅನೇಕ ಮೃಗಾಲಯಗಳು ಅದರ ಜೀವನದ ಆನಂದಕ್ಕೆ ಅತ್ಯಾವಶ್ಯಕವಿದ್ದ ಸ್ನಾನದ ಕೊಳದ ವ್ಯವಸ್ಥೆ ಮಾಡದಿರುವುದು ವಿಷಾದಕರ. ಹುಲಿ ಒಳ್ಳೇ ಈಜುಗಾರ ಪ್ರಾಣಿ. ತುಂಬಿ ಸೂಸಿ ಹರಿಯುವ ದೊಡ್ಡ ನದಿಗಳನ್ನು ತನ್ನ ರಾತ್ರಿಯ ಅಲೆದಾಟದಲ್ಲಿ ಅತಿ ಸುಲಭವಾಗಿ ದಾಟುತ್ತದೆ. ಅದು ನದಿಗಳನ್ನು ದಾಟುವ ಮೊದಲು ಎದುರಿನ ದಂಡೆಯ ಮೇಲೆ ಯಾವುದಾದರೊಂದು ಸ್ಥಾನವನ್ನು ಗುರುತಿಸಿ ಅಲ್ಲಿಗೆ ಹೋಗಿ ತಲುಪುವಷ್ಟು ಶಕ್ತಿ ಹಾಗೂ ಚಾಣಾಕ್ಷತೆಯನ್ನು ಹೊಂದಿದೆ. ಒಂದು ವೇಳೆ ಪ್ರವಾಹದ ಸೆಳೆತದಿಂದಾಗಲಿ ಅಥವಾ ಬೇರೆ ಯಾವುದಾದರೊಂದು ಕಾರಣದಿಂದಾಗಲಿ ಗುರುತಿಸಿದ ಸ್ಥಾನಕ್ಕೆ ತಲುಪುವುದು ಸಾಧ್ಯವಾಗದಿದ್ದರೆ ಯಾವುದೋ ಒಂದು ಸ್ಥಳಕ್ಕೆ ತಲುಪುವ ಬದಲು ಪುನಃ ಮೊದಲಿನ ದಂಡೆಗೆ ವಾಪಸ್ ಬಂದು ಎರಡನೆಯ ಬಾರಿ ಪ್ರಯತ್ನಮಾಡಿ. ತಾನು ಗುರುತಿಸಿದ ಸ್ಥಳಕ್ಕೇನೇ ಸಾಗಿಹೋಗುತ್ತದೆ. ಕ್ರಿ.ಶ. 1942ರಲ್ಲಿ ಉತ್ತರ ಪ್ರದೇಶದ ಪಿಲಿಬಿಟ್ ಜಂಗಲ್‌ನಲ್ಲಿ ಒಂದು ಹುಲಿ ಎಮ್ಮೆಕರುವನ್ನು ಕೊಂದು ಶಾರದ ನದಿಯ ನೀರಿನ ಸೆಳವಿನ ವಿರುದ್ಧ ಈಜಿ ದಾಟಿದ್ದ ದಾಖಲೆ ಇದೆ. ಸುಂದರಬನದ ಜವುಗು ಪ್ರದೇಶದ ನಡುಗಡ್ಡೆಯಿಂದ ನಡುಗಡ್ಡೆಗೆ ಹೋಗಬೇಕಾದರೆ ಅನೇಕ ಹೊಳೆ ಹಳ್ಳಗಳನ್ನು ಈಜಿ ದಾಟಬೇಕಾಗುತ್ತದೆ. ಅಲ್ಲಿಯ ಹುಲಿಗಳು ಬಂಗಾಳಕೊಲ್ಲಿಯ ನಡುಗಡ್ಡೆಯಿಂದ ನಡುಗಡ್ಡೆಗೆ 5 ಮೈಲುಗಳಷ್ಟು ಅಗಲ ಸಮುದ್ರ ಭಾಗಗಳನ್ನು ಈಜಿ ದಾಟುವ ಸಾಮರ್ಥ್ಯ ಪಡೆದಿವೆ. ನೇಪಾಳದಿಂದ ಶಾರದ ನದಿಯನ್ನು ದಾಟಿ ಹುಲಿಗಳು ಭಾರತದ ಗಡಿಗೆ ಬರುತ್ತವೆ.

ಹಲ್ಲುಗಳು ಹುಲಿಯ ಮಾರಕಾಸ್ತ್ರ

ಹುಲಿ ಒಂದು ಮಾಂಸಾಹಾರಿ ಪ್ರಾಣಿಗಳ ವಂಶಕ್ಕೆ ಸೇರಿದೆ. ಅದು ತನ್ನ ಸಲೀಲ ಯಾಂತ್ರಿಕ ಕೌಶಲ್ಯದಿಂದ ಭಯಂಕರ •ವಿಧ್ವಂಸಕ ಶಕ್ತಿಯನ್ನು ಹೊಂದಿದೆ. ಎಲ್ಲ ತೆರನಾದ ದಂತಕ್ರಿಯೆ ಹಾಗೂ ಪಚನಕ್ರಿಯೆಗಳ ಜಟಿಲತೆ ಅದಕ್ಕೆ ಇರುವುದಿಲ್ಲ. ಹುಲಿಗೆ ಬಲಾಢ್ಯ ಹಾಗೂ ಕತ್ತರಿಯ ಅಲುಗಿನಂತಿರುವ ದವಡೆ ಹಲ್ಲುಗಳೂ; ಅತ್ಯಂತ ದೊಡ್ಡ, ಸದೃಢ ಚೂಪಾದ ಕೋರೆಹಲ್ಲುಗಳೂ, ಹರಿತ, ಗಟ್ಟಿಮುಟ್ಟಾದ

ಮುಂದಿನ ವಸಡೆ ಹಲ್ಲುಗಳೂ ಇರುತ್ತವೆ. (ಸಂಖ್ಯೆಗಳಿಗಾಗಿ ಅಧ್ಯಾಯ 2ರಲ್ಲಿ ಹಲ್ಲುಗಳು ನೋಡಿರಿ) ದವಡೆಗಳು ಚಿಕ್ಕದಾಗಿವೆ. ಬೇಟೆಪ್ರಾಣಿಗಳನ್ನು ಕೊಲ್ಲಲು ಹಾಗೂ ಮಾಂಸವನ್ನು ಕಿತ್ತು ತುಂಡರಿಸಿ ನುಂಗಲು ಉಪಯೋಗ ಬೀಳುವಂತೆ ಹುಲಿಯ ಹಲ್ಲುಗಳು ಬಾಚಿಯಂತೆ ಚೂಪಾಗಿ ಅತಿ ಬಲಿಷ್ಠವಾಗಿರುತ್ತವೆ. ಕೋರೆ ಹಲ್ಲುಗಳಿರದಿದ್ದರೆ ಹುಲಿಗೆ ವೈರಿಗಳಿಂದ ರಕ್ಷಿಸಿಕೊಳ್ಳುವುದು ಸಾಧ್ಯವಾಗುತ್ತಿರಲಿಲ್ಲ. ಇಷ್ಟೇ ಅಲ್ಲ, ಅದಕ್ಕೆ ಯಾವುದೇ ಬೇಟೆಯನ್ನು ಕೊಲ್ಲುವುದೂ ಕಷ್ಟವಾಗುತ್ತಿತ್ತು. ಇನ್ನೊಂದು ಅತಿ ಮುಖ್ಯ ವಿಷಯವೆಂದರೆ ಬಾಯಿಂದ ವಿವಿಧ ರೀತಿಯಲ್ಲಿ ಶಬ್ದ ಮಾಡಲು ಹುಲಿಯ ಹಲ್ಲುಗಳು ಸಹಾಯಕವಾಗುತ್ತವೆ.

ಮೇಲಿನ ಕೋರೆಹಲ್ಲುಗಳು ಮೊನಚಾಗಿ ಬಾಗಿ ಸುಮಾರು ಮೂರು ಅಂಗುಲ ಉದ್ದವಾಗಿದ್ದು ಕೆಳಗಿನ ಕೋರೆಹಲ್ಲುಗಳು ಮೇಲಿನವುಗಳಿಗಿಂತ ಸ್ವಲ್ಪ ಚಿಕ್ಕದಿರುತ್ತವೆ. ಕೆಳಗಿನ ಒಳಭಾಗದಲ್ಲಿ ಸಂದುಗೆರೆಗಳಿದ್ದು ಹೊರ ಹಿಂಭಾಗ ಹರಿತವಾಗಿದೆ. ಮುಂದಿನ ಬಾಚಿ(ವಸಡೆ)ಹಲ್ಲುಗಳಿಂದ ಮಾಂಸವನ್ನು ಹರಿದು ಕತ್ತರಿಸಲು, ದವಡೆ ಹಲ್ಲುಗಳಿಂದ ಅವನ್ನು ಸಣ್ಣ ಸಣ್ಣ ತುಂಡುಗಳಾಗಿ ತುಂಡರಿಸಿ ನುಂಗಲು ಯೋಗ್ಯ ರೀತಿಯಲ್ಲಿ ಸಿದ್ಧಪಡಿಸಲಾಗುವುದು. ಕೆಳಗಿನ ಕೋರೆಹಲ್ಲುಗಳು ಮೇಲಿನ ಕೋರೆ ಹಲ್ಲುಗಳಿಗೆ ಬಿಗಿಯಾಗಿ ಸರಿದು ಹೊಂದಿ ಕೆಲಸಮಾಡುತ್ತವೆ. ಹುಲಿ ಇತರ ಪ್ರಾಣಿಗಳ ಗಂಟಲನ್ನು ಹಿಡಿದಾಗ ಅದರ ವಾಯುನಾಳ ಹಾಗೂ ಅಲ್ಲಿಯ ರಕ್ತನಾಳಗಳು ಕೆಳಗಿನ ಹಾಗೂ ಮೇಲಿನ ಕೋರೆಹಲ್ಲುಗಳ ಸಂದಿಯಲ್ಲಿ ಸಿಲುಕಿ ಜಜ್ಜಲ್ಪಡುತ್ತವೆ. ಆಗ ಅದರ ರಕ್ತ ಚಲನವಲನ ನಿಂತು, ಮಂಜುಗಟ್ಟಿ ನಂತರ ಉಸಿರುಗಟ್ಟಿ, ಸತ್ತುಹೋಗುವುದು.

ಹುಲಿಯ ದವಡೆಗಳು ಚಿಕ್ಕವಾಗಿದ್ದು, ಶಾಖಾಹಾರಿ ಪ್ರಾಣಿಗಳಂತೆ ಎಡಬಲಕ್ಕೆ ಚಲಿಸದೆ ಕೇವಲ ಮೇಲೆ ಕೆಳಗೆ ಚಲಿಸುವ ವ್ಯವಸ್ಥೆಯನ್ನು ಹೊಂದಿವೆ. ಕೆಳಗಿನ ದವಡೆಯ ಎಲುಬಿನ ಹಿಂದಿನ ತುದಿ ದುಂಡಾಗಿದ್ದು ಸಾಕಷ್ಟು ಅಗಲವಾಗಿರುತ್ತದೆ. ಅದು ಮೇಲಿನ ದವಡೆಯ ಎಲುಬಿನ ಗೂಡಿನಲ್ಲಿ ಸರಿಯಾಗಿ ಹೊಂದಿ ಕತ್ತರಿಯ ಅಲಗಿನಂತೆ ಮೇಲೆ ಕೆಳಗೆ ಚಲಿಸಿದಾಗ ಕಿಂಚಿತ್ತೂ ಪಡವು ಬಿಟ್ಟಿರುವುದಿಲ್ಲ. ದವಡೆ ಹಲ್ಲುಗಳ ಪೈಕಿ, 'ಕಾಕನ್ಯೋಸಲ್' ದವಡೆಹಲ್ಲು 2ರಿಂದ 3 ಹರಿತವಾದ ಉಬ್ಬುಗಳಿಂದ ಕೂಡಿ ಮಾಂಸ ಕತ್ತರಿಸಿ ತುಂಡುಮಾಡಲು ಸಹಾಯ ಮಾಡುತ್ತದೆ. ಹುಲಿಯ ಬಲಿಷ್ಠವಾದ ಕೆನ್ನೆಯಕಮಾನುಗಳು ಕಚ್ಚುವ ಮಹಾಸ್ನಾಯುಗಳಿಗೆ ಉತ್ತೇಜನ ಕೊಡುತ್ತವೆ.

ಹುಲಿಯ ಹೊಟ್ಟೆ ಒಂದು ಸಾಮಾನ್ಯವಾದ ಚೀಲದಂತಿದ್ದು ಶಾಖಾಹಾರಿ ಪ್ರಾಣಿಗಳಂತೆ ಬೇರೆ ಬೇರೆ ವಿಭಾಗಗಳು ಅಲ್ಲಿರುವುದಿಲ್ಲ. ಅದರ ಕರುಳು ಚಿಕ್ಕದಿದ್ದು ದೇಹದ ಮೂರರಷ್ಟು ಉದ್ದವಿರುತ್ತದೆ. ಹುಲಿಯ ರುಧಿರ ಮಕ್ಕಳ ತಲೆಯುಷ್ಟಿದ್ದು ಅದರ ಬಡಿತ ಅತಿ ಬಲವಾಗಿರುತ್ತದೆ.

ಉಗುರು ಹುಲಿಗೆ ವಿಶೇಷ ಅಸ್ತ್ರ

ಬೆಕ್ಕಿನ ವಂಶದ ಪ್ರಾಣಿಗಳ ಇನ್ನೊಂದು ವಿಶೇಷ ಲಕ್ಷಣವೆಂದರೆ ತಮ್ಮ ಉಗುರುಗಳನ್ನು ಅವುಗಳ ಕೋಶದಲ್ಲಿ ಸೇರಿಸಿಕೊಳ್ಳುವ ಸಾಮರ್ಥ್ಯಹೊಂದಿರುವಿಕೆ. ಹುಲಿಗೆ ತನ್ನ ಬೇಟೆಯನ್ನು ಕೊಲ್ಲಲು ಹಲ್ಲುಗಳ ಮಹತ್ವ ಎಷ್ಟಿದೆಯೋ ಅಷ್ಟೇ ಮಹತ್ವ ಕಾಲಿನ ಉಗುರುಗಳಿಗೂ ಇದೆ. ಅವು ಉದ್ದವಾಗಿ ಎರಡು ಅಂಗುಲಗಳಷ್ಟಿದ್ದು ಅಲುಗಿನಂತೆ ಸದಾ ಹರಿತವಾಗಿಯೇ ಇರುತ್ತವೆ. ಹುಲಿ ತನ್ನ ಮೃದುವಾದ ಪಂಜದ ಮೇಲೆ ನಡೆಯುವಾಗ ಶಬ್ದವಾಗದಂತೆ ಉಗುರುಗಳನ್ನು ಒಳಗೆಳೆದುಕೊಳ್ಳಲು ಒಂದು ವಿಶೇಷ ರೀತಿಯ ಸ್ನಾಯುಗಳ ವ್ಯವಸ್ಥೆಯಿದೆ. ಅದು ಈ ರೀತಿಯಲ್ಲಿ ಸಂಭವಿಸುತ್ತದೆ.ಉಗುರಿನಿಂದ ಆಚ್ಛಾದಿತವಾದ ಕಾಲ್ಬೆರಳಿನ ತುದಿಯ ಸಂದು ಹೊರಗಿನಿಂದ ಅಥವಾ ಮಧ್ಯ ಫಾಲಂಕ್ಸ್‌ದಿಂದ ಕೋಶದೊಳಗೆ ಮಡಿಚುತ್ತದೆ. ಅದು ಈ ಸ್ಥಿತಿಯಲ್ಲಿ ಅಸ್ಥಿಬಂಧಕದಿಂದ ಹಿಡಿಯಲ್ಪಟ್ಟಿದೆ. ಉಗುರನ್ನು ಹೊತ್ತ ಫಾಲಂಕ್ಸನ್ನು ವಿಧೇಯಕ ಸ್ನಾಯುಗಳು ನೇರವಾಗಿ ಮಾಡಿದಾಗ ಪ್ರಾಣಿಯು ನೈಸರ್ಗಿಕ ಸ್ಥಿತಿಯಲ್ಲಿ ಉಗುರುಗಳನ್ನು ಹಿಂತೆಗೆದುಕೊಳ್ಳುತ್ತದೆ. ಆಗ ಉಗುರುಗಳ ಮೊನೆಗಳು ಭೂಮಿಗೆ ತಾಗದಂತೆ ಕೋಶದಲ್ಲಿ ಸೇರಿಕೊಳ್ಳುತ್ತವೆ. ಹುಲಿಗೆ ತನ್ನ ಬೇಟೆಗಳನ್ನು ಕೊಲ್ಲುವಾಗ ಓಡುವ ಅವಶ್ಯಕತೆ ಇಲ್ಲ. ಅದು ನೆಲದ ಮೇಲೆ ಊರಲು ತನ್ನ ಉಗುರುಗಳ ಉಪಯೋಗ ಮಾಡುವುದಿಲ್ಲ. ಅದು ಸದ್ದಿಲ್ಲದೆ ಅಡಗಿ ಕೂತು ಬೇಟೆಯ ಮೇಲೆ ಒಮ್ಮೆಲೆ ಜಿಗಿದು ಆಕ್ರಮಣಮಾಡಿ ಕೊಲ್ಲುತ್ತದೆ. ಹುಲಿಗೆ ವೇಗದ ಮೇಲೆ ಜಾಸ್ತಿ ಅವಲಂಬನವಿಲ್ಲ. ಸದ್ದಿಲ್ಲದ ನಡಿಗೆಯ ಮೇಲೆ ಹೆಚ್ಚಿನ ಅವಲಂಬನ. ಹುಲಿಯು ತನ್ನ ಬೇಟೆಪ್ರಾಣಿಗಳನ್ನು ಹಿಡಿದು ಬೀಳಿಸುವಲ್ಲಿ ಪಂಜದ ಉಗುರುಗಳನ್ನೇ ಪ್ರಮುಖ ಅಸ್ತ್ರವನ್ನಾಗಿ ಉಪಯೋಗಿಸುತ್ತದೆ.

ಹುಲಿಯು ಕೊಳ್ಳೆ ಪ್ರಾಣಿಯನ್ನು ಹಿಡಿಯುವಾಗ ಉಗುರುಗಳು ಕಾಲಿನ ನರ ಸ್ನಾಯುಗಳ ಸೆಳೆತದಿಂದ ಓರೆಗಳಿಂದ ಹೊರಟು ಕೆಳಗೆ ಮೇಲೆ ನಿಮಿರುತ್ತ ಆ ಪ್ರಾಣಿಯನ್ನಪ್ಪಿ ಹಿಡಿಯಲೂ. ಪರಚಲೂ. ಸಹಾಯಕವಾಗುತ್ತವೆ. ಬೇಟೆಗಳನ್ನು ಸದ್ದಿಲ್ಲದೆ ಅಡಗಿ ಆಕ್ರಮಣಮಾಡಿ ಕೊಲ್ಲುವ ಪ್ರಾಣಿಗಳಾದ ಹುಲಿಗಳು ಅವು ಬೆದರಿದಾಗ ಇಲ್ಲವೆ ಬೇಟೆಗಳನ್ನು ಹಾರಿ ಹಿಡಿಯುವಾಗ ಮಾತ್ರ ಉಗುರುಗಳು ನಿಮಿರಿ ನೆಲಕ್ಕೆ ಸೋಂಕಬಹುದು. ಅಷ್ಟೆ. ಬೇರೆ ಸಮಯಗಳಲ್ಲಿ ಉಗುರುಗಳು ಭೂಮಿಗೆ ತಾಗುವುದಿಲ್ಲ. ಆದ್ದರಿಂದ ಹುಲಿ ನಡೆದುಹೋದ ದಾರಿಯಲ್ಲಿ ಉಗುರುಗಳ ಗುರುತು ಮೂಡದೆ ಪಾದ ಹಾಗೂ ಕಾಲ್ಬೆರಳುಗಳ ಗುರುತುಗಳು ಮಾತ್ರ ಮೂಡಿದ್ದು ಕಂಡು ಬರುತ್ತವೆ. ಹುಲಿಯ ಒಂದು ಕಾಲಲ್ಲಿ ನಾಲ್ಕು ಉಗುರುಗಳು ಹಾಗೂ ಮುಂದಿನ ಕಾಲುಗಳ ಪಂಜಗಳ ಮೇಲ್ಪದಿಯಲ್ಲಿ ಒಂದೊಂದು ಉಗುರು ಇದ್ದು ಅದರ ಉಪಯೋಗ ಉಳಿದ ಉಗುರುಗಳಂತೆ ಇರುತ್ತದೆ. ಒಟ್ಟಿಗೆ ಹುಲಿಗೆ ಹದಿನೆಂಟು ಉಪಯುಕ್ತ ಉಗುರುಗಳಿರುತ್ತವೆ. ಹುಲಿಗಳು ಆಗಾಗ ಮರಗಳ ಬುಡದಲ್ಲಿ ನಿಂತು ಪಂಜಗಳಿಂದ ತೊಗಟೆಯ ಮೇಲೆ ಪರಚುವುದನ್ನು ಕಾಣುತ್ತೇವೆ. ತಮ್ಮ ಪಂಜದ ಉಗುರುಗಳಿಂದ

ಹುಲಿಗಳು ತೊಗಟೆಯ ಮೇಲೆ ಗುರುತುಗಳನ್ನು ಮೂಡಿಸುತ್ತವೆ. ಉಗುರುಗಳನ್ನು ಹರಿತವಾಗಿಡಲು ಮಸೆಯುವುದಕ್ಕೆ ಹಾಗೂ ಉಗುರುಗಳ ಸಂದಿಗಳಲ್ಲಿ ಮಾಂಸ, ರಕ್ತಕಣಗಳು ಹಾಗೂ ಕೊಳೆ ಸಿಕ್ಕಿಕೊಂಡಿದ್ದರೆ ಅವುಗಳಿಂದ ಸ್ವಚ್ಛವಾಗಿಡಲು ಈ ರೀತಿ ಮಾಡುತ್ತದೆ. ಹುಲಿಗಳ ಈ ಕಾರ್ಯದಿಂದ ಉಗುರುಗಳ ಮೇಲಿನ ಸಡಿಲವಾದ ಪೊರೆ, ತೆಳುವಾದ ಸುಲಿದುಕೊಂಡ ಭಾಗ ಅಥವಾ ಬದಿಗಳಲ್ಲಿನ ಪದರುಗಳು ಕಿತ್ತು ಹೋಗಿ ಬ್ಲೇಡಿನ ಅಲಗಿನಂತೆ ಅವು ಹರಿತವಾಗುತ್ತವೆ. ಹುಲಿಗಳು ತಮ್ಮ ಉಗುರುಗಳ ಬಗ್ಗೆ ಬಹಳ ದಕ್ಷತೆ ವಹಿಸುವುದುಂಟು.

ಸ್ನಾಯುಗಳು ಹುಲಿಯ ಬಲ

ಹುಲಿ ತನ್ನ ಹೊಟ್ಟೆಪಾಡಿಗೆ ಅತಿಹೆಚ್ಚು ಕಷ್ಟಪಡಬೇಕಾಗುತ್ತದೆ. ಈ ಕಾರ್ಯಕ್ಕೆ ಅತಿ ಹೆಚ್ಚಿನ ಜಾಣ್ಮೆ ಹುಲಿಗೆ ಇರಬೇಕಾಗುತ್ತದೆ. ಮೆದುಳಿನ ವಿಕಾಸ, ಶ್ರವಣ, ನೋಟ ಹಾಗೂ ವಾಸನೆ ಈ ಎಲ್ಲ ಇಂದ್ರಿಯಗಳೂ ಕೂಡ ಹೆಚ್ಚಿನ ಮಟ್ಟದಲ್ಲಿ ವೃದ್ಧಿಯಾಗಿರಬೇಕಾಗುತ್ತದೆ. ನೈಸರ್ಗಿಕ ಸ್ಥಿತಿಯಲ್ಲಿ ಬೆಳೆದ ಪ್ರಾಣಿ ಸತತವಾಗಿ ತನ್ನ ಬೇಟೆಗೆಂದು ಅಲೆದಾಡಬೇಕಾಗಿರುವುದರಿಂದ ಹಾಗೂ ಬೇಟೆಯನ್ನು ಕೊಲ್ಲುವಾಗ ಸಂಭವಿಸತಕ್ಕಂತಹ ಮಾರಕ ಹೋರಾಟದಿಂದ ಅದರ ಸ್ನಾಯುಗಳು ಅತಿ ಬಲಶಾಲಿಯಾಗಿರುತ್ತವೆ. ಆದರೆ ಪ್ರಾಣಿ ಸಂಗ್ರಹಾಲಯಗಳಲ್ಲಿ ಇಲ್ಲವೆ ಸರ್ಕಸ್ಸುಗಳಲ್ಲಿ ಇದ್ದ ಹುಲಿಗಳ ಸ್ನಾಯುಗಳು ಅಷ್ಟೊಂದು ಬಲವಾಗಿರದೆ ಅತಿ ಬಡವಾಗಿರುತ್ತವೆ. ಚೆನ್ನಾಗಿ ತಿಂದು ಬೆಳೆದ ಹುಲಿ ಲೀನವಾಗಿರದೆ ಅತಿ ಧಾರ್ಢ್ಯವಾಗಿದ್ದು ಅದರ ಮೈಸುತ್ತಳತೆ ಐದು ಅಡಿಗಳವರೆಗೆ ಇರುತ್ತದೆ. ಅದಕ್ಕೆ ಭುಜ ಹಾಗೂ ಬೆನ್ನುಗಳು ಅಗಲವಾಗಿರುತ್ತವೆ. ಹೆಚ್ಚು ಸುತ್ತಳತೆಯುಳ್ಳ ಕಾಲುಗಳೂ ಕೂಡ ದಪ್ಪವಾಗಿರುತ್ತವೆ. ಅದರಲ್ಲೂ ವಿಶೇಷವಾಗಿ ಮುಂದಿನ ಕಾಲುಗಳೂ ಹಾಗೂ ಅವುಗಳ ಮಣಿಕಟ್ಟುಗಳ ಸುತ್ತಳತೆ ಹದಿನೆಂಟರಿಂದ ಇಪ್ಪತ್ತು ಅಂಗುಲಗಳವರೆಗೆ ಇದ್ದು ಹೆಚ್ಚು ಬಲಶಾಲಿಯಾಗಿರುತ್ತದೆ. ಭುಜದ ಸ್ನಾಯುಗಳು ಬಿರುಸಾಗಿ, ಸದೃಢವಾಗಿರುತ್ತವೆ. ಅವುಗಳ ಮಧ್ಯೆ ವಿಶೇಷ ರೀತಿಯ ಎರಡು ಸಣ್ಣ ಮೂಳೆಗಳು ಅಸ್ಥಿಪಂಜರಕ್ಕೆ ಹೊಂದಿಕೊಂಡಿರದೆ ಬಾಗುಕತ್ತಿಯ ಆಕೃತಿಯಲ್ಲಿ ಕಾಣುತ್ತವೆ. ಇವುಗಳಿಗೆ 'ಅದೃಷ್ಟಮೂಳೆ'ಗಳೆಂದು ಕರೆಯುತ್ತಾರೆ. ಈ ಎರಡೂ ಮೂಳೆಗಳು ಭುಜಗಳ ಮಾಂಸದಲ್ಲಿ ಹೂಳಿಕೊಂಡಿರುವುದರಿಂದ ಹುಲಿಯು ಪೆಟ್ಟು ಕೊಡುವಾಗ ಅಥವಾ ಹೋರಾಡುವಾಗ ಮುಂದಿನ ಕಾಲುಗಳಿಗೆ ಅತಿ ಹೆಚ್ಚಿನ ಶಕ್ತಿ ಉದ್ಭವವಾಗುತ್ತದೆ. ಹುಲಿಯ ಮುಂದಿನ ಕಾಲುಗಳ ಸಂದುಗಳಲ್ಲಿ 'ತಮಾಷೆ ಮೂಳೆ'ಗಳೂ ಇರುತ್ತವೆ.

ತರುಣ ಹುಲಿ ಕಡವೆ, ಜಿಂಕೆಗಳಂತಹ ತನ್ನ ಬೇಟೆಪ್ರಾಣಿಗಳನ್ನು ಅತಿ ಬಲಶಾಲಿಯಾದ ಮುಂದಿನ ಪಂಜಗಳಿಂದ ಒಂದೇ ಏಟಿಗೆ ನೆಲಕ್ಕುರುಳಿಸುತ್ತದೆ. ಮನುಷ್ಯನ ತಲೆಯನ್ನು ಮೊಟ್ಟೆಯಂತೆ ಸುಲಭವಾಗಿ ಜಜ್ಜಿಹಾಕುತ್ತದೆ.

ಹುಲಿಗೆ ನಿಸರ್ಗವು ಅತಿ ಆಶ್ಚರ್ಯಕರ ಸ್ನಾಯುಗಳ ಶಕ್ತಿಯನ್ನು ದಯಪಾಲಿಸಿದೆ. ಕಾಟಿಮೃಗ ಅಥವಾ ಕಾಡೆಮ್ಮೆಗಳನ್ನು ಕೊಂದು ಗಿಡಗಂಟೆಗಳ ಮುಖಾಂತರ ಬಹುದೂರ ಎಳೆದುಕೊಂಡು ಹೋಗುವ ಸಾಮರ್ಥ್ಯ ಹುಲಿಗಳಿಗಿದೆ. ಇಂತಹ ಪ್ರಾಣಿಗಳನ್ನು ಎಳೆಯಲು ಕನಿಷ್ಠ ಐದರಿಂದ ಆರು ಬಲಶಾಲಿ ಮಾನವರ ಪ್ರಯತ್ನ ಬೇಕಾಗುವುದು. ತಾನು ಕೊಂದ ಪ್ರಾಣಿಯ ದೇಹವನ್ನು ಕಚ್ಚಿ ತುಂಬಿ ಹರಿಯುವ ನದಿ ದಾಟುವುದು ಅಥವಾ ಎತ್ತಿಕೊಂಡು ಎತ್ತರವಾದ ಗೋಡೆಹಾರಿ ಪಾರಾಗುವುದೆಂದರೆ ಅದಕ್ಕೆ ಮಕ್ಕಳ ಆಟವಿದ್ದಂತೆ. ಮರಕ್ಕೆ ಕಟ್ಟಿದ ಪ್ರಾಣಿಗಳನ್ನು ಕೊಂದು ಎಳೆದುಕೊಂಡು ಹೋಗಲು ಪ್ರಯತ್ನಿಸಿದಾಗ ಒಮ್ಮೊಮ್ಮೆ ಮರಗಳೇ ಕಿತ್ತುಬರುತ್ತವೆ. ಕೆಲವೊಮ್ಮೆ ಪ್ರಾಣಿಗಳ ಕಾಲೇ ಆಗಲಿ ಕತ್ತೇ ಆಗಲಿ ಹರಿದುಹೋಗುವಷ್ಟು ಶಕ್ತಿಯಿಂದ ಎಳೆಯುತ್ತದೆ.

ಚೆನ್ನಾಗಿ ಬೆಳೆದು ಆರೋಗ್ಯದಿಂದ ಇದ್ದ ಹುಲಿ ಮೂವತ್ತು ಅಡಿಗಳಿಗಿಂತ ಹೆಚ್ಚು ಅಂತರವನ್ನು ಹಾಗೂ ಹದಿನಾರು ಅಡಿ ಎತ್ತರವನ್ನು ಸುಲಭವಾಗಿ ಜಿಗಿಯುತ್ತದೆ. ಹುಲಿಯು ತನ್ನ ಮುಪ್ಪಿನ ಕಾಲದಲ್ಲಿ ಒತ್ತಾಯದ ಉಪವಾಸದಿಂದ ಅತಿ ಕ್ಷೀಣವಾದಾಗ ಹೊಟ್ಟೆ ಒಂದು ಖಾಲಿ ಚೀಲದಂತೆ ಜೋತಾಡುತ್ತಿರುತ್ತದೆ. ಅದರ ಮೈ ಬಣ್ಣದ ಕಾಂತಿ ಮಾಸಿ ಹೋಗುತ್ತದೆ. ಮೈಮೇಲೆ ಬಿಳಿಕೂದಲುಗಳ ಸಂಖ್ಯೆ ಹೆಚ್ಚುತ್ತದೆ.

ಕಿವಿಗಳ ಹಿಂಭಾಗದಲ್ಲಿಯ ಬಿಳಿಚುಕ್ಕೆಗಳು ಹುಲಿಗಳ ವಿಶಿಷ್ಟತೆ

ಹುಲಿಯ ಕಿವಿಗಳ ಹಿಂಭಾಗ ಕಪ್ಪುಬಣ್ಣದಿಂದ ಕೂಡಿದ್ದು ಅವುಗಳ ಮಧ್ಯೆ ವಿಶಿಷ್ಟ ರೀತಿಯಲ್ಲಿ ಬಿಳಿಬಣ್ಣದ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ಕಿವಿಗಳ ಮುಂಭಾಗ ಹಾಗೂ ಒಳಗಿನ ಭಾಗ ಉದ್ದವಾದ ಬಿಳಿಕೂದಲುಗಳಿಂದ ಮುಚ್ಚಲ್ಪಟ್ಟಿರುತ್ತವೆ. ಆದರೆ ಹುಲಿಯ ಕಿವಿಗಳನ್ನು ಅದರ ಆಕಾರಕ್ಕೆ ಹೋಲಿಸಿದಾಗ ಅವು ಅತಿ ಚಿಕ್ಕವಾಗಿ ಕಾಣುತ್ತವೆ. ಕಿವಿಗಳ ಹಿಂಭಾಗದಲ್ಲಿ ಕಂಡುಬರುವ ಬಿಳಿ ಚುಕ್ಕೆಗಳು ಬೆಕ್ಕಿನ ಜಾತಿಗೆ ಸೇರಿದ. ಬೇರೆ ಕೆಲವು ಪ್ರಾಣಿಗಳಲ್ಲಿ ಬೆದರಿಕೆ ಹಾಕಲು ಉಪಯೋಗವಾಗುವಂತೆ ಹುಲಿಗಳಲ್ಲಿಯೂ ಅದೇ ರೀತಿಯ ಕಾರ್ಯಮಾಡುತ್ತವೆ. ಅದು ಆಕ್ರಮಣದ ಬೆದರಿಕೆ ಹಾಕಿದಾಗ ಬಿಳಿಚುಕ್ಕೆಗಳು ಮುಂದೆ ಎದ್ದುಕಾಣುವಂತೆ ತನ್ನ ಕಿವಿಗಳನ್ನು ಬಾಗಿಸುತ್ತದೆ. ಕಣ್ಣಿಗೆ ಎದ್ದುಕಾಣುವ ಈ ಚುಕ್ಕೆಗಳು ದಟ್ಟವಾದ ಕಾಡಿನಲ್ಲಿ ಹುಲಿಗಳು ಒಂದನ್ನೊಂದು ಹಿಂಬಾಲಿಸುವಾಗ ಸಾಂಕೇತಿಕ ಮಹತ್ವ ಹೊಂದಿರುತ್ತವೆ. ಕಿವಿಗಳ ಹಿಂಭಾಗದ ಬಿಳಿ ಚುಕ್ಕೆಗಳ ಹೊರತಾಗಿ ಹುಲಿಯ ತುಪ್ಪಳ ಅದರ ಸುತ್ತಮುತ್ತಣ ಪ್ರದೇಶದೊಂದಿಗೆ ಬೆರಕೆಯಾಗುತ್ತದೆ. ಅವು ಹುಲಿಗಳಿಗೆ, ವಿಶೇಷವಾಗಿ ಮರಿಗಳಲ್ಲಿ ಒಂದಕ್ಕೊಂದು ಹಾಗೂ ಹೆಣ್ಣು ಹುಲಿಗೆ ಅವುಗಳೊಂದಿಗೆ ಸಂಪರ್ಕ ಇಟ್ಟುಕೊಳ್ಳಲು ಹಾಗೂ ಸಂಜ್ಞೆ ಮಾಡಲು ಉಪಯೋಗವಾಗುವುದರಲ್ಲಿಯೂ ಸಹಾಯ ಮಾಡಬಲ್ಲವು. ಕಣ್ಣುಗಳ ರೆಪ್ಪೆಯ ಮೇಲ್ಭಾಗದಲ್ಲಿಯೂ ಬಿಳಿ ಮಚ್ಚೆಗಳು ಕಂಡುಬರುತ್ತವೆ. ಇವು ಹುಲಿಯಿಂದ ಹುಲಿಗೆ ಬೇರೆ ಇದ್ದು ಅವುಗಳನ್ನು ಗುರುತಿಸಲು ಸಹಾಯವಾಗುತ್ತವೆ. ಚುಕ್ಕೆಗಳಲ್ಲದೆ ದೇಹ ಹಾಗೂ ಕಾಲುಗಳ ಪಟ್ಟೆಗಳಲ್ಲಿಯೂ ವ್ಯತ್ಯಾಸ ಇರುತ್ತದೆ.

ಹುಲಿಯನಡಿಗೆಯದೇ ಒಂದುತೆರ

ಹುಲಿ ಅಂಗುಲಪಾದಿ. ಹಿಂಗಾಲು ಮುಂಗಾಲಿಗಿಂತ ಉದ್ದ. ಬೆರಳಡಿಯಲ್ಲಿ ಮೆತ್ತಗಿನ ಮಾಂಸದ ಮೆತ್ತೆ, ಬಲವಾದ ದಪ್ಪ ಪಂಜಗಳು. ಬೆರಳ ತುದಿಯಲ್ಲಿ ಚೂಪಾದ ಗಟ್ಟಿ ಉಗುರುಗಳು. ಹುಲಿ ಬೆರಳನ್ನು ನೆಲಕ್ಕೂರಿ ಸಪ್ಪಳವಿಲ್ಲದೆ ನಡೆಯುತ್ತದೆ. ಅದಕ್ಕೆ ಇಳಿಜಾರಿನಲ್ಲಿ ಇಳಿಯುವಾಗ ಸ್ವಲ್ಪ ತೊಂದರೆಯೆನಿಸುತ್ತದೆ. ಆದ್ದರಿಂದ ಹುಲಿಯ ಶೋಧನೆ ಮಾಡುವಾಗ ಗುಡ್ಡದ ಮೇಲ್ಭಾಗದಲ್ಲಿ ನೋಡದೆ ಇಳಿಜಾರಿನಲ್ಲಿ ನೋಡಬೇಕು. ಹುಲಿಯ ಆಕ್ರಮಣದ ವೇಗ ಅಪ್ರಮಾಣಭೂತವಾದುದು. ಕೃಷ್ಣಮೃಗದಂತೆ ಹುಲಿ ನಿಂತಹಾಗೆಯೇ ಜಿಗಿದು ಕ್ಷಣದಲ್ಲೇ ತನ್ನ ಪೂರ್ಣವೇಗದಲ್ಲಿ ಅಂದರೆ ಘಂಟೆಗೆ 60 ಕಿಲೋಮೀಟರ್ ವೇಗದಲ್ಲಿ ಚಲಿಸುವ ಸಾಮರ್ಥ್ಯ ಹೊಂದಿರುತ್ತದೆ. ಅದರ ಮುಂದಿನ ಕಾಲುಗಳು ಬಹಳ ಹರವಾಗಿದ್ದು ಅವುಗಳ ಪಂಜಗಳು ಹಿಂದಿನ ಕಾಲಿನವುಗಳಿಗಿಂತ ಧಾರ್ಢ್ಯವಾಗಿರುತ್ತವೆ. ಹೆಜ್ಜೆಗುರ್ತುಗಳನ್ನು ನೋಡಿ ನಡೆದುಹೋದ ಹುಲಿ ಗಂಡೋ ಅಥವಾ ಹೆಣ್ಣೋ ಎಂಬುದನ್ನು ಕಂಡುಹಿಡಿಯುವುದು ಅಷ್ಟೊಂದು ಕಷ್ಟದಾಯಕವಲ್ಲ. ಗಂಡು ಹುಲಿಯ ಹೆಜ್ಜೆ ಗುರ್ತುಗಳು ದೊಡ್ಡವಿದ್ದು ಕಾಲ್ಬೆರಳುಗಳು ದುಂಡಾಗಿರುತ್ತದೆ. ಹೆಣ್ಣು ಹುಲಿಯವು ತುಲನಾತ್ಮಕವಾಗಿ ಚಿಕ್ಕವಿದ್ದು ಕಾಲ್ಬೆರಳುಗಳು ದುಂಡಾಗಿರದೆ ಬಾದಾಮಿ (ಅಂಡಾಕೃತಿ) ಆಕೃತಿಯಂತೆ ಇರುತ್ತವೆ. ಗಂಡು ಹುಲಿ ಕಾಲ್ಬೆರಳಿನ ಗುರ್ತುಗಳು ದುಂಡಾಗಿರುವುದಲ್ಲದೆ ಅವುಗಳ ಮಟ್ಟ ಸಮನಾಗಿರುತ್ತವೆ. ಆದರೆ ಹೆಣ್ಣುಹುಲಿಯ ಕಾಲ್ಬೆರಳುಗಳ ಪೈಕಿ ಮಧ್ಯದ್ದು ಕೊಂಚ ಮುಂದೆ ಚಾಚಿರುತ್ತದೆ.

ಹುಲಿಯು ನಡೆಯುವಾಗ ಮುಂದಿನ ಹೆಜ್ಜೆಗಳನ್ನು ಎತ್ತಿ ಒಂದು ವಿಶಿಷ್ಟ 'ವರ್ತುಳಾಕಾರ ತೋಳಿನ' ರೀತಿಯಲ್ಲಿ ಬೀಸಿ ಮುಂದಿಡುತ್ತದೆ. ಹಿಂದಿನ ಕಾಲುಗಳನ್ನು ಒಳಗಿನಿಂದ ಚಲಿಸುತ್ತದೆ ಹಾಗೂ ಹಿಂದಿನ ಕಾಲುಗಳ ಪಂಜಗಳನ್ನು ಮುಂದಿನ ಪಂಜಗಳ ಗುರುತಿನಲ್ಲಿ ಇಟ್ಟು ಒಂದು ರೀತಿಯ ಅವಲಕ್ಷಣವಾಗಿ, ಆರಾಮಾಗಿ ನಡೆಯುವ ವೈಖರಿ ಹುಲಿಯದು. ಯಾವಾಗಲೂ ತನ್ನ ತಲೆಯನ್ನು ಕೆಳಗೆ ಮಾಡಿ ಚಲಿಸುವುದರಿಂದ ಹುಲಿಗೆ ಭೂಮಿಯ ಮುಖಾಂತರ ಇತರ ಪ್ರಾಣಿಗಳ ಓಡಾಟದ ಸದ್ದು ಗ್ರಹಿಸಲು ಸಾಧ್ಯವಾಗುತ್ತದೆ. ಹುಲಿಯು ವನ್ಯಪ್ರಾಣಿಗಳನ್ನು ತಕ್ಕಮಟ್ಟಿಗೆ ವಾಸನೆಯಿಂದಲೂ ಕಂಡುಹಿಡಿಯುತ್ತದೆ.


ಪಂಜದ ಹಿಮ್ಮಡದ ಮೂಳೆ ಎತ್ತರವಾಗಿದೆ. ಹಿಂಗಾಲಿನ ಹಿಮ್ಮಡದ ಮೂಳೆಯೂ ಎತ್ತರವಾಗಿದ್ದು ಪಾದದ ಕೀಲಿಗೆ ತಾಕಿದೆ ಮತ್ತು ಕಣಗಾಲಿನ ಮಾಂಸ ಖಂಡಕ್ಕೆ ಮೀಟುವ ದತ್ತುಕೋಲಿನಂತಿದೆ. ಹಿಂಗಾಲಿನ ಉದ್ದನೆಯ S ಆಕಾರದಂತಿರುವ ಕಮಾನು, ಬೆರಳು ಕಣಕಾಲು, ಮತ್ತು ಮಂಡಿಕೀಲು ಸೇರಿ ಕೊಳ್ಳೆಪ್ರಾಣಿಗಳ ಮೇಲೆ ಥಕ್ಕನೆ ಸ್ಪ್ರಿಂಗಿನಂತೆ ನೆಗೆಯಲು ಮತ್ತು ಒತ್ತಡದ ಒದೆ ಕೊಡಲು ಉಪಯುಕ್ತ

ವಾಗಿದೆ. ಹುಲಿಯು ನಡೆದುಹೋದ ಮಾರ್ಗದಲ್ಲಿ ಕೇವಲ ಕಾಲ್ಬೆರಳುಗಳ ಹಾಗೂ ದೊಡ್ಡ ಪಾದಗಳ ಗುರುತುಗಳು ಮಾತ್ರ ಮೂಡಿರುತ್ತವೆ. ಅದರ ಹಿಮ್ಮಡಗಳ



ಚಿತ್ರ 12: ಹುಲಿ ಹೆಜ್ಜೆಗುರುತುಗಳು

ಗುರುತುಗಳೇನೂ ಮೂಡಿರುವುದಿಲ್ಲ. ಇದಕ್ಕೆ ಕಾರಣವೆಂದರೆ ಹುಲಿಗಳು ತಮ್ಮ ಕಾಲ್ಬೆರಳುಗಳ ಮೇಲೆ ಚಲಿಸುತ್ತವೆ. ಈ ಚಲನೆಗೆ 'ಅಂಗುಲಪಾದಿ' (ಡಿಜಿಟಿಗ್ರೇಡ್) ಎಂದು ಕರೆಯುತ್ತಾರೆ. ಅಂಗಾಲು ಹಾಗೂ ಹಿಮ್ಮಡಗಳನ್ನು ನೆಲದಿಂದ ಮೇಲೆ ಏರಿಸಿದ್ದರ ಪರಿಣಾಮವಾಗಿ ಹುಲಿಯು ದೇಹದ ಸಮತೋಲನವನ್ನು ಬದಲಾಯಿಸಲು ಸಾಧ್ಯವಾಗುತ್ತದೆ. 'ಅಂಗುಲಪಾದ' ಚಲನವಲನದಿಂದ ಹೆಚ್ಚಿನ ವೇಗದಿಂದ ಓಡಲು ಹಾಗೂ ಜಿಗಿತದಲ್ಲಿ ಹೆಚ್ಚಿನ ಚಪಲತೆಯನ್ನು ಪಡೆದುಕೊಳ್ಳಲು ಹುಲಿಗೆ ಅನುಕೂಲವಾಗುತ್ತದೆ. ಹುಲಿಯ ಈ ಚಲನವಲನಕ್ಕೆ 'ಪ್ರೇತ ಹರಿಯುವ ಗತಿ' ಎಂದೂ ಕರೆಯುತ್ತಾರೆ. ಒಂದೊಂದು ಬದಿಯ ಕಾಲುಗಳು ಒಂದೇ ವೇಳೆಗೆ ಮುಂದೆ ಚಲಿಸುವುದರಿಂದ ಜಾರಿಸುಣುಚುವ ಚಲಿಸುವಿಕೆಯುಂಟಾಗುತ್ತದೆ. ಹುಲಿಯ ನಡಿಗೆ ಯಲ್ಲಿ ಇದು ಎದ್ದುಕಾಣುತ್ತದೆ. ಸಾಮಾನ್ಯವಾಗಿ ಹುಲಿಯು ನಡೆಯುವಾಗ ಇತರ ನಾಲ್ಕು ಕಾಲುಗಳ ಪ್ರಾಣಿಗಳಂತೆ ಎರಡು ಸಾಲುಗಳಲ್ಲಿ ಹೆಜ್ಜೆಯ ಗುರುತುಗಳನ್ನು ಮೂಡಿಸುತ್ತದೆ. ದೇಹದ ಮೇಲೆ ಸಂಪೂರ್ಣ ಹತೋಟಿ ಹೊಂದಿ, ಸ್ತಬ್ಧವಾಗಿ



ಚಿತ್ರ 13: ಬಿಳಿಹುಲಿಗಳು (ಗಂಡು ಮತ್ತು ಹೆಣ್ಣು)



ಚಿತ್ರ 14: ಬೇಟೆಪ್ರಾಣಿಯ ಕಾಲಿನೇಟು ತಪ್ಪಿಸಿಕೊಳ್ಳಲು, ಅದರ ಗಂಟಲನ್ನು ಕಚ್ಚಿದ ಹುಲಿ ಇನ್ನೊಂದು ಬದಿಗೆ ಜಿಗಿದಾಗ ಬಲಿಯ ಗೋಣು ಮುರಿಯುವುದು ಪ್ರಾಸಂಗಿಕ

ಹೊಂಚಿ, ಉದ್ದೇಶಪೂರ್ವಕವಾಗಿ ಬೇಟೆಯನ್ನು ಸಮೀಪಿಸುವಾಗ ಹುಲಿಗಳ ಪಾದಗಳು ಒಂದೇ ಸಾಲಿನಲ್ಲಿ ಗುರುತುಗಳನ್ನು ಮೂಡಿಸುತ್ತವೆ. ಸಾವಧಾನವಾಗಿ ಹೆಜ್ಜೆಹಾಕಿ, ಅಂಕುಡೊಂಕಾಗಿ ಜಾರಿ ಚಲಿಸಿ, ಹುಲಿ ಬೇಟೆಪ್ರಾಣಿಗಳ ಕಣ್ಣುತಪ್ಪಿಸಿ ಅವುಗಳನ್ನು ಸಮೀಪಿಸುವ ಸಾಮರ್ಥ್ಯವನ್ನು ಪಡೆದಿರುತ್ತದೆ. ಬೆಕ್ಕಿನ ಜಾತಿಯ ಪ್ರಾಣಿಗಳ ಕಾಲುಗಳು ಹಾಗೂ ಪಂಜಗಳು ಕಣ್ಣುತಪ್ಪಿಸಿ ಚಲಿಸುವುದಕ್ಕೂ, ಬಲಿಗಳನ್ನು ಹಿಡಿದು ಕೊಲ್ಲುವುದಕ್ಕೂ ಆಶ್ಚರ್ಯಾತೀತವಾಗಿ ಉಪಯೋಗವಾಗುತ್ತವೆ. ಹುಲಿಗಳು ಒತ್ತಾಯದ ಸಂದರ್ಭಾನುಸಾರ ಮರಗಳನ್ನೇರಲು ಅದರ ಅಂಟಿನಂತಿರುವ ಪಾದಗಳ ಮೆತ್ತೆಗಳು, ಕೋಶದಲ್ಲಿ ಸೇರುವ ಉಗುರುಗಳು ಹಾಗೂ ಅದರ ತಗ್ಗು ಮೈಕಟ್ಟು ಸಹಾಯ ಮಾಡುತ್ತವೆ.

ಹುಲಿಯನ್ನು ಕುರಿತ ಅಸಮಂಜಸ ಭಾವನೆ

ಹುಲಿ ನೈಸರ್ಗಿಕವಾಗಿ ಹಾಗೂ ಸಾಮಾನ್ಯ ಪರಿಸ್ಥಿತಿಯಲ್ಲಿ ಬೆಕ್ಕಿನ ವಂಶಕ್ಕೆ ಸಂಬಂಧಪಟ್ಟ ಬೇರೆ ಪ್ರಾಣಿಗಳಿಗಿಂತ ಸ್ವಭಾವತಹ ಅಂಜುಬುರುಕ ಪ್ರಾಣಿ. ಆದರೂ ಜನತೆಯ ಮನಸ್ಸಿನಲ್ಲಿ ಹುಲಿಗೆ ರೌದ್ರತೆಯ ಒಂದು ರೂಪಕೊಟ್ಟು ಅದು ದಯೆಯಿಲ್ಲದ ಕ್ರೂರ ಹಾಗೂ ತೊಂದರೆ ಕೊಡುವಂತಹ ಹಿಂಸ್ರಪ್ರಾಣಿ ಎಂಬ ಭಾವನೆ ಯುಂಟಾಗಿದೆ. ಆದರೆ ಇದು ಸಮಂಜಸವಲ್ಲ.

ಹುಲಿಗಳು ಕೆಲವು ವೇಳೆ ದನಗಳ ಮೇಲೆ, ಆಗಾಗ ಮನುಷ್ಯರ ಮೇಲೆ ಬೇಟೆಯಾಡುವುದಿಲ್ಲವೆಂದಲ್ಲ. ಆದರೆ ಅವು ದಾರಿ ತಪ್ಪಿ ಅಪರಾಧಿಯಾಗುವ ಸ್ಥಿತಿಗೆ ಹೋಗಬೇಕಾದರೆ ಮನುಷ್ಯನೇ ಸಂಪೂರ್ಣ ಜವಾಬ್ದಾರನು. ವನ್ಯಪ್ರಾಣಿಗಳನ್ನು ಕೊಂದು ಯಾವಾಗಲೂ ದುರ್ಲಾಭ ಪಡೆಯುವವನು ಮಾನವನೇ. ಹುಲಿಗಳ ನೈಸರ್ಗಿಕ ಬೇಟೆಯ ಪ್ರಾಣಿಗಳನ್ನು ಕಸಿದುಕೊಂಡು ಅದು ಬೇರೆಕಡೆ ತನ್ನ ಆಹಾರವನ್ನು ಹುಡುಕುವಂತೆ ಬಲಾತ್ಕಾರ ಪಡಿಸುವವನೂ ಮಾನವನೇ.

ಹುಲಿಯ ಅಂಜುಬುರುಕುತನ ಹೆಚ್ಚುಕಡಮೆ ಪ್ರತಿನಿತ್ಯ ಅದನ್ನು ನೋಡುವ ಅರಣ್ಯಖಾತೆಯ ಸಿಬ್ಬಂದಿ, ದನ ಹಾಗೂ ಕುರಿಗಾಯಿ ಮತ್ತು ಹಗಲೂ ರಾತ್ರಿ ಗಂಡಾಂತರದಲ್ಲಿ ಸಿಲುಕಿ ಯಾವುದೇ ರೀತಿಯ ರಕ್ಷಣೆ ಇಲ್ಲದೆ ಕಾಡಿನಲ್ಲಿ ಅಡ್ಡಾಡುವ ಹಳ್ಳಿಯವರಿಗೆ ಚೆನ್ನಾಗಿ ಅನುಭವವಾಗಿರುತ್ತದೆ. ಹುಲಿಯ ಗರ್ಜನೆ ಕೇಳಿಬರುವ ಅಂತರದಲ್ಲಿಯೇ ಕಾಡಿನಲ್ಲಿ ಅನೇಕ ಗುಡ್ಡಗಾಡು ಜನರು ವಾಸಿಸುತ್ತಾರೆ. ಅವರ ದನಗಳನ್ನು ಕದ್ದು ಎತ್ತಿಕೊಂಡು ಹುಲಿಗಳು ಹೋಗುವ ಪ್ರಸಂಗಗಳು ಅನೇಕ. ಮೃಗರಾಜನ ಈ ಶಕ್ತಿ ಗೊತ್ತಿದ್ದೂ ಸಾಮಾನ್ಯ ಹುಲಿಯ ಆಕ್ರಮಣಕ್ಕೆ ಎಂದೂ ಅವರು ಭಯಪಟ್ಟುಕೊಳ್ಳುವುದಿಲ್ಲ.

ಪ್ರತಿಯೊಂದು ವನ್ಯಪ್ರಾಣಿಯ ಮುಖ್ಯ ಪ್ರತಿಕ್ರಿಯೆಯೆಂದರೆ ಯಾವುದೇ ಸಮಯದಲ್ಲಿ ಮನುಷ್ಯ ಅವುಗಳ ಕಣ್ಣಿಗೆ ಬಿದ್ದರೆ ಅವನಿಗೆ ಮೊದಲು ಅನುವುಮಾಡಿ

ಕೊಡುವುದು. ಇದು ಪ್ರತಿಯೊಬ್ಬ ಶಿಕಾರಿಗೂ ಚೆನ್ನಾಗಿ ಗೊತ್ತಿದ್ದ ವಿಷಯ. ಆದ್ದರಿಂದ ವಾರಗಟ್ಟಲೆ ದಟ್ಟಕಾಡಿನಲ್ಲಿ ಮನುಷ್ಯ ಅಲೆದಾಡಿದಾಗ ಸಾಮಾನ್ಯವಾಗಿ ಕಾಡುಪ್ರಾಣಿಗಳು ಕಾಣಿಸಿಕೊಳ್ಳುವುದಿಲ್ಲ. ಒಂದು ವೇಳೆ ಕಾಣಿಸಿಕೊಂಡರೂ ಬಹಳ ಕ್ವಚಿತ್ತಾಗಿ. ಕಾಡಿನಲ್ಲಿ ಹುಲಿಗಳು ಹೆಚ್ಚಾಗಿರುವುದು ಗೊತ್ತಿದ್ದರೂ ಅವುಗಳನ್ನು ಸರಿಯಾಗಿ ವಿಶೇಷ ರೀತಿಯಲ್ಲಿ ಹುಡುಕಿ, ಕಂಡುಹಿಡಿಯಲು ಪ್ರಯತ್ನಿಸದಿದ್ದರೆ ಅವು ಕಾಣಿಸುವುದಿಲ್ಲ. ಅಕಸ್ಮಾತ್ ಮನುಷ್ಯನು ಹುಲಿಯ ಎದುರಿಗೆ ಹಾದು ಹೊರಟಾಗ ಅದರಲ್ಲಿಯೂ ಹಗಲಿನಲ್ಲಿ ಮನುಷ್ಯನು ಅವುಗಳನ್ನು ನೋಡುವ ಮೊದಲೇ ಅವು ಪರಾರಿಯಾಗಿರುತ್ತವೆ. ಇದಕ್ಕೆ ಕೆಲವು ಅಪವಾದಗಳಿವೆ. ಕೆಲವು ಸಂದರ್ಭಗಳಲ್ಲಿ ದುಷ್ಟಪ್ರವೃತ್ತಿಯ ಹುಲಿಯನ್ನು ಕಾಣಬಹುದು. ಅದು ನರಭಕ್ಷಕವಾಗಿರದಿದ್ದರೂ ನಿರಪರಾಧಿ ಮನುಷ್ಯನನ್ನು ಕೊಲ್ಲುವುದು ನಿಜ. ಆದರೆ ಅದು ಕೊಂದ ದೇಹವನ್ನು ತಿನ್ನದೆ ಅಲ್ಲಿಯೇ ಬಿಟ್ಟು ಹೊರಟುಹೋಗುತ್ತದೆ. ಪುನಃ ಆ ದೇಹದ ಹತ್ತಿರ ಹಿಂತಿರುಗಿ ಬರುವುದಿಲ್ಲ. ಏಕೆಂದರೆ ಮನುಷ್ಯ ಹುಲಿಯ ನೈಸರ್ಗಿಕ ಆಹಾರವಲ್ಲ.

ಹುಲಿ ಮುಂಜಾಗರೂಕತೆಯ ಪ್ರಾಣಿ

ಹುಲಿ ಅತಿ ಮುಂಜಾಗ್ರತೆಯುಳ್ಳ ಪ್ರಾಣಿ. ಅದು ಅನಾವಶ್ಯಕವಾಗಿ ಗಂಡಾಂತರಕ್ಕೆ ಗುರಿಯಾಗುವುದಿಲ್ಲ. ತಾನು ಕೊಂದಿಟ್ಟ ಪ್ರಾಣಿಯ ದೇಹವನ್ನು ಸಮೀಪಿಸುವಾಗ ಮೊದಲು ಕೂಲಂಕಷವಾಗಿ ಸುತ್ತಲಿನ ಪ್ರದೇಶವನ್ನು ಅವಲೋಕಿಸಿ ಯಾವುದೇ ಗಂಡಾಂತರವಿಲ್ಲವೆಂದು ಖಚಿತವಾದಾಗ ಮಾತ್ರ ತನ್ನ ರಸದೂಟವನ್ನು ಸೇವಿಸಲು ಸಾಹಸ ಮಾಡುತ್ತದೆ. ಸಂರಕ್ಷಣೆಯ ಸಂಪೂರ್ಣ ಭರವಸೆ ಇದ್ದರೂ, ಅದು ಕೊಂದ ದೇಹ ಇದ್ದಲ್ಲಿಯೇ ತಿನ್ನಲು ಪ್ರಾರಂಭಿಸುವುದು ಅತಿವಿರಳ. ಸಾಮಾನ್ಯವಾಗಿ ಬೇಳಿನ ಗಂಟಲನ್ನು ತನ್ನ ಬಾಯಿಂದ ಕಚ್ಚಿ ಹಿಡಿದು ಬೇರೆಕಡೆ ಎಳೆದುಕೊಂಡು ಹೋಗಿ ತಿನ್ನಲು ಪ್ರಾರಂಭಿಸುತ್ತದೆ. ಕೆಲವು ಬಹುದೂರ ಎಳೆದುಕೊಂಡು ಹೋಗಬಹುದು.

ಛಾಯೆಯಂತೆ ನುಣುಚಿಕೊಳ್ಳುವ ಸ್ವಭಾವ ಹುಲಿಯದು. ಈಗಾಗಲೇ ಹೇಳಿದಂತೆ ಅದು ತನ್ನ ತಲೆಯನ್ನು ಯಾವಾಗಲೂ ಭೂಮಿಗೆ ಹೊಂದಿ ತಗ್ಗಿಸಿ ನಡೆಯುತ್ತದೆ. ಅದು ಕೆಲವೊಂದು ಮಟ್ಟದ ಎತ್ತರಕ್ಕಿಂತ ಹೆಚ್ಚು ಮೇಲೆ ನೋಡುವುದಿಲ್ಲ. ಅತಿ ಕ್ವಚಿತ್ತಾಗಿ ಹಾಗೆ ಮಾಡುತ್ತದೆ. ಆದರೆ ಅದಕ್ಕೆ ಸಂಶಯ ಬಂದಾಗ, ವೈರಿಯನ್ನು ಅಟ್ಟಿಸಿಕೊಂಡು ಹೋಗುವಾಗ ಅಥವಾ ತಾನು ಕೊಂದಿಟ್ಟ ದೇಹವನ್ನು ಸಮೀಪಿಸುವಾಗ ಮೇಲೆ ನೋಡುವುದುಂಟು. ಮರದ ಮೇಲಿನ ಮಚಾನ ಅಥವಾ ಅಟ್ಟಣೆ ಹೆಚ್ಚು ಎತ್ತರದಲ್ಲಿಲ್ಲದಾಗ ಶಿಕಾರಿಗಳು ಹುಲಿಯ ಕಣ್ಣಿಗೆ ಬೀಳುವುದುಂಟು.

ಹುಲಿಯು ಶಿಕಾರಿಯನ್ನು ಕಂಡಾಗ ತಾನು ಅವನಿಗೆ ಕಂಡಿಲ್ಲವೆಂದು ಊಹಿಸಿ ಅವನಿಂದ ಯಾವುದೇ ಅಪಾಯ ಇರಲಿಕ್ಕಿಲ್ಲವೆಂದು ತಿಳಿದು ಹೆಚ್ಚಾಗಿ ತನ್ನಪಾಡಿಗೆ ತಾನು ಹೊರಟುಹೋಗುತ್ತದೆ. ಆದರೆ ಶಿಕಾರಿ ಅದನ್ನು ದಿಟ್ಟಿಸಿ ನೋಡುತ್ತಿದ್ದಂತೆ ಅವನು ಕುಚೇಷ್ಟೆ ಮಾಡುತ್ತಾನೆಂದು ಗ್ರಹಿಸಿ ಅವನ ಮೇಲೆ ಆಕ್ರಮಣ ಮಾಡಬಹುದು.

ಆದ್ದರಿಂದ ಕಾಡಿನಲ್ಲಿ ಹಠಾತ್ ಹುಲಿ ಕಂಡಾಗ ಯಾರೇ ಆಗಲಿ ಅದನ್ನು ನೆಟ್ಟದೃಷ್ಟಿ ಯಿಂದ ನೋಡದಿರುವುದು ಸೂಕ್ತ. ಮನುಷ್ಯ ನಿಶ್ಶಸ್ತ್ರನಿದ್ದಾಗ ಅದನ್ನು ನೋಡಿದರೂ ನೋಡದಂತೆ ನಟಿಸಿ, ಅದೇ ವೇಳೆಯಲ್ಲಿ ಓರೆಗಣ್ಣಿನಿಂದ ಅದರ ಉದ್ದೇಶದ ಚಲನವಲನ ಹಾಗೂ ಹಾವಭಾವಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸಬೇಕು. ಅದು ಹಿಂದಿನಿಂದ ಆಕ್ರಮಣ ಮಾಡುವ ಸಂಭವವಿರುತ್ತದೆ.

ಹುಲಿಯು ಜ್ಞಾನೇಂದ್ರಿಯಗಳದ್ದೇ ಒಂದು ಬಗೆ

ಶ್ರವಣ: ಚಲಿಸುವ ಪ್ರಾಣಿಗಳ ಹಾಗೂ ಮನುಷ್ಯನ ಕಿಂಚಿತ್ ಸಪ್ಪಳವನ್ನೂ ಅತಿ ದೂರದಿಂದಲೇ ತಿಳಿಯುವ ಸಾಮರ್ಥ್ಯವನ್ನು ಹುಲಿ ಹೊಂದಿದೆ. ಹುಲಿ ಕೇಳಿಸಿಕೊಳ್ಳುವ ಅತಿ ತೀಕ್ಷ್ಣ ಶ್ರವಣೇಂದ್ರಿಯಗಳನ್ನು ಹೊಂದಿದೆ. ಕಿವಿಯಲ್ಲಿಯ ಗೆಡ್ಡೆ 'ಬುಲ್ಲಾಟಿಂಪ್ಯಾನಿಯಾ' ಎಂಬ ಶ್ರವಣೇಂದ್ರಿಯ ಸಾಧನ ಬೆಕ್ಕಿನ ಜಾತಿಗೆ ಸೇರಿದ ಎಲ್ಲ ಪ್ರಾಣಿಗಳಿಗಿಂತ ಹುಲಿಯ ತಲೆಬುರುಡೆಯಲ್ಲಿ ಅತಿ ದೊಡ್ಡದಾಗಿರುತ್ತದೆ; ಮತ್ತು ಅದರಲ್ಲಿ ಅಂತರ್‌ಪರೆ ಇರುತ್ತದೆ; ಅಲಿಸ್ಫೀನಾಯಿಡಲ್ ನಾಳ ಅಲ್ಲಿಲ್ಲ. ಹುಲಿಯ ಶ್ರವಣೇಂದ್ರಿಯ ಬಹುಶಃ ಮನುಷ್ಯನ ಕಿವಿಗಿಂತ ಸಣ್ಣ ಪ್ರಮಾಣದಲ್ಲಿ ಸ್ವರ ಕೂಡಿಸಿದ್ದಾಗಿರಬೇಕು. ಮನುಷ್ಯನ ಕಿವಿ ಮಿನಿಟ್ಟಿಗೆ ಮೂವತ್ತರಿಂದ ಮೂವತ್ತು ಸಾವಿರ ಕಂಪನಗಳುಳ್ಳ ಸಪ್ಪಳದ ಕೇವಲ ಏಳು ಆಕ್ಟೇವ್‌ಗಳನ್ನು ಮಾತ್ರ ಗ್ರಹಿಸುತ್ತದೆ. ಆದರೆ ಹುಲಿ ಏಳು ಆಕ್ಟೇವ್‌ಗಳಿಗಿಂತ ಅತಿ ಹೆಚ್ಚು ಪ್ರಮಾಣದಲ್ಲಿ ಗ್ರಹಿಸುವ ಸಾಮರ್ಥ್ಯವನ್ನು ಹೊಂದಿದೆ.

ಗಡಚು ಸಪ್ಪಳ ಹುಲಿಯ ಕಿವಿಗೆ ಅಷ್ಟೊಂದು ಸರಿಯಾಗಿ ಕೇಳುವುದಿಲ್ಲ. ಮನುಷ್ಯನಿಗೆ ಸ್ಪಷ್ಟವಾಗಿ ಕೇಳದ ಧ್ವನಿಗಳು ಹುಲಿಯ ಶ್ರವಣೇಂದ್ರಿಯಕ್ಕೆ ಅತಿ ಸ್ಪಷ್ಟವಾಗಿ ಸರಿಯಾಗಿ ತಲುಪುತ್ತವೆ. ಉದಾ: ಕಿರಿಚುವ ಶಿಳ್ಳಿನಿಂದ ಕೂಡಿದ ಬಿರುಗಾಳಿಗೆ ಹುಲಿ ಯಾವುದೇ ಪ್ರತಿಕ್ರಿಯೆ ತೋರಿಸದಿದ್ದರೂ ಬೂಟಿನಲ್ಲಿಯ ಕಾಲ್ಬೆರಳನ್ನು ಮಡಚಿದಾಗ ಚರ್ಮದಲ್ಲಾದ ಕೇವಲ ಮಡಿಕೆ ತಕ್ಷಣ ಗಮನವನ್ನು ಸೆಳೆಯುತ್ತದೆ.

ಒಮ್ಮೆ ಒಬ್ಬ ಶಿಕಾರಿ ಮಚಾನದ ಮೇಲೆ ಕುಳಿತು ಪುಸ್ತಕ ಓದುತ್ತಿದ್ದ. ಹುಲಿ ತಾನು ಹಿಂದಿನ ದಿನ ಕೊಂದಿಟ್ಟ ಬೇಳಿನ ಹತ್ತಿರ ಬರಲೇ ಇಲ್ಲ. ಏಕೆಂದರೆ ಶಿಕಾರಿಯು ಪುಟಗಳನ್ನು ತಿರುಗಿಸುತ್ತಿದ್ದ ಸಪ್ಪಳ ಹುಲಿಗೆ ಕೇಳುತ್ತಿತ್ತು. ಹುಲಿ ಗಂಡಾಂತರಕ್ಕೊಳಗಾಗುವ ಬದಲು ತನ್ನ ಬೇಳನ್ನು ಬಿಟ್ಟುಕೊಟ್ಟು ಉಪವಾಸವಿರಲು ಸಿದ್ಧವಾಯಿತು. ಒಲೆ ಅಥವಾ ಬೋನುಗಳ ಬಗ್ಗೆ ಬೇರೆ ಪ್ರಾಣಿಗಳಿಗಿಂತ ಹೆಚ್ಚು ದಕ್ಷತೆ ಇಲ್ಲವೆ ಶಂಕೆಯನ್ನು ಅದು ಹೊಂದಿರುತ್ತದೆ. ಆದರೂ ಸ್ವಭಾವತಃ ಅಂಜುಬುರುಕುತನದಿಂದ ಕೆಲವು ಸಮಯ ಅದರ ದಕ್ಷತೆ ಎಂಬುದು ಮಾಯವಾಗಿ ಬಿಡುತ್ತದೆ.

ದೃಷ್ಟಿ: ಹುಲಿಯ ಕಣ್ಣುಗಳ ಬಗ್ಗೆ ಹೇಳುವುದಾದರೆ ಅದು ಎಲ್ಲ ಮಾಂಸಾಹಾರಿ ಪ್ರಾಣಿಗಳಿಗಿಂತ ಅಗಲವಾದ ಗೋಲಕಣ್ಣುಗಳನ್ನು ಪಡೆದಿರುತ್ತದೆ. ಕಣ್ಣಿನಲ್ಲಿದ್ದ,

ಚೆನ್ನಾಗಿ ವೃದ್ಧಿಹೊಂದಿದ ಸ್ನಾಯುಗಳು ಪ್ರಕಾಶಮಾನವಾದ ಬೆಳಕಿನಲ್ಲಿ ಕಣ್ಣಿನ ಗೊಂಬೆಯನ್ನು ಕುಗ್ಗಿಸುತ್ತವೆ ಹಾಗೂ ಮಿಂಚುವ ಪ್ರಕಾಶದಿಂದ ಅವುಗಳನ್ನು ರಕ್ಷಿಸುತ್ತವೆ. ಬೆಕ್ಕಿನ ಜಾತಿಯ ಇತರ ದೊಡ್ಡ ಪ್ರಾಣಿಗಳಂತೆ ಹುಲಿಯ ಕಣ್ಣುಗುಡ್ಡೆಗಳು ಸಂಪೂರ್ಣ ಕುಗ್ಗಿದಾಗಲೂ ತನ್ನ ವೃತ್ತಾಕಾರವನ್ನು ಉಳಿಸಿಕೊಳ್ಳುತ್ತವೆ. ಆದರೆ ಬೆಕ್ಕಿನಲ್ಲಿ ಕಣ್ಣುಗುಡ್ಡೆಗಳು ಸಂಪೂರ್ಣ ಹಿಗ್ಗಿದಾಗ ವೃತ್ತಾಕಾರದಿಂದ ಅಂಡಾಕೃತಿಯಾಗಿ ಮಾರ್ಪಡುತ್ತವೆ; ಸಂಪೂರ್ಣ ಕುಗ್ಗಿದಾಗ ಅವು ಎರಡೂ ಅಂಚಿನಲ್ಲಿ ರಂಧ್ರವುಳ್ಳ ನೇರ ಸೀಳು ಆಕಾರದಲ್ಲಿ ತೋರುತ್ತವೆ; ಆ ರಂಧ್ರಗಳ ಮುಖಾಂತರ ಬೆಳಕು ಒಳಗೆ ಸೇರುತ್ತದೆ. ಹುಲಿಯಲ್ಲಿ ಕಣ್ಣುಗೊಂಬೆಗಳು ಅತಿ ಸಣ್ಣ ವರ್ತುಳಾಕಾರದ ರಂಧ್ರದಷ್ಟು ಕುಗ್ಗುವುದುಂಟು. ಕತ್ತಲೆಯಲ್ಲಿ ಅದರ ಕಣ್ಣುಗೊಂಬೆಗಳು ಸಾಧ್ಯವಾದಷ್ಟು ಹೆಚ್ಚು ಬೆಳಕನ್ನು ಒಳಗೆ ಸೇರಿಸಲು ವಿಸ್ತರಿಸಲ್ಪಡುತ್ತವೆ. ಹುಲಿಯ ಕಣ್ಣುಗಳು ಕತ್ತಲೆಯಲ್ಲಿ ಕೆಲಸಮಾಡುವಂತೆ ಮೇಳ ಹೊಂದಿದ್ದು ರಾತ್ರಿಯಲ್ಲಿಯ ಬೇಟೆಪ್ರಾಣಿಗಳ ಚಲನವಲನಗಳನ್ನು ಶೀಘ್ರವಾಗಿ ಕಂಡುಹಿಡಿಯುವ ಸಾಮರ್ಥ್ಯವನ್ನು ಪಡೆದಿರುತ್ತವೆ. ಹುಲಿ ಬೇಟೆಯಾಡುವಾಗ ಹೆಚ್ಚಾಗಿ ತನ್ನ ದೃಷ್ಟಿ ಹಾಗೂ ಶ್ರವಣದ ಮೇಲೆ ಅವಲಂಬನ ಹೊಂದಿದ್ದು ವಾಸನೆಯ ಮೇಲೆ ಅಷ್ಟೊಂದು ಅವಲಂಬನ ಹೊಂದಿರುವುದಿಲ್ಲ. ರಾತ್ರಿಯಲ್ಲಿ ಕಣ್ಣುಗಳು ಪ್ರಕಾಶವನ್ನು ಪ್ರತಿಬಿಂಬಿಸಿ ಎರಡು ದೊಡ್ಡ ಮಿನುಗುವ ಹಸುರು ಬೆರೆತ ಹಳದಿ ಅಥವಾ ಪಚ್ಚೆವಜ್ರದ ಬಣ್ಣದ ಗೋಲಗಳಂತೆ ತೋರುತ್ತವೆ. ವಿದ್ಯುತ್ತಿನ ಬೆಳಕಿನಲ್ಲಿ ಗಾಢ ಕಂದು ಅಥವಾ ಅಂಬರ್ ಬಣ್ಣದಿಂದ ಕೂಡಿ ಪ್ರಜ್ವಲಿಸುತ್ತವೆ.

ವಾಸನೆ: ತೋಳ, ನರಿ ಅಥವಾ ನಾಯಿಗಳು ವಾಸನೆ ಕಂಡುಹಿಡಿಯುವಷ್ಟು ಹುಲಿಯ ಘ್ರಾಣೇಂದ್ರಿಯ ತೀಕ್ಷ್ಣವಾಗಿರುವುದಿಲ್ಲ. ಅದರ ಮೂಗಿನ ಎರಡೂ ಬದಿಗೆ ಇರುವ ಉದ್ದವಾದ ಮೀಸೆಗಳು ವಾಸನೆ ಕಂಡುಹಿಡಿಯುವುದಕ್ಕೆ ನೆರವು ನೀಡುತ್ತವೆ. ಮೀಸೆಕೂದಲು ಗಟ್ಟಿ ಹಾಗೂ ಬಿಳುಪಾಗಿದ್ದು 6 ಅಂಗುಲ (15 ಸೆಂಮಿ) ಉದ್ದವಾಗಿರುತ್ತವೆ. ಕೆನ್ನೆ, ಗಡ್ಡ ಮತ್ತು ಕಣ್ಣುಗಳ ಮೇಲೂ ಈ ಮೀಸೆ ಕೂದಲುಗಳು ಕಂಡುಬರುತ್ತವೆ. ಅವು ಸ್ಪರ್ಶಾಂಗದಂತೆ ಕೆಲಸ ಮಾಡುತ್ತವೆ ಮತ್ತು ಹುಲಿಯ ಹಾವಭಾವಕ್ಕನುಗುಣವಾಗಿ ಚಲಿಸುತ್ತವೆ. ಇವು ಸೌಮ್ಯ ಸ್ಥಿತಿಯಲ್ಲಿ ಕೆಳಗೆ ಬಾಗಿರುತ್ತವೆ, ಉದ್ರೇಕಗೊಂಡಾಗ ನಿಮಿರುತ್ತವೆ. ಹುಲಿಯ ಬಡವಾದ ಘ್ರಾಣೇಂದ್ರಿಯದ ಕುಂದನ್ನು ಚುರುಕಾದ ಕರಣ ಹಾಗೂ ಅದ್ಭುತ ದೃಷ್ಟಿಯ ಇಂದ್ರಿಯಗಳು ತುಂಬಿ ಕೊಡುತ್ತವೆ. ಆದ್ದರಿಂದಲೇ ಕೊಂದಿಟ್ಟ ಪ್ರಾಣಿಯ ದೇಹದ ಸುತ್ತಲೂ ಯಾರಾದರೂ ಅಕ್ರಮ ಪ್ರವೇಶ ಮಾಡಿದವರು ಇದ್ದಾರೆಯೇ ಎಂಬುದನ್ನು ಕಂಡುಹಿಡಿಯಲು ಹುಲಿ ವೈಚಾರಿಕವಾಗಿ, ಗಟ್ಟಿಯಾಗಿ ಮೂಸಿನೋಡುತ್ತದೆ ಎಂದು ಅನೇಕ ಬೇಟೆಗಾರರು ಅಭಿಪ್ರಾಯಪಟ್ಟಿದ್ದಾರೆ (ಹುಲಿಯ ಮೂಗು ಬಡವಾಗಿರುವುದರಿಂದ ಅದನ್ನು ಆಕರ್ಷಿಸಲು ಬಲಿ ಪ್ರಾಣಿಗಳ ಕೊರಳಿಗೆ ಗಂಟೆ ಕಟ್ಟುವುದುಂಟು). ಹುಲಿಯ ಮುಂದಿನ ಕಾಲುಗಳ ಮೇಲೆ ಕಂಡುಬರುವ ಗೆಡ್ಡೆಯ ಮೇಲೆ ಉಬ್ಬಿನಂತಿರುವ ಕೂದಲು ಕೂಡ

ಮೂಗಿಗೆ ಪರಿಶಿಷ್ಟವಾಗಿ ವಾಸನೆ ಕಂಡುಹಿಡಿಯಲು ಉಪಯೋಗವಾಗುತ್ತದೆ. 'ಹುಲಿಯ ಘ್ರಾಣೇಂದ್ರಿಯ ತನ್ನ ಕಿವಿಯಷ್ಟು ತೀಕ್ಷ್ಣವಿದ್ದಿದ್ದರೆ ಈ ಭೂಮಿಯ ಮೇಲೆ ಬೇರಾವ ಪ್ರಾಣಿಗಳಿರದೆ ಬರೀ ಹುಲಿಗಳೇ ಕಾಣಿಸಿಕೊಳ್ಳಬಹುದಿತ್ತು" ಎಂದು ಕಾಡಿನ ಜನ ಹೇಳುತ್ತಾರೆ. ಹುಲಿಯ ಶ್ರವಣ, ದೃಷ್ಟಿ ಮತ್ತು ವಾಸನೆಯ ಪ್ರಯೋಜನೀಯ ಪ್ರಮಾಣ 7 : 5 : 3 ಎಂದು ಗಣಿಸಬಹುದು.

ನಾಲಿಗೆ: ಹುಲಿಯ ನಾಲಿಗೆ ಬ್ಲೇಡಿನಂತೆ ತೆಳುವಾಗಿ, ಉಸುಕಿನ ಕಾಗದದಂತೆ ಒರಟಾಗಿದ್ದು, ಎರಡು ತೆರನಾಗಿ ಉಪಯೋಗವಾಗುತ್ತದೆ. ಮೂಳೆಗಳಿಂದ ಮಾಂಸವನ್ನು ಬಿಡಿಸಿಕೊಳ್ಳಲಿಕ್ಕೂ, ಮೂಳೆಗಳನ್ನು ಸ್ವಚ್ಛವಾಗಿ ನೆಕ್ಕುವುದಕ್ಕೂ ಉಪಯೋಗಿಸಲ್ಪಡುತ್ತದೆ. ರುಚಿಯ ಗ್ರಂಥಿಗಳು ಅತಿ ಚಿಕ್ಕವಿದ್ದು ನಾಲಿಗೆಯ ಎರಡೂ ಅಂಚುಗಳಲ್ಲಿ ಇರುತ್ತವೆ. ಹುಲಿಗಳು ಮಾಂಸದ ತುಣುಕುಗಳನ್ನು ಹಾಗೆಯೇ ನುಂಗುವುದರಿಂದ ಅವುಗಳಲ್ಲಿ ರುಚಿಗೆ ಅಷ್ಟೊಂದು ಮಹತ್ವ ಇರುವುದಿಲ್ಲ. ಉದ್ದನೆಯ ನಾಲಿಗೆಯ ತುಂಬ ಗಡುಸಾಗಿರುವ ಕವಚವುಳ್ಳ ಬುಗುರಿ ರೂಪದ ಮೊನಚಿನ ಕೋಶಗಳು ಹೊಂದಿಕೊಂಡಿರುತ್ತವೆ. ಆದ್ದರಿಂದ ಅದು ಮರಳಿನ ಕಾಗದದಂತೆ ಒರಟಾಗಿರುತ್ತದೆ. ಹುಲಿಯ ನಾಲಿಗೆ ತನ್ನ ದೇಹ ಹಾಗೂ ಅಂಗಾಂಗಗಳನ್ನು ಮಾರ್ಜನ ಮಾಡಿಕೊಳ್ಳಲಿಕ್ಕೂ ಉಪಯೋಗವಾಗುತ್ತದೆ.

ಹುಲಿಯ ಹೋಲಿಕೆ ಬೆಕ್ಕಿನಂತೆಯೇ

ಹುಲಿಯು ಎಲ್ಲ ವಿಧದಲ್ಲಿಯೂ ಬೆಕ್ಕನ್ನು ಹೋಲುತ್ತದೆ. ಆದರೆ ಆಕಾರದಲ್ಲಿ ಮಾತ್ರ ದೊಡ್ಡದು. ನೀಳ, ಸ್ನಾಯುಕಟ್ಟಿನ ದೇಹ, ನಾಜೂಕತೆ, ಲಾವಣ್ಯ, ಮಾಂಸಕ್ಕಾಗಿ ಲಾಲಸೆ, ರಹಸ್ಯಮಯ (ನುಸುಳಿಕೊಳ್ಳುವ) ನಡಿಗೆ, ಹಗಲಲ್ಲಿ ಮಲಗಿ ರಾತ್ರಿಯಲ್ಲಿ ಬೇಟೆಯಾಡುವ ಸ್ವಭಾವ, ಬ್ಲೇಡಿನಷ್ಟೇ ದಪ್ಪನಾಲಿಗೆ, ತೀಕ್ಷ್ಣ ಶ್ರವಣ, ಮೆತ್ತಗಿನ ಕಾಲ್ಬೆರಳು, ದಪ್ಪಬಿಳಿ ಮೀಸೆ, ಅದರ ತೀಕ್ಷ್ಣ ಕಣ್ಣು, ವಕ್ರತ್ವ, ನಾಲಿಗೆಯಿಂದ ನೆಕ್ಕಿ ಮೈಸ್ವಚ್ಛಮಾಡಿಕೊಳ್ಳುವಿಕೆ, ಆಕ್ರಮಣದಲ್ಲಿಯ ಚಪಲತೆ ಇವೆಲ್ಲ ಹುಲಿಯ ಗುಣಗಳು ಬೆಕ್ಕಿನಂತೆಯೇ ಇರುತ್ತವೆ.

ಬೆಕ್ಕು ಮರ ಏರುವುದೊಂದನ್ನು ಹೊರತು ಉಳಿದೆಲ್ಲ ಕಲೆಗಳನ್ನು ಹುಲಿಗೆ ಕಲಿಸಿಕೊಟ್ಟಿದೆ ಎಂದು ಹೇಳುವುದು ರೂಢಿ. ಚಿರತೆಯಷ್ಟು ಸುಲಭವಾಗಿ ಹುಲಿ ಮರವೇರದಿದ್ದರೂ ಪ್ರಸಂಗ ಬಂದರೆ ಅದು ಹಿಂಜರಿಯುವುದಿಲ್ಲ. ಮೈಸೂರು ಮೃಗಾಲಯದಲ್ಲಿ ಹುಲಿ ಮರವೇರಿ ಸುಮಾರು 25 ಅಡಿ ಎತ್ತರದಲ್ಲಿ ಕುಳಿತುಕೊಳ್ಳುತ್ತಿದ್ದ ದಾಖಲೆ ಇದೆ. ಅಕಸ್ಮಾತ್ ನದಿಗಳು ಮಹಾಪೂರ ಬಂದಾಗ ಹುಲಿಗಳು ಮರಗಳನ್ನೇರಿ ಅಪಾಯದಿಂದ ಪಾರಾದ ಅನೇಕ ಸಾಕ್ಷಿಗಳಿವೆ. ಕ್ರಿ.ಶ. 1969ರಲ್ಲಿ ಬಂಗ್ಲಾದೇಶದಲ್ಲಿ ಬಿರುಗಾಳಿಯಿಂದುಂಟಾದ ಮಹಾಪೂರದಿಂದ ಸುಂದರಬನದಲ್ಲಿ ಸಿಕ್ಕಿಬಿದ್ದ ಹುಲಿಗಳು ಮರವೇರಿ ಅಪಾಯದಿಂದ ಪಾರಾದವು. ಕೆಲವು ಮುಳುಗಿ ಕೊಲ್ಲಲ್ಪಟ್ಟವು.

ಎಲ್ಲ ಬೆಕ್ಕಿನ ಜಾತಿಯ ಪ್ರಾಣಿಗಳು ಸ್ವಚ್ಛತೆಗೆ ಪ್ರಾಮುಖ್ಯತೆಯನ್ನು ಕೊಡುತ್ತವೆ. ಹುಲಿ ದಿನದ ಹೆಚ್ಚಿನ ವೇಳೆಯಲ್ಲಿ ತನ್ನ ಮೈ ನೆಕ್ಕಿ ಸ್ವಚ್ಛಮಾಡಿಕೊಳ್ಳುವುದರಲ್ಲಿ ವಿನಿಯೋಗಿಸುತ್ತದೆ. ತನ್ನ ಮೈ ಯಾವುದೇ ವಾಸನೆಯಿಂದ ವಿಮುಕ್ತ ಇದ್ದಾಗ ಮಾತ್ರ ಅದು ವಿಶ್ವಾಸದಿಂದ ಬೇಟೆಯಾಡಬಲ್ಲದು.

ಹುಲಿ ಒಂದೆರಡು ಘಂಟೆಗಳಿಗಿಂತ ಹೆಚ್ಚಾಗಿ ಗಾಢವಾಗಿ ನಿದ್ರೆಮಾಡುವುದಿಲ್ಲ. ಅದು ಹಗಲಿನ ಹೆಚ್ಚು ಸಮಯವನ್ನು ಕಣ್ಣುಮುಚ್ಚಿ ಮುಂಗಾಲುಗಳ ಮೇಲೆ ತಲೆ ಇಟ್ಟು ಮಲಗಿಯೇ ಕಳೆಯುತ್ತದೆ. ಆದರೆ ಇಂತಹ ಪ್ರಸಂಗಗಳು ಅಸಾಮಾನ್ಯ. ಸಾಮಾನ್ಯವಾಗಿ ಸಾಯಂಕಾಲದ ಮಸಕು ಆಗುವ ಸಮಯಕ್ಕೆ ಹೊರಬೀಳುತ್ತದೆ. ಶಿಕಾರಿಗೆ ತನ್ನ ಅಂಗೈಯಲ್ಲಿಯ ಗೆರೆಗಳು ಕಾಣವಂತಾಗುವ ಸಮಯಕ್ಕೆ ಹುಲಿ ಅವನ ಕಣ್ಣಿಗೆ ಬೀಳುವುದುಂಟು.

ಹುಲಿಗೆ ಎತ್ತರದ ಪ್ರದೇಶವೆಂದರೆ ತುಂಬ ಇಷ್ಟ. ಅದು ಯಾವುದೇ ಪ್ರದೇಶದಲ್ಲಿದ್ದರೂ ಅಲ್ಲಿರುವ ಅತಿ ಎತ್ತರವಾದ ಸ್ಥಾನವನ್ನು ಚುನಾಯಿಸಿಕೊಂಡೇ ವಿಶ್ರಮಿಸುವುದು ಅಥವಾ ಅಲೆದಾಡುವುದು ಅದರ ವಿಶೇಷ ಸ್ವಭಾವ. ಕೆಲವು ಕಾಡುಗಳಲ್ಲಿ ಎತ್ತರವಾದ ಕಲ್ಲುಬಂಡೆಗಳ ಮೇಲೆ ಹೊರಳಾಡುತ್ತ ಬೆಳಗಿನ ಹಾಗೂ ಸಾಯಂಕಾಲದ ಬಿಸಿಲು ಕಾಸುತ್ತಿರುತ್ತವೆ.

ಹುಲಿಯು ಸಭ್ಯಪ್ರಾಣಿ: ನಿಶ್ಶಬ್ದ ಹಾಗೂ ನಿರ್ಜನ ಪ್ರದೇಶದ ಆಶ್ರಯ, ತಲೆ ತಗ್ಗಿಸಿ ನಡೆಯುವಿಕೆ, ಕಿಂಚಿತ್ ಸಪ್ಪಳ ಮಾತ್ರಕ್ಕೆ ಹಿಮ್ಮೆಟ್ಟುವಿಕೆ, ಬೆಳಕು ಹಾಗೂ ಮನುಷ್ಯ ಶಬ್ದಕ್ಕೆ ಅಥವಾ ಗಲಾಟೆಗೆ ಹೇವರಿಕೆ, ಈ ಗುಣಗಳಿಂದಾಗಿ ಹುಲಿಯನ್ನು 'ಸಭ್ಯಗ್ರಸ್ತಪ್ರಾಣಿ' ಎಂದು ಕರೆಯಬಹುದು. ಮರಿಗಳೊಂದಿಗೆ ಇದ್ದು ಅವುಗಳನ್ನು ಸಂರಕ್ಷಿಸುತ್ತಿರುವ ಹೆಣ್ಣುಹುಲಿ ಅಥವಾ ಗಾಯಗೊಂಡ ಹುಲಿಗಳನ್ನು ಬಿಟ್ಟರೆ ಇದುವರೆಗೂ ವಿನಾಕಾರಣ ಮನುಷ್ಯನ ಮೇಲೆ ಎರಗಿಬಿದ್ದ ಹುಲಿಯ ಬಗ್ಗೆ ದಾಖಲೆಗಳಿಲ್ಲ.

ಹುಲಿ ವಿನಾಕಾರಣ ಕಾದಾಡುವ ಗೋಜಿಗೆ ಹೋಗುವುದಿಲ್ಲ. ಪ್ರಸಂಗ ಬಂದರೆ ಹಿಮ್ಮೆಟ್ಟದೆ ಕಾದಾಡುತ್ತದೆ. ಒಮ್ಮೆ ಕಾಡುಹಂದಿಯ ಸಂಗಡ ಕಾದಾಡಿದಾಗ ಹುಲಿಯ ಹೊಟ್ಟೆಯ ಕರುಳು ಹೊರಗೆ ನೇತಾಡುತ್ತಿತ್ತಂತೆ. ಉತ್ತರ ಪ್ರದೇಶದ ಪಿಲಿಬಿಟ್‌ನಲ್ಲಿ ಒಂದು ಬತ್ತಿದ ಹಳ್ಳದಲ್ಲಿ ಎರಡು ಹುಲಿಗಳು ಸೇರಿ ಒಂದು ಗಂಡಾನೆಯ ಮೇಲೆ ದಾಳಿನಡೆಸಿ ಗಾಯಗೊಳಿಸಿ ಕೊಂದವಲ್ಲದೆ ಕಾದಾಟದಲ್ಲಿ ಹುಲಿಗಳೂ ಕೂಡ ಸತ್ತಿದ್ದ ಬಗ್ಗೆ ಚತುರ್ವೇದಿ ಉಲ್ಲೇಖಿಸಿದ್ದಾರೆ.

ಕೆಲವು ಶಿಕಾರಿಗಳು ನರಿಗಿಂತಲೂ ಹುಲಿ ಪುಕ್ಕಲು ಎಂದು ಹೇಳುತ್ತಾರೆ. ಗಾಯಗೊಳಿಸಲ್ಪಟ್ಟಾಗ ಮಾತ್ರ ಹುಲಿ ಹುಲಿಯಾಗಿ ವರ್ತಿಸುತ್ತದೆ. ಇಲ್ಲವಾದರೆ ಕೇವಲ ದನಗಾಯಿಗಳ ಕೂಗಾಟದಿಂದ ಅದನ್ನು ಕಾಲ್ತೆಗೆಸಬಹುದು.

ಕಾಡಿನ ಇತರ ಪ್ರಾಣಿಗಳು ಬಹಳ ಗಟ್ಟಿ ಎಂದು ಹೇಳಬಹುದು. ಹುಲಿಯನ್ನು ನೋಡುತ್ತಿದ್ದಂತೆ ಅಥವಾ ಅದರ ವಾಸನೆ ತಾಗುತ್ತಿದ್ದಂತೆ ಅವು ಅಡಗಿಕೊಂಡಿದ್ದ ಸ್ಥಳದಿಂದ ಮೈದಾನಕ್ಕೆ ಬಂದು ಕೂಗಿ ಒಂದಕ್ಕೊಂದು ಅಪಾಯದ ಎಚ್ಚರಿಕೆ ನೀಡುತ್ತವೆ. ಕೆಲವು ಪ್ರಾಣಿಗಳು ಮೇಯುವುದನ್ನು ನಿಲ್ಲಿಸಿ ಹುಲಿಯನ್ನೇ ದಿಟ್ಟಿಸಿನೋಡುತ್ತ ನಿಂತು ಹುಲಿ ಗತ್ಯಂತರವಿಲ್ಲದೆ ಬೇರೆ ದಾರಿ ಹಿಡಿಯುವವರೆಗೆ ಕೂಗುತ್ತಿರುತ್ತವೆ. ಅಪಾಯದಿಂದ ಪಾರಾದನಂತರವೇ ಇತರ ವನ್ಯಮೃಗಗಳು ಪುನಃ ಮೇಯಲು ಪ್ರಾರಂಭಿಸುತ್ತವೆ. ದೊಡ್ಡ ಪ್ರಾಣಿಗಳೇ ಏಕೆ, ಪಕ್ಷಿಗಳಾದ ನವಿಲು, ಕಾಡುಕೋಳಿ ಹಾಗೂ ಇತರ ಪಕ್ಷಿಗಳು ಹುಲಿ ತಲುಪಲಾರದಷ್ಟು ಎತ್ತರದ ಮರಗಳಲ್ಲಿದ್ದರೂ ಅದು ಸಮೀಪಿಸುವುದನ್ನು ಕಂಡಾಗ ಅತಿ ಹೆಚ್ಚು ಉದ್ರೇಕಗೊಂಡು ಕೇಕಾರವ ಹಾಕುತ್ತವೆ. ಲಾಂಗೂಲ ಮಂಗಗಳೂ ಸಹ ಹುಲಿಯನ್ನು ಕಂಡಾಗ ಮರದ ತುದಿಗೆ ಹೋಗಿ ಆಕಾಶ ತಲುಪುವಷ್ಟು ಕೂಗಾಟ ಹಾಕುತ್ತವೆ. ಅನೇಕ ಪಕ್ಷಿಗಳು ಹಾಗೂ ಪ್ರಾಣಿಗಳು ತಮ್ಮ ಮಧ್ಯ ಹುಲಿಯನ್ನು ಕಂಡಾಗ ಕೂಗಾಟ ಮತ್ತು ಕೇಕಾರವ ಹಾಕುತ್ತವೆಯಲ್ಲದೆ ಸಾಮಾನ್ಯವಾಗಿ ಸ್ಥಳಬಿಟ್ಟು ಪಲಾಯನ ಮಾಡದೇ ಇರುವುದು ಅತಿ ಸ್ವಾರಸ್ಯಮಯ ವಿಷಯ. ಹೆಚ್ಚಾಗಿ ಹುಲಿಯೇ ಅಲ್ಲಿಂದ ಕಾಲ್ತೆಗೆಯುತ್ತದೆ. ಈ ರೀತಿಯ ಪಶುಪಕ್ಷಿಗಳ ಕೂಗಾಟದಿಂದ ಯಾವುದೋ ಮಾಂಸಾಹಾರಿ ಪ್ರಾಣಿಯ ಅಲೆದಾಟ ಪ್ರಾರಂಭವಾಗಿದೆಯೆಂದು ಶಿಕಾರಿಗಳಿಗೆ ಗೊತ್ತಾಗುತ್ತದೆ.

ಕೆಲವು ಕಾರಣಗಳಿಂದ ಹುಲಿ ನರಿಗಳಿಗೆ ಹೆದರುತ್ತದೆ. ಆದರೂ ಹುಲಿಯು ನರಿಯನ್ನು ಕೊಂದಬಗ್ಗೆ ಎಲ್ಲಿಯೂ ಉಲ್ಲೇಖವಿಲ್ಲ. ನರಿಗಳೂ ಕೂಡ ಕೆಲವೊಮ್ಮೆ ಹತ್ತರಿಂದ ಇಪ್ಪತ್ತರವರೆಗೆ ಹಿಂಡುಗಳಲ್ಲಿ ಅಲೆದಾಡುತ್ತವೆ. ಹುಲಿ ಕೊಂದುತಿನ್ನುವ ಆಹಾರದಲ್ಲಿ ಆಗಾಗ ಒಂಟಿ ನರಿ ಪಾಲನ್ನು ಬಯಸುವುದುಂಟು. ನರಿ ಕೂಗುವುದರಿಂದ ಹುಲಿಗೆ ಬೇಟೆಯಾಡಲು ಮಾರ್ಗ ತೋರಿಸುತ್ತದೆ ಎಂಬುದು ಈಗಲೂ ಹಳ್ಳಿಯ ಜನರಲ್ಲಿ ನಂಬಿಕೆ ಇದೆ. ಆದರೆ ನರಿಗಳು ಹುಲಿಗೆ ಸಹಾಯ ಮಾಡದೆ ಅದು ಕೊಂದು ಬಚ್ಚಿಟ್ಟಿದ್ದ ಬೀಳುಗಳನ್ನು ಹುಡುಕಿ ತಿನ್ನಲು ಹೇಸುವುದಿಲ್ಲ.

ಹಗಲಿನ ತೀಕ್ಷ್ಣ ಪ್ರಕಾಶ, ಬಿಸಿಲು ಹಾಗೂ ಬೇಟೆಪ್ರಾಣಿಗಳ ಮುನ್ನೆಚ್ಚರಿಕೆಗಳಿಂದ ಹುಲಿಗೆ ರಾತ್ರಿಯಲ್ಲಿ ಬೇಟೆಯಾಡದೆ ಗತ್ಯಂತರವಿಲ್ಲ. ಮಲಯಾ ನಡುಗಡ್ಡೆಯ ದಟ್ಟಕಾಡಿನಲ್ಲಿ ಮಸುಕು ಬೆಳಕಿನಲ್ಲಿ ಹುಲಿಗಳು ಹಗಲಿನಲ್ಲಿಯೂ ಬೇಟೆಯಾಡುತ್ತವೆ. ಏನಾದರೂ ನಿರೀಕ್ಷಿಸುತ್ತಿದ್ದಾಗ ಹುಲಿ ತನ್ನ ಬಾಲವನ್ನು ಬಲಗಡೆಯಿಂದ ಬೀಸಾಡುತ್ತಿರುತ್ತದೆ. ಕೆಲವೊಂದು ಸಮಯ ಬೇಟೆಪ್ರಾಣಿಗಳಿಗೆಂದು ಹೊಂಚುಹಾಕಿ ಕುಳಿತಾಗ ಹುಲಿಯ ಕಿವಿಗಳ ಹಾಗೂ ಬಾಲದ ಚಲನವಲನೆಯಿಂದ ಅಡಗಿದ ಗುಟ್ಟು ಬಯಲಾಗಬಹುದು. ಅದು ಸಿಟ್ಟಿಗೆದ್ದಾಗ ಅಥವಾ ಆಶ್ಚರ್ಯಚಕಿತವಾದಾಗ ಅಥವಾ ಹೆಚ್ಚು ಸಂತೋಷಪಟ್ಟಾಗ ಅದರ ಬಾಲ ಸೆಟೆದು ನಿಲ್ಲುತ್ತದೆ.

ಹುಲಿಯು ಹೊಂಚಿಸದೇ ಒಂದು ಭಂಗಿ

ಕಾಡಿನಲ್ಲಿ ಹುಲಿ ಹೊಂಚುಹಾಕಿ ಬೇಟೆಗಳನ್ನು ಹಿಡಿದು ಕೊಲ್ಲುವುದನ್ನು ವೀಕ್ಷಿಸುವುದು ಅತಿ ಭಾವೋದ್ರೇಕಗೊಳಿಸುವಂತಹ ಮನೋಹರ ದೃಶ್ಯ. ಬೇಟೆಪ್ರಾಣಿಯನ್ನು

ಅತಿ ಜಾಗರೂಕತೆಯಿಂದ ದಿಟ್ಟಿಸಿ ನೋಡುತ್ತ ದೇಹವನ್ನು ಬಿಗುವಿನಲ್ಲಿಟ್ಟುಕೊಂಡು ಒಂದು ಬಾರಿಗೆ ಒಂದೇ ಹೆಜ್ಜೆ ಮುಂದಿಡುತ್ತಿದ್ದಂತೆ ಬಾಲವನ್ನಾಡಿಸುತ್ತಿರುತ್ತದೆ. ಬೇಟೆ ಪ್ರಾಣಿ ತಲೆಎತ್ತಿದಾಗ ಹುಲಿ ತಕ್ಷಣ ಅಡಗಿ ಅದು ಮೇಯಲು ಪುನಃ ಪ್ರಾರಂಭಿಸುವವರೆಗೆ ಈ ಸ್ಥಿತಿಯಲ್ಲಿ ಇರುತ್ತದೆ. ನಂತರ ಅದು ಯಾವುದೇ ಚಲನವಲನ ಮಾಡದೆ ಭೂಮಿಗೆ ಹೊಂದಿ ಅಡಗಿಕೊಳ್ಳುತ್ತದೆ. ಬೇಟೆಪ್ರಾಣಿ ಯಾವುದೇ ಸಂಶಯವಿಲ್ಲದೆ ಹತ್ತಿರ ಹಾಯುವವರೆಗೆ ಹುಲಿ ಕಾದು ಕುಳಿತಾಗ ಅದರ ದೇಹದ ಬಿಗುವು ಎಷ್ಟರಮಟ್ಟಿಗೆ ಇರುತ್ತದೆ ಎಂಬುದು ಅದರ ಪಕ್ಕೆಗಳ ಕಂಪನದಿಂದ ಗೊತ್ತಾಗುತ್ತದೆ. ಸಮಯ ಸಾಧಿಸಿ ಹುಲಿ ಛಂಗನೆ ಜಿಗಿದು ಆಕ್ರಮಣಮಾಡಿ ಬೆಚ್ಚಿಬಿದ್ದ ಪ್ರಾಣಿಯನ್ನು ಹಿಡಿದು ಕೊಲ್ಲುತ್ತದೆ.

ರಾತ್ರಿಯೇ ಹುಲಿಯ ಸಮಯ

ಹೆಚ್ಚಾಗಿ ರಾತ್ರಿಯಲ್ಲಿ ತನ್ನ ಸಾರ್ವಭೌಮತ್ವ ಹಾಗೂ ವ್ಯಕ್ತಿತ್ವವನ್ನು ಸಂಪೂರ್ಣ ಪ್ರದರ್ಶಿಸುತ್ತ ಅದರ ಅಧಿಪತ್ಯದಲ್ಲಿ ಕೆಚ್ಚೆದೆಯ ಧೀರನಂತೆ ಮಾರುಗಾಲು ಹಾಕುತ್ತ ಮುನ್ನಡೆಯುವಾಗ ಅದರ ಸ್ನಾಯುಗಳು ಸರಾಗವಾಗಿ ಚಲಿಸಿದಂತೆ ಕಾಣುತ್ತವೆ. ಹುಲಿಯ ಕಂದುವರ್ಣ ಚಂದ್ರನ ಬೆಳಕಿನಲ್ಲಿ ಬೆಳ್ಳಿಯಂತೆ ಮಿನುಗುತ್ತದೆ. ಕಾಡಿನಲ್ಲಿಯ ಆ ಗಾಢಮೌನ ಹುಲಿಯ ಸಿಡಿಲಿನಂತಹ ಗರ್ಜನೆಯಿಂದ ಒಮ್ಮೆಲೆ ಚೂರು ಚೂರಾದಂತೆ ಭಾಸವಾಗುತ್ತದೆ. ಸಪ್ಪಳ ಕಡಮೆಯಾದಾಗ ಭೂಮಿ ಅಲುಗಾಡಿ ದಮನ ಮಾಡಿದಂತಾಗುತ್ತದೆ.

ಬಿಳಿಹುಲಿ ನಿಸರ್ಗದ ಅಪರೂಪ ಪ್ರಾಣಿ

ಪ್ಯಾಂಥೇರಾ ಟೈಗ್ರಿಸ್ ಟೈಗ್ರಿಸ್ ವರ್ಗಕ್ಕೆ ಸೇರಿದ ಭಾರತದ ಹಳದಿಹುಲಿ ಶ್ರೇಷ್ಠ ತಳಿ. ಅಪರೂಪವಾಗಿ ತೋರಿಬರುವ ಬಿಳಿಹುಲಿಗಳ ತವರೂ ಭಾರತವೇ. ಬಿಳಿ ಹುಲಿ ನೋಡಲು ಅತಿ ಭವ್ಯವಾಗಿ ಕಾಣುವ ಪ್ರಾಣಿ. ಬಿಳಿಹುಲಿಯ ತುಪ್ಪಳ ಬಿಳಿ ಕೂದಲುಗಳ ಮಿಶ್ರಣದಿಂದ ಸ್ಪಷ್ಟ ಅಥವಾ ನಸುಗಪ್ಪು ಅಥವಾ ಬೂದಿಬಣ್ಣದ ಪಟ್ಟೆಗಳನ್ನು ಹೊಂದಿರುತ್ತದೆ. ಅದರ ಮೂಗು ಸಾಮಾನ್ಯ ರೀತಿಯಲ್ಲಿ ಕೆಂಪಾಗಿರದೆ ಕಲೆಗಳಿಂದ ಕೂಡಿದ ಬೂದಿಗೆಂಪಾಗಿರುತ್ತದೆ. ಅದರ ತುಟಿಗಳು ಕೂದಲಿನ ರೇಖೆಯ ಮೇಲೆ ಸಾಮಾನ್ಯ ರೀತಿಯಲ್ಲಿ ಕಪ್ಪಾಗಿರದೆ ಬೂದಿಗಪ್ಪು ಇದ್ದು ಬಾಯೊಳಗಿನ ಕೆಂಪು ಬಣ್ಣದೊಂದಿಗೆ ಕ್ರಮೇಣ ಸೇರದೆ ಒಮ್ಮೆಲೆ ಅಂತರ್ಗತವಾಗುತ್ತವೆ. ಕಣ್ಣುಗಳ ಬಣ್ಣ ಅತಿ ಸ್ಪಷ್ಟವಾಗಿರುತ್ತದೆ. ಕಣ್ಣಿನ ಬಿಳಿಪೊರೆಯ ಹಳದಿವರ್ಣ ಹಾಗೂ ಕಣ್ಣುಗುಡ್ಡೆಯ ನೀಲಿ ವರ್ಣದ ಮಧ್ಯೆ ಸ್ಪಷ್ಟವಾಗಿ ಬೇರ್ಪಡಿಸುವ ವರ್ತುಲಾಕಾರದ ವರ್ಣದ್ರವ್ಯದ ಮುಖವಾಡ ಇರುವುದಿಲ್ಲ. ಕೆಲವೊಂದು ಬೆಳಕಿನಲ್ಲಿ ಅವು ವರ್ಣರಹಿತವಾಗಿ ಕಾಣುತ್ತವೆ. ಅದರ ಕಾಲಿನ ಪಾದಗಳು ಕೇಸರಿ ಬಣ್ಣದವಿರುತ್ತವೆ. ಬಿಳಿಹುಲಿ ಇತರ ಹುಲಿಗಳಿಗಿಂತ ದೊಡ್ಡವು, ಭುಜ ಅಗಲ, ದೇಹ ಉದ್ದ. ಇತರ ಗುಣಗಳೆಲ್ಲ ಸಾಮಾನ್ಯ ಹುಲಿಯಂತೆಯೇ ಇರುತ್ತವೆ.

ಶ್ವೇತವರ್ಣಿಯೋ ಅಥವಾ ಮ್ಯೂಟಾಂಟೋ ? : ಕೆಲವರು ಅದು ಅಲ್ಬಿನೊ (ಶ್ವೇತವರ್ಣ) ಅಥವಾ ಭಾಗಶಃ ಅಲ್ಬಿನೋ ಎಂದು ಅಭಿಪ್ರಾಯಪಟ್ಟಿದ್ದರು. ಆದರೆ ಬಿಳಿಹುಲಿಯ ಇತ್ತೀಚಿನ ವಂಶಾವಳಿ ಸಂಬಂಧ ಸೂಚಕ ಪೃಥಕ್ಕರಣದಿಂದ ಅದು ಮ್ಯೂಟಾಂಟಿನಿಂದ ಉದ್ಭವಿಸಿದ್ದು ಎಂಬುದು ಸಿದ್ಧವಾಗಿದೆ. ಇದು ನಿಸರ್ಗದ ವೈಲಕ್ಷಣ ಗಳಲ್ಲೊಂದು. ಬಿಳಿಯ ಹುಲಿ ಜಗತ್ತಿನ 'ಅಸಹಜವಾದ ಹಾಗೂ ವಿರಳವಾದ ಹೊಸಪ್ರಾಣಿ' ಎಂದು ಹೇಳಬಹುದು. ಈ ಬಿಳುಪಿನ ವಿಶಿಷ್ಟಗುಣ ಆಯಾ ಜಾತಿಯ ಪ್ರಾಣಿ, ಪಕ್ಷಿ ಅಥವಾ ಸಸ್ಯಗಳಲ್ಲಿ ಇಪ್ಪತ್ತು ಸಾವಿರಕ್ಕೂ ಮೀರಿದ ಜನನಗಳಲ್ಲಿ ಒಂದು ಸಂಭವಿಸುವುದು. ಇದು ಯಾವುದೇ ರೋಗದಿಂದಾಗದೇ ಆಜನ್ಮ ಕ್ಷೀಣತೆಯಿಂದ ಅಥವಾ ದೇಹದ ಮೇಲಿನ ತುಪ್ಪಳದ ಅನೇಕ ಅಣುಕೋಶಗಳಲ್ಲಿ ವರ್ಣದ್ರವ್ಯದ ಕೊರತೆಯಿಂದ ಸಂಭವಿಸುತ್ತದೆ. ಈ ಪ್ರವೃತ್ತಿ 'ಮೆಂಡೇಲಿಯನ್ ವಿಶೇಷ ಲಕ್ಷಣ ಗಳಂತೆ ಅನುವಂಶಿಕವಾದ ಪೀಳಿಗೆಯ ಅಣುಗಳಿಂದ ಸಂಭವಿಸುತ್ತದೆ' ಎಂದು ಹೇಳ ಬಹುದು. ಭಾರತದಲ್ಲಿ ಇದುವರೆಗೆ ಕೇವಲ ಒಂದು ಶ್ವೇತವರ್ಣಿ (ಅಲ್ಬಿನೋ) ಹುಲಿ ಯನ್ನು ಕೊಂದ ಬಗ್ಗೆ ದಾಖಲೆ ಇದೆ. ಇತರ ಬೆಕ್ಕಿನ ಪ್ರಾಣಿಗಳಂತೆ ಹುಲಿಯು ದ್ವಿಗುಣಿತ (ಡಿಪ್ಲೊಯಿಡ್) ಪ್ರಾಣಿಯಾಗಿದ್ದು ಅಗುಣಿತ (ಹಾಪ್ಲೊಯಿಡ್) ಗುಣ ಗಳ ಲಿಂಗಾಣುಗಳನ್ನು (ಗ್ಯಾಮೆಟ್ಟುಗಳು) ಉತ್ಪಾದಿಸುತ್ತದೆ. ಈಗ ಉದಾಹರಣಾರ್ಥ ವಾಗಿ ಬಿಳಿವರ್ಣಕ್ಕೆ ಕಾರಣಗಳಾದ ವಂಶವಾಹಿಗಳು ಅಲಿಂಗವರ್ಣತಂತು ಅನುವಂಶಿಕ ವಂಶವಾಹಿಗಳಿಂದ ನಿರ್ಣಯಿಸಲ್ಪಡುತ್ತವೆ. ಅದಕ್ಕೆ W ಎಂದು ಕರೆದರೆ ಅದರ ಕಣ್ಣು, ತುಪ್ಪಳ, ಮೂಗು ಹಾಗೂ ಪಾದಗಳ ಸಾಮಾನ್ಯ ಬಣ್ಣಗಳ ಗುಣಗಳನ್ನು ನಿರ್ಣಯಿಸುವ ಪ್ರಬಲ ವಂಶವಾಹಿಗಳಿಗೆ w ಎಂದು ಕರೆಯೋಣ. ಇದರ ಪೂರ್ವ ಸಿದ್ಧಾಂತ ಪ್ರಕಾರ ಎಲ್ಲ ಬಿಳಿಹುಲಿಗಳು Ww (ಜಿನೋಟೈಪ್) ಲಿಂಗಾಣುಗಳನ್ನೂ ಹಾಗೂ ಸಾಮಾನ್ಯ ಬಣ್ಣದ ಹುಲಿಗಳು WW ಅಥವಾ Ww ಲಿಂಗಾಣುಗಳನ್ನೂ ಹೊಂದಿರುತ್ತವೆಯೆಂದಾಯಿತು.

ಅಸಮಯುಗ್ಮಜ (ಹೆಟರೊರೆಝೈಗಸ್) ತಂದೆತಾಯಿಗಳಾದ ಎರಡು ಹಳದಿ ಬಣ್ಣದ ಹುಲಿಗಳನ್ನು ಜೊತೆಗೂಡಿಸಿದಾಗ ಹಳದಿ ಹಾಗೂ ಬಿಳಿಬಣ್ಣದ ಮರಿಗಳು ತಾತ್ವಿಕವಾಗಿ 3 : 1 ಪ್ರಮಾಣದಲ್ಲಿ ಹುಟ್ಟಬಹುದು. ಎರಡು ಬಿಳಿಹುಲಿಗಳನ್ನು ಜೊತೆಗೂಡಿಸಿದಾಗ ಕೇವಲ ಬಿಳಿಹುಲಿ ಮರಿಗಳು ಹುಟ್ಟಬಹುದು. ಆದರೆ ಬಿಳಿ ಹುಲಿ ಹಾಗೂ ಹಳದಿ ಬಣ್ಣದ ಹುಲಿಗಳನ್ನು ಜೊತೆಗೂಡಿಸಿದಾಗ ಹಳದಿ ತಂದೆ ತಾಯಿಗಳ ವಂಶವಾಹಿ ರೂಪಗಳನ್ನು ಅವಲಂಬಿಸಿ ಎರಡು ತರಹದ ಪೀಳಿಗೆ ಜನಿಸ ಬಹುದು. ಹಳದಿ ತಂದೆತಾಯಿಗಳು Ww ಇದ್ದರೆ ಎಲ್ಲ ಸಂತಾನೋತ್ಪತ್ತಿ ಹಳದಿ ಹಾಗೂ ಬಿಳಿ ಹುಲಿಮರಿಗಳನ್ನು ಹೊಂದಿರುವುದುಂಟು; ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಸಂತತಿ ಉತ್ಪತ್ತಿಯಾದರೆ ಹಳದಿ ಹಾಗೂ ಬಿಳಿಮರಿಗಳ ಪ್ರಮಾಣ 1 : 1 ಹೊಂದಲು ಹೆಚ್ಚಿನ ಸಾಧ್ಯತೆಗಳಿವೆ ಎಂದು ಹೇಳಬಹುದು. ಬಿಳಿ ತಂದೆತಾಯಿಗಳಿಂದ ಹುಟ್ಟಿದ ಹಳದಿ ಹುಲಿಮರಿಗಳು Ww ಗುಣಗಳನ್ನು ಹೊಂದಿರಲೂ ಸಾಧ್ಯ; ಆದರೆ ಇದರ ಸತ್ಯಾಂಶ ಇನ್ನೂ ದೃಢಪಡಬೇಕಾಗಿದೆ.

ಬಿಳಿಹುಲಿಗಳ ವಂಶಾವಳಿಯಲ್ಲಿ ಇಂದಿನವರೆಗೆ ಆದ ಪ್ರಗತಿಯ ಮೇಲಿಂದ ಹೇಳುವುದಾದರೆ ಬಿಳಿಹುಲಿಗಳು ಕೇವಲ ಅಲಂಕಾರಿಕ ಹಾಗೂ ಮನೋರಂಜಕವಾಗಿವೆ. ಕಂದು ಹಾಗೂ ಬಿಳಿಬಣ್ಣದ ಹುಲಿಗಳ ಸಂಪರ್ಕದಿಂದ ಹುಟ್ಟಿದ ಮರಿಗಳಲ್ಲಿ ಬಿಳಿಯವು ಬದುಕುತ್ತವೆ. ಪೂರ್ಣ ಬಿಳಿಬಣ್ಣದ ಗಂಡು ಹಾಗೂ ಹೆಣ್ಣು ಹುಲಿಗಳ ಸಂಪರ್ಕದಿಂದ ಹುಟ್ಟಿದ ಮರಿಗಳು ಇಲ್ಲಿಯತನಕ ಬದುಕಿಲ್ಲ. ಇದಕ್ಕೆ ಮರಿಗಳಲ್ಲಿನ ವಿವಿಕ್ತ ವಂಶ ವಾಹಿಗಳೇ ಕಾರಣವಾಗಿರಬೇಕು. ಈ ಕಾರಣದಿಂದಾಗಿ ಅನೇಕ ವರ್ಷಗಳಿಂದ ಯತ್ನಿಸ ಲಾಗುತ್ತಿದ್ದ ಪೂರ್ಣ ಬಿಳಿಹುಲಿಗಳ ನಡುವಣ ಕಲಕತ್ತಾ ಹಾಗೂ ಇತರ ಮೃಗಾಲಯ ಗಳಲ್ಲಿನ ಸಂಕರಣ ಕಾರ್ಯಕ್ರಮವನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆ. ಬಿಳಿಹುಲಿಗಳು ಮೊದಲು ಆಕರ್ಷಕವೇನೋ ನಿಜ: ಆದರೆ ಅವು ಜಗತ್ಪ್ರಸಿದ್ಧವಾದ ಸಾಮಾನ್ಯ ಕಂದು ಬಣ್ಣದ ಹುಲಿಯಷ್ಟು ಗಟ್ಟಿಮುಟ್ಟಲ್ಲ; ಅವು ರೋಗರುಜಿನಗಳಿಗೂ ಸುಲಭವಾಗಿ ತುತ್ತಾಗುತ್ತವೆ.

ಬಿಳುಪು (ಶ್ವೇತವರ್ಣ) ಕಾಡುಪ್ರಾಣಿಗಳಿಗಿಂತ ಸಾಕಿದ ಪ್ರಾಣಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಕಣ್ಣುಗುಡ್ಡೆಯ ಸುತ್ತಲಿನ ವರ್ತುಲದಲ್ಲಿ ವರ್ಣದ್ರವ್ಯದ ಮುಖ ವಾಡ ಇಲ್ಲದಿರುವುದರಿಂದ ಶ್ವೇತವರ್ಣಿಗಳಿಗೆ ಸೂರ್ಯನ ಬಿಸಿಲನ್ನು ಎದುರಿಸು ವುದು ಅಷ್ಟು ಸುಲಭವಲ್ಲ. ಇವುಗಳ ಬಣ್ಣ ನೈಸರ್ಗಿಕ ಬಣ್ಣವಲ್ಲ. ನೈಸರ್ಗಿಕ ಬಣ್ಣದವುಗಳನ್ನು ಪರಿಸರದಲ್ಲಿ ಗುರುತಿಸುವುದು ಕಷ್ಟ. ಅವುಗಳ ಬಣ್ಣ ಪರಿಸರದ ಬಣ್ಣದಂತೆಯೇ ಇರುತ್ತದೆ. ಇವು ಹಾಗಲ್ಲ. ಅಂತೆಯೇ ಇವುಗಳನ್ನು ವೈರಿಗಳು ಸುಲಭವಾಗಿ ಕಂಡುಹಿಡಿಯುತ್ತವೆ. ಈ ಕಾರಣದಿಂದ ಬಿಳಿಯ ಹುಲಿಗಳು ಕಾಡುಸ್ಥಿತಿಯಲ್ಲಿ ಅತಿವಿರಳವಾಗಿ ಕಂಡುಬರುತ್ತವೆ. ಅಂತೆಯೇ ಇತರ ಬಿಳಿ ಪ್ರಾಣಿಗಳು ತಮ್ಮ ನೈಸರ್ಗಿಕ ಸ್ಥಿತಿಯಲ್ಲಿ ಕಂಡುಬರುವುದು ಅತಿವಿರಳ.

ಸಾಮಾನ್ಯವಾಗಿ ವಿಷುವೃತ್ತ ಸಮೀಪದ ಪ್ರದೇಶದಲ್ಲಿಯಕ್ಕಿಂತ ಸಮಶೀತೋಷ್ಣ ಪ್ರದೇಶಗಳಲ್ಲಿ ಹೆಚ್ಚು ಶ್ವೇತವರ್ಣ ಪ್ರಾಣಿಗಳು ಕಂಡುಬರುವುದುಂಟು. ವಿಷುವೃತ್ತ ಸಮೀಪಿಸಿದಂತೆ ದಟ್ಟವರ್ಣಗಳ ಪ್ರಾಣಿಗಳು ಕಂಡುಬರುತ್ತವೆ. ವಯಸ್ಸಾದಂತೆ ಕೆಲವು ಗಳಲ್ಲಿ ವರ್ಣದ್ರವ್ಯದ ಕುಂದುಂಟಾಗಿ ಭಾಗಶಃ ಅಥವಾ ಶ್ವೇತವರ್ಣದ ಚರ್ಮರೋಗ ತಲೆದೋರಿ ಕೆಲವು ಬಿಳಿಯವಾಗಿ ತೋರಿಬರುತ್ತವೆ.

ಸದ್ಯ ಜೀವಿಸಿರುವ ಬಿಳಿಹುಲಿಗಳ ಕಥೆ ಆರಂಭವಾದುದು ಹುಲಿಯ ತವರಾದ ಮಧ್ಯಪ್ರದೇಶದ 'ರೇವಾ' ಕಾಡಿನಲ್ಲಿ. 1951ರಲ್ಲಿ ದೊರೆತ ಒಂಭತ್ತು ತಿಂಗಳ ಬಿಳಿಹುಲಿ ಮರಿಯನ್ನು ಬೋನಿನಲ್ಲಿ ಸೆರೆಹಿಡಿದು ರೇವಾ ಮಹಾರಾಜ ಗುಲಾಬಸಿಂಗರು ಗೋವಿಂದಘಡದಲ್ಲಿರುವ ಅರಮನೆಗೆ ತಂದು 'ಮೋಹನ' ಎಂಬ ಹೆಸರಿಟ್ಟರು. ಈ ಬಿಳಿಹುಲಿಮರಿ ಒಂದು ಸಾಮಾನ್ಯ ಕಂದುಬಣ್ಣದ ತಾಯಿ ಹೊಟ್ಟೆಯಲ್ಲಿ ಜನಿಸಿದ ಒಂದೆ ಬಳಗದ 4 ಮರಿಗಳಲ್ಲಿ ಒಂದು. (ಬಾಕಿ 3 ಮರಿಗಳು ಕಂದುವರ್ಣದವೇ ಆಗಿದ್ದವು). ಅದರ ಮೈ ಅದ್ಭುತವಾದ ಹಾಲುಬೆಳ್ಳಗಿನ ಅಥವಾ ಹಾಲಿನ ಕೆನೆ

ಬಣ್ಣದ್ದು, ಪಟ್ಟೆಗಳು ಅಚ್ಚ ತಿಳಿಕಪ್ಪು ಅಥವಾ ಬಿಳಿಗೂದಲು ಮಿಶ್ರಿತವಾಗಿ ಬೂದಿ ಬಣ್ಣದವಾಗಿದ್ದವು. ಮೂಗು ಚಿತ್ರವಿಚಿತ್ರದ ಬೂದುಗೆಂಪು, ತುಟಿ ಕೂದಲುಗೆರೆ ಯಿಂದ ಬೂದುಗಪ್ಪು, ಬಾಯಿಯೊಳಗೆ ಸೇರಿದಂತೆ ಕೆಂಪುಕಣ್ಣು ಹಸಿರು ಮಿಶ್ರಿತ ನೀಲಿ ವರ್ಣದವಾಗಿದ್ದವು. ಪಾದದ ಮೆತ್ತೆ ಸಿಂಬೆ ಕೇಸರಿ ಗುಲಾಬಿ ಬಣ್ಣದ್ದಾಗಿತ್ತು. 'ಮೋಹನ' ವಯಸ್ಸಿಗೆ ಬಂದ ಬಳಿಕ 'ಬೇಗಂ' ಎಂಬ ಸಾಮಾನ್ಯ ಪೀತವರ್ಣದ ಹುಲಿ ಯೊಂದಿಗೆ ಅದನ್ನು ಜೊತೆಗೂಡಿಸಲಾಯಿತು. ಅವಕ್ಕೆ ಜನಿಸಿದ ಮೂರು ಪೀಳಿಗೆ ಗಳಲ್ಲಿಯ ಮರಿಗಳೂ ಕಂದು. (ಒಂದನೆಯ ಪೀಳಿಗೆಯಲ್ಲಿ 2 ಗಂಡು, ಎರಡನೇ ಪೀಳಿಗೆ ಯಲ್ಲಿ ಎರಡು ಗಂಡೂ ಹಾಗೂ ಎರಡು ಹೆಣ್ಣು, ಮೂರನೇ ಪೀಳಿಗೆಯಲ್ಲಿ 4 ಮರಿ ಗಳು ಸಾಮಾನ್ಯ ಬಣ್ಣದವು) ಅವುಗಳಲ್ಲಿ ಒಂದಾದ ರಾಧಾ ಎಂಬ ಹೆಣ್ಣು (ಕ್ರಿ.ಶ. 1953ರಲ್ಲಿ ಹುಟ್ಟಿದ 2ನೇ ಪೀಳಿಗೆಯ ಮರಿಗಳಲ್ಲಿ) ಹುಲಿಯೊಂದಿಗೆ 'ಮೋಹನ' ಹುಲಿಯನ್ನು ಕೂಡಿಸಿ ಅಂತರ್‌ಸಂಕರಣಗೊಳಿಸಿದಾಗ ನಾಲ್ಕು ಬಿಳಿಬಣ್ಣದ ಹುಲಿಮರಿ ಗಳು, ಕ್ರಿ.ಶ. 1958ರಲ್ಲಿ ಮೂರನೇ ಪೀಳಿಗೆಯಲ್ಲಿ, 1 ಗಂಡು, 3 ಹೆಣ್ಣು ಜನಿಸಿದವು. ಕ್ರಿ.ಶ. 1960ರಲ್ಲಿ 2ನೇ ಪೀಳಿಗೆಯಲ್ಲಿ ಎರಡು ಬಿಳಿ ಗಂಡುಮರಿಗಳು ಮತ್ತು 1 ಕಂದು ಬಣ್ಣದ ಹೆಣ್ಣುಮರಿಯೂ ಮತ್ತು ಕ್ರಿ.ಶ. 1962ರಲ್ಲಿ 3 ನೇ ಪೀಳಿಗೆಯಲ್ಲಿ 2 ಬಿಳಿ ಮರಿಗಳೂ (1 ಗಂಡು; 1 ಹೆಣ್ಣು) ಜನಿಸಿದವು. ತರುವಾಯ ಮೋಹನನನ್ನು ರಾಧೆಯ ಪ್ರಥಮ ಬಳಗದ ಒಂದು ಬಿಳಿ ಹೆಣ್ಣಿನ ಜೊತೆಗೂಡಿಸಲಾಯಿತು. ಈ ಮಿಶ್ರತಳಿ ಕೂಡುವಳಿಯಿಂದ 2 ಬಿಳಿಮರಿಗಳು ಹುಟ್ಟಿಸತ್ತವು. ಅನಂತರ ಜನಿಸಿದ ಜೀವಂತ ಮರಿಗಳೂ ಬಿಳಿಯ ತಳಿಯವೇ ಆಗಿದ್ದವು. 1960ರಲ್ಲಿ 'ರಾಧೆ'ಯ ಮೊದಲನೆಯ ಬಳಗದ ಬಿಳಿಹುಲಿ 'ಮೋಹಿನಿ' ವಾಷಿಂಗ್ಟನ್ ನಗರದ ನ್ಯಾಶನಲ್ ಝೂಲಾಜಿಕಲ್ ಪಾರ್ಕಿಗೆ ಸೇರಿತು. ಅಲ್ಲಿ 'ಮೋಹಿನಿ' ಒಂದು ಸಾಮಾನ್ಯ ಬಣ್ಣದ ಗಂಡುಹುಲಿಯೊಂದಿಗೆ ಕೂಡಿದ್ದು ಕ್ರಿ.ಶ. 1964ರಲ್ಲಿ ಒಂದನೆಯ ಪೀಳಿಗೆಯಲ್ಲಿ ಮೂರು ಮರಿಗಳನ್ನೀಯಿತು. ಇವುಗಳಲ್ಲಿ ಒಂದು ಬಿಳಿಯದಾಗಿತ್ತು. ರಾಧೆಯ ಮೊದಲನೆಯ ಬಿಳಿ ಪೀಳಿಗೆಯ 'ರಾಜ' ಮತ್ತು 'ರಾಣಿ' ಕ್ರಿ.ಶ. 1966ರಲ್ಲಿ ದಿಲ್ಲಿಯ ಪ್ರಾಣಿಸಂಗ್ರ ಹಾಲಯ ತಲುಪಿದವು. ಅಲ್ಲಿ ಅವುಗಳಿಗೆ ಒಂದನೆಯ ಪೀಳಿಗೆಯಲ್ಲಿ 3 ಬಿಳಿಮರಿ ಗಳಾದವು. ನಂತರ 'ರಾಜ' ಮತ್ತು 'ರಾಣಿ' ಪ್ಯಾರಿಸ್ ಸಂಗ್ರಹಾಲಯ ತಲುಪಿದವು. ಈ ಜೋಡಿಗೆ ಹುಟ್ಟಿದ ಪ್ರಥಮ ಪೀಳಿಗೆಯ 2 ಬಿಳಿ ಹೆಣ್ಣುಗಳಲ್ಲಿ ಒಂದು ವಾಷಿಂಗ್ಟನ್‌ಗೆ ಹೋಯಿತು, ಇನ್ನೊಂದು 'ಸುಕೇಶಿ' ಗೋವಿಂದಘಡದ ಅರಮನೆಯಲ್ಲೇ ಉಳಿಯಿತು. 'ಮೋಹನ'ನ ಜೊತೆಯಲ್ಲಿದ್ದ ಸುಕೇಶಿಗೆ ಒಂದನೆಯ ಪೀಳಿಗೆಯಲ್ಲಿ 3 ಬಿಳಿಮರಿಗಳಾದವು. ಕ್ರಿ.ಶ. 1963ರ ಜೂನ್‌ದಲ್ಲಿ 'ರಾಧೆ'ಯ 3ನೆಯ ಬಿಳಿ ಪೀಳಿಗೆಯ ಗಂಡು 'ಚಂಪ' ಮತ್ತು ಹೆಣ್ಣು 'ಚಮೇಲಿ' ಬ್ರಿಸ್ಟಲ್ ಪ್ರಾಣಿಸಂಗ್ರಹಾಲಯದಲ್ಲಿ ನೆಲೆಸಿದವು. ಅಲ್ಲಿ ಆ ಜೋಡಿಗೆ ಕ್ರಿ.ಶ. 1967ರಲ್ಲಿ ಒಂದು ಬಿಳಿ ಗಂಡುಮರಿ ಹುಟ್ಟಿ ಸತ್ತಿತು. ಮತ್ತೆ ಮರುವರ್ಷ 4 ಬಿಳಿ ಮರಿಗಳಾದವು. ಕ್ರಿ.ಶ. 1963 ಗೋವಿಂದಘಡದಿಂದ 'ರಾಧೆ'ಯ ಎರಡನೆಯ ಪೀಳಿಗೆಯ 2 ಬಿಳಿ ಗಂಡುಮರಿಗಳೂ — 'ಹಿಮಾದ್ರಿ' ಮತ್ತು 'ನೀಲಾದ್ರಿ' ಮತ್ತು ದಿಲ್ಲಿಯ ಮೃಗಾಲಯದಿಂದ ಇದೇ ಪೀಳಿಗೆಯ ಸಾಮಾನ್ಯಬಣ್ಣದ ಹೆಣ್ಣು

'ಮೋಹಿನಿ'ಯೂ. ಕಲ್ಕತ್ತಾ ಅಲಿಪುರ ಮೃಗಾಲಯಕ್ಕೆ ಸಾಗಿಸಲ್ಪಟ್ಟವು. ಆ ಮೃಗಾಲಯದಲ್ಲಿ ಅದೇ ವರ್ಷದಲ್ಲಿ 'ನೀಲಾದ್ರಿ' ಮತ್ತು 'ಮೋಹಿನಿ'ಗಳ ಕೂಡಿಕೆಯಿಂದಾಗಿ ಕ್ರಿ.ಶ. 1965ರಲ್ಲಿ 1 ಬಿಳಿ ಹೆಣ್ಣು ಮತ್ತು ಒಂದು ಸಾಮಾನ್ಯ ಬಣ್ಣದ ಗಂಡುಮರಿಗಳಾದವು. ಗೋವಿಂದಘಡವಲ್ಲಿ 'ಮೋಹನ' ಮತ್ತು 'ಸುಕೇಶಿ' ಉಳಿದವು. ಇಪ್ಪತ್ತು ವರ್ಷ ಬದುಕಿ 'ಮೋಹನ್' ನಿಧನಹೊಂದಿತು.

ಬಿಳಿಹುಲಿಗಳ ಪೈಕಿ ಗೋವಿಂದಘಡದಲ್ಲಿಯ ಅರಮನೆಯಲ್ಲಿ ಚಮೇಲಿಯೊಂದಿಗೆ ವಾಸವಾಗಿದ್ದ 'ವಿರಾಟ' ಎಂಬ ಗಂಡುಹುಲಿ 1976ರ ಜೂನ್ ತಿಂಗಳಲ್ಲಿ ಕಾಯಿಲೆಯಿಂದ ಬಳಲಿ ಸತ್ತಿತು. ಆ 'ವಿರಾಟ' ಹಾಗೂ 'ಚಮೇಲಿ' ಬಿಳಿಹುಲಿಗಳು 'ಮೋಹನ' ಬಿಳಿಹುಲಿಯಿಂದ ಜನಿಸಿದ ಮೊದಲಿನ ಮರಿಗಳಾಗಿದ್ದವು.

ಇಂದು ಪ್ರಪಂಚದಲ್ಲಿ ಒಟ್ಟು ಮೂವತ್ತೆಂಟು ಬಿಳಿಹುಲಿಗಳಿವೆ. ಇವುಗಳನ್ನು ಪ್ರಪಂಚದ ಬೇರೆ ಬೇರೆ ಮೃಗಾಲಯಗಳಿಗೆ ಪ್ರಾಣಿ ವಿನಿಮಯ ರೂಪದಲ್ಲಿ ಕಳಿಸಿ ಕೊಡಲಾಗಿದೆ. ಅವುಗಳಲ್ಲಿ ಇಪ್ಪತ್ತೈದು ಭಾರತದಲ್ಲಿವೆ. ಮಿಕ್ಕ ಒಂಭತ್ತು ಹುಲಿಗಳು ಲಂಡನ್ನಿನಲ್ಲಿ. ಹಾಗೂ ನಾಲ್ಕು ಅಮೆರಿಕಾದಲ್ಲಿವೆ. ಭಾರತದಲ್ಲಿರುವ ಇಪ್ಪತ್ತೈದರಲ್ಲಿ ಹದಿನಾಲ್ಕು ದಿಲ್ಲಿಯಲ್ಲಿ, ಏಳು ಕಲ್ಕತ್ತಾದಲ್ಲಿ. ನಾಲ್ಕು ರೇವಾದ ಗೋವಿಂದಘಡದ ಅರಮನೆಯಲ್ಲಿ ಇವೆ. ಬಿಳಿಹುಲಿಯ ರಾಸನ್ನು ಪೋಷಿಸಿ ಬೆಳೆಸಿದ ಕೀರ್ತಿ ಗೋವಿಂದಘಡದ ಮಹಾರಾಜರಿಗೆ ಸಲ್ಲುತ್ತದೆ.

ಅನೇಕ ವರ್ಷಗಳ ಹಿಂದೆ ಕೆಲವು ಬಿಳಿಹುಲಿಗಳನ್ನು ನರ್ಮದಾನದಿಯ ಆಯಕಟ್ಟಿನಲ್ಲಿ, ಬಿಲಾಸ್‌ಪುರ, ಮಂಡಾಲಾ, ಕೂಚಬಿಹಾರ, ಒರಿಸ್ಸಾ ಹಾಗೂ ಬಾಗಲ್‌ಪುರಗಳಲ್ಲಿ ಕೊಂದ ದಾಖಲೆಗಳಿವೆ. ಕೆಲವು ಬಿಳಿಹುಲಿ ತೊಗಲುಗಳನ್ನು ಲಂಡನ್ನಿನ ಕೆನ್ಸಿಂಗ್ಟನ್ ವಸ್ತುಸಂಗ್ರಹಾಲಯದಲ್ಲಿ ಇಟ್ಟಿದ್ದರು.

ವ್ಯಾಘ್ರ ಹಾಗೂ ಸಿಂಹಿಣಿ ಸಂತತಿ-ಸಿಂಹುಲಿ ಅಥವಾ ಟೈಗಾನ್

ಹುಲಿ ಮತ್ತು ಸಿಂಹಗಳ ಸಹವಾಸದಿಂದ ಅದ್ಭುತಳಿ ಸಂತಾನವನ್ನು ಪಡೆಯಲು ಸಾಧ್ಯವೆಂಬುದು ಇತ್ತೀಚೆಗೆ ಕಂಡುಬಂದಿದೆ. ಇದೊಂದು ಸೋಜಿಗದ ವಿಷಯ. ಕಲ್ಕತ್ತೆಯ ಮೃಗಾಲಯದಲ್ಲಿ ಇದು ತೋರಿಬಂದಿದೆ. ಭಾರತದ ಬಂಗಾಳದ ಗಂಡುಹುಲಿ 'ಮುನ್ನ' ಮತ್ತು ಆಫ್ರಿಕಾದ ಸಿಂಹಿಣಿ 'ಮುನ್ನಿ'ಯನ್ನು ಬೆರೆಯುವಂತೆ ಮಾಡಿ ಹೆಣ್ಣುಮರಿಯೊಂದನ್ನು ಪಡೆಯಲಾಗಿದೆ. ಸಿಂಹ ಮತ್ತು ಹುಲಿಯ ಮಿಶ್ರ ಸಂತಾನವಾದ ಈ ಮರಿಯನ್ನು 'ಸಿಂಹುಲಿ' ಅಥವಾ 'ಟೈಗಾನ್' ಎಂದು ಕರೆಯಲಾಗುತ್ತಿದೆ. ಇವೆರಡರ ಸಂಪರ್ಕದಿಂದ ಜನಿಸಿದ 5 ಸೂಲುಗಳ ಮರಿಗಳು ತೀರಿಕೊಂಡವು. ಕ್ರಿ.ಶ. 1972ರ ಅಕ್ಟೋಬರ್ 10ರಂದು ಮುನ್ನಿ ಸಿಂಹಿಣಿಗೆ 6ನೇ ಸೂಲಿನಲ್ಲಿ ಒಂದು ಹೆಣ್ಣು 'ಟೈಗಾನ್' ಮಿಶ್ರತಳಿ ಹುಟ್ಟಿತು. ಈ ಮಿಶ್ರತಳಿಯಿಂದುಂಟಾದ 'ಟೈಗಾನ್'ದ ಮೈಬಣ್ಣ ಹಳದಿ ಬೂದು ಮಿಶ್ರವಾಗಿದ್ದು, ವಿಪುಲ ಮಸಕು ಕಂದು ಪಟ್ಟೆ,

ಚುಕ್ಕೆಗಳು, ಬಿಳಿ ಹೊಟ್ಟೆ ಮತ್ತು ಬಿಳುಪು ಮತ್ತು ಕಪ್ಪು ಮಚ್ಚೆಯುಳ್ಳ ಹಳದಿ ಬಣ್ಣದ ಕಿವಿಗಳನ್ನು ಹೊಂದಿತ್ತು. ಬಾಹ್ಯರೂಪದಲ್ಲಿ ಸಿಂಹಿಣಿಯನ್ನು ಹೋಲುತ್ತದೆ. ಗಾತ್ರದಲ್ಲಿ ತಾಯಿತಂದೆಗಳಿಗಿಂತಲೂ ದಪ್ಪನಾಗಿತ್ತು. ಇದು ಅತ್ಯಂತ ಆರೋಗ್ಯಕರ ವಾಗಿದ್ದು ಯಾವುದೇ ಅಂಗಾಂಗಗಳ ಊನವೂ ಕಂಡುಬಂದಿಲ್ಲ. ತಾಯಿ ಸಿಂಹಿಣಿಯು ತನ್ನ ಮರಿಯನ್ನು ಅಪಾರವಾಗಿ ಪ್ರೀತಿಸುತ್ತಿದ್ದು ಬಹಳ ಜಾಗರೂಕವಾಗಿ ಪರಿಪಾಲಿಸಿತು.

ಈ ಸಿಂಹುಲಿಯು ಬೆಳೆದಂತೆ ಕೇಸರ ಹೊಂದದಿದ್ದರೂ ಬಹುಶಃ ಸಿಂಹದಂತೆ ಗರ್ಜಿಸಬಹುದೆಂದು ಊಹಿಸಲಾಗಿದೆ. ಈ ಸಿಂಹುಲಿಯು ವಯಸ್ಸಿಗೆ ಬಂದನಂತರ ಹುಲಿ ಅಥವಾ ಸಿಂಹದೊಡನೆ ಬಾಳಲು ಅವಕಾಶವಿರುತ್ತದೆ. ಅದು ಮಿಶ್ರತಳಿಯನ್ನು ಉತ್ಪಾದಿಸಬಲ್ಲುದೆಂದು ನಿರೀಕ್ಷಿಸಲಾಗಿದೆ. ಈ ಮಿಶ್ರತಳಿಗಳು ನೋಟಕ್ಕೆ ಸಂತೋಷ ವನ್ನೂ, ಅದರಿಂದ ಹೊಸತಳಿಗಳನ್ನು ಹೊಂದಲು ಆಸಕ್ತಿಯನ್ನೂ ಮೂಡಿಸುವಂತಹವು ಗಳಾಗಿವೆ.

ಈ ಮಿಶ್ರಜಾತಿ ಸಂಸ್ಕರಣ ಕಾಡಿನಲ್ಲಿ ಸ್ವಾಭಾವಿಕವಾಗಿ ಜರುಗುವುದಿಲ್ಲ. ಈಗಿನ ಟೈಗಾನ್ ಇನ್ನಿತರ ಸಂಕರ ತಳಿಗಳಂತೇ ಬರಡಾಗಿರದೆ ಅದರ ಮೂರನೆ ಸಂತತಿಯನ್ನು ಪಡೆಯುವ ಭರವಸೆಯನ್ನು ಮೂಡಿಸಿದೆ.

ಗಂಡು ಸಿಂಹ ಮತ್ತು ಹೆಣ್ಣುಹುಲಿಗಳ ಸಂಪರ್ಕದಿಂದ ಉದ್ಭವಿಸಿದ ಮಿಶ್ರ ತಳಿಗೆ 'ಲೈಗರ್' ಎಂದು ಕರೆಯುತ್ತಾರೆ. ಸುಮಾರು 25 ವರ್ಷಗಳ ಹಿಂದೆ ಮ್ಯೂನಿಚ್ಚಿನ ಮೃಗಾಲಯದಲ್ಲಿ ಒಂದು 15 ವರ್ಷ ವಯಸ್ಸಿನ ಲೈಗರ್ ಮಿಶ್ರತಳಿಗೆ ಒಂದು ಗಂಡು ಸಿಂಹದ ಜೊತೆಗೆ ಕೂಡುವಿಕೆಯಿಂದ ಒಂದು ಹೆಣ್ಣುಮರಿಯಾಯಿತು. ಅದೇ ರೀತಿ ಜಪಾನಿನ ಹ್ಯಾನ್‌ಶಿಸ್ ಮೃಗಾಲಯದಲ್ಲಿ 1951 ಮತ್ತು 1961ರಲ್ಲಿ ಗಂಡು ಚಿರತೆ ಮತ್ತು ಸಿಂಹಿಣಿಗಳ ಸಂಪರ್ಕದಿಂದ 'ಲಿಯೋಪಾನ್' ಮಿಶ್ರತಳಿ ಜನಿಸಿದೆ.

ಅಧ್ಯಾಯ 4

ವಲಯನಿರ್ಮಾಣ

ಅನೇಕ ಪ್ರಾಣಿಗಳಿಗೆ ತಮ್ಮದೇ ಆದ ವಲಯವಿರುತ್ತದೆ. ಅದನ್ನು ಗಡಿ, ಸರಹದ್ದು, ಪ್ರದೇಶ, ಪ್ರಾಂತ್ಯಗಳೆಂದೂ ಹೇಳುತ್ತಾರೆ. ಇಂತಹ ಪ್ರದೇಶ ಅವುಗಳಿಗೆ ಇಷ್ಟ ಹಾಗೂ ಅಗತ್ಯ. ಇದನ್ನು ಅವು ತಮ್ಮಲ್ಲಿಯ ವಾಸನೆ ರಸಿಕೆಯ ನೆರವಿನಿಂದ ಪೂರೈಸುತ್ತವೆ. ಪ್ರಾಣಿಗಳಲ್ಲಿ ಮಲಮೂತ್ರ ಅಥವಾ ವಿಶೇಷ ರಸಗ್ರಂಥಿ ಸ್ರವಿಕೆಗಳಿಂದ ಬಗೆಬಗೆಯ ವಾಸನೆ ಉತ್ಪತ್ತಿಯಾಗುತ್ತದೆ. ಮಲಮೂತ್ರ ವಿಸರ್ಜನೆಯ ಕಾರ್ಯ, ಶರೀರರಚನಾಕ್ರಿಯೆಯ ಒಂದು ಚಟುವಟಿಕೆ. ವಲಯನಿರ್ಮಾಣ, ವಾಸನೆ ರಸಿಕೆಯ ಸಿಂಪರಣೆಯ ನೆರವಿನಿಂದ ನಡೆಯುತ್ತದೆ. ಶರೀರರಚನೆಯಲ್ಲಿ ವಾಸನೆರಸಿಕೆ ಉತ್ಪತ್ತಿಗೆ ವಿಶೇಷ ವ್ಯವಸ್ಥೆ ಇರುತ್ತದೆ. ನಿಯಮದ ಪ್ರಕಾರ ಪ್ರಾಣಿಗಳು ತಮ್ಮ ಸ್ರವಿಕೆ ಸಿಂಪಡಿಸಿ ವಲಯ ನಿರ್ಮಿಸುತ್ತವೆ ಹಾಗೂ ಆಗಾಗ ಅದನ್ನು ನವೀಕರಿಸುತ್ತವೆ. ಈ ರೀತಿ ಪ್ರಾಣಿಗೆ ವಾಸನೆಸ್ರವಿಕೆಯಿಂದ ತನ್ನ ಸರಹದ್ದು ಅಥವಾ ವಲಯ ನಿರ್ಮಿಸಿ ರಕ್ಷಿಸಿ ಕಾಪಾಡಿಕೊಳ್ಳುವುದರಲ್ಲಿ ಸಹಾಯವಾಗುತ್ತದೆ. ಈ ಕೆಲಸ ಮುಖ್ಯವಾಗಿ ಗಂಡು ಪ್ರಾಣಿಗಳಿಂದ ನಡೆಯಬೇಕಾದುದು. ಆದುದರಿಂದ ರಸಗ್ರಂಥಿ ಹಾಗೂ ಅವುಗಳಿಗೆ ಸಂಬಂಧಪಟ್ಟ ಸಹಾಯಕ ಅವಯವಗಳು ಹೆಣ್ಣು ಪ್ರಾಣಿಗಳಿಗಿಂತ ಗಂಡುಗಳಲ್ಲಿ ಹೆಚ್ಚಾಗಿ ಅಭಿವೃದ್ಧಿ ಹೊಂದಿರುತ್ತವೆ. ಅನೇಕ ಹೆಣ್ಣು ಪ್ರಾಣಿಗಳಲ್ಲಿ ಈ ರೀತಿಯ ಸ್ರವಿಕೆಗಳ ಕೊರತೆ ಕಂಡುಬರುತ್ತದೆ. ವನ್ಯಪ್ರಾಣಿಗಳಿಗೆ ಅವುಗಳ ವಲಯ, ಒಂದು ವಿಶಿಷ್ಟಸ್ಥಾನ. ಅಲ್ಲಿ ಆ ಪ್ರಾಣಿಗಳಿಗೆ ಒಂದು ಬಗೆಯ ತೃಪ್ತಿ: ಈ ವಲಯ ಅದಕ್ಕೆ ಒಂದು ರಕ್ಷಿತ ಸ್ಥಳ. ಆ ಪ್ರಾಂತ್ಯದ ಮೇಲೆ ಸಂಪೂರ್ಣ ಹತೋಟಿ ಹೊಂದಿ ಕಾಪಾಡಿಕೊಳ್ಳುವುದೇ ಅದರ ಮುಖ್ಯ ಕಾರ್ಯ.

ಹುಲಿ ಕ್ರಮಬದ್ಧವಾಗಿ ಸ್ರವಿಕೆ ಸಿಂಪಡಿಸಿ ಸುತ್ತಲಿನ ವಾತಾವರಣದಲ್ಲೆಲ್ಲ ವಿಶಿಷ್ಟ ರೀತಿಯ ವಾಸನೆಯನ್ನು ಹರಡಿಸುತ್ತದೆ. ಈ ರಸಗ್ರಂಥಿಗಳು ದೇಹದ ಯಾವುದೇ ಭಾಗದಲ್ಲಿ ಅಂದರೆ ಮೂಗಿನಿಂದ ಬಾಲದ ತುದಿಯವರೆಗೂ ಇರಬಹುದು. ಹುಲಿಯಲ್ಲಿ ಗುದದ್ವಾರದ ಕೆಳಗೆ ರಸಗ್ರಂಥಿಗಳು ಇರುತ್ತವೆ. ಹುಲಿ ಮೂತ್ರದೊಂದಿಗೆ ರಸಗ್ರಂಥಿಯಿಂದ ಉತ್ಪಾದಿಸಿದ ಸ್ರವಿಕೆಯನ್ನು ಕಾರಂಜಿಯಂತೆ ಹೊರಚಿಮ್ಮಿ ವಲಯ ನಿರ್ಮಿಸುವುದುಂಟು.

ಸಾಮಾನ್ಯವಾಗಿ ಹುಲಿಯ ಸುತ್ತಾಟದ ವಲಯ ಪ್ರದೇಶ 30ರಿಂದ 45 ಚದುರ ಕಿಲೋಮೀಟರ್ ವಿಸ್ತಾರವಾಗಿರುತ್ತದೆ. ಯಾವುದೊಂದು ಪ್ರಾಣಿಯ ವಲಯ ಪ್ರದೇಶವು ಆ ಪ್ರಾಣಿಯ ಲಿಂಗ ಉತ್ಪಾದಕಸ್ಥಿತಿ ಹಾಗೂ ಆಹಾರ ಲಭ್ಯತೆ ಈ ಕೆಲವು

ಸಂಗತಿಗಳನ್ನು ಅವಲಂಬಿಸಿದೆ. ಕೆಲವು ಹುಲಿಗಳ ವಲಯಗಳು ಅತಿ ವಿಶಾಲವಾಗಿರುತ್ತವೆ; ಅವುಗಳನ್ನು ಅಳೆಯಲು ಹುಲಿಗಳಿಗೂ ಸಾಧ್ಯವಾಗುವುದಿಲ್ಲ. ತಮ್ಮ ವಾಸನೆಯಿಂದಲೇ ವಲಯ ಗುರುತುಮಾಡಿ ಪ್ರದೇಶದ ಎಲ್ಲ ಮೇರೆಗಳ ರಕ್ಷಣೆ ಅತಿ ಕಷ್ಟವಿದ್ದು ಅಪರಿಚಿತ ಪ್ರಾಣಿಗಳು ಒಳಗೆ ಬರದಂತೆ ತಡೆಗಟ್ಟುವುದು ಕಷ್ಟದಾಯಕವಿರುತ್ತದೆ. ಇದರ ಪರಿಣಾಮವಾಗಿ ಗಂಡುಹುಲಿಯು ಗ್ರಹಿಸಿದ ಪ್ರಾಂತರಚನೆ ಅನೇಕ ಜಿಂಕೆ ಜಾತಿಯ ಪ್ರಾಣಿಗಳ ಹಾಗೂ ಪಕ್ಷಿಗಳ ಪ್ರಾಂತರಚನೆಯ ಕಟ್ಟಳೆಗಿಂತ ಸಡಿಲವಾಗಿ ಇರುತ್ತದೆ, ಎಂದು ಹೇಳಬಹುದು. ಹುಲಿಯ ಪ್ರಾಂತ್ಯವರ್ತನೆ ಆ ಪ್ರದೇಶದ ಕೆಲವು ಪರಿಸ್ಥಿತಿಗಳೆಂದೆನಿಸಿದ ನೀರಿನ ಶೇಖರಣೆ ಅಥವಾ ಆಶ್ರಯಗಳ ಮೇಲೆ ಅವಲಂಬಿಸಿ ಬದಲಾಯಿಸಲು ಸಾಧ್ಯ. ಒಂದೊಂದು ಪ್ರಾಣಿಗೆ ತನ್ನದೇ ಪ್ರತ್ಯೇಕವಾದ ವಲಯವಿರುವುದಿಲ್ಲ. ಒಂದು ವಲಯದಲ್ಲಿ ಅನೇಕ ಗಂಡುಹುಲಿಗಳು ಕಂಡುಬರಬಹುದು. ಇವು ಕ್ಷಣಿಕ ಹುಲಿಗಳಿದ್ದು ಹಲವು ಸಮಯದವರೆಗೆ ಒಂದೇ ವಲಯದಲ್ಲಿ ಉಳಿದಿರುತ್ತವೆ. ಕೆಲವು ಘೋರ ಕದನಗೈದು ತಮ್ಮ ಹಿರಿಮೆಯನ್ನು ಇತರ ವಲಯಗಳಲ್ಲಿ ಸ್ಥಾಪಿಸಿ ಪಾಲುಗೊಳ್ಳುತ್ತವೆ. ಲಿಂಗ, ಪ್ರಕೃತಿ ಸ್ಥಿತಿ ಹಾಗೂ ವೈಯಕ್ತಿಕ ಪ್ರವೃತ್ತಿ ಇವುಗಳನ್ನವಲಂಬಿಸಿ ವಿಶಾಲ ರೀತಿಯಲ್ಲಿ ವಲಯದ ಅಧಿಕಾರದ ಮಾದರಿಗಳನ್ನು ಹುಲಿಯು ಪ್ರದರ್ಶಿಸುತ್ತದೆ.

ಹುಲಿಗಳಲ್ಲಿ 'ಜೀವನಕ್ಕಾಗಿ ಪರಸ್ಪರ ನಡೆಯುವ ಹೋರಾಟ ಹಾಗೂ ಉಳಿದದ್ದು ಬಾಳಿ ಬೆಳೆಯುವುದು' ಎಂಬ ಕಾಡಿನ ಈ ಕಾನೂನು ಚೆನ್ನಾಗಿ ತೋರಿಬರುತ್ತದೆ. ಬೀದಿ ನಾಯಿಗಳಂತೆ ಅವು ತಮ್ಮ ಗುರುತಿಸಿದ ವಲಯದಲ್ಲಿ ಮಾತ್ರ ಜೀವಿಸುತ್ತವೆ. ಕೆಲವೊಂದು ಸಮಯ ಇತರ ಹುಲಿಗಳ ವಲಯದಲ್ಲಿ ಅತಿಕ್ರಮ ಪ್ರವೇಶ ಮಾಡಿದರೂ ಅದು ಅತಿಕ್ರಮವಾಗಿದೆ ಎಂದು ಗೊತ್ತಾದಾಗ ತನ್ನ ವಲಯಕ್ಕೆ ವಾಪಸ್ಸು ಬರುತ್ತದೆ. ಹೀಗೆ ಅಕಸ್ಮಾತ್ ಭೆಟ್ಟಿಕೊಟ್ಟಾಗ ಹುಲಿಗಳು ತಮ್ಮ ಗುರುತಿನ ಭೆಟ್ಟಿ ಚೀಟಿಗಳನ್ನು ಬಿಟ್ಟುಹೋಗುತ್ತವೆ. ಈ ಕಾರ್ಯ ನೆಲಪರಚುವುದರಿಂದ, ಮರ, ಮೆಳೆ, ಹುತ್ತಗಳ ಮೇಲೆ ಮೂತ್ರಮಾಡಿ ತಮ್ಮ ಮೂಗಿನಿಂದ ತಿಕ್ಕುವುದರಿಂದ ನಡೆಯುತ್ತದೆ.

ಹುಲಿಯಲ್ಲಿ ವಲಯ ನಿರ್ಮಾಣ ಪ್ರಮುಖ ಸ್ವಾರಸ್ಯ ಸಂಗತಿಯಾಗಿದೆ. ಅದು ತನ್ನ ವಾಸನೆಯನ್ನು ಕಾರಂಜಿಯಂತೆ ಹೊರಚಿಮ್ಮಿ ಹಾಗೂ ತನ್ನ ಮಲವನ್ನು ಎದ್ದು ತೋರುವಂತೆ ವಿಸರ್ಜಿಸಿ ಗುರುತು ಮಾಡುತ್ತದೆ. ಹುಲಿ ನಡೆದುಹೋಗುವಾಗ ಅಲ್ಲಲ್ಲಿ ನಿಂತು ತನ್ನ ದೇಹದ ಹಿಂದಿನ ಭಾಗವನ್ನು ಯಾವುದಾದರೊಂದು ಮರ, ಮೆಳೆ, ಕಲ್ಲು ಅಥವಾ ಬೇರೆ ವಸ್ತುವಿಗೆ ಎದುರಿಸುವಂತೆ ತಿರುಗಿಸಿ ತನ್ನ ಪೃಷ್ಟಭಾಗವನ್ನು ಕೊಂಚ ಎತ್ತರಿಸಿ ಹಾಗೂ ಬಾಲವನ್ನು ಕಮಾನಿನಂತೆ ಮೇಲೆ ಬಾಗಿಸಿ ಜೀಕಳಿಯಿಂದ ಚಿಮ್ಮಿದ ಪ್ರವಾಹಿಯಂತೆ ದ್ರವಪದಾರ್ಥವನ್ನು ಹೊರಚಿಮ್ಮಿಸುತ್ತದೆ. ಇದು ಸುಮಾರು 30 ಡಿಗ್ರಿ ಕೋನದಲ್ಲಿ ಮೇಲ್ಗಡೆ ಚಿಮ್ಮಿಸಲ್ಪಟ್ಟು ಭೂಮಿಯಿಂದ ಸುಮಾರು 1 ಮೀಟರ್‌ಗಿಂತ ಹೆಚ್ಚು ಎತ್ತರದಲ್ಲಿ ಮರಗಳಿಗೆ ಅಥವಾ ಮೆಳೆಗಳಿಗೆ ತಾಗುತ್ತದೆ. ಹೆಣ್ಣುಹುಲಿಯದು ನೀಳವಾಗಿರುತ್ತದೆ. ಹೆಚ್ಚಾಗಿ ದ್ರವ ಸ್ವಚ್ಛ ತಿಳಿಹಳದಿಯಾಗಿದ್ದು

ಅದನ್ನು ಅದರ ಮೂತ್ರವೆಂದೇ ಹೇಳಬೇಕು. ಅದರಲ್ಲಿ ಅನೇಕ ಹರಳು ಹರಳಾಗಿರುವ ತುಣುಕುಗಳು ಹಾಗೂ ಬಿಳಿಬಣ್ಣದ ಕಣಗಳು ಕಂಡುಬರುತ್ತವೆ. ಗಂಡುಹುಲಿಯ ವಾಸನಾದ್ರವವನ್ನು ಕೂಲಂಕಷವಾಗಿ ಪರೀಕ್ಷಿಸಿದರೆ ಅದು ಪುರುಷಾಂಗದಿಂದ ಹೊರ ಚಿಮ್ಮಲ್ಪಟ್ಟಿದ್ದೆಂಬುದು ತಿಳಿದುಬರುತ್ತದೆ. ಹುಲಿಯ ಮೂತ್ರ ಅಷ್ಟೊಂದು ಬಲವಾದ ವಿಶೇಷ ವಾಸನೆಯನ್ನು ಹೊಂದಿರುವುದಿಲ್ಲ; ಅದರಲ್ಲಿನ ದ್ರವ್ಯಮಾತ್ರ ಕಸ್ತೂರಿಯ ವಾಸನೆಯನ್ನು ಬಲವಾಗಿ ಹೊರಚಿಮ್ಮುತ್ತದೆ. ಅದರ ವಾಸನೆ 3–5 ಮೀಟರ್ ಅಂತರದಿಂದ ಮನುಷ್ಯನ ಮೂಗಿಗೆ ಸುಲಭವಾಗಿ ತಿಳಿದುಬರುತ್ತದೆ. ಬಿಳಿಬಣ್ಣದ ಕಣಗಳು ಗುದದ್ವಾರದ ಕೆಳಗೆ ಇದ್ದ ರಸಗ್ರಂಥಿಗಳಿಂದ ವಿಸರ್ಜಿತವಾದ ಪದಾರ್ಥ. ಈ ರಸಗ್ರಂಥಿಗಳು ಸಾಕಿದ ಬೆಕ್ಕಿನಲ್ಲಿಯೂ ಇರುತ್ತವೆ. ವಾಸನೆ ಗಿಡಬಳ್ಳಿ, ಎಲೆಗಳಿಗೆ, ಬಹಳ ಸಮಯದವರೆಗೆ ಅಂಟಿಕೊಂಡಿರುತ್ತದೆ. ವಿಶೇಷವಾಗಿ ಮರಗಳ ಬೊಡ್ಡೆಗಳ ಮೇಲೆ ಕಂಡುಬಂದ ಖಾರವಾದ ವಾಸನೆ 3 ವಾರಗಳಿಂದ 3 ತಿಂಗಳವರೆಗೆ ಇದ್ದದ್ದು ಲಕ್ಷ್ಯಕ್ಕೆ ಬಂದಿದೆ.

ಹುಲಿಗಳು ವರ್ಷದ ಎಲ್ಲ ಸಮಯದಲ್ಲೂ ವಾಸನೆ ಸ್ರವಿಸುವಿಕೆಯನ್ನು ಹೊರ ಚಿಮ್ಮುತ್ತವೆ. ಕೆಲವು ವೇಳೆ ಅರ್ಧಮೈಲು ನಡೆದುಹೋದರೂ ವಾಸನೆ ಸ್ರವಿಸುವಿಕೆಯನ್ನು ಹೊರಚಿಮ್ಮುವುದಿಲ್ಲ. ಮತ್ತೆ ಕೆಲವುಬಾರಿ ಅನೇಕಸಾರೆ ಅದರಲ್ಲಿಯೂ ವಿಶೇಷವಾಗಿ ತನ್ನ ದಾರಿಯ ದಿಕ್ಕು ಬದಲಾಯಿಸಿದಾಗ ಪುನಃ ಪುನಃ ವಾಸನೆ ದ್ರವವನ್ನು ಹೊರಚಿಮ್ಮಿದ ನಂತರವೂ ಹುಲಿ ಪ್ರತ್ಯೇಕ ಮೂತ್ರವಿಸರ್ಜನೆ ಮಾಡುವುದು ಕೆಲವು ಸಂದರ್ಭದಲ್ಲಿ ಕಂಡುಬರುತ್ತದೆ. ಇನ್ನೂ ಕೆಲವು ಬಾರಿ ನೆಲಕೆದರುವುದೂ ಹಾಗೂ ವಾಸನೆದ್ರವ ಹೊರಚಿಮ್ಮಿಸುವುದೂ ತೋರಿಬರುತ್ತದೆ.

ಹುಲಿಯ ವಾಸನೆ ಅನೇಕ ಕಾರ್ಯಸಾಧ್ಯತೆಗಳಿಗೆ ಕಾರಣವಾಗುತ್ತದೆ. ಅವುಗಳೆಂದರೆ:

1. ದಟ್ಟ ಕಾಡಿನಲ್ಲಿ ವಾಸನೆಯ ಜಾಡುಹಿಡಿದು ಹುಲಿಗಳು ಒಂದನ್ನೊಂದು ಹಿಂಬಾಲಿಸಲು ಸಾಧ್ಯವಾಗುತ್ತದೆ.

2. ವಲಯದ ವಿಸ್ತೀರ್ಣವನ್ನು ರೂಪಿಸಲು ಇದರಿಂದ ಸಾಧ್ಯವಾಗಿ ಆ ಪ್ರದೇಶದಲ್ಲಿ ತಾನು ವಾಸವಾಗಿರುವುದನ್ನು ಬೇರೆ ಪ್ರಾಣಿಗಳಿಗೆ ತೋರಿಸಿಕೊಡುತ್ತದೆ. ಅಲ್ಲಿ ಭೇಟಿಯಾಗಲು ಬಂದ ಪ್ರಾಣಿಗಳನ್ನು ಸಂದರ್ಭಾನುಸಾರವಾಗಿ ಅದು ಆಕರ್ಷಿಸಬಹುದು ಇಲ್ಲವೆ ಹೊರಗಟ್ಟಬಹುದು.

3. ಆ ಸರಹದ್ದನ್ನು ಹೊಕ್ಕು ಉಪಯೋಗಿಸಿಕೊಳ್ಳುವ ಬೇರೆ ಪ್ರಾಣಿಗಳಿಗೆ ವಿಶಿಷ್ಟ ಮಾಹಿತಿಯಾದ ಯಜಮಾನ ಹುಲಿಯ ವ್ಯಕ್ತಿತ್ವ, ಅದು ಅಲ್ಲಿ ಹಾದುಹೋದ ನಂತರ ಗತಿಸಿದ ಸಮಯ ಮತ್ತು ಅದು ಹೆಣ್ಣುಹುಲಿಯಾಗಿದ್ದರೆ ಮೈಥುನಕ್ಕೆ ಬಂದಿದೆಯೋ ಎಂಬ ಬಗ್ಗೆ ತಿಳಿಸುತ್ತದೆ.

ಹುಲಿಗಳು ಅವು ತಲುಪುವಷ್ಟು ಎತ್ತರದಲ್ಲಿ ಮರದ ತೊಗಟೆಯನ್ನು ಪರಚಿ ಉಗುರುಗಳನ್ನು ಸ್ವಚ್ಛಮಾಡಿಕೊಳ್ಳುವುದು ಸ್ವಾಭಾವಿಕ. ಪರಚಿದ ಗುರ್ತುಗಳು ವಲಯ ನಿರ್ಮಾಣದ ಗುರ್ತುಗಳಾಗಿಯೂ ಪ್ರಯೋಜನಕಾರಿಯಾಗುತ್ತವೆ. ಇಂತಹ ಮರಗಳು ಕೂಡಲೆ ಗಮನ ಸೆಳೆಯುತ್ತವೆ ಹಾಗೂ ಅವು ಭೂಮಿ ಗುರ್ತಾಗಿ ಉಪಯೋಗಿಸಲ್ಪಡುತ್ತವೆ. ಅಲ್ಲಿ ಹಾದುಹೋಗುವ ಪ್ರತಿಯೊಂದು ಹುಲಿಯು ತಪಾಸಣೆ ನಡೆಸುತ್ತದೆ. ಹಾಗೆ ತಪಾಸಣೆ ನಡೆಸಿದಾಗ ಮರಗಳ ಮೇಲೆ ಪರಚಿದ ಗುರ್ತುಗಳು ತನ್ನ ಗುರ್ತುಗಳಿಗಿಂತ ಎತ್ತರದಲ್ಲಿದ್ದರೆ ಅಲ್ಲಿಯ ರಹವಾಸಿ ಹುಲಿ ತನಗಿಂತ ದೊಡ್ಡದೆಂದು ಬಾಲ ಅಡಗಿಸಿಕೊಂಡು ವಾಪಸ್ಸು ಹೋಗುತ್ತದೆ. ತನ್ನವುಗಳಿಗಿಂತ ಕೆಳಗಿದ್ದರೆ ಅದರೊಂದಿಗೆ ಕವನಗೈಯಲು ಧೈರ್ಯ ತಂದುಕೊಂಡು ಮುನ್ನುಗ್ಗುತ್ತದೆ.

ವಾಸನೆಗೆ ಸಂಬಂಧಪಟ್ಟ ಗುರುತುಗಳು ವಿವಿಧ ಮಾರ್ಗದರ್ಶನಗಳಂತೆ ಕಾರ್ಯ ಮಾಡುತ್ತವೆ. ಅವು ಹೆಚ್ಚುಕಡಮೆ ರಸ್ತೆಯ 'ಸಿಗ್ನಲ್'ಗಳಂತೆ ಕೆಲಸ ನಿರ್ವಹಿಸಿ ಸಂಭವಿಸತಕ್ಕ ಅನಾಹುತಗಳನ್ನು ತಪ್ಪಿಸುವಲ್ಲಿ ಸಹಾಯಮಾಡುತ್ತವೆ. ಈ ಸಿಗ್ನಲ್‌ಗಳ ಅರ್ಥ ಈ ರೀತಿ ಮಾಡಬಹುದು:

(i) ಆಗತಾನೆ ಮಾಡಿದ ಹೊಸಗುರುತುಗಳು = ನಿಲ್ಲು (ಕೆಂಪುದೀಪ) ಮುಂದೆ ಸಾಗುವುದರಿಂದ ವೈರಿಯ ಸಂಗಡ ಸಂಭವನೀಯ ಹೋರಾಟ ಹಾಗೂ ಅಪಾಯ ಎದುರಿಸಲು ಸಿದ್ಧವಾಗಿರು.

(ii) ಗುರುತುಗಳನ್ನು ಮಾಡಿ ಸ್ವಲ್ಪಸಮಯ ಗತಿಸಿದ್ದರೆ = ತಾಳು (ಹಳದಿ ದೀಪ). ಆದರೆ ಅತಿಕಾಳಜಿಯಿಂದ ಮುಂದೆ ಸಾಗು.

(iii) ಹಳೆಯ ಗುರುತುಗಳು = ಹೋಗು (ಹಸುರುದೀಪ) ಯಾವುದೇ ಅಪಾಯವಿಲ್ಲ.

ಇಂತಹ ಗುರುತುಗಳನ್ನು ದಾಟುವ ಮೊದಲು ಆ ಪ್ರಾಣಿ ಕೆದರಿ ತನ್ನ ಗಂರುತುಗಳಿಂದ ಅವುಗಳನ್ನು ಮುಚ್ಚಿ 'ಮುಚ್ಚಲ್ಪಟ್ಟಿತು' ಎಂದು ಸೂಚಿಸಿ ಮುಂದೆ ಹೋಗುವುದುಂಟು.

ಹುಲಿ ವಾಸನೆಯನ್ನು ಸಂಜ್ಞೆಯ ರೂಪದಲ್ಲಿ ಉಪಯೋಗಿಸುವುದರಿಂದ ನಿಜವಾಗಿಯೂ ಮೂಗಿನಿಂದ ವಾಸನೆ ಕಂಡುಹಿಡಿಯುವ ಶಕ್ತಿ ಎಷ್ಟರಮಟ್ಟಿಗೆ ಹುಲಿಯಲ್ಲಿ ತೀಕ್ಷ್ಣವಾಗಿದೆ ಎಂಬುದು ತಿಳಿಯುತ್ತದೆ.

ಬೆಕ್ಕು ತಗ್ಗು ತೆಗೆದು ತನ್ನ ಮಲವನ್ನು ಮುಚ್ಚುವಂತೆ ಹುಲಿ ಮಾಡುವುದಿಲ್ಲ. ಆದರೆ ಮಲವಿಸರ್ಜನೆಯ ಮೊದಲು ಮುಂಗಾಲುಗಳಿಂದ ನೆಲಕೆದರಿ ನಂತರ ಹಿಂಗಾಲುಗಳಿಂದ ನೆಲವನ್ನು ಪರಚಿ ಗುರುತುಗಳನ್ನು ಮಾಡುವಾಗ ಸ್ವಲ್ಪ ಮಣ್ಣು ಮಲದ ಮೇಲೆ ಬಿದ್ದು ಮುಚ್ಚಬಹುದು ಅಷ್ಟೆ.

ಹುಲಿಯ ಮಲದಲ್ಲಿ ಗೊಂಚಲು ಗೊಂಚಲು ಕೂದಲುಗಳ ತುಣುಕುಗಳು ಮೂಳೆಯ ತುಂಡುಗಳು ಮತ್ತು ಇತರ ಅರಗದೇ ಇದ್ದ ಪದಾರ್ಥಗಳು ಕಂಡುಬರುತ್ತವೆ. ಹುಲಿ ಎಲ್ಲ ಕಡೆ ಮಲವಿಸರ್ಜನೆ ಮಾಡಿದರೂ ವಿಶೇಷವಾಗಿ ಜಂಗಲ್ ರಸ್ತೆಯ ಮಧ್ಯದಲ್ಲಿದ್ದ ಹುಲ್ಲುಗಡ್ಡೆಗಳಲ್ಲಿ ಹಾಗೂ ರಸ್ತೆಯ ಪಕ್ಕದಲ್ಲೇ ಇದ್ದ ಹುಲ್ಲಿನಲ್ಲಿ ಮಲವಿಸರ್ಜನೆ ಮಾಡುವುದೆಂದರೆ ಅದಕ್ಕೆ ಇಷ್ಟ. ಗಟ್ಟಿಯಾಗಿದ್ದ ಹಾಗೂ ಬರಿ ಮಣ್ಣಿದ್ದ ರಸ್ತೆಗಳಲ್ಲಿ ಅದು ಕ್ವಚಿತ್ತಾಗಿ ಮಲವಿಸರ್ಜನೆ ಮಾಡುತ್ತದೆ. ಹುಲಿ ತಾನು ಕೆದರಿದ ಗುರುತುಗಳ ಮೇಲೆ ಹೆಚ್ಚಾಗಿ ಮಲವಿಸರ್ಜನೆ ಮಾಡುವುದಕ್ಕಿಂತ ಮೂತ್ರ ವಿಸರ್ಜನೆ ಮಾಡುವುದೇ ಜಾಸ್ತಿ. ಕೆಲವೊಮ್ಮೆ ಎರಡನ್ನೂ ಮಾಡಲಿಕ್ಕಿಲ್ಲ. ಸಾಮಾನ್ಯವಾಗಿ ಮಲಮೂತ್ರ ವಿಸರ್ಜನೆಯನಂತರ ಹುಲಿ ತನ್ನ ಹಿಂದಿನ ಕಾಲುಗಳ ಕೋಶದಿಂದ ಉಗುರುಗಳನ್ನು ಹೊರಗೆ ತೆಗೆದು ಒಂದು ಕಾಲು ನಂತರ ಮತ್ತೊಂದು ಕಾಲು ಹಿಂದೆ ಚಲಿಸಿ ನೆಲಕೆದರಿ ಮುಂದೆ ನಡೆದು ಹೋಗುತ್ತದೆ. ಮಲವಿಸರ್ಜನೆಯೊಂದಿಗೆ ಕೆದರಿಮಾಡಿದ ಗುರುತುಗಳು ಮಳೆಗಾಲದಲ್ಲಿ ಅಥವಾ ತಂಪುಕಾಲದಲ್ಲಿ ಹೆಚ್ಚು ಕಂಡು ಬರುತ್ತವೆ ಮತ್ತು ಅವುಗಳ ಪುನರಾವರ್ತನೆ ನೆಲ ಒಣಗಿದಂತೆ ಕಡಮೆ ಆಗುತ್ತದೆ.

ಸಗಣಿಯಲ್ಲಿ ಕಂಡುಬರುವ ಹೆದ್ದುಂಬಿ ಹುಳುಗಳು ಹುಲಿಯ ಮಲವನ್ನು ವಿಸರ್ಜನೆಯ ಕೆಲವೇ ಘಂಟೆಗಳಲ್ಲಿ ಅಲ್ಲಿ ಇಲ್ಲದಂತೆ ಮಾಡಿಬಿಡುತ್ತವೆ. ಇಲ್ಲವೆ ಮಣ್ಣಿನಲ್ಲಿ ಬೆರತು ಒಂದಾಗುವಂತೆ ಮಾಡಿಬಿಡುತ್ತವೆ. ಹುಲಿಯ ಮಲ ಕಪ್ಪಗೆ ಅಂಟಂಟಾಗಿರುತ್ತದೆ. ಅದು ಒಣಗಿದ ಮೇಲೆ ಬೆಳ್ಳಗಾಗುತ್ತದೆ. ಆ ಹುಲ್ಲಿನಲ್ಲಿ ಹುಲಿಗಳು ಮಲವಿಸರ್ಜನೆ ಮಾಡಿದೊಡನೆಯೆ ಹೆದ್ದುಂಬಿಗಳು ಅಲ್ಲಿ ಬಂದು ಸೇರುತ್ತವೆ. ಅದನ್ನು ತಿನ್ನಲು ಪ್ರಾರಂಭಿಸುತ್ತವೆ. ತಿಂದುಳಿದುದನ್ನು ದುಂಡಾಗಿ ಚಿಕ್ಕ ಚಿಕ್ಕ ಗೋಲಿಯಾಕಾರಗೊಳಿಸುತ್ತವೆ. ಹುಳುಗಳು ತಲೆಕೆಳಗೆ ಮಾಡಿ ತಮ್ಮ ಹಿಂದಿನ ಕಾಲುಗಳಿಂದ ಜೋರಾಗಿ ಆ ಗೋಲಿಗಳನ್ನು ನೂಕುತ್ತಿದ್ದಂತೆ ಅನೇಕಸಾರೆ ಜೋಲಿತಪ್ಪಿ ಬೀಳುತ್ತವೆ. ಅವು ಬಿದ್ದಾಗ ರಾಗತೆಗೆದು ಹಾಡುತ್ತವೆ.

ಮಲವಿಸರ್ಜನೆ ಹಾಗೂ ಹುಲಿಕೆದರಿದ ಗುರುತುಗಳೆರಡೂ ಸೂಚನೆಯ ಸಂಕೇತಗಳು. ಮೊದಲನೆಯದು ತೋರಿಕೆ ಹಾಗೂ ವಾಸನೆಗಳಿಂದ; ಎರಡನೆಯದು ಕೇವಲ ತೋರಿಕೆಯಿಂದ ಬೇರೆ ಹುಲಿಗಳಿಗೆ ಸುಳಿವು ಕೊಡುತ್ತದೆ. ಹುಲಿ ತನ್ನ ದೈನಂದಿನ ಬೇಟೆಯ ವಿಹಾರದಲ್ಲಿ ತನ್ನ ಗಡಿಪ್ರದೇಶದಲ್ಲಿ ಅಲೆದಾಡುವಾಗ ಬೇರೆ ಪ್ರಾಣಿಗಳು ಅತಿಕ್ರಮಣ ಮಾಡಿದ ಬಗ್ಗೆ ಸೂಕ್ಷ್ಮವಾಗಿ ಯಾವುದಾದರೂ ಸಮಾಚಾರ ದರ್ಶನದ ಬಗ್ಗೆ ಮೂಗಿನಿಂದ ಮೂಸಿನೋಡುವುದುಂಟು.

ಕೆಲವು ಸಮಯ ತಾರುಣ್ಯಾವಸ್ಥೆಗೆ ಬಂದ ಹುಲಿಗಳು ಮುಪ್ಪಾದ ಹುಲಿಗಳ ಪ್ರಾಂತ್ಯವಲಯದಲ್ಲಿ ಹೋಗಿ ತಮ್ಮ ಶೌರ್ಯದಿಂದ ಪ್ರತಿಷ್ಠೆಯನ್ನು ಸ್ಥಾಪಿಸುವುದುಂಟು. ಆಗ ಮುಪ್ಪಿನ ಹುಲಿಗಳು ಅಲ್ಲಿಂದ ಕಾಲ್ತೆಗೆದು ಬೇರೆ ಕಡೆ ಹೋಗಿ ತಮ್ಮ ವಲಯ ಸ್ಥಾಪಿಸುತ್ತವೆ; ಇಲ್ಲವೆ ಪೋಲಿಯಾಗಿ ವಸಾಹತುಗಳ ಸುತ್ತಮುತ್ತ

ಅಲೆದಾಡಲು ಪ್ರಾರಂಭಿಸುತ್ತವೆ. ಆಗಾಗ ಸಿಕ್ಕ ದನಕರುಗಳನ್ನು ಕೊಂದು ಹತ್ತಿರವಿದ್ದ ಕಬ್ಬಿನ ಗದ್ದೆಗಳಲ್ಲಾಗಲಿ ಅಥವಾ ಗುಹೆಗಳಲ್ಲಾಗಲಿ ವಾಸಮಾಡಿಕೊಂಡಿರುತ್ತವೆ. ಆಗ ಆ ಹುಲಿಗಳು ಸುಲಭವಾಗಿ ಗುಂಡಿಕ್ಕಲ್ಪಟ್ಟು ಅಥವಾ ವಿಷಹಾಕಲ್ಪಟ್ಟು ಕೊಲ್ಲಲ್ಪಡುತ್ತವೆ.

ಹುಲಿ ಕೂಗು

ಹುಲಿಗಳು ಕೂಗುವ ಶಬ್ದಗಳನ್ನು ಅನುಕರಿಸುವುದು ದುಸ್ಸಾಧ್ಯವಿದ್ದು ಗಂಡು ಹೆಣ್ಣುಗಳು ಕೂಗುವ ಶಬ್ದಗಳಲ್ಲಿ ಸ್ಪಷ್ಟವಾದ ಅಂತರ ಕಂಡುಬರುತ್ತದೆ. ಗಂಡು ಹುಲಿಗಳಿಂದ ಮಾಡಲ್ಪಟ್ಟ ಶಬ್ದ ಹೆಣ್ಣುಗಳಿಗಿಂತ ಎತ್ತರ ಸ್ವರದ್ದಿದ್ದು ದೀರ್ಘವಾಗಿರುತ್ತದೆ.

ದೈನಂದಿನ ಬಾಳಿನಲ್ಲಿ ಮನಸ್ಸಿನ ಹಲವು ಆಕರ್ಷಣೆ, ಸಂತೋಷ, ಉಲ್ಲಾಸ, ಉದ್ರೇಕ, ಉದ್ವೇಗ, ಜಾಗರೂಕತೆ, ಕಳವಳ, ಕೌತುಕ, ಭಯ, ನಿರಾಶೆ, ದುರ್ಬಲತೆ ಇವೇ ಮೊದಲಾದ ಹಾವಭಾವಗಳನ್ನು ವ್ಯಕ್ತಪಡಿಸಲು ಹುಲಿಗಳು ಬಗೆಬಗೆಯಾಗಿ ಕೂಗುತ್ತವೆ. ಆಹಾರ ಬೇಕಾದಾಗ, ಹಂಚಿಕೊಳ್ಳುವಾಗ, ಪ್ರಣಯಕ್ಕೆ ಸಿದ್ಧವಾದಾಗ, ಮರಿಗಳನ್ನು ಕರೆಯುವಾಗ, ವಿವಿಧ ರೀತಿಯಾಗಿ ಕೂಗುತ್ತವೆ. ಉಚ್ಚಸ್ವರದಿಂದ ಕೂಡಿದ 'ಊಫ್' ಎಂಬ ಕಾರಿ ಕೂಗುವುದರಿಂದ ಹಿಡಿದು ತುಂಬುಗಂಟಲಿನಿಂದ ಗರ್ಜಿಸುವ ಧ್ವನಿಯವರೆಗೂ ಈ ಕೂಗುಗಳಿರುತ್ತವೆ. ಹಲವು ಸಲ ಅವು ಲೊಟ ಗುಟ್ಟುತ್ತವೆ: ಕೆಮ್ಮುವಂತಹ ಧ್ವನಿ ಹೊರಡಿಸುತ್ತವೆ: ಅನೇಕ ತೆರನಾಗಿ ಗುರುಕಾಯಿಸುತ್ತವೆ; ಕೋಪಿಷ್ಟವಾದಾಗ ಗುರ್ರೆಂದು, ಆಶ್ಚರ್ಯಚಕಿತವಾದಾಗ ಉಚ್ಚಸ್ವರದಲ್ಲಿ 'ವೂಫ್' ಎಂದು ಕೂಗಿ ತಟ್ಟನೆ ಕುಪ್ಪಳಿಸುತ್ತವೆ.

ಕೆಲವು ಸಮಯ ದೀರ್ಘ ಹಾಗೂ ತಗ್ಗಿದ ಧ್ವನಿಯಲ್ಲಿ ಬಾಯಿತೆರೆಯದೆ ಅಥವಾ ಅರೆಬಾಯಿತೆರೆದು 'ಅ-ಅ-ಮ್-ಮ್-ಊ-' ಎಂದು ನರಳುವಂತೆ ಹುಲಿಯು ಶಬ್ದಮಾಡುವುದುಂಟು. ಅದು ತಕರಾರು ಇಲ್ಲವೆ ತೊಂದರೆಗಳ ಮನೋಭಾವ ತೋರಿಕೆ. ಅಸ್ಪಷ್ಟವಾಗಿ ಬಾಯಿಂದ ಜಗಿದಂತೆ ಆ ಸಪ್ಪಳ ಕೇಳಿಬರುತ್ತದೆ. ಅನೇಕ ಸಾರಿ ಬೇಟೆಯ ಪ್ರಾಣಿ ಸಿಗದೆ ತಪ್ಪಿಸಿಕೊಂಡು ಓಡಿದಾಗ ನಿರಾಶೆಯಿಂದ 'ನಮ್-ನಮ್-ನಮ್' ಎಂಬ ಹಲ್ಲುಕಿರಿದಂತೆ ಸಪ್ಪಳ ಮಾಡುತ್ತದೆ. ಈ ಕೂಗು ಅಷ್ಟು ಜೋರಾಗಿರುವುದಿಲ್ಲ. ಅದು ಕೆಲವು ಅಡಿಗಳವರೆಗೆ ಮಾತ್ರ ಕೇಳಿಸುತ್ತದೆ.

ಎಲ್ಲ ಕೂಗುಗಳಲ್ಲಿ ಗರ್ಜನೆಯದೇ ಒಂದು ರೀತಿ. ಆಕ್ರಮಣ ಮಾಡುವಾಗ ಕೂಗಿದ ಗಂಟಲಿನಿಂದ ಹೊರಟ ಒರಟು ಸ್ವರ ಅದು. ಕ್ಷಣಮಾತ್ರದಲ್ಲಿ ಕೋಪದಿಂದ ಏರಿಹೋಗುವಾಗ ಎರಡು ಮೂರು ಸಾರಿ ಈ ರೀತಿ ಹುಲಿಗಳು ಕೂಗುತ್ತವೆ. ಹುಲಿಗಳು ಹೊಟ್ಟೆತುಂಬಿದಾಗ, ಸಂತೋಷದಿಂದ ಇದ್ದಾಗ ಹಾಗೂ ನಡೆದಾಡುವಾಗ ಗರ್ಜಿಸುತ್ತವೆ. ಇದು ಬಹಳ ವಿಶಾಲವಾದ ಗರ್ಜನೆಯಿದ್ದು ಉಚ್ಚ ಹಾಗೂ ಸಮ

ನಾದ ಸ್ವರದಿಂದ ಕೂಡಿರುತ್ತದೆ. ಪ್ರತಿ ಮೂರು ನಾಲ್ಕು ಹೆಜ್ಜೆಗಳಿಗೊಮ್ಮೆ 'ಉಫ್-ಉಫಾ-ಅಂವೂಂಫಾ' ಎಂಬ ಗರ್ಜನೆಯನ್ನು ಪುನರುಚ್ಚರಿಸುತ್ತವೆ. ಇದು ಭಯಾನಕವಾಗಿದ್ದು ಬಹಳ ದೂರದ ಅಂತರದವರೆಗೂ ಕೇಳಿಬರುತ್ತದೆ. ರಾತ್ರಿಯ ಸಮಯದಲ್ಲಿ ಎರಡು ಮೈಲುಗಳವರೆಗೂ ಇದು ಕೇಳಿಸುತ್ತದೆ. ಕೆಲವು ಸಮಯ ದೊಡ್ಡ ಪ್ರಾಣಿಗಳನ್ನು ಕೊಂದು ಆಹಾರ ಯಥೇಚ್ಛವಾಗಿದ್ದಾಗಲೂ ಗರ್ಜಿಸುವು ದುಂಟು. ಹುಲಿಮರಿಗಳು ಗರ್ಜನೆಗೆ ಓಗೊಟ್ಟು ತಮ್ಮ ತಾಯಿಯ ಈ ಕರೆಗೆ ಪ್ರತಿಕ್ರಿಯೆ ತೋರಿಸಿ ತಾಯಿಯ ಹತ್ತಿರ ಹೋಗುತ್ತವೆ. ಕೊಂದ ದೇಹದ ಮೇಲೇರಿ ಅದನ್ನು ತಿನ್ನುತ್ತಿದ್ದಾಗಿನ ಗರ್ಜನೆಯಿಂದ ಬೇರೆ ಪ್ರಾಯದ ಹುಲಿಗಳು ಬಳಿಸಾರುತ್ತವೆ. ಮೈಥುನಕ್ಕೆ ಇದರಿಂದ ನೆರವಾಗುತ್ತದೆ. ಕೆಲವು ಸಮಯ ಆ ಗರ್ಜನೆಗೆ ಏನೂ ಪ್ರತಿಕ್ರಿಯೆ ದೊರಕದೆ ಹೋಗಬಹುದು. ಕೆಲಸಮಯ ಅದನ್ನು ಕೇಳಿ ಕೆಲವು ಹುಲಿಗಳೂ. ಪ್ರಾಣಿಗಳೂ ದೂರ ಹೋಗಬಹುದು. ಆದರೆ ಪ್ರತಿಯೊಂದು ಸಂದರ್ಭ ದಲ್ಲಿಯೂ ಆ ಕೂಗು ಇತರ ಪ್ರಾಣಿಗಳ ಲಕ್ಷ್ಯವನ್ನು ಸೆಳೆಯದೇ ಹೋಗುವುದಿಲ್ಲ. ಅದರಿಂದ ಆ ಪ್ರಾಣಿ ಇದ್ದ ಸ್ಥಳದ ಸೂಚನೆ ಖಂಡಿತಕ್ಕೂ ಇತರ ಪ್ರಾಣಿಗಳಿಗಾಗುವುದು. ಬೇರೆ ಹುಲಿಗಳು, ಕೆಲವು ಸಮಯಗಳಲ್ಲಿ ಗರ್ಜನೆಗೆ ಉತ್ತರಿಸಿ ಪುನರುಚ್ಚರಿಸಿದಾಗ ಒಂದನ್ನೊಂದು ಗುರುತಿಸಿ ಕಂಡುಹಿಡಿಯಲು ಇದರಿಂದ ಸಹಾಯವಾಗುತ್ತದೆ. ಕೆಲ ವೊಂದು ಪ್ರದೇಶದಲ್ಲಿನ ಹುಲಿಗಳು ಒಂದು ಮತ್ತೊಂದರ ಕರೆಯನ್ನು ಗುರುತಿಸಿ ಅದಕ್ಕೆ ಮಾತ್ರ ಪ್ರತಿಕ್ರಿಯೆ ತೋರಿಸುವುದುಂಟು.

ತನ್ನ ಪ್ರೇಮಿಯನ್ನು ಹುಡುಕುವ ಹುಲಿಯಾಗಲಿ ಅಥವಾ ಕಳೆದುಹೋದ ತನ್ನ ಮರಿಯನ್ನು ಹುಡುಕುವ ತಾಯಿ ಹುಲಿಯಾಗಲಿ ಕರೆಯುವ ಗರ್ಜನೆಯ ಸಪ್ಪಳವನ್ನು ವಿವರಿಸುವುದು ಅಸಾಧ್ಯ. ಅದು ಅತಿ ಘೋರ ಪ್ರಮಾಣದಲ್ಲಿದ್ದು ಪ್ರತಿಭಟನೆಯಿಂದ ಕೂಡಿದ್ದರೂ ಅದರಲ್ಲಿ ಗೋಳಿನ ಕಿರುಚಾಟವಿರುತ್ತದೆ. ಅದು ಅಮಂಗಳವಾಗಿದ್ದರೂ ವಾತ್ಸಲ್ಯಪೂರಿತವಾಗಿರುತ್ತದೆ.

ಹುಲಿಗಳು ಸಾಕಿದ ಬೆಕ್ಕಿನಂತೆ 'ಉರ್-ಉರ್' ಎಂದೂ ಶಬ್ದಮಾಡುತ್ತವೆ. ಆದರೆ ಅದು ಮೃದುವಾದ ಕರ್ಕಶಸ್ವರದಿಂದ ಕೂಡಿದ್ದು ಮರಿಗಳಿಗೆ ಹಿಂಬಾಲಿಸಲು ಪ್ರಚೋದಿಸುತ್ತದೆ. ತನ್ನ ಮರಿಗಳ ಸಂಗಡ ಕುಳಿತು ಅಥವಾ ಮಲಗಿ ಆಡುವಾಗಲೂ ಸಹ ತಾಯಿಹುಲಿ ಈ ರೀತಿಯ ಶಬ್ದಮಾಡುತ್ತದೆ. ಪ್ರೇಮಿಗಳು ತಮ್ಮ ಪ್ರಣಯ ದಾಟದಲ್ಲಿ ಸರಸ ಸಲ್ಲಾಪಗಳೊಂದಿಗೆ ಆಡುವಾಗಲೂ ಈ ರೀತಿ ಶಬ್ದ ಮಾಡುವುದುಂಟು.

ಹುಲಿಗಳು ಒಂದನ್ನೊಂದು ಸ್ನೇಹಭಾವದಿಂದ ಸಮೀಪಿಸುವಾಗ ಅವು ಸಾಮಾನ್ಯ ವಾಗಿ ಮೂಗಿನಿಂದ ತೀವ್ರಗತಿಯಲ್ಲಿ ಗಾಳಿಯನ್ನು ಹೊರಗೆ ಶೀನುತ್ತ ಮೃದುವಾಗಿ ಊದಿದಂತೆ ಶಬ್ದಮಾಡುತ್ತವೆ.

ಮರಿಗಳು ಸಂಕಟದಲ್ಲಿದ್ದಾಗ ಮತ್ತು ಹಸಿವಾದಾಗ 'ವಿಂಯಾಂನ್-ವಿಂಯಾನ್' ಎಂದು ಉಚ್ಚಸ್ವರದಲ್ಲಿ ಕಿರುಚುತ್ತವೆ.

ಬೆದರಿದ ಹುಲಿಗಳು 'ವೂಫ್' ಎಂದು ಸಪ್ಪಳ ಮಾಡುತ್ತವೆ. ಮರಿಗಳು ಬೀಳನ್ನು ತಿನ್ನುತ್ತಿರುವಾಗ ಬೇರೊಂದು ಮರಿ ಬಂದಾಗಲೂ ಈ ರೀತಿ ಶಬ್ದ ಮಾಡುವುದುಂಟು.

ಹುಲಿಗಳು ಶಂಕೆಯುಂಟಾದಾಗ ನರಳಿದಂತೆ ಶಬ್ದ ಮಾಡುತ್ತವೆ; ಕೂಡಿ ಚೇಷ್ಟೆ ಯಾಡುವಾಗ ಒಂದಕ್ಕೊಂದು ಸಂಬಂಧವಿಟ್ಟುಕೊಳ್ಳಲೂ ಹಾಗೆ ಶಬ್ದಮಾಡುತ್ತವೆ. ಈ ಎಲ್ಲ ಸಂಧರ್ಭಗಳಲ್ಲಿ ಪ್ರಾಣಿ ಕೆಲವು ವಿಧಗಳಿಂದ ಕೆರಳಿದಾಗ ತನ್ನ ಬಾಯಿಂದ ನರಳಿ ಒಂದು ರೀತಿಯ ಬಿಗುವನ್ನು ಸಡಿಲಿಸಿಕೊಳ್ಳುತ್ತದೆ.

ಹುಲಿಗಳು ಒಂದನ್ನೊಂದು ಕೆಣಕಿ ಹೆದರಿಸುವಾಗ ಮತ್ತು ಮನುಷ್ಯನನ್ನು ಕಂಡಾಗ ಪ್ರತಿಕ್ರಿಯೆ ತೋರಿಸುವಾಗ ಗುರುಕಾಯಿಸುತ್ತವೆ, ಕೂಗುತ್ತವೆ ಹಾಗೂ ಬುಸ್ಸೆನ್ನುತ್ತವೆ. ಈ ಶಬ್ದಗಳು ಮುಖ್ಯವಾಗಿ ತೊಂದರೆ ಸೂಚಕಗಳು. ಇವು ಸಂದರ್ಭಾನುಸಾರವಾಗಿ ಒಂದಕ್ಕೊಂದು ಪ್ರತಿಕ್ರಿಯೆ ತೋರಿಸಿ ಸ್ಥಿತಿಗತಿಗನುಸಾರವಾಗಿ ಬದಲಾಗುತ್ತವೆ. ಗುರುಗುಟ್ಟುವ ಶಬ್ದವೆಂದರೆ ಒಂದೇ ತೆರನಾಗಿ ಉರುಳುವ ಧ್ವನಿ ಯಲ್ಲಿ ಹೆಚ್ಚುಕಡಮೆ ದೂರದಲ್ಲಿಯ ಮೋಟಾರದ ಸಪ್ಪಳದಂತೆ ಇದ್ದು ಸುಮಾರು 150ರಿಂದ 200 ಅಡಿಗಳ ಅಂತರದವರೆಗೆ ಕೇಳಿಸುತ್ತದೆ. ಹುಲಿ ಬಾಯಿತೆರೆದು ಉಚ್ಚಸ್ವರದಲ್ಲಿ ಕೂಗಿದಾಗ ಸಿಡುಕಿನ ಧ್ವನಿಯಲ್ಲಿ ಗುರುಕಾಯಿಸಿದಂತೆ ಕೇಳಿಬರುತ್ತದೆ. ಅದು ಮೃದುವಾಗಿ ಅಥವಾ ಕರ್ಕಶವಾಗಿ ಇರಬಹುದು. ಗುರುಕಾಯಿಸುವ ಈ ಕೂಗು ಕ್ರಮೇಣ 'ಬುಸ್ಸೆಂದು' ಅಥವಾ ತಕ್ಷಣ ಸ್ಫೋಟವಾದಂತೆ 'ಭೋ' ಎಂದು ಕೊನೆಗೊಳ್ಳುತ್ತದೆ.

ಆಕ್ರಮಣ ಮಾಡುವ ಹುಲಿಗಳು ಮೃದು ಹಾಗೂ ಕಠಿಣವಾಗಿ ಕಾರಿಕೆಮ್ಮುವಂತೆ ಗರ್ಜಿಸುತ್ತವೆ. ಇದು ಹೆಚ್ಚಾಗಿ ಒಂದೇ ಬಾರಿ ಕೂಗಿ ಕೆಲವುಸಾರಿ ವಿಶದವಾಗಿ ಸಿಟ್ಟನ್ನು ಸೂಚಿಸುತ್ತ ಅನೇಕ ಸಾರಿ ಗರ್ಜನೆಗೈಯುತ್ತದೆ. ಕಾಗೆ ಹಾಗೂ ರಣಹದ್ದು ಗಳನ್ನು ಬೆನ್ನಟ್ಟಿ ಓಡಿಸುವಾಗಲೂ ಕಾರಿಕೆಮ್ಮುವ ಗರ್ಜನೆ ಮಾಡುವುದುಂಟು. ಇದೇ ರೀತಿಯ ಶಬ್ದ ಮನುಷ್ಯನ ಮೇಲೆ ಆಕ್ರಮಣ ಮಾಡುವಾಗಲೂ ಕಂಡುಬರುತ್ತದೆ.

ಗುರಿಯಿಟ್ಟು ಗುಂಡು ಹಾರಿಸಿದಾಗ, ಒಂದನ್ನೊಂದು ಕಾದಾಡುವಾಗ, ಶಕ್ತಿ ಮೀರಿ ಭಯಂಕರ ಸಿಡುಕುತನದಿಂದ ಗರ್ಜಿಸುವುದುಂಟು. ಈ ಕೂಗು ಎಲ್ಲ ದೃಷ್ಟಿ ಯಿಂದ ಕಾರಿಕೆಮ್ಮುವ ಗರ್ಜನೆಗಿಂತ ಅತಿ ತೀವ್ರ ಹಾಗೂ ದೀರ್ಘವಾಗಿರುತ್ತದೆ.

ಇನ್ನೊಂದು ರೀತಿಯ ಶಬ್ದವನ್ನು ಹುಲಿಗಳು ಬಹಳ ಆಶ್ಚರ್ಯಕರವಾಗಿ ಆಗಾಗ ಮಾಡುತ್ತಿರುತ್ತವೆ. ಇದು ಕಡವೆ ಮೃಗದ ಎಚ್ಚರಿಕೆ ಕೊಡುವ ಕೂಗಿನಂತೆಯೇ ಇದ್ದು, ಅದು ಮೃದುವಾಗಿ, ಚಿಕ್ಕ ಹಾಗೂ ತೀಕ್ಷ್ಣವಾದ ಹೆಚ್ಚುಕಡಮೆ 'ಪೊಕ್' ಎಂಬಂತೆ ಕೇಳಿಬರುತ್ತದೆ. ತನ್ನ ಬೇಟೆಯ ಪ್ರಾಣಿಗಳನ್ನು ಗುರುತಿಸಿ ಕಂಡುಹಿಡಿಯಲು

ಈ ರೀತಿ ಹುಲಿ ಕೂಗುವುದುಂಟು. ಹೇಗೆಂದರೆ ಹುಲಿಯ 'ಫೂಕ್' ಈ ಸೂಚನೆಯ ಕೂಗನ್ನು ಕೇಳಿ ಸುತ್ತಮುತ್ತಲೂ ಅಡಗಿಕೊಂಡಿದ್ದ ಕಡವೆಗಳು 'ಫೂಕ್' ಎಂದು ತಮ್ಮದೇ ಆದ ಧ್ವನಿಗಳಲ್ಲಿ ಕೂಗುತ್ತ ಒಂದು ಪ್ರಾಣಿಯಿಂದ ಮತ್ತೊಂದು ಪ್ರಾಣಿಗೆ ಸೂಚನೆಯನ್ನು ಪ್ರಸಾರ ಮಾಡುತ್ತವೆ. ಆಗ ತಮ್ಮ ಸ್ಥಳಗಳ ಗುಟ್ಟನ್ನು ಹುಲಿಗೆ ಹೊರಗೆಡಹುತ್ತವೆ.


ಹುಲಿಗಳ ಅಂಗವಿನ್ಯಾಸ ಹಾಗೂ ಭಾವಾಭಿನಯ

ಹುಲಿಗಳು ಅನೇಕ ವಿಶೇಷ ಪ್ರಕಾರಗಳಲ್ಲಿ ಕೆಣಕುವ ರೀತಿಯಲ್ಲಿ ನಡೆದುಕೊಳ್ಳುತ್ತವೆ. ಆಗ ಅವು ಹೆಚ್ಚಾಗಿ ಬಾಯಿಂದ ಸಪ್ಪಳ ಮಾಡಿಯೇ ಸೂಚನೆಗೈಯುತ್ತವೆ. ಕಡಮೆ ತೀಕ್ಷ್ಣತೆಯ ಬೆದರಿಕೆಯ ಸೂಚನೆಯಲ್ಲಿ ಹುಲಿ ಮೂಗು ಹಾಗೂ ತಲೆಯ ಮುಂಭಾಗದ ಮೇಲೆ ಮಡಿಕೆಗಳು ಬೀಳುವಂತೆ ಮಾಡಿ ತನ್ನ ಕಿವಿಗಳನ್ನು ಹಿಂದೆ ಬಾಗಿಸಿ ಕೋರೆಹಲ್ಲುಗಳನ್ನು ಒಮ್ಮೆ ತೆರೆಯುವುದು ಮತ್ತೊಮ್ಮೆ ಮುಚ್ಚುವುದು ಮಾಡುತ್ತದೆ. ಹುಲಿಯ ಕಿವಿಗಳು ಬಾಗಿದುದು ಹೆಚ್ಚಾಗಿ ಕೆಣಕುವ ಕಾರ್ಯ ಸನ್ನಿಹಿತವೆಂದು ಅದರ ಸೂಚನೆ. ಸಾಧಾರಣದಿಂದ ಹೆಚ್ಚು ತೀಕ್ಷ್ಣತೆಯ ಬೆದರಿಕೆಯ ಸಂದರ್ಭದಲ್ಲಿ ವೈರಿ ಸಮೀಪಿಸಿದಂತೆ ಅರ್ಧದಿಂದ ಪೂರ್ಣ ಬಾಯಿತೆರೆದು, ಕೋರೆ ಹಲ್ಲುಗಳನ್ನು ಹೊರಗೆ ತೋರಿಸುತ್ತ, ಕಿವಿಗಳನ್ನು ಸಪಾಟಾಗಿ ಬಾಗಿಸಿ ಹೆಚ್ಚಾಗಿ ಗುರುಗುಟ್ಟುತ್ತ ಕೂಗುತ್ತದೆ. ಅತಿ ತೀಕ್ಷ್ಣ ಆಕ್ರಮಣದಲ್ಲಿ ತನ್ನ ಮುಂದಿನ ಪಂಜಗಳಿಂದ ಏಟು ಕೊಡುವುದರಿಂದ ಹಿಡಿದು ತನ್ನ ಹಿಂದಿನ ಕಾಲಮೇಲೆ ನಿಂತು ಮುಂದಿನ ಎರಡೂ ಪಂಜಗಳಿಂದ ಬೀಸಿ ಹೊಡೆಯುವವರೆಗೆ ಅದು ಕೂಡಿರುತ್ತದೆ.

ಬಾಲದ ಚಲನವಲನವೂ ಸಹ ಪ್ರಾಣಿಯ ಮನೋಭಾವವನ್ನು ತೋರಿಸಿ ಕೊಡುತ್ತದೆ. ಅದರ ಬಾಲದ ತುದಿ ಅಲ್ಪವಾಗಿ ಎಸೆದಾಡುವುದರಿಂದ ಹುಲಿ ಹೆಚ್ಚಿನ ಬಿಗುವಿನ ಸ್ಥಿತಿಯಲ್ಲಿದ್ದಾಗ ಬಾಲದ ತುದಿಯನ್ನು ಅಲ್ಪವಾಗಿ ಎಸೆದಾಡಿ ಇಡೀ ಬಾಲ ವನ್ನು ಅತಿ ತೀವ್ರವಾಗಿ ಮೇಲೆ ಕೆಳಗೆ ಅಪ್ಪಳಿಸುತ್ತಿರುತ್ತದೆ. ಸಾಮಾನ್ಯ ಸ್ಥಿತಿಯಲ್ಲಿ ಹುಲಿ ತನ್ನ ಬಾಲವನ್ನು ಭೂಮಿಗೆ ಹತ್ತಿರದಲ್ಲಿ ಎತ್ತಿಹಿಡಿದು ಸ್ವಲ್ಪಮಟ್ಟಿಗೆ ಬಾಗಿಸಿರುತ್ತದೆ.

ಹುಲಿಗಳ ಕೆಣಕುವ ಬೆದರಿಕೆ ಹಾಗೂ ರಕ್ಷಣಾರ್ಥಕ ಬೆದರಿಕೆಗಳನ್ನು ಬೆಕ್ಕಿನ ವಂಶಕ್ಕೆ ಸೇರಿದ ಅನೇಕ ಪ್ರಾಣಿಗಳ ಮುಖಭಂಗಿ ಹಾಗೂ ದೇಹಸ್ಥಿತಿಗಳನ್ನವಲಂಬಿಸಿ ಗುರುತಿಸಬಹುದು. ಕೆಣಕುವ ಬೆದರಿಕೆಯಲ್ಲಿದ್ದ ಹುಲಿ ಅದರ ಬಾಯಿ ತೆರೆಯದೇ ಇದ್ದು ಅಥವಾ ಅರ್ಧಮರ್ಧ ತೆರೆದಿದ್ದು ಕಿವಿಗಳನ್ನು ನೆಟ್ಟಗೆ ನಿಲ್ಲಿಸಿರುತ್ತದೆ.


ಬೆಕ್ಕಿನ ಜಾತಿಗೆ ಸೇರಿದ ಎಲ್ಲ ಪ್ರಾಣಿಗಳು ತಮ್ಮ ಕಿವಿಗಳ ಹಿಂಭಾಗದಲ್ಲಿ ಎದ್ದು ಕಾಣುವಂತಹ ವಿಶಿಷ್ಟ ಆಕಾರದ ಬಿಳಿಚುಕ್ಕೆಗಳನ್ನು ಎದುರಿಗೆ ಕಾಣಿಸುವಂತೆ ಕಿವಿಗಳನ್ನು ತಿರುಗಿಸುತ್ತವೆ; ಕಣ್ಣುಗೊಂಬೆಗಳು ಚಿಕ್ಕವಾಗಿ ತೋರುತ್ತವೆ. ರಕ್ಷಣಾರ್ಥ ಬೆದರಿಕೆ




ಚಿತ್ರ 15: ಸಿಂಹುಲಿ ಅಥವಾ ಟೈಗಾನ್



ಚಿತ್ರ 16: ಹುಲಿ ಮೆಟ್ಟಿನ ಒಂದು ನೋಟ




ಹುಲಿಯ ಸಾಮಾನ್ಯ ನೋಟ



ಹುಲಿ ಬಾಯಿ ತೆರೆದಾಗಿನ ನೋಟ

ಚಿತ್ರ 17: ಹುಲಿಯ ಎರಡು ನೋಟಗಳು



ಚಿತ್ರ 18: ಹುಲಿಯ ವಿವಿಧ ಭಾವಾಭಿನಯಗಳು

ಹಾಕುವ ಹುಲಿಯ ಕೋರೆಹಲ್ಲುಗಳು ಹೊರಗೆ ತೆರೆದಿರುತ್ತವೆ; ತೆರೆದ ಬಾಯಿಯ ಮೂಲೆಗಳು ಹಿಂದೆ ಜಗ್ಗಿದಂತಿರುತ್ತವೆ; ಕಿವಿಗಳು ಸಪಾಟಾಗಿ ಬಾಗಿರುತ್ತವೆ ಹಾಗೂ ಕಣ್ಣುಗೊಂಬೆಗಳು ದೊಡ್ಡವಾಗಿರುತ್ತವೆ.

ಕಾಡಿನಲ್ಲಿ ಹುಲಿಯನ್ನು ಕಾಣಬೇಕಾದರೆ ಸಾಯಂಕಾಲದ ಮುಂಬೆಳಕು ಹಾಗೂ ಬೆಳಗಿನ ಜಾವ ಒಳ್ಳೆಯ ಸಮಯಗಳು. ಮನುಷ್ಯನು ಯಾವುದೇ ಸದ್ದಿಲ್ಲದೆ ಹಾಗೂ ಚಲನವಲನವಿಲ್ಲದೆ ಅಡಗಿ ಕುಳಿತರೆ ಬೇರೆ ಕಾಡುಮೃಗಗಳನ್ನು ಕಂಡಂತೆ ಹುಲಿಯ ಬೇಟೆಯಾಡುವಿಕೆ, ತಿನ್ನುವಿಕೆ, ನೀರಲ್ಲಿ ಹೊರಳಾಡುವಿಕೆ ಹಾಗೂ ಇತರ ಚಟುವಟಿಕೆಗಳನ್ನು ಕಾಣಬಹುದು. ನೈಸರ್ಗಿಕಸ್ಥಿತಿಯಲ್ಲಿ ಹುಲಿಯನ್ನು ಕಾಣುವುದು ಅತಿ ರೋಮಾಂಚನಕಾರಿ ಅನುಭವ.

ಅಧ್ಯಾಯ 5

ಆಹಾರ ಹಾಗೂ ಬೇಟೆ

ಹುಲಿ ತನ್ನ ಬಾಳಿನಲ್ಲಿ ಹೆಚ್ಚಿನ ಕಾಲವನ್ನು ತನ್ನ ಆಹಾರಶೋಧನೆಯಲ್ಲಿಯೇ ಕಳೆಯುತ್ತದೆ. ಅದರ ದೈನಂದಿನ ಕಾರ್ಯಕಲಾಪಗಳ ಹೆಚ್ಚಿನ ಅಂಶ ಆಹಾರ ಶೋಧನೆ. ಆಹಾರ ದೊರಕಿಸುವುದೇ ಅದರ ಪ್ರದಕ್ಷಿಣೆಯ ಉದ್ದೇಶ. ಅದು ಆಸಕ್ತ ವಾಗಿ ಬೇಟೆಯಾಡಿ, ಆಹಾರ ಸೇವಿಸಿ ಕೊಂದ ದೇಹದ ಪಕ್ಕದಲ್ಲಿ, ತೃಪ್ತಿಗೊಂಡು ವಿಶ್ರಾಂತಿ ಹೊಂದಿದಾಗಲೇ ಅದಕ್ಕೆ ನೆಮ್ಮದಿ. ಹುಲಿ ತನ್ನಿಂದ ಯಾವ ಪ್ರಾಣಿಗಳನ್ನು ಹಿಡಿಯಲು ಸಾಧ್ಯವೋ ಅವೆಲ್ಲವುಗಳ ಮೇಲೂ ಬೇಟೆಯಾಡುತ್ತದೆ. ಅವುಗಳಲ್ಲಿ ಪಕ್ಷಿಗಳು, ಹರಿದಾಡುವ ಜಂತುಗಳು, ಭೂಜಲಚರ ಪ್ರಾಣಿಗಳು, ಮೀನು ಮತ್ತು ಬೆನ್ನೆಲುಬು ಇಲ್ಲದ ಪ್ರಾಣಿಗಳು ಸೇರಿರುತ್ತವೆ. ಸಸ್ತನಿ ಪ್ರಾಣಿಗಳ ಪೈಕಿ ಕಾಲು ಕೊಳಗವುಳ್ಳ ಪ್ರಾಣಿಗಳು ಹೆಚ್ಚಿನ ಪ್ರಮಾಣದಲ್ಲಿ ಹುಲಿಯ ಆಹಾರವೆಂದು ಪರಿಗಣಿಸ ಲ್ಪಡುತ್ತದೆ. ಭಾರತದಲ್ಲಿ ಸಾಮಾನ್ಯವಾಗಿ ಹುಲಿಯ ಬೇಟೆಯ ಪ್ರಾಣಿಗಳೆಂದರೆ ಜಿಂಕೆ, ಕಡವೆ, ಕಸ್ತೂರಿಮೃಗ, ಕಾಡುಕುರಿ, ಖಡ್ಗ, ನೀಲ, ಕೃಷ್ಣ ಹಾಗೂ ಕಾಟೆಮೃಗಗಳು, ಕಾಡೆಮ್ಮೆ ಮತ್ತು ಕಾಡುಹಂದಿಗಳು. ಕಾಡುಹಂದಿಗಳೆಂದರೆ ಹುಲಿಗೆ ಪ್ರಾಣ.

ಅನೇಕ ಪ್ರದೇಶಗಳಲ್ಲಿ ಹುಲಿಗಳು ಸಾಕಿದ ಪ್ರಾಣಿಗಳನ್ನು ತಮ್ಮ ಆಹಾರಕ್ಕಾಗಿ ಅವಲಂಬಿಸಿರುತ್ತವೆ. ಹುಲಿಗಳು ಕುದುರೆ, ಕತ್ತೆ, ಒಂಟೆ, ಕುರಿ, ಆಡು ಹಾಗೂ ಅನೇಕಸಾರಿ ಆನೆಮರಿಗಳನ್ನು ಸಹ ಕೊಂದು ತಿನ್ನುತ್ತವೆ. ಈಗ ಭಾರತದಲ್ಲಿ ತೀವ್ರ ಪ್ರಮಾಣದಲ್ಲಿ ವನ್ಯಪ್ರಾಣಿಗಳ ಸಂಖ್ಯೆ ಕಡಮೆ ಆಗಿದ್ದರಿಂದ ಅನೇಕ ಅರಣ್ಯಗಳಲ್ಲಿಯ ಹುಲಿಗಳು ಭಾಗಶಃದಿಂದ ಸಂಪೂರ್ಣವಾಗಿ ಆಕಳು ಹಾಗೂ ಎಮ್ಮೆಗಳ ಮೇಲೆ ಬದುಕಿವೆ. ನಮ್ಮ ದೇಶದ ಹುಲಿಗಳ ಮುಖ್ಯ ಮೂಲ ಆಹಾರವೆಂದರೆ ಈ ಎರಡು ಸಾಕಿದ ಹಾಲುಕೊಡುವ ಪ್ರಾಣಿಗಳೇ.

ಹುಲಿಗಳು ಕೆಲವು ಸಮಯ ತನ್ನ ಜಾತಿಯ ಪ್ರಾಣಿಗಳನ್ನೊಳಗೊಂಡು ಇತರ ಮಾಂಸಭಕ್ಷಕ ಪ್ರಾಣಿಗಳ ಮೇಲೆಯೂ ಸುಲಭವಾಗಿ ಬೇಟೆಯಾಡುತ್ತವೆ. ಕರಡಿಗಳೂ ಚಿರತೆಗಳೂ ಕೆಲವು ಬಾರಿ ಬಲಿಯಾಗುತ್ತವೆ. ಹುಲಿಗಳು ಆಗಾಗ ಇಲಿ ಹೆಗ್ಗಣ ಗಳನ್ನೂ ಹಿಡಿದು ತಿನ್ನುತ್ತವೆ. ಮುಳ್ಳುಹಂದಿ(ಏದ)ಯೆಂದರೆ ಎಲ್ಲ ದೃಷ್ಟಿಯಿಂದಲೂ ಅತಿ ಮೆಚ್ಚಿಗೆಯ ಬೇಟೆ ಪ್ರಾಣಿ. ಹುಲಿಗಳು ಮರವನ್ನೇರಿಯಾಗಲಿ ಅಥವಾ ಏರಿದಂತೆ ನಟಿಸಿಯಾಗಲಿ ಕಪ್ಪುಮೋರೆಯ ಮಂಗಗಳನ್ನು (ಮುಸುವ, ಮುಶ್ಯಾ) ಭೂಮಿಗೆ ಇಳಿಯು ವಂತೆ ಮಾಡಿ ಅವುಗಳನ್ನು ಹಿಡಿದು ಕೊಂದು ತಿನ್ನುತ್ತವೆ. ಮನುಷ್ಯ ಸುಲಭ ರೀತಿ ಯಲ್ಲಿ ದೊರಕುವ ಆಹಾರದ ಮೂಲವಾಗಿದ್ದರೂ ಅವನು ಅದರ ನೈಸರ್ಗಿಕ ಆಹಾರವಲ್ಲ. ಆದ್ದರಿಂದ ಅವನನ್ನು ಹುಲಿ ತಿನ್ನುವುದು ಅತಿ ವಿರಳ.

ಪಕ್ಷಿಗಳು ಹುಲಿಗಳ ಆಹಾರದ ಅಲ್ಪಭಾಗ ಮಾತ್ರ. ಹುಲಿಗಳ ಆಹಾರದ ಬೇರೆ ಪಟ್ಟಿಯಲ್ಲಿ ಉಡಗಳು, ಹಾವುಗಳು, ಆಮೆಗಳು, ಮೊಸಳೆಗಳು, ಮೀನು, ಏಡಿ, ಮಿಡತೆ ಹುಳಗಳು, ಗೆದ್ದಲು ಹುಳಗಳು, ಸಗಣಿ ಕೆದರುವ ಹುಳಗಳು ಸಮಾವೇಶ ಗೊಳ್ಳುತ್ತವೆ. ಹುಲಿಗಳು ಹಣ್ಣು ಹಂಪಲ, ಒಣಗಿದ ಸಗಣಿಹುಡಿ, ಹಾವಸೆಯನ್ನೂ ತಿನ್ನುವುದುಂಟು. ಕೆಲಸಮಯ ಮೊಟ್ಟೆಚಿಪ್ಪು, ಉಪ್ಪುಮಣ್ಣು ಸಹ ಅವು ತಿನ್ನುತ್ತವೆ. ಗರ್ಭಧರಿಸಿದ ಹೆಣ್ಣುಹುಲಿ ಉಪ್ಪುಮಣ್ಣನ್ನು ಹೆಚ್ಚಾಗಿ ತಿನ್ನುವುದನ್ನು ಕಾಣುತ್ತೇವೆ.

'ಉಪವಾಸವಿದ್ದ ಹುಲಿ ಹುಲ್ಲನ್ನೂ ತಿನ್ನುತ್ತದೆ.' ಇದು ದಕ್ಷಿಣ ಭಾರತದಲ್ಲಿ ಪ್ರಚಲಿತವಿದ್ದ ಗಾದೆಯ ಮಾತು. ಹುಲಿ, ಚಿಗುರು ಹುಲ್ಲು, ಚಿಗುರಿದ ಬಿದಿರು ತಿನ್ನುವುದಕ್ಕೂ ಯುಕ್ತಕಾರಣವಿದೆ. ಅಜೀರ್ಣವಾದಾಗ ಜಂಗಲ್ ವೈದ್ಯಕೀಯ ಶಾಸ್ತ್ರದಂತೆ ಹುಲಿ ಹುಲ್ಲು ತಿಂದು ವಾಂತಿಮಾಡಿಕೊಳ್ಳುತ್ತದೆ. ಅದಕ್ಕೆ ತನ್ನ ಹೊಟ್ಟೆಯ ತೊಂದರೆಯನ್ನು ನೀಗಿಸಿಕೊಳ್ಳಲು ಹಾಗೂ ಸ್ವಚ್ಛವಾಗಿಟ್ಟುಕೊಳ್ಳಲೂ ನಿಸರ್ಗವು ಅದನ್ನು ದಯಪಾಲಿಸಿದೆ.

ಹುಲಿಯು ಒಂದೇ ಸ್ಥಳದಲ್ಲಿ ತನ್ನ ವಾಸವನ್ನು ಮುಂದುವರಿಸಿದರೆ ಅದಕ್ಕೆ ಉಪವಾಸವೇ ಗತಿ. ಹುಲಿಯು ತನ್ನ ಆಹಾರ ದೊರಕಿಸಿಕೊಳ್ಳುವುದಕ್ಕಾಗಿ ಬಹಳ ಕಷ್ಟಪಡಬೇಕಾಗುತ್ತದೆ. ಸಾಮಾನ್ಯವಾಗಿ ಹುಲಿಗಳು ಸತ್ತಪ್ರಾಣಿಗಳ ದೇಹಗಳನ್ನು ತಿನ್ನದಿದ್ದರೂ ಅನೇಕ ದಿನಗಳಿಂದ ಬೇಟೆ ಸಿಕ್ಕದೆ ಉಪವಾಸದಿಂದ ಬಳಲಿದಾಗ ಅಥವಾ ವಯಸ್ಸಾದ ಹುಲಿಗಳು ಬೇಟೆಯಾಡಿ ಪ್ರಾಣಿಗಳನ್ನು ಕೊಲ್ಲಲು ಶಕ್ಯವಾಗದೇ ಇದ್ದಾಗ ಅಥವಾ ಗಾಯಗೊಂಡ ಹುಲಿ ಬೇಟೆಯನ್ನು ಹಿಡಿದು ತಿನ್ನಲು ಅಶಕ್ತವಾದಾಗ, ಆಗಾಗ ಸತ್ತಪ್ರಾಣಿಗಳ ದೇಹಗಳನ್ನೂ ತಿನ್ನುತ್ತವೆ. ಅನೇಕಸಾರಿ ಸತ್ತುಬಿದ್ದ ಪ್ರಾಣಿಯ ದೇಹ ಕೊಳೆತು ಹುಳುಗಳು ಹರಿದಾಡುತ್ತಿದ್ದರೂ ಅದನ್ನು ಹುಲಿಗಳು ತಿನ್ನುವುದುಂಟು. ಮಾಂಸ ಹುದುಗಿ ಹೆಚ್ಚುವಾಸನೆ ಆದಷ್ಟೂ ಹುಲಿಗೆ ರುಚಿಕರವೆನಿಸಬಹುದು. ಹುಲಿ ಸಂದರ್ಭಸಿಕ್ಕಿದಾಗ ಅದಕ್ಕೆ ತೃಪ್ತಿಯಾಗುವವರೆಗೆ ಆಹಾರವನು ಸೇವಿಸುತ್ತದೆ. ಏಕೆಂದರೆ ತನ್ನ ಮುಂದಿನ ಭಕ್ಷ್ಯ ಎಂದು ಸಿಕ್ಕುತ್ತದೆ ಎಂಬುದು ಅದಕ್ಕೆ ನಿಶ್ಚಿತವಿರುವುದಿಲ್ಲ. ತಾನು ಕೊಂದು ಬೀಳಿಸಿದ ದೇಹದ ಮೇಲೆ ಶೀನುವ ಒಂದು ವಿಚಿತ್ರ ಸ್ವಭಾವವನ್ನು ಹುಲಿ ಹೊಂದಿರುತ್ತದೆ. ಇದು ಕೊಂದ ದೇಹದ ಮೇಲಿನ ನೊಣಗಳನ್ನು ಹಾಗೂ ಹೆದ್ದುಂಬಿಗಳನ್ನು ಹಾರಿಸಲು ಇರಬೇಕೆಂದು ಕೆಲವರು ಹೇಳುತ್ತಾರೆ. ಆದರೆ ಹುಲಿ ಶೀನುವುದರಿಂದ ತನ್ನ ಮೂಗನ್ನು ಸ್ವಚ್ಛಮಾಡಿಕೊಳ್ಳುವುದರ ಜೊತೆಗೆ ಕೊಂದ ದೇಹದ ಮೇಲೆ ಕ್ರಿಮಿಗಳನ್ನು ಹರಡಿ ಮಾಂಸಹುದುಗಲು ಅನುಕೂಲವಾಗಲೆಂದೂ ಇರಬೇಕು. ಹಾಗೆ ಹುದುಗಿದ ಮಾಂಸದ ರುಚಿ ಹುಲಿಗೆ ಶ್ರೇಷ್ಠ.

ಸ್ವಚ್ಛಪ್ರಾಣಿ: 'ಹುಲಿ ಸ್ವಚ್ಛವಾಗಿ ತಿನ್ನುವ ಪ್ರಾಣಿ' ಎಂದು ಒಂದು ಗಾದೆ ಮಾತಿದೆ. ಅದು ಶಸ್ತ್ರವೈದ್ಯನಂತೆ ಕೊಂದ ಪ್ರಾಣಿಗಳ ದೇಹದಲ್ಲಿದ್ದ ಕರುಳು ಹಾಗೂ

ಹೊಟ್ಟೆಯ ಚೀಲವನ್ನು ಒಡೆಯದೆ, ಅದರಲ್ಲಿದ್ದ ಕಳಪೆಯನ್ನು ಚೆಲ್ಲದಂತೆ ಕಾಳಜಿಯಿಂದ ಹೊರಗೆ ಎಳೆದು ಬದಿಗೆ ಸರಿಸುತ್ತದೆ. ನಂತರ ಅದು ಹದ್ದು, ಕಾಗೆಗಳಿಗೆ ಕಾಣದಂತೆ ನೆಲವನ್ನು ಕೆದರಿ ತಗ್ಗಿನಲ್ಲಿ ಹೂಳುವುದೂ ಉಂಟು. ಹುಲಿ ತಾನು ಕೊಂದ ಪ್ರಾಣಿಗಳ ದೇಹವನ್ನು ಅದರ ಪೃಷ್ಠಭಾಗದ ಎರಡೂ ಚಪ್ಪೆಗಳ ಮಧ್ಯವಿರುವ ಮೃದುವಾದ ಭಾಗವನ್ನು ಹರಿದು ತೆಗೆದು ತಿನ್ನಲು ಪ್ರಾರಂಭಿಸುತ್ತದೆ. ಆದರೆ ಚಿರತೆಯ ಪ್ರಾರಂಭವೇ ಬೇರೆ. ಅದು ತಾನು ಕೊಂದ ಪ್ರಾಣಿಗಳ ಹೊಟ್ಟೆಯನ್ನು ಬಗಿದು ತಿನ್ನಲು ಪ್ರಾರಂಭಿಸುತ್ತದೆ. ಚಿರತೆ ಕರಳು. ಹೊಟ್ಟೆಯ ಚೀಲ ಎಲ್ಲವನ್ನೂ ತಿನ್ನುತ್ತದೆ. ಆದ್ದರಿಂದಲೇ 'ಚಿರತೆ ತುಚ್ಛಪ್ರಾಣಿ' ಎಂಬ ನಿಂದೆಯನುಡಿ ಬಂದಿರಬೇಕು. ಹುಲಿಗಳ ಕಡಿತ ಹಾಗೂ ಪರಚಿದ ಗಾಯಗಳು ವಿಶೇಷವಾಗಿ ಬೇಸಿಗೆಯಲ್ಲಿ ಕ್ರಿಮಿಗಳಿಂದ ಪಸರಿಸಿ ನಂಜುಏರಿ ಅತಿಬೇಗ ಕೀವು ತುಂಬುತ್ತವೆ. ಹುಲಿಯ ಉಗುರು ಹಾಗೂ ಪಂಜಗಳಲ್ಲಿ ಕೊಳೆತ ಮಾಂಸ ಹಾಗೂ ರಕ್ತಕಣಗಳಿಂದಾದ ಕೊಳೆಗಳು ಈ ಅನಾಹುತಕ್ಕೆ ಕಾರಣ. ಕೊಂದ ದೇಹಗಳನ್ನು ತಿಂದ ವಿಧಾನ ತಿಳಿದು ಬೇಟೆಯಾಡಿದ ಪ್ರಾಣಿ ಹುಲಿಯೋ ಅಥವಾ ಚಿರತೆಯೋ ಎಂಬುದನ್ನು ಅಧಿಕೃತವಾಗಿ ಹೇಳಬಹುದು.

ಹುಲಿಯು ತಾನು ಕೊಂದು ಬೀಳಿಸಿದ ದೇಹಗಳನ್ನು. ಅದು ಯಾವುದೇ ತೊಂದರೆಗೀಡಾಗದಿದ್ದರೆ, ಕಾಡಿನ ಜಾಡಮಾಲಿ ಪ್ರಾಣಿಗಳಾದ ನರಿ, ಕಿರುಬ ಹಾಗೂ ಪಕ್ಷಿಗಳಿಗೆ ಬಿಡದೆ ಸಂಪೂರ್ಣ ತಿಂದು ಮುಗಿಸುವವರೆಗೆ ಭೇಟಿಕೊಡುತ್ತ ಇರುತ್ತದೆ. ಒಂದು ಮೂಳೆ ಕಾಲುಕೊಳಗಗಳನ್ನೂ ಬಿಡದೆ ಬೀಳಿನ ಮೇಲಿನ ತೊಗಲನ್ನೂ ಸಹ ತಿಂದು ಮುಗಿಸುವ ಸ್ವಭಾವ ಹುಲಿಯದು. ಕೋಡು ಹಾಗೂ ಅತಿ ದಪ್ಪ ಹಾಗೂ ಮುಖದ ಮೂಳೆಗಳನ್ನು ತಿನ್ನುವುದಿಲ್ಲ. ಹುಲಿಯ ಈ ಸ್ವಭಾವ ಅರಿತ ಹಳ್ಳಿಯ ಜನರು ಹಾಗೂ ಅಕ್ರಮವಾಗಿ ಪ್ರಾಣಿಹತ್ಯಮಾಡುವ ಬೇಟೆಗಳರು ಅದು ಕೊಂದು, ತಿಂದುಬಿಟ್ಟ ಸನಿಯದಲ್ಲಿ ಕಾದುಕುಳಿತು ಗುಂಡಿಕ್ಕಿ ಕೊಲ್ಲುತ್ತಾರೆ; ಇಲ್ಲವೆ ಮಾರಕ ಕೀಟನಾಶಕ ವಿಷವನ್ನು ಬೀಳಿಗೆ ಸಿಂಪಡಿಸಿ ಅಥವಾ ಲೇಪಿಸಿ ಕೊಲೆಗೈಯುತ್ತಾರೆ. ಇದು ದುರದೃಷ್ಟಕರ, ಹೀನಕೃತಿ.

ಭಾರಿಪ್ರಮಾಣದ ಆಹಾರ: ಒಂದು ಹಸಿದ ಹುಲಿ ದಿವಸಕ್ಕೆ ಸುಮಾರು 20 ರಿಂದ 30 ಕಿಲೋದಷ್ಟು ಅಂದರೆ ಅದರ ದೇಹದ ತೂಕದ $\frac{1}{5}$ ದಷ್ಟು ಮಾಂಸ ತಿನ್ನುತ್ತದೆ. ದೊಡ್ಡ ಗಂಡು ಹುಲಿಯಾದರೆ 40 ಕಿಲೋದವರೆಗೆ ತಿನ್ನಬಹುದು. ಆದರೆ ಅದು ಪ್ರತಿದಿನ ದೊರೆಯಲಾರದು. ಪ್ರತಿನಿತ್ಯದ ಮಾಂಸದ ಬೇಡಿಕೆ ಸರಾಸರಿ 5ರಿಂದ 12 ಕಿಲೋ ಎಂದಿಟ್ಟುಕೊಂಡರೂ ಒಂದು ಹುಲಿಗೆ ಒಂದು ವರ್ಷಕ್ಕೆ 1825ರಿಂದ 2750 ಕಿಲೋದಷ್ಟು ಮಾಂಸ ಬೇಕಾಗುತ್ತದೆ. ಇದು ಭಾರಿ ಪ್ರಮಾಣವಲ್ಲವೆ? ಹುಲಿ ತಿಂಗಳಲ್ಲಿ 4 ಅಥವಾ 5 ಸಾರಿ ಮಾತ್ರ ತನ್ನ ಬೇಟೆಯಲ್ಲಿ ಸಫಲತೆಯನ್ನು ಹೊಂದ ಬಹುದು. ಒಂದು ಪ್ರಾಣಿಯನ್ನು ಕೊಂದಾಗ ಅದರಲ್ಲಿ ಕೆಲವು ಭಾಗಗಳು ಅಂದರೆ ಕರುಳು, ಹೊಟ್ಟೆಯ ಚೀಲ, ಕೋಡುಗಳು ತಿನ್ನಲಾರದವಿದ್ದು ಮೇಲಿನ ಪ್ರಮಾಣದ ಅರ್ಧದಷ್ಟು ಬೇಟೆಯನ್ನು ಹೆಚ್ಚಾಗಿ ಹುಲಿಯು ಕೊಲ್ಲಬೇಕಾಗುತ್ತದೆ. ಪೂರ್ಣ ಬೆಳೆದ

ಹುಲಿ ಒಂದು ಸಾರಂಗವನ್ನು ಎರಡು ದಿನಗಳಲ್ಲಿ ತಿಂದು ಮುಗಿಸಿ, ಒಂದು ಕಾಟೆಮೃಗವನ್ನು ಮೂರು ದಿನಗಳಲ್ಲಿ ತಿಂದು ನಾಲ್ಕನೇ ದಿನದ ಲಘುಭೋಜನಕ್ಕೆಂದು ಸ್ವಲ್ಪ ಉಳಿಸಿಕೊಳ್ಳಬಹುದು. ಹುಲಿಗೆ ವಾರಕ್ಕೆ ಸರಾಸರಿ ಎರಡು ದೊಡ್ಡ ಪ್ರಾಣಿಗಳು ಅಥವಾ ಮೂರು ಚಿಕ್ಕಪ್ರಾಣಿಗಳಾದರೆ ಸಾಕಾಗಬಹುದು. ಹುಲಿ ತನ್ನ ಮುಖ್ಯ ಆಹಾರವಾದ ಮಾಂಸ ಹಾಗೂ ಮೂಳೆಗಳೊಂದಿಗೆ ಬೇಟೆ ಪ್ರಾಣಿಗಳ ತೊಗಲು ಹಾಗೂ ಅದರ ಮೇಲಿದ್ದ ಕೂದಲುಗಳನ್ನು ನುಂಗಿದಾಗ ಮಾತ್ರ ಅದು ಆರೋಗ್ಯ ಹಾಗೂ ಬಲಾಢ್ಯವಾಗಿ ಬೆಳೆಯುತ್ತದೆ. ಸೆರೆವಾಸದಲ್ಲಿದ್ದ ಹುಲಿಗಳಿಗೆ ಸಾಕಷ್ಟು ಆಹಾರ ಪೂರೈಸದೆ ಕ್ರಮೇಣ ಅವುಗಳನ್ನು ಕೊಲ್ಲುತ್ತಾರೆ. ಮೃಗಾಲಯ ಹಾಗೂ ಸರ್ಕಸ್ಸುಗಳಲ್ಲಿಯ ಹುಲಿಗಳಿಗೆ ಬಲಿಗಳ ಚರ್ಮ ಹೊರತುಪಡಿಸಿ ಕೇವಲ ಮಾಂಸಮೂಳೆಗಳನ್ನು ಪೂರೈಸುವುದುಂಟು. ಬಲಿಗಳ ಕೂದಲುಳ್ಳ ಚರ್ಮ ಸೇರಿಸದೆ ಎಷ್ಟೇ ಮಾಂಸ ಪೂರೈಸಿದರೂ ಹುಲಿಗಳ ದೈಹಿಕ ಸ್ಥಿತಿ ಸುಧಾರಿಸಲಾರದು ಹಾಗೂ ಧಾರ್ಢ್ಯವಾಗಲಾರದು. ಆದ್ದರಿಂದ ಆಗಾಗ ಕೂದಲುಳ್ಳ ತೊಗಲು ಸಹಿತ ಮಾಂಸ ತಿನ್ನಿಸುವುದು ಒಳ್ಳೆಯದು. ಹುಲಿ ಹುಲ್ಲು ತಿಂದು ತನ್ನ ಹೊಟ್ಟೆಯನ್ನು ಸ್ವಚ್ಛವಾಗಿಡುವಂತೆ ಬಲಿಗಳ ಕೂದಲುಳ್ಳ ತೊಗಲು ಈ ಕಾರ್ಯ ಮಾಡುತ್ತದೆ.

ಇತರ ಬೆಕ್ಕಿನ ಜಾತಿಯ ಪ್ರಾಣಿಗಳಂತೆ ಆರೋಗ್ಯವುಳ್ಳ ಹುಲಿ ಹೆಚ್ಚಿನ ಸಮಯವನ್ನು ತನ್ನ ಅಂಗಾಂಗಗಳನ್ನು ಸ್ವಚ್ಛಮಾಡಿಕೊಳ್ಳಲು ವಿನಿಯೋಗಿಸುತ್ತದೆ. ತನ್ನ ಬೇಟೆಯನ್ನು ಕೊಂದು ತಿಂದನಂತರ ಅದರ ಮುಖ ಹಾಗೂ ಮುಂದಿನ ಕಾಲುಗಳು ಸಾಮಾನ್ಯವಾಗಿ ರಕ್ತಮಯವಾಗಿರುತ್ತವೆ. ಹುಲಿ ಅದೆಲ್ಲವನ್ನೂ ವಿಶ್ರಾಂತಿ ಪಡೆಯುವ ಮೊದಲು ನೆಕ್ಕಿ ಸ್ವಚ್ಛಮಾಡಿಕೊಳ್ಳುತ್ತದೆ. ಇಲ್ಲವಾದರೆ ನೊಣಗಳು ಆಕರ್ಷಿಸಲ್ಪಟ್ಟು ಅದರ ವಿಶ್ರಾಂತಿಗೆ ಭಂಗ ತರುತ್ತದೆ.

ಬಲಿ ಅನ್ವೇಷಣೆಯಲ್ಲಿರುವಾಗ ಹುಲಿಯು ವರ್ತನೆ

ಆಕಾರ ಹಾಗೂ ಶಕ್ತಿಗಳ ಸಂಚಿನಿಂದಷ್ಟೇ ಅಲ್ಲದೆ ಹುಲಿಯು ತನ್ನ ಧೈರ್ಯದಿಂದಲೂ ಕೆಲವು ಸಮಯ ಬಲಿಷ್ಠ ಆನೆಯನ್ನು ಸಹ ಮಣ್ಣು ಮುಕ್ಕಿಸುತ್ತದೆ. ಅಂತೆಯೇ ಅದು 'ವನರಾಜ'ನ ಪಟ್ಟಕ್ಕೇರಿದೆ. ಹುಲಿಯು ತನಗಿಂತ ವೇಗವಾಗಿ ಓಡುವ ತನ್ನ ಬೇಟೆ ಪ್ರಾಣಿಗಳನ್ನು ಸದ್ದಿಲ್ಲದೆ ಸಮೀಪಿಸಿ ಆಕ್ರಮಣಗೈದು ಕೆಳಗುರುಳಿಸುವ ಜಾಣ್ಮೆ ಪಡೆದಿದೆ. ಇದರಿಂದಾಗಿ ವಾಸನೆ ಕಂಡುಹಿಡಿಯುವ ತನ್ನ ಕ್ಷೀಣತೆಯನ್ನು ಹುಲಿ ಜಯಿಸಿಕೊಂಡಿದೆ. 'ಮಾಸ್ಟರ್ ಮಾಂಸಾಹಾರಿ' ಅಥವಾ 'ಸಾರ್ವತ್ರಿಕ ಮಾಂಸ ಭಕ್ಷಕ' ಅಥವಾ 'ಧ್ವಂಸಕಪ್ರಾಣಿ'ಯೆನಿಸಿದ ಮನುಷ್ಯನ ಸಂಗಡ ವ್ಯವಹರಿಸುವಾಗ ಹುಲಿಯು ಅತಿ ಜಾಗ್ರತೆಯಿಂದಯಿರುತ್ತದೆ.

ಹುಲಿಗೆ ಅದರ ವೈಯಕ್ತಿಕ ಸಾಧನ ಉಪಾಯಗಳೇ ಅದರ ಶಕ್ತಿ. ತಾರುಣ್ಯಕ್ಕೆ ಬಂದಾಗ್ಗೆ ಅದು ಯಶಸ್ವೀ ಬೇಟೆಯಾಡುವುದನು ಕಲಿಯುತ್ತದೆ. ಪ್ರೌಢಾವಸ್ಥೆ


ಯಲ್ಲಿ ತನ್ನದೇ ಆದ ವಲಯವನ್ನು ರೂಪಿಸಿಕೊಳ್ಳುತ್ತದೆ. ಸಮಯ ಬಂದಾಗ ತನ್ನ ಪ್ರಿಯತಮೆಯನ್ನು ಬೇರೆ ಪ್ರತಿಸ್ಪರ್ಧಿಗಳಿಂದ ಜಯಿಸಿ ಒಲಿಸಿಕೊಳ್ಳುತ್ತದೆ.

ಹುಲಿ ಪ್ರಥಮವಾಗಿ ಮುಸುಕಾದನಂತರ ಹಾಗೂ ಮುಸುಕು ಹರಿಯುವ ಮೊದಲು ಅಂದರೆ ರಾತ್ರಿಯಲ್ಲಿ ಬೇಟೆಯಾಡುತ್ತದೆ. ಈ ವೇಳೆಯಲ್ಲಿ ಕಾಲುಕೊಳಗವುಳ್ಳ ಕಾಡು ಪ್ರಾಣಿಗಳು ಸಹ ಹೆಚ್ಚು ಚಪಲವಾಗಿರುತ್ತವೆ. ಹುಲಿ ಸಾಮಾನ್ಯವಾಗಿ ಬೆಳಗಿನಿಂದ ಮಧ್ಯಾಹ್ನದವರೆಗೆ ವಿಶ್ರಾಂತಿ ಹೊಂದುತ್ತದೆ; ರಾತ್ರಿಯ ಬೇಟೆ ನಿಷ್ಫಲವಾದಾಗ ಹಗಲಿನಲ್ಲಿಯೂ ಬೇಟೆಯಾಡುವುದುಂಟು.

ಹುಲಿಯು ಸಾಮಾನ್ಯವಾಗಿ ತನ್ನ ವಲಯದಲ್ಲಿ ಬೇಟೆಯ ಪ್ರಾಣಿಗಳನ್ನು ಹುಡುಕುತ್ತ ಹೋಗುತ್ತದೆ. ಈ ಕಾರ್ಯಕ್ಕಾಗಿ ಎತ್ತರದ ದಾರಿಗುಂಟ ಅಥವಾ ರಸ್ತೆಗಳಲ್ಲಿ ಅದು ವಿಶೇಷವಾಗಿ ಸಾಗುತ್ತದೆ. ಎತ್ತರವಾದ ಹುಲ್ಲಿನಲ್ಲಿ ಕಾಡಿನ ಒಣಗಿದ ಎಲೆಗಳ ರಾಶಿಯ ಮುಖಾಂತರ ಹೋಗುವುದಕ್ಕಿಂತ ರಸ್ತೆಗಳ ಮುಖಾಂತರ ಮುಂದೆ ಸಾಗುವುದು ಸುಲಭವಾಗಿದ್ದು ಸ್ವಚ್ಛವಾಗಿ ಹಾಗೂ ವೇಗವಾಗಿ ದಾರಿ ತುಳಿಯಬಹುದು. ಅನೇಕ ಬತ್ತಿದ ಹಳ್ಳಗಳ ಪಾತ್ರಗಳು ಅಲೆದಾಡಲು ಹೆಚ್ಚಾಗಿ ಉಪಯೋಗಿಸಲ್ಪಡುತ್ತವೆ. ಅವುಗಳ ದಂಡೆಗಳೇ ಹುಲಿಗೆ ಆಶ್ರಯ ತಾಣಗಳು. ಅಲ್ಲಲ್ಲಿ ಕಂಡುಬರುವ ನೀರಿನ ಮಡುವುಗಳಲ್ಲಿ ಕೆಲವು ಬಲಿಗಳನ್ನು ಭೆಟ್ಟಿಯಾಗುವ ಸಂಭವ ಹೆಚ್ಚು. ಕೆಲವು ಸಮಯಗಳಲ್ಲಿ ದಟ್ಟವಾದ ಗಲಗು ಬೆಳೆದ ಪ್ರದೇಶದಲ್ಲಿ ಸದ್ದಿಲ್ಲದೆ ಸಾಗಿ ಅಲ್ಲಿ ಅಡಗಿರುವಂತಹ ಕಾಡುಹಂದಿ ಹಾಗೂ ಜಿಂಕೆಮರಿಗಳನ್ನು ಯಶಸ್ವಿಯಾಗಿ ಹಿಡಿದು ಕೊಲ್ಲುತ್ತದೆ.

ಹುಲಿ ತನ್ನ ರಾತ್ರಿಯ ಚಪಲ ಬೇಟೆಯ ಅಲೆದಾಟದಲ್ಲಿ ಬಲಿಯನ್ನು ಹುಡುಕುತ್ತ ಹೆಚ್ಚು ಪ್ರದೇಶದಲ್ಲಿ ಅಲೆದಾಡುತ್ತ ಘಂಟೆಗೆ 5 ಕಿಲೋಮೀಟರ್ ವೇಗದಲ್ಲಿ 15 ರಿಂದ 30 ಕಿಲೋಮೀಟರ್‌ವರೆಗೆ ಹೋಗುವುದುಂಟು. ಅದು ತನ್ನ ಸ್ಥಿರವಾದ ವೇಗದಲ್ಲಿ ನಡೆದಾಗ 12 ಗಂಟೆಯ ರಾತ್ರಿಯ ಸಮಯದಲ್ಲಿ ಸುಮಾರು 50 ಕಿಲೋ ಮೀಟರ್‌ವರೆಗೆ ನಡೆದು ಹೋಗುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಕೆಲವು ಮಾರ್ಗಗಳನ್ನು ಬೇರೆ ಪ್ರಾಣಿಗಳಿಗಿಂತ ಹುಲಿ ಹೆಚ್ಚಾಗಿ ಉಪಯೋಗಿಸಿದ್ದನ್ನು ಅನೇಕ ಶಿಕಾರಿಗಳು ಕಂಡಿದ್ದಾರೆ. 'ಕಾವಲು ಪೋಲಿಸ್'ನಂತೆ ಹುಲಿ ತನ್ನ ವಲಯಕ್ಕೆ ಅಂಟಿ ಕೊಂಡಿರುತ್ತದೆ.

ಹುಲಿ ಸಾಮಾನ್ಯವಾಗಿ ಸಣ್ಣ ತಾಣಗಳಲ್ಲಿ ಒಂದೆರಡು ದಿನಗಳಿಗಿಂತ ಹೆಚ್ಚುಕಾಲ ನಿಲ್ಲುವುದಿಲ್ಲ. ಏಕೆಂದರೆ ಆ ಕಾಡಿನಲ್ಲಿ ಅದು ಹೊಕ್ಕರೆ ತೀರಿತು; ಅಲ್ಲಿದ್ದ ಶಾಖಾಹಾರಿ ಪ್ರಾಣಿಗಳು ಬೇರೆಕಡೆ ಹೊರಡಲು ಆರಂಭಿಸುತ್ತವೆ. ಹುಲಿಯು ಒಂದು ತೆರನಾದ ವಿಶಿಷ್ಟ ದುರ್ವಾಸನೆಯನ್ನು ಹೊಂದಿರುತ್ತದೆ. ದೂರದಿಂದಲೇ ಕಾಡುಪ್ರಾಣಿಗಳು ಅದನ್ನು ಸುಲಭವಾಗಿ ಗುರುತಿಸುತ್ತವೆ. ಮೇಲಾಗಿ ಹುಲಿಗಳಿಂದ ಕೊಲ್ಲಲ್ಪಡುವ



ಚಿತ್ರ 19 : ಹುಲಿಯ ಬೇಟೆಪ್ರಾಣಿ-ಕಾಟಿ ಮೃಗ



ಚಿತ್ರ 20 : ಹುಲಿಯ ಬೇಟೆಪ್ರಾಣಿ-ಕೃಷ್ಣಮೃಗ



ಚಿತ 21 : ಹುಲಿಯ ಬೇಟೆಪ್ರಾಣಿ-ಜಿಂಕೆ



ಚಿತ್ರ 22 : ಹುಲಿಯ ಬೇಟೆಪ್ರಾಣಿ-ಕಡವೆ

ಕಾಡುಪ್ರಾಣಿಗಳ ಕಿರಿಚುವ ಗಲಾಟೆಯಿಂದ ಸುತ್ತಲಿನ ಪ್ರಾಣಿಗಳು ಎಚ್ಚೆತ್ತು ಒಂದ ಕ್ಕೊಂದು ಸಂಜ್ಞೆಮಾಡುತ್ತ ಹುಲಿಯಿಂದ ದೂರ ಹೊರಟುಹೋಗುತ್ತವೆ.


ಏಕಾಂಗಿಯಾಗಿ ಇತರ ಹುಲಿಗಳೊಂದಿಗೆ ಒಡನಾಟವಿಲ್ಲದೆ ಜೀವಿಸುವುದು ಹುಲಿಯ ಸ್ವಭಾವ. ಹುಲಿಯ ಬೇಟೆ ಪ್ರಾಣಿಗಳು ಹೆಚ್ಚಾಗಿ ದೂರ ದೂರ ಚದುರಿರು ತ್ತವೆ. ಅವುಗಳನ್ನು ದಟ್ಟಕಾಡಿನಲ್ಲಿ ಕಂಡುಹಿಡಿದು ಬೇಟೆಯಾಡಿ ಕೊಲ್ಲುವುದಕ್ಕೆ ಹುಲಿಗೆ ಹೆಚ್ಚಿನ ಸಮಯದ ಆವಶ್ಯಕತೆಯಿದೆ. ಪರಿಸ್ಥಿತಿ ಹೀಗಿರುವಾಗ ಏಕಾಂಗಿ ಯಾಗಿ ಹುಡುಕಿ ಬೇಟೆಯಾಡುವುದು ಗುಂಪುಗಳಲ್ಲಿ ಬೇಟೆಯಾಡುವುದಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಒಮ್ಮೆ ಹುಲಿ ತನ್ನ ಬೇಟೆಯನ್ನು ಕೊಂದಾಗ ತಿಂದು ಏನಾದರೂ ಉಳಿದಿದ್ದರೆ ಅದನ್ನು ಶೀತಜೋಪಾಸನ ಯಂತ್ರದಂತಿರುವ ಮೆಳೆಗಳಲ್ಲಿ ಬಚ್ಚಿಟ್ಟು ಕೆಲವು ದಿನಗಳವರೆಗೆ ಅದನ್ನೇ ತಿಂದು ಅದು ಮುಗಿಯುವವರೆಗೆ ಸಮೀಪ ದಲ್ಲಿಯೇ ವಿಶ್ರಮಿಸುತ್ತದೆ.

ಚೀನದಲ್ಲಿ ಒಂದು ನಾಣ್ನುಡಿ ಬಳಕೆಯಲ್ಲಿದೆ: 'ಒಂದು ಗುಡ್ಡ ಎರಡು ಹುಲಿಗಳಿಗೆ ಆಶ್ರಯ ಕೊಡಲಾರದು'. ಇದು ಅಕ್ಷರಶಃ ನಿಜ. ಹುಲಿಗಳು ತಮ್ಮ ಪ್ರಣಯದ ಸಮಯಕ್ಕೆ ಒಂದುಗೂಡಿ ತದನಂತರ ಗಂಡುಹುಲಿ ತನ್ನ ಪಾಡಿಗೆ ತಾನು ಏಕಾಂಗಿಯಾಗಿ ಜೀವನ ಮಾಡಲು ಹೊರಟುಹೋಗುತ್ತದೆ.

ಗಂಡುಹುಲಿಯ ಗಡಿಪ್ರದೇಶದಲ್ಲಿ ಕೆಲವು ವೇಳೆ ಹೆಣ್ಣುಹುಲಿ ಅದರಲ್ಲಿಯೂ ಮರಿಗಳಿಂದೊಡಗೂಡಿದ ಹೆಣ್ಣು ಕಂಡುಬಂದಾಗ ಅದು ಅಸಮಾಧಾನಪಟ್ಟುಕೊಳ್ಳು ವುದಿಲ್ಲ. ಆದರೆ ಅವು ಕೂಡಿ ಬೇಟೆಯಾಡಲು ಅಥವಾ ಕೂಡಿತಿನ್ನಲು ಇಷ್ಟ ಪಡುವುದಿಲ್ಲ. ಸಾಮಾನ್ಯವಾಗಿ ಈ ಕಾರ್ಯಗಳನ್ನು ಬೇರೆ ಬೇರೆಯಾಗಿಯೇ ಮಾಡು ತ್ತವೆ. ಆದರೆ ಇದಕ್ಕೆ ಅಪವಾದವಾಗಿ ಕೆಲಸಂದರ್ಭಗಳಲ್ಲಿ ಹುಲಿಗಳು ಕೊಂದ ಪ್ರಾಣಿಯನ್ನು ಆಗಂತುಕರೊಡನೆ ತಿನ್ನುವುದರಲ್ಲಿ ಹರ್ಷಹೊಂದಿರುತ್ತವೆ.

ಹುಲಿಯನ್ನು ಕಂಡೊಡನೆ ಚಕಿತಗೊಂಡು ತಕ್ಷಣ ತ್ವರಿತಗತಿಯಲ್ಲಿ ಪಾರಾಗ ಬಹುದಾದ ಪ್ರಾಣಿಗಳನ್ನು ಹುಲಿಯು ಹಿಡಿಯಬೇಕಾಗಿದ್ದರೆ ಅದು ಅವುಗಳಿಂದ 10 ರಿಂದ 25 ಮೀಟರುಗಳ ಅಂತರದೊಳಗೇ ಇರಬೇಕಾಗುತ್ತದೆ. ಹುಲಿ ಸಾಮಾನ್ಯ ವಾಗಿ ತನ್ನ ಬೇಟೆಗಾಗಿ ಆಸಕ್ತಿಯಿಂದ ಅರಸುತ್ತ ಅಲೆದಾಡುತ್ತದೆ. ಬೇಸಿಗೆಯಲ್ಲಿ ಕಾಡುಪ್ರಾಣಿ ಅಲೆದಾಡುವ ದಾರಿ ಅಥವಾ ನೀರಿನ ಮಡುವುಗಳ ಪಕ್ಕದಲ್ಲಿ ಅಡಗಿ ಪ್ರಾಣಿಗಳ ಬರುವಿಕೆಗೆ ಕಾದು ಕುಳಿತುಕೊಳ್ಳುವುದುಂಟು.

ಹುಲಿಯ ಆಕ್ರಮಣದ ಮೊದಲು ಅದಕ್ಕೆ ಅವಶ್ಯಕವಿದ್ದ ಹೊಂಚಿ ಅಡಗಿ ಕೊಳ್ಳಲು ಮರ ಇರದೆ ಹೋದರೆ ಅದು ಬೇಟೆಪ್ರಾಣಿಗಳಿಗೆ ಕಾಣಿಸಿಕೊಳ್ಳದೆ ಸಮೀಪಿಸಲಾರದು. ಇಂತಹ ಸಮಯಗಳಲ್ಲಿ ಮತ್ತು ಬೇಟೆಪ್ರಾಣಿಗಳು ಹೆಚ್ಚಾಗಿ



ಚಿತ್ರ 23 : ಬೇಟೆಯಾಡುವಾಗ ಹುಲಿಯ ವಿವಿಧ ಭಂಗಿಗಳು

ಅಲೆದಾಡುತ್ತಿದ್ದರೆ ಹುಲಿ ರಕ್ತ ಹೆಪ್ಪುಗಟ್ಟುವಂತೆ ಘೋರ ಗರ್ಜನೆಗೈಯುತ್ತ ಕ್ಷಣಾರ್ಧದಲ್ಲಿ ಆಕ್ರಮಣ ಮಾಡುತ್ತದೆ ಮತ್ತು ನಾಗಾಲೋಟ ಪ್ರಾರಂಭಿಸುವ ಮೊದಲೆ ಅವುಗಳನ್ನು ಹಿಡಿದು ಕೊಲ್ಲುವುದು ಸುಲಭವಾಗುತ್ತದೆ.

ಹುಲಿಗೆ ಮರವೇರಲು ಸಾಧ್ಯವಿದ್ದರೂ ಮಂಗಗಳನ್ನು ಹಾಗೂ ಬೇರೆ ಬಲಿಗಳನ್ನು ಮರವೇರಿ ಬೆನ್ನಟ್ಟಿಹೋದ ಉಲ್ಲೇಖವೇನೂ ಇಲ್ಲ. ಆದರೆ ಅದಕ್ಕೆ ಬೇರೆ ಆಹಾರ ಸಿಕ್ಕದೇಹೋದಾಗ ಮರವೇರಿ ಆಯಕಟ್ಟಿನ ಸ್ಥಳದಲ್ಲಿ ನಿಂತು ಘೋರವಾಗಿ ಗರ್ಜಿಸಿದಾಗ ಅಥವಾ ಆಕ್ರಮಣ ಮಾಡಿದಂತೆ ನಟಿಸಿದಾಗ ಟೊಂಗೆಯ ತುದಿಗಳಲ್ಲಿದ್ದ ಮಂಗಗಳು ಭಯದಿಂದ ಇಳಿದು ತಪ್ಪಿಸಿಕೊಳ್ಳುವಾಗ ಅಥವಾ ಭೂಮಿಯ ಮೇಲೆ ಜಿಗಿದು ಓಡುವಾಗ ಹುಲಿಗೆ ಬಲಿಯಾಗುವುದುಂಟು.

ಸಾಮಾನ್ಯವಾಗಿ ಹುಲಿಯು ತನ್ನ ಬೇಟೆಯ ಪ್ರಾಣಿಗಳನ್ನು ಹೆಚ್ಚುದೂರ ಅಟ್ಟಿಸಿಕೊಂಡು ಹೋಗುವುದಿಲ್ಲ. ಹುಲಿ ಬಲಿಪ್ರಾಣಿಗಳ ಮೇಲೆ ಆಕ್ರಮಣ ಮಾಡುವ ವೇಗ ಘಂಟೆಗೆ 60 ಕಿಲೋಮೀಟರ್‌ದಷ್ಟಿದ್ದು ಅದೇ ವೇಗದಲ್ಲಿ 50 ಮೀಟರುಗಳ ವರೆಗೆ ಮಾತ್ರ ಓಡುವ ಸಾಮರ್ಥ್ಯ ಹೊಂದಿರುತ್ತದೆ. ಈ ರೀತಿಯಿಂದ ಅದಕ್ಕೆ ಬೇಟೆಯ ಅನೇಕ ಪ್ರಾಣಿಗಳನ್ನು ಹಿಡಿದು ಕೊಲ್ಲುವುದು ಸಾಧ್ಯವಾಗಲಾರದು. ತನ್ನನ್ನು ಕಂಡುಹಿಡಿದ ಪ್ರಾಣಿಗಳನ್ನು ಅಥವಾ ಕೊಲ್ಲಲು ಕಷ್ಟವಿದ್ದ ಪ್ರಾಣಿಗಳನ್ನು ಬೆನ್ನಟ್ಟಿ ಕೊಲ್ಲುವ ವಿಫಲ ಪ್ರಯತ್ನ ಹುಲಿ ಮಾಡುವುದಿಲ್ಲ. ಅಂತಹ ಪ್ರಾಣಿಗಳೆಂದರೆ ಬಯಲು ಹುಲ್ಲುಗಾವಲು ಪ್ರದೇಶದಲ್ಲಿ ಮೇಯುವ ಕೃಷ್ಣಮೃಗಗಳು. ಹುಲಿ ಅಡಗಿಕೊಂಡದ್ದು ತಿಳಿದುಬಂದಾಗ ಜಿಂಕೆಗಳು ಎಚ್ಚರಿಕೆ ಕೂಗುಹಾಕುತ್ತವೆ. ಅದನ್ನು ಆಲಿಸಿದ ಹುಲಿ ತನ್ನ ಮುಂದಿನ ಪ್ರಯತ್ನಗಳೆಲ್ಲ ವ್ಯರ್ಥವೆಂದು ಯೋಚಿಸಿ ಅಡಗಿದ ಸ್ಥಳದಿಂದ ಎದ್ದು ಬೇರೆಕಡೆ ಹೊರಟುಹೋಗುತ್ತದೆ. ಹುಲಿಯ ಬೇಟೆಪ್ರಾಣಿಗಳ ಘ್ರಾಣೇಂದ್ರಿಯ ಅತಿ ತೀಕ್ಷ್ಣವಾಗಿರುತ್ತದೆ. ಶ್ರವಣೇಂದ್ರಿಯಗಳೂ ಅಷ್ಟೆ. ಇವುಗಳ ನೆರವಿನಿಂದ ಪ್ರಾಣಿಗಳು ನೂರಾರು ಅಡಿಗಳ ಅಂತರದಿಂದಲೇ ಸುಲಭವಾಗಿ ಅಪಾಯವನ್ನು ಕಂಡುಹಿಡಿಯುತ್ತವೆ. ಅಂತೆಯೇ ಹುಲಿ ಅಡಗಿ ಕುಳಿತು ಬಲಿಗಳನ್ನು ಹಿಡಿಯುವ ಪ್ರಯತ್ನಗಳಲ್ಲಿ ಹೆಚ್ಚಿನ ಪ್ರಮಾಣ ನಿಷ್ಫಲವಾಗುವುದೇ ಜಾಸ್ತಿ.

ಹುಲಿಯು ಬೇಟೆಯ ವಿಶೇಷ ಸ್ವಭಾವವೆಂದರೆ ಅಡಗಿದ ಸ್ಥಳದಿಂದ ಕೊನೆ ಘಳಿಗೆಯವರೆಗೂ ತಾನು ಪ್ರಕಟವಾಗದೇ ಇರುವುದು. ಬೇಟೆಪ್ರಾಣಿಗಳು ಮುಖಾಮುಖಿಯಾದರೆ ತೀರಿತು, ಅವುಗಳಿಗೆ ಮೃತ್ಯು ಕಟ್ಟಿಟ್ಟಂತೆಯೇ. ಹುಲಿಯ ಬಲ ತಿಳಿಯಬೇಕಾದರೆ ನೋಡಿ ಅಥವಾ ಕೇಳಿ ತಿಳಿಯುವುದಕ್ಕಿಂತ ಪ್ರತ್ಯಕ್ಷ ಅನುಭವಿಸಿಯೇ ತಿಳಿಯಬೇಕು. ಹುಲಿಯು ಅಪ್ಪಳಿಸುವ ಶಕ್ತಿ 250 ಕಿಲೋನಷ್ಟು ಧಾರ್ಡ್ಯ ಶಕ್ತಿ ಅತಿ ವೇಗದಲ್ಲಿ ಚಲಿಸಿದಾಗ ಆಗುವ ಪರಿಣಾಮದಷ್ಟು ಇರುತ್ತದೆ. ಭಾರಿತೂಕದ ಮುಷ್ಟಿಕಾಳಗದ ಜಟ್ಟಿಯಂತೆ ಹುಲಿಯ ಮೈಕಟ್ಟು ನಿರ್ಮಿತವಾಗಿದೆ; ಅದಕ್ಕೆ ಬಹಳ ದೂರ ಓಡಲು ಆಗುವುದಿಲ್ಲ. ಆದ್ದರಿಂದ ಅನೇಕ ಬೇಟೆ ಪ್ರಾಣಿಗಳು ಹುಲಿಗಿಂತ

ಹೆಚ್ಚಿನ ವೇಗದ ಗತಿ ಪಡೆದಿದ್ದು ಓಡಿ ತಪ್ಪಿಸಿಕೊಳ್ಳುತ್ತವೆ. ಕೃಷ್ಣಮೃಗದ ವೇಗದ ಗತಿ ಗಂಟೆಗೆ 80 ಕಿಲೋಮೀಟರಿನಷ್ಟು. ಬೇಟೆ ಪ್ರಾಣಿಗಳಿಗೆ ಹುಲಿಯ ಈ ದೌರ್ಬಲ್ಯ ಸಂಪೂರ್ಣ ಗೊತ್ತಿದ್ದ ವಿಷಯವಾಗಿದೆ. ಆಕ್ರಮಣದ ಅಪಾಯವಿಲ್ಲದೆ ಎಲ್ಲಿಯವರೆಗೆ ಹುಲಿಯ ಸಮೀಪ ಹಾಯಬಹುದೆಂಬುದೂ ಅವುಗಳಿಗೆ ತಿಳಿದಿರುತ್ತದೆ. ಸಾಮಾನ್ಯವಾಗಿ 35 ಮೀಟರಿನಷ್ಟು ಅಂತರದಲ್ಲಿ ಗೋಚರಿಸುವ ಹುಲಿ ಅವುಗಳಿಗೆ ನಿರಪಾಯಕರ ಎಂದು ಭಾವಿಸುತ್ತವೆ. ಹುಲಿಗೂ ಇದು ಗೊತ್ತು. ಆದ್ದರಿಂದ ಇಂತಹ ಸಮಯದಲ್ಲಿ ನಿಷ್ಪ್ರಯೋಜಕ ಆಕ್ರಮಣಕ್ಕೆ ಪ್ರಯತ್ನಿಸುವುದಿಲ್ಲ. ಈ ಕೆಲವು ಕುಂದುಕೊರತೆಗಳಿಂದ ಹುಲಿ ವಾರಗಟ್ಟಲೆ ಉಪವಾಸದಿಂದ ಬಳಲಿದರೆ ಆಶ್ಚರ್ಯವೇನಲ್ಲ. ಆದರೆ ಅದು 'ರಸದೂಟ' ಅಥವಾ 'ಕ್ಷಾಮ' ಜೀವನಕ್ರಮಕ್ಕೆ ಹೊಂದಿಕೊಂಡಿದೆ. ಆಹಾರ ಯಥೇಚ್ಛವಾಗಿದ್ದಾಗ ಅದು ಕಂಠಪೂರ್ತಿ ತಿನ್ನುತ್ತದೆ.

ಹುಲಿಯು ಬೇಟೆಯಾಡುವಾಗ ಗಾಳಿಬೀಸುವ ವಿರುದ್ಧ ದಿಕ್ಕಿನಿಂದ ಅಪೇಕ್ಷಿಸಿದ ಬೇಟೆ ಪ್ರಾಣಿಗಳನ್ನು ಸಮೀಪಿಸುವುದುಂಟು. ಕೆಲವು ಸಂದರ್ಭಗಳಲ್ಲಿ ಗಾಳಿಬೀಸುವ ಕೆಳಗಡೆಯ ದಿಕ್ಕಿನಲ್ಲಿ ಅಡಗಿ ಕಾದುಕುಳಿತಿರುತ್ತದೆ. ಇದು ಪ್ರಾಣಿಗಳಿಗೆ ತಾನು ಇದ್ದದ್ದು ವಾಸನೆಯಿಂದ ಗೊತ್ತಾಗಕೂಡದೆಂದು ಈ ವ್ಯವಸ್ಥೆ.

ಹುಲಿ ಬೇಟೆಯಾಡುವಾಗ ಬೇಟೆಪ್ರಾಣಿಗಳಿಗೆ ತನ್ನ ಮೈವಾಸನೆ ತಾಗಬಾರದೆಂದು ಕಾಟಿಮೃಗಗಳ ಸಗಣಿ ಅಥವಾ ಆನೆಲದ್ದಿಯ ಮೇಲೆ ಹೊರಳಾಡಿ ಮೈಗೆ ಲೇಪಿಸಿಕೊಳ್ಳುವುದುಂಟು. ಹುಲಿಯ ಇನ್ನೊಂದು ಚಾಣಾಕ್ಷತನವೆಂದರೆ ನೀರಲ್ಲಿ ಹೊರಳಾಡಿ ಹೊರಬಂದನಂತರ ಕಾಡಿನಲ್ಲಿ ಹರಡಿದ್ದ ಬೂದಿಯ ಸ್ನಾನಮಾಡುತ್ತದೆ. ಈರೀತಿ ಮಾಡುವುದರಿಂದ ಬೇಟೆಯಾಡುವಾಗ ತನ್ನ ಮೈಬಣ್ಣವನ್ನು ಅಡಗಿಸಿ ಬೇಟೆ ಪ್ರಾಣಿಗಳಿಗೆ ದೃಷ್ಟಿಭ್ರಮೆ ಮಾಡುವುದೇ ಅದರ ಉದ್ದೇಶ. ಮೈಗೆ ಬೂದಿ ಲೇಪಿಸಿಕೊಂಡಾಗ ಅದನ್ನು ಬೇಟೆ ಪ್ರಾಣಿಗಳು ಕಡವೆಯೆಂದು ಭಾವಿಸಿ ಮೋಸಹೋಗುವುದುಂಟು.

ಹುಲಿಯುಮೇಲೆ ಬೇಟೆಯಾಡುವ ಪ್ರಾಣಿ: ಹುಲಿಯು ಎಲ್ಲ ಕಾಡುಪ್ರಾಣಿಗಳನ್ನು ಬೇಟೆಯಾಡಿ ಜಯಿಸಿ 'ವನರಾಜ'ನೆಂಬ ಬಿರುದನ್ನು ಪಡೆದದ್ದು ಗಮನಕ್ಕೆ ಬಂದಿದೆ. ಆದರೆ ಹುಲಿಯನ್ನು ಬೇಟೆಯಾಡುವ ಪ್ರಾಣಿಗಳೂ ಇವೆಯೆಂದರೆ ಯಾರೂ ನಂಬಲಿಕ್ಕಿಲ್ಲ. ಇದು ನಿಜ. ಅವುಗಳೇ ಕಾಡುನಾಯಿಗಳು. ಅವಕ್ಕೆ ಚೀರುನಾಯಿಗಳೂ ಎಂದು ಕರೆಯುವುದುಂಟು. ಕಾಡುನಾಯಿಗಳು ಹೆಚ್ಚು ಕಡಮೆ ಸಾಕಿದ ನಾಯಿಗಳ ಆಕಾರದಷ್ಟಿದ್ದು, ಕೆಂಪು ಮೈತುಪ್ಪಳವನ್ನು ಹೊಂದಿರುತ್ತವೆ. ಇವು ಹೆಚ್ಚಾಗಿ 3ರಿಂದ 30ರವರೆಗೆ ಗುಂಪುಗಳಲ್ಲಿ ಸೇರಿಕೊಂಡು ಬೇಟೆಯಾಡುತ್ತವೆ. ಇವು ಕಾಡಿನಲ್ಲಿ 'ವಿನಾಶಕಾರಕ' ಪ್ರಾಣಿಗಳೆಂದು ಪರಿಗಣಿಸಲ್ಪಟ್ಟಿವೆ. ಏಕೆಂದರೆ ಅನೇಕ ಉಪಯುಕ್ತ ಪ್ರಾಣಿಗಳಾದ ಜಿಂಕೆ, ಕಡವೆ, ಕೃಷ್ಣಮೃಗ, ಕಸ್ತೂರಿಮೃಗಗಳನ್ನು ಕನಿಕರವಿಲ್ಲದೆ ನಾಶಮಾಡುತ್ತವೆ. ಪ್ರಸಂಗ ಬಂದಾಗ ಹುಲಿಯ ಮೇಲೂ ದಾಳಿ ನಡೆಸುತ್ತವೆ. ಬೇಟೆಯ

ಪ್ರಾಣಿಗಳು ಇನ್ನೂ ಜೀವಂತ ಇದ್ದಾಗಲೆ ಅವುಗಳ ಅಂಗಾಂಗಗಳನ್ನು ಕಿತ್ತು, ಹರಿದು ಕಾಡುನಾಯಿಗಳು ತಿನ್ನುತ್ತಿರುತ್ತವೆ. ಅವುಗಳ ಬೇಟೆಯ ವಿಧಾನವೆಂದರೆ ಗುಂಪಿನ ಕೆಲವು ನಾಯಿಗಳು ಬಲಿಯನ್ನು ಅಟ್ಟಿಸಿಕೊಂಡು ಹೋದರೆ, ಇನ್ನುಳಿದ ನಾಯಿಗಳು ಅವುಗಳಿಂದ ಬೇರ್ಪಟ್ಟು, ಅಡ್ಡದಾರಿ ಬಿದ್ದು, ಬೇಟೆ ಪ್ರಾಣಿಗಳಿಗಿಂತ ಮುಂದೆ ಓಡಿ ಅಡ್ಡಗಟ್ಟಿ ಅದರ ಮೇಲೆ ಪ್ರಹಾರ ಮಾಡುತ್ತವೆ. ಬೇಟೆಯಾಡುವಾಗ ಉಚ್ಚಧ್ವನಿಯಲ್ಲಿ ಸರಣಿಯ ಕೂಗುಗಳಿಂದ ಬೊಗಳುತ್ತಿರುತ್ತವೆ. ಅದು ಸಾಮಾನ್ಯ ನಾಯಿಗಳ ಬೊಗಳುವ ರೀತಿಯಂತಿರದೆ ಪಕ್ಷಿಗಳ ಸಿಳ್ಳಿನಂತೆ ಕೇಳಿಬರುತ್ತದೆ. ಬಲಿಗಳನ್ನು ಹೊಡೆದು ನೆಲಕ್ಕುರುಳಿಸುವ ಮೊದಲು ಅವುಗಳ ಕಣ್ಣುಗಳನ್ನು ಕಿತ್ತು ಕಾಲು ಕಡಿದು ಹೊಟ್ಟೆಬಗಿದು ಅದನ್ನು ದುರ್ಬಲಗೊಳಿಸುತ್ತವೆ.

ಹುಲಿಯು ಕೊಲ್ಲುವ ವಿಧಾನಗಳು

ದೊಡ್ಡ ಸಸ್ಯನಿಪ್ರಾಣಿಗಳನ್ನು ಕೊಲ್ಲಲು ಹುಲಿಯು ವಿವಿಧ ವಿಧಾನಗಳನ್ನು ಉಪಯೋಗಿಸುತ್ತದೆ. ಸಾಮಾನ್ಯವಾಗಿ ಹುಲಿಯ ಕೊಲ್ಲುವ ಕಾರ್ಯ ಎರಡು ಮಟ್ಟಗಳಲ್ಲಿ ನಡೆಯುತ್ತದೆ. ಕೆಲವು ಸಂದರ್ಭಗಳಲ್ಲಿ ಎರಡೂ ಸೇರಿ ಒಂದೇ ಆಗಿರಬಹುದು. ಮೊದಲು ಆಕ್ರಮಣಮಾಡಿ ಬೇಟೆಪ್ರಾಣಿಯನ್ನು ಕೆಳಗುರುಳಿಸುತ್ತದೆ, ನಂತರ ಕೊಲ್ಲುತ್ತದೆ. ಸಾಮಾನ್ಯವಾಗಿ ಗಂಟಲನ್ನು ಅಥವಾ ಕತ್ತನ್ನು ಕಡಿದಾಗ ಸಾವು ಸಂಭವಿಸುತ್ತದೆ. ಪ್ರಾರಂಭದ ಆಕ್ರಮಣದಲ್ಲಿ ಹುಲಿ ಹಿಂದಿನಿಂದಾಗಲಿ ಅಥವಾ ಬದಿಯಿಂದಾಗಲಿ ಸಮೀಪಿಸಲು ಪ್ರಯತ್ನಿಸಿ ಕೊಳಗಗಳುಳ್ಳ ಅನೇಕ ಸಸ್ಯನಿಪ್ರಾಣಿಗಳ ಅಸ್ತ್ರಗಳಾದ ಕೋಡುಗಳಿಂದಾಗಬಹುದಾದ ಅನಾಹುತವನ್ನು ತಪ್ಪಿಸಿಕೊಳ್ಳುತ್ತದೆ. ಕೆಲವು ಸಂದರ್ಭಗಳಲ್ಲಿ ಹುಲಿಯ ಬರಿ ಸಂಪರ್ಕದ ರಭಸವೇ ಪ್ರಾಣಿಯನ್ನು ನೆಲಕ್ಕುರುಳಿಸಲು ಸಾಕಾಗಬಹುದು. ಆದರೆ ಸಂದರ್ಭಾನುಸಾರ ಪ್ರಾಣಿಗಳನ್ನು ತನ್ನ ಭಾರದಿಂದ ಹಾಗೂ ಮುಂದಿನ ಕಾಲುಗಳ ಬಲದಿಂದ ನೆಲಕ್ಕುರುಳಿಸುತ್ತದೆ. ಹುಲಿಯು ಬೇಟೆಪ್ರಾಣಿಯ ಕಾಲು, ಪೃಷ್ಠಭಾಗ, ಚಪ್ಪೆ, ಬೆನ್ನು, ಕತ್ತು ಅಥವಾ ಹೊಟ್ಟೆಗಳನ್ನು ಕಡಿಯಬಹುದು. ಪ್ರಾಣಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ ತನ್ನ ಕೊಕ್ಕೆಯಂತಿರುವ ಹರಿತವಾದ ಉಗುರುಗಳಿಂದ ಪರಚಿ ಗಾಯಗೊಳಿಸುತ್ತದೆ ಹಾಗೂ ಕೆಳಗುರುಳಿಸಲೂ ಉಪಯೋಗ ಪಡೆಯುತ್ತದೆ. ಆಕ್ರಮಣದ ಕಾಲಕ್ಕೆ ಹುಲಿಯ ಹಿಂದಿನ ಕಾಲುಗಳು ಭೂಮಿಯ ಮೇಲಿದ್ದು ಮುಂದಿನ ಕಾಲುಗಳು ಹಾಗೂ ಹಲ್ಲುಗಳು ಹರಿದು ಹಾಕುವ ಕಾರ್ಯ ನಿರ್ವಹಿಸುತ್ತದೆ. ಹುಲಿಗಳು ಏಳರಿಂದ ಹತ್ತು ಮೀಟರಿನವರೆಗೆ ಜಿಗಿಯುವ ಸಾಮರ್ಥ್ಯವನ್ನು ಪಡೆದಿದ್ದರೂ ಯಾವ ಹುಲಿಯೂ ಸಂಪೂರ್ಣ ಬಲಿಯ ಮೇಲೆ ಹಾರಿ ಕುಳಿತು ಉರುಳಿಸಿದ ದೃಷ್ಟಾಂತ ಇದುವರೆಗೂ ಕಂಡುಬಂದಿಲ್ಲ. ಹುಲಿಯ ಹಿಂದಿನ ಕಾಲುಗಳು ಭೂಮಿಯ ಮೇಲೆ ಇದ್ದರೆ ಮಾತ್ರ ಅದಕ್ಕೆ ಸರಿಯಾದ ಹಿಡಿತ ಹಾಗೂ ಆಧಾರ ದೊರೆತು ಪ್ರಾಣಿಗಳನ್ನು ಬೇಗನೆ ನೆಲಕ್ಕುರುಳಿಸಲು ಸಹಾಯವಾಗುತ್ತದೆ. ಸಾಮಾನ್ಯವಾಗಿ ಹುಲಿ ಬೇಟೆ ಹಾಗೂ ಬಲಿಪ್ರಾಣಿಗಳನು ಹಿಡಿದು ಕೊಲ್ಲು

ವಾಗ ಸಿಂಹದಂತೆ ಪಂಜದಿಂದ ಅಪ್ಪಳಿಸಿ ಪೆಟ್ಟು ಕೊಡದೆ ಹಲ್ಲುಗಳಿಂದ ಹಾಗೂ ಉಗುರುಗಳಿಂದ ಬಿಗಿಯಾಗಿ ಹಿಡಿಯುತ್ತದೆ.

ದೊಡ್ಡ ಪ್ರಾಣಿಗಳಾದ ದನಗಳು ಹಾಗೂ ಕಾಟೆಮೃಗಗಳನ್ನು ಕೊಲ್ಲಲು ಸುಲಭವಾಗಲೆಂದು ಹುಲಿ ಮೊಣಕಾಲಿನ ಸ್ನಾಯುವನ್ನು ರಜ್ಜುಗೊಳಿಸುತ್ತದೆಂದು ಜನರ ನಂಬಿಕೆ. ಆದರೆ ಹಾಗೆ ಮಾಡಿದ ಅಥವಾ ಮಾಡಲು ಪ್ರಯತ್ನಿಸಿದ ಯಾವ ಆಧಾರವೂ ಇಲ್ಲ. ಹುಲಿಗಳು ಆಗಾಗ ಎಮ್ಮೆ ಅಥವಾ ಹಸುಗಳನ್ನು ಕೆಳಗುರುಳಿಸುವ ಪ್ರಯತ್ನದಲ್ಲಿ ಅಥವಾ ಅವು ನುಣುಚಿಕೊಂಡು ಹೋಗುವುದರಿಂದ ತಪ್ಪಿಸಲು ಹಿಂಗಾಲುಗಳನ್ನು ಕಡಿದದ್ದು ಕಂಡುಬಂದಿದೆ. ಆದರೆ ಈ ಗಾಯಗಳು ಬಲಿಪ್ರಾಣಿಗಳನ್ನು ಅಪಾಯದಿಂದ ಪಾರುಮಾಡಬಹುದಲ್ಲದೆ ಸಂಪೂರ್ಣ ಅನರ್ಹಗೊಳಿಸುವಷ್ಟಿರುವುದಿಲ್ಲ.

ಪ್ರಾಯದ ಹುಲಿಗಳು, ಬಲಿಗಳನ್ನು ನೆಲಕ್ಕುರುಳಿಸುವಾಗ ಹೆಚ್ಚಿನ ಎಚ್ಚರಿಕೆ ವಹಿಸುತ್ತವೆ. ಅವು ಅನಾಹುತಕ್ಕೀಡಾಗುವ ಗಂಡಾಂತರ ಕಡಮೆ ಇದ್ದಾಗ ಮಾತ್ರ ಆಕ್ರಮಣ ಮಾಡುತ್ತವೆ. ಒಮ್ಮೊಮ್ಮೆ ಸಾಕಿದ ಎಮ್ಮೆಗಳೂ ಹಸುಗಳೂ ಅಪಾಯಕಾರಿ ಎದುರಾಳಿಗಳು ಆಗುವುದುಂಟು. ಅವು ಹಿಂಡಿನಲ್ಲಿದ್ದಾಗ ಹುಲಿಯನ್ನು ಅಟ್ಟಿಸಿಕೊಂಡು ಹೋಗಿ ಹಿಡಿದ ಹಸು ಹಾಗೂ ಎಮ್ಮೆಗಳನ್ನು ಬಿಡಿಸಿಕೊಂಡು ಬಂದ ಅನೇಕ ದಾಖಲೆಗಳಿವೆ.

ಬಲಿಯನ್ನು ಕೆಳಗುರುಳಿಸಿದ ನಂತರ ಹುಲಿ ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಅತಿ ರಭಸದಿಂದ ಗಂಟಲನ್ನು ಕಚ್ಚುತ್ತದೆ. ಏಕೆಂದರೆ ಗಂಟಲು ದೊಡ್ಡ ಪ್ರಾಣಿಗಳ ದೇಹದ ಹೆಚ್ಚು ಸುಲಭವಾಗಿ ಅಪಾಯಕ್ಕೀಡಾಗುವಂತಹ ಭಾಗ. ಹುಲಿ ತನ್ನ ಚಿಮುಟಿಯಂತಹ ಹಿಡಿತವನ್ನು ಬಲಿ ಸಾಯುವವರೆಗೆ ಬಿಡದೆ ಕೆಲವು ನಿಮಿಷಗಳವರೆಗೆ ಹಾಗೆಯೇ ಹಿಡಿದಿರುತ್ತದೆ. ಅನೇಕ ದೃಷ್ಟಾಂತಗಳಲ್ಲಿ ಪ್ರಾಣಿಗಳು ಮೃತ್ಯುಗೀಡಾಗುವುದು ಅವುಗಳು ಉಸಿರುಗಟ್ಟಿ ರಕ್ತಚಲನವಲನ ನಿಲ್ಲುವುದರಿಂದ ಎಂದು ಹೇಳಬಹುದು. ಪ್ರಾಣಿಗಳ ಗಂಟಲಿನ ಹಿಡಿತದಿಂದ ಹುಲಿಗೆ ಕೆಲವು ಹೆಚ್ಚಿನ ಅನುಕೂಲತೆಗಳಿವೆ. ಅವುಗಳೆಂದರೆ:

(i) ಆಗ ಬಲಿಪ್ರಾಣಿಗಳು ಕೋಡುಗಳನ್ನು ಅಷ್ಟೊಂದು ಪರಿಣಾಮಕಾರಿಯಾಗಿ ಉಪಯೋಗ ಮಾಡಲಿಕ್ಕಾಗುವುದಿಲ್ಲ.

(ii) ಹುಲಿ ತಲೆಯ ಹತ್ತಿರ ಇರುವವರೆಗೆ ಬಡಿದಾಡುವ ಕೊಳಗಗಳು ಅದಕ್ಕೆ ತಾಕಲಾರವು.

(iii) ಬಲಿಯ ಕತ್ತನ್ನು ನೆಲಕ್ಕೆ ಅದುಮಿ ಹಿಡಿಯುವುದರಿಂದ ಅದಕ್ಕೆ ಕಾಲೂರಿ ಮೇಲೆದ್ದು ನಿಲ್ಲಲು ಸಾಧ್ಯವಾಗದೆ ತಪ್ಪಿಸಿಕೊಂಡು ಓಡಲಿಕ್ಕಾಗುವುದಿಲ್ಲ.

ಹುಲಿಯ ಈ ವಿಧಾನ ವಿಶೇಷವಾಗಿ ತನಗಿಂತ ಏಳರಷ್ಟು ಹೆಚ್ಚು ಭಾರವಿದ್ದ ಕಾಟೆಮೃಗದ ಸಂಗಡ ವ್ಯವಹರಿಸಲೂ ಅನುಕೂಲವಾಗುವುದು

ಹುಲಿಗಳು ಕೊಂದ ಬಲಿಗಳ ಕತ್ತು ಮುರಿದದ್ದು ಅನೇಕಸಾರೆ ನೋಡುತ್ತೇವೆ. ಇವುಗಳಲ್ಲಿ ಹುಲಿಯ ಆಕ್ರಮಣದ ರಭಸದಲ್ಲಿ ಪ್ರಾಣಿ ಅಸಡ್ಡೆಯಾಗಿ ಬಿದ್ದು ಅಕಸ್ಮಾತ್ತಾಗಿ ಕತ್ತು ಮುರಿಯುವುದು ಪ್ರಾಸಂಗಿಕ, ಆದರೆ ಕತ್ತು ಮುರಿದೇ ಹುಲಿಗಳು ತಮ್ಮ ಬಲಿಗಳನ್ನು ಕೊಲ್ಲುತ್ತವೆಂಬ ವಿಚಾರ ನಿರಾಧಾರ.

ಸಾಮಾನ್ಯವಾಗಿ ತನಗೆ ಸದವಕಾಶ ಸಿಕ್ಕಾಗ ಹುಲಿ ಬಲಿಗಳನ್ನು ಕೆಲವೇ ನಿಮಿಷ ಗಳಲ್ಲಿ ಅವುಗಳಿಗೆ ಏನು ನಡೆದಿದೆ ಎಂಬುದು ಗೊತ್ತಾಗುವ ಮೊದಲೇ ಕೊಂದುಬಿಡು ತ್ತದೆ. ಬೇಟೆಯ ಪ್ರಾಣಿಗಳ ಗಂಟಲನ್ನು ತನ್ನ ಚೂಪಾದ ಕೋರೆಹಲ್ಲುಗಳಿಂದ ಆಳವಾಗಿ ಚುಚ್ಚಿ ಚಿಮಟೆಯಂತೆ ಬಿಗಿಯಾಗಿ ಹಿಡಿದಾಗ ರಕ್ತನಾಳಗಳು ಜಜ್ಜಿ ರಕ್ತದ ಚಲನವಲನ ಬಂದಾಗಿ, ಶ್ವಾಸನಾಳ ಕಟ್ಟಿ ಉಸಿರಾಟ ನಿಂತಾಗ ಪ್ರಾಣಿ ಸಾಯು ತ್ತದೆ. ತನ್ನ ಬೇಟೆಯನ್ನು ಕೊಲ್ಲುವಾಗ, ಹುಲಿ ರಕ್ತನಾಳಗಳನ್ನು ಹರಿದುಹಾಕಿ, ರಕ್ತಹೀರಿ ಕೊಲ್ಲುತ್ತದೆ, ಎಂಬ ಭಾವನೆಯೂ ನಿರಾಧಾರವಾದುದು. ಹುಲಿ ತನ್ನ ಕೋರೆಹಲ್ಲುಗಳಿಂದ ಗಂಟಲನ್ನು ಕಚ್ಚಿ ಹಿಡಿದಾಗ ರಕ್ತಹೀರುವುದು ತಾನೆ ಹೇಗೆ ಸಾಧ್ಯ? ಮನುಷ್ಯ ಹಲ್ಲುಗಳಿಂದ ಒಂದು ಮಾವಿನಹಣ್ಣು ಪೂರ್ಣ ಕಚ್ಚಿ ರಸ ಹೀರುವುದು ಎಷ್ಟು ಸಾಧ್ಯವೋ ಹುಲಿಗೆ ಬಲಿಯ ಗಂಟಲಿನಿಂದ ರಕ್ತಹೀರುವುದು ಅಷ್ಟೇ ಸಾಧ್ಯ. ಮೇಲಾಗಿ ವಸ್ತುವನ್ನು ತುಟಿಗಳಿಂದ ಮುಚ್ಚಿ ಹಿಡಿದಾಗ ಮಾತ್ರ ಹೀರುವುದು ಸಾಧ್ಯ. ಇನ್ನೊಂದು ಮುಖ್ಯ ವಿಷಯವೆಂದರೆ ಹುಲಿಯಿಂದ ಪ್ರಾಣಿಗಳು ಕೊಲ್ಲಲ್ಪಟ್ಟಾಗ ಭೂಮಿಯ ಮೇಲೆ ರಕ್ತ ಚಲ್ಲದೇ ಇರುವುದು. ಇದಕ್ಕೆ ಕಾರಣ ಅದು ರಕ್ತಹೀರುವುದ ರಿಂದಲ್ಲ. ಪ್ರಾಣಿಯ ಶ್ವಾಸೋಚ್ಛ್ವಾಸವೇ ನಿಂತು ದೇಹದಲ್ಲಿಯ ರಕ್ತ ಮಂಜುಗಟ್ಟು ವುದರಿಂದ ಹುಲಿ ತನ್ನ ಹಿಡಿತವನ್ನು ಬಲಿಯ ಗಂಟಲಿನಿಂದ ಹೊರಗೆ ತೆಗೆದಾಗ ಕೋರೆಹಲ್ಲುಗಳು ನಾಟಿದ ರಂಧ್ರಗಳಿಂದ ಅಲ್ಪಸ್ವಲ್ಪ ರಕ್ತ ಹೊರಗೆ ಬಸಿದಾಗ ಅದನ್ನು ನೆಕ್ಕಬಹುದು ಅಷ್ಟೆ.

ಕೆಲವರು ಹುಲಿಗೆ 'ದಯಾಳು ಕೊಲೆಪಾತಕ' ಎಂದು ಪ್ರಶಸ್ತಿ ಕೊಟ್ಟಿದ್ದಾರೆ. ಏಕೆಂದರೆ ಅದು ತನ್ನ ಬಲಿಗಳನ್ನು ಅವುಗಳಿಗೆ ಗೊತ್ತಾಗುವ ಮೊದಲೆ ಅತಿ ಶೀಘ್ರ ಮತ್ತು ಪೂರ್ತಿ ಕೊಲ್ಲುವ ಚಾಣಾಕ್ಷತೆ ಹೊಂದಿರುವುದರಿಂದ. ಮೇಲಾಗಿ ಹುಲಿಗೆ ಆಹಾರ ಬೇಕಾದಾಗ ಮಾತ್ರ ಪ್ರಾಣಿಗಳನ್ನು ಕೊಲ್ಲುತ್ತದೆ. ವಿನಾಕಾರಣ ಕೊಲ್ಲುವ ಸ್ವಭಾವ ಅದರದ್ದಲ್ಲ. ಈ ಕಾರಣದಿಂದಾಗಿ 'ಸಭ್ಯಗೃಹಸ್ಥ' ಸ್ವಭಾವಗಳನ್ನು ಹುಲಿ ಅಳವಡಿಸಿಕೊಂಡಿದೆ ಎಂದು ವರ್ಣಿಸಲ್ಪಟ್ಟಿದೆ.

ಕುಮಾಂವೂ (ಉ.ಪ್ರ.) ಗುಡ್ಡಗಾಡು ಪ್ರದೇಶದ ನರಭಕ್ಷಕ ಹುಲಿಗಳ ಪ್ರಸಿದ್ಧ ಶಿಕಾರಿ ಜಿಮ್ ಕಾರ್ಬೆಟ್‌ನು ಹುಲಿಯ ಆಕ್ರಮಣದ ರೀತಿಯನ್ನು ಮುಂದಿನಪುಟದಲ್ಲಿ ನಂತೆ ವಿವರಿಸುತ್ತಾನೆ :

"ಹುಲಿಯ ಸಾಮಾನ್ಯ ಆಕ್ರಮಣದ ರೀತಿಯೆಂದರೆ ಹಿಂದಿನಿಂದ ಅಥವಾ ಒಂದು ಬದಿಯಿಂದ ಅತಿ ರಭಸದಿಂದ ನುಗ್ಗಿ ಬಲಿಯ ಬೆನ್ನಮೇಲೆ ಜಿಗಿಯುತ್ತದೆ. ಬಲಿಯನ್ನು ತನ್ನ ಪಂಜಗಳ ಹದಿನೆಂಟು ಉಗುರುಗಳಿಂದ ಬಿಗಿಯಾಗಿ ಹಿಡಿದು ಮಿಂಚಿನಂತಹ ಶೀಘ್ರಚಲನೆಯಿಂದ ಅದರ ಗಂಟಲು ಕಚ್ಚಿ ಭೂಮಿಗೆ ಉರುಳಿಸುತ್ತದೆ. ಬಲಿಯನ್ನು ಭೂಮಿಗೆ ಉರುಳಿಸುವ ಕಾರ್ಯದಲ್ಲಿ ತನಗೆ ಅನಾಹುತವಾಗದಂತೆ ಹಾಗೂ ಬಲಿಯ ಕಾಲುಗಳ ಒದೆತದಿಂದ ತಪ್ಪಿಸಿಕೊಳ್ಳಲು ಇನ್ನೊಂದು ಬದಿಗೆ ಅಂದರೆ ಕಾಲುಗಳಿದ್ದ ಆಚೆಯ ಬದಿಗೆ ಜಿಗಿದಾಗ ಬಲಿಯ ತಲೆ ಒಡ್ಡು ಮುರಿದಂತಾಗುತ್ತದೆ. ಮೃತ್ಯುವಿನ ಸಂಕಟದಲ್ಲಿದ್ದ ಪ್ರಾಣಿಯ ಒದೆತಕ್ಕೆ ಹುಲಿಸಿಕ್ಕರೆ ಅವುಗಳ ಚೂಪಾದ ಕೊಳಗಗಳಿಂದ ಅದರ ಹೊಟ್ಟೆಯ ಕರುಳುಗಳು ಹೊರಗೆ ಬರಬಹುದು. ಪ್ರಾಣಿ ಅಸಡ್ಡೆಯಾಗಿ ಭೂಮಿಗೆ ಬೀಳುವುದರಿಂದ ಅಥವಾ ಹುಲಿಯು ಹಲ್ಲುಗಳಿಂದ ಜಗ್ಗುವುದರಿಂದ ಕುತ್ತಿಗೆಯ ಕೀಲು ತಪ್ಪುತ್ತದೆ."

"ಇನ್ನೊಂದು ವಿಧಾನವೆಂದರೆ, ಹುಲಿಯ ನಿಧಾನವಾದ ಉದ್ದೇಶಪೂರ್ವಕ ಸಾಮೀಪ್ಯದಿಂದ ಅಥವಾ ಗಾಬರಿಪಡಿಸುವ ರಭಸದಿಂದ ನುಗ್ಗಿ ಕೆಳಗೆ ಹೊಕ್ಕು ಪ್ರಾಣಿಯ ಗಂಟಲು ಕಚ್ಚಿಹಿಡಿಯುತ್ತದೆ. ಕೆಳಗೆ ಎಳೆದು ಕೆಡವಿ ಅದರ ತಲೆಯನ್ನು ಭೂಮಿಗೆ ಅದುಮಿ ಹಿಡಿಯುತ್ತದೆ. ಹಿಡಿತದ ಒತ್ತಡವನ್ನು ಹಾಗೆಯೇ ಮುಂದುವರೆಸಿ ಪ್ರಾಣಿಯ ಕೊರಳಲ್ಲಿ ಕೋರೆಹಲ್ಲುಗಳನ್ನು ನಾಟಿಸಿ ಹಿಚುಕಿ ಕೊಲ್ಲುತ್ತದೆ. ಕಾಲುಗಳ ಒದೆತದಿಂದ ತಪ್ಪಿಸಿಕೊಳ್ಳಲು ಕೊರಳನ್ನು ಕಚ್ಚಿದ ಸ್ಥಿತಿಯಲ್ಲೇ ಬೆನ್ನಿನ ಬದಿಗೆ ಜಿಗಿದಾಗ ಕುತ್ತಿಗೆಯ ಸಂದು ತಪ್ಪುತ್ತದೆ. ಇದು ಪ್ರಾಸಂಗಿಕ ಘಟನೆ. ಅದು ಹುಲಿಯ ಉದ್ದೇಶಪೂರ್ವಕ ಗುರಿಯಲ್ಲ. ಕೆಲವು ವೇಳೆ ಬಲಿಪ್ರಾಣಿಯು ಗೂಟಕ್ಕೆ ಬಿಗಿಯಲ್ಪಟ್ಟಿದೆ ಎಂದು ಹುಲಿಗೆ ಖಚಿತವಾದರೆ ಅದನ್ನು ಭೂಮಿಗೆ ಎಳೆದು ಕೆಡವಿ ಜೀವಂತ ಪ್ರಾಣಿಯನ್ನೇ ತಿನ್ನಲು ಪ್ರಾರಂಭಿಸಿದ ಅನೇಕ ನಿದರ್ಶನಗಳಿವೆ."

ಹುಲಿ ತನ್ನ ಬಲಿಯನ್ನು ಕೊಂದನಂತರ ಸಾಮಾನ್ಯವಾಗಿ ಅದನ್ನು ಯಾವುದಾದರೊಂದು ಗೌಪ್ಯಸ್ಥಳಕ್ಕೆ ಹೆಚ್ಚಾಗಿ ನೀರಿನ ಸಾಮೀಪ್ಯ ಇದ್ದ ದಟ್ಟ ಆಶ್ರಯಕ್ಕೆ ಎಳೆದು ಅಥವಾ ಎತ್ತಿಕೊಂಡು ಹೋಗುತ್ತದೆ. ಹುಲಿ ಮಹಾ ಬಲಶಾಲಿಯಿದ್ದು ಮೂರು ಜನ ಸೇರಿ ಎಳೆದರೂ ಸಾಧ್ಯವಾಗದಂತಹ 200–250 ಕಿಲೋಗ್ರಾಮ್ ತೂಗುವ ಕಾಟಿಮೃಗ ಅಥವಾ ಎಮ್ಮೆಗಳ ದೇಹಗಳನ್ನು ಅತಿ ಸುಲಭವಾಗಿ ಸಾವಿರಾರು ಗಜಗಳ ವರೆಗೆ ಎಳೆದುಕೊಂಡು ಹೋಗುವ ಶಕ್ತಿಯನ್ನು ಹೊಂದಿರುತ್ತದೆ. ಸಾಮಾನ್ಯವಾಗಿ ಶವದ ಕುತ್ತಿಗೆಯನ್ನು ಕಚ್ಚಿ ತನ್ನ ಮುಂದಿನ ಕಾಲುಗಳ ಮಧ್ಯೆ ಅಥವಾ ಕಾಲುಗಳ ಬದಿಯಲ್ಲಿ ಎಳೆದುಕೊಂಡು ಹೋಗುವುದುಂಟು. ಹುಲಿ ಕೊಂದ ಪ್ರಾಣಿಗಳ ದೇಹಗಳನ್ನು ಎಳೆಯದೆ ತನ್ನ ಭುಜ ಅಥವಾ ಬೆನ್ನಮೇಲೆ ಹೊತ್ತುಕೊಂಡು ಹೋಗುತ್ತದೆಂಬ ಕೆಲವರ ವಿಚಾರ ನಿರಾಧಾರವಾದದ್ದು. ಕೊಂದ ಬಲಿಗಳು ಚಿಕ್ಕವಿದ್ದರೆ ಕೋಳಿ ಮರಿಯನ್ನು ಬೆಕ್ಕು ಕಚ್ಚಿ ಎತ್ತಿಕೊಂಡು ಹೋಗುವಂತೆ ಹುಲಿ ಬಾಯಿಯಲ್ಲಿ ಕಚ್ಚಿ ಎತ್ತಿಕೊಂಡು ಹೋಗುತ್ತದೆ. ಬಾಯಿಯಿಂದ ಕಚ್ಚಿ ಎತ್ತಿಕೊಂಡು ಹೋಗುವಾಗ

ಶವದ ಕೆಲವು ಅವಯವಗಳು ನೆಲಕ್ಕೆ ಆಗಾಗ ತಾಕಬಹುದು ಅಥವಾ ಎಳೆಯಲ್ಪಡ ಬಹುದು.

ತಿನ್ನುವ ಸಂಪ್ರದಾಯ: ಬೇಟೆಯನ್ನು ಯೋಗ್ಯಸ್ಥಳಕ್ಕೆ ಕೊಂಡೊಯ್ದ ನಂತರ ಹುಲಿ ದಿನದ ಯಾವ ವೇಳೆಯಲ್ಲಾದರೂ ತಿನ್ನಲು ಪ್ರಾರಂಭಿಸಬಹುದು. ಹುಲಿಯ ಹಲ್ಲುಗಳು ಕತ್ತರಿಸುವ ಅಸ್ತ್ರದಂತೆ ಬಲಿಯ ಚರ್ಮವನ್ನು ಕತ್ತರಿಸಿ ಬೇರ್ಪಡಿಸುವಲ್ಲಿ ಬಹಳ ದಕ್ಷತೆಯಿಂದ ಕೆಲಸಮಾಡುತ್ತವೆ. ಕತ್ತರಿಸುವ, ಕೀಳುವ ಹಾಗೂ ಹರಿಯುವ ಈ ಮೂರು ಸಂಯೋಜಿತ ಕಾರ್ಯಗಳಿಂದ ಮಾಂಸ, ಚರ್ಮಗಳನ್ನು ಅತಿ ಶೀಘ್ರವಾಗಿ ಹರಿದು ನುಂಗಿಬಿಡುತ್ತದೆ. ಆಹಾರ ಸೇವಿಸುತ್ತಿರುವ ಹುಲಿ ಮಲಗಿರಬಹುದು, ಬಾಗಿರಬಹುದು, ನಿಂತಿರಬಹುದು, ಕುಳಿತಿರಬಹುದು ಅಥವಾ ತನ್ನ ಹಿಂಭಾಗವನ್ನು ಮೇಲೆತ್ತಿ ಮುಂಗಾಲುಗಳ ಮೇಲೆ ಕುಳಿತಿರಬಹುದು. ಸಣ್ಣ ಮಾಂಸದ ತುಣುಕು ಗಳನ್ನು ಹುಲಿ ಹರಿದು ತಿನ್ನುವಾಗ ತನ್ನ ಮುಂದಿನ ಪಂಜಗಳಿಂದ ಹಿಡಿದರೂ ದೊಡ್ಡ ಬಲಿಗಳನ್ನು ಹರಿದು ತಿನ್ನುವಾಗ ಕ್ವಚಿತ್ತಾಗಿ ಪಂಜಗಳನ್ನು ಉಪಯೋಗಿಸಬಹುದು. ಮೂಳೆಗಳನ್ನು ಅಗಿದು ತಿನ್ನುವಾಗ ತನ್ನ ಪಂಜಗಳ ಮೃದುವಾದ ಪಾದಗಳನ್ನು ಸಹಾಯಕ್ಕೆಂದು ಉಪಯೋಗಿಸುವುದುಂಟು.

ಹುಲಿ ಏಕಪ್ರಕಾರವಾಗಿ ತಿನ್ನುವುದಿಲ್ಲ. ತಿನ್ನುವುದನ್ನು ನಿಲ್ಲಿಸಿ ವಿಶ್ರಮಿಸುವ ಮೊದಲು ಅದು ಒಂದು ಗಂಟೆಗಿಂತ ಹೆಚ್ಚು ಸಮಯದವರೆಗೆ ತಿನ್ನುವುದಿಲ್ಲ. ಕೆಲವು ನಿಮಿಷಗಳಿಂದ ಅನೇಕ ಘಂಟೆಗಳವರೆಗೆ ವಿಶ್ರಾಂತಿಪಡೆದು, ಅಲೆದಾಡಿ, ನೀರು ಕುಡಿದು, ಮೈಮಾಲೀಶ ಮಾಡಿಕೊಂಡು ಮತ್ತು ಇತರ ಕಾರ್ಯಕ್ರಮಗಳನ್ನು ಮುಗಿಸಿಕೊಂಡು ಪುನಃ ಬೇಟೆಗೆ ವಾಪಸ್ ಬಂದು ಸಲ್ಪ ತಿನ್ನುತ್ತದೆ. ಅದು ತೊಂದರೆಗೀಡಾಗದಿದ್ದರೆ ಸಂಪೂರ್ಣ ತಿಂದು ಮುಗಿಸುವವರೆಗೆ ಬೇಟೆಯ ಹತ್ತಿರದಲ್ಲೇ ಇರುತ್ತದೆ.

ಹುಲಿ ಭಾರಿ ದೇಹವನ್ನು ಪಡೆದಿದ್ದರೂ ಅದು ಹೊಟ್ಟೆಬಾಕವಲ್ಲ; ವಿನಾಕಾರಣ ಆಹಾರವನ್ನು ಹಾಳುಮಾಡುವುದೂ ಇಲ್ಲ. ಏಕೆಂದರೆ ಒಮ್ಮೆ ಕೊಂದ ದೇಹವನ್ನು ಸಾಮಾನ್ಯವಾಗಿ ಎರಡರಿಂದ ನಾಲ್ಕು ದಿನಗಳವರೆಗೆ ಕಾದಿಟ್ಟು ತಿನ್ನುತ್ತದೆ. ಕೆಲವರು ವರ್ಣಿಸಿದಂತೆ ಹುಲಿ ಮೇಲಿಂದ ಮೇಲೆ ಕೊಲ್ಲುವ ಪಶುವೂ ಅಲ್ಲ. ಅದಕ್ಕೆ ಅವಶ್ಯ ಕಂಡಾಗ ಮಾತ್ರ ಕೊಲ್ಲುತ್ತದೆ. ಅದು 'ಕೊಲ್ಲಲು ಜೀವಿಸದೆ, ಜೀವಿಸಲು ಕೊಲ್ಲುತ್ತದೆ.' ಅದು ತಿನ್ನಬೇಕಾದ್ದನ್ನು ಅತಿ ಸಂತೋಷದಿಂದ ತಿನ್ನುತ್ತದೆ.

ಸಾಮಾನ್ಯವಾಗಿ ಹುಲಿ ತಾನು ಕೊಂದು ತಿಂದುಳಿದ ದೇಹದಿಂದ ಸುಮಾರು ನಾನೂರು ಮೀಟರ್ ಅಂತರದಲ್ಲಿದ್ದ ಆಶ್ರಯಸ್ಥಾನದಲ್ಲಿ ಹೊಂಚಿಕೊಂಡು ನಿದ್ರಿಸುತ್ತದೆ. ಇಳಿಬಿಸಿಲಿನಲ್ಲಿ ಎಚ್ಚೆತ್ತು ಆಕಳಿಸುತ್ತ ಮೈಒಡ್ಡು ಮುರಿದು ಆಲಸ್ಯವನ್ನು ಹೊಡೆ ದೋಡಿಸಿಕೊಳ್ಳುವುದು ವಾಡಿಕೆ. ಬಿಸಿಲಿನ ತಾಪದಿಂದಾದ ನೀರಡಿಕೆಯನ್ನು ನೀಗಿಸಿ ಕೊಳ್ಳಲು ನೀರಿನ ಮಡುವು ಅಥವಾ ಸರೋವರಕ್ಕೆ ಹೋಗುತ್ತದೆ. ಹೆಚ್ಚಾಗಿ ಆಳವಿಲ್ಲದ

ನೀರಲ್ಲಿ ಗಂಟೆಗಟ್ಟಲೆ ಹೊರಳಾಡುತ್ತಿರುತ್ತದೆ. ತನ್ನ ಬಾಲದಿಂದ ನೀರಲ್ಲಿ ಅದ್ದಿ ಮೈಮೇಲೆ ಆಗಾಗ ನೀರು ಸಿಂಪಡಿಸಿಕೊಳ್ಳುವುದುಂಟು. ದಂಡೆಯ ಮೇಲೆ ಬಂದ ನಂತರ ಮೈಕೊಡವಿ ನೀರನ್ನು ಝಾಡಿಸುತ್ತದೆ.

ಸುರಕ್ಷತೆಗೆ ಆದ್ಯತೆ: ಹುಲಿ ತಾನು ಕೊಂದಿಟ್ಟ ದೇಹವನ್ನು ನೇರ ಹೋಗಿ ಸಮೀಪಿಸದೆ ಬೇಳಿನಿಂದ ಸುಮಾರು ನೂರು ಮೀಟರ್ ಅಂತರದಲ್ಲಿ ಒಂದು ಸುತ್ತುಹಾಕಿ ನಿರೀಕ್ಷಿಸುತ್ತದೆ. ಯಾವುದೇ ರೀತಿಯ ಅಪಾಯವಾಗಲಿ ಅಥವಾ ಸಂಶಯವಾಗಲಿ ಇಲ್ಲವೆಂದು ಕಂಡುಬಂದಲ್ಲಿ ಸುಮಾರು ಮೂವತ್ತು ಮೀಟರ್‌ನಷ್ಟು ಮುಂದೆ ಸಮೀಪಿಸುತ್ತದೆ. ಅಲ್ಲಿ ಮೆಳೆಯಿಂದ ಮೆಳೆಗೆ ದಾಟುತ್ತ ಮತ್ತೊಂದು ಸುತ್ತು ಹಾಕುವಾಗ ಹೆಜ್ಜೆಗೊಮ್ಮೆ ನಿಂತು ಸುತ್ತಲೂ ನೋಡುತ್ತ ಅರ್ಧಬಾಗಿ ನಡೆಯುತ್ತದೆ. ನಂತರ ಅದರ ಆಹಾರದ ಸ್ಥಳ ಇನ್ನೂ ಸುಮಾರು 20 ಮೀಟರ್‌ಗಳಷ್ಟು ಇದ್ದಾಗ ಒಂದು ಮೆಳೆ ಅಥವಾ ಮರಗಳ ಮೋಟು ಅಥವಾ ಹುತ್ತಗಳೇನಾದರೂ ಇದ್ದರೆ ಅವುಗಳ ಮರೆಯಲ್ಲಿ ಸುಮಾರು ಸಮಯದವರೆಗೆ ನಿಶ್ಚಲವಾಗಿ ನಿಶ್ಶಬ್ದವಾಗಿ ನೆಲಕ್ಕೆ ಹೊಂದಿ ಅಡಗಿ ಕುಳಿತು ಸುತ್ತಲಿನ ಪ್ರದೇಶವನ್ನು ಒಂದು ಕಡೆಯಿಂದ ಸೋಸಿ ಅಂಗುಲ ಅಂಗುಲ ಸ್ಥಳವನ್ನು ಕೂಲಂಕಷವಾಗಿ ನೋಡುತ್ತದೆ. ಅಲ್ಲಿದ್ದ ಪ್ರತಿಯೊಂದು ಕಲ್ಲು, ಕಟ್ಟಿಗೆ, ಮರ, ಹುಲ್ಲು, ಸೊಪ್ಪು ಮೊದಲಾದವುಗಳನ್ನು ಅತಿ ಸೂಕ್ಷ್ಮವಾಗಿ ತರ್ಕಬದ್ಧವಾಗಿ, ಸಂಶಯಾಸ್ಪದದಿಂದ ಪರೀಕ್ಷಿಸುತ್ತದೆ. 'ಹಸಿವೆ, ಅತಿ ಹಸಿವೆ ಆದರೂ ಸುರಕ್ಷತೆ ಮೊದಲು' ಎಂಬ ಸೂತ್ರಕ್ಕೆ ಆದ್ಯತೆ ಕೊಡುತ್ತದೆ ಹುಲಿ.

ಮುಪ್ಪಿನ ಚಿನ್ಹೆಗಳು

ಹುಲಿಯ ಸರಾಸರಿ ವಯಸ್ಸು 20 ವರ್ಷಗಳಿದ್ದು ಅದರ ಪುಪ್ಪುಸದ ಮೇಲಿರುವ ಖಂಡಗಳ(ವಿಭಾಗ) ಮೇಲೆ ಲೆಕ್ಕಮಾಡಿ ಅದರ ವಯಸ್ಸನ್ನು ಹೇಳಬಹುದು. ಒಂದು ಖಂಡ ಒಂದು ವರ್ಷ ತೋರಿಸುತ್ತದೆ. ಹುಲಿಯ ಮರಣದ ಮೊದಲು ಅನೇಕ ಹಲ್ಲುಗಳು ಮುರಿಯುತ್ತವೆ ಹಾಗೂ ಉದುರಿ ಬೀಳುತ್ತವೆ. ಕೆಸರಲ್ಲಿಯ ಅದರ ಹೆಜ್ಜೆಗುರ್ತುಗಳು ಅನೇಕ ಬಿರುಕುಗಳನ್ನು ತೋರಿಸುತ್ತವೆ. ಉಗುರುಗಳು ಸವೆದು ಮೊಂಡಾಗುತ್ತವೆ.

ಹುಲಿ ತನ್ನ ಮುಪ್ಪಿನಕಾಲದ ಕೊನೆಯ ಘಳಿಗೆಯನ್ನು ಯಾವುದಾದರೂ ಒಂದು ಏಕಾಂತ ಸ್ಥಳವಾದ ನಿರ್ಜನ ಕಾಡು ಅಥವಾ ಗುಹೆಯಲ್ಲಿ ಹೊಕ್ಕು ಸಮಯ ಕಳೆಯುತ್ತದೆ. ಏಕಾಂತವಾಸದಲ್ಲಿದ್ದಾಗಲೇ ಅದು ಕೊನೆಯುಸಿರನ್ನು ನೀಗುತ್ತದೆ. ಅದರ ದೇಹ ಅಲ್ಲಿಯೇ ಮಣ್ಣಿನೊಂದಿಗೆ ಬೆರೆತುಹೋಗುತ್ತದೆ.

ದನಗಳ್ಳ ಹುಲಿಗಳು

ಹುಲಿ ಕಾಡಿನಲ್ಲಿ ಸಾಮಾನ್ಯವಾಗಿ ಗುರಿಯಿಲ್ಲದೆ ಹಾಗೂ ಮನಬಂದಂತೆ ಅಲೆದಾಡುತ್ತವೆಂಬ ಸಾಂಪ್ರದಾಯಿಕ ಅಭಿಪ್ರಾಯ ನಿಜದಿಂದ ಬಹುದೂರ. ಯಾವು

ದೊಂದು ಪ್ರಾಣಿಯೂ ಗುರಿಯಿಲ್ಲದೆ ಮನಬಂದಂತೆ ಅಲೆದಾಡಲಾರದು. ಹುಲಿಯ ಜೀವನಕ್ಕೆ ಅತ್ಯಾವಶ್ಯಕವಿದ್ದ ಕಾಡುಪ್ರಾಣಿಗಳಿಂದೊಡಗೂಡಿದ ನೈಸರ್ಗಿಕ ಆಹಾರ ಕ್ಕೆಂದು ಅದು ಹೆಚ್ಚು ಸಂಚರಿಸುವುದು ಸ್ವಾಭಾವಿಕ. ಆದರೆ ಅದರ ಆಹಾರದ ಅಭಾವ ಪರಿಸ್ಥಿತಿ ಉಂಟಾದಾಗ ಆಹಾರ ಶೋಧನೆಗೆಂದು ಇನ್ನೂ ಹೆಚ್ಚು ಹೆಚ್ಚಾಗಿ ಸಂಚರಿಸುತ್ತ ಅನಿವಾರ್ಯವಾಗಿ ಜನವಾಸಸ್ಥಳದ ಅಂಚಿನಲ್ಲಿ ಬಂದಿಳಿಯುತ್ತದೆ. ಅಲ್ಲಿಯ ಸಾಕಿದ ಪ್ರಾಣಿಗಳನ್ನು ಕೊಂದು ತಿನ್ನಲು ಪ್ರಾರಂಭಿಸುತ್ತದೆ. ಮನುಷ್ಯ ತನ್ನ ಹೀನಕೃತ್ಯಗಳಿಂದ ಅದರ ಪಾಲಿನ ನೈಸರ್ಗಿಕ ಆಹಾರದ ಮೇಲೆ ಕೈಮಾಡಿ ಕಸಿದು ಕೊಂಡಾಗ, ಹುಲಿ ಜೀವಿಸಲೇಬೇಕಾಗಿ ಬಂದಾಗ ಮನುಷ್ಯ ಸಾಕಿದ ಪ್ರಾಣಿಗಳ ಮೇಲೆ ಅನಿವಾರ್ಯವಾಗಿ ಅವಲಂಬಿಸಬೇಕಾಗುತ್ತದೆ.

ಹುಲಿಯ ಬಗ್ಗೆ ಎಷ್ಟೇ ಮೆಚ್ಚಿಗೆ ಇದ್ದರೂ ಕೆಲವು ಸಮಯ ಅದು ತೊಂದರೆ ಕೊಡದ ಪ್ರಾಣಿಯೆಂದು ನಂಬುವುದು ಮೂರ್ಖತನವಾದೀತು. ಎಷ್ಟೇ ಆಗಲಿ ಅದು ಮಾಂಸಾಹಾರಿ ಪ್ರಾಣಿ. ಅದು ತನ್ನ ಬೇಟೆಪ್ರಾಣಿಗಳನ್ನು ಅತಿ ದಿಗಿಲು ಹುಟ್ಟಿಸು ವಂತೆ ಮಾಡಿ ಪರಿಣಾಮಕಾರಿಯಾಗಿ ಕೊಲ್ಲುತ್ತದೆ. ಕಾದುಕುಳಿತು ಕೊಲ್ಲುವುದೆಂದರೆ ಹುಲಿಯನ್ನು ಮೀರಿಸುವ ಪ್ರಾಣಿ ಬೇರೊಂದಿಲ್ಲ. ಜಾರ್ಜ್ ಶಾಲ್ಲರ್ ಎಂಬುವವನು ಮಧ್ಯ ಪ್ರದೇಶದ ಕನ್ಹಾ ರಾಷ್ಟ್ರೀಯ ಉದ್ಯಾನದಲ್ಲಿ ಸಾಕಷ್ಟು ನೈಸರ್ಗಿಕ ಬೇಟೆಪ್ರಾಣಿಗಳಿದ್ದರೂ ಹತ್ತು ಹುಲಿಗಳು 12 ತಿಂಗಳಲ್ಲಿ ರಾಷ್ಟ್ರೀಯ ಉದ್ಯಾನದ ಒಳಗೂ ಹೊರಗೂ ಸೇರಿದಂತೆ 250 ದನಕರುಗಳನ್ನು ಕೊಂದಿವೆಯೆಂದು ಹೇಳಿದ್ದಾನೆ.

ಸಾಕಿದ ದನಕರುಗಳನ್ನು ಕೊಲ್ಲುವ ಹುಲಿಗಳನ್ನು ಎರಡು ವಿಧವಾಗಿ ವಿಂಗಡಿಸ ಬಹುದು. ದನಕರುಗಳನು ಕೆಲವು ಹುಲಿಗಳು ಪರಿಸ್ಥಿತಿಯ ಅನಿವಾರ್ಯತೆಯಿಂದ ಕೊಲ್ಲುತ್ತವೆ. 'ಚಪ್ಪೆರೋಗ' ಹಾಗೂ 'ಗಂಟಲುಬೇನೆ'ಗಳಂತಹ ತೀವ್ರ ಸಾಂಕ್ರಾಮಿಕ ರೋಗಗಳು ಹಳ್ಳಿಗಳ ದನಕರುಗಳಿಂದ ಕಾಡುಪ್ರಾಣಿಗಳಾದ ಜಿಂಕೆ, ಕಡವೆ, ಕಾಟೆಮೃಗ ಮುಂತಾದವುಗಳಿಗೂ ಪಸರಿಸಿ ಅವೆಲ್ಲ ಹೆಚ್ಚು ಸಂಖ್ಯೆಯಲ್ಲಿ ಮೃತ್ಯುಗೀಡಾಗುತ್ತವೆ. ಆಗ ನೈಸರ್ಗಿಕ ಬಲಿಗಳು ದೊರೆಯದಂತಾಗಿ ಹುಲಿಗಳು ಸಾಕುಪ್ರಾಣಿಗಳತ್ತ ತಮ್ಮ ಗಮನ ಹರಿಸುತ್ತವೆ. ಇಂಥ ಹುಲಿಗಳನ್ನು 'ಮನ್ನಿಸುವ ಗುಂಪಿ'ಗೆ ಸೇರಿಸಬಹುದು. 'ಏನೇ ಇರಲಿ ಕೊಲ್ಲು' ಎಂಬ ಬೇಟೆಗಾರರು ಹಾಗೂ 'ನೋಡಿದ್ದನ್ನೆಲ್ಲ ಕೊಲ್ಲು' ಎಂಬ ಬೇಟೆಗಳ್ಳರಿಂದ ಕಾಡಿನ ಪ್ರಜೆಗಳಾದ ಜಿಂಕೆ, ಕಡವೆ, ಕಾಟೆಮೃಗಗಳು ಲಭಿಸದ ಪರಿಸ್ಥಿತಿ ಯನ್ನುಂಟುಮಾಡುವುದರಿಂದ ಹುಲಿ ತನ್ನ ಹಸಿವೆಯನ್ನು ನೀಗಿಸಿಕೊಳ್ಳುವುದು ಸಾಧ್ಯ ವಾಗದೇ ಇದ್ದಾಗ, ಹಳ್ಳಿಗಳ ಪಕ್ಕದಲ್ಲಿಯ ಹೊಲಗದ್ದೆಗಳಲ್ಲಿ ಕಣ್ಣುತಪ್ಪಿಸಿ ಹಾಗೂ ಕಾಡಿನ ಅಂಚಿನಲ್ಲಿ ಮೇಯುತ್ತಿರುವ ದನಕರುಗಳನ್ನು ಕಾದು ಅವುಗಳನ್ನು ಕೊಲ್ಲಲು ಪ್ರಯತ್ನಿಸುತ್ತದೆ. ಇವು 'ಮನ್ನಿಸದ ಗುಂಪಿ'ಗೆ ಸೇರಿದವುಗಳು.

ದನಕರುಗಳ ಮೇಲೆ ದಾಳಿಮಾಡುವ ಹುಲಿ ಹಳ್ಳಿಗಳ ಅಂಚಿನಲ್ಲಿಯ ಸಮೀಪದ ಕಾಡುಗಳಲ್ಲಿ ಅಥವಾ ಗುಡ್ಡಗಳಲ್ಲಿಯ ಗುಹೆಗಳಲ್ಲಿ ವಾಸವಾಗಿದ್ದು ಮನುಷ್ಯನನ್ನು

ಧೈರ್ಯದಿಂದ ಎದುರಿಸಲಾರದು. ಆದರೆ ಕಾಡಿನೊಳಗಿದ್ದು ಕಾಡುಪ್ರಾಣಿಗಳ ಮೇಲೆಯೇ ಅವಲಂಬಿಸಿದ್ದ ಹುಲಿ ಮನುಷ್ಯನ ನೋಟ ಹಾಗೂ ಸಪ್ಪಳಕ್ಕೆ ರೂಢಿ ಯಿಲ್ಲದೆ ಹೆಚ್ಚಾಗಿ ಅಚ್ಚರಿಯಿಂದ ಅವನನ್ನು ನಿಂತು ನೋಡುತ್ತಿರುತ್ತದೆ. ದನಗಳ್ಳ ಹುಲಿ ಮನುಷ್ಯನನ್ನು ನೋಡಿ ಸದ್ದಿಲ್ಲದೆ ಕಾಲ್ತೆಗೆಯುತ್ತದೆ; ಆದರೆ ಅದು ಬಹುದೂರ ಹೋಗದೆ ದನಗಳು ಮೇಯುತ್ತಿದ್ದ ಸ್ಥಳದ ಹತ್ತಿರ ಕುಡಿಯಲು ನೀರು ಹಾಗೂ ಅದು ಹೊಂಚಿಕೊಳ್ಳಲು ಒಂದೆರಡು ಸುರಕ್ಷಿತ ಸ್ಥಳಗಳಿದ್ದು ಜನರು ಅದಕ್ಕೆ ಕುತೂಹಲ ತೋರಿಸದೆ ಹಾಗೂ ಅದರ ಏಕಾಂತತೆಗೆ ಧಕ್ಕೆ ಕೊಡದೆ ಇದ್ದರೆ ಅದು ಹಾಯಾಗಿ ಇರುತ್ತದೆ. ಮುಪ್ಪಿನಿಂದ ಕೆಲವು ಹುಲಿಗಳು ದನ ಕೊಂದು ತಿನ್ನುವ ಪ್ರವೃತ್ತಿ ಬೆಳೆಸಿಕೊಳ್ಳುತ್ತವೆ. ಆಗ ಅವುಗಳಿಗೆ ಕಾಡುಮೃಗಗಳ ಬೇಟೆ ಸಾಧ್ಯವಾಗುವುದಿಲ್ಲ.

ಕಾಡುಪ್ರಾಣಿ ಕೊಲ್ಲುವ, ಸಾಕಿದ ಪ್ರಾಣಿ ಕೊಲ್ಲುವ ಹಾಗೂ ನರಹತ್ಯ ಅಥವಾ ನರಭಕ್ಷಕ ಜಾತಿಗಳೆಂದು ಹುಲಿಗಳಲ್ಲಿ ಪ್ರಭೇದಗಳೇನೂ ಇಲ್ಲ. ಒಂದು ಸ್ವಭಾವದಿಂದ ಮತ್ತೊಂದು ಸ್ವಭಾವಕ್ಕೆ ಸಂದರ್ಭಾನುಸಾರ ಬದಲಾಯಿಸುವ ಸ್ಥಿತಿಗಳು ಮಾತ್ರ. ಕಾಡುಪ್ರಾಣಿಗಳನ್ನು ಕೊಂದು ತಿನ್ನುವ ಹುಲಿ ಯಾವಾಗಲೂ ಕಾಡಿನಲ್ಲಿ ಸತತ ಅಲೆದಾಡಲು ಹಾಗೂ ಕ್ಷಣಮಾತ್ರದಲ್ಲಿ ಅದೃಶ್ಯವಾಗುವಂತಹ ಗತಿಹೊಂದಿದ ಪ್ರಾಣಿ ಗಳನ್ನು ಹಿಡಿಯಲು ಅತಿ ಹೆಚ್ಚು ಸಾಮರ್ಥ್ಯ ಹಾಗೂ ಬಲವನ್ನು ಹೊಂದಿರಬೇಕಾಗು ತ್ತದೆ. ಆದರೆ ದನಗಳ್ಳಹುಲಿಗಳು ಸಾಮಾನ್ಯವಾಗಿ ಅತಿ ಧಾರ್ಷ್ಟ್ಯವಾಗಿದ್ದು ಯಾವಾಗಲೂ ನಿರುತ್ಸಾಹ ಹಾಗೂ ಕಡಮೆ ಚುರುಕಾಗಿರುತ್ತವೆ. ಅವು ಜೀವಿಸುವು ದಕ್ಕೆ ಕಾಡುಪ್ರಾಣಿಗಳನ್ನು ಕೊಲ್ಲುವ ಹುಲಿಯಷ್ಟು ಕಷ್ಟಪಡುವ ಅವಶ್ಯಕತೆ ಇರುವುದಿಲ್ಲ. ಅವು ಮಾಡುವುದಿಷ್ಟೆ; ಕಾಡಿನ ಅಂಚಿನಲ್ಲಿ ಸಮಾಧಾನದಿಂದ, ಪೋಲಿಯಾಗಿ ಅಡ್ಡಾಡುವ ಎಮ್ಮೆ ಅಥವಾ ಹಸುವಿಗೆಂದು ಕಾದು ಕುಳಿತುಕೊಳ್ಳುತ್ತವೆ. ತನ್ನ ಹಿಂದಿನ ಭೋಜನದ ನಾಲ್ಕೈದು ದಿನಗಳನಂತರ ಮುಂದಿನ ಬೇಟೆಯನ್ನು ಮನಃಪೂರ್ವಕವಾಗಿ ಹುಡುಕಲು ಪ್ರಾರಂಭಿಸುತ್ತದೆ. ತನ್ನ ಆಹಾರವನ್ನು ಕೇವಲ ದನಗಳ ಮಾಂಸಕ್ಕೆ ಮೀಸಲಾಗಿರಿಸದೆ ಯಾವಾಗಲೂ ತನ್ನ ಭಕ್ಷ್ಯಗಳ ಪಟ್ಟಿಯಲ್ಲಿ ಬದಲಾವಣೆ ಮಾಡಲು ಸಿದ್ಧವಿದ್ದು ಜಿಂಕೆ, ಕುರಿ, ಹಂದಿ, ನಾಯಿ ಅಥವಾ ಚಿಕ್ಕಚಿಕ್ಕ ತುಣುಕುಗಳಂತಿದ್ದ ನವಿಲು, ಮಂಗ ಮೊದಲಾದವುಗಳ ಮಾಂಸವನ್ನು ಅತಿ ಸಂತೋಷದಿಂದ ತಿನ್ನುತ್ತದೆ. ದನಗಳ್ಳ ಹುಲಿ ಒಂದೇ ಜಾಗದಲ್ಲಿರುವುದಿಲ್ಲ. ಅದು ಬೇರೆ ಬೇರೆ ಹೊಲ, ಗದ್ದೆ ಹಾಗೂ ಹಳ್ಳಿಗಳಿಗೆ ಭೆಟ್ಟಿ ಕೊಡುತ್ತದೆ. ಒಂದು ಸ್ಥಳದಲ್ಲಿ ಸ್ವಲ್ಪೇ ಸಮಯದಲ್ಲಿ ತನ್ನ ನೀಚ ಕೃತ್ಯವನ್ನು ಎಸಗುತ್ತದೆ. ಹಳ್ಳಿಯ ಜನರು ಎಚ್ಚೆತ್ತು ಶೀಘ್ರ ಅದರ ರೀತಿಯ ಬಗ್ಗೆ ತಿಳಿವಳಿಕೆ ಹೊಂದುವುದರೊಳಗೆ ಅವರ ಎರಡು ಅಥವಾ ಮೂರು ದನಗಳನ್ನು ಕೊಂದು ಆ ಸ್ಥಳದ ಆತಿಥ್ಯವನ್ನು ಅನುಭವಿಸಿ ಮುಗಿದ ನಂತರ ಅದು ಮುಂದಿನ ಸ್ಥಳಕ್ಕೆ ಹೊರಟುಹೋಗುತ್ತದೆ. ಈ ರೀತಿಯಾಗಿ ಅದು ತನ್ನ ವಲಯದಲ್ಲಿ ಅಲ್ಲಲ್ಲಿ ಸುತ್ತಾಡುತ್ತಿರುತ್ತದೆ. ದನಗಳ್ಳಹುಲಿಗಳು ಹಾಗೂ ನರಭಕ್ಷಕಹುಲಿಗಳು ನಿಲ್ಲುವ ಹಾಗೂ ಅಲೆದಾಡುವ ಸ್ಥಳಗಳು ಕ್ರಮಬದ್ಧವಾಗಿದ್ದು ಅವುಗಳನ್ನು ನಕ್ಷೆಯ ಮೇಲೆ

ನಿರ್ದಿಷ್ಟವಾಗಿ ಗುರುತಿಸಬಹುದು. ಹುಲಿ ಒಂದು ಸ್ಥಳಕ್ಕೆ ವಾಪಸ್ಸಾದಾಗ ಕನಿಷ್ಠ ಪಕ್ಷಕ್ಕೆ ಒಂದಾದರೂ ಬೇಟೆಯನ್ನು ತಿಂದು ಮುಗಿಸುವವರೆಗೆ ಅಂದರೆ ಮೂರುನಾಲ್ಕು ದಿನಗಳವರೆಗೆ ಅಲ್ಲಿಯೇ ಇದ್ದು, ಮುಂದಿನ ಸ್ಥಳಕ್ಕೆ ಧಾವಿಸುತ್ತದೆ. ಪುನಃ ಮೂರುನಾಲ್ಕು ದಿನಗಳವರೆಗೆ ಅಲ್ಲಿ ಇದ್ದು, ಎರಡನೆ ಸ್ಥಳಕ್ಕೆ ಧಾವಿಸುತ್ತದೆ. ಅಲ್ಲಿ ಮೂರುನಾಲ್ಕು ದಿನಗಳವರೆಗೆ ಇದ್ದು ಪೂರ್ವಯೋಜಿತ ಕಾರ್ಯಕ್ರಮದಂತೆ ಹೆಚ್ಚಿನ ಆತಿಥ್ಯಪಡೆಯಲು ಮೂರನೆಯ ಸ್ಥಳಕ್ಕೆ ಹೊರಟುಹೋಗುತ್ತದೆ.

ಹುಲಿ ಅಲೆದಾಡುವ ಈ ಸಾಮಾನ್ಯ ಮಾದರಿ ಹೆಚ್ಚುಕಡಮೆ ಒಂದು ತ್ರಿಕೋನದ ಆಕೃತಿಯಾಗಿದ್ದು ಅದರ ಮೂರು ಬಿಂದುಗಳು ಸಾಮಾನ್ಯವಾಗಿ ಹತ್ತರಿಂದ ಹದಿನೈದು ಕಿಲೋಮೀಟರ್ ಅಂತರದಲ್ಲಿರುತ್ತವೆ. ಹುಲಿ ಯಾವಾಗಲೂ ತನ್ನ ಪ್ರದೇಶದಲ್ಲಿ ಸತತವಾಗಿ ಸುತ್ತಾಡುತ್ತ ತನ್ನ ಆಹಾರ ಗಿಟ್ಟಿಸಲು ಹೆಚ್ಚಿನ ಶ್ರಮ ಪಡಬೇಕಾಗುತ್ತದೆ. ಹುಲಿಗೆ ಫಲವತ್ತಾದ ಹಾಗೂ ದೀರ್ಘ ಜ್ಞಾಪಕ ಶಕ್ತಿ ಇದ್ದು ಅದರ ಜೀವನದಲ್ಲಿ ಉಂಟಾದ ಎಲ್ಲ ಘಟನೆಗಳನ್ನೂ ಹಾಗೂ ಆ ಸ್ಥಳಗಳನ್ನೂ ನೆನಪಿನಲ್ಲಿಡುತ್ತದೆ.

ಆಗಾಗ ಹುಲಿಗಳು ತಮ್ಮ ಸಾಮಾನ್ಯವಾದ ಸುತ್ತಾಟದ ಸ್ಥಳಬಿಟ್ಟು, ಬಹಳ ದಿನಗಳವರೆಗೆ ಬೇರೆಕಡೆ ಬಹುದೂರ ಹೋಗುವುದುಂಟು. ಕೆಲವು ಬಾರಿ ತಮ್ಮ ಗಡಿಪ್ರಾಂತಕ್ಕೆ ವಾಪಸ್ ಬರುವುದೇ ಇಲ್ಲ. ಒಂದು ವೇಳೆ ಹುಲಿ ಕೊಲ್ಲಲ್ಪಟ್ಟರೆ, ಕೂಡಲೆ ಮತ್ತೊಂದು ಹುಲಿ ಬಂದು ಆ ನೆಲೆಯನ್ನು ಆಕ್ರಮಿಸಿ ಸಾಮಾನ್ಯವಾಗಿ ಅದರ ಪೂರ್ವಾಧಿಕಾರಿಯ ಸ್ವಭಾವ ಹಾಗೂ ನಡತೆಗಳನ್ನೇ ಮುಂದುವರೆಸುತ್ತದೆ. ಎರಡನೆಯ ಹುಲಿ ಮೊದಲಿನ ಹುಲಿ ಸಂಗಡ ಇರದಿದ್ದರೂ, ಅದನ್ನು ನೋಡಿರ ದಿದ್ದರೂ, ಅವೇ ಮಾರ್ಗಗಳಲ್ಲಿ ಸುತ್ತಾಡಿ, ಅವೇ ಸ್ಥಳಗಳಲ್ಲಿ ಮಲಗಿ, ಅವೇ ಸ್ಥಾನ ಗಳಲ್ಲಿ ನೀರು ಕುಡಿದು, ಅದೇ ತೆರನಾದ ಜೀವನ ಸಾಗಿಸುತ್ತದೆಂಬುದು ಆಶ್ಚರ್ಯಕರ ವಿಷಯವೇ ಸರಿ.

ಇತ್ತೀಚಿನ ಬೆಳವಣಿಗೆಗಳನ್ನು ಕೂಲಂಕಷವಾಗಿ ವಿವೇಚನೆ ನಡೆಸಿದ್ದೇ ಆದರೆ ಹವ್ಯಾಸಕ್ಕೆಂದು ಒಂದು ಹುಲಿಯನ್ನಾದರೂ ಗುಂಡಿಕ್ಕಿ ಕೊಲ್ಲುವ ಸ್ಥಿತಿ ಇಂದಿಲ್ಲ. ಕಾಡಿನಲ್ಲಿ ಅಲೆದಾಡಿ, ಕಾದು ಹುಡುಕಿ, ಕೊನೆಗೆ ದರ್ಶನವನ್ನಾದರೂ ಮಾಡಿಕೊಳ್ಳುವಾ ಎಂದರೂ ಹುಲಿಗಳು ದುರ್ಲಭವಾಗಿವೆ. ಇಂತಹ ಪರಿಸ್ಥಿತಿಯಲ್ಲಿ ದನಕರುಗಳನ್ನು ಕೊಲ್ಲುವ ಹುಲಿಗಳ ಬಗ್ಗೆ ಕೇಳಿದರೆ ಅವುಗಳಿಂದಾಗಬಹುದಾದ ತೊಂದರೆ ಹಾನಿಗಳನ್ನು ತಪ್ಪಿಸುವುದಕ್ಕೋಸ್ಕರ ಅವುಗಳನ್ನು ಗುಂಡಿಕ್ಕಿ ಕೊಂದು ಅಳಿದುಳಿದ ಸಂತತಿಯನ್ನೇ ನಿರ್ವಂಶ ಮಾಡುವ ಬದಲು ಅವುಗಳನ್ನು ಜೀವಂತ ಸೆರೆಹಿಡಿದು ಆಧುನಿಕ ಮೃಗಾಲಯ ಗಳಿಗಾಗಲಿ, ಸರ್ಕಸ್ಸುಗಳಿಗಾಗಲಿ ಅಥವಾ 'ಸಫಾರಿ ಪಾರ್ಕ್'ಗಾಗಲಿ ಕಳಿಸಿಕೊಡುವುದು ಸೂಕ್ತವಾದದ್ದು. ಇದರಿಂದ ಅವುಗಳ ಸಂತತಿ ಅಭಿವೃದ್ಧಿ ಸಾಧ್ಯ. ಹುಲಿಗಳನ್ನು ಜೀವಂತ ಸೆರೆಹಿಡಿಯುವ ಕೆಲವು ಮುಖ್ಯ ಪದ್ಧತಿಗಳನ್ನು ಕೊನೆಯ ಅಧ್ಯಾಯ ಉಪಸಂಹಾರದಲ್ಲಿ ಕೊಡಲಾಗಿದೆ.

ನರಭಕ್ಷಕ ಹುಲಿಗಳು

'ಕಾಡುಮೃಗಗಳ ಸಾರ್ವತ್ರಿಕ ಶತ್ರು' ಎಂದು ಮುದ್ರೆಒತ್ತಿಸಿಕೊಳ್ಳಲ್ಪಟ್ಟ ಮನುಷ್ಯನ ಹಿಂಸಾಚಾರ ಹಾಗೂ ಅತ್ಯಾಚಾರಗಳಿಂದ ಇತ್ತೀಚೆಗೆ ಕಾಡುಗಳಲ್ಲಿ ಹುಲಿಗಳನ್ನು ಕಾಣುವುದು ಅತಿ ದುರ್ಲಭವಾಗಿದೆ. ಮನುಷ್ಯನಷ್ಟು ವಿಷಭರಿತ ಕೆಟ್ಟ ಪ್ರಾಣಿ ಈ ಜಗತ್ತಿನಲ್ಲಿ ಬೇರೊಂದಿರಲಾರದು. ನೀಚ ಮನುಷ್ಯ ತನ್ನ ಎಲ್ಲ ವಿದ್ಯೆ, ಹಾಗೂ ಕಲೆಗಳನ್ನು ಉಪಯೋಗಿಸಿ ಕನಿಕರವಿಲ್ಲದೆ ಅತ್ಯಾಚಾರವೆಸಗಿ ಕಾಡುಪ್ರಾಣಿಗಳ ಬಲಿ ತೆಗೆದುಕೊಳ್ಳಲು ಪ್ರಯತ್ನಿಸುತ್ತಲೇ ಇದ್ದಾನೆ. ಅವನು ಅರಣ್ಯವನ್ನೆಲ್ಲ ಕಡಿದು ಹಾಳುಮಾಡಿ ಮೈದಾನಗಳನ್ನಾಗಿ ಮಾಡಿದ; ಮೈದಾನಗಳು ಮರಳು ಭೂಮಿಯಾಗಿ ಪರಿವರ್ತನೆ ಹೊಂದಿದವು. ಆತ ಹಳ್ಳ-ಹೊಳೆಗಳಿಗೆ ಒಡ್ಡು ಹಾಗೂ ಅಣೆಕಟ್ಟು ಗಳನ್ನು ಕಟ್ಟಿಸಿ ನೀರು ಹರಿಯುವುದನ್ನು ನಿಲ್ಲಿಸಿದ; ಕಾಡಿಗೆ ಕಾಡೇ ಮುಳುಗಡೆಯಾಗಿ ಮಳೆಯ ಪ್ರಮಾಣ ಕಡಮೆ ಆಯಿತು. ಹೆಚ್ಚುತ್ತಿರುವ ಜನಸಂಖ್ಯೆಯ ಒತ್ತಡದಿಂದ ರಸ್ತೆ, ಬೇಸಾಯ, ಗಣಿ, ಕಾಮಗಾರಿ, ಕೈಗಾರಿಕೋದ್ಯಮ ಮುಂತಾದವುಗಳಿಗೆಂದು ಇದ್ದ ಕಾಡು ಕಡಿದು ಜವುಗು ಭೂಮಿಗಳನ್ನು ಸುಧಾರಿಸಿ ಕಾಡು ಪ್ರಾಣಿಗಳನ್ನು ಗುಂಡಿಕ್ಕಿ ಕೊಂದುಹಾಕಿದ.

'ತಿನ್ನಲು ಜೀವಿಸದೆ, ಜೀವಿಸಲು ತಿನ್ನುವ' ಮಾಂಸಾಹಾರಿ ಪ್ರಾಣಿಗಳು ಉಪವಾಸ ಇರುವಂತಾಯಿತು. ಅವು ಸಂದರ್ಭ ಸ್ಥಿತಿಗಳ ಒತ್ತಡದಿಂದ ದನಕರುಗಳ ಮೇಲೆ ಕೈಮಾಡಿದಾಗ ದನಗಳ್ಳಹುಲಿಗಳೆಂದು ಮುದ್ರೆ ಒತ್ತಲ್ಪಟ್ಟವು. ನಂತರ ಅವು ಮನುಷ್ಯನ ಶಾಂತತೆಗೆ ಭಂಗ ತರುತ್ತವೆಂದು ಕಂಡಲ್ಲಿ ಗುಂಡಿಕ್ಕಿ ಕೊಲ್ಲಲು ಸರಕಾರಗಳಿಂದ ಆದೇಶ ಬಂದವು. ಮನುಷ್ಯ ಈ ಎಲ್ಲ ರೀತಿಗಳಲ್ಲಿ ಸ್ವಾರ್ಥಕ್ಕಾಗಿ ಕಾಡುಮೃಗಗಳ ಮೇಲೆ ಕನಿಕರವಿಲ್ಲದೆ ಅತ್ಯಾಚಾರವೆಸಗಿದ. ಅವನಿಗೆ ಬಟ್ಟೆಗಾಗಿ ಅವುಗಳ ಚರ್ಮ, ವಾಸಿಸುವುದಕ್ಕೆ ಅವುಗಳ ಗುಹೆಗಳು, ಆಹಾರಕ್ಕೆ ಅವುಗಳ ಮಾಂಸ ಯಾವುದೊಂದು ಅವಶ್ಯಕವಿರಲಿಲ್ಲ; ಆದರೂ ಕಾಡುಪ್ರಾಣಿಗಳನ್ನು ಕೊಲ್ಲಬೇಕೆಂಬ ಹವ್ಯಾಸಕ್ಕೆ ಮಾತ್ರ ಕೊಂದು ನಾಶಪಡಿಸಿದ.

ಈಗಿನ ಕಾಡುಗಳಲ್ಲಿ ಮೊದಲಿನಂತೆ ಪ್ರತಿಯೊಂದು ಗಿಡಮರವೂ ಸೌಂದರ್ಯ ದಿಂದೊಡಗೂಡಿ ಮೋಹಕವಾಗಿ ಕಂಗೊಳಿಸುವುದನ್ನು ನೋಡುವುದು ದುರ್ಲಭ. ಕಾಡುಪಕ್ಷಿ ಹಾಗೂ ಕಾಡುಮೃಗಗಳಾದ ನವಿಲು, ಕಾಡುಕೋಳಿ, ಜಿಂಕೆ, ಕಡವೆ, ಹುಲಿ, ಚಿರತೆ ಮೊದಲಾದವುಗಳು ಠೀವಿಯಿಂದ ಕಾಡುಗಳಲ್ಲಿ ಅಲೆದಾಡುವ ನೋಟ ವಿರಳ. ಅವುಗಳ ಸ್ವೇಚ್ಛಾಚಾರದ ಕೂಗುಗಳಿಂದ ಕೇಳಿಬರುತ್ತಿಲ್ಲ. ಗುಡ್ಡ ಹಾಗೂ ಕೊಳ್ಳಗಳು, ಕಾಡುಗಳಿಲ್ಲದೆ ನಶಿಸಿ, ಹಳ್ಳ, ನದಿ, ಮಡುವುಗಳು ಬರಿದಾಗಿ ಮೌನವನ್ನು ತಾಳಿವೆ. ನಿಜವಾದ ಬೇಟೆಯ ಸೂತ್ರವನ್ನು ತಿಳಿಯದೆ, ಹೇಡಿಯಂತೆ ಕೆಲವು ಶಿಕಾರಿಗಳು ಚರ್ಮದ ಆಶೆಗೆ ಹುಲಿ, ಚಿರತೆ ಮುಂತಾದ ಪ್ರಾಣಿಗಳ ಮೇಲೆ ಹಲ್ಲೆಮಾಡಿ ಅವುಗಳ ಸಂತತಿಯ ನಿರ್ಮೂಲನ ಮಾಡಿದ್ದಾರೆ. ಇನ್ನು ಕೆಲವೇ ವರ್ಷಗಳಲ್ಲಿ ಮೃಗಾಲಯ ಗಳಲ್ಲಿ ಮಾತ್ರ ವನ್ಯಮೃಗಗಳನ್ನು ನೋಡುವ ಪರಿಸ್ಥಿತಿ ಸನ್ನಿಹಿತವಾಗಿದೆ.

ಹುಲಿ ಸಾಮಾನ್ಯವಾಗಿ ಹೆಚ್ಚು ನಾಚಿಕೆ ಸ್ವಭಾವದ್ದಿದ್ದು, ಅತಿ ದಕ್ಷತೆಯಿಂದ ಮನುಷ್ಯನ ಕಣ್ಣುತಪ್ಪಿಸಿ ಓಡಾಡುತ್ತದೆ. ಆದ್ದರಿಂದ ಅದು ಮಾನವರಿಗೆ ಅತಿ ಕ್ವಚಿತ್ತಾಗಿ ಕಾಣಿಸಿಕೊಳ್ಳುತ್ತದೆ. ಮನುಷ್ಯನ ಕೈಯಲ್ಲಿ ಒಂದು ಕೊಡೆ ಅಥವಾ ನಡೆಯುವ ಕೋಲು ಇದ್ದರೆ, ಅವನು ಕಾಡಿನಲ್ಲಿ ಎಲ್ಲಿದ್ದರೂ ಸುರಕ್ಷಿತವಾಗಿರಬಹುದೆಂದು ನುರಿತ ಅರಣ್ಯಾಧಿಕಾರಿಗಳು ಹೇಳುವುದುಂಟು.

ಮೇಲೆ ಹೇಳಿದಂತೆ ಕಾಡಿನಲ್ಲಿ ನಡೆದುಹೋಗುವ ಮನುಷ್ಯ ಅತಿ ವಿರಳವಾಗಿ ಹುಲಿಯನ್ನು ನೋಡುತ್ತಾನೆ. ಏಕೆಂದರೆ ವಿಶದವಾಗಿ ಹುಲಿ ಮೊದಲೇ ಅವನನ್ನು ನೋಡುತ್ತದೆ ಮತ್ತು ಅವನಿಗೆ ಕಾಣಿಸಿಕೊಳ್ಳದಂತೆ ಅಡಗಿಕೊಳ್ಳುವುದರಿಂದ ಹಾಗೂ ತಪ್ಪಿಸಿಕೊಳ್ಳುವುದರಿಂದ ಮನುಷ್ಯನಿಂದ ಮುಖಾಮುಖಿ ಎದುರಿಸುವ ಸಾಧ್ಯತೆಯಿಂದ ತಪ್ಪಿಸಿಕೊಳ್ಳುತ್ತದೆ. ಸದ್ದಿಲ್ಲದೆ ಸಮೀಪಿಸಿ ಅದಕ್ಕೆ ಆಶ್ಚರ್ಯವನ್ನುಂಟುಮಾಡಿದಾಗ ಹುಲಿಯ ಸಾಮಾನ್ಯ ಪ್ರತಿಕ್ರಿಯೆ, ಪಲಾಯನ ಮಾಡುವುದು. ಬೇಳು ಇದ್ದ ಸ್ಥಳದಲ್ಲಿ ತಿನ್ನುತ್ತಿದ್ದ ಹುಲಿ ಮನುಷ್ಯ ಮೂವತ್ತರಿಂದ ನಾಲ್ವತ್ತು ಮೀಟರ್ ಅಂತರದಲ್ಲಿದ್ದಾಗಲೇ ಸಾಮಾನ್ಯವಾಗಿ ಸದ್ದಿಲ್ಲದೆ ಹಿಮ್ಮೆಟ್ಟುತ್ತದೆ. ಅಥವಾ ತಗ್ಗಿದ ಗರ್ಜನೆಯಿಂದ ಅಥವಾ ನರಳುವ ಕೂಗಿನಿಂದ ಶಬ್ದ ಮಾಡುತ್ತದೆ ಆದರೆ ಕೆಲವು ಸಮಯ ಅನುಮಾನದಿಂದ ಪ್ರತಿಭಟಿಸುವುದೂ ಕಂಡುಬರುತ್ತದೆ. ಗಾಯಗೊಂಡ ಅಥವಾ ನರಭಕ್ಷಕ ಹುಲಿಗಳನ್ನು ಹೊರತುಪಡಿಸಿದರೆ ಉಳಿದ ಹುಲಿಗಳು ಹೆಚ್ಚಾಗಿ ಎಲ್ಲ ರೀತಿಯಿಂದ ಒಳ್ಳೆಯ ಮನೋಭಾವದವುಗಳಾಗಿರುತ್ತವೆ. ಆಗಾಗ ಮರಿಗಳನ್ನು ಸಂರಕ್ಷಿಸುತ್ತಿರುವ ಹೆಣ್ಣುಹುಲಿ ಹಾಗೂ ಬೇಳಿನ ಮೇಲೆ ತಿನ್ನುತ್ತಿದ್ದ ಹುಲಿ ಅತಿ ಹತ್ತಿರ ಸಮೀಪಿಸಿದಾಗ ಆಕ್ಷೇಪ ವ್ಯಕ್ತಪಡಿಸುತ್ತವೆ. ಈ ರೀತಿಯ ಆಕ್ಷೇಪ ಹೆಚ್ಚಾಗಿ ಗುರುಕಾಯಿಸುವುದೇ ಆಗಿರುತ್ತದೆ; ಮತ್ತು ಅದು ಪರಿಣಾಮಕಾರಿಯಾಗದೇ ಹೋದಾಗ ಗರ್ಜಿಸುತ್ತ ಸ್ವಲ್ಪ ದಾಳಿಮಾಡಿ ಮೇಲೇರಿ ಬರುವುದುಂಟು. ಈ ಎಚ್ಚರಿಕೆಯ ಸೂಚನೆಗಳನ್ನು ಅಲ್ಲಗಳೆದು ಮುನ್ನುಗ್ಗಲು ಪ್ರಯತ್ನಿಸಿ ಯಾವುದೇ ರೀತಿಯ ಅಪಾಯ ಅಥವಾ ಗಂಡಾಂತರಕ್ಕೊಳಪಟ್ಟರೆ ಆ ಅಪರಾಧ ಆಕ್ರಮಣಕಾರನದೇ.

"ಪ್ರಾಣಿಗಳ ಮೇಲೆ ಬೇಟೆಯಾಡಿದಂತೆ ಹುಲಿ ಮನುಷ್ಯನ ಮೇಲೆ ಏಕೆ ಬೇಟೆಯಾಡುವುದಿಲ್ಲ?" ಎಲ್ಲರಲ್ಲಿ ಉದ್ಭವಿಸುವ ಒಂದು ಪ್ರಶ್ನೆ. ಅದಕ್ಕೆ ಉತ್ತರ ಅಷ್ಟು ಸುಲಭವಾಗಿರದಿದ್ದರೂ ಈ ಕೆಳಗಿನ ವಿವರಣೆಯಿಂದ ತಕ್ಕಮಟ್ಟಿಗೆ ಮನವರಿಕೆಯಾಗಬಹುದು. ಮನುಷ್ಯನನ್ನು ಪ್ರಥಮವಾಗಿ ಜಗತ್ತಿನ ಮಹಾಒಡೆಯ ಹಾಗೂ ಶ್ರೇಷ್ಠ ಮಾಂಸಾಹಾರಿ ಪ್ರಾಣಿಯೆಂದು ಹುಲಿ ಗುರುತಿಸುತ್ತದೆ. ಮನುಷ್ಯನು ಪ್ರಾಣಿಗಳಿಗಿಂತ ಭಿನ್ನನಾಗಿದ್ದಾನೆ. ಬಿಳಿ ಹಾಗೂ ರಂಗುರಂಗಿನ ಬಟ್ಟೆಗಳನ್ನು ತೊಡುತ್ತಾನೆ; ಅವನು ನೆಟ್ಟಗೆ ನಿಲ್ಲುತ್ತಾನೆ; ಕೈ, ತೋಳು ಹಾಗೂ ಕಾಲು ಬೀಸುತ್ತಾನೆ. ಮೇಲಾಗಿ ಪ್ರಾಣಿಗಳಿಗಿಂತ ಬೇರೆ ರೀತಿಯಲ್ಲಿ ವಿಲಕ್ಷಣ ಶಬ್ದಗಳನ್ನು ಮಾಡುತ್ತಾನೆ. ರಾತ್ರಿಯಲ್ಲಿ ಹುಲಿ ಬೇಟೆಯಾಡಲು ಪ್ರಾರಂಭಿಸಿದಾಗ ಮನುಷ್ಯನು ಮನೆಯಲ್ಲಿ ವಿಶ್ರಮಿಸುತ್ತಾನೆ. ಸುರುವಾತಿಗೂ ಸಹ ಕಾಡುಪ್ರಾಣಿಗಳು ಯಥೇಚ್ಛವಾಗಿದ್ದಾಗ ಮನುಷ್ಯರು ಬಹಳ

ವಿರಳವಾಗಿದ್ದರು. ಆದಿಮಾನವನಿಗೆ ಮೂಲಭೂತವಾಗಿ ಹುಲಿಯ ಬೇಟೆಯಾಡುವುದು ಆವಶ್ಯಕವಾಗಿರಲಿಲ್ಲ. ಅಂತೆಯೇ ಹುಲಿಗೂ ಮನುಷ್ಯನ ಮೇಲೆ ಬೇಟೆಯಾಡುವ ಆವಶ್ಯಕತೆ ಕಂಡುಬರದೆ ಅವನ ಬಗ್ಗೆ ತಾತ್ಸಾರ ನಡತೆ ಹೊಂದಲು ಹುಲಿ ನಿರ್ಧರಿಸಿರಬಹುದು.

ಬೆಕ್ಕಿನ ಜಾತಿಗೆ ಸೇರಿದ ದೊಡ್ಡ ಪ್ರಾಣಿಗಳೂ ಸೇರಿದಂತೆ ಎಲ್ಲ ವನ್ಯಮೃಗಗಳಿಗೆ ಮನುಷ್ಯನೆಂದರೆ ಸೇರಿಕೆಯಿಲ್ಲ. ಅವನ ಕಣ್ಣುತಪ್ಪಿಸಿ ಪರಾರಿಯಾಗಲು ಸಾಧ್ಯವಾದ ಪ್ರಯತ್ನಗಳನ್ನೆಲ್ಲ ಮಾಡುತ್ತವೆ. ಪ್ರಾಣಿಗಳ ಈ ವಿಚಿತ್ರ ಸ್ವಭಾವ ತಿಳಿಯುವುದು ಸ್ವಲ್ಪ ಕಷ್ಟದ ವಿಷಯವೆ. ಸಾಮಾನ್ಯವಾಗಿ ಮನುಷ್ಯನು ಹತ್ಯಾಕಾರಿ ಪ್ರಾಣಿ ಎಂಬುದು ಪ್ರಾಣಿಗಳಿಗೆ ಗೊತ್ತೇ ಇದೆ. ಆದರೆ ಇದು ಅಷ್ಟೊಂದು ಸಮಂಜಸವಾಗಿ ತೋರಲಾರದು. ಏಕೆಂದರೆ ಮನುಷ್ಯನು ತುಲನಾತ್ಮಕವಾಗಿ ಕ್ಷೀಣವಿದ್ದು ಅವನು ಎಲ್ಲ ಸಮಯದಲ್ಲಿ ಅಸ್ತ್ರಧಾರಿಯಲ್ಲ. ಅವನು ನಿಜವಾಗಿಯೂ ಕಾಡುಮೃಗಗಳಂತೆ ಚೂಪಾದ ಕೋಡು ಅಥವಾ ಹರಿತವಾದ ಕೋರೆಗಳಿಂದ ಸುಸಜ್ಜಿತವಾಗಿರುವುದಿಲ್ಲ. ದನಗಾಹಿಗಳು, ಹುಲ್ಲು ಕೊಯ್ಯುವ ಹಳ್ಳಿ ಹೆಂಗಸರು ಹಾಗೂ ಕಟ್ಟಿಗೆ ಕಡಿಯುವ ಗಂಡಸರು ಹೆಚ್ಚೆಂದರೆ ಕತ್ತಿ ಅಥವಾ ಕೊಡಲಿಗಳಿಗಿಂತ ಹೆಚ್ಚಿನ ಅಪಾಯಕಾರಿ ಅಸ್ತ್ರಗಳನ್ನು ಎಂದೂ ಕೊಂಡೊಯ್ಯುವುದಿಲ್ಲ. ಅಲ್ಲದೆ ಚಾಣಾಕ್ಷತೆ, ಶಕ್ತಿ ಮತ್ತು ಜಾಗರೂಕತೆ ಇವುಗಳೂ ಅವನಲ್ಲಿ ಇಲ್ಲದ್ದು ಎಂತಹ ಅಸ್ತ್ರದ ಸಹಾಯವಿದ್ದರೂ ಏನು ಉಪಯೋಗ? ನಿಜ. ಹಾಗೆಯೇ ಬಂದೂಕುಗಳು ಹಳ್ಳಿಯ ಪ್ರತಿಯೊಬ್ಬ ಜನರಲ್ಲಿಯೂ ಎಲ್ಲಿ ಇರುತ್ತವೆ?

ವನ್ಯಮೃಗಗಳು ಸಾಮಾನ್ಯವಾಗಿ ಮನುಷ್ಯನಿಂದ ಕಣ್ಣುತಪ್ಪಿಸಿಕೊಳ್ಳುತ್ತವೆಂಬುದಂತೂ ನಿಜ. ಇದಕ್ಕೆ ಕಾರಣವಿರಲೇಬೇಕು. ಮನುಷ್ಯನು ಅದರಲ್ಲೂ ನಾಗರಿಕತೆ ಹೊಂದಿದವನು, ಒಂದು ರೀತಿಯ ರಕ್ಷಣೋಪಾಯವಾಗಿರುವ ಮೈವಾಸನೆಯನ್ನು ಹೊಂದಿದ್ದಾನೆ. ಪಟ್ಟಣದ ನಾಗರಿಕ ಕಾಡಿನಲ್ಲಿ ವಾಸಿಸುವ ಗುಡ್ಡಗಾಡು ಮನುಷ್ಯನ ಹತ್ತಿರ ಹಾದರೆ ಸಾಕು ಅವನು ಮೂಗು ಮುರಿಯುತ್ತಾನೆ. ಅದರಂತೆ ವನ್ಯಮೃಗಗಳೂ ಸಹ ಜನರು ಕಣ್ಣಿಗೆ ಬಿದ್ದಾಗ ಅವು ಕಣ್ಣುತಪ್ಪಿಸಿಕೊಳ್ಳುತ್ತವೆ. ಏಕೆಂದರೆ ಜನರು ನಾರುತ್ತಾರೆ. ತೀಕ್ಷ್ಣವಾಸನೆ ಕಂಡುಹಿಡಿಯುವಂತಹ ಶಕ್ತಿಹೊಂದಿದ ಪ್ರಾಣಿಗಳಿಗೆ ಮನುಷ್ಯರೆಂದರೆ ಓಕರಿಕೆ ಬರುತ್ತದೆ.

ನರಭಕ್ಷತೆಗೆ ಕಾರಣಗಳು: ಕೆಲವು ಸಮಯ ವಯಸ್ಸಾದ ಅಥವಾ ರೋಗರುಜಿನಗಳಿಂದ ಬಳಲುವ ಹುಲಿ ತನ್ನ ಸಾಮಾನ್ಯ ಬಲಿಯನ್ನು ಕೊಲ್ಲಲು ಅಸಮರ್ಥವಾಗುತ್ತದೆ. ಅತ್ಯಂತ ಹತಾಶವಾದಾಗ, ಹಸಿವಿನ ಯಾತನೆ ತಾಳಲಾರದೆ ತನ್ನ ನೈಸರ್ಗಿಕ ಹೇವರಿಕೆಯನ್ನು ಜಯಿಸಿ ಮನುಷ್ಯನ ಮೇಲೆ ಆಕ್ರಮಣಮಾಡಿ ಕೊಂದು ಅವನ ಮಾಂಸದ ರುಚಿಯನ್ನು ಅನುಭವಿಸುತ್ತದೆ. ಒಮ್ಮೆ ಮನುಷ್ಯನ ಮಾಂಸದ ರುಚಿ ಗೊತ್ತಾದರೆ ಅದು ಈಗ ಹೊಸ, ಕ್ಷೀಣ ಮತ್ತು ಸುಲಭವಾಗಿ ಲಭಿಸುವ ಬಲಿ

ಎಂದು ಕಂಡುಕೊಳ್ಳುತ್ತದೆ. ಆಗ ಅದು ಪುನಃ ಕೊಲ್ಲುತ್ತದೆ. ಹಾಗೂ ಪುನಃ ಪುನಃ ಕೊಲ್ಲಲಾರಂಭಿಸುತ್ತದೆ. ಕೂಡಲೆ ನರಭಕ್ಷಕ ಹುಲಿ ಮನುಷ್ಯನೂ ಒಂದು ಪ್ರಾಣಿ ಜಾತಿಗೆ ಸೇರಿದವನೆಂದು ಪರಿಗಣಿಸಿ ಅಭ್ಯಾಸ ಮಾಡಿಕೊಳ್ಳುತ್ತದೆ. ಈ ರೀತಿಯ ಅಭ್ಯಾಸ ಮುಂದೆ ಸ್ಥಿರವಾಗಿ ಉಳಿಯುತ್ತದೆ. ಕಾಡುಗಳಲ್ಲಿಯೂ ನರಭಕ್ಷಕ ಹುಲಿಗಳ ಪೈಕಿ ಯಾವುದೂ ಪುನಃ ತನ್ನ ಸಾಮಾನ್ಯ ಜೀವನದ ರೀತಿಗಳಿಗೆ ಪರಿವರ್ತನೆ ಹೊಂದಿದ ದಾಖಲೆಯಿಲ್ಲ.

ಮನುಷ್ಯ ಹುಲಿಯನ್ನು ಕ್ರಮಬದ್ಧವಾಗಿ ಬೇಟೆಯಾಡಲು ಹಾಗೂ ಪೀಡಿಸಲು ಪ್ರಾರಂಭಿಸಿದಂದಿನಿಂದ ಅದು ಅವನನ್ನು ವೈರತ್ವದಿಂದ ಕಾಣತೊಡಗಿ ಅವನ ಮೇಲೆ ತಿರುಗಿಬಿದ್ದು ಆಹಾರಕ್ಕೆಂದು ಅವನನ್ನು ಬೇಟೆಯಾಡಲು ಪ್ರಾರಂಭಮಾಡಿತು. ಈ ಎಲ್ಲ ನಡವಳಿಕೆಗಳೂ ಭಯದ ಕಲ್ಪನೆಗಳನ್ನವಲಂಬಿಸಿವೆ. ಮೇಲಾಗಿ ಮನುಷ್ಯರಲ್ಲಿರ ತಕ್ಕಂತಹ ಆಯುಧಗಳು ಮತ್ತು ಅವನ ಶ್ರೇಷ್ಠ ಬುದ್ಧಿಮತ್ತೆ ಈ ಕೀಳು ಕೃತ್ಯಗಳನ್ನು ಮಾಡಹಚ್ಚಿವೆ.

ಮನುಷ್ಯನು ಹುಲಿಗೆ ಭಯಪಡಬೇಕಾಗಿಲ್ಲ. ಸಾಮಾನ್ಯ ಸಂದರ್ಭಗಳಲ್ಲಿ ಅದರ ವಲಯದಲ್ಲಿ ನಿರ್ಭಯವಾಗಿ ನಡೆದಾಡಬಹುದು. ಆಹಾರಕ್ಕೆಂದು ಹುಲಿಯ ಸಾಮಾನ್ಯ ಬೇಟೆಯ ರೀತಿ ಅಸ್ತವ್ಯಸ್ತವಾದರೆ ಮಾತ್ರ ಅದು ದನಗಳ್ಳ ಅಥವಾ ನರಹತ್ಯೆ ಅಥವಾ ನರಭಕ್ಷಕವಾಗಿ ಪರಿವರ್ತನೆ ಹೊಂದಿ ಅವನಿಗೆ ನಿಜವಾಗಿಯೂ ಗಂಡಾಂತರಕಾರಿಯಾಗುತ್ತದೆ. ಮನುಷ್ಯನ ದುರ್ನಡತೆ, ದುರಾಶೆ ಹಾಗೂ ನಿಷ್ಕಾಳಜಿ ಯಿಂದ ತನ್ನ ಸ್ವಾರ್ಥಕ್ಕಾಗಿ ಸ್ಥಳೀಯ ನೀತಿ ನಿಯಮಗಳನ್ನು ಉಲ್ಲಂಘಿಸಿ ಹುಲಿ ನರಭಕ್ಷಕನಾಗಿ ವರ್ತಿಸುವಂತೆ ಮಾಡಿ ತನ್ನ ತಲೆಯ ಮೇಲೆ ಅಪಾಯದ ಹೊರೆ ಹೊರುತ್ತಾನೆ. ಅವನು ಗುಂಡುಹಾರಿಸಿ, ಕೊಲ್ಲದೆ ಅದನ್ನು ಗಾಯಗೊಳಿಸಿ ನಿಶ್ಶಕ್ತ ವಾಗಿ ಮಾಡುತ್ತಾನೆ. ಹಲಸಂದರ್ಭಗಳಲ್ಲಿ ಗಾಯಗೊಂಡ ಹುಲಿಯನ್ನು ಹಿಂಬಾಲಿಸಿ ಕೊಂದು ಅದರ ಬಳಲುವಿಕೆಯನ್ನು ದೂರಮಾಡದೆ ಅದರ ಪಾಡಿಗೆ ಅದನ್ನು ಬಿಟ್ಟು ಬಿಡುವುದುಂಟು. ತನ್ನ ವಿರುದ್ಧ ಮಾಡಲ್ಪಟ್ಟ ಈ ಎಲ್ಲ ಅಪರಾಧಗಳಿಂದ ಆಗ ಅದು ನರಹತ್ಯೆ ಅಥವಾ ನರಭಕ್ಷಕನಾಗಿ ಪರಿವರ್ತನೆ ಹೊಂದುತ್ತದೆ.

ಉತ್ತರ ಪ್ರದೇಶದ ಕುಮಾಂಪೂ ಜಿಲ್ಲೆಯ ಅನೇಕ ನರಭಕ್ಷಕ ಹುಲಿಗಳನ್ನು ಕೊಂದ ಪ್ರಸಿದ್ಧ ಬೇಟೆಗಾರ ಜಿಮ್ ಕಾರ್ಬೆಟ್ ನರಭಕ್ಷಕ ಹುಲಿಗಳ ಬಗ್ಗೆ ಕೆಳಗಿನಂತೆ ಅಭಿಪ್ರಾಯಪಡುತ್ತಾನೆ:

"ಸಂದರ್ಭ ಸ್ಥಿತಿಗಳ ಒತ್ತಡದ ಮೂಲಕ ಹತೋಟಿ ಮೀರಿದಾಗ ತನ್ನ ನೈಸರ್ಗಿಕ ಆಹಾರವನ್ನು ತ್ಯಜಿಸಿ ಅನ್ಯ ಆಹಾರವನ್ನು ಸ್ವೀಕರಿಸಲು ಬಲವಂತ ಮಾಡಲ್ಪಟ್ಟ ಹುಲಿಯೇ 'ನರಭಕ್ಷಕ ಹುಲಿ'. ಸಂದರ್ಭ ಸ್ಥಿತಿಗಳ ಒತ್ತಡಗಳಲ್ಲಿ ಹತ್ತು ಸಂಗತಿಗಳಲ್ಲಿ ಒಂಭತ್ತು ಗಾಯಗಳಿಂದ ಆದರೆ ಹತ್ತನೆಯದು ಮುಂದಿ ವಯಸ್ಸಿನಿಂದ ಆಗುತ್ತದೆ.

ನಿಷ್ಕಾಳಜಿಯಿಂದ ಗುಂಡುಹಾರಿಸಿ ಗಾಯಗೊಳಿಸುವುದರಿಂದ ಅಥವಾ ಗಾಯಗೊಳಿಸಿದ ಹುಲಿಯನ್ನು ಅನುಸರಿಸಿ ಹೋಗಿ ಅದನ್ನು ಹುಡುಕಿ ಕೊಲ್ಲದೆ ಇರುವುದು. ಮುಳ್ಳು ಹಂದಿಯನ್ನು ಹುಲಿ ಕೊಲ್ಲುವಾಗ ತನ್ನ ಮನೋಭಾವವನ್ನು ಕಳೆದುಕೊಂಡ ಸಂದರ್ಭ ಗಳಲ್ಲಿ ಹುಲಿ ನರಭಕ್ಷಕವಾಗಿ ಪರಿವರ್ತಿಸಲ್ಪಡುತ್ತದೆ. ಹುಲಿಯ ನೈಸರ್ಗಿಕ ಆಹಾರದ ಬೇಟೆಪ್ರಾಣಿ ಮನುಷ್ಯ ಅಲ್ಲ. ಹುಲಿ ತನ್ನ ನೈಸರ್ಗಿಕ ಬೇಟೆಪ್ರಾಣಿಗಳಿಗೆ ಕಾಣಿಸಿ ಕೊಳ್ಳದಂತೆ ಅಡಗಿ, ಹೊಟ್ಟೆಯ ಮೇಲೆ ತೆವಳಿ ಪ್ರಾಣಿಗಳನ್ನು ಸಮೀಪಿಸಿಯಾಗಲಿ ಅಥವಾ ಕಾದು ಅಡಗಿ ಕುಳಿತಾಗಲಿ ಕೊಲ್ಲುತ್ತದೆ. ಏಕೆಂದರೆ ಆಕ್ರಮಣದ ಯಶಸ್ಸು ಅದರ ವೇಗದ ಮೇಲೆ ಹಾಗೂ ತಕ್ಕಮಟ್ಟಿಗೆ ಅದರ ಹಲ್ಲು ಹಾಗೂ ಉಗುರುಗಳ ಸ್ಥಿತಿ ಮೇಲೆ ಅವಲಂಬಿಸಿರುತ್ತದೆ. ಆದ್ದರಿಂದ ಹುಲಿ ಒಂದು ಅಥವಾ ಹೆಚ್ಚು ಗಾಯಗಳ ನೋವಿನಿಂದ ಬಳಲುತ್ತಿದ್ದರೆ ಅಥವಾ ಅದರ ಹಲ್ಲುಗಳು ಮುರಿದು ಅಥವಾ ಬಿದ್ದುಹೋಗಿದ್ದರೆ ಮತ್ತು ಅದರ ಉಗುರುಗಳು ಸವೆದಿದ್ದರೆ ಇದುವರೆಗೂ ರೂಢಿಯಂತೆ ಬೇಟೆಯಾಡಿ ಕೊಂದು ತಿನ್ನುತ್ತಿದ್ದ ಪ್ರಾಣಿಗಳನ್ನು ಹಿಡಿದು ಕೊಲ್ಲಲು ಅಸಮರ್ಥವಾದಾಗ ಅನಿವಾರ್ಯವಾಗಿ ಮನುಷ್ಯನನ್ನು ಕೊಲ್ಲುತ್ತದೆ. ಪ್ರಾಣಿಗಳ ಮಾಂಸ ದಿಂದ ಮನುಷ್ಯನ ಮಾಂಸಕ್ಕೆ ಹುಲಿಗಳು ಬದಲಾಯಿಸಬೇಕಾದರೆ ಅದು ಕೇವಲ ಆಕಸ್ಮಿಕವೇ ಸರಿ."

ಹುಲಿ ಮನುಷ್ಯರನ್ನು ತಿನ್ನಲು ಪ್ರಾರಂಭವಾಗುವ ದುರ್ಗತಿಗೆ ಮುಖ್ಯ ಕಾರಣ, — ನೈಸರ್ಗಿಕ ಗಾಯಗಳು, ಹೆಚ್ಚಾಗಿ ಏದ(ಮುಳ್ಳುಹಂದಿ)ದ ಮುಳ್ಳುಗಳಿಂದ ಸಂಭವಿ ಸಿದವುಗಳು. ಹೆಚ್ಚಿನ ಪ್ರಸಂಗಗಳಲ್ಲಿ ಪಂಜಗಳು, ಕಾಲಿನ ಕೆಳಭಾಗಗಳು, ಗಾಯ ಗೊಳಿಸಲ್ಪಟ್ಟು ಹುಲಿ ತನ್ನ ನೈಸರ್ಗಿಕ ಬೇಟೆ ಅಥವಾ ದನಕರುಗಳನ್ನು ಕೊಂದು ಉರುಳಿಸಲು ಅಶಕ್ತವಾಗುತ್ತದೆ. ಆಗಾಗ ಮುಳ್ಳುಗಳು ಮುಖ ಹಾಗೂ ವಸಡೆ ಗಳಲ್ಲಿಯೂ ನೆಡುವುದುಂಟು. ಮುಳ್ಳುಗಳು ಚೂಪಾಗಿದ್ದು ಒಮ್ಮೆ ಮಾಂಸದಲ್ಲಿ ನೆಟ್ಟವೆಂದರೆ ಅವುಗಳನ್ನು ಹೊರಗೆ ಕಿತ್ತು ತೆಗೆಯುವುದು ಅಸಾಧ್ಯ. ಹೊರಗೆ ತೆಗೆಯಬೇಕಾದರೆ ಮಾಂಸ ಕಿತ್ತು ಅಥವಾ ಆಪರೇಶನ್ ಮಾಡಿಯಾಗಲಿ ತೆಗೆಯ ಬೇಕಾಗುವುದು. ಹುಲಿ ಮುಳ್ಳುಗಳನ್ನು ಸಾಧ್ಯವಾದಷ್ಟು ತನ್ನ ಹಲ್ಲುಗಳಿಂದ ಕಡಿದು ಉಗುಳುತ್ತದೆ ಮತ್ತು ಕೆರೆತದಿಂದ ನಾಲಿಗೆಯಿಂದ ನೆಕ್ಕಲು ಪ್ರಾರಂಭಿಸುತ್ತದೆ. ಅದರಿಂದ ಅಪಕ್ವ ಗಾಯವಾಗಿ ಕೀವಿನಿಂದ ತುಂಬಿಕೊಳ್ಳುವುದು ಸ್ವಾಭಾವಿಕ. ಆಗ ಹೆಚ್ಚು ನೋವಿನಿಂದ ಅಸ್ವಸ್ಥತೆ ಉಂಟಾಗಿ ಅಶಕ್ತತೆಯನ್ನು ಹೆಚ್ಚಿಸುತ್ತದೆ.

ಹುಲಿಗೆ ಏದ ಅಥವಾ ಮುಳ್ಳುಹಂದಿಯೆಂದರೆ ಪ್ರಾಣ. ಆದ್ದರಿಂದಲೇ ಹುಲಿ ಕಂಡಲ್ಲಿ ಏದದಮೇಲೆ ಆಕ್ರಮಣಮಾಡಿ ಕೊಂದು ತಿನ್ನಲು ಪ್ರಯತ್ನಿಸುತ್ತದೆ. ಆದರೆ ಕೊಲ್ಲುವಾಗ ಹುಲಿ ಸ್ವಲ್ಪ ಮೂರ್ಖನಂತೆ ವರ್ತಿಸುತ್ತದೆ. ಚಿರತೆಯಂತೆ ಏದದ ತಲೆಯನ್ನು ಕಚ್ಚಿ ಕೊಲ್ಲದೆ ಹುಲಿ ಬೇರೆ ಚಿಕ್ಕಪ್ರಾಣಿಗಳನ್ನು ಕೊಲ್ಲುವಂತೆ ತನ್ನ ಪಂಜ ದಿಂದ ಅಪ್ಪಳಿಸಿಯಾಗಲಿ ಅಥವಾ ದೇಹವನ್ನು ಕಚ್ಚಿಯಾಗಲಿ ಕೊಲ್ಲುವ ಪ್ರಯತ್ನದಲ್ಲಿ

ಸ್ವಾಭಾವಿಕವಾಗಿ ಪ್ರಾಣಸಂಕಟದಲ್ಲಿದ್ದ ಆ ಪ್ರಾಣಿ ತನ್ನ ಮುಳ್ಳುಗಳನ್ನು ಬಾಣಗಳಂತೆ ಬೀಸಿ ಹೊಡೆಯುತ್ತದೆ.

ಮುಳ್ಳುಹಂದಿಗಳು ಕತ್ತಲಾಗುತ್ತಲೆ ಒಂದು ರೀತಿಯ ಝೇಂಕರಿಸುವ ಶಬ್ದದಿಂದ ಅಲೆದಾಡುತ್ತವೆ. ಅವು ರಟರಟ ಎಂಬ ಸಪ್ಪಳಮಾಡುತ್ತ ಆಟವಾಡುವುದನ್ನು ಕಲ್ಲುಬಂಡೆಗಳ ಬದಿಯಲ್ಲಿ ದೋರಿನ ಹೊರಗೆ ನೋಡಬಹುದು. ಹೆಚ್ಚಾಗಿ ಕೆದರಿದ ದೋರುಗಳ ಎದುರಿಗೆ ಎಲುಬಿನ ತುಂಡುಗಳು, ಜಿಂಕೆಗಳ ಕೋಡುಗಳು, ಹಾಗೂ ಕೊಳಗಗಳು ಬಿದ್ದದ್ದು ಕಂಡುಬರುತ್ತವೆ. ಮುಳ್ಳುಗಳನ್ನು ಬೆಳೆಸಲು ಏದದ ದೇಹಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಸುಣ್ಣದ ಲವಣದ ಅವಶ್ಯಕತೆ ಇರುವುದರಿಂದ ಜಿಂಕೆಗಳ ಕೋಡು, ಕೊಳಗ ಹಾಗೂ ಮೂಳೆಗಳನ್ನು ಅಗಿದು ತಿನ್ನುವುದು ಪ್ರಾಸಂಗಿಕ. ಮುಳ್ಳುಹಂದಿಗಳು ತರಕಾರಿ, ದವಸಧಾನ್ಯ, ಹಣ್ಣು, ಬೇರು ಮುಂತಾದುವುಗಳನ್ನು ಮುಖ್ಯ ಆಹಾರವಾಗಿ ಸೇವಿಸುತ್ತವೆ. ಇವು ರೈತನ ಬೆಳೆಗಳನ್ನೂ ಹಾಗೂ ಪ್ಲಾಂಟೇಶನ್‌ಗಳನ್ನೂ ಹೆಚ್ಚಾಗಿ ತಿಂದು ನಾಶಮಾಡುತ್ತವೆ. ಮುಳ್ಳುಹಂದಿಗಳು ಸ್ವಲ್ಪ ತೊಂದರೆಗೀಡಾದರೆ ಅಥವಾ ಅಪಾಯದ ಸೂಚನೆ ಕಂಡುಬಂದರೆ ಸಾಕು ತಮ್ಮ ಉದ್ದವಾದ ಮುಳ್ಳುಗಳನ್ನು ನೆಟ್ಟಗೆ ನಿಮಿರಿಸಿ, ಕೂಗುತ್ತ, ಶೀನುತ್ತ, ರಟರಟ ಸಪ್ಪಳ ಮಾಡುತ್ತವೆ. ಅವುಗಳ ವಿಶಿಷ್ಟರೀತಿಯ ಪ್ರಹಾರವೆಂದರೆ ಅಪಾಯ ಕಂಡುಬಂದ ದಿಕ್ಕಿನೆಡೆ ಹಿಂದಿರುಗಿ ಮುಳ್ಳುಗಳನ್ನು ಬಾಣದಂತೆ ಅತ್ಯಧಿಕ ವೇಗದಲ್ಲಿ ಚಿಮ್ಮುವುದು. ಸುಣ್ಣದ ಅಂಶದಿಂದ ಕೂಡಿದ ಮುಳ್ಳುಗಳು ವೈರಿಗೆ ನೆಟ್ಟಾಗ ಬಹಳ ಮಾರಕ ಅಸ್ತ್ರವಾಗಿ ಪರಿಣಮಿಸುತ್ತವೆ. ಅವುಗಳನ್ನು ಕೆಣಕದೇ ಇದ್ದರೆ ಅವೊಂದು ಅಪಾಯಕಾರಿಯಾಗಿರುವುದಿಲ್ಲ. ಅವು ನಿಶಾಚರವಿದ್ದು ಅವುಗಳ ಘ್ರಾಣೇಂದ್ರಿಯ ಹೆಚ್ಚು ತೀಕ್ಷ್ಣವಾಗಿರುತ್ತದೆ.

ಹುಲಿಗಳು ನರಭಕ್ಷಕವಾಗಿ ಮಾರ್ಪಡಲು ಬೇರೊಂದು ಸಾಧ್ಯತೆಯೆಂದರೆ, ಹೆಚ್ಚು ಹುಲಿಗಳಿದ್ದ ಪ್ರದೇಶದಲ್ಲಿ ನೈಸರ್ಗಿಕ ಆಹಾರ ಪಡೆಯಲು ಅವುಗಳಲ್ಲಿ ಸ್ಪರ್ಧೆ ಜಾಸ್ತಿ ಆಗುತ್ತದೆ. ಆಗ ಯೌವನಾವಸ್ಥೆಗೆ ಬಂದ ಹುಲಿಗಳು ಹೆಚ್ಚು ವಯಸ್ಸಾದ ಹುಲಿಗಳೊಂದಿಗೆ ಕಾದಾಡಿ ಅವನ್ನು ವಲಯದ ಹೊರಗೆ ಓಡಿಸುತ್ತವೆ. ಅವು ಕಾಡಿನಿಂದ ದೂರ ಹೊರಗೆ ಬಂದು ಜನನಿಬಿಡ ಪ್ರದೇಶಗಳ ಅಂಚಿನಲ್ಲಿ ವಾಸವಾಗಿರಲು ನಿರ್ಧರಿಸುವುದುಂಟು. ಅಲ್ಲಿ ತಮ್ಮ ನೈಸರ್ಗಿಕ ಆಹಾರ ಸಿಕ್ಕದೆ ಮತ್ತು ಕೆಲವು ಗುಡ್ಡಗಾಡು ಪ್ರದೇಶಗಳಲ್ಲಿ ದನಕರುಗಳು ಸಿಕ್ಕದೇ ಹೋದಾಗಲೂ ಅವು ಹಸಿವೆ ತಾಳಲಾರದೆ ಮನುಷ್ಯನ ಮೇಲೆ ದಾಳಿ ಮಾಡುತ್ತವೆ.

ಕೆಲವು ಗುಡ್ಡಗಾಡು ಜನರು ಹುಲಿಯನ್ನು ಹಿಡಿದು ಕೊಲ್ಲುವುದಕ್ಕೆ ಬಲೆ ಅಥವಾ ಉರುಲು ಉಪಯೋಗಿಸುತ್ತಾರೆ. ಹುಲಿಗಳು ಹೆಚ್ಚಾಗಿ ನಡೆದಾಡಿದ ಮಾರ್ಗದಲ್ಲಿ ಸ್ಪ್ರಿಂಗಿನ ಉರುಲು ಅವುಗಳಿಗೆ ಕಾಣದಂತೆ ಇಡುತ್ತಾರೆ. ಅವು ನಿಸ್ಸಂದೇಹವಾಗಿ ನಡೆದುಹೋಗುವಾಗ ಅಕಸ್ಮಾತ್ ಉರುಲು ಮೇಲೆ ಕಾಲಿಟ್ಟರೆ ತೀರಿತು, ಆ ಕ್ಷಣದಲ್ಲಿಯೇ ದುರ್ಭಾಗ್ಯ ಹುಲಿಯ ಕಾಲು ಕಚ್ಚಿ ಹಿಡಿಯಲ್ಪಡುತ್ತದೆ. ಹುಲಿ

ಬಲೆಯಲ್ಲಿ ಬಿದ್ದದ್ದು ಬೇಗ ಗೊತ್ತಾದರೆ ಗುಡ್ಡಗಾಡು ಜನರು ಬಂದು ವಿಷಭರಿತ ಬಾಣಗಳಿಂದ ಕೊಲ್ಲುವುದುಂಟು. ಅವರು ಬರುವುದು ತಡವಾದಾಗ ಉರುಲಿಗೆ ಸಿಕ್ಕಹುಲಿ ಸ್ವಾಭಾವಿಕವಾಗಿ ಹಿಡಿತದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತದೆ. ಹುಲಿ ಜಗ್ಗಿದಂತೆ ಉರುಲು ಹೆಚ್ಚೆಚ್ಚು ಬಿಗಿಯುತ್ತ ಹೋಗುತ್ತದೆ. ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಪಂಜವಾಗಲಿ ಅಥವಾ ಕಾಲ್ಬೆರಳಾಗಲಿ ಕತ್ತರಿಸಲ್ಪಡುವುದುಂಟು. ಇಂತಹ ಗಾಯಹೊಂದಿದ ಹುಲಿ ತನ್ನ ನೈಸರ್ಗಿಕ ಬೇಟೆ ಪ್ರಾಣಿಗಳನ್ನು ಹಾಗೂ ಸಾಕಿದ ಪ್ರಾಣಿಗಳನ್ನು ಹಿಡಿದು ಕೊಲ್ಲುವುದು ಸಾಧ್ಯವಾಗದಾಗ ನರಭಕ್ಷಕವಾಗಿ ಬದಲಾಯಿಸುತ್ತದೆ.

ಮೇಲಿನ ಕಾರಣವನ್ನು ಹೊರತುಪಡಿಸಿ ಈ ಕೆಳಗಿನ ಕಾರಣಗಳಿಂದಲೂ ಹುಲಿ ನರಭಕ್ಷಕನಾಗಿ ಪರಿವರ್ತಿಸಬಹುದು:

(ಅ) ಒಂದು ಪ್ರದೇಶದಲ್ಲಿ ಹುಲಿ ತನ್ನ ನೈಸರ್ಗಿಕ ಆಹಾರವಾದ ಜಿಂಕೆ, ಕಡವೆ, ಕಾಡುಹಂದಿ, ದನಕರುಗಳು ಮುಂತಾದುವುಗಳ ಕೊರತೆಯಾದಾಗ.

(ಬ) ಕೆಳಗಿನ ಕಾರಣಗಳಿಂದಾಗಿ ದೌರ್ಬಲ್ಯ ತೋರಿದಾಗ,

(i) ತಪ್ಪು ಗುರಿಯಿಟ್ಟು ಗುಂಡು ಹಾರಿಸುವುದರಿಂದ ಅಥವಾ ಕೆಳ ಮಟ್ಟದ ಬಂದೂಕಿನಿಂದ, ಕೀಳು ದರ್ಜೆಯ ಹಾಗೂ ಅಯೋಗ್ಯ ಮದ್ದುಗುಂಡುಗಳನ್ನು ಉಪಯೋಗಿಸಿದಾಗ

(ii) ಅಪರಿಚಿತ ಗುಡ್ಡಗಾಡಿನಲ್ಲಿ ಕಡಿದಾದ ಗುಡ್ಡಗಳ ಬದಿಯಲ್ಲಿ ಬೇಟೆ ಯಾಡುವಲ್ಲಿ ಅನಾಹುತವಾದಾಗ

(iii) ಮುಳ್ಳುನೆಟ್ಟು ಅಥವಾ ಬೇರೆ ಹುಲಿಗಳ ಸಂಗಡ ಅಥವಾ ಬೇರೆ ಪ್ರಾಣಿಗಳ ಸಂಗಡ ಕಾದಾಡಿ ಗಾಯಗೊಂಡಾಗ

(ಕ) ಅನಿರೀಕ್ಷಿತವಾಗಿ ಮನುಷ್ಯನನ್ನು ಕೊಂದು ಅವನ ರಕ್ತ ಹಾಗೂ ಮಾಂಸದ ರುಚಿ ಕಂಡು ಮಾರುಹೋದಾಗ.

(ಡ) ನದಿಯಲ್ಲಿ ಬಿಸಾಕಿದ ಹೆಣಗಳನ್ನು ಅಥವಾ ಹೂಳದೇ ಇದ್ದ ಮನುಷ್ಯನ ಶವವನ್ನು ಒಮ್ಮೆ ತಿಂದು ರುಚಿ ಕಂಡುಕೊಂಡಾಗ.

(ಇ) ವಯಸ್ಸಾದಂತೆ ಚಪಲತೆ ಕಡಮೆ ಆಗುವುದರಿಂದ ಅತಿ ವೇಗವಾಗಿ ಓಡುವ ಬೇಟೆ ಪ್ರಾಣಿಗಳನ್ನು ಸ್ವಾಧೀನ ಪಡೆಯಲು ಅಶಕ್ತವಾಗಿ ಅನಾನುಕೂಲತೆಗಳು ಜಾಸ್ತಿ ಆದಾಗ.

ಮೇಲಿನ ಎಲ್ಲ ಕಾರಣಗಳನ್ನು ಕೂಲಂಕಷವಾಗಿ ವಿಚಾರಿಸಿದಾಗ ಅವೆಲ್ಲವುಗಳ ತಾತ್ಪರ್ಯ ಹಾಗೂ ಸಾರಾಂಶ ಇಷ್ಟೆ—'ಹಸಿವು'.

ಇನ್ನೊಂದು ಮುಖ್ಯ ಸಾಧ್ಯತೆಯೆಂದರೆ ನರಭಕ್ಷಕ ಹೆಣ್ಣು ಹುಲಿ ತನ್ನ ಮರಿಗಳನ್ನು ಮನುಷ್ಯರ ಮಾಂಸದಿಂದ ಪೋಷಿಸಿ ಬೆಳಸಿದಾಗ ಅವುಗಳ ನೈಸರ್ಗಿಕ ಆಹಾರವೇ ಮನುಷ್ಯ ಪ್ರಾಣಿ. ಆದ್ದರಿಂದ ಅವು ಕೇವಲ ಗಂಡಸರು, ಹೆಂಗಸರು ಹಾಗೂ ಮಕ್ಕಳನ್ನು ಕೊಂದು ತಿನ್ನುವುದನ್ನು ನಾವು ಅಲ್ಲಗಳೆಯಲಿಕ್ಕಾಗದು. ಪುನಃ ಇದಕ್ಕೆ ಕಾರಣ 'ಹಸಿವು'. ತಾಯಿಯಿಂದ ಕಲಿತ ನರಭಕ್ಷಕ ಹುಲಿಮರಿಗಳು ಹೆಚ್ಚು ಅಪಾಯ ಕಾರಿ; ಏಕೆಂದರೆ ಅವು ಎಂದಿಗೂ ಮನುಷ್ಯನ ಬಗ್ಗೆ ಹೇವರಿಕೆಯನ್ನು ಹೊಂದಿರುವುದಿಲ್ಲ. ಆದರೆ ಎಲ್ಲ ಹತ್ಯಾಕಾರಿ ಪ್ರಾಣಿಗಳಿಗಿಂತ ಭೂಮಿಯ ಮೇಲೆ ಅತ್ಯಂತ ಅಪಾಯಕಾರೀ ಪ್ರಾಣಿಗಳೆಂದರೆ ಮನುಷ್ಯನಿಂದ ಸೆರೆವಾಸದಲ್ಲಿಡಲ್ಪಟ್ಟು ನಂತರ ತಮ್ಮ ಕಾಡಿನ ಸ್ಥಿತಿಗೆ ಬಿಟ್ಟುಕೊಟ್ಟ ಹುಲಿಗಳು. ಇವು ಮನುಷ್ಯನ ಸ್ವಭಾವ ತಿಳಿದಿರುತ್ತವೆ; ಅವರ ಕಪಟದ ಮುನ್ನರಿವು ಇದ್ದೇ ಇರುತ್ತದೆ. ಹೀಗಾಗಿ ಮನುಷ್ಯರೆಂದರೆ ಅವುಗಳಿಗೆ ತಾತ್ಸಾರ; ದ್ವೇಷ, ರೋಷ.

ಕೆಲವು ಸಮಯ ಕೇವಲ ಹಸಿವಿನ ಕಾರಣದಿಂದ ನರಭಕ್ಷಕವಾಗಿ ಪರಿವರ್ತನೆ ಯಾಗದಿದ್ದರೂ ತಮ್ಮ ಆಯ್ಕೆಯಿಂದ ನರಹತ್ಯ ಹುಲಿಗಳಾದ ಅನೇಕ ಉದಾಹರಣೆ ಗಳಿವೆ. ಹುಲಿ ಮನುಷ್ಯನ ಗುಂಡೇಟಿನಿಂದ ಗಾಯಗೊಳಿಸಲ್ಪಟ್ಟಾಗ ಅದಕ್ಕೆ ಅವನ ಮೇಲೆ ಶಾಶ್ವತ ತಿರಸ್ಕಾರವುಂಟಾಗುತ್ತದೆ. ಮನುಷ್ಯನ ಮೇಲಿನ ಸೇಡನ್ನು ತೀರಿಸಿ ಕೊಳ್ಳಲು ಗಾಯಗೊಂಡ ಹುಲಿ ನರಹತ್ಯ ಹುಲಿಯಾಗಿ ಮಾರ್ಪಡುತ್ತದೆ. ಮನುಷ್ಯನ ರುಚಿ ಕಂಡ ಹುಲಿ ನಂತರ ನರಭಕ್ಷಕವಾಗುತ್ತದೆ.

ಅಪರಾಧಿ ಹುಲಿ-ನರಭಕ್ಷಕ: ನರಭಕ್ಷಕ ಹಾಗೂ ದನಕೊಲ್ಲುವ ಹುಲಿಗಳಿಗೆ ಭವಿಷ್ಯ ಶೂನ್ಯವೆಂದು ಹೇಳಬಹುದು. ಏಕೆಂದರೆ ಚಿರತೆಗಳಂತೆ ಬಹುದಿನಗಳವರೆಗೆ ಮನುಷ್ಯರನ್ನು ತಿನ್ನುವುದನ್ನು ನಿಲ್ಲಿಸದೆ ನರಭಕ್ಷಕ ಹುಲಿಗಳು ಶಾಶ್ವತವಾಗಿ ಮನುಷ್ಯ ರನ್ನು ತಿನ್ನುವ ಅಭ್ಯಾಸ ಮಾಡಿಕೊಳ್ಳುತ್ತವೆ. ಆದ್ದರಿಂದ ಅವುಗಳ ಹಣೇಬರಹದ ಗಂಟು ಕಟ್ಟಿದಂತೆಯೇ ಸರಿ. ಪ್ರತಿಯೊಬ್ಬನೂ ಅದರ ಕಡೆ 'ಅಪರಾಧಿ' ಎಂದು ಬೆರಳುಮಾಡಿ ತೋರಿಸುತ್ತಾನೆ ಮತ್ತು ಇಂದಿಲ್ಲ ನಾಳೆಯಾದರೂ ಅವು ಗುಂಡಿಗೆ ಆಹುತಿಯಾಗಲೇ ಬೇಕು. ಇಂತಹ ಸಂದರ್ಭಗಳಲ್ಲಿ ಮನುಷ್ಯನ ಹಾಗೂ ಹುಲಿಗಳ ಹಿತಾಹಿತಗಳ ಸಂಘರ್ಷಣೆ ಪ್ರಾರಂಭವಾಯಿತೆಂದರೆ ತೀರಿತು ಹುಲಿಯ ಭಾವೀ ಜೀವನಕ್ಕೆ ಬೆದರಿಕೆ ಉಂಟಾದಂತೆಯೇ ಸರಿ.

ಇಂತಹ ನರಭಕ್ಷಕ ಹುಲಿಯ ಉಪಟಳವನ್ನು ಅಡಗಿಸಲು ಅನೇಕಸಾರೆ ಸಂಬಂಧ ಪಟ್ಟ ಸರಕಾರಗಳು ಬಹುಮಾನಗಳನ್ನು ಎದುರಿಟ್ಟು, ಕೆಲವು ವೇಳೆ ಸೈನ್ಯದ ಚಿಕ್ಕಕಂಪನಿ ಅಥವಾ ಪೋಲಿಸ್ ಪಾರ್ಟಿಗಳನ್ನು ಕಳಿಸಿದ್ದುಂಟು.

ನರಭಕ್ಷಕ ಹುಲಿಯ ಸ್ವಭಾವಗಳು: ನರಭಕ್ಷಕ ಹುಲಿಗಳು ಸಾಮಾನ್ಯವಾಗಿ ತಮ್ಮ ಮಾನವ ಬಲಿಗಳನ್ನು ಜನರ ಹಿಂದಿನಿಂದ ಬಂದು ಆಕ್ರಮಣ ಮಾಡುತ್ತವೆ.

ಏಕೆಂದರೆ ಅವು ಮನುಷ್ಯನ ಕಣ್ಣುಗಳನ್ನು ನೋಡುವಲ್ಲಿ ಭಯಪಡುತ್ತವೆ; ಮತ್ತು ಶವವನ್ನು ತಿನ್ನುವಾಗ ಕಣ್ಣುಗಳನ್ನು ಕೆಳಗೆಮಾಡಿ ಮಲಗಿಸಿ ತಿನ್ನುವುದುಂಟು. ಮನುಷ್ಯನ ಮುಖ ದಿಟ್ಟಿಸಿನೋಡಲು ಅದಕ್ಕೆ ಹೇಸಿಕೆ ಆಗುತ್ತಿರಬೇಕು. ಸರ್ಕಸ್ಸಿನಲ್ಲಿ ತರಬೇತು ಕೊಡುವವನ ಜಾಣ್ಮೆಯ ಅಭಿಪ್ರಾಯದಂತೆ ಅವನು ಹುಲಿಗೆ ಕಲಿಸುವಾಗ ಅದರ ಕಣ್ಣುಗಳಿಂದ ತನ್ನ ದೃಷ್ಟಿಯನ್ನು ಹೊರಳಿಸುವುದಿಲ್ಲವಂತೆ.

ಸಾಮಾನ್ಯವಾಗಿ ನರಭಕ್ಷಕ ಹುಲಿ ಮನುಷ್ಯರು ಗುಂಪಿನಲ್ಲಿ ಇದ್ದಾಗ ಹಲ್ಲೆಮಾಡಿ ಕೊಲ್ಲದೆ ಅಸ್ತ್ರಹೀನವಾಗಿ ಒಬ್ಬಂಟಿಗನಾಗಿದ್ದಾಗ ಗಂಟೆಗಟ್ಟಲೆ ಕಾದು ಸುತ್ತುಮುತ್ತಲೂ ಸಮೀಪದಲ್ಲಿ ಯಾರೂ ಇಲ್ಲದ್ದನ್ನು ನೋಡಿಕೊಂಡು ಆಕ್ರಮಣಮಾಡಿ ಅವನನ್ನು ಕೊಲ್ಲುವುದುಂಟು. ನರಭಕ್ಷಕ ಹುಲಿಗಳು ತನ್ನ ಬಲಿಯನ್ನು ಅತಿ ಸಮೀಪದಿಂದ ಆಕ್ರಮಣ ಮಾಡಿದರೆ ಗಾಯಗೊಂಡ ಹುಲಿಗಳು ಬಹು ದೂರದಿಂದಲೆ ಆಕ್ರಮಣ ಮಾಡುತ್ತವೆ. ಕೆಲವು ಬಾರಿ ಮನುಷ್ಯ ಭೂಮಿಗೆ ಅವಿತುಕೊಂಡು ಹುಲ್ಲುಕೊಯ್ಯುವಾಗ ಪ್ರಾಣಿಯೆಂದು ತಪ್ಪುಭಾವನೆಯಿಂದ ಹುಲಿ ತನ್ನ ಪಂಜದಿಂದ ಅಪ್ಪಳಿಸಿ ಮನುಷ್ಯನ ರಕ್ತ ಹಾಗೂ ಮಾಂಸದ ಕಣಗಳು ಪಂಜಗಳಲ್ಲಿ ಸೇರಿಕೊಳ್ಳುವುದು ಸ್ವಾಭಾವಿಕ.

ಪಂಜಗಳನ್ನು ನೆಕ್ಕಿ ಸ್ವಚ್ಛಮಾಡಿಕೊಳ್ಳುವಾಗ ಮನುಷ್ಯನ ರಕ್ತ ಹಾಗೂ ಮಾಂಸದ ರುಚಿಯಿಂದ ಹುಲಿ ಮೋಹಗೊಳ್ಳಬಹುದು. ಒಮ್ಮೆ ಮನುಷ್ಯನ ಮಾಂಸ ಹಾಗೂ ರಕ್ತದ ರುಚಿಗೆ ಮಾರುಹೋದ ಹುಲಿ ಬೇರೆ ಪ್ರಾಣಿಗಳನ್ನು ಕೊಂದು ತಿನ್ನುವ ಗೋಜಿಗೆ ಹೋಗಲಿಕ್ಕಿಲ್ಲ. ಮೇಲಾಗಿ ಮನುಷ್ಯನನ್ನು ಕೊಲ್ಲುವುದು ಸುಲಭ. ಅಂದಿನಿಂದ ಆ ಹುಲಿ ನರಭಕ್ಷಕ ಹುಲಿಯೆಂದು ಮುದ್ರೆ ಒತ್ತಿಸಿಕೊಳ್ಳುತ್ತದೆ; ಮನುಷ್ಯನ ಮೇಲಿನ ಸೇಡು ತೀರಿಸಿಕೊಳ್ಳಲು ಪಣತೊಟ್ಟಂತೆ ವ್ಯವಹರಿಸುತ್ತದೆ.

ದೈನಂದಿನ ಕಾರ್ಯಕ್ರಮ: ನರಭಕ್ಷಕ ಹುಲಿಯ ದೈನಂದಿನ ಕಾರ್ಯಕ್ರಮದಲ್ಲಿ ಸಾಮಾನ್ಯ ಹುಲಿಗಳಿಗಿಂತ ಹೆಚ್ಚಾದ ಬದಲಾವಣೆ ಆದದ್ದು ಕಂಡುಬರುತ್ತದೆ. ಸಾಯಂಕಾಲದಿಂದ ಬೆಳಗಿನವರೆಗೆ ಕಾಡಿನಲ್ಲಿ ಅಲೆದಾಡಿ ಬೇಟೆಯಾಡುವ ಬದಲು ನರಭಕ್ಷಕ ಹುಲಿಯಾಗಿ ಪರಿವರ್ತನೆ ಹೊಂದಿದನಂತರ ಜನವಸತಿಗಳ ಸುತ್ತಮುತ್ತಲೂ ಹಗಲಿನಲ್ಲಿ ಮನುಷ್ಯರ ಚಲನವಲನಗಳಿಗೆ ಅನುಸರಿಸಿ ಅದರಲ್ಲಿ ಬದಲಾವಣೆಯನ್ನು ಕಾಣಬಹುದು. ಹುಲಿ ಒಮ್ಮೆ ನರಭಕ್ಷಕನಾಗಿ ಮಾರ್ಪಾಟಾದರೆ ಇದುವರೆಗೆ ಸಾರ್ವತ್ರಿಕ ಶತ್ರು ಎನಿಸಿಕೊಂಡ ಮನುಷ್ಯನಿಗೆ ಅದು ಕಿಂಚಿತ್ತೂ ಹೆದರುವುದಿಲ್ಲ. ಆಗ ಹತ್ತಿರವಿರುವ ಯಾವ ಮನುಷ್ಯನೂ ಸುರಕ್ಷಿತವಾಗಿರಲಾರ. ಸದ್ದಿಲ್ಲದೆ ಅವನನ್ನು ಹಿಂಬಾಲಿಸಿ ಸಮಯ ಸಾಧಿಸಿ ಕೊಂದು ತಿನ್ನುತ್ತದೆ.

ನರಭಕ್ಷಕ ಹುಲಿ ಮನುಷ್ಯನ ತಲೆ ಕೈಗಳನ್ನು ಹಾಗೂ ಕಾಲುಗಳನ್ನು ತಿನ್ನುವುದಿಲ್ಲವೆಂಬ ಪ್ರಬಲ ನಂಬಿಕೆ ಜನರಲ್ಲಿ ಮೂಡಿದ್ದು ಕಂಡುಬರುತ್ತದೆ. ಇದು ತಪ್ಪು.

ನರಭಕ್ಷಕ ಹುಲಿಯನ್ನು ಯಾವುದೇ ರೀತಿಯಲ್ಲಿ ತೊಂದರೆಗೀಡುಮಾಡದಿದ್ದಲ್ಲಿ ಅದು ರಕ್ತದಿಂದ ಸೋಕಿದ ಬಟ್ಟೆಕೂಡ ಬಿಡದೆ ಎಲ್ಲವನ್ನೂ ತಿಂದು ಮುಗಿಸುತ್ತದೆ. ಸಾಮಾನ್ಯವಾಗಿ ನರಭಕ್ಷಕ ಹುಲಿಗಳಿಂದ ಆಕ್ರಮಣಕ್ಕೊಳಪಟ್ಟ ಜನರಲ್ಲಿ ಬಹುತೇಕವಾಗಿ ಶೇಕಡಾ ಒಬ್ಬ ಮಾತ್ರ ಮರಣದಿಂದ ತಪ್ಪಿಸಿಕೊಳ್ಳಬಹುದು.

ಸಾಮಾನ್ಯ ಹುಲಿ ಬೆಂಕಿ ಅಥವಾ ದೀಪದ ಬೆಳಕು ಅಂದರೆ ಸ್ವಲ್ಪ ಅಂಜುತ್ತದೆ. ಆದರೆ ನರಭಕ್ಷಕ ಹುಲಿಗಳು ಬೆಂಕಿ ಅಥವಾ ದೀಪದ ಬೆಳಕಿಗೆ ಅಂಜದೆ ಅಳುಕದೆ ಅಲ್ಲಿರಬಹುದಾದಂತಹ ಮನುಷ್ಯರನ್ನು ಕೊಂದುತಿನ್ನುವ ಹಂಬಲಕ್ಕೆ ಆಕರ್ಷಿಸಲ್ಪಡುತ್ತವೆ. ಗುಡಿಸಲು ಹೊರಗೆ ಬೆಂಕಿ ಅಥವಾ ದೀಪ ಹಚ್ಚಿ ಇಡುವ ಉದ್ದೇಶ ಹುಲಿಯ ಅಪಾಯದಿಂದ ತಪ್ಪಿಸಿಕೊಳ್ಳಲು ಆಗಿರದೆ ಸುತ್ತಮುತ್ತಲೂ ಯಾವುದೇ ಪ್ರಾಣಿಯ ಅಲೆದಾಟ ಕಾಣಲೆಂದು.

ನರಭಕ್ಷಕ ಹುಲಿ ಅತಿ ಜಾಗರೂಕತೆಯಿಂದಲೂ, ಚಾತುರ್ಯದಿಂದಲೂ ಕಾಡಿನಲ್ಲಿ ಹಾಗೂ ಅದರ ಅಂಚಿನಲ್ಲಿದ್ದ ಹೊಲಗದ್ದೆಗಳಲ್ಲಿ ಅಲೆದಾಡುವುದುಂಟು. ನಿಯಮದಂತೆ ಅದು ನರಬಲಿಗಳನ್ನು ಹುಡುಕುತ್ತ ಅತಿಯಾಗಿ ನಡೆದಾಡುತ್ತದೆ. ಅದು ತನ್ನ ಬೇಟೆಗಳನ್ನು ಎಷ್ಟು ದಿನಗಳ ಅಂತರದಲ್ಲಿ ಕೊಲ್ಲುತ್ತದೆ ಎಂಬುದು ಆ ಸ್ಥಳದಲ್ಲಿ ಅದರ ನೈಸರ್ಗಿಕ ಆಹಾರ ಪೂರೈಕೆ, ನರಭಕ್ಷಕನಾಗಲು ಕಾರಣವಾದ ದೌರ್ಬಲ್ಯದ ಸ್ವರೂಪ ಹಾಗೂ ಅದು ಗಂಡೊ ಅಥವಾ ಮರಿಗಳಿಂದ ಕೂಡಿದ ಹೆಣ್ಣೊ ಎಂಬ ಕಾರಣಗಳ ಮೇಲೆ ಅವಲಂಬಿಸಿರುತ್ತದೆ.

ನರಭಕ್ಷಕ ಹುಲಿ ವಯಸ್ಸಾದುದು, ಚರ್ಮರೋಗದಿಂದ ಬಳಲುವಂತಹದು ಎಂಬುದು ಒಂದು ಖ್ಯಾತ ತರ್ಕ. ನರಭಕ್ಷಕ ಹುಲಿಯಲ್ಲಿ ಚರ್ಮರೋಗ ಕಂಡು ಬರುವುದು ಅದು ತಿನ್ನುವ ಮನುಷ್ಯರ ಮಾಂಸದಲ್ಲಿದ್ದ ಜಾಸ್ತಿ ಉಪ್ಪಿನ ಅಂಶದಿಂದ, ಎಂದು ಹೇಳಬಹುದು.

ಬೇಟೆಯಾಡುವ ವಿಧಾನ: ನರಭಕ್ಷಕನಾಗಿ ಪರಿವರ್ತನೆ ಹೊಂದಿದ ಹುಲಿ ನರಬಲಿಯ ಬೇಟೆಯಾಡುವಾಗ ದನಕರುಗಳನ್ನೂ ಹಾಗೂ ಇತರ ಕಾಡುಪ್ರಾಣಿಗಳನ್ನೂ ಬೇಟೆಯಾಡುವ ವಿಧಾನವನ್ನೇ ಅನುಸರಿಸುತ್ತದೆ. ಗಾಳಿ ಬೀಸುವ ವಿರುದ್ಧ ದಿಕ್ಕಿನಿಂದ ಅಪೇಕ್ಷಿಸಿದ ಬಲಿಯನ್ನು ಅದು ಸಮೀಪಿಸುವುದುಂಟು. ಕೆಲವು ಸಂದರ್ಭಗಳಲ್ಲಿ ಗಾಳಿಬೀಸುವ ಕೆಳಗಡೆಯ ದಿಕ್ಕಿನಲ್ಲಿ ಅಡಗಿ ಕಾದುಕುಳಿತಿರುತ್ತದೆ. ಏಕೆಂದರೆ ಮನುಷ್ಯರನ್ನೂ ಕಾಡುಪ್ರಾಣಿಗಳಂತೆಯೇ ಭಾವಿಸಿ ವರ್ತಿಸುತ್ತದೆ; ಆದರೆ ಅವರಿಗೆ ಘ್ರಾಣೇಂದ್ರಿಯ ಅತಿ ಬಡವಾಗಿದೆ ಎಂಬುದು ಪಾಪ, ಆ ನರಭಕ್ಷಕ ಹುಲಿಗೆ ಹೇಗೆ ತಾನೆ ಗೊತ್ತು? ನರಭಕ್ಷಕ ಹುಲಿ ಶಿಕಾರಿಯ ಮೇಲೆ ಆಕ್ರಮಣ ಮಾಡಲು ಅಥವಾ ಅವನಿಗೆಂದು ಅಡಗಿ ಕಾದು ಕುಳಿತಿದ್ದರೆ, ಶಿಕಾರಿ ನರಭಕ್ಷಕ ಹುಲಿಯನ್ನು ಹುಡುಕಿ ಕಂಡುಹಿಡಿಯುವ ಸಾಧ್ಯತೆಗೆ ಪ್ರಯತ್ನಿಸುತ್ತಿರುವ ವಸ್ತುಸ್ಥಿತಿಯ ತಾತ್ಪರ್ಯವನು ಸ್ಪಷ್ಟವಾಗಿ ಊಹಿಸ

ಬಹುದು. ಒಂದು ವೇಳೆ ಗಾಳಿ ಶಿಕಾರಿಯ ಪರವಾಗಿ ಕೆಲಸ ಮಾಡಿದರೂ, ಹುಲಿಯ ಎತ್ತರ, ಅದರ ವರ್ಣಗಾರಿಕೆ ಹಾಗೂ ಸದ್ದಿಲ್ಲದೆ ನಡೆಯುವ ಯೋಗ್ಯತೆಗಳಿಂದ ಇಬ್ಬರ ನಡುವಿನ ಹೋರಾಟ ಅಸಮವಾದದ್ದೆಂದು ಹೇಳಬಹುದು. ಎಲ್ಲ ಪ್ರಸಂಗಗಳಲ್ಲಿ ತನ್ನ ಬೇಟೆಯನ್ನು ಅಡಗಿ ಅಥವಾ ಕದ್ದು ಆಕ್ರಮಣಮಾಡಿ ಕೊಲ್ಲುವಾಗ ಹುಲಿ ಹಿಂದಿನಿಂದ ಸಮೀಪಿಸುತ್ತದೆ. ಹೀಗಿರುವಾಗ ದಟ್ಟವಾದ ಜಂಗಲಿನಲ್ಲಿ ಹಾಗೂ ನಿರ್ಜನ ಮಾರ್ಗಗಳಲ್ಲಿ ನರಭಕ್ಷಕ ಹುಲಿ ಹೊಂಚುಹಾಕಿ ಅಲೆದಾಡುತ್ತಿದೆಯೆಂಬ ವ್ಯಥ ನಂಬಿಕೆ ಇದ್ದಾಗ ಗಾಳಿ ಬೀಸುವ ದಿಕ್ಕಿನ ಸರಿಯಾದ ಉಪಯೋಗ ಮಾಡಿಕೊಳ್ಳದೆ, ಬೇಟೆಯ ಅನೇಕ ನಿಬಂಧನೆಗಳನ್ನು ಪಾಲಿಸದೆ, ತನ್ನ ಇಂದ್ರಿಯಗಳನ್ನು ಅವಶ್ಯಕವಿದ್ದ ಮಟ್ಟಕ್ಕೆ ಮೇಳಗೂಡಿಸದೆ, ಶಿಕಾರಿ ದಟ್ಟಕಾಡಿನಲ್ಲಿ ಅಲೆದಾಡುವುದೆಂದರೆ ಆತ್ಮಹತ್ಯ ಮಾಡಿಕೊಂಡಂತೆಯೇ ಸರಿ.

ವಾರ್ತಾಪ್ರಸಾರ: ನರಭಕ್ಷಕ ಹುಲಿಯು ನಡೆದಾಡಲು ಉಪಯೋಗಿಸುವ ಮಾರ್ಗದ ಬದಿಯಲ್ಲಿ ಕಾಲಿನಿಂದ ಪರಚಿದ ಗುರುತುಗಳನ್ನು ಮೂಡಿಸಿ ಹೋಗುವ ವಾಡಿಕೆ. ಹೀಗೆ ಪರಚಿದ ಗುರುತುಗಳು ಶಿಕಾರಿಗೆ ಬಹಳ ಕುತೂಹಲವನ್ನು ಕೆರಳಿಸುತ್ತವೆ. ಏಕೆಂದರೆ ಅವು ಅವನಿಗೆ ಅತಿ ಉಪಯುಕ್ತ ಹಾಗೂ ಸ್ವಾರಸ್ಯಮಯವಾದ ಸಾಕ್ಷ್ಯಗಳನ್ನು ಒದಗಿಸುತ್ತವೆ. ಪರಚಿ ಗುರುತು ಮಾಡಿದ ಹುಲಿ ಗಂಡೋ ಅಥವಾ ಹೆಣ್ಣೋ? ಯಾವ ದಿಕ್ಕಿನಲ್ಲಿ ಅದು ನಡೆದುಹೋಗಿದೆ? ಅದು ನಡೆದು ಹೋದನಂತರ ಎಷ್ಟು ವೇಳೆ ಸಂದಿದೆ? ಅದರ ನಿವಾಸಸ್ಥಳದ ದಿಕ್ಕು ಹಾಗೂ ಅಜಮಾಸು ಅಂತರ? ಅದು ಕೊಂದ ಬೇಟೆಯ ಸ್ವರೂಪ ಲಕ್ಷಣ? ಇತ್ತೀಚೆಗೆ ಆ ಪ್ರಾಣಿ ಮನುಷ್ಯನ ಮಾಂಸ ತಿಂದಿದೆಯೋ ಹೇಗೆ? ಇತ್ಯಾದಿ. ಅಲ್ಲದೆ ಹುಲಿ ನಡೆದುಹೋದ ಮಾರ್ಗಗಳಲ್ಲಿ ತನ್ನ ಹೆಜ್ಜೆಗಳ ಗುರುತುಗಳನ್ನು ಮೂಡಿಸಿರುತ್ತದೆ. ಈ ಹೆಜ್ಜೆಯ ಗುರುತುಗಳು ಶಿಕಾರಿಗೆ ಸಾಕಷ್ಟು ಉಪಯುಕ್ತ ವಾರ್ತಾಪ್ರಸಾರವನ್ನೊದಗಿಸುತ್ತವೆ. ಉದಾಹರಣಾರ್ಥವಾಗಿ ಯಾವ ದಿಕ್ಕಿನಲ್ಲಿ, ಯಾವ ವೇಗದಲ್ಲಿ ಆ ಪ್ರಾಣಿ ನಡೆದು ಹೋಗಿದೆ? ಅದರ ಲಿಂಗ ಹಾಗೂ ವಯಸ್ಸು? ಎಲ್ಲ ಕಾಲುಗಳೂ ಒಳ್ಳೆಯ ಸ್ಥಿತಿಯಲ್ಲಿವೆಯೊ? ಒಂದುವೇಳೆ ಸರಿಯಾಗಿ ಇಲ್ಲದಿದ್ದರೆ ಯಾವ ವಿಶಿಷ್ಟ ಕಾಲು ಲೋಪವುಳ್ಳದ್ದಿರುತ್ತದೆ? ಇತ್ಯಾದಿ.

ನರಭಕ್ಷಕ ಹುಲಿಯನ್ನು ಬೇಟೆಯಾಡುವಾಗ ಶಿಕಾರಿ ಒಬ್ಬಂಟಿಗನಾಗಿಯೇ ಹೋಗತಕ್ಕದ್ದು. ಏಕೆಂದರೆ ಅವನ ಸಂಗಡಿಗ ಶಸ್ತ್ರಸಜ್ಜಿತನಾಗಿದ್ದರೆ ಶಿಕಾರಿಯು ನಿಷ್ಕಾಳಜಿಯುಳ್ಳವನಾಗಿ ಸಂಗಡಿಗನ ಮೇಲೆ ಹೆಚ್ಚಾಗಿ ಅವಲಂಬಿಸುವ ಪ್ರವೃತ್ತಿ ಉಂಟಾಗಿ ತನ್ನನ್ನು ರಕ್ಷಿಸಿಕೊಳ್ಳುವುದೂ ಹೆಚ್ಚು ಕಷ್ಟವಾಗುವ ಸಂಭವವುಂಟು. ಅವನ ಸಂಗಡಿಗ ನಿಶ್ಶಸ್ತ್ರವಾಗಿದ್ದರೆ ಅವನನ್ನು ಸಂರಕ್ಷಿಸುವುದು ಇನ್ನೂ ಕಷ್ಟದ ಹಾಗೂ ಹೆಚ್ಚಿನ ಜವಾಬ್ದಾರಿಯ ಕೆಲಸವಿದ್ದು ಒಬ್ಬನೆ ಇದ್ದಾಗ ಹುಲಿಯ ಸಂಗಡ ಮುಖಾಮುಖಿ ಭೆಟ್ಟಿಯಾದಾಗ ಕೊಲ್ಲಲು ಒಳ್ಳೆಯ ಅನುಕೂಲ ಸಂದರ್ಭ ದೊರೆಕುತ್ತದೆ.

ಕಾಡಿನ ರಹಸ್ಯ: ಹುಲಿಗೆ ಹದಿನೆಂಟು ಅಲಗಿನಂತಿರುವ ಉಗುರುಗಳುಳ್ಳ ನಾಲ್ಕು ಪಂಜಗಳು ಹಾಗೂ ಹರಿತವಾದ ಹಲ್ಲುಗಳುಳ್ಳ ಬಾಯಿ ಹೀಗೆ ಐದು ಮಾರಕ ಅಸ್ತ್ರಗಳು ಇವೆ. ಆದರೆ ಮನುಷ್ಯನಿಗೆ ಒಂದಾದರೂ ಇಂತಹ ಅಸ್ತ್ರ ಇಲ್ಲ. ಆದ್ದರಿಂದ ನರಭಕ್ಷಕ ಹುಲಿಯ ಕಾರ್ಯಾಚರಣೆಯ ಕಾಡಿನಲ್ಲಿ ಶಿಕಾರಿಗಳೇ ಆಗಲಿ ಅಥವಾ ಯಾರೇ ಆಗಲಿ ಚಲಿಸುವಾಗ ಬಹಳ ನಿಧಾನವಾಗಿ ಹಾಗೂ ಜಾಗರೂಕರಾಗಿ ಮುನ್ನಡೆಯಬೇಕು. ಏಕೆಂದರೆ ಪೊದೆಯೇ ಆಗಲಿ, ಗಿಡಮರಗಳೇ ಆಗಲಿ, ಕಲ್ಲುಬಂಡೆಯೇ ಆಗಲಿ ಅಥವಾ ಬೇರೆ ಯಾವುದೇ ಮರಣವನ್ನು ಅಡಗಿಸಿಡುವಂತಹ ಭೂಮಿಯ ಮೇಲಿನ ವಸ್ತುವೇ ಆಗಲಿ, ಅವುಗಳನ್ನು ಅತಿಜಾಗ್ರತೆಯಿಂದ ಸಮೀಪಿಸಬೇಕು. ವಿಶೇಷವಾಗಿ, ಯಾವುದೇ ದಿಕ್ಕಿನಿಂದ ಗಾಳಿ ಬೀಸದೆ ಇದ್ದಾಗ ಬಹಳ ಕಾಳಜಿಯಿಂದ ಹಾಗೂ ಸತತವಾಗಿ ಹಿಂದೆ, ಮುಂದೆ ಹಾಗೂ ಎರಡೂ ಬದಿಗೆ ನೋಡುತ್ತಲೇ ಚಲಿಸಬೇಕು. ಇನ್ನೊಂದು ವಿಷಯವೆಂದರೆ ಯಾವುದೇ ಸ್ಥಳದಲ್ಲಿ ಹುಲಿಯ ಇರುವಿಕೆಯ ಬಗ್ಗೆ ಊಹಿಸ ಬೇಕಾದರೆ ಅಥವಾ ಅದರ ಚಲನವಲನ ಕಂಡುಹಿಡಿಯಬೇಕಾದರೆ ಅದನ್ನು ಹಿಂಬಾಲಿ ಸುವವರು ಅರಣ್ಯದಲ್ಲಿಯ ಎಲ್ಲ ಪ್ರಾಣಿ ಹಾಗೂ ಪಕ್ಷಿಗಳ ಸ್ವರ, ಕೂಗು ಹಾಗೂ ಸಪ್ಪಳಗಳನ್ನು ಲಕ್ಷ್ಯಪೂರ್ವಕವಾಗಿ ಆಲಿಸಿ ಅವುಗಳನ್ನು ಗುರುತಿಸಬೇಕು. ಪಕ್ಷಿಗಳ ಹಾರಾಟ ಹಾಗೂ ಕೂಗು, ನವಿಲಿನ ಕೇಕಾರವ, ಮಂಗಗಳ 'ಖೊಕ್-ಖೊಕ್-ಖೊಕರ್' ಎಂಬ ಧ್ವನಿ, ಕಾಡುಕುರಿಯ 'ಪೂಂಹು-ಪೂಂಹು' ಕೂಗು, ಕಡವೆಯ 'ಧಾಕ್-ಧಾಕ್' ಸಪ್ಪಳ ಇವೇ ಮೊದಲಾದವುಗಳಿಂದ ಸಾದಾಹುಲಿ ಇಲ್ಲವೆ ನರಭಕ್ಷಕ ಹುಲಿಯ ಇರುವಿಕೆ ಇಲ್ಲವೆ ಅದರ ಚಲನವಲನಗಳನ್ನು ಕಂಡುಹಿಡಿಯಬಹುದು. ಈ ಎಲ್ಲ ರೀತಿಯ ಕಾಡಿನ ರಹಸ್ಯಗಳನ್ನು ಅನೇಕ ವರ್ಷಗಳ ಅನುಭವಿ ಶಿಕಾರಿಗಳಿಗೆ ಮಾತ್ರ ತಿಳಿದುಕೊಳ್ಳಲು ಸಾಧ್ಯ. 'ಕಾಡಿನ ರಹಸ್ಯ'ಗಳು 'ಕಾಡಿನ ಭಾಷಾಪ್ರಸಾರ'ಗಳು ಹಾಗೂ ಅಲ್ಲಿಯ 'ಸಮಾಚಾರ ದರ್ಶನ'ಗಳು ಜಂಗಲ್ ಪ್ರಾಣಿ ಹಾಗೂ ಪಕ್ಷಿಗಳಿಗೆ ಮನುಷ್ಯನಿಗಿಂತ ಚೆನ್ನಾಗಿ ಅರ್ಥವಾಗುತ್ತವೆ. ಆದ್ದರಿಂದಲೆ ಶಾಖಾಹಾರಿ ಪ್ರಾಣಿಗಳು ಮಾಂಸಾಹಾರಿ ಪ್ರಾಣಿಗಳಿಂದ ಹಾಗೂ ಮಾಂಸಾಹಾರಿ ಪ್ರಾಣಿಗಳು ಬೇರೆ ರೀತಿಯ ಅಪಾಯುಗಳಿಂದ ಬಹು ಎಚ್ಚರಿಕೆ ವಹಿಸಿ ಕಾಡಿನಲ್ಲಿ ಜೀವಿಸುವುದು ಸಾಧ್ಯ. ನರಭಕ್ಷಕ ಹುಲಿಯನ್ನು ಸೆರೆಹಿಡಿಯುವುದು ಅತಿ ಕಷ್ಟದ ಕೆಲಸ. ಆದ್ದರಿಂದ ಅದನ್ನು ಗುಂಡಿಕ್ಕಿ ಕೊಲ್ಲುವುದೇ ಸೂಕ್ತವಾದದ್ದು.

ಕೊಲ್ಲುವ ಬಗೆ: ನರಭಕ್ಷಕ ಹುಲಿಯನ್ನು ಕೊಲ್ಲುವುದು ಅತಿ ಕಷ್ಟ. ಆದರೂ ಅದನ್ನು ಇಂದಿಲ್ಲ ನಾಳೆಯಾದರೂ ಕೊಲ್ಲಲೇಬೇಕು. ಶೀಘ್ರವಾಗಿ ಕೊಂದಷ್ಟೂ ಜನತೆಗೆ ಹಿತಕರ. ಇಂತಹ ಹುಲಿಯನ್ನು ಕೊಲ್ಲುವ ಶಿಕಾರಿಗಳು ನಿಜವಾದ ಧೈರ್ಯ-ಸ್ಥೈರ್ಯಗಳನ್ನು ಹೊಂದಿರಬೇಕಾಗುವುದು. ನರಭಕ್ಷಕ ಹುಲಿಯನ್ನು ಗುಂಡಿಕ್ಕಿ ಕೊಲ್ಲಲು ಶಿಕಾರಿಗಳು ತಮ್ಮದೇ ಆದ ವಿಶೇಷ ರೀತಿಗಳನ್ನು ಉಪಯೋಗಿಸುತ್ತಾರೆ. ಅವುಗಳಲ್ಲಿ ಮುಖ್ಯವಾಗಿ ನರಭಕ್ಷಕ ಹುಲಿಯನ್ನು ಬೀಳು ಅಥವಾ ತಿಂದುಳಿದ ಶವದ ಮೇಲೆ ಕುಳಿತು ಕೊಲ್ಲುವುದು ಉಪಯುಕ್ತ ಹಾಗೂ ಪರಿಣಾಮಕಾರಿ. ಆದರೆ ಇದರಲ್ಲಿ ಒಂದು ತೊಂದರೆಯುಂಟಾಗಬಹುದು. ಕೆಲವು ಹುಲಿಗಳು ಒಮ್ಮೆ

ತಿಂದು ತ್ಯಜಿಸಿ ಹೋದ ಶವಕ್ಕೆ ಪುನಃ ಭೇಟ್ಟಿಕೊಡುವ ಪದ್ಧತಿಯನ್ನಿಟ್ಟುಕೊಂಡಿರುವು ದಿಲ್ಲ. ಏಕೆಂದರೆ, ಹಿಂದೆ ಎಂದಾದರೂ ಪ್ರಾಣಿಗಳ ಬೇಳಿಗೆ ಹುಲಿ ವಾಪಸ್ಸಾದಾಗ ಶಿಕಾರಿಯ ಗುಂಡಿನೇಟಿನಿಂದ ಗಾಯಗೊಳಿಸಲ್ಪಟ್ಟು, ಅದು ನರಭಕ್ಷಕನಾಗಿ ಪರಿವರ್ತನೆ ಹೊಂದಲು ಕಾರಣವಾಗಿದ್ದರೆ ಎರಡನೆಯ ಸಾರೆ ತಿಂದುಳಿದ ಶವದ ಎಡಬಲ ಹಾಯು ವುದಿಲ್ಲ. ಹೆಚ್ಚಿನ ಪ್ರಸಂಗಗಳಲ್ಲಿ ಹುಲಿಗೆ ಬಲಿಯಾದ ನಿರ್ಭಾಗ್ಯ ಮನುಷ್ಯನ ಸಂಬಂಧಿಕರು ತಿಂದುಳಿದ ದೇಹ ಹಾಗೂ ಮೂಳೆಗಳನ್ನು ಕೂಡಿಸಿ ಅಂತ್ಯಕ್ರಿಯೆಗೆಂದು ಎತ್ತಿಕೊಂಡು ಹೋಗುವುದುಂಟು. ಇಂತಹ ಸನ್ನಿವೇಶಗಳಲ್ಲಿ ಎಮ್ಮೆಕರು ಅಥವಾ ಬೇರೆ ಸಾಕಿದ ಪ್ರಾಣಿಗಳನ್ನು ಬಲಿ ಕಟ್ಟುತ್ತಾರೆ. ನರಭಕ್ಷಕ ಹುಲಿ ಅದನ್ನು ಕೊಂದು ಅರ್ಧ ತಿಂದುಳಿದ (ಬೀಳು) ದೇಹದ ಮೇಲೆ ಕಾದುಕುಳಿತು ಕೊಲ್ಲುವುದು ಎರಡನೆಯ ರೀತಿ. ಆ ಪ್ರಾಣಿಯನ್ನು ಗುಂಡಿಕ್ಕಿ ಕೊಲ್ಲುವ ಮೊದಲು ಅದು ನರಭಕ್ಷಕ ಹುಲಿಯೋ ಅಥವಾ ಸಾಮಾನ್ಯ ಹುಲಿಯೋ ಎಂಬುದನ್ನು ಹೇಗೆ ಖಚಿತಪಡಿಸಿಕೊಳ್ಳುವುದು? ಅದಕ್ಕೆ ಈ ಹಂಚಿಕೆ ಮಾಡುವುದು. ಬಲಿಪ್ರಾಣಿ ಕಟ್ಟಿದ ಪಕ್ಕದಲ್ಲಿ ಒಂದು ಮನುಷ್ಯನ ಕೃತಕಾಕೃತಿಯನ್ನು ಮಾಡಿ ನಿಲ್ಲಿಸಬೇಕು. ಉಪಯೋಗಿಸಿದ ಅಥವಾ ಸ್ವಲ್ಪ ಕೊಳೆ ಯಾದ ಬಟ್ಟೆಯನ್ನು ಅದಕ್ಕೆ ತೊಡಿಸಬೇಕು. ಪ್ರಾಣಿ ನರಭಕ್ಷಕ ಹುಲಿಯಾದರೆ ಅದು ಮೊದಲು ಮನುಷ್ಯನ ಪ್ರತಿಮೆಯ ಮೇಲೆ ಆಕ್ರಮಣ ಮಾಡುತ್ತದೆ. ನಿರಾಶೆ ಹೊಂದಿ ತದನಂತರ ಅದು ಬಲಿ ಪ್ರಾಣಿಯನ್ನು ಕೊಲ್ಲುತ್ತದೆ. ನರಭಕ್ಷಕ ಅಪರಾಧಿ ಯನ್ನು ಕಂಡುಹಿಡಿದ ಶಿಕಾರಿಗೆ ಕೂಡಲೆ ಗುಂಡಿಟ್ಟು ಕೊಲ್ಲಲು ಸಹಾಯವಾಗುತ್ತದೆ. ಕೆಲವು ಚಾಣಾಕ್ಷ ಹುಲಿಗಳು ತಿಂದುಳಿದ ಪ್ರಾಣಿಗಳ ದೇಹಗಳಿಗೂ ಪುನಃ ಭೇಟ್ಟಿ ಕೊಡುವುದಿಲ್ಲ. ಅವು ಅಲ್ಲಿಂದ ಬೇರೆಕಡೆ ಹೊರಟು ಹೋಗುವುದುಂಟು. ಇಂತಹ ಹುಲಿಗಳಿಗೂ ಹಿಂದೆ ಎಂದಾದರೂ ಗುಂಡಿನ ಬಿಸಿ ತಗುಲಿರಬೇಕೆಂದು ತಿಳಿಯಬೇಕು. ಈ ರೀತಿಯಲ್ಲಿ, ನಡೆದುಕೊಳ್ಳುವಂತಹ ನರಭಕ್ಷಕ ಹುಲಿಗಳನ್ನು ಜೀವಂತ ಬಲಿಗಳ ಮೇಲೆ ಕಾದು ಕುಳಿತು ಕೊಲ್ಲಬೇಕಾದ್ದು ಮತ್ತೊಂದು ವಿಧಾನ. ಹುಲಿ ನರಭಕ್ಷಕವಾಗಿ ಪರಿವರ್ತನೆ ಹೊಂದಬೇಕಾದರೆ ಅನೇಕ ರೀತಿಯಲ್ಲಿ ಸಾರ್ವತ್ರಿಕ ಮಾಂಸಾಹಾರಿ ಪ್ರಾಣಿ ಯೆಂದು ಮುದ್ರೆಒತ್ತಿಸಿಕೊಂಡ ಮನುಷ್ಯನಿಂದ ಹಿಂಸೆಗೊಳಪಟ್ಟು, ಗುಂಡಿನೇಟು ತಿಂದು, ಅತಿ ಚಾಣಾಕ್ಷ ಹಾಗೂ ಮೋಸದ ಪ್ರವೃತ್ತಿಯುಳ್ಳದ್ದಾಗಿರುತ್ತದೆ. ಅದಕ್ಕೆ ಅತ್ಯಲ್ಪ ಸಂಶಯ ಉಂಟಾದರೆ ತೀರಿತು ಕಟ್ಟಿದ ಬಲಿಯ ಹತ್ತಿರ ಸುಳಿಯುವುದೇ ಇಲ್ಲ. ಹೀಗಾಗಿ ಒಂದು ನರಭಕ್ಷಕ ಹುಲಿಯನ್ನು ಕೊಲ್ಲಬೇಕಾದರೆ ವರ್ಷಾನುಗಟ್ಟಲೆ ಸತತ ಪ್ರಯತ್ನಮಾಡಬೇಕಾಗುತ್ತದೆ.

ನರಭಕ್ಷಕ ಹುಲಿ ಅದಕ್ಕೆ ಬಲಿಯಾಗಿ ಕಟ್ಟಿದ ಪ್ರಾಣಿಗಳನ್ನು ಕೊಲ್ಲದೆ ಹೋದಾಗ ಮತ್ತು ಅದು ಮನೆಗಳನ್ನು ಹೊಕ್ಕು ಮನುಷ್ಯರನ್ನು ಕೊಂದು ತಿನ್ನುವ ಪ್ರವೃತ್ತಿಯನ್ನು ಅಳವಡಿಸಿಕೊಂಡಿದ್ದರೆ ಶಿಕಾರಿಯು ತಾನೇ ಬಲಿಪ್ರಾಣಿಯಾಗಿ ಅದನ್ನು ಆಕರ್ಷಿಸ ಬೇಕಾಗುತ್ತದೆ. ಇದು ಸೋಜಿಗ ಹಾಗೂ ಭಯಾನಕವೆನಿಸಿದರೂ ಕನಿಷ್ಠ ಒಬ್ಬ ಶಿಕಾರಿ ಈ ರೀತಿಯಲ್ಲಿ ನರಭಕ್ಷಕ ಹುಲಿಯನ್ನು ಕೊಂದ ನಿದರ್ಶನವಿದೆ. ಇದರಲ್ಲಿ ಹಂಚಿಕೆ ಇಷ್ಟೆ. ನರಭಕ್ಷಕ ಹುಲಿ ಅಲೆದಾಡಿದ ಹಳ್ಳಿಯ ಅಂಚಿನಲ್ಲಿದ್ದ ಒಂದು

ಮನೆಯಲ್ಲಿ ಶಿಕಾರಿ ಒಬ್ಬನೆ ಸಶಸ್ತ್ರವಾಗಿ ಕಾದುಕೊಂಡಿರಬೇಕು. ಆ ಮನೆಯ ಬಾಗಿಲು ಹಾಗೂ ಕಂಬಿಗಳಿಂದ ರಚಿಸಲ್ಪಟ್ಟ ಕಿಟಕಿ ಹಾಗೂ ಗೋಡೆಗಳು ಹುಲಿಯ ಆಕ್ರಮಣ ವನ್ನು ತಾಳಿಕೊಳ್ಳುವಂತಿರಬೇಕು. ಶಿಕಾರಿಯು ಕೆಮ್ಮುತ್ತ, ಬೀಡಿ ಸೇದುತ್ತ ರಾತ್ರಿ ಜಾಗರೂಕತೆಯಿಂದ ಮಲಗಿರುವಂತೆ ನಟಿಸಬೇಕು. ನರಭಕ್ಷಕ ಹುಲಿ ಆಕರ್ಷಣೆ ಗೊಂಡು ಬಾಗಿಲು ಅಥವಾ ಕಿಟಕಿಗಳ ಮೇಲೆ ಪ್ರಹಾರಮಾಡಬಹುದು. ಆಗ ಶಿಕಾರಿಯು ಗುಂಡಿಟ್ಟು ಕೊಲ್ಲುವುದು ಸಾಧ್ಯ.

ಮೇಲಿನ ಎಲ್ಲ ರೀತಿಯಲ್ಲಿ ಕೊಲ್ಲುವ ವಿಧಾನಗಳಲ್ಲಿ ಶಿಕಾರಿ ಸುರಕ್ಷಿತ ಸ್ಥಳಗಳಲ್ಲಿ ಕಾದುಕುಳಿತಿರಬೇಕಾಗುತ್ತದೆ. ಹತ್ತಿರದಲ್ಲಿ ಗಿಡಮರಗಳಿದ್ದರೆ ಮಚಾನಗಳನ್ನು ಕಟ್ಟಿಸಿ ಕೊಡುವುದು ಹಿತಕರ. ಹತ್ತಿರದಲ್ಲಿ ಯಾವುದೇ ಮರಗಳಾಗಲಿ ಅಥವಾ ಬೇರೆ ಸುರಕ್ಷಿತ ಸ್ಥಳಗಳು ಇಲ್ಲದೇ ಹೋದರೆ ಭೂಮಿಯಲ್ಲಿ ಗುಂಡಿ ತೆಗೆಯಿಸಿ ಅದರ ಸುತ್ತಲೂ ಮುಳ್ಳುಸೊಪ್ಪು ಮುಚ್ಚಿ ಕೊಡುವುದು ಇನ್ನೊಂದು ವಿಧ. ಮಗದೊಂದು ಸುರಕ್ಷಿತ ರೀತಿಯೆಂದರೆ ಕಬ್ಬಿನಹಾಲು ಕಾಯಿಸಿ ಬೆಲ್ಲ ತಯಾರಿಸುವ ಕೊಪ್ಪರಿಗೆಯನ್ನು ಅಥವಾ ಕಂಬಿಗಳಿಂದ ಮಾಡಿದ ಬಲೆಯನ್ನು ಗುಂಡಿಯ ಮೇಲೆ ಮುಚ್ಚಿ ಕಾದು ಕುಳಿತುಕೊಳ್ಳಬೇಕಾಗುವುದು. ಇವೆಲ್ಲ ರೀತಿಗಳಲ್ಲಿ ಹುಲಿಗೆ ಶಿಕಾರಿಯು ಕಾಣದಂತೆ ಹಾಗೂ ನರಭಕ್ಷಕ ಹುಲಿಗೆ ಸಂಶಯ ಉಂಟಾಗದಂತೆ ಮರವು ಮಾಡಬೇಕು. ಏಕೆಂದರೆ ಶಿಕಾರಿ ನರಭಕ್ಷಕ ಹುಲಿಯ ವಧೆಗೆಂದು ಕುಳಿತರೆ ಹುಲಿ ಶಿಕಾರಿಯ ಬಲಿ ತೆಗೆದು ಕೊಳ್ಳಲು ಪ್ರಯತ್ನಿಸುವ ಸಂಭವವಿರುತ್ತದೆ.

ಮತ್ತೆ ಕೆಲವು ನರಭಕ್ಷಕ ಹುಲಿಗಳು ತಮ್ಮ ಮುದಿ ವಯಸ್ಸಿನಿಂದ ಅಥವಾ ಹಲ್ಲುಗಳುದುರಿ ಅಥವಾ ಅತಿ ನೋವಿನಿಂದ ಬಳಲಿ ಬಲಿಗಳನ್ನು ಕೊಲ್ಲಲು ಅಶಕ್ತ ವಾದಾಗ ಅಥವಾ ಮನುಷ್ಯನ ರಕ್ತ ಹಾಗೂ ಮಾಂಸದ ವಿಶಿಷ್ಟ ರುಚಿಯಿಂದ ಕಟ್ಟಿದ ಬಲಿಗಳನ್ನು ಕೊಲ್ಲಲು ಎಳ್ಳಷ್ಟೂ ಆಸಕ್ತಿಯನ್ನು ತೋರಿಸದೆ ಹೋಗಬಹುದು.

ಕೆಚ್ಚೆದೆಯ ಧೀರ ಶಿಕಾರಿ: ಉತ್ತರ ಪ್ರದೇಶದ ಕುಮಾಂವೂ ಗುಡ್ಡಗಾಡು ಪ್ರದೇಶಗಳಲ್ಲಿ ಅನೇಕ ನರಭಕ್ಷಕ ಹುಲಿಗಳ ಬಲಿ ತೆಗೆದುಕೊಂಡ ಜಿಮ್‌ಕಾರ್ಬೆಟ್‌ನಂತಹ ಪ್ರಸಿದ್ಧ ಶಿಕಾರಿ ಮೇಲಿನ ಯಾವುದೇ ರೀತಿಗಳಲ್ಲಿ ನರಭಕ್ಷಕ ಹುಲಿಯನ್ನು ಕೊಲ್ಲುವುದು ಸಾಧ್ಯವಾಗದೆ ಹೋದಾಗ ಅದರ ಅಧಿಪತ್ಯದಲ್ಲಿ ಕಾಲ್ನಡಿಗೆಯಲ್ಲಿ ಅಲೆದಾಡಿ ಅದನ್ನು ಕಂಡುಹಿಡಿದು ಮುಖಾಮುಖಿ ಎದುರು ಬಿದ್ದಾಗ ಗುಂಡಿಕ್ಕಿ ಕೊಂದ ಅನೇಕ ಪ್ರಸಂಗಗಳಿವೆ. ಅವನ ಎಲ್ಲ ಪ್ರಯತ್ನಗಳೂ ವಿಫಲವಾದಾಗ ಒಮ್ಮೆ ನರಭಕ್ಷಕ ಹುಲಿಯ ಪ್ರಿಯತಮ ನಂತೆ ಕೂಗಿದಾಗ ಅದು ಆಕರ್ಷಿಸಲ್ಪಟ್ಟು ಎದುರಿಗೆ ಬಂದಾಗ ಆ ನರಭಕ್ಷಕ ಹುಲಿಯನ್ನು ಗುಂಡಿಕ್ಕಿ ನೆಲಕ್ಕುರುಳಿಸಿದ್ದು ಅತಿ ಪ್ರಶಂಸನೀಯ. ಇದು ನಿಜವಾದ ಬೇಟೆಗಾರನ ಲಕ್ಷಣಗಳಾದ ಧೈರ್ಯಸ್ಥೈರ್ಯಗಳನ್ನು ಪ್ರದರ್ಶಿಸುತ್ತದೆ. ಇದಕ್ಕೆ ನಿಜವಾದ ಬೇಟೆಯ ಸೂತ್ರಗಳನ್ನೊಳಗೊಂಡ ಕ್ರೀಡೆಯೆಂದು ಹೇಳಬಹುದು. ಇದರಲ್ಲಿ ಒಂದು ಮುಖ್ಯ ವಿಷಯವನ್ನು ನೆನಪಿನಲ್ಲಿಡತಕ್ಕದ್ದು. ಗಾಯಗೊಂಡ ಅಥವಾ ನರಭಕ್ಷಕ

ಹುಲಿಯನ್ನು ಹುಡುಕಿ ಕಂಡುಹಿಡಿಯಲು ಶಿಕಾರಿಯು ಹಳ್ಳದ ಪಾತ್ರದಲ್ಲಿ ಎಂದೂ ನಡೆದು ಹೋಗಕೂಡದು. ಏಕೆಂದರೆ ಆ ಹುಲಿ ದಂಡೆಯ ಮೇಲೆ ಅಡಗಿ ಕುಳಿತಿರಲು ಸಾಕು. ಕೆಲವು ವರ್ಷಗಳ ಹಿಂದೆ ಆ್ಯಂಡರ್ಸನ್ ಎಂಬುವನು ಚಿಕ್ಕಮಗಳೂರು ಜಿಲ್ಲೆಯ ಎಮ್ಮೆದೊಡ್ಡಿ ಎಂಬಲ್ಲಿ ಮರದ ಮೇಲೆ ಕುಳಿತು ಕಟ್ಟಿಗೆ ಕಡಿಯುವವನಂತೆ ಸಪ್ಪಳ ಮಾಡಿದಾಗ ನರಭಕ್ಷಕ ಹುಲಿಯನ್ನು ಆಕರ್ಷಿಸಿ ಅದನ್ನು ಗುಂಡಿಕ್ಕಿ ಕೊಂದ ಪ್ರಸಂಗವೂ ಕೂಡ ಶ್ಲಾಘನೀಯವಾದದ್ದು.

ಎಮ್ಮೆಗಳ ನೆರವು: ಒಂದು ವೇಳೆ ನರಭಕ್ಷಕ ಹುಲಿ ಶಿಕಾರಿಯ ಗುಂಡಿನೇಟಿನಿಂದ ಗಾಯಗೊಂಡು ತಪ್ಪಿಸಿಕೊಂಡಾಗ ಅದನ್ನು ಕಂಡುಹಿಡಿದು ಕೊಲ್ಲಲು ಅವನು ಎಮ್ಮೆಗಳ ನೆರವನ್ನು ಪಡೆಯುವುದುಂಟು. ಬಲವಾದ ಎಮ್ಮೆಗಳ ಹಿಂಡಿನ ಮರೆಯಲ್ಲಿದ್ದು ಅವುಗಳನ್ನು ಹುಲಿ ಇದ್ದ ಸ್ಥಳದ ಕಡೆ ಅಟ್ಟಿಸಿಕೊಂಡು ಹೋಗಿ ಅದನ್ನು ಬಲಿಹಾಕಲು ಅನುಕೂಲವಾಗುವುದು. ಕೆಲವು ಸಮಯ ಎಮ್ಮೆಗಳು ಹುಲಿಯ ಬಲವಾದ ವಾಸನೆಯಿಂದ ಅದನ್ನು ಸಮೀಪಿಸಲು ನಿರಾಕರಿಸಬಹುದು. ಅಂತಹ ಸಂದರ್ಭದಲ್ಲಿಯೂ ಶಿಕಾರಿ ಕೆಚ್ಚೆದೆಯ ಧೀರನಂತೆ ಒಬ್ಬಂಟಿಗನಾಗಿ ಮುನ್ನುಗ್ಗಿ ಹುಲಿಯನ್ನು ಕಂಡುಹಿಡಿದು ಕೊಲ್ಲಬೇಕು.

ಬೀಟ್ ಮಾಡಿಸುವಿಕೆ: ನರಭಕ್ಷಕ ಹುಲಿಯನ್ನು ಗುಂಡಿಕ್ಕಿ ಕೊಲ್ಲುವ ಸುರಕ್ಷಿತ ಹಾಗೂ ಖ್ಯಾತ ವಿಧಾನವೆಂದರೆ ಬೀಟ್ ಮಾಡಿಸುವುದು. ಪ್ರಾಣಿ ಹೊಂಚಿ ಕೊಂಡಿದೆ ಎಂದು ಹೇಳಲಾದ ಪ್ರದೇಶವನ್ನು ಒಂದು ಬದಿಯಿಂದ ಮತ್ತೊಂದು ಬದಿಯವರೆಗೆ ಶೋಧಿಸಿ ಹೊರಗೆ ಓಡಿಸುವುದಕ್ಕೆ 'ಬೀಟ್ ಮಾಡಿಸುವುದು' ಎಂದು ಕರೆಯುತ್ತಾರೆ. ಇದರಲ್ಲಿ ಶಿಕಾರಿಯು ಆ ಪ್ರದೇಶದ ಒಂದು ಆಯಕಟ್ಟಿನ ಸ್ಥಳದಲ್ಲಿ ಸುರಕ್ಷಿತವಾಗಿ ಕಾದು ಕುಳಿತಿರುತ್ತಾನೆ. ಇನ್ನೊಂದು ಬದಿಯಿಂದ ನೂರಾರು ಜನ ಸಾಲಾಗಿ ನಿಂತು ಸನ್ನೆ ಕೊಟ್ಟಕೂಡಲೆ ತಮಟೆ. ಜಾಗಟೆ, ಡೋಲಕ್. ಡಬ್ಬಗಳನ್ನು ಹಿಡಿದು ಬಾರಿಸುತ್ತ. ಕೂಗುತ್ತ. ಕೋಲಾಹಲ ಮಾಡುತ್ತ ಎಲ್ಲರೂ ಒಮ್ಮೆಲೆ ಮುನ್ನುಗ್ಗುತ್ತಾರೆ. ಕೆಲವರು ಕೈಯಲ್ಲಿ ಬಡಿಗೆ, ಕತ್ತಿ. ಭರ್ಚಿ, ಕಲ್ಲುಗಳನ್ನು ಹಿಡಿದು ಅವರ ಮಾರ್ಗದಲ್ಲಿ ಬಂದ ಎಲ್ಲ ಪೊದರುಗಳನ್ನೂ, ಹಳ್ಳ. ಗುಹೆಗಳನ್ನೂ ಬಡಿದು ಶೋಧಿಸುತ್ತ, ಹುಲಿ ತಪ್ಪಿಸಿಕೊಂಡು ಹಿಂದೆ ಓಡಿಹೋಗದಂತೆ ನೋಡಿಕೊಳ್ಳುತ್ತಾರೆ. ಹುಲಿ ನಿರ್ದಿಷ್ಟ ದಿಕ್ಕಿನಲ್ಲಿಯೇ ಮುಂದೆ ಸಾಗುವಂತೆ ಅಲ್ಲಲ್ಲಿ ನಿಲ್ಲಿಸುವ ಸ್ಥಳಗಳಲ್ಲಿ ಜನರನ್ನು ಕೂಡ್ರಿಸಿ ತಪ್ಪಿಸಿಕೊಂಡು ಓಡದಂತೆ ಎಚ್ಚರಿಕೆ ವಹಿಸುವ ಏರ್ಪಾಡಾಗಿರುತ್ತದೆ. ಬೀಟ್‌ಮಾಡುವ ಜನರು ಕುದುರೆ ನಾಲಿನ ಆಕಾರದಲ್ಲಿ ನಡೆದು, ಮುಂದೆ ಸಾಗಿ ನಿರ್ದಿಷ್ಟಪಡಿಸಿದ ಸ್ಥಳದವರೆಗೆ ಮಾತ್ರ ಬಂದು ನಿಲ್ಲುವ ವ್ಯವಸ್ಥೆ ಮಾಡಿರುತ್ತಾರೆ. ಜನರ ಗಲಾಟೆಗೆ ಭಯಗೊಂಡ ಹುಲಿಯನ್ನು ಶಿಕಾರಿಯು ಮೊದಲೇ ಅಪೇಕ್ಷಿಸಿದ ಸ್ಥಳದಲ್ಲಿ ಕಂಡಾಗ ಗುಂಡಿಕ್ಕಿ ಕೊಲ್ಲುವುದುಂಟು. ಈ ವಿಧಾನ ಹೆಚ್ಚಿನ ಖರ್ಚಿನದಿದ್ದು ಕೆಲವೇ ಘಂಟೆಗಳಲ್ಲಿ ಹುಲಿಯನ್ನು ಗುಂಡಿಕ್ಕಿ ಕೊಲ್ಲಬಹುದಾಗಿದೆ. ಈ ವಿಧಾನವನ್ನು

ಹೆಚ್ಚಾಗಿ ಮೈದಾನ (ಬೈಲುಪ್ರದೇಶ)ದಲ್ಲಿಯು ಅರಣ್ಯ ಪ್ರದೇಶದಲ್ಲಿ ಅನುಸರಿಸುತ್ತಾರೆ.

ಕ್ರಿ.ಶ. 1902ರಲ್ಲಿ ಇಡೀ ಭಾರತದಾದ್ಯಂತ ಅತಿ ಹೆಚ್ಚಿನ ಪ್ರಮಾಣದಲ್ಲಿ ಹುಲಿಗಳಿದ್ದವು. ಸರಕಾರದ ಪ್ರಕಟನೆಯು ಪ್ರಕಾರ 25 ಕೋಟಿ ಜನಸಂಖ್ಯೆಯಲ್ಲಿ 1046 ಜನರನ್ನು ನರಭಕ್ಷಕ ಹುಲಿಗಳು ತಿಂದಿದ್ದವು. ಆದರೆ ಆಗ ಹಲವು ನೂರಕ್ಕಿಂತ ಹೆಚ್ಚು ನರಭಕ್ಷಕ ಹುಲಿಗಳಿದ್ದುವೆಂದಲ್ಲ. ಒಮ್ಮೆ ಮನುಷ್ಯನ ರಕ್ತ ಹಾಗೂ ಮಾಂಸದ ರುಚಿಯನ್ನು ಅಳವಡಿಸಿಕೊಂಡರೆ ತೀರಿತು; ಅದು ಮೇಲಿಂದ ಮೇಲೆ ಮನುಷ್ಯನನ್ನೇ ಕೊಂದು ತಿನ್ನಲು ಹವಣಿಸುತ್ತದೆ. ಸ್ವಾಭಾವಿಕವಾಗಿ ಅದರ ಕುಟುಂಬದ ಮರಿಗಳಿಗೂ ಅದೇ ಸ್ವಭಾವ ಬಂದುಬಿಡುತ್ತದೆ.

ಆದರೆ ಇಂದೂ ಸುಂದರಬನದ ಕಾಡಿನಲ್ಲಿ ನರಭಕ್ಷತೆ ಆಗಾಗ ನಡೆಯುತ್ತಲೇ ಇದೆ. ಹತ್ತು ವರ್ಷಗಳಿಂದೀಚೆಗೆ ಸುಮಾರು 275 ಜನ ಬಲಿಯಾದ ದಾಖಲೆಯಿದೆ. ಸುಂದರಬನದಲ್ಲಿದ್ದ ಬೇಟೆ ಪ್ರಾಣಿಗಳಾದ ಕಾಟಿಮೃಗ, ಖಡ್ಗಮೃಗ, ಹನ್ನೆರಡು ಕೊಂಬುಗಳ ಜಿಂಕೆಗಳ ಸಂಖ್ಯೆ ಕ್ಷೀಣವಾಗುವ ಮೊದಲೆ, ಹುಲಿಗಳಲ್ಲಿಯು ನರಭಕ್ಷತೆ ಸ್ವಭಾವ ಕ್ರಿ.ಶ. 1665ರಿಂದಲೂ ಇದೆ ಎಂಬುದಕ್ಕೆ ನಂಬಲರ್ಹವಾದ ಆಧಾರಗಳಿವೆ. ಕಾಡು ಹಂದಿ ಹಾಗೂ ಜಿಂಕೆ ಅಲ್ಲಿ ಮೊದಲಿಗಿಂತ ಅತಿ ಕಡಮೆ ಸಂಖ್ಯೆಯಲ್ಲಿದ್ದರೂ ಅವು ಈಗಲೂ ಅಲ್ಲಿವೆ. ಇದರಿಂದ ಆಹಾರದ ಕೊರತೆಯೊಂದೇ ನರಭಕ್ಷತೆಗೆ ಕಾರಣ ಆಗಿರಲಾರದೆಂದು ಇನ್ನೊಂದು ಅಭಿಪ್ರಾಯ. ಇತರ ಕಾರಣಗಳ ಸಾಧ್ಯತೆಯ ಬಗ್ಗೆ ಅಭ್ಯಸಿಸಬೇಕಾಗಿದೆ.

ನರಭಕ್ಷಕ ಹುಲಿಗಳ ದಾಖಲೆ: ನರಭಕ್ಷಕ ಹುಲಿಗಳ ವಿಸ್ತೀರ್ಣ ಕೆಲವೆಡೆಗಳಲ್ಲಿ ಕಂಡುಬಂದಿದ್ದರೂ ಅವು ಸಾರ್ವತ್ರಿಕವಾಗಿ ಕಂಡುಬಂದಿಲ್ಲ. ಸೋವಿಯತ್ ದೇಶಗಳಲ್ಲಿ ಒಂದೂ ನರಭಕ್ಷಕ ಹುಲಿ ಇಲ್ಲ. ಅವು ಬಹುತೇಕ ಉತ್ತರ, ಮಧ್ಯಪೂರ್ವ ಹಾಗೂ ದಕ್ಷಿಣ ಭಾರತದಲ್ಲಿ ಕಂಡುಬಂದಿವೆ. ಭಾರತದಲ್ಲಿ ಅನೇಕ ಪ್ರಸಿದ್ಧ ಶಿಕಾರಿಗಳು ನರಭಕ್ಷಕ ಹುಲಿಗಳನ್ನು ಬೇಟೆಯಾಡಿ ಕೊಂದ ದಾಖಲೆಗಳಿವೆ. ಅತಿ ಹೆಚ್ಚು ನರಭಕ್ಷಕ ಹುಲಿಗಳು ಕಂಡುಬಂದ ದಾಖಲೆಗಳೆಂದರೆ ಉತ್ತರ ಪ್ರದೇಶದ ಕುಮಾಂವ್ಹೂ ಗುಡ್ಡಗಾಡು ಪ್ರದೇಶ ಹಾಗೂ ಪೂರ್ವ ಬಂಗಾಲದ ಸುಂದರಬನ ಜವುಗು ಪ್ರದೇಶಗಳಲ್ಲಿ. ಇವಲ್ಲದೆ ಮಹಾರಾಷ್ಟ್ರದ ಚಾಂದಾ ಹಾಗೂ ಮಧ್ಯ ಪ್ರದೇಶದ ಮಾಂಡ್ಲಾ ಜಿಲ್ಲೆಗಳು ನರಭಕ್ಷಕ ಹುಲಿಗಳಿಗಾಗಿ ಬಹಳ ಪ್ರಸಿದ್ಧಿಪಡೆದಿವೆ. ಕರ್ನಾಟಕ ರಾಜ್ಯದ ಚಿಕ್ಕಮಗಳೂರು ಜಿಲ್ಲೆಯ ಎಮ್ಮೆದೊಡ್ಡಿ, ಚಿತ್ರದುರ್ಗ ಜಿಲ್ಲೆಯ ಹೊಳಲಕೆರೆ ಹಾಗೂ ಹೊಸದುರ್ಗಗಳಲ್ಲಿ ಹಾಗೂ ತಮಿಳುನಾಡಿನ ಸೇಗೂರು ಮುಂತಾದ ಪ್ರದೇಶಗಳಲ್ಲಿ ನರಭಕ್ಷಕ ಹುಲಿಗಳು ಕಂಡುಬಂದ ದಾಖಲೆಗಳಿವೆ.

ಕ್ರಿ.ಶ. 1889ರಲ್ಲಿ ಓಸ್ಮಾಸ್ಟನ್ ಎಂಬುವನು ಉತ್ತರ ಪ್ರದೇಶದ ಚಕ್ರಾತದ ಹತ್ತಿರ ಮಂಡಾಲಿ ಎಂಬಲ್ಲಿ ಒಂದು ನರಭಕ್ಷಕ ಹುಲಿಯನ್ನು ಕೊಂದಿದ್ದಾನೆ. ಕ್ಯಾಪ್ಟನ್

ಬ್ರೂಸ್ ಎಬ್ಬಟ್ ಎಂಬುವವನು ಲೋಹಾಘಾಟ್‌ನಲ್ಲಿ ಸುಮಾರು 150 ಜನರನ್ನು ಕೊಂದಿತು ಎಂದು ಹೇಳಲಾದ ನರಭಕ್ಷಕ ಹುಲಿಯನ್ನು ಕೊಂದನು. ಬ್ರಾಡ್ಸನ್ ಎಂಬುವನು ಮನುಷ್ಯರನ್ನಲ್ಲದೆ, ಪ್ರಾಣಿಗಳನ್ನು ಕೊಲ್ಲದೆ ಇದ್ದ ಬೈಜನಾಥ ನರಭಕ್ಷಕ ಹುಲಿಯ ಬಗ್ಗೆ ಬರೆದಿದ್ದಾನೆ. ನೈನಿತಾಲ ಜಿಲ್ಲೆಯ ಕಿಲ್ಪರಿ, ರತಿಘಾಟ ಹಾಗೂ ಗಢವಾಲ ಪ್ರದೇಶಗಳಲ್ಲಿ ಡಜನ್‌ಗಟ್ಟಲೆ ನರಭಕ್ಷಕ ಹುಲಿಗಳನ್ನು ಕೊಂದಿದ್ದಾರೆ. ಕಾಲಾಗಢ ಎಂಬಲ್ಲಿ ಚತುರ್ವೇದಿ ಎಂಬ ಅರಣ್ಯಾಧಿಕಾರಿ ಶವದ ಮೇಲೆ ಕಾದುಕುಳಿತು ಒಂದು ನರಹತ್ಯ ಹುಲಿಯನ್ನು ಕೊಂದಿದ್ದಾನೆ.

ಸುಂದರಬನದ ಸಾಗರ ಎಂಬ ನಡುಗಡ್ಡೆಯಲ್ಲಿ ಒಂದು ನರಭಕ್ಷಕ ಹುಲಿ ಇಬ್ಬರು ಇಂಗ್ಲೀಷರನ್ನು ಎತ್ತಿಕೊಂಡು ಹೋಗಿತ್ತು. ಒಸ್ಸಾರ ಹಾಗೂ ಚಾಂದಿ ಎಂಬ ಪ್ರದೇಶಗಳಲ್ಲಿಯೂ ಅನೇಕ ನರಭಕ್ಷಕ ಹುಲಿಗಳನ್ನು ಕೊಂದ ದಾಖಲೆಗಳಿವೆ. ಶಿಂಗಾಪುರದಲ್ಲಿ ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ನರಭಕ್ಷಕ ಹುಲಿಗಳು ಮನೆ ಮಾತಾಗಿದ್ದವು. ಆ ನಡುಗಡ್ಡೆಯಲ್ಲಿ ಹುಲಿಯ ಚರ್ಮ, ಮಾಂಸ ಹಾಗೂ ಕೊಬ್ಬುಗಳ ವ್ಯವಹಾರ ಅತಿ ಸೊಂಪಾಗಿ ನಡೆಯುತ್ತಿತ್ತು.

ನರಭಕ್ಷಕ ಹುಲಿಗಳ ಬಗ್ಗೆ ಇನ್ನೂ ಭಯಂಕರ ಉದಾಹರಣೆಗಳಿವೆ. ಚಿತ್ತು ಪಿಂಡಾರಿ ಎಂಬುವವನನ್ನು ನರಭಕ್ಷಕ ಹುಲಿ ತಿಂದಿತ್ತು. ಅವನ ಕತ್ತಿ, ಕುದುರೆಯ ಜೀನು ಹಾಗೂ ಅವನು ತೆಗೆದುಕೊಂಡು ಹೊರಟಿದ್ದ ಅಪ್ಪಾಸಾಹೇಬ ಭೋನ್ಸಲೆಗೆ ಬರೆದ ಪತ್ರ ಅವನ ತಲೆಬುರುಡೆಯೊಂದಿಗೆ ನಂತರ ಕಾಡಿನಲ್ಲಿ ಸಿಕ್ಕಿದ್ದವು. ಬರ್ಮಾ ದೇಶದಲ್ಲಿ ಕ್ಯಾಪ್ಟನ್ ಹಿಲ್ ಎಂಬುವನ ಮೇಲೆ ಹುಲಿ ಎರಗಿಬಿದ್ದಾಗ ಆತ ತನ್ನಲ್ಲಿದ್ದ ಕೇವಲ ಲಾಠಿಯ ಸಹಾಯದಿಂದ ಪಾರಾಗಿದ್ದ. ಮಧ್ಯಪ್ರದೇಶದ 'ಭಿಲ್' ಜಾತಿಯ ಗಿರಿ ಜನ ಮನುಷ್ಯ ತನ್ನ ಕೈಯಲ್ಲಿದ್ದ ಬಂದೂಕನ್ನು ಲಾಠಿಯಂತೆ ಬೀಸಿ ಒಬ್ಬ ಅರಣ್ಯಾಧಿಕಾರಿಯನ್ನು ನರಭಕ್ಷಕ ಹುಲಿಯ ದವಡೆಯಿಂದ ಬದುಕಿಸಿದ್ದ. ಆ ಬಡಪಾಯಿ ಭಿಲ್‌ನಿಗೆ ಬಂದೂಕು ಹಾರಿಸಲು ಗೊತ್ತಿರಲಿಲ್ಲ. ಹೀಗೆ ಇನ್ನೂ ಅನೇಕ ಉದಾಹರಣೆಗಳಿವೆ.

ಭಾರತದಲ್ಲಿ ಇತ್ತೀಚಿಗೆ ಸುಮಾರು ಎರಡು ದಶಕಗಳಿಂದ ನರಭಕ್ಷಕ ಹುಲಿಗಳ ಉಪಟಳ ಹೆಚ್ಚಾಗಿ ಕೇಳಿಲ್ಲ. ಹುಲಿಗಳು ಅತ್ಯಲ್ಪ ಸಂಖ್ಯೆಯಲ್ಲಿರುವುದೇ ಇದಕ್ಕೆ ಕಾರಣವೆಂದು ಹೇಳಬಹುದು. ಆದರೆ ಇತ್ತೀಚಿನ ಕೆಲವು ದಿನಗಳ ಹಿಂದೆ (ಫೆ. 17, 1976ರ ಪತ್ರಿಕೆ) ಬಂಗ್ಲಾದೇಶದ ಚಿತ್ತಗಾಂಗ್ ಪರ್ವತ ಪ್ರದೇಶದಲ್ಲಿ ಸುಮಾರು 30 ಜನರನ್ನು ಕೊಂದ ನರಹತ್ಯ ಹುಲಿಯ ಬಗ್ಗೆ ಉಲ್ಲೇಖವಿದೆ. ಈ ನರಹತ್ಯೆ ಹುಲಿ 1971ರಿಂದ ಕಾಸ್ಲಾಂಗ್ ಮೀಸಲು ಅರಣ್ಯದಲ್ಲಿ ಜನರನು ಕೊಂದಿದ್ದು ಎರಡು ತಿಂಗಳಲ್ಲಿ 10 ಜನರ ಬಲಿ ತೆಗೆದುಕೊಂಡಿತ್ತು. ಇದನ್ನು ಜೀವಂತ ಸೆರೆಹಿಡಿಯಲು ಸಹಾಯ ಕೋರಿ ಬಂಗ್ಲಾದೇಶದ ಅರಣ್ಯ ಇಲಾಖೆ ವಿಶ್ವವ್ಯಾಪಿ ಮನವಿ ಮಾಡಿತ್ತು.

ಗುಂಡಿಕ್ಕಿ ಗಾಯಗೊಳಿಸದೆ ಗುಂಡಿಕ್ಕಿ ಕೊಲ್ಲು: 'ಬೆಕ್ಕಿನ ವಂಶದ ಪ್ರಾಣಿಗಳಿಗೆ ಒಂಭತ್ತು ಜೀವಗಳಿರುತ್ತವೆ' ಎಂದು ಕೆಲವರು ಹೇಳುತ್ತಾರೆ. ಆದರೆ ಶಿಕಾರಿ ತನಗೆ ಒಂದೇ ಜೀವ ಇದೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡು ಭೂಮಿಯ ಮೇಲೆ ಅತಿ ಚಾತುರ್ಯ ಹಾಗೂ ಉಗ್ರ ಪ್ರಾಣಿಯೆನಿಸಿಕೊಂಡ ಮೃಗರಾಜ ಹುಲಿಯನ್ನು ಕೊಲ್ಲುವುದು ಅನಿವಾರ್ಯವೆನಿಸಿದರೆ ಸರಿಯಾಗಿ ಹಾಗೂ ನಿಖರವಾಗಿ, ಮರ್ಮಸ್ಥಾನಗಳಿಗೆ ಗುರಿಯಿಟ್ಟು ಒಂದೇ ಏಟಿನಿಂದ ಗುಂಡಿಕ್ಕಿ ಕೊಲ್ಲತಕ್ಕದ್ದು. ಇದು ನಿಜವಾದ ಕ್ರೀಡೆಯ ಅಥವಾ ಬೇಟೆಗಾರನ ಲಕ್ಷಣ. ಅವಶ್ಯವೆನಿಸಿದರೆ ಮಾತ್ರ ಕೂಡಲೆ ಎರಡನೆಯ ದಯಾಳು ಗುಂಡಿನಿಂದ ಗಾಯದಿಂದ ಬಳಲುತ್ತಿರುವ ತಾಪದಿಂದ ಅದನ್ನು ಕೊನೆಗಾಣಿಸಲೇಬೇಕು. ಅವಸರದಲ್ಲಿ ಭಯಾನಕ ಹುಲಿಗಳನ್ನು ಗುಂಡಿಕ್ಕಿ ಕೊಲ್ಲುವ ಗೋಜಿಗೆ ಹೋಗಕೂಡದು. ತನ್ನ ಆಯುಧದಲ್ಲಿ ದೃಢನಂಬಿಕೆ ಇರುವ ಗುರಿಕಾರ ಮಾತ್ರ ಹುಲಿಯ ಬೇಟೆಯಾಡತಕ್ಕದ್ದು. ಹುಲಿಯ ಬೇಟೆಗಾರನ ಧ್ಯೇಯ 'ಗುಂಡಿಕ್ಕಿ ಕೊಲ್ಲು' ಆಗಿರಬೇಕೇಹೊರತು 'ಗುಂಡಿಕ್ಕಿ ಗಾಯಗೊಳಿಸು' ಆಗಿರಕೂಡದು. ಹಾಗೆ ಮಾಡಿದ್ದಾದರೆ ಗಾಯಗೊಂಡ ಹುಲಿಯು ಭಯಾನಕ ನರಭಕ್ಷಕವಾಗಿ ಪರಿವರ್ತನೆಗೊಂಡು ಸುತ್ತಲಿನ ನಿರಪರಾಧಿ ಹಳ್ಳಿಯವರಿಗೆ ಭೂತಪ್ರೇತವಾಗಿ ಕಾಡುವ ಸಂಭವವಿರುತ್ತದೆ.

ಅಧ್ಯಾಯ 6

ಸಂತತಿ ಕ್ಷೀಣತೆ

ಮೊದಲಿನ ಮೈಸೂರು ಸಂಸ್ಥಾನದಲ್ಲಿ ಒಂದು ಸಮಯದಲ್ಲಿ ಹುಲಿಗಳು ಹೇರಳವಾಗಿದ್ದವು. ಅವು 'ಹಾನಿಕಾರಿ ಪ್ರಾಣಿ'ಗಳೆಂದು ಪರಿಗಣಿಸಲ್ಪಟ್ಟಿದ್ದವು. ಒಂದು ಹುಲಿಯನ್ನು ಕೊಂದರೆ 50 ರೂಗಳವರೆಗೆ ಸಂಭಾವನೆ ಹಾಗೂ ಪ್ರಶಸ್ತಿ ಪತ್ರಗಳನ್ನು ಕೊಟ್ಟ ದಾಖಲೆಗಳಿವೆ. ಆದರೆ ಇತ್ತೀಚೆಗೆ ಕೆಲವು ವರ್ಷಗಳಿಂದ ಅವುಗಳ ಸಂಖ್ಯೆ ತೀರ ಕಡಮೆಯಾಗಿದೆ. ಮನುಷ್ಯನು ಹುಲಿಯನ್ನು ಕೊಲ್ಲಬೇಕಾದರೆ ಅವನು ಅದಕ್ಕೆ 'ಕ್ರೀಡೆ' ಎಂದು ಕರೆಯುತ್ತಾನೆ. ಆದರೆ ಹುಲಿ ಮನುಷ್ಯನನ್ನು ಕೊಲ್ಲಲು ಹೋದರೆ ಅದಕ್ಕೆ 'ಕ್ರೂರಿ' ಎಂದು ಅಚ್ಚು ಒತ್ತುತ್ತಾನೆ. ಅಂದಮೇಲೆ 'ಅತ್ಯಾಚಾರ' ಹಾಗೂ 'ನ್ಯಾಯ' ಇವುಗಳ ಮಧ್ಯ ಅಂತರವೆಲ್ಲಿಯದು ?

ಕಾಡಿನಲ್ಲಿ ಪ್ರಭುತ್ವವನ್ನೇ ಸ್ಥಾಪಿಸಿ ಅತಿ ಸುಂದರ ಹಾಗೂ ಅಮೂಲ್ಯವೆನಿಸಿದ ಈ ಪ್ರಾಣಿ ಇಂದು ಜೀವಿಸುವುದೇ ದುಸ್ಸಾಧ್ಯವಾಗಿದೆ. ಮನುಷ್ಯನ ಈ ವಿಧ್ವಂಸಕ ಕೃತ್ಯಗಳಿಂದ ಹಿಂದೆ ತವರುಕಾಡು ಎನಿಸಿದ ಭಾರತದ ಅರಣ್ಯಗಳು ಈಗ ಬೆರಳಿನ ಮೇಲೆ ಎಣಿಸುವಷ್ಟು ಹುಲಿಗಳನ್ನು ಪಡೆದು ಅತಿ ಬಡವಾಗಿವೆ. ಇಂದಿನ ಆಪತ್ತಿನ ಸಂದರ್ಭದಲ್ಲಿ ಅಳಿದುಳಿದ ಹುಲಿಗಳನ್ನು ಕಾಪಾಡಿ ಉಳಿಸಿಕೊಳ್ಳಬೇಕಾಗಿದೆ. ಭಾರತ, ಬಂಗ್ಲಾದೇಶ, ನೇಪಾಳ ಹಾಗೂ ಭೂತಾನಗಳಲ್ಲಿಯೂ ಈ ಕಾರ್ಯ ನಡೆದರೆ ಕಾರ್ಯಸಿದ್ಧಿ ದೊರೆಯಬಲ್ಲದು. ಏಷಿಯಾಖಂಡದ ಇನ್ನುಳಿದ ದೇಶಗಳಲ್ಲಿಯಂತೂ ಬೇರೆ ವರ್ಗಗಳ ಹುಲಿಗಳೂ ಬಹುತೇಕ ನಿರ್ನಾಮದ ಹಂತವನ್ನು ಮುಟ್ಟಿವೆ ಅಥವಾ ನಿರ್ನಾಮವಾಗಿವೆ.

ಹುಲಿಗಳ ಸಂಹಾರ-ಕೆಲವು ವಿಧಗಳು ಹಾಗೂ ಕಾರಣಗಳು

ಇಷ್ಟೊಂದು ತೀವ್ರಗತಿಯಲ್ಲಿ ಹುಲಿಗಳ ಸಂತತಿ ಕಡಮೆಯಾಗಲು ಬೇರೆ ಕಾರಣ ಗಳೂ ಹಲವು. ಹುಲಿಗಳು ವಾಸಿಸಿದ ಕಾಡಿನ ವಿಸ್ತಾರ ಕುಗ್ಗಿದೆ. ಕಳೆದ 50ವರ್ಷಗಳಲ್ಲಿ ಭಾರತವು ಶೇಕಡಾ 60 ರಷ್ಟು ತನ್ನ ಅರಣ್ಯಪ್ರದೇಶವನ್ನು ಕಳೆದುಕೊಂಡು ಬಡವಾ ಗಿದೆ. ಹೆಚ್ಚಿನ ಪ್ರಮಾಣದಲ್ಲಿ ಅವುಗಳ ನಿವಾಸಸ್ಥಳಗಳಲ್ಲಿ ವಿನಾಕಾರಣ ಜನತೆ ಕೈಹಾಕಿ ತೊಂದರೆ ಕೊಟ್ಟಿದ್ದಾರೆ. ಅವುಗಳನ್ನು ಸಿಕ್ಕಾಪಟ್ಟೆ ಬೇಟೆಯಾಡಿದ್ದಾರೆ. ಚರ್ಮಕ್ಕೆಂದು ಅಕ್ರಮವಾಗಿ ಬೇಟೆಯಾಡಿಯೇ ಅವುಗಳಲ್ಲಿ ಮುಕ್ಕಾಲುಪಾಲು ಅಪಹರಿಸಿದ್ದಾರೆ. ಸಾಕಿದ ದನಕರುಗಳ ರಕ್ಷಣೆಗೆಂದು ಮಾರಕ ಕ್ರಿಮಿನಾಶಕಗಳಿಂದ ಅವುಗಳ ಕಗ್ಗೊಲೆಗೈದಿದ್ದಾರೆ.

ಬೃಹತ್ ಅಭಿವೃದ್ಧಿ ಯೋಜನೆಗಳು: ವನ್ಯಪ್ರಾಣಿಗಳಿಗೆಂದು ಪ್ರಕೃತಿ ದಯ ಪಾಲಿಸಿದ ಬೀಡು, ಅರಣ್ಯ ಪ್ರದೇಶಗಳನ್ನು ಅಸಂಖ್ಯಾತ ಚಿಕ್ಕ ಹಾಗೂ ಬೃಹತ್

ಬಹುಸಂಕಲ್ಪ ಅಭಿವೃದ್ಧಿ ಯೋಜನೆಗಳ ಹೆಸರಲ್ಲಿ ಅಂದರೆ ನೀರಾವರಿ ಹಾಗೂ ಜಲವಿದ್ಯುತ್ ಯೋಜನೆ, ಪುನರ್ಭೂಮಿ, ಪುನರ್ವಸತಿ ಹಂಚಿಕೆಗೆ, ಭೂಅಭಿವೃದ್ಧಿ ಯೋಜನೆಗೆ ಹಾಗೂ ಕಟ್ಟಿಗೆ, ದಿಮ್ಮಿಗಳ ಮೇಲೆ ಅವಲಂಬಿಸಿರತಕ್ಕ ಅನೇಕ ಕೈಗಾರಿಕೋದ್ಯಮಗಳಿಗೆ, ಗಣಿಕಾಮಗಾರಿ, ಪರದೇಶಗಳಿಂದ ತಂದ ಹಾಗೂ ಇನ್ನಿತರ ವಿಶೇಷ ಕೈಗಾರಿಕೋದ್ಯಮಗಳಿಗೆ ಅವಶ್ಯವಿದ್ದ ಅನೇಕ ಜಾತಿಯ ಗಿಡಮರಗಳನ್ನು ಹಚ್ಚಿ ಬೆಳಸುವುದರ ಸಲುವಾಗಿ ಹಾಗೂ ವಿದ್ಯುದ್ವಾಹಕ ತಂತಿಗಳನ್ನು ಎಳೆಯಲು ಬೇಕಾದ ಪಟ್ಟಿಪ್ರದೇಶಗಳಿಗೆ, ಕಾಡುಗಳನ್ನು ಕಡಿಯುವುದರಿಂದ ವನ್ಯಪ್ರಾಣಿಗಳ ಅತಿಸುಪ್ರಸಿದ್ಧ ಅನೇಕ ವಾಸಸ್ಥಾನಗಳು ಈಗ ಮೈದಾನ ಪ್ರದೇಶಗಳಾಗಿ ಕಾಣುತ್ತಿವೆ. ಈ ನದಿ-ಕೊಳ್ಳ ಅಭಿವೃದ್ಧಿ ಯೋಜನೆಗಳು ಪ್ರಾರಂಭವಾದವೆಂದರೆ ತೀರಿತು, ಇವು ನಿಸರ್ಗವನ್ನು ಹಣಿದು, ದಣಿಸಿ, ಉಸಿರಾಡಿಸದಂತೆ ಮಾಡುತ್ತವೆ. ವನ್ಯಮೃಗಗಳ ವಸಾಹತು ಪ್ರದೇಶವಾದ ಅರಣ್ಯಗಳು ಈ ರೀತಿಯ ಜಲಾಶಯಗಳಿಂದ ಮುಳುಗಡೆಯಾಗಿ ಅಥವಾ ಮುಳುಗಡೆ ಪ್ರದೇಶದ ಜನರ ಪುನರ್ವಸತಿಗಾಗಿ ಅಥವಾ ಅವರಿಗೆ ಬೇಸಾಯಕ್ಕೆಂದು ಇದ್ದ ಗಿಡಮರಗಳನ್ನು ಕಡಿಯುವುದರಿಂದ ಮೊದಲೇ ಕಡಮೆಯಾಗಿದ್ದ ಕಾಡುಪ್ರಾಣಿಗಳು ಇನ್ನಷ್ಟು ಕಡಮೆ ಆಗಿವೆ. ಮೀಸಲು ಕಾಡುಗಳ ಮಧ್ಯ ಹಾಗೂ ವನ್ಯಮೃಗಧಾಮಗಳ ಪಕ್ಕದಲ್ಲಿ ಅನೇಕ ಕೈಗಾರಿಕೋದ್ಯಮಗಳು ಸ್ಥಾಪಿಸಲ್ಪಟ್ಟಿವೆ. ಅವುಗಳಿಂದ ಭೂ. ಜಲ ಹಾಗೂ ವಾಯುಕಲ್ಮಶಗೊಳಿಸಲ್ಪಟ್ಟು ಅನೇಕ ವನ್ಯಮೃಗಗಳ ವಿನಾಶಕ್ಕೆ ಕಾರಣವಾಗಿವೆ.

ಬೃಹತ್ ಪ್ರಮಾಣದಲ್ಲಿ ಕಾಡುಮೇಡುಗಳನ್ನು ಕಡಿದು ನಾಶಮಾಡುತ್ತಿರುವುದರಿಂದ ವನ್ಯಪ್ರಾಣಿಗಳ ನಿರ್ಭಯ ಜೀವನಕ್ಕೆ ಕುತ್ತು ಬಂದೊದಗುವುದಲ್ಲದೆ ಅವುಗಳ ನೈಸರ್ಗಿಕ ಆಹಾರ ಸಿಗುವುದೂ ದುರ್ಲಭವಾಗುತ್ತದೆ. ಅಲ್ಲಲ್ಲಿ ಕೂಲಿಯವರ ಬಿಡಾರಗಳಲ್ಲಿ ಒಮ್ಮೆಲೇ ಸೇರಿದ ಸಾವಿರಾರು ಜನರು, ಯೋಜನೆಯ ಕಾರ್ಯನಿರ್ವಾಹಕರು, ಕ್ಯಾಂಪುಗಳನ್ನು ಬೆನ್ನಟ್ಟಿಬಂದ ಬೇಟೆಗಳ್ಳರು ಹಾಗೂ ಗುಡ್ಡಗಾಡು ಜನರು, ಕಾಡು ಕಡಿಯುವುದರ ಜೊತೆಗೆ ಮಾಂಸಾಹಾರಿ ಪ್ರಾಣಿಗಳಾದ, ಹುಲಿ, ಚಿರತೆ, ಸಿಂಹಗಳ ನೈಸರ್ಗಿಕ ಆಹಾರವಾದ ಜಿಂಕೆ, ಕಡವೆ, ಕಾಡುಹಂದಿ, ಕಾಡುಕುರಿ ಮುಂತಾದುವುಗಳನ್ನು ಸುತ್ತಲಿನ ವರ್ತಕರು ರಹದಾರಿ ಇಲ್ಲದೆ ಬೇಟೆಯಾಡಿ ಕೊಂದು ಅಲ್ಲಿಯ ಕೂಲಿ ಜನರಿಗೆ ಮಾಂಸ ಮಾರುವುದು ಹೆಚ್ಚಾಗಿ ಕಂಡುಬರುತ್ತದೆ. ಈರೀತಿ ಮಾಂಸಾಹಾರಿ ಪ್ರಾಣಿಗಳಿಗೆ ಆಹಾರದ ಕೊರತೆಯನ್ನುಂಟುಮಾಡುತ್ತಾರೆ. ಕಾಡೆಲ್ಲ ಬಟ್ಟಬಯಲು ಆದ ಕೂಡಲೇ ಅಲ್ಲಿದ್ದ ವನ್ಯಪ್ರಾಣಿಗಳು ಜನರ ಕಣ್ಣಿಗೆ ಬಿದ್ದಾಗ ಅವುಗಳನ್ನು ಕೊಂದು ಮುಗಿಸಿಬಿಡುವುದುಂಟು.

ಭಾರೀ ಪ್ರಮಾಣದ ಜಲಾಶಯ ಯೋಜನೆಗಳು ಮುಗಿಯಬೇಕಾದರೆ ಹಲವು ವರ್ಷಗಳು ಬೇಕಾಗುವುದು ಸ್ವಾಭಾವಿಕ. ಈ ದೀರ್ಘ ಕಾಲದಲ್ಲಿ ಎಲ್ಲ ಗಿಡಮರಗಳನ್ನು ಕಡಿದು ಅಲ್ಲಲ್ಲಿ ಇದ್ದ ಹುಲ್ಲುಗಾವಲು ಪ್ರದೇಶಗಳನ್ನು ಸುಟ್ಟು ಸಂಪೂರ್ಣ

ಬಯಲು ಮಾಡಿದಾಗ ಮೊದಲಿನಂತಹ ದಟ್ಟಕಾಡನ್ನು ಪುನಃ ಪಡೆಯುವುದು ಕನಸೇ ಸರಿ.

ಮುಳುಗಡೆ ಪ್ರದೇಶದ ಜನರ ಪುನರ್ವಸತಿಗಾಗಿ ಮತ್ತು ಸ್ಥಳಾಂತರ ಕೃಷಿಗೆಂದು ಕಾಡನ್ನು ಕಡಿದು ಚುಂಗು, ಎಲೆಗಳನ್ನು ಸುಟ್ಟು ಭಸ್ಮಮಾಡಿದರು. ಈರೀತಿ ಸುಟ್ಟು ಹರಡಿದ ಬೂದಿಯಿಂದ ತಾತ್ಕಾಲಿಕವಾಗಿ ಭೂಮಿಗೆ ಕೆಲವೊಂದು ಸಸ್ಯಪೋಷಕವಸ್ತು ದೊರೆತುದೇನೋ ನಿಜ. ಆದರೆ ಆದರಿಂದ ದೊರೆಯಬಹುದಾಗಿದ್ದ ಬೃಹತ್ಪ್ರಮಾಣದ ಸಾವಯವ ವಸ್ತು ನಾಶವಾಗುತ್ತದೆ. ಅತ್ಯಂತ ಸಮೃದ್ಧಿಯಾದ ನೈಸರ್ಗಿಕವಾದ ಸಸ್ಯಜೀವನವಿದ್ದರೂ ಉಷ್ಣಕಟಿಬಂಧದ ಮಣ್ಣು ಸರ್ವಸಾಮಾನ್ಯವಾಗಿ ಫಲವತ್ತಾಗಿರದೆ ಬಡವಾಗಿದೆ. ಭೂಮಿಯ ಸತ್ವ ಸಂಪೂರ್ಣ ಹಾಳಾಗಿ ಕೆಲವೇ ವರ್ಷಗಳಲ್ಲಿ ಭೂಮಿ ಬಂಜೆಯಾಗುತ್ತದೆ.

ಬೆಂಕಿಯಿಂದ ನಷ್ಟ: ಇತ್ತೀಚೆಗೆ ಹಳ್ಳಿಯ ಜನರು ಕಾಡಿಗೆ ಬೆಂಕಿ ಇಟ್ಟು ವಿನಾಕಾರಣ ಸುಡುವ ಕಾರ್ಯದಲ್ಲಿ ತತ್ಪರರಾಗಿದ್ದಾರೆ. ಕಾಡನ್ನು ಸುಟ್ಟು ಮುಂಗಾರು ಮಳೆಗೆ ಒಳ್ಳೆಯ ಚಿಗುರು ಹುಲ್ಲನ್ನು ದನಕರುಗಳಿಗೆ ದೊರಕಿಸುವುದೇ ಇದರ ಉದ್ದೇಶ. ಕಾಡಿಗೆ ಬೆಂಕಿ ಇಡುವುದರಿಂದ ಬೆಲೆಬಾಳುವ ನಾಟ ಹಾಗೂ ಇನ್ನಿತರ ಕಾಡಿನ ವಸ್ತುಗಳು ಸುಟ್ಟು ಭಸ್ಮವಾಗುವುದಲ್ಲದೆ ಅಲ್ಲಿದ್ದ ವನ್ಯಮೃಗಗಳೂ ಹಾಗೂ ಅವುಗಳ ಮರಿಗಳೂ ಮತ್ತು ಮೊಟ್ಟೆ ಮರಿಗಳಿದ್ದ ಪಕ್ಷಿಗಳ ಗೂಡುಗಳು ಸುಟ್ಟು ಅಪಾರಹಾನಿ ಸಂಭವಿಸುತ್ತದೆ ಯೆಂಬುವನ್ನು ಜನತೆ ಮನಗಾಣಬೇಕು. ಹಳ್ಳಿಯ ಜನರು ಬೆಂಕಿಯಿಂದಾಗುವ ಅನಾಹುತವನ್ನು ಅರಿತು ತಾವು ಮಾಡುತ್ತಿರುವ ದುಷ್ಕೃತ್ಯಕ್ಕೆ ಪಶ್ಚಾತ್ತಾಪಪಡದೆ ನೈಸರ್ಗಿಕ ಕಾಡು ಹಾಗೂ ಅದರಲ್ಲಿರತಕ್ಕ ವನ್ಯಮೃಗಗಳನ್ನು ಸಂರಕ್ಷಿಸಲು ಹೆಣಗದೇ ಹೋದರೆ ತಮ್ಮ ಗೋರಿಯನ್ನು ತಾವೇ ಕಟ್ಟಿಕೊಂಡಂತೆಯೇ ಸರಿ.

ನಮ್ಮ ಚಿತ್ರವಿಚಿತ್ರವಾದ ಸಸ್ಯ ಹಾಗೂ ವನ್ಯಮೃಗಗಳ ಸೌಂದರ್ಯ ಹಾಗೂ ಅವುಗಳ ಉಪಯುಕ್ತತೆಯ ಬಗ್ಗೆ ನಮಗೆಷ್ಟು ಗೊತ್ತಿದೆ? ದುರದೃಷ್ಟವಶಾತ್ ವನ್ಯ ಪ್ರಾಣಿಗಳ ಸ್ಥಿತಿಗತಿಯ ಬಗ್ಗೆ ಜನಾಭಿಪ್ರಾಯ ತೀರಶೂನ್ಯ. ಅರಣ್ಯ ಹಾಗೂ ಅರಣ್ಯವಾಸಿ ಪ್ರಾಣಿಗಳ ಬಗ್ಗೆ ತಳೆದ ಅವರ ಅಜ್ಞಾನ ಹಾಗೂ ತಾತ್ಸಾರ ಮನೋವೃತ್ತಿ ಕೂಡ ಇದಕ್ಕೆ ಕಾರಣ. ಇನ್ನೂ ಕೀಳೆಂದರೆ 'ಕಂಡಾಗ ಕೊಲ್ಲು' ಎಂಬ ಮನೋ ಭಾವನೆಯೇ ಹೆಚ್ಚು.

ವನ್ಯಪ್ರಾಣಿಗಳು ಬಹುಮೌಲ್ಯದ ಪಿತ್ರಾರ್ಜಿತ ಸೊತ್ತು. ಸದ್ಯಕ್ಕೆ ವನ್ಯಪ್ರಾಣಿ ಗಳ ಸಮಸ್ಯೆ ಅತಿ ಚಿಂತಾಜನಕವಾಗಿದೆ. ಇಂತಹ ಸ್ಥಿತಿಗೆ ಬರಲು ಆಸ್ಫೋಟನ ಗೊಳ್ಳುತ್ತಿರುವ ಜನರ ಜೀವನಕ್ಕೆ ಆವಶ್ಯವಿದ್ದ ನಿವಾಸಸ್ಥಳ, ಆಹಾರ, ಉರುವಲು, ಕಟ್ಟಿಗೆ ಹಾಗೂ ಮನೆಕಟ್ಟಲು ನಾಟಗಳು ಮುಂತಾದುವುಗಳ ಅಪರಿಮಿತ ಬೇಡಿಕೆ ಕಾರಣಗಳಾಗಿವೆ. ಇವೂ ಅಲ್ಲದೆ ಆಗಾಗ ಸಂಭವಿಸುತ್ತಿರುವ ಯುದ್ಧಗಳೂ ಕಾರಣ.

ರಾಕ್ಷಸ ಪ್ರವೃತ್ತಿ: ಮನುಷ್ಯನು ನಿಸರ್ಗದ ನಿಯಮಗಳಿಗೆ ಹೊಂದಿಕೊಂಡು ಹೋಗುವ ಬದಲಾಗಿ ಅದನ್ನು ಬಲಪ್ರಯೋಗದಿಂದ ದಬ್ಬಾಳಿಕೆಗೊಳಪಡಿಸುವುದು ರಾಕ್ಷಸ ಪ್ರವೃತ್ತಿಯೇ ಸರಿ. ಮಾನವ ಜನಾಂಗ ಎಲ್ಲ ಪ್ರಾಣಿಗಳಿಗಿಂತ ಹೆಚ್ಚು ವಿಕಸಿತವಾಗಿದ್ದು ಬುದ್ಧಿಮತ್ತೆಯಲ್ಲಿ ಊರ್ಜಿತಾವಸ್ಥೆಯನ್ನು ಹೊಂದಿದ್ದರೂ ತನ್ನ ಸ್ವಾರ್ಥದ ಲಾಭಕ್ಕೋಸ್ಕರ ಯಾವ ಕರುಣೆಯಿಲ್ಲದೆ ನಿಸರ್ಗದ ಸಮತೋಲನವನ್ನು ಉಲ್ಲಂಘಿಸುತ್ತಾನೆ. ಭೂಮಿಯ ಮೇಲಿನ ಪ್ರತಿಯೊಬ್ಬ ಮನುಷ್ಯ ತನ್ನ ಸುತ್ತಮುತ್ತಣ ಪರಿಸರವನ್ನು ಅವಲಂಬಿಸಿರಬೇಕಾಗುತ್ತದೆಂಬುದು ವಿಜ್ಞಾನ ಸಂಶೋಧನೆಗಳಿಂದ ಖಚಿತ ವಾಗಿದೆ. ಆದಾಗ್ಯೂ ಪರಿಸರ, ಮಾನವನ ಅನುಕೂಲತೆಗಳ ವಿರುದ್ಧ ಸ್ಪರ್ದಿಸುತ್ತದೆ ಯೆಂದು ತಿಳಿದು ಅದನ್ನು ನಾಶಪಡಿಸಲು ಅವನು ಸಾಧ್ಯವಾದ ಪ್ರಯತ್ನಗಳನ್ನೆಲ್ಲ ಮಾಡುತ್ತಾನೆ. ಇದು ತನ್ನನ್ನು ತಾನೇ ನಾಶಮಾಡಿಕೊಳ್ಳುವ ಪ್ರಯತ್ನ.

ಅಸಂಖ್ಯಾತ ಪ್ರಾಣಿಗಳು ಮಾನವಕೋಟಿಯ ಸಂಗಡ ಈ ಭೂಮಿಯ ಮೇಲೆ ಪುರಾತನ ಕಾಲದಿಂದಲೂ ಉಳಿದು ಜೀವಿಸಿಕೊಂಡು ಬಂದಿದ್ದು ಈಗ ಮಾನವನು ಅವುಗಳಿಂದ ಬೇರ್ಪಡಿಸಿಕೊಳ್ಳಲು ಪ್ರಯತ್ನಿಸಿದರೆ ವಿನಾಶಕ್ಕೆ ದಾರಿ ಮಾಡಿಕೊಟ್ಟಂತೆ. ಪಕ್ಷಿಗಳು ಹಾಗೂ ವನ್ಯಪ್ರಾಣಿಗಳು ಮನುಷ್ಯನಿಗಿಂತ ಅತಿ ಯಶಸ್ವಿಯಾಗಿ ಜೀವಿಸುತ್ತ ಬಂದಿವೆ. ವಲಯ ನಿರ್ಮಾಣ, ಆಹಾರ ಪೂರೈಕೆ ಹಾಗೂ ಸಂತತಿ ನಿಯಂತ್ರಣಗಳಲ್ಲಿ ಇವುಗಳ ಅತಿ ಜಾಣತನದ ವ್ಯವಹಾರ ಮಾನವರಿಗೆ ಆದರ್ಶಪ್ರಾಯವಾಗಿವೆ.

ಸಮತೋಲನೆ: ಸಾಮಾನ್ಯವಾಗಿ ಹುಲಿಗಳು ತಮ್ಮ ನೈಸರ್ಗಿಕ ಆಹಾರವಾದ ಜಿಂಕೆ, ಕಡವೆ, ಕಾಡುಹಂದಿ, ಕಾಡುಕುರಿ, ಕೃಷ್ಣಮೃಗ ಮೊದಲಾದ ಕಾಡುಪ್ರಾಣಿಗಳ ಮೇಲೆ ಬೇಟೆಯಾಡಿ ಜೀವಿಸುತ್ತವೆ. ಈ ಪ್ರಾಣಿಗಳು ಸಾಕಷ್ಟು ಸಂಖ್ಯೆಯಲ್ಲಿ ಇದ್ದ ಕಾಡಿನಲ್ಲಿಯೇ ಹುಲಿಗಳು ವಾಸವಾಗಿರುವುದು ಸ್ವಾಭಾವಿಕ. ಹಾಗೆ ಇದ್ದಾಗ ಮಾತ್ರ ನಿಸರ್ಗ ಹೊಂದಿದ ಸಸ್ಯಪ್ರಾಣಿಗಳ ಹಾಗೂ ಪ್ರಾಣಿ-ಪ್ರಾಣಿಗಳ ಮಧ್ಯೆ ಇರುವ ಸಮತೋಲನವನ್ನು ಕಾದುಕೊಳ್ಳಲು ಅನುಕೂಲವಾಗುವುದು. ಈ ನಿಸರ್ಗದ ಸಮ ತೋಲನ ಒಮ್ಮೆ ಏರುಪೇರು ಆದರೆ ತೀರಿತು ಎಲ್ಲವೂ ವಿಕೋಪಕ್ಕೆ ಹೋಗುತ್ತದೆ. ಹೇಗೆಂದರೆ, ಕಾಡಿನಲ್ಲಿ ಜೀವಿಸುವ ಮಾಂಸಭಕ್ಷಕ ಪ್ರಾಣಿಗಳಾದ ಹುಲಿ, ಚಿರತೆ, ಸಿಂಹ ಮೊದಲಾದವುಗಳನ್ನು ಹೆಚ್ಚು ಪ್ರಮಾಣದಲ್ಲಿ ಗುಂಡಿಕ್ಕಿ ಕೊಂದು ನಾಶಮಾಡಿದಾಗ ಸಸ್ಯಾಹಾರಿ ಪ್ರಾಣಿಗಳಾದ ಜಿಂಕೆ, ಕಡವೆ, ಕಾಡುಕುರಿ, ಕಾಡುಹಂದಿಗಳ ಸಂಖ್ಯೆ ಮಿತಿ ಮೀರಿ ಬೆಳೆದು ಅವು ಕಾಡಿನ ಅಂಚಿನಲ್ಲಿದ್ದ ಹೊಲಗದ್ದೆಗಳ ಮೇಲೆ ಹಿಂಡುಹಿಂಡುಗಳಲ್ಲಿ ಧಾಳಿಮಾಡಿ ಬೆಳೆಗಳನ್ನು ಹಾಳುಮಾಡುತ್ತವೆ. ರೈತರು ಸಸ್ಯಾಹಾರಿ ಮೃಗಗಳಿಂದ ಬೆಳೆಗಳು ನಾಶವಾಗುತ್ತವೆಂದು ನಿರ್ದಯೆಯಿಂದ ತಮ್ಮಲ್ಲಿದ್ದ ಬೆಳೆಗಳ ಸಂರಕ್ಷಣೆಗೆಂದು ಇದ್ದ ಬಂದೂಕುಗಳಿಂದ ಅವುಗಳನ್ನು ಗುಂಡಿಕ್ಕಿ ಕೊಂದು ಮಾಂಸಾಹಾರಿ ಮೃಗಗಳಿಂದ ಅಪಹರಿಸಿದಾಗ ಹುಲಿ, ಚಿರತೆ, ಸಿಂಹಗಳು ಹತ್ತಿರದ ಹಳ್ಳಿಗಳನ್ನು ಹೊಕ್ಕು ದನಕರು ಗಳನ್ನು ತಿನ್ನಲು ಪ್ರಯತ್ನಿಸುತ್ತವೆ.

ಆಗಾಗ ಬೆಳೆಗಳ ಮೇಲೆ ದಾಳಿಮಾಡುವ ಜಿಂಕೆ, ಕಡವೆ, ಕಾಡುಹಂದಿ ಮತ್ತು ಕಾಡಾನೆಗಳನ್ನು ಕಾದು ಹೊಡೆದಟ್ಟಿಸಿ ಬೆಳೆಗಳನ್ನು ಕಾಪಾಡಿಕೊಳ್ಳುವುದರಲ್ಲಿ ಜಾಣತನ ವಿದೆ. ವನ್ಯಮೃಗಗಳ ಸಂರಕ್ಷಣೆಯೆಂದರೆ ಕಾಡಿನಲ್ಲಿದ್ದ ಎಲ್ಲ ಪ್ರಾಣಿಗಳ ರಕ್ಷಣೆಯಾಗಿರದೆ ಉಪಯುಕ್ತ, ಲಾಭದಾಯಕ ಹಾಗೂ ಸುಂದರ ಪಶುಪಕ್ಷಿಗಳಾದ ಹುಲಿ, ಚಿರತೆ ಸಿಂಹ, ಜಿಂಕೆ, ಸಾರಂಗ, ಕಾಡುಕುರಿ, ನವಿಲು, ಕಾಡುಕೋಳಿ ಮೊದಲಾದವುಗಳನ್ನು ಯೋಗ್ಯ ರೀತಿಯಲ್ಲಿ ರಕ್ಷಿಸುವಿಕೆ, ಕ್ಷುಲ್ಲಕ ಹಾಗೂ ಹಾನಿಕಾರಕ ಮಾಂಸಾಹಾರಿ ಪ್ರಾಣಿಗಳಾದ ಕಾಮನಾಯಿ (ಚೀರುನಾಯಿ), ತೋಳ, ಕತ್ತೆ, ಕಿರುಬ, ನರಿ, ಮೊದಲಾದವುಗಳನ್ನು ನಿಸ್ಸಂದೇಹವಾಗಿ ಕೊಂದು ನಾಶಪಡಿಸಬೇಕು.

ಮಾರಕ ಪದಾರ್ಥಗಳ ದುರುಪಯೋಗ: ಇತ್ತೀಚೆಗೆ ಕೆಲವು ಶಾಖಾಹಾರಿ ಕಾಡುಪ್ರಾಣಿಗಳ ದೇಹಗಳನ್ನು ಕೊಯ್ದು ಪರೀಕ್ಷಿಸಿದಾಗ ವಿಷಪೂರಿತ ಔಷಧಿಗಳು ಕಂಡು ಬಂದ ಬಗ್ಗೆ ಅನೇಕ ದಾಖಲೆಗಳಿವೆ. ಸಂರಕ್ಷಣೆಗೆಂದು ಕ್ರಿಮಿನಾಶಕಗಳಿಂದ ಸಿಂಪಡಿಸಲ್ಪಟ್ಟ ಬೆಳೆಗಳನ್ನು ಸೇವಿಸಿದಾಗ ಅಥವಾ ವಿಮಾನಗಳಿಂದ ಕ್ರಿಮಿನಾಶಕಗಳನ್ನು ಹೊಲಗದ್ದೆಗಳಿಗೆ ಸಿಂಪಡಿಸಿದಾಗ ಪಕ್ಕದಲ್ಲಿದ್ದ ಅರಣ್ಯ ಪ್ರದೇಶಗಳ ಮೇಲೆ ಹಾರಿಹೋದಾಗ ಇಂತಹ ಮಾರಕ ಪದಾರ್ಥಗಳು ಪ್ರಾಣಿಗಳ ದೇಹಗಳನ್ನು ಸೇರುವ ಸಾಧ್ಯತೆಗಳಿವೆ. ಕೆಲವು ಸಮಯಗಳಲ್ಲಿ ಇಲಿ, ಹೆಗ್ಗಣ ನಾಶಕ್ಕೆಂದು ಇಟ್ಟ ಪದಾರ್ಥವನ್ನು ಸೇವಿಸಿ ಅನೇಕ ಕಾಡುಪ್ರಾಣಿಗಳು ಹಾಗೂ ಪಕ್ಷಿಗಳು ಮೃತ್ಯುವನ್ನಪ್ಪಿದ ಪ್ರಸಂಗಗಳೂ ಇವೆ. ಮಾರಕ ಪದಾರ್ಥಗಳಿಂದ ಕಾಡಿನಲ್ಲಿ ಇನ್ನೊಂದು ವಿಧದಲ್ಲಿ ವನ್ಯಪ್ರಾಣಿಗಳ ಹತ್ಯೆ ವಾಗುವ ಸಾಧ್ಯತೆಯೆಂದರೆ ಸಸ್ಯನಾಶಕ ಮಾರಕ ಪದಾರ್ಥಗಳನ್ನು ಅವು ಒಣಗಿ ಸಾಯಲೆಂದು ಗಿಡಗಳಿಗೆ ಲೇಪಿಸಿದಾಗ ಅವುಗಳನ್ನು ನೆಕ್ಕುವುದರಿಂದ.

ಏಕಾಂಗಿ ಪ್ರಾಣಿ: ಹುಲಿ ಏಕಾಂಗಿಯಾಗಿ ಜೀವಿಸುವ ಪ್ರಾಣಿ. ಸಿಂಹಗಳು ಗುಂಪುಗಳಲ್ಲಿ ಜೀವಿಸುವಂತೆ ಜೀವಿಸದೆ ಹುಲಿಗಳು ಒಂಟಿಯಾಗಿ ಜೀವಿಸುತ್ತವೆ. ಏಕಾಂಗಿ ಹೆಣ್ಣುಹುಲಿಗೆ ತನ್ನ ಮರಿಗಳನ್ನು ಹೆಚ್ಚು ಜೋಪಾನ ಮಾಡಲು ಗೌಪ್ಯ ಹಾಗೂ ಸುರಕ್ಷಿತ ಸ್ಥಳಗಳ ಅವಶ್ಯಕತೆ ಇದೆ. ಹುಲಿಮರಿಗಳು ಹುಟ್ಟಿದಾಗ ಕಣ್ಣು ತೆರೆಯದೆ ಅಸಹಾಯಕ ಸ್ಥಿತಿಯಲ್ಲಿ ಹುಟ್ಟುತ್ತವೆ. ಮರಿಗಳಿಗೆ ತಾಯಿಯ ಕಾಳಜಿ ಪೂರ್ವಕ ಪೋಷಣೆ ಯಾವಾಗಲೂ ಅತ್ಯಾವಶ್ಯಕ. ಕೊನೆಯಪಕ್ಷ ಒಂದು ತಿಂಗಳ ಮಟ್ಟಿಗಾದರೂ ಏಕಾಂತ ಹಾಗೂ ತೊಂದರೆಯಿಲ್ಲದೆ ಹೊಂಚಿಕೊಳ್ಳುವ ಸ್ಥಳ ಬೇಕೇ ಬೇಕು. ದುರದೃಷ್ಟವಶಾತ್ ಹೆಚ್ಚು ಕಾಮಗಾರಿ ಕೆಲಸಗಳು ನಡೆಯುತ್ತಿರುವ ಕಾಡುಗಳಲ್ಲಿ ಇಂತಹ ಮೂಲೆಗಳೇ ಉಳಿದಿಲ್ಲ. ಹುಲಿಗಳು ತಮ್ಮ ಮರಿಗಳನ್ನು ಹಾಕಿ ಪೋಷಿಸುವ ಸಮಯ ನವೆಂಬರ್‌ದಿಂದ ಜೂನ್‌ವರೆಗೆ ಇದ್ದು ಇದೇ ಸಮಯಕ್ಕೆ ಕಾಡಿನಲ್ಲಿ ಕಾಮಗಾರಿ ಕೆಲಸಗಳು ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತವೆ. ಹಳ್ಳಿಗಳ ಅಕ್ಕಪಕ್ಕದಲ್ಲಿ ದನಕರುಗಳಿಗೆ ಮೇವು ಹಾಗೂ ನೀರು ಸಿಕ್ಕದೇ ಇರುವುದರಿಂದ ಅವುಗಳನ್ನು ಅರಣ್ಯಗಳಲ್ಲಿ ಹೊಕ್ಕು ಮೇಯಿಸುವುದುಂಟು. ಮನುಷ್ಯನ ಈ ರೀತಿಯ ಅನೇಕ ತೊಂದರೆಗಳಿಂದ ಅದೇ ಆಗ ಹುಟ್ಟಿದ ಹುಲಿ ಮರಿಗಳನ್ನು ಪೋಷಿಸುವಲ್ಲಿ

ವ್ಯತ್ಯಾಸವಾಗಿ ಮರಿಗಳು ಹೆಚ್ಚಿನ ಪ್ರಮಾಣದಲ್ಲಿ ಮೃತ್ಯುವಿನ ದವಡೆಯಲ್ಲಿ ಸಿಲುಕು ತ್ತವೆ.

'ಅಧಿಕ ಆಹಾರ ಬೆಳೆಸುವ ಆಂದೋಲನ'ದ ಹೆಸರಲ್ಲಿ ಗುಡ್ಡಗಾಡು ಹಾಗೂ ಹಳ್ಳಿಯ ಜನರು ಹುಲಿಗಳು ಬೇಟೆಯಾಡಿ ತಿನ್ನುವ ಪ್ರಾಣಿಗಳನ್ನು ಹಿಂಡುಹಿಂಡುಗಳಲ್ಲಿ ಕೊಲೆಗೈದು ಅವುಗಳ ಸಂಖ್ಯೆ ಇಳಿಮುಖಗೊಳಿಸಿದ್ದಾರೆ. ಅವುಗಳ ಮಾಂಸವನ್ನು ಪಟ್ಟಣಗಳಲ್ಲಿ ಮಾರಲು ಬೇಟೆಗಳ್ಳರು ಅಕ್ರಮ ಬೇಟೆಯಾಡುತ್ತಾರೆ. ಪ್ರಕೃತಿ ನಿಯಮ ದಂತೆ ಮಾಂಸಾಹಾರಿ ಪ್ರಾಣಿಗಳು ತಮ್ಮ ಬೇಟೆಯ ಪ್ರಾಣಿಗಳು ನಶಿಸಿ ಹೋಗುವುದರ ಪರಿಣಾಮವಾಗಿ ಅವೂ ನಿರ್ಮೂಲವಾದವು. ಈ ರೀತಿಯಲ್ಲೂ ದೇಶದ ಅನೇಕ ಭಾಗಗಳಲ್ಲಿ ಹುಲಿಗಳು ನಿರ್ನಾಮವಾದವು.

ಹುಲಿಗಳು ವಾಸಮಾಡುವ ಕಾಡುಗಳ ಮಧ್ಯೆ ಜೇನುಹುಟ್ಟಿನಂತೆ ಅಲ್ಲಲ್ಲಿ ಹಳ್ಳಿಗಳು ಹಾಗೂ ಹೊಲಗದ್ದೆಗಳು ಸೇರಿವೆ. ಹಳ್ಳಿಯ ಜನರು ತಮ್ಮನ್ನು ಹಾಗೂ ತಮ್ಮ ಆಸ್ತಿಪಾಸ್ತಿಯನ್ನು ಕಾಪಾಡಿಕೊಳ್ಳಲು ಹಕ್ಕಿನಿಂದಾಗಲಿ ಅಥವಾ ಅಕ್ರಮದಿಂದಾಗಲಿ ವನ್ಯಪ್ರಾಣಿಗಳನ್ನು ತೊಂದರೆಗೀಡುಮಾಡಿ. ಕೆಲವು ಸಂದರ್ಭಗಳಲ್ಲಿ ಈ ಒಂದು ಕಾರಣ ವನ್ನು ಮುಂದೊಡ್ಡಿ ತಮ್ಮ ಲಾಭಕ್ಕಾಗಿ ಅವುಗಳನ್ನು ಬೇಟೆಯಾಡಿ ಬೋನು ಅಥವಾ ಬಲೆಗಳಿಂದ ಸೆರೆಹಿಡಿದು ಕೊಂದರು.

ಜನ್ಮಸಿದ್ಧ ಹಕ್ಕು: ಹುಲಿಗಳ ಬೇಟೆಯಾಡುವುದು ಕೆಲವರಿಗೆ ಜನ್ಮಸಿದ್ಧ ಹಕ್ಕಾಗಿತ್ತು. ಅದನ್ನು ಗುಂಡಿಕ್ಕಿ ಕೊಲ್ಲುವುದು ಒಂದು ಮಹಾ ಪೌರುಷದ ಮಾತೆನಿ ಸಿತ್ತು ಹಾಗೂ ಅಂತಸ್ತಿನ ಲಾಂಛನವೆನಿಸಿತ್ತು. ಈ ದಿಶೆಯಲ್ಲಿಯ ನಿಯಮಗಳೆಲ್ಲಾ ಶಿಕಾರಿಯ ಪರವಾಗಿಯೇ ಇದ್ದವು. ಹುಲಿಗಳು ತಪ್ಪಿಸಿಕೊಳ್ಳಲು ಯಾವುದೇ ಅವಕಾಶ ವೀಯುತ್ತಿರಲಿಲ್ಲ. ಹತ್ತೊಂಭತ್ತನೆಯ ಶತಮಾನ ಹಾಗೂ ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಅವುಗಳ ಅಳತೆ, ಆಕಾರ, ಲಿಂಗ ಯಾವುದೇ ಭೇದಭಾವಗಳನ್ನು ಲಕ್ಷಿಸದೆ ಕೊಂದುಹಾಕಿದರು. ಅನೇಕ ರಾಜ್ಯಗಳಲ್ಲಿ ಹುಲಿ 'ಹಾನಿಕಾರಕ ಪ್ರಾಣಿ' ಎಂದು ಉಪದ್ರವಕಾರಿ ಪ್ರಾಣಿಗಳ ಪಟ್ಟಿಗೆ ಸೇರಿಸಿದರು. ಅವುಗಳನ್ನು ಕೊಂದ ಶಿಕಾರಿಗಳಿಗೆ ಶಿಫಾರಸು ಪತ್ರಗಳ ಜೊತೆಗೆ ಮೆಚ್ಚುಗೆಯ ಹಣನೀಡಿ ಗೌರವಿಸಿದರು. ವ್ಯವಸ್ಥಿತ ವಾಗಿ ರಹದಾರಿ ಪಡೆದು ಬೇಟೆಯಾಡುವ ಪದ್ಧತಿಯನ್ನು ಬಳಕೆಗೆ ತಂದಾಗಲೂ ಇಂತಿಷ್ಟೇ ಹುಲಿಗಳನ್ನು ಕೊಲ್ಲಬೇಕೆಂಬ ಮಿತಿ ನಿಗದಿ ಮಾಡಲಿಲ್ಲ. ಕೆಲವೇ ವರ್ಷಗಳ ಹಿಂದೆ ಒಂದು ರಾಜ್ಯದಲ್ಲಿ ಒಬ್ಬ ಶಿಕಾರಿ ಒಂದು ರಹದಾರಿ ಪಡೆದು ಒಂದು ವರ್ಷದಲ್ಲಿ 79 ಹುಲಿಗಳ ಬಲಿ ತೆಗೆದುಕೊಂಡ ದಾಖಲೆ ಇದೆ.

ಕಾಡಿನಲ್ಲಿ ಆಗ ನಾಟಕ್ಕಿಂತ ಹುಲಿಗೆ ಕಡಮೆ ಮಹತ್ವ ಇತ್ತು. ಏಕೆಂದರೆ ಹುಲಿ ಅರಣ್ಯೋತ್ಪಾದಕ ವಸ್ತು ಎಂದು ಪರಿಗಣಿತವಾಗಿರಲಿಲ್ಲ. ಹುಲಿ ಚರ್ಮಗಳ ಮಾರಾಟಕ್ಕೆ ಯಾವುದೇ ನಿರ್ಬಂಧನೆಗಳಿರಲಿಲ್ಲ. ಇದರಿಂದ ಮಾರಾಟಗಾರರಿಗೆ ಹೆಚ್ಚಿನ

ಲಾಭ ಲಭಿಸುತ್ತಿದ್ದುದರಿಂದ ಚರ್ಮದ ಕಳ್ಳಸಾಗಾಣಿಕೆಗೆ ಹಾಗೂ ಅದರ ರಫ್ತಿಗೆ ಉತ್ತೇಜನ ಸಿಕ್ಕಂತಾಯಿತು. ಪೇಟೆಯಲ್ಲಿ ಹೆಚ್ಚೆಚ್ಚು ಪ್ರಮಾಣದಲ್ಲಿ ಚರ್ಮಗಳು ಬರುವಂತಾಯಿತು.

ಬೆಳೆರಕ್ಷಣೆ ಬಂದೂಕು: ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ನಂತರ ಜನತೆಯಿಂದ ಆಹಾರದ ಅವಶ್ಯಕತೆಯ ಕೂಗು ಕೇಳಿ ಬರಲಾರಂಭಿಸಿತು. ಕಾಡುಗಳ ಒಳಗೆ ಹಾಗೂ ಅಂಚುಗಳಲ್ಲಿದ್ದ ಹಳ್ಳಿಯವರ ಬೆಳೆಗಳನ್ನು ಕಾಡುಪ್ರಾಣಿಗಳಾದ ಆನೆ, ಕಾಡುಹಂದಿ, ಕಾಡೆಮ್ಮೆ, ಕಾಡುಕುರಿ, ಜಿಂಕೆ, ಕಡವೆ, ಕಾಟಿಮೃಗಗಳು ಹಾಳುಮಾಡಲಾರಂಭಿಸಿದವು. ಆನೆಗಳು ತಿನ್ನುವುದಕ್ಕಿಂತ ಹಾಳುಮಾಡುವುದೇ ಹೆಚ್ಚಾಗಿ ಅಂತಹ ಆನೆಯ ಒಂದು ಗುಂಪು ಒಂದು ಕುಟುಂಬದ ಅನೇಕ ತಿಂಗಳು ಕಷ್ಟಪಟ್ಟು ಬೆಳೆಸಿದ ಬೆಳೆಯ ಮೇಲೆ ದಾಳಿಮಾಡಿ ಒಂದೇ ರಾತ್ರಿಯಲ್ಲಿ ನೆಲಸಮ ಮಾಡಿದವು ಮತ್ತು ಬರುವ ವರ್ಷದ ಅವರ ಆಹಾರವನ್ನೆಲ್ಲ ಅಪಹರಿಸಿದವು.

ಹಳ್ಳಿಯವರಿಂದ ಡಬ್ಬಗಳನ್ನು ಬಡಿದು ಸಪ್ಪಳಮಾಡಿ ಓಡಿಸುವುದು ಸಾಧ್ಯವಾಗದೇ ಹೋದಾಗ 'ಬೆಳೆರಕ್ಷಣೆ ಬಂದೂಕು'ಗಳನ್ನು ಪಡೆಯಲು ರಹದಾರಿಗಳನ್ನು ಕೊಡುವ ಬಗ್ಗೆ ಎಲ್ಲ ಜಿಲ್ಲಾಧಿಕಾರಿಗಳಿಗೂ ಸರಕಾರದಿಂದ ಆದೇಶ ಹೋಯಿತು. ಬೆಳೆರಕ್ಷಣೆ ಬಂದೂಕುಗಳು ಕಾಡುಮೃಗಗಳ ಮೇಲೆ ಯಾವ ರೀತಿಯಲ್ಲಿ ಹಾವಳಿ ಮಾಡುತ್ತವೆಂಬುದನ್ನು ರಾಜ್ಯಸರಕಾರಗಳು ಪೂರ್ವಭಾವಿಯಾಗಿ ವಿಚಾರಿಸಿರಲಿಲ್ಲ. ಕೇವಲ ತಮ್ಮ ಹೊಲಗದ್ದೆಗಳ ಆವರಣದಲ್ಲಿ ಉಪಯೋಗಿಸತಕ್ಕದ್ದೆಂಬ ಕರಾರು ಇದ್ದರೂ ಕ್ರಮೇಣ ಬೆಳೆರಕ್ಷಣೆ ಬಂದೂಕುಗಳನ್ನು ಕಾಡುಪ್ರಾಣಿಗಳು ಅಲೆದಾಡುವ ಪ್ರದೇಶಗಳಲ್ಲಿ ಬೆನ್ನಟ್ಟಿ ಕೊಲ್ಲಲು ದುರುಪಯೋಗಪಡಿಸಿಕೊಂಡರು.

ಬೇಸಿಗೆಯಲ್ಲಿ ವನ್ಯಮೃಗಗಳಿಗೆ ನೀರು ಲಭಿಸುವ ಸ್ಥಾನಗಳೆಂದರೆ ಕಾಡಿನಲ್ಲಿದ್ದ ಕೆಲವೇ ಚಿಕ್ಕಪುಟ್ಟ ಮಡುವುಗಳಲ್ಲಿ ಮಾತ್ರ. ಈ ಸ್ಥಳಗಳಲ್ಲಿ ಬೆಳೆ ರಕ್ಷಣೆ ಬಂದೂಕುಗಳು ಹೆಚ್ಚಿನ ಪ್ರಮಾಣದಲ್ಲಿ ಪ್ರಾಣಿಗಳನ್ನು ಕೊಲ್ಲಲು ಉಪಯೋಗವಾದವು. ಶಿಕಾರಿಗಳ ದುರುದ್ದೇಶವೆಂದರೆ ಇಂತಹ ಮಡುವುಗಳನ್ನು ಆಯ್ದು, ಭೂಮಿಯ ಮೇಲೆ ಅಥವಾ ಮರಗಳ ಮೇಲೆ ಮಚಾನ ಅಥವಾ ಮರೆಸುಗಳನ್ನು ಕಟ್ಟಿಸಿ ನೀರಿಗೆ ಭೆಟ್ಟಿಕೊಡುವ ಕಾಡುಪ್ರಾಣಿಗಳಿಗೆ ಕಾದುಕುಳಿತು ಕೊಲೆಗೈಯಲಾರಂಭಿಸಿದರು.

ಈ ಬಂದೂಕುಗಳಿಂದ ಕಾಡುಪ್ರಾಣಿಗಳ ಸಾಮೂಹಿಕಹತ್ಯೆ ನಡೆಯಿತು. ಬೇಟೆಗಳ್ಳರು ವಯಸ್ಸಾದ ಗಂಡುಪ್ರಾಣಿಗಳಲ್ಲದೆ ಎಳೆಯ ಹಾಗೂ ಪೂರ್ಣ ಬೆಳೆಯದ ಸ್ಥಿತಿಯಲ್ಲಿದ್ದ ಗಂಡು ಹೆಣ್ಣುಗಳನ್ನು, ಯೌವನಾವಸ್ಥೆಯಲ್ಲಿದ್ದ ಹಾಗೂ ಮರಿಗಳೊಂದಿಗೆ ಇದ್ದ ಹೆಣ್ಣುಹುಲಿಗಳನ್ನು ಹಾಗೂ ಹೊಟ್ಟೆಯಲ್ಲಿ ಮರಿಗಳನ್ನು ಹೊತ್ತ ಪ್ರಾಣಿಗಳನ್ನು ಕೊಲೆಮಾಡಲು ಬಂದೂಕುಗಳನ್ನು ಉಪಯೋಗಿಸಿದರು. ಕಾನೂನಿನ ಪ್ರಕಾರ ಹೆಣ್ಣು ಪ್ರಾಣಿಗಳನ್ನು ಕೊಲ್ಲುವುದನ್ನು ಯಾವಾಗಲೂ ನಿಷೇಧಿಸಿದೆ. ಏಕೆಂದರೆ ಒಂದು ಗಂಡು

ಪ್ರಾಣಿಯನ್ನು ಕೊಂದರೆ ಹಿಂಡಿನಲ್ಲಿ ಒಂದು ಕಡಮೆಯಾಗುತ್ತದೆ. ಆದರೆ ಒಂದು ಹೆಣ್ಣು ಕೊಂದರೆ ವಿಶೇಷ ಹಾನಿ ಹೆಚ್ಚುತ್ತದೆ. ಒಂದು ಹೆಣ್ಣು ಪ್ರತಿವರ್ಷ ಒಂಡೆರಡು ಮರಿಗಳನ್ನು ಹೆತ್ತು ಪೋಷಿಸುವುದುಂಟು. ಹೆಣ್ಣುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಂದರೆ ಒಂದು ಪ್ರಾಣಿಯ ವಂಶವನ್ನೇ ನಿರ್ಮೂಲಮಾಡಿದಂತಾಗುತ್ತದೆ.

ಈ ಚಟುವಟಿಕೆಗಳು ಸ್ಥಳೀಯ ಅರಣ್ಯ ಸಿಬ್ಬಂದಿಯವರಿಗೆ ತಿಳಿಯದೇ ನಡೆಯುತ್ತದೆ. ಒಂದು ವೇಳೆ ಬೇಟೆಗಳ್ಳರು ಸಿಕ್ಕುಬಿದ್ದರೆ ಲಂಚ ಕೊಟ್ಟಾಗಲಿ ಅಥವಾ ವರ್ಚಸ್ಸು ಬೀರಿಯಾಗಲಿ ತಪ್ಪಿಸಿಕೊಂಡು ಮತ್ತೆ ತಮ್ಮ ಚಟುವಟಿಕೆಗಳನ್ನು ಮುಂದುವರಿಸುವರು. ಮಾಂಸಕ್ಕಾಗಿ ಪ್ರಾಣಿಗಳನ್ನು ಕೊಲ್ಲಲೂ ಸಹಿತ ಬಂದೂಕುಗಳನ್ನು ಉಪಯೋಗಿಸಿದರು.

ನಿಷಿದ್ಧ ಬಂದೂಕು: ಬೆಳೆರಕ್ಷಣೆ ಹಾಗೂ ಸ್ವರಕ್ಷಣೆ ಬಂದೂಕುಗಳಲ್ಲದೆ ಅನೇಕ ನಿಷಿದ್ಧ ಬಂದೂಕುಗಳು ಹಳ್ಳಿಯವರಲ್ಲಿ ಕಂಡುಬರುತ್ತವೆ. ಈ ಎಲ್ಲ ಬಂದೂಕುಗಳಿಂದ ಪ್ರಾಣಿಗಳನ್ನು ಕೊಲ್ಲುವುದಲ್ಲದೆ ಬೇಸಿಗೆಯ ರಾತ್ರಿಗಳಲ್ಲಿ ಮಡುವುಗಳ ಸುತ್ತಲಿನ ಕಾಡಿನಲ್ಲಿ ಗುಂಡು ಹಾರಿಸುತ್ತ ಇದ್ದರೆ ಅವುಗಳ ಕಠೋರ ಸಪ್ಪಳವು ಆಹಾರಕ್ಕೆಂದು ಅಲೆಯುತ್ತಿದ್ದ ಪ್ರಾಣಿಗಳನ್ನು ಧೈರ್ಯಹೀನವಾಗಿ ಮಾಡುತ್ತದೆ. ಅವುಗಳ ಬಲವಾದ ದೈಹಿಕ ಸ್ಥಿತಿ ಬಿಗುವಿನಿಂದ ಹಾಳಾಗುತ್ತದೆಯಲ್ಲದೆ ಅವು ಮೈಥುನಕ್ಕೆ ಬಂದರೂ ಒಂದುಗೂಡಲು ಇಷ್ಟಪಡುವುದಿಲ್ಲ. ಇದರಿಂದ ಪೀಳಿಗೆಯ ವೃದ್ಧಿ ಕುಂಠಿತವಾಗುತ್ತದೆ.

ದುಷ್ಕೃತ್ಯಗಳು: ಹಳ್ಳಿಯ ಜನ ಇತರ ಅನೇಕ ದುಷ್ಟ ಕೃತ್ಯಗಳಲ್ಲಿಯೂ ತೊಡಗಿರುತ್ತಾರೆ. ಪ್ರಾಣಿಗಳನ್ನು ಬಲೆಬೀಸಿ ಹಿಡಿಯುವುದು; ಚೂಪಾದ ಸಲಾಕೆಗಳುಳ್ಳ ಅಥವಾ ಭರ್ಚಿಯಂತಹ ಬಿದಿರು ಸೀಬುಗಳುಳ್ಳ ಗುಂಡಿಗಳಲ್ಲಿ ಪ್ರಾಣಿಗಳನ್ನು ಬೀಳಿಸುವುದು; ಚಾಣಾಕ್ಷತನದಿಂದ ಕಾಣದಂತೆ ಇಟ್ಟ ಬಂಧನ ಕುಣಿಕೆಗಳು; ಹಣ್ಣುಗಳಲ್ಲಿ ಅಡಗಿಸಿಟ್ಟ ಉಕ್ಕಿನ ಕೊಕ್ಕೆಗಳನ್ನು ತಂತಿಗೆ ಜೋಡಿಸಿ ಇಟ್ಟಾಗ ಅದು ಪ್ರಾಣಿಗಳ ನಾಲಿಗೆ ಅಥವಾ ವಸಡಿಗಳಲ್ಲಿ ನಾಟಿ ಹಿಡಿದಿರುತ್ತದೆ. ಹಿಟ್ಟಿನ ಮುದ್ದೆಯಲ್ಲಿ ಅಥವಾ ಮಾಂಸದ ತುಂಡುಗಳಲ್ಲಿ ಸ್ಥಳೀಯವಾಗಿ ಮಾಡಿದ ಬಾಂಬು ಅಡಗಿಸಿಟ್ಟು ಪ್ರಾಣಿಗಳು ಅದನ್ನು ಕಡಿದಾಗ ಸ್ಫೋಟವಾಗಿ ಬಾಯಿ, ತಲೆ ಉಗ್ರರೀತಿಯಲ್ಲಿ ತುಂಡರಿಸಿ ಬೀಳುತ್ತವೆ.

ಹಿಂದಿನ ಕಾಲದಲ್ಲಿ ಬೇಟೆಗಾರರು ಕತ್ತಿ, ಭರ್ಚಿ ಮತ್ತು ಬಾಣಗಳಿಂದ ಹುಲಿಗಳ ಬೇಟೆಯಾಡುತ್ತಿದ್ದರು. ಕಾಡಿನಲ್ಲಿ ಹಾಗೂ ಹಳ್ಳಿಗಳಲ್ಲಿ ವಾಸಿಸುವ ಜನರು ಹುಲಿ ಗುಂಡಿಯಲ್ಲಿ ಬೀಳುವಂತೆ ರಚಿಸಿ ಸೆರೆಹಿಡಿಯುತ್ತಿದ್ದರು. ಆದರೆ ಹುಲಿ ತನ್ನ ಚಾತುರ್ಯತನದಿಂದ ಅಷ್ಟೊಂದು ಸುಲಭವಾಗಿ ಸಿಕ್ಕುತ್ತಿರಲಿಲ್ಲ. ಆದ್ದರಿಂದ ಜನ ಅನೇಕ ತರಹದ ತಂತ್ರ ಹೂಡುತ್ತಿದ್ದರು. ಅವುಗಳಲ್ಲೊಂದು ಇಲ್ಲಿ ತಿಳಿಯಪಡಿಸಬೇಕಾದರೆ ಇಲಿ

ಬಲೆಯ ಮಾದರಿಯಲ್ಲಿ ದೊಡ್ಡ ಪ್ರಮಾಣದ ಒಂದು ಬೋನನ್ನು ರಚಿಸಿ ಅದರಲ್ಲಿ ಒಂದು ಆಡು ಕಟ್ಟುವುದು. ಹುಲಿ ಆಕರ್ಷಿಸಲ್ಪಟ್ಟು ಬೋನಿನ ಒಳಗೆ ಸೇರುತ್ತಲೇ ಅದರ ಬಾಗಿಲು ತಾನೆ ಬಿದ್ದು ಮುಚ್ಚಿಕೊಳ್ಳುತ್ತದೆ. ಬಲೆಗೆ ಬಿದ್ದ ಹುಲಿಯನ್ನು ಜನ ಸೇರಿ ಭರ್ಚಿಗಳಿಂದ ತಿವಿದು ಕೊಲ್ಲುತ್ತಿದ್ದರು.

ಹುಲಿಗಳನ್ನು ಗುಂಡಿಯಲ್ಲಿ ಬೀಳುವಂತೆ ರಚಿಸಿ ಕೊಲ್ಲುವುದು ಸಿಂಗಾಪುರ ದಲ್ಲಿಯೂ ಬಳಕೆಯಲ್ಲಿತ್ತು. ಇತ್ತಿತ್ತಲಾಗಿ ಹುಲಿ ಕೊಂದು ಅರ್ಧ ತಿಂದು ಬಿಟ್ಟ ಬೀಳಿನ ಮೇಲೆ ಮಾರಕ ವಿಷ ಸಿಂಪಡಿಸುತ್ತಿದ್ದರು. ದಕ್ಷಿಣ ಭಾರತದಲ್ಲಿ ವಿಷಹಾಕಿ ಹುಲಿ ಕೊಲ್ಲಲು ಸರಕಾರವು ಶಿಕಾರಿಗಳನ್ನು ನೇಮಿಸಿತ್ತು. ಬೀಳಿಗೆ ಓಪೀಮ್ ಲೇಪಿಸುವುದೂ ಮತ್ತೊಂದು ದುಷ್ಕೃತ್ಯವಾಗಿತ್ತು. ಕಾಡಿನಲ್ಲಿಯ ಬಾನೆಗಳಂತಿದ್ದ ಸ್ಥಳ ಗಳಲ್ಲಿಯ ನೀರಿನಲ್ಲಿ ವಿಷಬೆರೆಸಿ ಇಡುವುದು ಸಾಮಾನ್ಯವಾಗಿ ಕಂಡುಬರುತ್ತಿತ್ತು.

ಇನ್ನೊಂದು ವಿಧಾನವೆಂದರೆ ಹುಲಿ ಅಲೆದಾಡುವ ಮಾರ್ಗದಲ್ಲಿ ಒಂದು ಹಂದಿ ಯನ್ನು ಕಟ್ಟುವುದು. ಅದರ ಮೇಲ್ಭಾಗದಲ್ಲಿ ಭರ್ಚಿಗಳುಳ್ಳ ಒಂದು ನಾಟವನ್ನು ನೇತುಹಾಕಿ, ಹುಲಿ ಹಂದಿಯನ್ನು ಹಿಡಿದಾಗ ಅದು ಕೊಲ್ಲಲ್ಪಡುತ್ತಿತ್ತು. ಸುಂದರ ಬನದಲ್ಲಿ ಶಿಕಾರಿಗಳು ಅಲ್ಲಿ ಮಚಾನಕ್ಕೆ ಎತ್ತರವಾದ ಮರಗಳು ಇಲ್ಲದೆ ಇದ್ದುದಕ್ಕೆ ಕಬ್ಬಿಣದ ಬಲೆಯೊಳಗೆ ಕುಳಿತು ಹುಲಿಗಳನ್ನು ಗುಂಡಿಕ್ಕಿ ಕೊಲ್ಲುತ್ತಿದ್ದರು.

ಕೆಲವು ಗುಡ್ಡಗಾಡು ಜನರ ಕಿವಿಗೆ 'ಹುಲಿ ಬೇಟೆಯನ್ನು ಕೊಂದಿದೆ' ಎಂಬ ಸುದ್ದಿ ತಲುಪಿದ ಕೂಡಲೆ ಅವರು ರಾತ್ರಿಯೇ ಗುಂಪುಗಳಲ್ಲಿ ಉರಿಯುತ್ತಿರುವ ಪಂಜು ಗಳನ್ನು ಹಿಡಿದು ಕೊಂದ ಪ್ರಾಣಿಯಾದ ಹುಲಿ ಅಥವಾ ಚಿರತೆಯನ್ನು ಅಲ್ಲಿಂದ ಓಡಿಸಿ ಅದರ ಆಹಾರದ ದರೋಡೆ ಮಾಡುತ್ತಿದ್ದರು. ಆಗ ಮಾಂಸಭಕ್ಷಕ ಪ್ರಾಣಿಗಳು ಹಸಿವೆ ಯನ್ನು ನೀಗಿಸಿಕೊಳ್ಳುವುದಕ್ಕೆ ಹೆಚ್ಚೆಚ್ಚು ಪ್ರಾಣಿಗಳನ್ನು ಕೊಲ್ಲದೆ ಗತ್ಯಂತರವಿರಲಿಲ್ಲ.

ವನ್ಯಮೃಗಗಳನ್ನು ಹಾಳುಮಾಡಿದ ಇನ್ನೂ ಕೆಲವು ಇತರ ವಿಧಗಳು ಪಟ್ಟಣದ ಬೇಟೆಗಳ್ಳರದು. ಅವರು ಜೀಪಿನಲ್ಲಾಗಲಿ ಅಥವಾ ಕಾರಿನಲ್ಲಾಗಲಿ ಹೆಚ್ಚು ಪ್ರಜ್ವಲಿತ ವಾಗಿ ಕಂಡುಹಿಡಿಯುವ ದೀಪಗಳಿಂದ ಹಾಗೂ ಆಧುನಿಕ ಬಂದೂಕುಗಳಿಂದ ಕಾಡಿನಲ್ಲಿ ಕಂಡದ್ದನ್ನೆಲ್ಲ ಕೊಲೆಗೈಯುತ್ತಾರೆ. ಮಾಂಸ, ಚರ್ಮ ಹಾಗೂ ಕೋಡುಗಳನ್ನು ಮಾರಾಟಮಾಡಿ ಲಾಭ ಪಡೆಯಲು ಮಾಡುವ ಅವರ ಬೇಟೆಯ ರೀತಿಯೆಂದರೆ ಗುಂಡು ಹೊಡೆದು ಗಾಯಗೊಳಿಸಿ ಓಡುವುದೇ ಕೆಲಸ ಮತ್ತು ಸಾಮಾನ್ಯವಾಗಿ ಅಪರಾಧದಿಂದ ತಪ್ಪಿಸಿಕೊಳ್ಳಲು ಗಾಯಗೊಂಡ ಹಾಗೂ ಕೊಂದ ಪ್ರಾಣಿಗಳ ದೇಹಗಳನ್ನು ಕಾಡಿನಲ್ಲಿಯೇ ಬಿಟ್ಟುಹೋಗುತ್ತಾರೆ. ಕೆಲವರು ಕಾಡಿನ ಹಳ್ಳಿಜನ ಅಥವಾ ಗುಡ್ಡ ಗಾಡು ಜನರ ಸಹಾಯದಿಂದ ಕೊಂದ ಪ್ರಾಣಿಗಳ ಮಾಂಸ ಹಾಗೂ ಚರ್ಮಗಳನ್ನು ಬೇರ್ಪಡಿಸಿ ತಮ್ಮ ಮನೆಗೆ ತಲುಪಿಸುವ ವ್ಯವಸ್ಥೆ ಮಾಡುತ್ತಾರೆ.

ಮತ್ತೆ ಕೆಲವು ಪ್ರಸಂಗಗಳಲ್ಲಿ ಸಮಾಜದಲ್ಲಿಯ ಮೇಲಂತಸ್ತಿನ ಹಣವಂತರೂ ಹಾಗೂ ಹಿರಿಯರೂ, ಅಧಿಕಾರಿಗಳೂ, ಶಿಕಾರಿಗಳೂ ರಹದಾರಿ ಪಡೆದು ಅಥವಾ ಪಡೆಯದೆ ಅರಣ್ಯ ಸಿಬ್ಬಂದಿಯವರೊಂದಿಗೆ ಸೇರಿ ಪ್ರತಿಬಂಧಿಸಿದ ಕಾಡುಪ್ರಾಣಿಗಳನ್ನು ಅಥವಾ ಹೆಣ್ಣುಪ್ರಾಣಿಗಳನ್ನು ಮಿತಿಗಿಂತ ಜಾಸ್ತಿ ಕೊಲ್ಲುವುದುಂಟು.

ಬೇಸಿಗೆಯಲ್ಲಿ ಹುಲಿಗಳು ನೀರಿಗೆಂದು ಮೈಲುಗಟ್ಟಲೆ ಅಲೆಯುತ್ತವೆ. ನೀರು ಸುಲಭವಾಗಿ ಸಿಗದೆ ಹೋದಲ್ಲಿ ಹಳ್ಳಗಳ ಪಾತ್ರಗಳಲ್ಲಿ ಮರಳನ್ನು ಕೆದರಿ ಗುಂಡಿಮಾಡಿ ನೀರು ಪಡೆಯುತ್ತವೆ. ಬೇಟೆಗಳ್ಳರಿಗೆ ಹಾಗೂ ಹಳ್ಳಿಯ ಜನರಿಗೆ ಇದು ಚೆನ್ನಾಗಿ ಗೊತ್ತಿರುತ್ತದೆ. ಅಲ್ಲಿ ಬಲೆಯಿಟ್ಟು ಅಥವಾ ನೀರಲ್ಲಿ ನಾಟಿ ವಿಷಬೆರಸಿ ಹುಲಿಯನ್ನು ಕೊಲ್ಲುತ್ತಾರೆ. ಜನರು ಯಾವ ರೀತಿಯಲ್ಲಿ ನಮ್ಮ ಕಾಡಿನ ಮೃಗಗಳನ್ನು ಧ್ವಂಸ ಮಾಡಿದ್ದಾರೆಂದು ಮುಂದಿನ ಪುಟಗಳಲ್ಲಿಯ ಕೋಷ್ಟಕದಿಂದ ತಿಳಿದು ಬರುತ್ತದೆ.

ಕ್ರಿ.ಶ. 1900–1960ರ ಅವಧಿಯಲ್ಲಿ ಮೈಸೂರು ಟ್ಯಾನಿಂಗನ್ ಚರ್ಮಹದ ಮಾಡುವ ಕಾರ್ಖಾನೆ ವರ್ಷಂಪ್ರತಿ 150 ಹುಲಿ ಚರ್ಮಗಳನ್ನು ಹದಗೊಳಿಸು ತ್ತಿದ್ದರು. ಆಗ್ಗೆ ಭಾರತದಲ್ಲಿ ವರ್ಷಕ್ಕೆ 400–500 ಹುಲಿಗಳು ಕೊಲ್ಲ ಲ್ಪಡುತ್ತಿದ್ದವು. ಈ ಚರ್ಮಗಳೊಂದಿಗೆ ಕರ್ನಾಟಕ ಹಾಗೂ ತಮಿಳುನಾಡು ಪ್ರಾಂತ್ಯ ಗಳಲ್ಲಿ ವಿಷಹಾಕಿ ಕೊಂದ ಹುಲಿಗಳ ಚರ್ಮಗಳೂ ಸೇರಿವೆ. ಇವು ಅಲ್ಲದೆ ಹಳ್ಳಿಯ ಜನರಿಂದ ವಿಷವಿಟ್ಟು ಕೊಂದ ಹುಲಿಗಳ ಸಂಖ್ಯೆ ನಿರ್ಧರಿಸದಿದ್ದರೂ ಅದು ಸಾವಿರಗಟ್ಟಲೇ ಏರಿದೆ.

ಸರ್ವಸಾಮಾನ್ಯವಾಗಿ ಇತ್ತೀಚೆಗೆ ಭಾರತದಲ್ಲಿ ಹುಲಿಗಳ ಬೇಟೆಯಾಡುವುದು ಇಂಗ್ಲೀಷರ ಆಳ್ವಿಕೆಯಲ್ಲಿಯಕ್ಕಿಂತ ಕಡಮೆಯಾಗಿದೆ ಎಂದು ಹೇಳಬಹುದು. ಆದರೂ ಪ್ರತಿವರ್ಷ ಸುಮಾರು 300 ಹುಲಿಗಳಾದರೂ ಬೇಟೆಗಳ್ಳರಿಂದ ಕೊಲ್ಲಲ್ಪಡುತ್ತವೆಂದು ಅಂದಾಜು ಮಾಡಲಾಗಿದೆ.

ಈಗಲೂ ಹುಲಿಗಳನ್ನು ವಿಷದಿಂದ ಕೊಲೆಗೈಯುತ್ತಿರುವ ವಿಷಯಗಳನ್ನು ಪತ್ರಿಕೆಯಲ್ಲಿ ಓದುತ್ತಿರುತ್ತೇವೆ. ಹಿಂದಿನ ವರ್ಷ (12–2–1976ರಂದು) ಹುಣ ಸೂರಿನ ಹತ್ತಿರ ಕುರಿಗಳ ಚರ್ಮಗಳಲ್ಲಿ ಬಚ್ಚಿಟ್ಟು ಬಸ್ಸಿನಲ್ಲಿ ಕೊಂಡೊಯ್ಯುತ್ತಿದ್ದ ಹುಲಿಯ ಚರ್ಮವನ್ನು ಅರಣ್ಯಖಾತೆಯ ಸಿಬ್ಬಂದಿಯವರು ಹಿಡಿದು ಅದನ್ನು ಒಯ್ಯುತ್ತಿದ್ದ 16 ವರ್ಷದ ಹುಡುಗನನ್ನು ಬಂಧಿಸಿದರು. ಅವನು ಕೊಟ್ಟ ಬಾತ್ಮಿಯಂತೆ ಹುಲಿಯನ್ನು ಗುಂಡಿಕ್ಕಿ ಕೊಂದ ಕೊಡಗಿನ ಪ್ಲಾಂಟರ್‌ನ ಮೇಲೆ ಮೊಕದ್ದಮೆ ಚಲಾಯಿಸಲಾಯಿತು.

ಹುಲಿಯನ್ನು ಬದುಕಿಸಿಕೊಳ್ಳಲು ಸಾಧ್ಯವೇ?

ಇಂದು ಹುಲಿಯ ನಿರ್ನಾಮ ಸನ್ನಿಹಿತವಾಗಿದೆ. ಮಿತಿಯಿಲ್ಲದೆ ಗುಂಡಿಕ್ಕಿ ಕೊಲ್ಲುವುದು, ಬಲೆಬೀಸಿ ಸೆರೆಹಿಡಿಯುವುದು, ಮಾರಕ ವಿಷಕಾರಕ ವಸ್ತುಗಳನ್ನು ಚೆಲ್ಲಿ

ಕೋಷ್ಟಕ 2

ಶಿಕಾರಿಗಳಿಂದ ಭಾರತದಲ್ಲಿ ಕೊಲ್ಲಲ್ಪಟ್ಟ ಹುಲಿಗಳನ್ನು ಕುರಿತ ಕೆಲವು ವಿವರಗಳು

ವರ್ಷ	ಶಿಕಾರಿ ಹೆಸರು	ಜಂಗಲ್ ಹೆಸರು	ಕೊಂದ ಹುಲಿ ಸಂಖ್ಯೆ	ಆಧಾರ ವರದಿ
1800	ಒಬ್ಬ ಆಂಗ್ಲೋ ಇಂಡಿಯನ್ ನ್ಯಾಯಾಧೀಶ	ಬಂಗಾಳ ತರಾಯಿ	60	ಶಲ್ಲರ್ 1967
1820–1923	ಥಾಮಸ್ ಬೇಯಿಲಿ	ಖಾಂದೇಶ್	63	ಶಲ್ಲರ್ 1967
1820–1928	ಮುಂಬಯಿ ಪ್ರಾಂತ್ಯದ ಶಿಕಾರಿಗಳು	ಮುಂಬಯಿ ಕಾಡುಗಳು	1,104	ಸ್ಟ್ರೇಸಿ
1832–1962	ಜಾರ್ಜ್ ಪಾಲ್ಮರ್	ಬಂಗಾಳ ತರಾಯಿ	10,000	—
1863–1964	ಫಾರ್‌ಸೈಲ್	ಉತ್ತರ ಪ್ರದೇಶ	21	ಫೊರ್‌ಸಿಲ್ 1911
1832–1962	ಗೋರ್ಡನ್-ಕುಮ್ಮಿಂಗ್	ನರ್ಮದಾನದೀ ತೀರ	73	ಎಂ. ಡಿ. ಚತುರ್ವೇದಿ
		ತಪತಿ ನದೀತೀರ	10	1968
1877	ಬ್ರಿಟಿಷ್ ಇಂಡಿಯಾ ಶಿಕಾರಿಗಳು	ಬ್ರಿಟಿಷ್ ಇಂಡಿಯಾ ಜಂಗಲಿಗಳು	1,579	ಬರ್ಟನ್ 1933
1850–1854	ರೈಸ್	ರಾಜಾಸ್ತಾನದ ಜಂಗಲಿಗಳು	158 (31 ಮರಿಗಳು ಸಹಿತ)	ರೈಸ್ 1857
1868	ಕರ್ನಲ್ ನೈಟಿಂಗೇಲ್	ಹೈದರಾಬಾದ್ ಜಂಗಲಿಗಳು	300ಕ್ಕೆ ಮೇಲ್ಪಟ್ಟು	ಪೆರ್ರಿ 1964
1899–1923	ಧನ್ವಾರ್-ಬ್ರ್ಯಾಂಡರ್	ಮಧ್ಯಪ್ರದೇಶ ಜಂಗಲಿಗಳು	244	ಬ್ರ್ಯಾಂಡರ್ 1913
1901–1921	ಎಸ್. ಬಿ. ಸೈಮನ್	ಪೂರ್ವ ಬಂಗಾಲ	600	ಎಸ್. ಬಿ. ಸೈಮನ್
1908	ಬಂಗ್ಲಾದೇಶದ ಶಿಕಾರಿಗಳು	ಸುಂದರವನ	60	ಗೈವಮೌಂಟ್ ರಿಪೋರ್ಟ್ 1969
1911–1912	ಚಕ್ರವರ್ತಿ ಜಾರ್ಜ್ v ಮತ್ತು ಪಾರ್ಟಿ	ನೇಪಾಳ	39	ಸ್ಮಿಥೀಸ್ 1942

1929–1939	ಲೈಸನ್ಸುಳ್ಳ ಶಿಕಾರಿಗಳು	ದಕ್ಷಿಣ ಭಾರತ	1,074	ಎಸ್. ಹೆಚ್. ಪ್ರೈಟರ್ 1969
1931	ಜೋಧಪುರ ಮಹಾರಾಜ	ಚಿತ್ರಘಡ	14	ಸಾಂಖಲಾ 1969
1923–1940	ನೇಪಾಳ ಮಹಾರಾಜ ಹಾಗೂ ಪಾರ್ಟಿ	ನೇಪಾಳ	433 ಹುಲಿಗಳು 53 ಖಡ್ಗಮೃಗಗಳು	ಸ್ಮಿಥೀಸ್ 1942
1938	ಸರ್ ಗಂಗಾಸಿಂಗ್‌ಜೀ	ಚಿತ್ರಘಡ, ಉದಯಪುರ (25 ದಿನಗಳು)	24	ಸಾಂಖಲಾ 1969
1955–1960	ಬಂಡಿ ಮಹಾರಾಜ	ಬಂಡಿ (ರಾಜಸ್ಥಾನ)	27	ಸಾಂಖಲಾ 1969
1957–1967	ಕಳ್ಳ ಶಿಕಾರಿಗಳು	ಬಂಡಿ (ರಾಜಸ್ಥಾನ)	9	ಸಾಂಖಲಾ 1969
1900 ರಿಂದ (ಜೀವಮಾನದಲ್ಲಿ)	ಉದಯಪುರ ಮಹಾರಾಜ	ಉದಯಪುರ	1,000	ಕೆ. ಸಿಂಗ್ 1959
1900 ರಿಂದ (37ವರ್ಷ ಕಾಲ)	ಕೂಚಬಿಹಾರ ಮಹಾರಾಜ	ಕೂಚಬಿಹಾರ	365 ಹುಲಿಗಳು 208 ಖಡ್ಗಮೃಗಗಳು	ಎಂ. ಡಿ. ಚತುರ್ವೇದಿ, 1968
,,	ವಿಜಯನಗರ ಮಹಾರಾಜ	—	323	ಶಲ್ಲರ್ 1967
,,	ಸರ್ಗೊಜ ಮಹಾರಾಜ	ಸರ್ಗೊಜ (ಮ.ಪ್ರ.)	1.150	ಶಲ್ಲರ್ 1967
,,	ಗ್ವಾಲಿಯರ್ ಮಹಾರಾಜ ಮತ್ತು ಪಾರ್ಟಿ	ಗ್ವಾಲಿಯರ್	800 600	ಎಂ. ಡಿ. ಚತುರ್ವೇದಿ 1968
,,	ಒಬ್ಬ ಶಿಕಾರಿ	ಮಧ್ಯಪ್ರದೇಶ (30 ದಿನ)	34	ಎಫ್. ಗಾಯಕವಾಡ್ 1973
1934–1954	ಲೈಸನ್ಸುಳ್ಳ ಶಿಕಾರಿಗಳು	ಇಡೀ ಭಾರತ (ವರ್ಷಕ್ಕೆ 280 ಹುಲಿಗಳು)	5.600	ಎಂ. ಡಿ. ಚತುರ್ವೇದಿ 1968
1934–1954	ಲೈಸನ್ಸುಳ್ಳ ಶಿಕಾರಿಗಳು	ಕರ್ನಾಟಕದ ಮೈಸೂರು ಜಿಲ್ಲೆ	72	ಡಬ್ಲ್ಯು.ಎಲ್.ಬಿ. ಕರ್ನಾಟಕ

ಅಥವಾ ಲೇಪಿಸಿ ಕೊಲ್ಲುವುದು. ಇವು ಮುಖ್ಯ ಕಾರಣಗಳಾಗಿದ್ದರೂ ಹುಲಿಯ ನಾಶಕ್ಕೆ ಅವು ಮೂಲಕಾರಣಗಳಲ್ಲ. ಮನುಷ್ಯನೂ ಸೇರಿದಂತೆ ಇತರ ಎಲ್ಲ ಪ್ರಾಣಿಗಳ ರಕ್ಷಣೆ ಅತಿ ಸೂಕ್ಷ್ಮ ಸಮತೋಲದಲ್ಲಿರುವ ಸಸ್ಯ-ಪ್ರಾಣಿ ಹಾಗೂ ಸುತ್ತಮುತ್ತಲಿನ ಸನ್ನಿವೇಶದೊಡನೆ ಇರುವ ಸಂಬಂಧ ಮತ್ತು ಸ್ಥಿರವಾದ ಹಾಗೂ ಆರೋಗ್ಯಕರವಾದ ವಾತಾವರಣವನ್ನು ಉಳಿಸಿಕೊಂಡು ಬರುವುದನ್ನು ಅವಲಂಬಿಸಿದೆ. ಇವೆರಡೂ ಈಗ ಹಾಳಾಗಿವೆ. ಒಂದಾನೊಂದು ಕಾಲದಲ್ಲಿ ಭಾರತದ ವನ್ಯಮೃಗಗಳು ತಮ್ಮ ಆಹಾರ ಹಾಗೂ ವಾಸಸ್ಥಳಗಳಿಗಾಗಿ ವಿಶಾಲ ಕಾಡುಗಳನ್ನವಲಂಬಿಸಿ, ಸ್ವೇಚ್ಛೆಯಿಂದ ಗುಂಪು ಗುಂಪಾಗಿ ಜೀವಿಸುತ್ತಿದ್ದವು. ಈಗ ದಿನಂಪ್ರತಿ ಬೆಳೆಯುತ್ತಿರುವ ಜನಸಂಖ್ಯೆ ಆಸ್ಫೋಟನೆಯಿಂದಾಗಿ ಎಲ್ಲವೂ ಕ್ಷೀಣಿಸುತ್ತಿವೆ. ಆದ್ದರಿಂದ ವಾಸಸ್ಥಳದ ನಾಶವೇ ಹುಲಿಯ ಕ್ಷೀಣತೆಗೆ ಮುಖ್ಯ ಕಾರಣ. ಇಂದು ನಮ್ಮ ಈ ಪುಟ್ಟಗ್ರಹದ ಮೇಲೆ ಮಿತಿಮೀರಿ ಉಪಯೋಗಿಸಿಕೊಂಡ ಹಾಗೂ ಮಲಿನ ವಾತಾವರಣ ಅತಿ ಹೆಚ್ಚಿನ ಪ್ರಮಾಣದಲ್ಲಿದ್ದುದನ್ನು ನಾವೀಗ ಅನುಭವಿಸುತ್ತಿದ್ದೇವೆ.

ಸಿಮೆಂಟಿನ ಕಾಡು: ಸಂಕ್ಷಿಪ್ತದಲ್ಲಿ ಹೇಳುವುದಾದರೆ-ಸಂರಕ್ಷಣೆಯೆಂದರೆ, ನಿಸರ್ಗದತ್ತ ಕಾಣಿಕೆಗಳನ್ನು ಅತಿ ಜಾಣತನದಲ್ಲಿ ಉಪಯೋಗಿಸುವುದೇ ಆಗಿದೆ. ಇದರಿಂದ ವನ್ಯಮೃಗ ಬೇಡಿಕೆಗಳಿಗೆ ಮನುಷ್ಯನ ಬೇಡಿಕೆಗಳಿಗಿಂತ ಹೆಚ್ಚು ಆದ್ಯತೆ ಕೊಡಬೇಕೆಂದಲ್ಲ. ಆದರೆ ಸೌಂದರ್ಯ ಹಾಗೂ ನಿಸರ್ಗದ ನಾನಾರೂಪಗಳು ಮನುಷ್ಯನ ಆರೋಗ್ಯ ಜೀವನಕ್ಕೆ ಅತ್ಯಾವಶ್ಯಕ ಘಟಕಗಳೆಂದು ಪರಿಗಣಿಸಿ ಸಂರಕ್ಷಿಸಬೇಕು. ಇಂದಿನಿಂದ 40 ವರ್ಷಗಳ ನಂತರ ಈಗಿನ ಜನಸಂಖ್ಯೆಗಿಂತ ದುಪ್ಪಟ್ಟು ಆಗುವ ಸಂಭವವುಂಟು. ಆಗ ನಾಗರಿಕರೆಲ್ಲರೂ 'ಸಿಮೆಂಟಿನ ಕಾಡಿ'ನಲ್ಲಿ ವಾಸಮಾಡಬೇಕಾಗಬಹುದು. ಇದನ್ನು ತಪ್ಪಿಸಬೇಕಾದರೆ ಮಹಾಕಷ್ಟವಾದೀತು. ಆದ್ದರಿಂದಲೇ ವನ್ಯಮೃಗ ಹಾಗೂ ಅವುಗಳಿಗೆ ಅತ್ಯಾವಶ್ಯಕವಿದ್ದ ಕಾಡುಗಳ ಮೇಲೆ ಆಗಬಹುದಾದ ಒತ್ತಡವನ್ನು ತಪ್ಪಿಸಲು ಈಗಲೇ ಪ್ರಯತ್ನಿಸಬೇಕು. ಇದಕ್ಕಾಗಿ 'ವಿಶ್ವವನ್ಯಮೃಗ ನಿಧಿ' ಅಸ್ತಿತ್ವಕ್ಕೆ ಬಂದಿದೆ. ಇದನ್ನು ಟೈಮ್ ಮ್ಯಾಗಝಿನ್ 'ಒಂದು ರೀತಿಯ ಸಂರಕ್ಷಣಾ ಸಂಯೋಜಿತ ರಾಷ್ಟ್ರಗಳು' ಎಂದು ಯುಕ್ತವಾಗಿ ವಿವರಿಸಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಹಣಕೂಡಿ ಹಾಕಿ ವೈಜ್ಞಾನಿಕ ರೀತಿಯಲ್ಲಿ ವನ್ಯಮೃಗ ರಕ್ಷಣೆಯ ಕಾರ್ಯಕ್ರಮಗಳಿಗೆ ಹಣದ ವೆಚ್ಚ ಮಾಡುವುದು ಇದರ ಮೂಲ ಉದ್ದೇಶ. ಈಗಾಗಲೆ 77 ದೇಶಗಳಲ್ಲಿ 840 ಅತಿ ಮಹತ್ವದ ಸಂರಕ್ಷಣಾ ಕಾರ್ಯಕ್ರಮಗಳನ್ನು ಹಾಕಿಕೊಂಡು ಮುಗಿಸಿದೆ. ಅದರ ಇತ್ತೀಚಿನ ಕಾರ್ಯಕ್ರಮಗಳಲ್ಲಿ ಅತಿ ಕಾಳಜಿಪೂರ್ವಕವಾಗಿ ತಯಾರಿಸಿದ್ದೆಂದರೆ ಹುಲಿಯನ್ನು ನಿರ್ನಾಮವಾಗುವುದರಿಂದ ಬದುಕಿಸುವುದು. ಇದಕ್ಕಾಗಿ ಭಾರತ, ಬಂಗ್ಲಾದೇಶ, ನೇಪಾಳ ಹಾಗೂ ಭೂತಾನಗಳ ಸರಕಾರಗಳಿಗೆ ಈಗಾಗಲೆ ಅನೇಕ ದೇಶಗಳು ವಿವಿಧ ಹೊಸಕಾರ್ಯ ನಿರ್ವಹಣೆಗೆ ಹಾಗೂ ವನ್ಯಮೃಗಧಾಮಗಳನ್ನು ನಿರ್ಮಿಸಲು ಸಹಾಯ ಮಾಡಿವೆ. ಹುಲಿಗಳು ಯಾವುದೇ ಒಂದು ದೇಶಕ್ಕೆ ಸಂಬಂಧಿಸಿರದೆ ಅವು ವಿಶ್ವಕ್ಕೇ ಪರಂಪರಾಗತವಾಗಿ ಬಂದ ನೈಸರ್ಗಿಕ ಐಶ್ವರ್ಯ. ಅವುಗಳನ್ನು ಕೊಳ್ಳೆ ಹೊಡೆದು ನಿರ್ನಾಮಮಾಡಿ ಆಪತ್ತನ್ನು ಆಹ್ವಾನಿಸುತ್ತಿದ್ದೇವೆ. ಜಗತ್ತಿನಲ್ಲಿ ಮಾನವ

ನಿರ್ಮಿತ ಸಂಪತ್ತಿಗಿಂತ ಈ ದೇವದತ್ತ ವನ್ಯಮೃಗ ಸಂಪತ್ತಿನ ಸಂರಕ್ಷಣೆಯು ಹೊಣೆ ಸುಸಂಸ್ಕೃತರಾದ ಎಲ್ಲ ದೇಶಗಳ ಜನತೆಯದು. ಇದರಲ್ಲಿ ಎಲ್ಲ ದೇಶಗಳೂ ಸಹಕರಿಸುವಂತೆ ಪ್ರಯತ್ನಿಸಬೇಕು. ಈಗಲೆ ಅವಶ್ಯವಿದ್ದ ಧನಸಹಾಯ ಒಟ್ಟುಗೂಡಿಸಿ ಮುಂದಿನ ತಲೆಮಾರಿನವರೆಗೆ ಉಳಿಸಲೇ ಬೇಕಾಗಿದೆ. ಇಲ್ಲದಿದ್ದರೆ ಹುಲಿಗೆ ದುರ್ಗತಿ ಕಾದಿಟ್ಟಂತೆಯೇ ಸರಿ.

ನಿರ್ನಾಮದ ಹಂತವನ್ನು ಸಮೀಪಿಸುತ್ತಿರುವ ಯಾವುದೇ ಪ್ರಾಣಿಯ ರಕ್ಷಣೆಯ ಸಮಸ್ಯೆ ಯಾವಾಗಲೂ ಅತಿ ಜಟಿಲವಾಗಿದ್ದು, ಹುಲಿಯ ವಿಷಯದಲ್ಲಿಯಂತೂ ಈ ತೊಂದರೆ ಭೀಕರವಾದದ್ದು. ಹೆಚ್ಚಾಗಿ ಅವುಗಳಿಗೆ ಯೋಗ್ಯವಿದ್ದ ವಾಸಸ್ಥಳ ಒಮ್ಮೆ ಸಂಪೂರ್ಣ ನಶಿಸಿಹೋದವೆಂದರೆ ಅವುಗಳನ್ನು ಎಂದಿಗೂ ಸರಿಪಡಿಸಲಸಾಧ್ಯ. ಜನಸಂಖ್ಯೆ ಆಸ್ಫೋಟನ ಮುನ್ನಡೆದಂತೆ ಕೃಷಿ ಹಾಗೂ ವಸತಿ ಸೌಕರ್ಯಗಳಿಗೆ ಭೂಮಿಯ ಬೇಡಿಕೆ ಹೆಚ್ಚುತ್ತಲೇ ಇರುತ್ತದೆ. ಭಾರತದ ಅನೇಕ ವನ್ಯಮೃಗ ಮೀಸಲು ಕಾಡುಗಳ ಮಧ್ಯೆ ಹೆಚ್ಚಿನ ಸಂಖ್ಯೆಯಲ್ಲಿ ಹಳ್ಳಿಗಳಿದ್ದು ಅಲ್ಲಿ ಸಾವಿರಾರು ದನಕರುಗಳು ಇರುತ್ತವೆ. ದನಕರುಗಳು ಹುಲಿಯ ಬೇಟೆಪ್ರಾಣಿಗಳಾದ ಜಿಂಕೆ, ಕಡವೆ, ಕಾಟೆಮೃಗಗಳು ಅವಲಂಬಿಸಿದ ಮೇವಿನ ಮೇಲೆ ಅತಿಕ್ರಮಣಮಾಡಿ ಪೈಪೋಟಿ ನಡೆಸಿದಾಗ ಬೇಟೆ ಪ್ರಾಣಿಗಳ ಸಂಖ್ಯೆ ಕುಗ್ಗುತ್ತದೆ. ಆಗ ಬೇರೆ ಮಾರ್ಗವಿಲ್ಲದೆ ಹುಲಿ ತನ್ನ ಜೀವನಕ್ಕೆ ಅವಶ್ಯಕವಿದ್ದ ಸುರಕ್ಷಿತ ಸ್ಥಳ ಹಾಗೂ ಬೇಟೆ ಪ್ರಾಣಿಗಳನ್ನು ಕಳೆದುಕೊಳ್ಳುತ್ತಿದ್ದಂತೆ ಸಾಕಿದ ದನಕರುಗಳ ಮೇಲೆ ಬೇಟೆಮಾಡಲಾರಂಭಿಸುತ್ತದೆ. ಇಂತಹ ಸ್ಥಿತಿಯಲ್ಲಿ ಹುಲಿಗಳು ಕೊಲ್ಲಲ್ಪಡುತ್ತವೆ. ಆಗ ಹತೋಟಿಯಲ್ಲಿಡಲಾಗದ ಜಿಂಕೆ ಹಾಗೂ ಕಾಡುಹಂದಿಗಳು ರೈತರ ಬೆಳೆಗಳ ಮೇಲೆ ಗುಂಪುಗಳಲ್ಲಿ ದಾಳಿನಡೆಸಿ ಹೆಚ್ಚಿನ ಪ್ರಮಾಣದಲ್ಲಿ ಹಾನಿಯನ್ನುಂಟುಮಾಡುತ್ತವೆ. ಆದ್ದರಿಂದ ಇದೊಂದು ದುಷ್ಟಪ್ರವೃತ್ತಿಯ ವೃತ್ತ ಎಂದು ಹೇಳಬಹುದು.

ವಿಜಯಸ್ಮಾರಕ: ಪುರಾತನ ಕಾಲದಲ್ಲಿ ಬೇಟೆಯಾಡಲು ಕೇವಲ ಐಶ್ವರ್ಯವಂತರು ಕಾಲ್ನಡಿಗೆಯಲ್ಲಿ ಅಥವಾ ಆನೆಗಳ ಮೇಲೆ ಹೋದಾಗ ಹುಲಿಗಳಿಗೆ ತಕ್ಕ ಮಟ್ಟಿಗೆ ತಪ್ಪಿಸಿಕೊಂಡು ಜೀವಿಸಲು ಅವಕಾಶವಿತ್ತು. ಆದರೆ ಇತ್ತೀಚೆಗೆ ಹೆಚ್ಚಿನ ಪ್ರಮಾಣದಲ್ಲಿ ಮಾರಾಟಕ್ಕೆ ಬಂದ ಮದ್ದುಗುಂಡು ಹಾಗೂ ಬಂದೂಕುಗಳು ಮತ್ತು ಯಾವ ಸ್ಥಳವನ್ನೇ ತಲುಪುವಂತ ಜೀಪುಗಳಿಗೆ ಕೂಡ್ರಿಸಿದ ಪ್ರಕಾಶಮಾನವಾದ ಕಂಡು ಹಿಡಿಯುವ ದೀಪಗಳಿಂದ ಹುಲಿಗಳಿಗೆ ವಿಪತ್ತಲ್ಲದೆ ಇನ್ನೇನು ಗತಿ? ಎರಡನೇ ಜಾಗತಿಕ ಯುದ್ಧ ಹಾಗೂ ಸ್ವಾತಂತ್ರ್ಯ ಲಭಿಸುವ ವೇಳೆಗೆ ಭಾರತದಲ್ಲಿ ಬಂದೂಕುಗಳು ಯಥೇಚ್ಛವಾಗಿ ಸಿಗುವಂತಾದವು. ಆಗ ಪ್ರತಿಯೊಬ್ಬನೂ ಹುಲಿಯನ್ನೇ ಬೇಟೆಗೆಂದು ಆರಿಸಿಕೊಂಡನು. ಸಾಮಾನ್ಯ ಸೇನೆಯ ಜವಾನ ಅಥವಾ ಹಳ್ಳಿಯ ರೈತ ಹುಲಿಯನ್ನು ಕೊಂದದ್ದು ಸಾಲದೆ ಅನೇಕ ಪ್ರಸಂಗಗಳಲ್ಲಿ ತಾವು ತೋರಿದ ಶೌರ್ಯಕ್ಕೆ ಸರಕಾರಗಳಿಂದ ಪ್ರೋತ್ಸಾಹದ್ರವ್ಯವನ್ನು ಪಡೆದರು. ನಂತರ ಅಂತರರಾಷ್ಟ್ರೀಯ ಮಟ್ಟದಲ್ಲಿ ಏರ್ಪಡಿಸಿದ ಬೇಟೆಯ ಪ್ರವಾಸಗಳು ಪ್ರಾರಂಭವಾದವು. ಕುತೂಹಲ

ದಿಂದ ಕಾದಿದ್ದ ಶಿಕಾರಿಗಳು ವಿಶ್ವದ ನಾಲ್ಕೂ ದಿಕ್ಕಿನಿಂದ ವಿಜಯಸ್ಮಾರಕವನ್ನು ಪಡೆಯಲು ಬಂದರು. ಆಗ ಒಂದು ನಿಶ್ಚಿತ ಹುಲಿಯ ಬೆಲೆ 20,000 ರೂಪಾಯಿಗಳಿಗೆ ಏರಿತು. ಕ್ರಿ.ಶ. 1970ರಲ್ಲಿ ಒಬ್ಬ ಅಮೆರಿಕದ ಐಶ್ವರ್ಯವಂತ ಒಂದು ಹುಲಿಯನ್ನು ಪಡೆಯಲು ಸುಮಾರು 1 ಲಕ್ಷ ರೂ.($12,250)ಗಳವರೆಗೆ ಹಣ ಖರ್ಚುಮಾಡಿದ ದಾಖಲೆ ಇದೆ.

ಆಕ್ಷೇಪಣೆ: ಹುಲಿಯ ಬೇಟೆಯನ್ನು ನಿಯಂತ್ರಿಸಲು ಭಾರತ ಮೊದಲ ಹೆಜ್ಜೆ ಇಟ್ಟಾಗ, ನಿರೀಕ್ಷಿಸಿದಂತೆ ಅತಿ ಆದಾಯಕರವಾದ ಹೊರದೇಶದಿಂದ ಬಂದ ಶಿಕಾರಿಗಳಿಗೆ ಹುಲಿಯ ಬೇಟೆಯ ವ್ಯವಸ್ಥೆಮಾಡುವ ಏಜಂಟರುಗಳು ತಮ್ಮ ಉಪಜೀವನಕ್ಕೆ ಮಹಾ ಕುತ್ತೊದಗಿತೆಂದು ಅತಿಯಾಗಿ ಆಕ್ಷೇಪಣೆ ಮಾಡಿದರು. ಅಮೆರಿಕ ಹಾಗೂ ಇಂಗ್ಲೆಂಡ್‌ಗಳಲ್ಲಿ ಶಿಕಾರಿ ಸಂಘಗಳು ಹಾಗೂ ಸಂರಕ್ಷಣಾಧಿಕಾರಿಗಳು ಪರಸ್ಪರ ಲಾಭಕ್ಕಾಗಿ ಸಹಕರಿಸುವಂತೆ ಏಷಿಯಾಖಂಡದಲ್ಲಿ ಅಂತಹ ಸಂತೋಷದ ಸ್ಥಿತಿಯನ್ನುನಾವು ತಲುಪಿಲ್ಲ. ಇದು ಬಹಳ ದುಃಖದ ವಿಷಯ. ಏಕೆಂದರೆ ಸ್ಥಳೀಯ ಬೇಟೆಗಾರರು ವನ್ಯಮೃಗಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆದಿದ್ದಾರೆ. ಆದರೆ ಈ ಮಾಹಿತಿ ವನ್ಯಮೃಗಗಳ ಸಂರಕ್ಷಣೆಯ ಪ್ರಯತ್ನಗಳಿಗೆ ಹೆಚ್ಚು ವಿನಿಯೋಗವಾಗದೆ ಕೇವಲ ಬೇಟೆಗೆ ಆಗಿದೆ. ಮೇಲಾಗಿ ವ್ಯವಹಾರಿಕವಾಗಿ ಹೇಳಬೇಕಾದರೆ ವ್ಯವಸ್ಥೆಗೊಳಿಸಿದ ಹುಲಿಗಳ ಬೇಟೆ ಯಾಡುವ ಪ್ರಚೋದನೆ ಹೆಚ್ಚಾಗಿ ಪಾಶ್ಚಾತ್ಯರಿಂದಲೆ ಉದ್ಭವಿಸಿತೆಂಬುದನ್ನು ಮರೆಯು ವಂತಿಲ್ಲ.

ಗಗನಕ್ಕೇರಿದ ಚರ್ಮಗಳ ಬೆಲೆ: ಹುಲಿಗಳ ಸಂಖ್ಯೆ ಕುಗ್ಗಿದಂತೆ ಅವುಗಳ ಚರ್ಮಗಳ ಬೆಲೆಯೂ ಮೇಲೇರಿದವು. ದೊಡ್ಡ ದೊಡ್ಡ ಅಲಂಕಾರದ ಅಂಗಡಿಗಳು ಒಮ್ಮೆಲೇ ತಲೆದೋರಿ ಹುಲಿ ಚರ್ಮದ ಕೋಟುಗಳನ್ನೂ ಹಾಗೂ ಅದಕ್ಕೆ ಹೊಂದುವ ಹ್ಯಾಟು ಹಾಗೂ ಅಲಂಕಾರ ಚೀಲಗಳನ್ನೂ ಧರಿಸಿ ಮಾದರಿಯ ಶೈಲಿಯನ್ನು ತೋರಿಸ ತೊಡಗಿದರು. ಇವು ಮೊದಲು ಅಮೆರಿಕೆಯಲ್ಲಿ ನಂತರ ಯುರೋಪ್‌ದಲ್ಲಿ ಅತಿ ಶೀಘ್ರವಾಗಿ ಹರಡಿ ಇವುಗಳಿಗೆ ತಮಾಷೆಚರ್ಮಗಳೆಂದು ಉತ್ತೇಜನ ದೊರಕಿತು ಮತ್ತು ಅವುಗಳ ಬೆಲೆ ಸುಮಾರು 20,000 ರೂಪಾಯಿ (£ 1000) ಗಳಷ್ಟಿತ್ತು. ಈ ಬೇಡಿಕೆ ಯಿಂದ ಅತ್ಯಾನಂದಪಟ್ಟ ಚರ್ಮಗಳ ವ್ಯಾಪಾರಿಗಳು ಬೇಟೆಗಳ್ಳರಿಗೆ ಸಹಾಯಮಾಡ ಲಾರಂಭಿಸಿದರು. ಪೇಟೆಯಲ್ಲಿ ಚರ್ಮಗಳು ವಿರಳವಾದಂತೆ ಬೇಟೆಗಳ್ಳರು ಮೀಸಲು ಕಾಡುಗಳಲ್ಲಿ ಹಾಗೂ ಪಕ್ಕದ ದೇಶಗಳಾದ, ವಿಶೇಷವಾಗಿ ನೇಪಾಳದ ಕಾಡುಗಳಲ್ಲಿ ಹೊಕ್ಕು ಹಾವಳಿಯನ್ನಾರಂಭಿಸಿದರು. ಇಂದು ಒಬ್ಬ ಬೇಟೆಗಳ್ಳನಿಗೆ ಒಂದು ಒಳ್ಳೆಯ ಹುಲಿ ಚರ್ಮಕ್ಕೆ 1,000 ರೂಪಾಯಿ(£ 50)ಗಳು ಸಿಕ್ಕುತ್ತವೆ. ಒಬ್ಬ ಕಳ್ಳಸಂತೆ ಕೋರ ಅದನ್ನು 4,000 ರೂಪಾಯಿ(£ 200 ಅಥವಾ $ 500)ಗೆ ಪರದೇಶದ ಪ್ರವಾಸಿಗನಿಗೆ ಮಾರುತ್ತಾನೆ. ಅವನು ತನ್ನ ದೇಶಕ್ಕೆ ವಾಪಸ್ಸಾದನಂತರ ಕೆಲವು ದೇಶಗಳಲ್ಲಿ ಅದರ ದುಪ್ಪಟ್ಟು ಅಥವಾ ಮೂರು ಪಟ್ಟಿಗೆ ಮಾರುತ್ತಾನೆ.

ವಿಷಗಳ ಪ್ರಯೋಗ: ಈ ರೀತಿ ಕೊಲ್ಲುವ ಸ್ವೇಚ್ಛಾಚಾರ ನಡೆಯುತ್ತಿದ್ದಂತೆ ಹುಲಿಗೆ ಇನ್ನೊಂದು ಹೊಸ ಅಪಾಯ ಒದಗಿತು. ಪರದೇಶಗಳ ಸಹಾಯದ ಕಾರ್ಯಕ್ರಮದಲ್ಲಿ ಭಾರತ ಹಾಗೂ ಇನ್ನಿತರ ಪಕ್ಕದ ದೇಶಗಳಿಗೆ ಕೃಷಿಕಾರ್ಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗವಾಗುವಂತಹ ಕ್ರಿಮಿಕೀಟಕಗಳನ್ನು ಕೊಲ್ಲುವ ಔಷಧಿಗಳಾದ ಡೈಎಲ್ಡ್ರಿನ್, ಎಂಡ್ರಿನ್, ಡಿ.ಡಿ.ಟಿ., ಬಿ.ಎಚ್.ಸಿ., ಫಾಲಿಡಾಲ್ ಮುಂತಾದ ಅನೇಕ ಮಾರಕ ವಿಷಗಳು ರೈತರಿಗೆ ಯಥೇಚ್ಛವಾಗಿ ದೊರೆಯತೊಡಗಿದವು. ರೈತರಿಗೆ ಹಾಗೂ ಬೇಟೆಗಳ್ಳರಿಗೆ ಇಂತಹ ಮಾರಕ ವಸ್ತುಗಳನ್ನು ಕೊಂದ ಹಸುವಿನ ದೇಹದ ಮೇಲೆ ಚೆಲ್ಲಿ ಅಥವಾ ಲೇಪಿಸಿ ಹುಲಿ, ಚಿರತೆ, ರಣಹದ್ದು ಹಾಗೂ ಅದನ್ನು ತಿಂದ ಇತರ ಪ್ರಾಣಿಗಳನ್ನು ತೊಂದರೆಗೀಡುಮಾಡಿ ಸುಲಭವಾಗಿ ಕೊಂದುಬಿಡಬಹುದೆಂಬುದನ್ನು ಕಲಿಯುವುದಕ್ಕೆ ಹೆಚ್ಚು ಸಮಯ ಬೇಕಾಗಿರಲಿಲ್ಲ. ಮಧ್ಯಪ್ರದೇಶದ ಒಂದು ರಾಜ್ಯದಲ್ಲಿಯೇ ಕೇವಲ 18 ತಿಂಗಳಲ್ಲಿ 32 ಹುಲಿಗಳನ್ನು ಫಾಲಿಡಾಲ್ ವಿಷದಿಂದ ಕೊಂದುಹಾಕಿದರೆಂದು ಒಂದು ಸಮೀಕ್ಷೆಯಿಂದ ತಿಳಿದು ಬಂದಿದೆ. ಕರ್ನಾಟಕ ರಾಜ್ಯದಲ್ಲಿಯೂ ಫಾಲಿಡಾಲ್ ವಿಷದಿಂದ ಅನೇಕ ಹುಲಿಗಳನ್ನು ಕೊಂದ ದೃಷ್ಟಾಂತಗಳಿವೆ.

ಕಳ್ಳಸಾಗಾಟ: ಚರ್ಮಗಳನ್ನು ರಫ್ತುಮಾಡದಂತೆ ಹೊಸಶಾಸನ ರಚನೆಯಾದ ನಂತರ ಅದು ಭಾರತದಾದ್ಯಂತ ಕಾರ್ಯರೂಪಕ್ಕೆ ಬಂದಿದೆ. ಚರ್ಮಗಳನ್ನು ಹಿಡಿದು ಮುಟ್ಟುಗೋಲು ಹಾಕುವುದು ಹಾಗೂ ನ್ಯಾಯಾಲಯದಲ್ಲಿ ಕಾನೂನುರೀತ್ಯ ಕ್ರಮ ಜರುಗಿಸಲಾಗಿದೆಯೆಂದು ವಿಶ್ವವನ್ಯಮೃಗನಿಧಿ ತಿಳಿಸಿದೆ. ಆದರೆ ಬೇಟೆಗಳ್ಳತನವನ್ನೂ ಹಾಗೂ ಚರ್ಮಗಳ ಕಳ್ಳವ್ಯಾಪಾರಗಳನ್ನು ಹತೋಟಿಯಲ್ಲಿ ತರುವ ಕಾರ್ಯ ಬಗೆಹರಿಸಲಾರದಂತಹದು. ಪ್ರಕಟಿಸದೇ ಇದ್ದ ಚರ್ಮಗಳನ್ನು ಬಚ್ಚಿಟ್ಟುಕೊಂಡು ಯಾವುದಕ್ಕೂ ಹೇಸದ ಪ್ರವಾಸಿಗರು, ವ್ಯಾಪಾರಿಗಳು ಹಡಗುಯಾನ ಹಾಗೂ ವಿಮಾನಯಾನ ಸಿಬ್ಬಂದಿಯವರು ಇನ್ನೂ ಚರ್ಮಗಳನ್ನು ಕಳ್ಳಸಾಗಾಟ ಮಾಡುತ್ತಲೇ ಇದ್ದಾರೆ.

ಅಧ್ಯಾಯ 7

ಅಭಿವೃದ್ಧಿ

'ಧರ್ಮೋಪದೇಶಕನು ತನ್ನ ಸ್ವಂತ ದೇಶದಲ್ಲಿ ಅಷ್ಟಾಗಿ ಆದರಿಸಲ್ಪಡುವುದಿಲ್ಲ' ಎಂದು ಹೇಳುವಂತೆ ನಮ್ಮ ದೇಶದ ಹುಲಿಯ ಸ್ಥಿತಿಯಾಗಿದೆ. ಅಂತೆಯೇ ಭಾರತದ ಹುಲಿಯನ್ನು ವಿನಾಶದಿಂದ ಉಳಿಸಿಕೊಳ್ಳಲು ಕೊನೆ ಘಳಿಗೆಯ ಪ್ರಯತ್ನಗಳು 'ಹುಲಿಯನ್ನು ಉಳಿಸಿ' ಎಂಬ ಚಳುವಳಿ ಅಮೆರಿಕದಲ್ಲಿ ಮೊದಲಬಾರಿಗೆ ಪ್ರಾರಂಭವಾಯಿತು. ಕ್ರಿ.ಶ. 1960ರಲ್ಲಿ ಅಮೆರಿಕದ ಮಕ್ಕಳಿಗೆಂದು ಕಳಿಸಿದ ಎಡ್‌ವರ್ಡ್ ಜೆ. ಬ್ರೀರ್ಲಿ ಎಂಬ ಕಲಾಕಾರನಿಂದ ಚಿತ್ರಿಸಲ್ಪಟ್ಟ ಬಿಳಿಹುಲಿ 'ಮೋಹಿನಿ'ಯ ಚಿತ್ರದಒಂದು ಪ್ರತಿಗೆ ಒಂದು ನೂರು ಡಾಲರ್ (8.500 ರೂ.)ಗಳಂತೆ ಮಾರಲಾಯಿತಂತೆ. ಈರೀತಿ ಸಂಗ್ರಹಿಸಿದ ಹಣ 'ಹುಲಿಯನ್ನು ಉಳಿಸಿ' ಎಂಬ ಚಳುವಳಿಗೆ ವಿನಿಯೋಗವಾಯಿತು. ಆದರೆ ಈ ದಿಶೆಯಲ್ಲಿ ಭಾರತೀಯರಿಂದ ಬಂದ ಕೊಡುಗೆ ಏನು?

ಹುಲಿ ಚರ್ಮಕ್ಕೆ ಸ್ವದೇಶ ಹಾಗೂ ವಿದೇಶಗಳಲ್ಲಿ ವಿಶೇಷ ಬೇಡಿಕೆ ಇದೆ. ಓರ್ವ ಚೆಲುವೆಗೆ ಹುಲಿಚರ್ಮದ ಕೋಟನ್ನು ಸಿದ್ಧಪಡಿಸಬೇಕಾದರೆ ಮೂರು ಸುಂದರ ಹುಲಿಗಳನ್ನು ಕೊಂದು ಅವುಗಳ ಚರ್ಮ ಉಪಯೋಗಿಸ ಬೇಕಾಗುತ್ತದೆ. ಭಾರತದಲ್ಲಿರುವ ಈಗಿನ ಎಲ್ಲ ಹುಲಿಗಳನ್ನು ಕೊಂದರೆ ಇಂಥಹ 600 ಕೋಟುಗಳನ್ನು ಮಾತ್ರ ತಯಾರಿಸಬಹುದಾಗಿದೆ. ಪರದೇಶದಲ್ಲಿ ಇಂತಹ ಒಂದು ಕೋಟಿನ ಬೆಲೆ 1 ಲಕ್ಷ ರೂಗಳಷ್ಟು ಇದೆ. 1969–70ರ ಸಾಲಿನಲ್ಲಿ ಭಾರತ ಸರ್ಕಾರ ಹುಲಿಯ ಶಿಕ್ಕಾರಿ, ಹುಲಿಯ ಚರ್ಮ, ಉಗುರುಗಳ ಪ್ರತ್ಯೇಕ ಸ್ವಾಧೀನತೆ, ಮಾರಾಟ, ರಫ್ತು, ಮೊದಲಾದವುಗಳನ್ನು ರದ್ದುಗೊಳಿಸಿತು. ಅದರಿಂದಾಗಿ ಹುಲಿ ಚರ್ಮದ ಬೆಲೆ 10.000 ರೂಪಾಯಿಗಳಿಗೂ ಹೆಚ್ಚು ಏರಿತು. ಈ ಆಕರ್ಷಕ ಬೆಲೆಯಿಂದಾಗಿ ಬೇಟೆಗಳ್ಳರು ಭಾರತ ಸರ್ಕಾರ ವಿಧಿಸಿದ ಕಟ್ಟಳೆಗಂಜದೆ ಹುಲಿಗಳನ್ನು ಗುಂಡಿಟ್ಟು ಅಥವಾ ವಿಷವಿಟ್ಟುಕೊಂದು ಅವುಗಳ ಚರ್ಮಗಳನ್ನು ದೋಣಿಯಲ್ಲಿಟ್ಟು ಸಮುದ್ರ ಮಾರ್ಗವಾಗಿ ಪರದೇಶದ ಮಾರುಕಟ್ಟೆಗೆ ಕಳ್ಳಸಾಗಾಟ ನಿರಾತಂಕವಾಗಿ ಭಾರೀಪ್ರಮಾಣದಲ್ಲಿ ನಡೆದೇ ಇದೆ. ನೇಪಾಳ ರಾಷ್ಟ್ರವೂ ಕೂಡ 1971ರ ಮಾರ್ಚ್ ತಿಂಗಳಲ್ಲಿ ಹುಲಿ ಬೇಟೆ ಹಾಗೂ ಅದರ ವಧೆಯನ್ನು ನಿರ್ಬಂಧಿಸಿ ಕಾನೂನು ಹೊರಡಿಸಿತು. ಇದರಿಂದ ಸರಹದ್ದುಗಳಲ್ಲಿಯ ಹುಲಿಗಳನ್ನು ಸಂರಕ್ಷಿಸಲು ಸಹಾಯವಾಯಿತು.

ಕಾನೂನಿನ ಕಟ್ಟಳೆ: 1972ರಲ್ಲಿ ತಿದ್ದುಪಡಿಯಾದ ಭಾರತದ ವನ್ಯಪ್ರಾಣಿ ಸಂರಕ್ಷಣಾ ನಿಯಮದ ಪ್ರಕಾರ ವನ್ಯಪ್ರಾಣಿಗಳನ್ನು ಕೊಲ್ಲುವುದು, ಅವುಗಳ ಮಾಂಸದ ಮಾರಾಟ, ಅವುಗಳ ಚರ್ಮ ಹಾಗೂ ಇತರ ಯಾವುದೇ ಭಾಗಗಳನ್ನು ವಶದಲ್ಲಿ

ಇಟ್ಟುಕೊಳ್ಳುವುದು, ಮಾರಾಟ ಮಾಡುವುದು, ಪ್ರದರ್ಶಿಸುವುದು, ವನ್ಯಪ್ರಾಣಿಗಳನ್ನು ಸಾಕುವುದು ಹಾಗೂ ಮಾರಾಟ ಮಾಡುವುದು ಅಪರಾಧವೆಂದು ಘೋಷಿಸಲ್ಪಟ್ಟಿತು. ಅದರಂತೆ ಎಲ್ಲ ಪ್ರಾಂತ್ಯಗಳೂ ಘೋಷಿಸಿದವು. ಇವೆಲ್ಲಕ್ಕೂ ಕ್ರಮಬದ್ಧ ಲೈಸೆನ್ಸ್ ಪಡೆದೇ ತೀರಬೇಕಾಗಿತ್ತು.

ಕೋಷ್ಟಕ 3

ಬೆಂಗಳೂರಲ್ಲಿನ ಚರ್ಮಗಳ ವ್ಯಾಪಾರಿಗಳಿಂದ ವಶಪಡಿಸಿಕೊಂಡು ಸರಕಾರಕ್ಕೆ ಮುಟ್ಟುಗೋಲು ಹಾಕಿದ ಚರ್ಮಗಳ ವಿವರಣೆ ಹಾಗೂ ಅವುಗಳ ಬೆಲೆ (1974)

ಅ.ಸಂ.	ಪ್ರಾಣಿಯ ಚರ್ಮ	ಸಂಖ್ಯೆ	ಬೆಲೆ ರೂ.	ಶರಾ
1.	ಹುಲಿ	1	2,500	ತಲೆಬುರುಡೆ ಸಹಿತ ಒಂದು ತಲೆಬುರುಡೆಸಹಿತ
2.	ಚಿರತೆ	6	9,300	—
3.	ಕಾಡುಬೆಕ್ಕು	3	150	—
4.	ಹೆಬ್ಬಾವು	627	94,050	—
5.	ಮೊಸಳೆ	172	34,000	ದೊಡ್ಡ ಗೋಣಿಯಲ್ಲಿ
6.	ಉಡ	4,500 (9 ಗೋಣಿ ಅಂಡಿಗೆಯಲ್ಲಿ)	4,500	ತುಂಬಿದ್ದ ಸುಮಾರು 4500 ಚರ್ಮಗಳು.
7.	ಜಿಂಕೆಗಳು	146	19,950	ಚುಕ್ಕೆ ಜಿಂಕೆ, ಕಾಡುಕುರಿ ಕೃಷ್ಣಮೃಗ, ಇಲಿಜಿಂಕೆ ಮುಂತಾದವು. —
8.	ಕಡವೆ	22	5,500	—
9.	ನೀರುನಾಯಿ	222	16,650	—
10.	ಕರಡಿ	2	9,000	ಹೆಂಗಸರ ವ್ಯಾನಿಟಿಬ್ಯಾಗ್ ಗಳು, ಕೋಟುಗಳು,
11.	ಚರ್ಮಗಳಿಂದ ತಯಾರಾದ ವಸ್ತುಗಳು	34	13,100	ಪರ್ಸ್, ಪೆಟ್ಟಿಗೆಗಳು ಮುಂತಾದವು
	ಒಟ್ಟುಬೆಲೆ:		ರೂ. 2,41.200	

ವನ್ಯಮೃಗ ಸಂರಕ್ಷಣಾ ಕಾಯಿದೆ ಕರ್ನಾಟಕದಲ್ಲಿ ಜಾರಿಗೆ ಬಂದು 9 ತಿಂಗಳು ಸಂದಿದ್ದರೂ ಯಾವುದೇ ವ್ಯಾಪಾರಿಯಾಗಲೀ ಅಥವಾ ಚರ್ಮ, ಚರ್ಮದ ವಸ್ತುಗಳನ್ನು ಹೊಂದಿರುವವರಾಗಲೀ ಲೈಸೆನ್ಸ್ ಪಡೆಯಲು ಮುಂದೆ ಬರಲಿಲ್ಲ. 1974ನೇ ಅಕ್ಟೋಬರ್ ತಿಂಗಳಲ್ಲಿ ಬೆಂಗಳೂರು ಜಿಲ್ಲಾ ಅರಣ್ಯಾಧಿಕಾರಿಯಾಗಿದ್ದ ಈ ಲೇಖಕನು

ನಗರದ ಕೆಲವು ಚರ್ಮ ಹದಮಾಡುವವರು ಹಾಗೂ ಮಾರುಕಟ್ಟೆಗಳ ಮೇಲೆ ತನ್ನ ಸಿಬ್ಬಂದಿಯೊಂದಿಗೆ ಹಠಾತ್ತಾನೆ ದಾಳಿ ನಡೆಸಿ ಸುಮಾರು ಒಂದು ಲಾರಿ ಭರ್ತಿ ವಿವಿಧ ಪ್ರಾಣಿಗಳ ಚರ್ಮ ಹಾಗೂ ಚರ್ಮದಿಂದ ತಯಾರಿಸಿದ ಸಾಮಗ್ರಿಗಳನ್ನು ಸ್ವಾಧೀನ ಮಾಡಿಕೊಂಡನು. ಅವುಗಳಲ್ಲಿ ಹುಲಿ, ಚಿರತೆ, ಜಿಂಕೆ, ಕರಡಿ, ಕೃಷ್ಣಮೃಗ, ಕಡವೆ, ಮೊಸಳೆ, ಹೆಬ್ಬಾವು ಚರ್ಮಗಳಿದ್ದು ಅವುಗಳ ಒಟ್ಟು ಬೆಲೆ 2 ಲಕ್ಷ 41 ಸಾವಿರ ರೂಪಾಯಿಗಳಷ್ಟಿತ್ತು. ಇದಲ್ಲದೆ ಇನ್ನೂ ಅನೇಕ ಚರ್ಮಗಳು ಹದಮಾಡುವ ವಿವಿಧ ಸ್ಥಿತಿಯಲ್ಲಿದ್ದವುಗಳನ್ನು ಹಿಡಿದು ಮಾರಾಟಗಾರರ ವಶಕ್ಕೆ ಒಪ್ಪಿಸಲಾಗಿತ್ತು. ಅವುಗಳ ಬೆಲೆ ಸುಮಾರು 2 ಲಕ್ಷ ರೂಗಳಷ್ಟು. ಇಷ್ಟೊಂದು ಭಾರೀ ಪ್ರಮಾಣದಲ್ಲಿ ಅಕ್ರಮ ವನ್ಯಮೃಗ ಚರ್ಮ, ಹಾಗೂ ಚರ್ಮದ ವಸ್ತುಗಳನ್ನು ವಶಪಡಿಸಿಕೊಂಡದ್ದು ಭಾರತದಲ್ಲಿ ಇದೇ ಮೊದಲು. ವನ್ಯಮೃಗ ಸಂರಕ್ಷಣ ಕಾಯಿದೆಯನ್ನು ಕಟ್ಟುನಿಟ್ಟಾಗಿ ಪಾಲಿಸ ಬೇಕು ಹಾಗೂ ವನ್ಯಮೃಗಗಳ ವಧೆ ನಿಲ್ಲಬೇಕೆಂಬುದೇ ಈ ದಾಳಿಯ ಮುಖ್ಯ ಉದ್ದೇಶ ವಾಗಿತ್ತು. ಈ ಎಲ್ಲ ಚರ್ಮಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಯಿ ತಲ್ಲದೆ ಮಾರಾಟಗಾರರಿಂದ ಸುಮಾರು 10,000 ರೂನಷ್ಟು ದಂಡವನ್ನೂ ವಸೂಲು ಮಾಡಲಾಯಿತು.

ಕರ್ನಾಟಕ ರಾಜ್ಯದಲ್ಲಿ ಹಿಡಿದ ವನ್ಯಮೃಗ ಚರ್ಮ ಹಾಗೂ ಅವುಗಳಿಂದ ತಯಾರಿಸಿದ ವಸ್ತುಗಳಲ್ಲದೆ ಕೆಲವು ತಿಂಗಳ ಹಿಂದೆ ಹೊಸದಿಲ್ಲಿಯ ಒಂದು ಖಾಲಿಮನೆಯಲ್ಲಿ 125ಕ್ಕಿಂತ ಹೆಚ್ಚು ವನ್ಯಮೃಗಗಳ ಚರ್ಮಗಳು ಸಿಕ್ಕಬಗ್ಗೆ ವರದಿ ಯಾಗಿದೆ. ಅದೇ ರೀತಿ 1975ರ ನವೆಂಬರ್ ತಿಂಗಳಲ್ಲಿ ಅದೇ ದಿಲ್ಲಿಯಲ್ಲಿ ಹೆಚ್ಚು ಪ್ರಮಾಣದಲ್ಲಿದ್ದ ಹುಲಿ ಚರ್ಮಗಳು, ಒಂದು ಸಿಂಹದ ಚರ್ಮ ಹಾಗೂ ಇತರ ಕೊಲ್ಲಬಾರದ ಹಾಗೂ ವ್ಯವಹಾರ ಮಾಡಬಾರದಂತಹ ಪ್ರಾಣಿಗಳ ಚರ್ಮಗಳು ಸಿಕ್ಕಾಗ ಇನ್ನೂ ಬೇಟೆಗಳ್ಳತನ ಅವ್ಯಾಹತವಾಗಿ ನಡೆಯುತ್ತಲೇ ಇದೆ ಎಂಬುದು ಸ್ಪಷ್ಟವಾಯಿತು. ಈಗಲೂ ಹೆಚ್ಚಿನ ಪ್ರಮಾಣದಲ್ಲಿ ನಮ್ಮ ರಾಜ್ಯದಲ್ಲಿ ಹಕ್ಕಿ-ಪಿಕ್ಕಿ ಜನರು ವಿವಿಧ ಜಾತಿಯ ಪಕ್ಷಿಗಳನ್ನು ಬಲೆ ಬೀಸಿ ಸೆರೆಹಿಡಿದು ತಂದು ಪಟ್ಟಣಗಳಲ್ಲಿ ಮಾರಾಟಮಾಡುತ್ತಿರುವುದು ನಡೆದೇ ಇದೆ. ಇವರ ವಿರುದ್ಧ ಕಾನೂನು ರೀತ್ಯ ಕ್ರಮ ಕೈಗೊಂಡು ಅವರಿಗೆ ಕಾಡಿನಿಂದ ಬಹುದೂರದಲ್ಲಿ ಪುನರ್ವಸತಿ ಕಲ್ಪಿಸಿಕೊಡಬೇಕು.

ಚರ್ಮ ಬೇಡಿಕೆ ಅಡಗಿಸುವಿಕೆ

ವಿಶದವಾಗಿ ಈ ವ್ಯಾಪಕ ಕೃತ್ಯವನ್ನುಸರಿಪಡಿಸುವ ಒಳ್ಳೆಯ ಪ್ರಯೋಜನ ಕಾರಿ ಮಾರ್ಗವೆಂದರೆ ಚರ್ಮಗಳ ಮಾರಾಟದಿಂದ ಅನ್ಯಾಯದ ಲಾಭ ಪಡೆಯುತ್ತಿರುವ ಬೇಡಿಕೆಯನ್ನೇ ಅಡಗಿಸಿಬಿಡುವುದು. ತಪ್ಪಿತಸ್ಥರನ್ನು ದಸ್ತಗಿರಿ ಮಾಡುವುದು; ಅತಿ ಹೆಚ್ಚಿನ ಪ್ರಮಾಣದಲ್ಲಿ ದಂಡ ವಸೂಲು ಮಾಡು ವುದು; ಹಿಡಿದ ಮಾಲನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು; ಶಿಕ್ಷೆ ವಿಧಿಸಿದ ತಪ್ಪಿತಸ್ಥರ ಹೆಸರುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರಕಟನೆಯೊಂದಿಗೆ

ಬಹಿರಂಗ ಪಡಿಸುವುದು ಮತ್ತು ಅಧಿಕಾರಿಗಳು ತಮ್ಮ ಕರ್ತವ್ಯ ಪಾಲಿಸದೇ ಇದ್ದರೆ ತಕ್ಷಣವೆ ಕಟುವಾಗಿ ಶಿಕ್ಷೆವಿಧಿಸುವುದು, ಇವೇ ಮೊದಲಾದ ಕಾರ್ಯಗಳನ್ನು ನೆರವೇರಿಸ ಬೇಕು. ಇತ್ತೀಚೆಗೆ .ಸ್ವಲ್ಪ ಪ್ರಗತಿ ಆಗುತ್ತಲಿದೆ. ವಿಶ್ವ ವನ್ಯಮೃಗನಿಧಿ ಮತ್ತು ಚರ್ಮ ಮಾರಾಟಗಾರರ ಸಂಯುಕ್ತ ಸಂಘ(IFTF)ಗಳ ಮಧ್ಯೆ ವಿಚಾರ ವಿನಿ ಮಯವಾಗಿ 23 ರಾಷ್ಟ್ರಗಳ ಸದಸ್ಯರುಗಳು ಸೇರಿ IUCNದ ಕೆಂಪು ಗ್ರಂಥದಲ್ಲಿ ಸೇರಿದ ಅಪಾಯಕ್ಕೀಡಾದ ಹುಲಿ, ಚಿರತೆ, ಬಿಳಿ ಚಿರತೆ, ಮೋಘ ಚಿರತೆ ಹಾಗೂ ಇತರ ಪ್ರಾಣಿಗಳ ಚರ್ಮಗಳ ವ್ಯವಹಾರವನ್ನು ಸ್ವಪ್ರೇರಣೆಯಿಂದ ನಿಷೇಧಿಸಲು ನಿರ್ಧರಿಸಲಾಗಿದೆ. ಇದಕ್ಕೆ ಬೆಂಬಲವಾಗಿ ಅಮೇರಿಕದ ಚರ್ಮಗಾರರ ಸಂಯುಕ್ತ ಮಂಡಲಿ(FJC)ಯೂ ಸ್ವಪ್ರೇರಣೆಯಿಂದ ಮೇಲಿನ ಯಾವುದೇ ಚರ್ಮಗಳನ್ನು ಕತ್ತರಿಸುವ, ಆಕಾರಕೊಡುವ, ಹೊಲಿಯುವ ಕೆಲಸಗಳನ್ನು ಕೈಗೊಳ್ಳುವುದಿಲ್ಲ ಎಂದು ಒಪ್ಪಿಕೊಂಡಿದ್ದಾರೆ. ಇದು ಸಂರಕ್ಷಣೆಯ ದೃಷ್ಟಿಯಿಂದ ಅತಿ ಮಹತ್ವದ ಸಾಧನೆ ಯಾಗಿದೆ. ಜನತೆಯ ದೃಷ್ಟಿ ಬದಲಾವಣೆಯ ಪ್ರತಿಕ್ರಿಯೆಯಿಂದ ಅನೇಕ ಪ್ರಮುಖ ಅಲಂಕಾರದ ಅಂಗಡಿಗಳು ಇಂತಹ ಚರ್ಮಗಳನ್ನು ಪ್ರದರ್ಶಿಸುವುದನ್ನು ಕೂಡಲೆ ನಿಲ್ಲಿಸಲು ಸಹಕರಿಸಿ ಅವುಗಳ ಬದಲಾಗಿ ಒಳ್ಳೆಯ ಮಾನವನಿರ್ಮಿತ ಕೃತಕ ಸಂಯೋಗ ದಿಂದ ತಯಾರಿಸಿದ ಚರ್ಮಗಳನ್ನು ಮಾರಾಟಮಾಡಲು ಪ್ರಾರಂಭಿಸಿದರು.

ಕೃತಕ ಚರ್ಮಗಳ ಪ್ರಚಾರ

ಈಗ ವಿಶ್ವದಲ್ಲೆಲ್ಲ ಅಪಾಯಕ್ಕೊಳಗಾದ ಬೆಕ್ಕಿನ ಜಾತಿಯ ಎಲ್ಲ ಪ್ರಾಣಿಗಳ ಚಿಂತಾಜನಕ ಸ್ಥಿತಿಯ ಬಗ್ಗೆ ಸಾಕಷ್ಟು ಪ್ರಚಾರ ನಡೆದಿದೆ. ಹೆಚ್ಚಿನ ರೀತಿಯಲ್ಲಿ ಕೃತಕ ಸಂಯೋಗದಿಂದ ತಯಾರಿಸಿದ ಚರ್ಮಗಳ ಬಗ್ಗೆ ದಿನಪತ್ರಿಕೆ, ವಾರಪತ್ರಿಕೆ ಹಾಗೂ ಮಾಸಪತ್ರಿಕೆಗಳಲ್ಲಿ ಪ್ರಚಾರವೂ ಸಾಗಿದೆ. ಎಲ್ಲೆಡೆಯಲ್ಲಿಯೂ ಹೆಂಗಸರು ಅಪಾಯಕ್ಕೊಳಗಾದ ಪ್ರಾಣಿಗಳ ಚರ್ಮಗಳನ್ನು ಇನ್ನುಮುಂದೆ ಧರಿಸುವುದು ಅಯೋಗ್ಯ ಹಾಗೂ ನೈತಿಕ ದೃಷ್ಟಿಯಿಂದ ಅಸಹನೀಯವೆಂದು ತಿಳಿಯಲಾರಂಭಿಸಿದ್ದಾರೆ. ತರುಣರು ಈ ಚಳುವಳಿಗೆ ಬೆಂಬಲಕೊಟ್ಟು, ನಿಜವಾಗಿಯೂ ನ್ಯೂಯಾರ್ಕ್ ಪಟ್ಟಣದ ಐದನೇ ಅವೆನ್ಯೂದಲ್ಲಿ ಹುಲಿ ಚರ್ಮದಿಂದ ಮಾಡಿದ ಕೋಟುಗಳನ್ನು ತೊಟ್ಟ ಹೆಂಗಸರಿಗೆ ತಿರಸ್ಕಾರ ಸೂಚಿಸುತ್ತಾರಂತೆ. ಪರದೇಶದವರೇ ಹುಲಿಯ ಉಳಿವಿಗಾಗಿ ಈ ರೀತಿ ದೃಢಸಂಕಲ್ಪ ಮಾಡಿದಾಗ ಭಾರತದವರೇಕೆ ಮಾಡಬಾರದು? ಬ್ರಿಟಿಷ್ ಸೇನಾ ದಳಗಳು ತಮ್ಮ ಬ್ಯಾಂಡಿನ ಜವಾನರ ಉತ್ಸವದ ಉಡುಪಿಗಾಗಿ ಹುಲಿ ಹಾಗೂ ಚಿರತೆಗಳ ಚರ್ಮಗಳನ್ನು ಕೊಳ್ಳಬಾರದೆಂದು ನಿಶ್ಚಯಿಸಿದ್ದಾರೆ. ಕೊನೆಯದಾಗಿ ವಿಶ್ವ ವನ್ಯಮೃಗನಿಧಿ ಎಲ್ಲ ಪಾಶ್ಚಾತ್ಯ ದೇಶಗಳ ಸರಕಾರಗಳ ಚರ್ಮಗಳನ್ನು ಆಮದು ಮಾಡಿಕೊಳ್ಳದಂತೆ ಬಹಿಷ್ಕರಿಸಲು ಕೋರಿದೆ. ಅನೇಕ ದೇಶಗಳು ಇದಕ್ಕೆ ಪರವಾಗಿ ಉತ್ತರಿಸಿದ್ದಾರೆ. ಮತ್ತು ಕೆಲವು ದೇಶಗಳಲ್ಲಿ ಸೂಕ್ತಕಾನೂನುಗಳನ್ನು ತಯಾರಿಸುವಲ್ಲಿ ನಿರತರಾಗಿದ್ದಾರೆ. ಆದರೆ ಇದು ಬಹಳ ನಿಧಾನವಾದ ವಿಧಾನ. ಅಮೇರಿಕ ಈಗಾಗಲೆ ಚರ್ಮಗಳ ಆಮದನ್ನು ಬಹಿಷ್ಕರಿಸಿದೆ. ಆದರೆ ಗ್ರೇಟ್‌ಬ್ರಿಟನ್ ಮುಖಾಂತರ

ಹಾದುಹೋಗುವುದನ್ನು ಶೇಕಡಾ 80ರಷ್ಟು ಆತಂಕ ಮಾಡಿದರೂ ಇನ್ನೂ ಚರ್ಮಗಳಿಂದ ತಯಾರಿಸಿದ ಕೋಟುಗಳ ರೂಪದಲ್ಲಿ ಸಾಗಾಟವಾಗುತ್ತಿದೆ. ನಮ್ಮ ದೇಶದ ಅನೇಕ ಪಟ್ಟಣಗಳ ಮಾರುಕಟ್ಟೆಗಳಲ್ಲಿ ಚರ್ಮಗಳಿಂದ ತಯಾರಿಸಿದ ವಸ್ತುಗಳ ಮಾರಾಟ ಈಗಲೂ ನಡೆಯುತ್ತಲೇ ಇದೆ.

ವಿಶ್ವವನ್ಯಮೃಗನಿಧಿಯ ಪ್ರಚೋದನೆಯಿಂದ ಜಗತ್ತಿನ 60 ವಿಮಾನ ಕಂಪನಿಗಳು ಹುಲಿ ಬೇಟೆಗಾರರ ಸಿಬ್ಬಂದಿಗಳನ್ನು ತಮ್ಮ ವಿಮಾನಗಳಲ್ಲಿ ಕರೆದೊಯ್ಯುವುದಿಲ್ಲವೆಂದು ಒಪ್ಪಿಕೊಂಡಿದ್ದಾರೆ. ಇದೂ ಕೂಡ ಅಪಾಯಕ್ಕೀಡಾದ ಹುಲಿಯನ್ನು ರಕ್ಷಿಸಲು ಸಹಾಯವಾಗುತ್ತದೆ.

ಭಾರತ ಹಾಗೂ ಅಕ್ಕಪಕ್ಕದ ದೇಶಗಳಲ್ಲಿ ಬೇಟೆಗಳ್ಳರು ಚರ್ಮಗಳನ್ನು ಮಾರದಂತೆ ಕಾಳಸಂತೆಯನ್ನು ಅಡಗಿಸಬೇಕು. ಇನ್ನೂ ಚಿಕ್ಕ ಅಂಗಡಿಗಳಲ್ಲಿ ಹಾಗೂ ಕಾಳಸಂತೆ ಕೋರರ ಹತ್ತಿರ ಸಾವಿರಗಟ್ಟಲೆ ಚರ್ಮಗಳಿದ್ದು ಅವುಗಳನ್ನು ಬಚ್ಚಿಟ್ಟು ದೊಡ್ಡ ದೊಡ್ಡ ಹೋಟೆಲ್‌ಗಳಲ್ಲಿ ಮಾರುತ್ತಿದ್ದಾರೆ. ಆದರೆ ಕಾನೂನು ಇದರಲ್ಲಿ ಕೈಹಾಕಲು ಅಸಹಾಯಕವಾಗಿದೆ. ವಿಶದವಾಗಿ ಇದಕ್ಕೆ ಪರಿಹಾರವೇನೆಂದರೆ ಇದ್ದ ಎಲ್ಲ ಚರ್ಮಗಳನ್ನು ಗುತ್ತಿಗೆ ಬೆಲೆಯಲ್ಲಿ ಸರಕಾರ ಕೊಂಡುಕೊಳ್ಳಬೇಕು. ನಂತರ ಮಾರಾಟಮಾಡತಕ್ಕಂತಹ ಎಲ್ಲ ಚರ್ಮಗಳನ್ನು ಹಿಡಿದು ಮುಟ್ಟುಗೋಲು ಹಾಕಬೇಕಲ್ಲದೆ ಕಾನೂನುರೀತ್ಯ ಕ್ರಮ ಜರುಗಿಸ ಬೇಕು.

ಮೇಲಾಗಿ ನರಭಕ್ಷಕ ಹುಲಿಗಳ ಅಥವಾ ದೃಢಪಟ್ಟ ದನಗಳ್ಳ ಹುಲಿಗಳನ್ನು ಕಾನೂನು ರೀತ್ಯ ರಹದಾರಿ ಪಡೆದು ಕೊಂದ ಹುಲಿಗಳ ಚರ್ಮಗಳೂ ಸ್ವಾಭಾವಿಕವಾಗಿ ಸರಕಾರದ ಸೊತ್ತಾಗಬೇಕು.

ಇತ್ತೀಚೆಗೆ ಹೆಚ್ಚಿನ ಪ್ರಮಾಣದಲ್ಲಿ ಅರಣ್ಯ ಸಿಬ್ಬಂದಿಯವರು ಸಾಹಸದ ಪ್ರಯತ್ನಗಳನ್ನು ಮಾಡಿದರೂ ಮೀಸಲು ಕಾಡುಗಳಲ್ಲಿ ಅನೇಕ ಹುಲಿಗಳ ಬೇಟೆಗಳ್ಳತನ ನಡೆಯುತ್ತಲೇ ಇದೆ. ಸ್ಥಳೀಯ ಅರಣ್ಯಾಧಿಕಾರಿಗಳೂ ಹುಲಿಗಳನ್ನು ರಕ್ಷಿಸಲು ಸಾಧ್ಯವಿದ್ದಷ್ಟು ಪ್ರಯತ್ನ ಮಾಡುತ್ತಿರುತ್ತಾರೆ. ಆದರೆ ಭಾರೀ ಪ್ರಮಾಣದಲ್ಲಿ ಏರ್ಪಡಿಸಿದ ವಾಣಿಜ್ಯಹೊಣೆಗಾರಿಕೆಯ ಬೇಟೆಗಳ್ಳತನವನ್ನು ಸಂಪೂರ್ಣ ಕೊನೆಗಾಣಿಸಬೇಕಾದರೆ ಸಾಕಷ್ಟು ಹಣ, ಹೆಚ್ಚಿನ ಹಾಗೂ ಯೋಗ್ಯ ಸಿಬ್ಬಂದಿವರ್ಗ, ದ್ವಿಮಾರ್ಗ ರೇಡಿಯೋ ಸೆಟ್‌ಗಳು, ಸಿಬ್ಬಂದಿಯವರಿಗೆ ವಸತಿ ಸೌಕರ್ಯಗಳ ಅತ್ಯಾವಶ್ಯಕತೆ ಇದೆ. ಅರಣ್ಯ ಸಿಬ್ಬಂದಿ ವರ್ಗದವರನ್ನು ಪ್ರಯೋಜನಕಾರಿಯಾಗಿ ಬಿಗಿಪಡಿಸುವುದರೊಂದಿಗೆ ಅಪರಾಧಿಗಳನ್ನು ಹಿಡಿಯಲು ಪ್ರೋತ್ಸಾಹ ಕೊಡಬೇಕು. ಆದರೆ ವನ್ಯಮೃಗ ಸಂರಕ್ಷಣೆಯ ಕಾನೂನುಗಳನ್ನು ಅತಿ ಪ್ರಯೋಜನಕಾರಿಯಾಗಿ ಕಾರ್ಯಾಚರಣೆಗೆ ತರದಿದ್ದರೆ ಪ್ರಸ್ತುತ ನಿಯಮಗಳು ಸತ್ತಂತೆಯೇ.

1920ರಿಂದ ಹುಲಿಗಳ ಬೇಟೆಯನ್ನು ಕಾನೂನಿನಿಂದ ನಿಯಂತ್ರಿಸಿ ಕೇವಲ

'ಆನಂದ'ವನ್ನು ಮೀಸಲಾಗಿರಿಸಲಾಗಿತ್ತು. ಆಗ ಹುಲಿ ಸಂತಾನ ಹಿಂಸೆಯಿಂದ ಕೊಂಚ ಮಟ್ಟಿಗೆ ತಪ್ಪಿಸಿಕೊಂಡಿತ್ತು. ಆದರೆ ಕಳೆದ 25 ವರ್ಷಗಳಲ್ಲಿ, ಬ್ರಿಟಿಷ್‌ರ ಕಟ್ಟುನಿಟ್ಟಿನ ಕಾನೂನುಗಳನ್ನು ಕಡೆಗಣಿಸಿ ಮತ್ತೆ ಹುಲಿಯ ಬೇಟೆ ಅಳತೆಗೆಟ್ಟು ನಡೆಯಿತು. 1970ರಿಂದ ಹುಲಿ ಬೇಟೆಯನ್ನು ಸಂಪೂರ್ಣ ನಿಷೇಧಿಸಲಾಯಿತು. ಅದೇ ವರ್ಷದಿಂದ ಹುಲಿಚರ್ಮದ ರಫ್ತನ್ನೂ ಪ್ರತಿಬಂಧಿಸಲಾಗಿತ್ತು. 1972ರಲ್ಲಿ ಹುಲಿಯನ್ನು 'ಭಾರತದ ರಾಷ್ಟ್ರೀಯ ಮೃಗ'ವೆಂದು ಸಾರಲಾಯಿತು. 1972ರ ವನ್ಯಜೀವಿ ಸಂರಕ್ಷಣೆ ಕಾಯಿದೆ ಭಾರತದ ಪ್ರಾಣಿಸಂಪತ್ತನ್ನು ಉಳಿಸಿಕೊಂಡು ಬರುವಲ್ಲಿ ಮಹತ್ವ ಮತ್ತು ದಿಟ್ಟತನದ ಮುನ್ನಡೆಯಾಗಿದೆ.

ನೂತನ ಕಾನೂನು ಕ್ರಮ

ವನ್ಯಜೀವಿ ಸಂರಕ್ಷಣೆ ಕಾಯಿದೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಪ್ರತಿಯೊಂದು ರಾಜ್ಯದಲ್ಲಿಯೂ ನೂತನವಾಗಿ 'ವನ್ಯಪ್ರಾಣಿ ಸಂರಕ್ಷಣೆ ವಿಭಾಗ' ರಚಿಸಲ್ಪಟ್ಟಿದೆ. ವನ್ಯಪ್ರಾಣಿಗಳ ಸಂರಕ್ಷಣೆ, ಅವುಗಳ ಸಂತತಿ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುವುದು ಹಾಗೂ ವನ್ಯಮೃಗಗಳ ವಧೆ ಸಂಪೂರ್ಣ ನಿಲ್ಲಿಸುವುದೂ ಕಾನೂನಿನ ಕಾರ್ಯಕ್ರಮಗಳಲ್ಲಿ ಸೇರಿವೆ.

ವನ್ಯಮೃಗ ಸಂರಕ್ಷಣಾ ಕಾಯಿದೆಯನ್ವಯ ವನ್ಯಪ್ರಾಣಿಗಳನ್ನು ಬೋನುಗಳಲ್ಲಿ ಹಿಡಿದಿಡುವುದು, ಪ್ರೀತಿಯ ಪ್ರಾಣಿಗಳೆಂದು ಸಾಕುವುದು ಹಾಗೂ ಅವುಗಳ ವ್ಯಾಪಾರವನ್ನು ನಿಷೇಧಿಸಲಾಗಿದೆ. ಪ್ರಾಣಿಗಳ ಚರ್ಮ, ಚರ್ಮದಿಂದ ತಯಾರಾದ ವಸ್ತುಗಳನ್ನು ದಾಸ್ತಾನು ಮಾಡುವುದು, ಪ್ರದರ್ಶಿಸುವುದು ಹಾಗೂ ಮಾರಾಟಮಾಡುವುದು ಅಪರಾಧವಾಗಿರುತ್ತದೆ. ಪ್ರಾಣಿಗಳ ಚರ್ಮಗಳನ್ನು ಹದಮಾಡುವುದು ಹಾಗೂ ತುಂಬಿಸಿದ ಪ್ರಾಣಿಗಳನ್ನು ತಯಾರಿಸುವುದೂ ಕೂಡ ಅಪರಾಧ. ವನ್ಯಪ್ರಾಣಿಗಳ ಮಾಂಸ ಮಾರಾಟಮಾಡುವುದು ಹಾಗೂ ಅದರಿಂದ ತಯಾರಿಸಿದ ಆಹಾರವನ್ನು ಹೋಟೆಲ್‌ಗಳಲ್ಲಿ ಸರಬರಾಜು ಕೂಡ ಅಪರಾಧವೆಂದು ಜಾಹಿರಪಡಿಸಿದೆ. ಇವೆಲ್ಲವುಗಳಿಗೂ ಕ್ರಮಬದ್ಧ ರಹದಾರಿ ಪಡೆಯಬೇಕು.

ಈ ಕಾಯಿದೆಯನ್ನು ಜಾರಿಗೊಳಿಸಲು ಸಾಕಷ್ಟು ತರಬೇತಿಪಡೆದ ಸಿಬ್ಬಂದಿಯವರ ಆವಶ್ಯಕತೆಯಿದ್ದು ಅವರು ನಿಸರ್ಗದ ಸಂರಕ್ಷಣೆಯಲ್ಲಿ ಆಸ್ಥೆಯುಳ್ಳವರೂ ಹಾಗೂ ಹೆಚ್ಚಾಗಿ ಶಾಖಾಹಾರಿಗಳು ಇರುವುದು ತಕ್ಕದ್ದಾಗಿದೆ. ಈ ಸಿಬ್ಬಂದಿ ವರ್ಗಕ್ಕೆ ಹಾಗೂ ವನ್ಯಮೃಗ ಸಂರಕ್ಷಣೆಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿನಿಯೋಗಿಸುವ ಹಣವನ್ನು ಪ್ರವಾಸೋದ್ಯಮದಿಂದ ವಾಪಸ್ ಪಡೆದುಕೊಳ್ಳುವ ಕಾರ್ಯಕ್ರಮವನ್ನು ಸರಕಾರಗಳು ಹಾಕಿಕೊಂಡಿವೆ. ಪ್ರಪಂಚದಲ್ಲೆಲ್ಲ ವನ್ಯಮೃಗಗಳು ಪ್ರವಾಸಿಗರನ್ನು ಹೆಚ್ಚಿನ ಪ್ರಮಾಣದಲ್ಲಿ ಆಕರ್ಷಿಸುತ್ತಿದ್ದು ನಮ್ಮ ದೇಶದ ಪ್ರಾಣಿಗಳು ಆಫ್ರಿಕಾ ದೇಶದ ಪ್ರಾಣಿಗಳಿಗಿಂತ ಕೀಳಾಗಿಲ್ಲ. ಆಧುನಿಕ ಪ್ರವಾಸಿಗರಿಗೆ ಕೋವಿಯಿಂದ ವನ್ಯಪ್ರಾಣಿಗಳನ್ನು ಶೂಟ್ ಮಾಡಿಸುವ ಬದಲು ಕ್ಯಾಮರಾದಿಂದ ಶೂಟ್ ಮಾಡಲು ಎಲ್ಲ ಅನುಕೂಲತೆಗಳನ್ನು ಒದಗಿಸಿ ಹೆಚ್ಚು ಜನರನ್ನು ಆಕರ್ಷಿಸುವುದು ಇದರ ಮುಖ್ಯ

ಉದ್ದೇಶ. ಈಗಲಾದರೂ ನಾವು ವನ್ಯಪ್ರಾಣಿಗಳ ವಧೆಯನ್ನು ನಿಲ್ಲಿಸದೇ ಹೋದರೆ ವಂಶಪಾರಂಪರ್ಯವಾಗಿ ಬಂದ ವನ್ಯಪ್ರಾಣಿಗಳು ಉಳಿಯದೆ ಅವುಗಳನ್ನು ಚಿತ್ರ ಹಾಗೂ ಪುಸ್ತಕಗಳಲ್ಲಿ, ಅವುಗಳ ಹದಮಾಡಿದ ಚರ್ಮಗಳನ್ನು ಮಾತ್ರ ನೋಡಿಕೊಂಡು, ಅವುಗಳ ಬಗ್ಗೆ ಮಾತಾಡಿಕೊಂಡು ಇರಬೇಕಾಗುವುದು.

ಬಂದೂಕುಗಳ ಹಂಚಿಕೆ ಕ್ರಮ

ರಾಷ್ಟ್ರೀಯ ಉದ್ಯಾನವನಗಳ ಅಂಚಿನಲ್ಲಿ ರುವ ಹಾಗೂ ಇನ್ನಿತರ ಕಾಡುಗಳ ಮಧ್ಯ ಇರುವ ಹಳ್ಳಿಗಳ ಜನರಿಗೆ ಬೆಳೆರಕ್ಷಣೆ ಹಾಗೂ ಸ್ವರಕ್ಷಣೆ ಬಂದೂಕುಗಳ ಹಂಚಿಕೆಯ ಅಧಿಕಾರ ಅರಣ್ಯಖಾತೆಗೆ ವರ್ಗಾಯಿಸುವ ಸಾಧ್ಯತೆಯನ್ನು ಪರಿಶೀಲಿಸುವುದು ಹಿತಕರ. ಏಕೆಂದರೆ ಅರಣ್ಯ ಸಿಬ್ಬಂದಿವರ್ಗದವರು ಸ್ಥಳೀಯರಾದ್ದರಿಂದ ವಸ್ತುಸ್ಥಿತಿಗಳನ್ನವಲಂಬಿಸಿ, ಅರ್ಜಿಗಳ ಪರಿಶೀಲನೆ ನಡೆಯಿಸಿ ಸೂಕ್ತಕ್ರಮ ತೆಗೆದುಕೊಳ್ಳಲು ಅನುಕೂಲವಾಗುವುದು. ಎಲ್ಲ ಬೆಳೆರಕ್ಷಣೆ ಬಂದೂಕುಗಳನ್ನು ವರ್ಷದಲ್ಲಿ ಎರಡು ಬೆಳೆಗಳನ್ನು ಬೆಳೆಸುವ ಪ್ರದೇಶಗಳನ್ನು ಹೊರತುಪಡಿಸಿ ಜನವರಿ ಅಥವಾ ಫೆಬ್ರುವರಿಯ ಎಡಬಲ ವಾಪಸ್ ತರಿಸಲ್ಪಟ್ಟು ಪೋಲಿಸ್ ಖಾತೆಯಲ್ಲಿ ಜಮಾಪಡಿಸಬೇಕು. ಈ ಸಮಯಕ್ಕೆ ಹೊಲಗದ್ದೆಗಳಲ್ಲಿ ಪೈರುಗಳು ಇರುವುದಿಲ್ಲ ಮತ್ತು ಜುಲೈ ಮಧ್ಯದ ಅವಧಿಯಲ್ಲಿ ಮಳೆಗಾಲದಲ್ಲಿ ಪುನಃ ಅವುಗಳನ್ನು ಹಂಚಬೇಕು.

ಸ್ವರಕ್ಷಣೆಗೆಂದು ಹಂಚುವ ಬಂದೂಕುಗಳಿಗೆ ಕಾರ್ಯಮುದ್ರೆ ಹಾಕಿಸಬೇಕು. ಒಂದು ವೇಳೆ ಮುದ್ರೆ ಮುರಿದರೆ ಘಟನೆಯ ನಿಜಸ್ವರೂಪವನ್ನು ಸಿದ್ಧಪಡಿಸುವ ಜವಾಬ್ದಾರಿ ಅವನದ್ದಾಗಿರಬೇಕು. ಕೋರ್ಟುಗಳಲ್ಲಿ ಅಪರಾಧಗಳನ್ನು ಉಗ್ರರೀತಿಯಲ್ಲಿ ಪರಿಶೀಲಿಸಿ ತೀಕ್ಷ್ಣ ಶಿಕ್ಷೆ ವಿಧಿಸಲು ಒಡಂಬಡಿಸಬೇಕು.

ಉದಾರ ಭಾವನೆ

ರಾಷ್ಟ್ರೀಯ ಉದ್ಯಾನವನಗಳ ಒಳಗೆ ಹಾಗೂ ಅಂಚಿನಲ್ಲಿಇದ್ದ ಹೊಲಗದ್ದೆಗಳನ್ನು ಕಂದಕಗಳಿಂದ ಬೇರ್ಪಡಿಸುವುದು ಒಳ್ಳೆಯದು. ಇದರಿಂದ ವನ್ಯಮೃಗಗಳು ಹೊಲಗದ್ದೆಗಳಲ್ಲಿದ್ದ ಬೆಳೆಗಳ ಮೇಲೆ ದಾಳಿಮಾಡಲಾರವು. ಆಗ ರೈತನು ವಿನಾಕಾರಣ ಕಾಡುಪ್ರಾಣಿಗಳ ಮೇಲೆ ಕೈಮಾಡಲಾರ. ನಮ್ಮ ಜನತೆ ವನ್ಯಮೃಗಗಳಿಂದಾಗುವ ಪ್ರತ್ಯಕ್ಷ ಹಾಗೂ ಪರೋಕ್ಷ ಲಾಭಗಳ ಬಗ್ಗೆ ಮನಗಂಡರೆ ಅವರು ತಮ್ಮ ಬೆಳೆಗಳಿಗೆ ಹಾನಿ ಸಂಭವಿಸಿದರೂ ವನ್ಯಮೃಗಗಳನ್ನು ಸಂರಕ್ಷಿಸಿ ಪೋಷಿಸಲು ಹೆಣಗಾಡುತ್ತಾರೆಂಬುದು ರಾಣೇಬೆನ್ನೂರು ಕೃಷ್ಣಮೃಗ ಧಾಮದ ಸುತ್ತಲಿರುವ ಜನರ ಉದಾರ ಭಾವನೆಯಿಂದ ಮನದಟ್ಟಾಗುತ್ತದೆ. ಅವರ ಬೆಳೆಗಳಿಗೆ ಕೃಷ್ಣಮೃಗಗಳಿಂದ ಸ್ವಲ್ಪಮಟ್ಟಿಗೆ ಹಾನಿ ಸಂಭವಿಸಿದರೂ ಅರಣ್ಯ ಖಾತೆಯೊಂದಿಗೆ ಸಹಕರಿಸಿದ ಪರಿಣಾಮದಿಂದ ಅಲ್ಲಿ ಈಗ 800ಕ್ಕಿಂತಲೂ ಹೆಚ್ಚು ಕೃಷ್ಣಮೃಗಗಳು ಕಂಡುಬಂದಿವೆ. ಅವುಗಳೊಂದಿಗೆ ನಿರ್ಮೂಲವಾಗುವ ಹಂತದಲ್ಲಿದ್ದ 'ಗ್ರೇಟ್ ಇಂಡಿ

ಯನ್ ಬಸ್ಟಾರ್ಡ್' ಎಂಬ ಪಕ್ಷಿಗಳ ಸಂಖ್ಯೆಯೂ ಏರುತ್ತಿದೆ. ಅಲ್ಲಿ ಈಗ ಚಿರತೆಗಳೂ ಕಾಣಿಸಿಕೊಳ್ಳಲಾರಂಭಿಸಿವೆ.

ಹೆಚ್ಚು ಪ್ರಮಾಣದಲ್ಲಿ ನಮ್ಮ ಜನತೆ ವಿವಿಧ ವನ್ಯಮೃಗ ಹಾಗೂ ಪಕ್ಷಿಗಳನ್ನು ಅವುಗಳ ನೈಸರ್ಗಿಕ ತವರು ಕಾಡಿನಲ್ಲೇ ನೋಡುವಂತಾಗಬೇಕು. ಆಗ ಮಾತ್ರ ಅವರು ತಮ್ಮ ದೇಶದ ನೈಸರ್ಗಿಕ ಸಸ್ಯ ಹಾಗೂ ಪ್ರಾಣಿಜೀವಿಗಳನ್ನು ಸಂರಕ್ಷಿಸಿ, ಪೋಷಿಸಿ ದೇಶದ ಪ್ರವಾಸೋದ್ಯಮವನ್ನು ಪುಷ್ಟಿಗೊಳಿಸಲು ಹೆಮ್ಮೆಪಡುತ್ತಾರೆ.

ಕೊನೆಯದಾಗಿ ನಿಸರ್ಗ ಹಾಗೂ ವನ್ಯಪ್ರಾಣಿಗಳ ಮಹತ್ವದ ಅಂಶವನ್ನು ಶಾಲೆ ಕಾಲೇಜು ಮಟ್ಟದಲ್ಲಿಯೇ ಮಕ್ಕಳಿಗೆ ಬೋಧಿಸಬೇಕು.

ಹುಲಿ ಅಭಿವೃದ್ಧಿ ಯೋಜನೆಗಳು

ಕಾಡಿನಲ್ಲಿಯ ವನ್ಯಪ್ರಾಣಿಗಳ ನಿರ್ವಹಣೆ ಎಂದರೆ ಮುಖ್ಯವಾಗಿ ಅವುಗಳ ಸಂರಕ್ಷಣೆ ಹಾಗೂ ಅವುಗಳ ಸಂಖ್ಯೆಯನ್ನು ಹತೋಟಿಯಲ್ಲಿಡುವುದು ಎಂದು ಸಾಮಾನ್ಯವಾದ ತಪ್ಪು ಅಭಿಪ್ರಾಯ ಉಂಟಾಗಿದೆ. ಈ ಜಟಿಲ ಪ್ರಶ್ನೆಯನ್ನು ಅತಿ ಉಪಯುಕ್ತ ರೀತಿಯಲ್ಲಿ ಬಗೆಹರಿಸುವ ನನ್ನ ಬಲವಾದ ಸಲಹೆಯೆಂದರೆ ವನ್ಯಪ್ರಾಣಿಗಳನ್ನು ತಮ್ಮ ಸುತ್ತಲ ಸನ್ನಿವೇಶದೊಡನೆ ಅವುಗಳ ಪಾಡಿಗೆ ಅವುಗಳನ್ನು ಬಿಟ್ಟುಬಿಡುವುದು ಸೂಕ್ತ. ವನ್ಯಮೃಗಗಳ ನಿವಾಸಸ್ಥಾನವಾದ ನೈಸರ್ಗಿಕ ಅರಣ್ಯವನ್ನು ಮನುಷ್ಯ ವಿನಾಕಾರಣ ಕೈಹಾಕಿ ಹಾಳುಮಾಡದೆ ಸಂರಕ್ಷಿಸಿ ಕಾಪಾಡಿಕೊಂಡು ಬಂದರೆ ಈ ಕಾರ್ಯ ಸಾಧಿಸಿದಂತಾಗುತ್ತದೆ.

ಅರಣ್ಯ ಕಾರ್ಯನೀತಿ: ಪ್ರಸ್ತುತ ರಾಷ್ಟ್ರೀಯ ಅರಣ್ಯ ಕಾರ್ಯನೀತಿಯಂತೆ ಕನಿಷ್ಠ ಪಕ್ಷ ಒಟ್ಟುಭೂಮಿ ವಿಸ್ತಾರದ $\frac{1}{3}$ರಷ್ಟಾದರೂ ಕಾಡು ಇರಬೇಕೆಂಬ ನಿಯಮವಿದ್ದರೂ ಈಗ ಭಾರತದಲ್ಲಿ ಶೇಕಡಾ 19ರಷ್ಟಿದ್ದು ಕರ್ನಾಟಕ ರಾಜ್ಯದಲ್ಲಿಯೂ ಶೇಕಡಾ 19ರಷ್ಟು ಅರಣ್ಯಕ್ಷೇತ್ರ ಮಾತ್ರ ಇದೆ. ಆದರೆ ಗಿಡಮರಗಳಿಂದ ಕೂಡಿದ ಕಾಡು ಇನ್ನೂ ಕಡಮೆ ಪ್ರಮಾಣದಲ್ಲಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಕಾಡು ಭೂಸವಕಳಿಯನ್ನು ತಡೆಗಟ್ಟಿಮಳೆಯ ಪ್ರಮಾಣವನ್ನು ಹೆಚ್ಚಿಸುವುದಲ್ಲದೆ ಈಗ ವನ್ಯ ಮೃಗಗಳಿಗೆ ಅಪಾಯ ತಂದೊಡ್ಡಿರುವ ಸಸ್ಯ-ಪ್ರಾಣಿಗಳಿಗೂ ಅವುಗಳ ಸುತ್ತಲ ಸನ್ನಿವೇಶದೊಡನೆ ಇರುವ ಸಂಬಂಧ ಏರುಪೇರು ಆಗುವುದರಿಂದ ತಡೆಯುತ್ತದೆ. ಆಸ್ಫೋಟನಗೊಳ್ಳುತ್ತಿರುವ ಜನಸಂಖ್ಯೆ ಹಾಗೂ ದನಕರುಗಳಿಂದ ಭೂಮಿಯ ಮೇಲಿನ ಒತ್ತಡಗಳಿಂದಾಗಿ ಕಾಡು ಹೆಚ್ಚಿನ ಪ್ರಮಾಣದಲ್ಲಿ ತೀವ್ರವೇಗದಲ್ಲಿ ಕರಗುತ್ತಿದೆ. ನಮ್ಮ ನಾಡು ಇನ್ನೊಂದು ಸಹರಾ ಮರುಭೂಮಿ ಆಗುವುದರಿಂದ ತಪ್ಪಿಸಲೇಬೇಕಾಗಿದೆ.

ಈಗಿನ ರಾಷ್ಟ್ರೀಯ ವನ ಹಾಗೂ ವನ್ಯಮೃಗಧಾಮಗಳ ವಿಸ್ತರಣೆ ಒಟ್ಟು ಅರಣ್ಯಪ್ರದೇಶದ ಶೇಕಡಾ 2.3ರಷ್ಟು ಅಥವಾ ಒಟ್ಟು ಭೂಮಿಯ ಶೇಕಡಾ 0.355 ರಷ್ಟಿದ್ದು ಇನ್ನೂ ಹೊಸ ವನ್ಯಮೃಗಧಾಮಗಳನ್ನು ಸೃಷ್ಟಿಸಲು ಅವಕಾಶವಿದೆ. ಕನಿಷ್ಠ

ಪಕ್ಷ ಒಟ್ಟು ಭೂಮಿಯ ಶೇಕಡಾ 4ರಷ್ಟಾದರೂ ದೇಶದಲ್ಲಿ ವನ್ಯಮೃಗಧಾಮಗಳು ಇರುವಂತೆ ಪ್ರಯತ್ನಿಸ ಬೇಕು. ಇವೆಲ್ಲವೂ ರಾಷ್ಟ್ರಾದ್ಯಂತ ಯೋಗ್ಯ ಪ್ರಮಾಣದಲ್ಲಿ ಹಂಚಿಕೆಯಾಗಬೇಕು. ಈ ಎಲ್ಲ ಕಾರ್ಯ ನಿರ್ವಹಣೆಯಲ್ಲಿ ಸ್ಥಳೀಯ ರಾಜಕೀಯ ಹಾಗೂ ಇತರ ಯಾವುದೇ ಪ್ರಭಾವಕ್ಕೊಳಗಾಗದಂತೆ ನೋಡಿಕೊಳ್ಳಲು ಭಾರತ ಸರಕಾರದ ಕಾರ್ಯನಿರ್ವಹಣೆ ಅಥವಾ ಗುತ್ತಿಗೆ ರೂಪದಲ್ಲಿ ವನ್ಯಮೃಗಧಾಮಗಳನ್ನು ವರ್ಗಾಯಿಸುವುದು ಹಿತವಾದದ್ದು.

ಅರಣ್ಯಾಭಿವೃದ್ಧಿ ಯೋಜನೆ: ಮೇಲಾಗಿ ಜಲಾಶಯ ಹಾಗೂ ವಿದ್ಯುಜ್ಜನಕ ಯೋಜನೆಗಳಿಂದ ಲಕ್ಷಾಂತರ ಎಕರೆಗಳಲ್ಲಿ ಅರಣ್ಯ ಮುಳುಗಡೆಯಾಗುತ್ತಿದೆ. ಈ ಹಾನಿಯನ್ನು ತುಂಬಿಕೊಡಲು ಅರಣ್ಯ ಸಂಪತ್ತಿನ ಪೋಷಣೆ ಹಾಗೂ ಸಂರಕ್ಷಣೆ ಮಾಡಲು ಯಾವ ಪ್ರಯತ್ನಗಳೂ ನಡೆಯುತ್ತಿಲ್ಲ. ಕೋಟ್ಯಾಂತರ ರೂಪಾಯಿಗಳ ಖರ್ಚಿನಲ್ಲಿ ಅನೇಕ ಮಹಾ ಮಹಾ ಅಣೆಕಟ್ಟುಗಳನ್ನು ಕಟ್ಟಿಸಿ ಮಹಾಸಾಗರಗಳಂತಹ ಜಲಾಶಯಗಳನ್ನು ನಿರ್ಮಿಸುತ್ತಾರೆ. ಕೆಲವರ್ಷಗಳಲ್ಲಿ ಅವೆಲ್ಲವೂ ಮರಳು ಹಾಗೂ ರೇವೆಯಿಂದ ಹುಗಿದು ಅಣೆಕಟ್ಟುಗಳಿಗೆ ಭೀಕರ ಗಂಡಾಂತರ ಒದಗಿ ಬರುತ್ತದೆ. ಇದನ್ನು ತಪ್ಪಿಸಲು ಯಾವುದೇ ಪ್ರದೇಶದಲ್ಲಿ ಅಣೆಕಟ್ಟು ನಿರ್ಮಿಸುವ ಯೋಜನೆ ಪ್ರಾರಂಭವಾದರೆ ಅದರ ಸಂಗಡವೇ ಆಯಕಟ್ಟಿನಲ್ಲಿರುವ ಎಲ್ಲ ಪ್ರದೇಶಗಳಲ್ಲಿ ನೀರು-ಮಣ್ಣಿನ ಸಂರಕ್ಷಣೆಯು ಜೊತೆಗೆ ಗಿಡಮರಗಳನ್ನು ನೆಟ್ಟು, ಬೆಳಸಿ, ಕಾಪಾಡಿ ಅರಣ್ಯ ಸಂಪತ್ತು ಹಾಗೂ ಪಶುಪಕ್ಷಿಗಳ ಸಂಪತ್ತನ್ನು ಹೆಚ್ಚಿಸಿಕೊಳ್ಳುವ ಕಾರ್ಯವು ಪ್ರಾರಂಭವಾಗಬೇಕು. ಗಣಿ ಪ್ರದೇಶಗಳನ್ನು ಪ್ರಯೋಜನಕಾರಿಯಾಗಿ ವೃದ್ಧಿಗೊಳಿಸಿ ಮಣ್ಣಿನ ಸವಕಳಿಯಿಂದ ಕಾಪಾಡುವುದು. ಹೊಲಗದ್ದೆಗಳಿಗೆ ಒಡ್ಡುಗಳನ್ನು ಹಾಕಿ ಸಂಭವನೀಯ ಭೂಸವಕಳಿಯಿಂದ ಮೇಲ್ಭಾಗದ ಮಣ್ಣಿನ ಸಂರಕ್ಷಣೆ ಮಾಡಿಕೊಳ್ಳಬೇಕು. (ಸರಿಯಾದ ರೀತಿಯಲ್ಲಿ ಭೂಮಿಗಳಿಗೆ ಒಡ್ಡು ಹಾಕುವುದರಿಂದ ಜಲಾಶಯಗಳು ಉಸುಕು ಹಾಗೂ ರೇವೆಗಳಿಂದ ಹುಗಿಯುವುದನ್ನು ತಡೆಗಟ್ಟಬಹುದು.) ಈಗಿದ್ದ ಇಂತಹ ಎಲ್ಲ ಜಲಾಶಯಗಳಲ್ಲಿ ಪಕ್ಷಿಗಳ ಸಂಖ್ಯೆಯನ್ನು ಹೆಚ್ಚಿಸಲು ಸೂಕ್ತಕ್ರಮ ತೆಗೆದುಕೊಂಡು ಪಕ್ಷಿಗಳ ಅಭಯಾರಣ್ಯಗಳನ್ನು ನಿರ್ಮಿಸಬೇಕು. ಅಲ್ಲಲ್ಲಿ ಕಂಡುಬರುವ ಕೊಳ್ಳಗಳಲ್ಲಿ ಹಾಗೂ ಮರೆಗಳಲ್ಲಿ ಅಳಿದುಳಿದ ಕಾಡುಪ್ರಾಣಿಗಳನ್ನು ಸಂರಕ್ಷಿಸಲು ಅಭಯಾರಣ್ಯಗಳನ್ನು ನಿರ್ಮಿಸಬೇಕು.

ಮೂಲತಃ ಪರಿಸರಕ್ಕೆ ತಕ್ಕಂತೆ ನಮ್ಮ ಎಂಜಿನಿಯರುಗಳು ನೀರಾವರಿ ಹಾಗೂ ವಿದ್ಯುತ್ ಯೋಜನೆಗಳ ರೂಪರೇಶೆಗಳನ್ನು ತಯಾರಿಸಿ ಕಾರ್ಯರೂಪಕ್ಕೆ ತರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಕಾಡು ಮುಳುಗಡೆಯಾಗುವುದರಿಂದ ತಪ್ಪಿಸಲು ಪ್ರಯತ್ನಿಸಬೇಕು.

ಜನಜಾಗೃತಿ: ನೈಸರ್ಗಿಕ ಅರಣ್ಯಸಂಪತ್ತು ಕಾಡುಪ್ರಾಣಿಗಳ ಸ್ವೇಚ್ಛೆಯ ಜೀವನಕ್ಕೆ ಮೂಲ ಅಂಶವಾಗಿದ್ದು ಅದನ್ನು ಪರಿಣಾಮಕಾರಿಯಾಗಿ ಸಂರಕ್ಷಿಸದೆ ಕೇವಲ ವನ್ಯಪ್ರಾಣಿಗಳ ಸಂರಕ್ಷಣೆಯು ಪ್ರಯತ್ನ ವಿಫಲವಾದೀತು. ಇವೆರಡರ ಸಂಯೋಜಿತ

ಜೀವನವನ್ನು ಬೇರ್ಪಡಿಸುವುದು ಎಂದಿಗೂ ಸಾಧ್ಯವಾಗಲಾರದು. ಇದರಿಂದ ನಿಸರ್ಗ ನಿರ್ಮಾಣವಾದ ಸಸ್ಯ-ಪ್ರಾಣಿಗಳ ಮಧ್ಯ ಇರತಕ್ಕ ಸಮತೋಲನ ಏರುಪೇರು ಆಗುವಲ್ಲಿ ಸಂದೇಹವಿಲ್ಲ. ಇದಕ್ಕೂ ಮೀರಿ ಮನುಷ್ಯ ತನ್ನ ಅವಿವೇಕಯುಕ್ತ ದುಷ್ಕೃತ್ಯಗಳನ್ನು ನಿಸರ್ಗದ ಮೇಲೆ ಇದುವರೆಗೂ ಎಚ್ಚರದಪ್ಪಿ ಮಾಡಿದಂತೆ ಇನ್ನುಮೇಲೂ ಮಾಡಿದ್ದೇ ಆದರೆ ಅದರಿಂದ ಆಗಬಹುದಾದ ದುಷ್ಪರಿಣಾಮಗಳಿಂದ ನಂತರ ಪಶ್ಚಾತ್ತಾಪ ಪಡಬೇಕಾದೀತು. ನಮ್ಮ ನಾಡಿನಲ್ಲಿ ಈಗಾಗಲೇ ಮುಕ್ಕಾಲು ಪಾಲಿಗಿಂತ ಹೆಚ್ಚಾಗಿ ಅರಣ್ಯಸಂಪತ್ತು ಹಾಗೂ ವನ್ಯಮೃಗಗಳ ಸಂಪತ್ತು ನಶಿಸಿ ಹೋಗಿದ್ದು. ಉಳಿದ ಅತ್ಯಲ್ಪ ಪಾಲು ಸಂಪೂರ್ಣ ನಾಶವಾಗಲು ಸಮಯ ಸನ್ನಿಹಿತವಾಗಿದೆ. ವಿಶೇಷವಾಗಿ ನಮ್ಮ ಹುಲಿಗಳ ಸಂಖ್ಯೆ ತೀರ ಕಡಮೆ ಇದ್ದು ಅಲ್ಲಲ್ಲಿ ಅಳಿದುಳಿದ ಹುಲಿಗಳ ಜೀವನಕ್ಕೆ ಭೀಕರ ಅಪಾಯ ಒದಗಿರುವುದು ಅತಿ ದುಃಖದ ಸಂಗತಿಯಾಗಿದೆ. ದೇಶದಾದ್ಯಂತ ಜನತೆಯಲ್ಲಿ ಮೊದಲು ಜಾಗೃತಿ ಹುಟ್ಟಿಸಿ ಈ ಜಟಿಲ ಸಮಸ್ಯೆಯನ್ನು ಈ ಕ್ಷಣವೇ ಯೋಗ್ಯರೀತಿಯಲ್ಲಿ ಬಗೆಹರಿಸದೆ ಕಾಲಹರಣ ಮಾಡಿದರೆ ನಂತರ ಹುಲಿಗಳ ಪುನರ್ವಸತಿಕಾರ್ಯ ಅತಿ ಜಟಿಲವಿದ್ದು ಇದುವರೆಗೆ ನಮ್ಮ ದೇಶದ 'ಮೃಗರಾಜ'ನೆಂದು ಪ್ರಸಿದ್ಧಿ ಹೊಂದಿದ ಸಿಂಹಗಳಿಗೆ ಬಂದೊದಗಿದ ಸ್ಥಿತಿಗೆ ಹೋಗಗೊಡದೆ ಕೂಡಲೇ ಅವುಗಳನ್ನು ಕಾಪಾಡಿಕೊಂಡು ಹೋಗಲು ಸೂಕ್ತಕ್ರಮ ಕೈಗೊಳ್ಳುವಲ್ಲಿ ಜಾಣತನವಿದೆ.

ನಾಟಿಹಾಗೂ ವನ್ಯಮೃಗಗಳ ಸಂಬಂಧ: ಸಂಘಟಿತ ಅರಣ್ಯಧಾಮ ಹಾಗೂ ರಾಷ್ಟ್ರೀಯ ಉದ್ಯಾನವನಗಳಲ್ಲಿದ್ದ ನಾಟ ಹಾಗೂ ಕಟ್ಟಿಗೆಯ ಉತ್ಪಾದನೆಗಳಿಗಿಂತ ವನ್ಯಮೃಗಗಳಿಗೆ ಹೆಚ್ಚಿನ ಪ್ರಾಶಸ್ತ್ಯಕೊಟ್ಟು ವ್ಯಾಪಕ ಸಂಶೋಧನೆಯಿಂದ ಯಾವ ರೀತಿಯಲ್ಲಿ ಅರಣ್ಯ ಕಾರ್ಯನಿರ್ವಹಣೆಯನ್ನು ಮಾಡಿದರೆ ಅರಣ್ಯ ಹಾಗೂ ವನ್ಯಪ್ರಾಣಿಗಳ ಹೊಂದಾಣಿಕೆಯಿಂದ ಲಾಭದಾಯಕವಾದೀತೆಂದು ತಿಳಿಯಬೇಕು. ಅಲ್ಲಿ ಯಾವುದೇ ರೀತಿಯ ಕಾಮಗಾರಿ ಕೆಲಸಗಳನ್ನೂ, ಅರಣ್ಯೋತ್ಪಾದನ ವಸ್ತುಗಳ ಬಳಕೆ ಮತ್ತು ಯಾವುದೇ ಪ್ಲಾಂಟೇಶನ್ ಗಳನ್ನು ಬೆಳೆಸುವ ಕಾರ್ಯಗಳನ್ನು ನಿಷೇಧಿಸುವುದೊಳ್ಳೆಯದು.

ಈಗಿದ್ದ ಎಲ್ಲ ವನ್ಯಮೃಗ ಧಾಮಗಳಲ್ಲಿ ಅದರ ಒಟ್ಟು ಕ್ಷೇತ್ರದ $\frac{1}{3}$ರಷ್ಟು ಅರಣ್ಯವನ್ನು ಕಗ್ಗಾಡಾಗಿಯೇ ಬಿಡಬೇಕು. ಅಲ್ಲಿ ಮನುಷ್ಯರಿಂದ ಯಾವುದೇ ಕಾರ್ಯಾಚರಣೆ ಇರಕೂಡದು. ಅದರಲ್ಲಿ ರಸ್ತೆಗಳನ್ನು ಮಾಡದೆ ಕಾಲುದಾರಿಗಳನ್ನು ಮಾತ್ರ ಮಾಡಬೇಕು. ವಾಹನಗಳ ಓಡಾಟ ನಿಷೇಧಿಸಿ ಆನೆಯ ಮೇಲೆ ಕುಳಿತು ವನ್ಯಮೃಗಗಳನ್ನು ಅವುಗಳ ನೈಸರ್ಗಿಕ ಪಾರುಪತ್ಯದಲ್ಲಿ ನೋಡುವಂತಾಗಬೇಕು. ಸಾಧ್ಯವಾದ ಮಟ್ಟಿಗೆ ವನ್ಯಮೃಗಗಳ ಸಂಚಾರ, ಆಹಾರಸೇವನೆ, ಪ್ರಣಯಾಚರಣೆ ಇತ್ಯಾದಿಗಳಿಗೆ ಮನುಷ್ಯನಿಂದ ಯಾವುದೇ ಅಡಚಣೆಯಾಗದಂತೆ ಎಚ್ಚರಿಕೆವಹಿಸಬೇಕು.

ಮೂಲತಃ ವನ್ಯಪ್ರಾಣಿಗಳ ಜೀವನಕ್ಕೆ ಅವಶ್ಯಕವಿದ್ದ ಆಹಾರ, ನೀರು, ಆಶ್ರಯ ಸ್ಥಾನಗಳಿಗೆ ಪ್ರಾಮುಖ್ಯತೆ ನೀಡಿ ಕೆಲವು ಸ್ಥಳಗಳಲ್ಲಿ ಮೇಲಿನ ಯಾವುದಾದರೊಂದು

ವಸ್ತುವಿನ ಕೊರತೆ ಕಂಡುಬಂದರೆ ಅದನ್ನು ಒದಗಿಸುವ ಸೂಕ್ತ ಏರ್ಪಾಡಾದರೆ ಹುಲಿಗಳನ್ನೊಳಗೊಂಡ ಎಲ್ಲ ಕಾಡುಮೃಗಗಳ ಸ್ಥಿತಿಗತಿಯನ್ನು ಸುಧಾರಿಸಲು ಸಾಧ್ಯ. ಅವಶ್ಯವೆನಿಸಿದರೆ ಬರಗಾಲದ ಮುಷ್ಟಿಗೆ ಸಿಲುಕಿದ ಅರಣ್ಯ ಪ್ರದೇಶಗಳಲ್ಲಿ ಕೊಳವಿ, ಬಾವಿಗಳಿಂದ ನೀರಿನ ಸರಬರಾಜು ಮಾಡುವುದು ಹಾಗೂ ಹುಲಿಯಂತಹ ಮಾಂಸಾಹಾರಿ ಪ್ರಾಣಿಗಳಿಗೆ ಅವುಗಳ ನೈಸರ್ಗಿಕ ಬೇಟೆ ಪ್ರಾಣಿಗಳ ಕೊರತೆ ಕಂಡುಬಂದಾಗ ಹೆಚ್ಚಿನ ಸಂಖ್ಯೆಯಲ್ಲಿ ಹಂದಿಗಳನ್ನು ಬೆಳೆಸಿ ಕಾಡಿನಲ್ಲಿ ಬಿಡಬೇಕು.

ವಾಹನಗಳಿಗೆ ನಿರ್ಬಂಧನೆ: ವನ್ಯಮೃಗಧಾಮಗಳ ಮುಖಾಂತರ ಹಾದು ಹೋಗುವ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ ಅಲ್ಲಲ್ಲಿ ವೇಗ ತಡೆಗಳನ್ನು ಒದಗಿಸುವುದು. ವಾಹನ ಚಾಲಕರು ರಸ್ತೆಯ ಎರಡೂ ಬದಿಗೆ ನೋಡುತ್ತ ನಿಧಾನ ವಾಗಿ ವಾಹನ ನಡೆಸಲು ಎಚ್ಚರಿಕೆಯ ಫಲಕಗಳನ್ನು ಬರೆಸಬೇಕು. ವಿಶೇಷವಾಗಿ ರಾತ್ರಿ ಸಮಯಗಳಲ್ಲಿ ವನ್ಯಮೃಗಗಳು ಹಠಾತ್ ರಸ್ತೆಗಳನ್ನು ದಾಟುತ್ತಿರುತ್ತವೆ. ಅವುಗಳಿಗೂ ಮನುಷ್ಯನಷ್ಟೆ ದಾರಿಯ ಹಕ್ಕಿದೆ. ಆಗ ವೇಗವಾಗಿ ಓಡುತ್ತಿರುವ ವಾಹನಗಳ ಕಣ್ಣು ಕುಕ್ಕಿಸುವಂತಹ ದೀಪಗಳಿಂದ ಮೃಗಗಳು ಕಕ್ಕಾಬಿಕ್ಕಿಯಾಗಿ ನೋಡುತ್ತಿರುವಂತೆ ವಾಹನ ಗಳು ಹರಿದು ಅಪಘಾತಕ್ಕೀಡಾಗುತ್ತವೆ. 1976ರ ಅಕ್ಟೋಬರ್ 1ನೇ ತಾರೀಖಿನ ರಾತ್ರಿ ಬಂಡೀಪುರ ಅರಣ್ಯಧಾಮದ ಮುಖಾಂತರ ಹೋಗುವ ಗುಂಡ್ಲುಪೇಟೆ–ಕಲ್ಲಿ ಕೋಟೆ ರಸ್ತೆಯಲ್ಲಿ ಮೂಲೆಹೊಳೆ ಎಂಬಲ್ಲಿ ವಾಹನವೊಂದು ಹರಿದು ಸುಮಾರು 20 ತಿಂಗಳ ಹೆಣ್ಣುಹುಲಿ ಸತ್ತುಬಿದ್ದದ್ದು ಕಂಡುಬಂದಿತು.

ಕಾಡು ತೆಳುವು ಮಾಡುವಿಕೆ: ಜಗತ್ತಿನ ಅನೇಕ ಭಾಗಗಳಲ್ಲಿಯ ಅನುಭವದ ಬೆಳಕಿನಲ್ಲಿ ಹೇಳುವುದಾದರೆ ಅತಿ ದಟ್ಟಕಾಡುಗಳು ಶಾಖಾಹಾರಿ ಪ್ರಾಣಿಗಳಿಗೆ ಸಾಕಷ್ಟು ಆಹಾರ ಹಾಗೂ ಆಶ್ರಯ ದೊರಕಿಸುವಲ್ಲಿ ಸಹಾಯವಾಗಲಾರವು. ಇಂತಹ ಕಾಡುಗಳನ್ನು ಮಾತ್ರ ಕೈಚಳಕದಿಂದ ಅದರ ಹೊದಿಕೆಯನ್ನು ಸರಿಪಡಿಸಿ ಯೋಗ್ಯ ಆಶ್ರಯ ಸ್ಥಾನವನ್ನಾಗಿ ಪರಿವರ್ತಿಸಬೇಕು. ಅಲ್ಲಿ ಪ್ರಾಣಿಗಳಿಗೆ ತಿನ್ನಲು ಯೋಗ್ಯ ಹಾಗೂ ಪೌಷ್ಟಿಕ ಆಹಾರವಾದ ಸೊಪ್ಪು, ಒಳ್ಳೆತಳಿ ಹುಲ್ಲು ಹಾಗೂ ಹಣ್ಣಿನ ಗಿಡಗಳನ್ನು ಅಲ್ಲಲ್ಲಿ ಬೆಳೆಸಿದರೆ ಹೆಚ್ಚಿನ ಪ್ರಮಾಣದಲ್ಲಿ ಪ್ರಾಣಿಗಳನ್ನು ಆಕರ್ಷಿಸಬಹುದು. ಸಾಕಿದ ಪ್ರಾಣಿಗಳ ಹಾಗೂ ವನ್ಯ ಪ್ರಾಣಿಗಳ ಮಧ್ಯೆ ಮೇವಿಗೆ ಆಗುವ ಸ್ಪರ್ಧೆಯನ್ನು ಸಾಧ್ಯವಾದಷ್ಟು ತಪ್ಪಿಸಿ ದನಕರುಗಳಿಂದ ಬರುವ ಸಾಂಕ್ರಾಮಿಕ ರೋಗರುಜಿನಗಳಿಂದ ಕಾಪಾಡುವುದರಲ್ಲಿ ಹೆಚ್ಚಿನ ಪ್ರಯೋಜನವಿದೆ. ಸುತ್ತಮುತ್ತಲಿನ ದನಕರುಗಳನ್ನು ಮೇಲಿಂದ ಮೇಲೆ ಚುಚ್ಚು ಮದ್ದಿನಿಂದ ಸಂರಕ್ಷಿಸಬೇಕು. (ಇಂತಹ ಒಂದು ಸಾಂಕ್ರಾಮಿಕ ರೋಗವಾದ ಚಪ್ಪೆರೋಗ ದಿಂದ 1969ರಲ್ಲಿ ಬಂಡಿಪುರ ಕಾಡುಗಳಲ್ಲಿದ್ದ ನೂರಾರು ಕಾಟಿಮೃಗಗಳು ಹಾಗೂ ಕಡವೆಗಳು ನಶಿಸಿ ಹೋದವು. ಅದೇ ರೀತಿ ಕೇರಳ ರಾಜ್ಯದಲ್ಲಿಯ ತೆಕ್ಕಡಿ ವನ್ಯ ಮೃಗಧಾಮದಲ್ಲಿಯೂ 1973ರಲ್ಲಿ ಅನೇಕ ಕಾಟಿಮೃಗಗಳು ಚಪ್ಪೆರೋಗದಿಂದ ಸತ್ತವು).

ಜನತೆಯ ಸಹಕಾರ: ಅಭಯಾರಣ್ಯ ಹಾಗೂ ರಾಷ್ಟ್ರೀಯ ಉದ್ಯಾನವನಗಳ ಸುತ್ತಲಿನ ಕಾಡು ಹಾಗೂ ಹೊಲಗದ್ದೆಗಳಲ್ಲಿಯೂ ಹುಲಿ ಹಾಗೂ ಮತ್ತಿತರ ಕಾಡು ಮೃಗಗಳ ಬೇಟೆಯಾಡುವುದನ್ನು ಸಂಪೂರ್ಣ ನಿಷೇಧಿಸಿದಾಗ ಮಾತ್ರ ವನ್ಯಪ್ರಾಣಿ ಸಂರಕ್ಷಣೆ ಸಾಧ್ಯ. ಈ ಪ್ರದೇಶಗಳಲ್ಲಿ ಹಳ್ಳಿಗಳು ಇರುವವರೆಗೆ, ಜನರ ಓಡಾಟ, ಅರಣ್ಯೋತ್ಪಾದನಾ ಸಾಮಗ್ರಿಗಳ ಉಪಭೋಗ, ದನಕರುಗಳಿಂದ ಸ್ಪರ್ಧೆ, ಬೇಟೆ ಗಳ್ಳತನ ಮತ್ತು ಬೆಂಕಿಯಿಂದ ಹುಲಿಯ ಕಾಡುಗಳಿಗೆ ತೊಂದರೆ ಉಂಟಾಗುವುದನ್ನು ತಪ್ಪಿಸಲು ಸಾಧ್ಯವಿಲ್ಲ. ಹಳ್ಳಿಗಳನ್ನು ಕಾಡಿನಿಂದ ತೆಗೆದು ದೂರದ ಸ್ಥಳಗಳಲ್ಲಿ ಪುನರ್ವಸತಿ ಮಾಡಿಕೊಡುವುದಲ್ಲದೆ ವನ್ಯಮೃಗಗಳ ಪ್ರಾಮುಖ್ಯತೆ ಹಾಗೂ ಅವುಗಳ ಸಂರಕ್ಷಣೆಯ ಬಗ್ಗೆ ಸಾಧ್ಯವಾದರೆ ಮನೆಮನೆಗೂ ಭೇಟ್ಟಿಯಿತ್ತು ಶಿಕ್ಷಣಕೊಟ್ಟು ತಿಳಿಸಿ ಹೇಳುವಲ್ಲಿ ಮಹಾಸಾಧನೆ ಇದೆ. ನಮ್ಮ ಜನತೆಯಲ್ಲಿ ತಿಳುವಳಿಕೆ ಬಂದು ಅವರು ಹೃತ್ಪೂರ್ವಕವಾಗಿ ಸಹಕರಿಸುವವರೆಗೆ ಸರಕಾರ ಯಾವುದೇ ರೂಪರೇಖೆ ಯನ್ನು ಕಾರ್ಯಗತ ಮಾಡಲು ಪ್ರಯತ್ನಿಸಿದರೂ ಅದು ಪರಿಣಾಮಕಾರಿಯಾಗಲಿಕ್ಕಿಲ್ಲ.

ದನಕರುಗಳಿಗೆ ಜೀವವಿಮೆ: ಹುಲಿಯು ಸಾಮಾನ್ಯವಾಗಿ ಹಳ್ಳಿಯವರ ದನ ಕರುಗಳ ಮೇಲೆ ದಾಳಿಮಾಡುವುದಿಲ್ಲ. ಒಂದು ವೇಳೆ ಕೊಂದಾಗ ಅವರು ರೊಚ್ಚಿಗೆದ್ದು ದನಗಳ ದೇಹಗಳ ಮೇಲೆ ಕ್ರಿಮಿನಾಶಕ ಹಾಗೂ ಮಾರಕ ವಿಷವಸ್ತುಗಳನ್ನು ಚೆಲ್ಲಿ ಅಥವಾ ಲೇಪಿಸಿ ಹುಲಿಯನ್ನು ಕೊಲ್ಲುವುದರಿಂದ ತಪ್ಪಿಸಬೇಕು. ಇನ್ನೊಂದು ಹೆಜ್ಜೆ ಮುಂದುವರಿದು ಹೇಳುವುದಾದರೆ ಅಭಯಾರಣ್ಯ ಹಾಗೂ ರಾಷ್ಟ್ರೀಯ ಉದ್ಯಾನವನಗಳ ಸುತ್ತಲಿನ ಬೆಲೆಬಾಳುವ ದನಕರುಗಳಿಗೆ ಜೀವವಿಮೆ ಮಾಡಿಸುವುದು ಸುರಕ್ಷಿತ. ಪೋಲಿಯಲ್ಲದ ದನಕರುಗಳು ಹುಲಿಯಿಂದ ಕೊಲ್ಲಲ್ಪಟ್ಟರೆ ಅವುಗಳಿಗೆ ಸರಕಾರದಿಂದ ಧಾರಾಳವಾಗಿ ಪರಿಹಾರ ಹಣ ಕೊಡುವಂತಾಗಬೇಕು. ಕಾಡುಪ್ರಾಣಿಗಳ ಸಂಖ್ಯೆ ರೋಗರುಜಿನಗಳಿಂದ, ನಿಸರ್ಗದ ದುರ್ಘಟನೆಗಳಿಂದ ಅಥವಾ ಮತ್ತಿತರ ಗಂಡಾಂತರ ಗಳಿಂದ ಕಡಮೆ ಆದರೆ ಅವುಗಳನ್ನು ಹೊರಗಿನಿಂದ ತಂದುಸೇರಿಸಿ ಪುನರ್ವಸತಿ ಕಲ್ಪಿಸಿ ಕೊಡುವಲ್ಲಿ ಉಪಯುಕ್ತತೆ ಇದೆ. ಜಿಂಕೆ, ಕಡವೆ, ಕಾಡುಕುರಿ, ನೀಲಮೃಗ, ಕೃಷ್ಣಮೃಗ ಗಳ ಪುನರ್ವಸತಿ ಕಾರ್ಯ ಹಾಕಿಕೊಳ್ಳುವುದು ಸುಲಭವಿದ್ದು ಹುಲಿಯಂತಹ ಮಾಂಸ ಭಕ್ಷಕ ಪ್ರಾಣಿಗಳ ಪುನರ್ವಸತಿ ಮಾಡುವುದು ಗಂಡಾಂತರ ಹಾಗೂ ಕಷ್ಟದಾಯಕ ವಾಗಿದೆ. ಸಾಕಿದ ಹುಲಿಯನ್ನು ಕಾಡಿನಲ್ಲಿ ಸ್ವತಂತ್ರವಾಗಿ ಬಿಟ್ಟಾಗ ಸುತ್ತಮುತ್ತಣ ನಿಸರ್ಗಕ್ಕೆ ಹೊಂದಿಕೊಳ್ಳಲು ಕಷ್ಟವಾಗಬಹುದು; ಬೇಟೆಯಾಡಿ ಪ್ರಾಣಿಗಳನ್ನು ಕೊಂದು ತಿನ್ನುವ ಅನುಭವ ಇಲ್ಲದೆ ಉಪವಾಸದಿಂದ ಸಾಯಬಹುದು ಅಥವಾ ಅದಕ್ಕೆ ಬೇಟೆಯ ಗತ್ತು ಗೊತ್ತಿಲ್ಲದೆ ಪ್ರಾಣಿಗಳಿಂದ ಗಾಯಗೊಂಡು ನರಳಬಹುದು ಅಥವಾ ಮನುಷ್ಯನ ಬಳಕೆಯಿಂದ ಜನರಿಗೆ ಗಂಡಾಂತರಕಾರಿಯಾಗಿ ವರ್ತಿಸಬಹುದು.

ಎಲ್ಸಾ ಹಾಗೂ ಪಿಪ್ಪಾ ಅನುಕರಣೆ: ಶ್ರೀಮತಿ ಜಾಯ್ ಆಡಮ್ಸನ್ 'ಎಲ್ಸಾ' ಎಂಬ ಹೆಣ್ಣು ಸಿಂಹದ ಮರಿ ಹಾಗೂ 'ಪಿಪ್ಪಾ' ಎಂಬ ಹೆಣ್ಣು ಚೀತಾಮರಿ ಗಳನ್ನು ಆಫ್ರಿಕಾದ 'ಸೆರಂಗೇಟಿ ರಾಷ್ಟ್ರೀಯ ಉದ್ಯಾನವನ'ದಲ್ಲಿ ಸಾಕಿ ಪೋಷಿಸಿ ಅವು

ಗಳಿಗೆ ಹಾಗೂ ಅವುಗಳ ಪೀಳಿಗೆಗಳಿಗೆ ಪುನರ್ವಸತಿ ಕಲ್ಪಿಸಿಕೊಟ್ಟು ಉದ್ಧಾರ ಮಾಡಿದ ರೀತಿಯಲ್ಲಿ ಹುಲಿಗಳಿಗೂ ಪುನರ್ವಸತಿ ಕಲ್ಪಿಸಿಕೊಡುವ ಕಾರ್ಯಕ್ರಮ ಹಾಕಿಕೊಳ್ಳ ಬೇಕು. ಅವುಗಳ ತಳಿಗಳನ್ನು ಉದ್ಧಾರ ಮಾಡಲು ಯಾರಾದರೂ ನಿಷ್ಠಾವಂತ ಪ್ರಕೃತಿ ಸಂರಕ್ಷಕರು ಮುಂದೆಬಂದರೆ ಸರಕಾರ ಅದಕ್ಕೆ ಪ್ರಚೋದನೆ ಕೊಟ್ಟು ಪ್ರೋತ್ಸಾಹಿ ಸುವುದು ಯುಕ್ತಸಲಹೆ.

ಮುದ್ದಿನ ಪ್ರಾಣಿಗಳಾಗಿ ಬೆಳೆಯುವಿಕೆ: ಕ್ಯಾಂಟರ್ಬರಿಯ ಹತ್ತಿರ ತನ್ನ ಎಸ್ಟೇಟಿನಲ್ಲಿ ಜಾನ್ ಅಸ್ಪಿನಾಲ್ ಎಂಬುವನು 32 ಹುಲಿಗಳನ್ನು ಸಾಕಿ ಅವುಗಳೊಂದಿಗೆ ಅತಿ ವಿಶ್ವಾಸದ ಸಂಬಂಧವನ್ನು ಹೊಂದಿದ್ದಾನೆ. ಭಾರತ ಹಾಗೂ ಸೈಬೀರಿಯಾದ ಹುಲಿ ಗಳ ಸಂತತಿಅಭಿವೃದ್ಧಿ ಕಾರ್ಯದಲ್ಲಿ ಅವನ ಪ್ರಯತ್ನ ಮಿಗಿಲಾದದ್ದು. ಅವನು ದಿನಾಲು ಅವುಗಳೊಂದಿಗೆ ಅತಿ ಸಲುಗೆಯಿಂದ ತನ್ನ ಎಸ್ಟೇಟಿನಲ್ಲಿಯೇ ಅವುಗಳೊಂದಿಗೆ ಆಟವಾ ಡಲು ಅಥವಾ ತನ್ನ ಈಜುಕೊಳದಲ್ಲಿ ಅವುಗಳೊಂದಿಗೆ ಈಜಾಡಲು ಬಿಟ್ಟುಕೊಂಡು ಹೋಗುತ್ತಾನೆ. ಅವುಗಳನ್ನು ಮೃಗಾಲಯದ ಪ್ರಾಣಿಗಳಂತೆ ಇಟ್ಟಿರದೆ ಅಥವಾ ಯಾವುದೇ ರೀತಿಯ ತಮಾಷೆಯ ಆಟವಾಡಿಸದೆ ಅವು ಆನಂದದಿಂದ ಜೀವಿಸಲು ಅವಶ್ಯ ವಿದ್ದ ಯೋಗ್ಯ ವ್ಯವಸ್ಥೆಗಳನ್ನು ಮಾಡಿದ್ದಾನೆ. ಜಾನ್ ಅಸ್ಪಿನಾಲ್ ಒಬ್ಬ ಉತ್ಸಾಹಪೂರಿತ ಪ್ರಕೃತಿ ಸಂರಕ್ಷಕನಾಗಿದ್ದಾನೆ. ಏಷಿಯಾದಲ್ಲಿ ಸಂಪೂರ್ಣ ಸಂರಕ್ಷಣೆ ಪಡೆದ ವನ್ಯಮೃಗ ಧಾಮಗಳು ಸಿಕ್ಕಾಗ ತನ್ನಲ್ಲಿದ್ದ ಹುಲಿಗಳ ಸಂತತಿಗಳನ್ನು ಬಿಡಲು ನಿಶ್ಚಯಿಸಿದ್ದಾನೆ. ಆದರೆ ಮನುಷ್ಯನ ಮೇಲೆ ಅವಲಂಬಿಸಿದ್ದ ಹುಲಿಗಳು ತಮ್ಮ ಬೇಟೆಯನ್ನು ಕಂಡು ಹಿಡಿದು ಕೊಲ್ಲುವ ಪರಿವರ್ತನೆಯ ಕಾರ್ಯನಿರ್ವಹಣೆ ಮಾಡಿದರೆ ಅಸಾಧ್ಯವೇನೂ ಆಗಲಿಕ್ಕಿಲ್ಲ. 'ನಾಯಿ, ಬೆಕ್ಕುಗಳಂತೆ ಹುಲಿಯೂ ಮುದ್ದಿನ ಪ್ರಾಣಿಯಾಗಬಲ್ಲದು', ಎಂದರೆ ಯಾರೂ ನಂಬಲಿಕ್ಕಿಲ್ಲ. ಆದರೆ ಇಲ್ಲೊಂದು ನಿಜಸ್ಥಿತಿಯ ದೃಷ್ಟಾಂತವಿದೆ.

ಒರಿಸ್ಸಾದ ಸಿಮಿಲಿಪಾಲ್ ಮೀಸಲು ಕಾಡಿನಲ್ಲಿ ಒಂದು ಮುದ್ದಿನ ಹುಲಿಯಿದೆ. ಅದರ ಹೆಸರು 'ಖೈರಿ'. ಅದರ ವಯಸ್ಸು 26 ತಿಂಗಳು. ಕೆಲವರು ಆದಿವಾಸಿ ಜನರು ಇದನ್ನು ಮರಿಯಿದ್ದಾಗ ಕಾಡಿನಲ್ಲಿ ಅಲೆದಾಡುತ್ತಿರುವುದನ್ನು ಕಂಡರು. ಬಹುಶಃ ತಾಯಿ ಇದನ್ನು ಬಿಟ್ಟುಹೋಗಿರಬೇಕು. ಅಲ್ಲಿಯ 'ಪ್ರೊಜೆಕ್ಟ್ ಟೈಗರ್'ದ ನಿರ್ದೇಶಕ ಶ್ರೀಮಾನ್ ಎಸ್. ಆರ್. ಚೌಧರಿ ಹಾಗೂ ಅವರ ಸಹೋದರಿ ಈ ಹೆಣ್ಣು ಹುಲಿ ಮರಿಯನ್ನು ಮಗುವಿನಂತೆ ಅತಿ ಅಚ್ಚುಮೆಚ್ಚಿನಿಂದ ಸಾಕಿದ್ದಾರೆ. ತನ್ನನ್ನು ಸಾಕಿದ ವರನ್ನು ಹಾಗೂ ತನ್ನ ಪರಿಸರವನ್ನು ಅದು ಹೆಚ್ಚಾಗಿ ಪ್ರೀತಿಸುವುದರಿಂದ ಸಿಮಿಲಿಪಾಲ್ ಅರಣ್ಯವು ವಿಶ್ವವಿಖ್ಯಾತವಾಗುವಂತೆ ಮಾಡಿದೆ. ಅರಣ್ಯ ಪ್ರದೇಶದ ಎಲ್ಲರಿಗೂ ಅದು ಅಚ್ಚುಮೆಚ್ಚು. ಹುಟ್ಟಿನಿಂದಿನಿಂದ ಅದರ ಚರ್ಯೆ, ನಡೆವಳಿಕೆ, ಗುಣಾವಗುಣಗಳನ್ನು ಚೌಧರಿಗಳವರು ದಾಖಲು ಮಾಡುತ್ತಿದ್ದಾರೆ. ಹುಲಿಯನ್ನು ಸಿಂಹ ಹಾಗೂ ಚೀತಾ ಗಳಂತೆ ಮುದ್ದಿನಿಂದ ಸಾಕಬಹುದು ಎಂದುದನ್ನು ನಿರೂಪಿಸಿದ್ದಾರೆ.

ಮುದ್ದಿನ ಹುಲಿ ಖೈರಿಗೆ ಇತರ ಎರಡು ಪ್ರಾಣಿಗಳ ಸ್ನೇಹವೂ ಇದೆ. 'ಬಾಘಾ' ಎಂಬ ನಾಯಿ ಹಾಗೂ 'ಹಿಂದ್' ಎಂಬ ಕಡವೆ ಅದರ ಬಾಲ್ಯ ಸ್ನೇಹಿತರು. ಇವುಗಳ

ಜೊತೆ ಹಾಗೂ ಅದನ್ನು ಸಾಕಿದವರ ಜೊತೆ ಅದು ಆಟವಾಡುವುದು. ಆ ಹುಲಿಯು ಬುದ್ಧಿವಂತ ಪ್ರಾಣಿಯಾಗಿ ಅರಿವಿನ ಜೀವಿಯಾಗಿ ಮಾರ್ಪಟ್ಟಿದೆ. ಸಾಕಿದವರ ಜೊತೆ ಆಟವಾಡುವ ಸಂದರ್ಭಗಳಲ್ಲಿ ತನ್ನ ಉಗುರುಗಳು ಅವರ ಮೈಗೀಚಿದಾಗ ಅಥವಾ ಬಾಯಿಂದ ಕಡಿದಾಗ ರಕ್ತ ಬಂದರೆ ಖೈರಿಯು ಒಂದೇಸಮನೆ ಗೋಳಾಡುತ್ತದೆಯಂತೆ.

ಖೈರಿಯು ತನ್ನ ಬಾಳುಸಂಗಾತಿಯನ್ನು ಆರಿಸಿಕೊಳ್ಳಲೆಂದು ಮೀಸಲು ಕಾಡಿನಲ್ಲಿ ಬಿಟ್ಟರೆ, ಹಲವು ಗಂಟೆಗಳ ನಂತರ ಅದು ವಾಪಸ್ಸಾದದು ಒಂದು ಸ್ವಾರಸ್ಯಮಯುವಾಗಿದೆ.

ಜನತೆಗೆ ಶಿಕ್ಷಣ: ಈ ರೀತಿಯ ದೀರ್ಘಾವಧಿ ಕಾರ್ಯನೀತಿಗಳ ಹಾಗೂ ಅಲ್ಪಾವಧಿ ತ್ವರಿತ ಕಾರ್ಯಗಳ ರೂಪರೇಷೆಗಳನ್ನು ಹಾಕಿಕೊಂಡು ನಿರ್ವಹಿಸದಿದ್ದರೆ ಮೇಲಿನ ಎಲ್ಲ ಪ್ರಯತ್ನಗಳೂ ಕಾರ್ಯಗತವಾಗಲಿಕ್ಕಿಲ್ಲ. ಈ ಎಲ್ಲ ಕಾರ್ಯಕ್ರಮಗಳಿಗೂ ಯಥೇಚ್ಛವಾದ ಆರ್ಥಿಕ ನೆರವಿನ ಆವಶ್ಯಕತೆ ಇದೆ. ತಮ್ಮ ಪ್ರಾಣಿಜೀವಿಗಳ ಬಗ್ಗೆ ಅಭಿಮಾನಿತರಾಗಿ ಅವುಗಳೊಂದಿಗೆ ಇದ್ದ ಎಲ್ಲ ಸೊತ್ತುಗಳನ್ನು ಕಾಪಾಡಿಕೊಂಡು ಅವರ ಆರ್ಥಿಕಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಲು ನಮ್ಮ ಜನತೆಗೆ ಯೋಗ್ಯ ಶಿಕ್ಷಣ ಕೊಡುವ ವ್ಯವಸ್ಥೆಯಾಗಬೇಕು.

ಸಂಶೋಧನೆ: ಇದಲ್ಲದೆ ಕಾಡಿನಲ್ಲಿಯ ವನ್ಯಮೃಗಗಳ ಮೇಲೆ ಹುಲಿಯು ಬೇಟೆಯಾಡಿ ಕೊಂದು ತಿನ್ನುವ ಸ್ವಭಾವದ ಪರಿಣಾಮ ಹಾಗೂ ಜೀವಿ ಪರಿಸ್ಥಿತಿ ಶಾಸ್ತ್ರದ ಬಗ್ಗೆ ಸಂಶೋಧನೆಯ ಕಾರ್ಯಕ್ರಮ ಹಾಕಿಕೊಳ್ಳಬೇಕು. ನಮ್ಮ ಭಾವೀ ಪೀಳಿಗೆಯ ಸಂತೋಷಕ್ಕೆ ವನ್ಯಮೃಗಗಳ ಸಂರಕ್ಷಣೆ ಹಾಗೂ ಅವುಗಳ ನಿರ್ವಹಣೆಯಾಗಬೇಕಾದರೆ ತಕ್ಕ ಮಾಹಿತಿಯನ್ನು ಕೂಡಿಹಾಕಬೇಕು.

ಹುಲಿಗಳನ್ನು ವಿಶೇಷ ಲಶಿಕೆ ತುಂಬಿದ ಬಂದೂಕಿ (ಟ್ರ್ಯಾಂಕ್ವಿಲೈಜರ್)ನಿಂದ ಎಚ್ಚರತಪ್ಪಿ ಬೀಳುವಂತೆ ಮಾಡಿ ಅವುಗಳ ಕಿವಿಗಳಲ್ಲಿ ರೇಡಿಯೋ ಅಥವಾ ವಾಹಕ ಯಂತ್ರ (ಟ್ರಾನ್ಸ್‌ಮೀಟರ್)ಗಳನ್ನು ಅಂಟಿಸುವುದರಿಂದ ಅವುಗಳ ಚಲನವಲನಗಳನ್ನು ಅನುಸರಿಸಲು ಸಾಧ್ಯವಾಗಿ, ಅವುಗಳ ಸಾಮಾಜಿಕ ಜೀವನ ಹಾಗೂ ಬೇಟೆಯಾಡುವುದು ಅಥವಾ ಆಹಾರ ದೊರಕಿಸುವ ಸ್ವಭಾವದ ಬಗ್ಗೆ ಅಭ್ಯಸಿಸಬಹುದು. ರೇಡಿಯೋ ಸಹಾಯದಿಂದ ರಾತ್ರಿಯಲ್ಲಿ ಹುಲಿಗಳು ನಡೆದುಹೋದ ದಾರಿಗಳನ್ನು ಕಂಡುಹಿಡಿದು ಅವುಗಳನ್ನು ಹಿಂಬಾಲಿಸಬಹುದು.

ಹುಲಿಗಳು ತಮ್ಮ ಬೇಟೆಗಳಲ್ಲಿ ಏಕೆ ಮತ್ತು ಹೇಗೆ ಬಲಿಗಳನ್ನು ಆರಿಸಿಕೊಳ್ಳುತ್ತವೆ? ಎಂಬುದು ಒಂದು ಮುಖ್ಯ ಪ್ರಶ್ನೆ. ಅವುಗಳ ಬಲಿಗಳಲ್ಲಿ ಹೆಣ್ಣು ಪ್ರಾಣಿಗಳಿಗಿಂತ ಹೆಚ್ಚು ಗಂಡುಗಳನ್ನು ಆರಿಸಿ ಕೊಲ್ಲುತ್ತವೆಯೊ? ಚಿಕ್ಕವಯಸ್ಸಿನ ಮುಪ್ಪಿನ ಹಾಗೂ ರೋಗದಿಂದ ಬಳಲುವ ಅಥವಾ ತಾರುಣ್ಯಾವಸ್ಥೆಯಲ್ಲಿದ್ದ ಪ್ರಾಣಿಗಳನ್ನೋ?

ನನ್ನ ಅನುಭವದ ಪ್ರಕಾರ ಹೇಳುವುದಾದರೆ ಹುಲಿಗಳು ಸಮಯ ಸಿಕ್ಕಾಗೆಲ್ಲ ಸಾಮಾನ್ಯವಾಗಿ ಕ್ಷೀಣ, ರೋಗಗ್ರಸ್ತ ಹಾಗೂ ಪೋಲಿ ಪ್ರಾಣಿಗಳನ್ನು ಕೊಲ್ಲುತ್ತವೆ.

ಆದರೆ ತನ್ನ ಲಘುರಭಸದ ಆಕ್ರಮಣದಲ್ಲಿ ಆರಿಸಿಕೊಳ್ಳಲು ಹುಲಿಗೆ ಅಷ್ಟೊಂದು ಅಸ್ಪದ ಇರುವುದಿಲ್ಲ. ಆದ್ದರಿಂದ ಹೆಚ್ಚು ಬಲಿಗಳು ಹೆಚ್ಚುಕಡಮೆ ಆರೋಗ್ಯವಾಗಿಯೇ ಇರುತ್ತವೆಂದು ಹೇಳಬಹುದು. ಆದರೆ ಹುಲಿ. ಎಷ್ಟೇ ಆಗಲಿ, ಶಿಕಾರಿ ಪ್ರಾಣಿ ಹಾಗೂ ಅದು ಸಭ್ಯಗೃಹಸ್ಥ. ಆದರೆ ಅದು ಕಾಡಿನ ಜಾಡಮಾಲಿಗಳಂತಹ ತೋಳ, ನರಿ, ಕತ್ತೆಕಿರುಬಗಳಂತೆ ರೋಗರುಜಿನಗಳಿಂದ ಬಳಲುತ್ತಿರುವ ಮೂಳೆಗಳ ಮೂಟೆ ಯಂತಿರುವ ಪ್ರಾಣಿಗಳನ್ನು ಕೊಲ್ಲುವಂತೆ ಹುಲಿ ಕೊಲ್ಲುವಲ್ಲಿ ಸಂತುಷ್ಟ ಹೊಂದ ಲಾರದು.

ಹೊಣೆಗಾರಿಕೆ: ಭಾರತದಲ್ಲಿಯ ಹುಲಿಗಳಿದ್ದ ಒಂದು ವನ್ಯಮೃಗಧಾಮವೂ ಕೂಡ ಸಾಕಷ್ಟು ಪ್ರಮಾಣದಲ್ಲಿ ಸಜ್ಜುಗೊಳಿಸಲ್ಪಟ್ಟಿಲ್ಲ ಹಾಗೂ ಅತ್ಯಾಧುನಿಕ, ವೈಜ್ಞಾನಿಕ ಮಟ್ಟದಲ್ಲಿ ಕಾರ್ಯನಿರ್ವಹಣೆಯನ್ನೂ ಮಾಡುತ್ತಿಲ್ಲ. ಅವುಗಳನ್ನು ಊರ್ಜಿತಾವಸ್ಥೆ ಗೊಳಿಸಲು ಆವಶ್ಯಕವಿದ್ದ ಕಾರ್ಯಕ್ರಮಗಳಲ್ಲಿ ಕೇಂದ್ರೀಕರಿಸುವುದು ಹಾಗೂ ದೀರ್ಘಾ ವಧಿ ಭದ್ರತೆಯ ಕ್ರಮಗಳಿಂದ ಮಾತ್ರ ಇದಕ್ಕೆ ಪರಿಹಾರ. ಹುಲಿ ಉಳಿದು ಬದುಕ ಬೇಕಾದರೆ ಕಳಕಳಿಯಸಹಕಾರ, ಮಹಾಸಂಕಲ್ಪ ಮತ್ತು ತೀವ್ರ ಕಾರ್ಯನಿರ್ವಹಣೆಗಳ ಆವಶ್ಯಕತೆ ಇದೆ. ಪ್ರತಿಯೊಂದು ಮೀಸಲು ಧಾಮಗಳಲ್ಲಿ ಕನಿಷ್ಟಪಕ್ಷ ಒಂದುನೂರು ಹುಲಿಗಳನ್ನಾದರೂ ಕ್ರಮೇಣ ಹೆಚ್ಚಿಸಿ. ಅವುಗಳ ಜೀವನಕ್ಕೆ ಅವಶ್ಯವಿದ್ದ ಸುರಕ್ಷಿತ ಪ್ರದೇಶ, ಆಹಾರ ಹಾಗೂ ನೀರುಗಳ ವ್ಯವಸ್ಥೆಗೆ ಏರ್ಪಾಡಾಗಬೇಕು. ಇದಕ್ಕೆ ಬೇಕಾದ ಸಮಯ ಹಾಗೂ ಸಾಧನ ಸಂಪತ್ತುಗಳ ಕೊರತೆ ಇಂದು ಭಾರತದಲ್ಲಿದ. ಪ್ರಸ್ತುತ ಸಾಕಷ್ಟು ಸಂಖ್ಯೆಯಲ್ಲಿ ಹುಲಿಗಳಿಲ್ಲ. ಇದ್ದವುಗಳ ಏಳ್ಗೆಗಾಗಿಯೇ ಸಕಲ ಪ್ರಯತ್ನಗಳು ನಡೆಯಬೇಕು. ಇದು ಸ್ಥಾನಿಕ ಸಂಸ್ಥೆಗಳ ಸಹಕಾರ ಹಾಗೂ ಬೆಂಬಲಗಳಿಂದ ಮಾತ್ರ ಸಾಧ್ಯ. ಸರಕಾರಗಳೂ ಕೂಡ ಈ ದಿಶೆಯಲ್ಲಿ ಮುಂದಾಗಬೇಕು. ಭಾರತ, ನೇಪಾಳ, ಭೂತಾನ ಹಾಗೂ ಬಂಗ್ಲಾದೇಶಗಳೂ ಭಾರತದ ಹುಲಿರಾಸನ್ನು ರಕ್ಷಿಸುವುದು ತಮ್ಮ ಹೊಣೆಯೆಂದು ಭಾವಿಸಬೇಕು.

ಈ ಹುಲಿಯನ್ನು ರಕ್ಷಿಸುವ ಹೊಣೆ ಕೇವಲ ಒಂದು ರಾಷ್ಟ್ರದ್ದಾಗಿರದೆ ಎಲ್ಲ ನಾಗರಿಕ ರಾಷ್ಟ್ರಗಳ ಹೊಣೆಯೂ ಹೌದು. ಮಾನವ ನಿರ್ಮಿತ 'ಅಬುಸಿಂಬೆಲ್'ದ ಕಲ್ಲುದೇವಸ್ಥಾನಗಳನ್ನು ಕೊನೆ ಘಳಿಗೆಯಲ್ಲಿ ಅಂತರರಾಷ್ಟ್ರೀಯ ಪ್ರಯತ್ನ ಹಾಗೂ ಧನಸಹಾಯಗಳಿಂದ ಉಳಿಸಿಕೊಂಡಂತೆ, ಅದರ ಸ್ಥಾನವನ್ನು ಭರ್ತಿಮಾಡಲಾಗದಂತಹ ಅಪಾರ ನೈಸರ್ಗಿಕ ಸಂಪತ್ತಾಗಿರುವ ಹುಲಿಯನ್ನು ಉಳಿಸಿಕೊಳ್ಳಲೇಬೇಕು. ನಮ್ಮ ಹುಲಿಯನ್ನು ಉಳಿಸಿಕೊಳ್ಳಲು 'ಅಂತರರಾಷ್ಟ್ರೀಯ ಪ್ರಕೃತಿ ಹಾಗೂ ರಾಷ್ಟ್ರೀಯ ಸಂಪನ್ಮೂಲಗಳ ಸಂರಕ್ಷಣಾ ಸಂಘ' (IUCN) ಹಾಗೂ ಅದರ ಸೋದರಿ ಸಂಬಂಧ ಹೊಂದಿದ 'ವಿಶ್ವವನ್ಯಮೃಗ ನಿಧಿ'ಗಳ (WWF) ಮೇಲೆ ಅವಲಂಬಿಸಿರದೆ ಸ್ಥಾಯಿ ಸರಕಾರಗಳು ಹಾಗೂ ಜನತೆ ಕೂಡ ಇದರಲ್ಲಿ ಭಾಗವಹಿಸಿ ಸಹಕರಿಸಬೇಕು. ಅಂತರರಾಷ್ಟ್ರೀಯ ಪ್ರಕೃತಿ ಹಾಗೂ ರಾಷ್ಟ್ರೀಯ ಸಂಪನ್ಮೂಲಗಳ ಸಂರಕ್ಷಣಾ ಸಂಘ

ಹಾಗೂ ವಿಶ್ವವನ್ಯಮೃಗನಿಧಿಗಳು ಎರಡೂ ಯೋಗ್ಯ ಸಂಸ್ಥೆಗಳಿದ್ದು ಅವು ತಾಂತ್ರಿಕ ಹಾಗೂ ವೈಜ್ಞಾನಿಕ ಮಾಹಿತಿಗಳನ್ನು ಮತ್ತು ಪರದೇಶದ ಹಣವನ್ನು ಕೂಡಿಹಾಕುವಲ್ಲಿ ಹೆಣಗಾಡುತ್ತವೆ. ವಿಶ್ವವನ್ಯಮೃಗನಿಧಿ ಧರ್ಮಾರ್ಥ ಸಂಸ್ಥೆಯಿದ್ದು ಹಣಕ್ಕಾಗಿ ಜನತೆಯ ಕೊಡುಗೈಯನ್ನೇ ಅವಲಂಬಿಸಿದೆ. ವಿಶ್ವದ ಇತರ ಕಡೆ ಅಪಾಯಕ್ಕೀಡಾದ ವನ್ಯಮೃಗಗಳನ್ನು ರಕ್ಷಿಸುವಲ್ಲಿ ಸಫಲತೆ ಪಡೆದಿದ್ದರೂ ಇನ್ನೂ ಅನೇಕ ತೀವ್ರಮಟ್ಟದಲ್ಲಿ ವಿರುತ್ತಿರುವ IUCN ಹಾಕಿಕೊಂಡ ಕಾರ್ಯಕ್ರಮಗಳಿಗೆ ವಿಶ್ವ ವನ್ಯಮೃಗನಿಧಿಯ ಹಣ ಸಾಲುವುದಿಲ್ಲ. ಹುಲಿಯನ್ನು ಸಂರಕ್ಷಿಸುವ ಕಾರ್ಯ ಅವೆಲ್ಲವುಗಳಲ್ಲಿ ಒಂದು. ಆದರೆ ಇದು ಕಾಯುವಂತಿಲ್ಲ. ಆದ್ದರಿಂದ ಈ ಮಹಾಕಾರ್ಯಕ್ಕೆ ಸ್ಥಾಯಿ ಸರಕಾರಗಳ ಹಣದ ಸಹಾಯದೊಂದಿಗೆ ಜನತೆಯ ಧೃಢ ಬೆಂಬಲ, ಸಹಕಾರ ಹಾಗೂ ಉದಾರ ಸಹಾಯ ಬೇಕೇ ಬೇಕು. ಇಲ್ಲವಾದರೆ ಸಮಯ ಮಿಂಚಿ ಹೋದೀತು.

ಇನ್ನೊಂದು ಉಪಗ್ರಹವನ್ನು ಬಾಹ್ಯಾಕಾಶದಲ್ಲಿ ಉಡಾಯಿಸಿ ಅದರ ಸಲಕರಣೆಗಳಿಂದ ಬಾಹ್ಯಾಕಾಶವನ್ನು ಮಲಿನಗೊಳಿಸುವುದಕ್ಕಿಂತ ವಿಶ್ವದ ಅತ್ಯಂತ ಸುಂದರ ಪ್ರಾಣಿಗಳಲ್ಲೊಂದಾದ ಹುಲಿಯನ್ನು ನಶಿಸಿಹೋಗುವುದರಿಂದ ತಪ್ಪಿಸಿ ಅದರ ತವರು ಕಾಡಿನೊಂದಿಗೆ ಉಳಿಸಿಕೊಳ್ಳುವುದು ನಮ್ಮ ಭವಿಷ್ಯದ ಪೀಳಿಗೆಗೆ ಅತಿ ಮುಖ್ಯವಾದುದಲ್ಲವೆ? ಇದಕ್ಕೆ ಖರ್ಚು ಕೂಡ ಅದಕ್ಕಿಂತ ಕಡಮೆ.

ಈ ದಿಶೆಯಲ್ಲಿ ಪ್ರಯತ್ನ ಮಾಡಲು ಸಾಧ್ಯವೆ? ಅಥವಾ ನಾಗರಿಕತೆ ಪಡೆದ ವಿಶ್ವ ಕೈಕಟ್ಟಿ ಕುಳಿತು ಹುಲಿ ನಾಶವಾಗುತ್ತಿರುವುದನ್ನು ನೋಡುವುದೆ? ನಾವು ಸಾಕಷ್ಟು ಹಣ ಕೂಡಿಹಾಕಿ ಕೊನೆಯ ಪಕ್ಷ ಭಾರತದ ಹುಲಿಯ ರಾಸನ್ನಾದರೂ ಉಳಿಸಿಕೊಳ್ಳುತ್ತೇವೆಂದು ನನಗೆ ಸಂಪೂರ್ಣ ಆಶೆ ಇದೆ. ನಾವು ಉದಾಸೀನರಾದರೆ ನಮ್ಮ ಮಕ್ಕಳು ನಮ್ಮನ್ನು ಸುಲಭವಾಗಿ ಕ್ಷಮಿಸರು.

'ಪ್ರಾಜೆಕ್ಟ್ ಟೈಗರ್' ಹುಲಿಸಂರಕ್ಷಣ ಯೋಜನೆ

ಹುಲಿಯ ಸಂತತಿ ನಶಿಸಿಹೋಗುತ್ತಿರುವ ಈ ವಿಷಮಾವಸ್ಥೆಯ ಕಾಲದಲ್ಲಿ ತಡವಾದರೂ ಮುಂದಿನ ಪೀಳಿಗೆಗೆ ನಿಸರ್ಗದ 'ರಾಷ್ಟ್ರೀಯ ಮೃಗ'ದ ಪಟ್ಟದ ಬಳುವಳಿ ಲಭ್ಯವಾಗಲು 'ಪ್ರಾಜೆಕ್ಟ್ ಟೈಗರ್' (ವ್ಯಾಘ್ರ ಸಂರಕ್ಷಣೆ ಕಾರ್ಯ ಯೋಜನೆ) ಕೆಲವು ವರ್ಷಗಳ ಹಿಂದೆ ಕಾರ್ಯಾರಂಭ ಮಾಡಿದೆ.

1973 ಏಪ್ರಿಲ್ ತಿಂಗಳಲ್ಲಿ ಉತ್ತರ ಪ್ರದೇಶದ ಅಭಯಾರಣ್ಯ — 'ಕಾರ್ಬೆಟ್ ನ್ಯಾಶನಲ್ ಪಾರ್ಕ'ನಲ್ಲಿ ಈ ವ್ಯಾಘ್ರ ಸಂರಕ್ಷಣಾ ಕಾರ್ಯ ಯೋಜನೆ'ಯನ್ನು ವಿಧಿವತ್ತಾಗಿ ಉದ್ಘಾಟಿಸಲಾಯಿತು. ಜಾಗತಿಕ ವನ್ಯಜೀವಿನಿಧಿ ಮತ್ತು ಪ್ರಕೃತಿ ಹಾಗೂ ರಾಷ್ಟ್ರೀಯ ಸಂಪನ್ಮೂಲಗಳ ರಕ್ಷಣೆಯ ಅಂತರರಾಷ್ಟ್ರೀಯ ಸಂಘದ ಸಹಾಯದಿಂದ ಭಾರತ ಸರಕಾರ ನಾಲ್ಕು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಈ ಯೋಜನೆಯನ್ನು ಐದನೆಯ ಪಂಚವಾರ್ಷಿಕ ಯೋಜನೆಯ ಕೊನೆಗೆ ಪೂರ್ತಿಗೊಳಿಸಲಿದೆ. ಜಾಗತಿಕ

ವನ್ಯಜೀವಿ ನಿಧಿಯವರು ಹತ್ತು ದಶಲಕ್ಷ ಡಾಲರ್ ನಿಧಿಯನ್ನು ಕೂಡಿಸಿ ಕೊಡಲು ಒಪ್ಪಿದ್ದಾರೆ.

ಕೋಷ್ಟಕ 4

ಭಾರತದಲ್ಲಿ ಹುಲಿಗಳಿಗಾಗಿ ಕಾಯ್ದಿರಿಸಿದ ಪ್ರದೇಶಗಳು ಹಾಗೂ ಅವುಗಳ ವಿಸ್ತೀರ್ಣ

ಅ.ಸಂ.	ಹೆಸರು	ಪ್ರಸ್ತುತ ಪ್ರದೇಶ (ಚ.ಕಿ.ಮಿ)	ವಿಸ್ತೃತ ಗೊಳಿಸಬೇಕಾದ ಪ್ರದೇಶ (ಚ.ಕಿ.ಮಿ)
(1)	ಮನಾಸ್ (ಅಸ್ಸಾಂ)	270	2900
(2)	ಪಲಮಾವ್ ರಾಷ್ಟ್ರೀಯ ವನ (ಬಿಹಾರ)	240	1500
(3)	ಸಿಮ್ಲಿಪಾಲ್ (ಒರಿಸ್ಸಾ)	300	—
(4)	ಕೊರ್ಬೆಟ್ ರಾಷ್ಟ್ರೀಯವನ (ಉ.ಪ್ರ.)	560	—
(5)	ರನ್‌ಥಂಬೋರ್ (ರಾಜಸ್ಥಾನ)	155	300
(6)	ಕನ್ಹಾ ರಾಷ್ಟ್ರೀಯವನ (ಮ.ಪ್ರ.)	250	1380
(7)	ಮೇಲ್ಘಾಟ್ (ಮಹಾರಾಷ್ಟ್ರ)	352	900
(8)	ಬಂಡಿಪುರ (ಕರ್ನಾಟಕ)	56	264
(9)	ಸುಂದರಬನ (ಪ.ಬಂಗಾಲ)	—	—

ವಿ.ಸೂ:— ಚಿತ್ರ 3 ನೋಡಿರಿ

ಉತ್ತರ ಪ್ರದೇಶದ ಕಾರ್ಬೆಟ್ ನ್ಯಾಶನಲ್ ಪಾರ್ಕ್. ಅಸ್ಸಾಮ್‌ದ ಮನಾಸ್. ಮಧ್ಯಪ್ರದೇಶದ ಕನ್ಹಾ ನ್ಯಾಷನಲ್ ಪಾರ್ಕ್. ರಾಜಾಸ್ಥಾನದ ರಣ್‌ಥಂಬೋರ್, ಮಹಾರಾಷ್ಟ್ರದ ಮೇಲ್‌ಘಾಟ್, ಬಿಹಾರದ ಬೆತ್ಲಾ, ಒರಿಸ್ಸಾದ ಸಿಂಮ್ಲಿಪಾಲ್, ಕರ್ನಾಟಕದ ಬಂಡೀಪುರ ಮತ್ತು ಬಿಹಾರದ ಪಲಮಾವ್ — ವ್ಯಾಘ್ರದಟ್ಟಣೆಯ ಈ ಒಂಭತ್ತು ಸ್ಥಳಗಳನ್ನು ಈ ಯೋಜನೆಯ ಅನುಷ್ಠಾನಕ್ಕೆಂದು ಆರಿಸಲಾಗಿದೆ. ಇವಲ್ಲದೆ ಭಾರತಕ್ಕೆ ನೆರೆ ರಾಷ್ಟ್ರಗಳಾದ ನೇಪಾಳದ ಸುಕ್ಲಾಪಂಥ ರಿಸರ್ವ್, ಕರ್ನಾಲಿ ರಿಸರ್ವ್ ಹಾಗೂ ಚಿತಾವನ್ ರಾಷ್ಟ್ರೀಯ ಉದ್ಯಾನವನ, ಬಂಗ್ಲಾದೇಶದ ಸುಂದರಬನ ರಿಸರ್ವ್. ಹಾಗೂ ಭೂತಾನದ ಮನಾಸ್ ರಿಸರ್ವ್‌ಗಳಲ್ಲಿಯೂ ವ್ಯಾಘ್ರ ಸಂರಕ್ಷಣಾ ಯೋಜನೆಯನ್ನು ಜಾರಿಗೆ ತರಲಾಗಿದೆ. ವ್ಯಾಘ್ರಕ್ಕೆ ಪೂರ್ಣ ಸ್ವರೂಪದ ಪರಿಸರದ ರಕ್ಷಣೆ ನೀಡಿ ಅವುಗಳ ಅಭಿವೃದ್ಧಿಗೆ ಅಗತ್ಯವಾದ ಸಸ್ಯ ಮತ್ತು ಬೇಟೆ ಪಶುಗಳು ಸ್ವಾಭಾವಿಕ ಪರಿಸರದಲ್ಲಿ ಬೆಳೆಯಲು ಅನುಕೂಲವಾಗುವಂತೆ ಕಾಡುಗಳನ್ನು ಶಾಸ್ತ್ರೀಯ ರೀತಿಯಲ್ಲಿ ಸಂರಕ್ಷಿಸಿ ಬೆಳೆಸಲು ಈ ಯೋಜನೆ ಉದ್ದೇಶಿಸಿದೆ.

ಹುಲಿಗಳ ಸಂತತಿ ದಟ್ಟವಾಗಿ ಇನ್ನೂ ಉಳಿದಿರುವ ಕೆಲಪ್ರದೇಶಗಳಲ್ಲಿ ಕರ್ನಾಟಕವೂ ಒಂದು. ಮೈಸೂರಿಗೆ ಹತ್ತಿರದ ಬಂಡೀಪುರದಲ್ಲಿ ವ್ಯಾಘ್ರಸಂರಕ್ಷಣೆ ಯೋಜನೆಯು ಕಾರ್ಯಗತವಾಗಿದೆ. 1973ರ ಸುಮಾರಿಗೆ ಈ ಅರಣ್ಯದಲ್ಲಿ ಇರುವ ಹುಲಿಗಳ ಸಂಖ್ಯೆ ಕೇವಲ ಆರು ಏಳು ಎಂದು ಅಂದಾಜು ಮಾಡಲಾಗಿತ್ತು. ಕರ್ನಾಟಕ ರಾಜ್ಯಸರಕಾರವು 36 ಲಕ್ಷ ರೂ.ಗಳ 6 ವರ್ಷಗಳ ಯೋಜನೆಯನ್ನು 1973 ನವೆಂಬರ್ ತಿಂಗಳಲ್ಲಿ ಬಂಡೀಪುರ ಅಭಯಾರಣ್ಯ ಪ್ರದೇಶದಲ್ಲಿ ಪ್ರಾರಂಭಿಸಿದೆ.

ಭಾರತದಲ್ಲಿ 'ಪ್ರಾಜೆಕ್ಟ್ ಟೈಗರ'ದ ಕಾರ್ಯನಿರ್ವಹಣೆ ಪ್ರಾರಂಭವಾದ ನಂತರ ಸುಮಾರು ಎರಡುವರೆ ವರ್ಷಗಳ ಅವಧಿಯಲ್ಲಿ ದೇಶಾದ್ಯಂತ ಹೆಚ್ಚುತ್ತಿರುವ ಹುಲಿಗಳ ಸಂಖ್ಯೆಯೊಂದಿಗೆ ಇತರ ವನ್ಯಮೃಗಗಳ ಸಂಖ್ಯೆಯು ಹೆಚ್ಚುತ್ತಿವೆ ಎಂದು ವರದಿಯಾಗಿದೆ. ಸುಸಂಘಟಿತ ವನ್ಯಮೃಗ ಧಾಮುಗಳ ಕಾರ್ಯನಿರ್ವಹಣೆ ಅದರಲ್ಲಿಯೂ ವಿಶೇಷವಾಗಿ ವ್ಯಾಘ್ರ ಸಂರಕ್ಷಣೆಗೆ ನೇಪಾಳ, ಭೂತಾನ, ಬಂಗ್ಲಾದೇಶ ಹಾಗೂ ಭಾರತ ದೇಶಗಳ ಸರಕಾರಗಳು ಕೂಡಿಹಾಕಿದ ಮಾಹಿತಿಯನ್ನು ಪರಸ್ಪರ ಅದಲುಬದಲು ಮಾಡುವಲ್ಲಿ, ಹಾಗೂ ಅರಣ್ಯಧಾಮುಗಳಿಗೆ ಹೊಂದಿರುವ ಸರಹದ್ದುಗಳಲ್ಲಿ ಬೇಟೆ ಗಳ್ಳತನವನು ಸಂಪೂರ್ಣ ನಿಲ್ಲಿಸಲು ಒಪ್ಪಿಕೊಂಡಿವೆ.

ಮೇಲಿನ ಪ್ರತಿಯೊಂದು ಧಾಮುಗಳಲ್ಲಿಯೂ 'ಗರ್ಭಕಾಡು' ಬಿಡಲು ವ್ಯವಸ್ಥೆ ಮಾಡಲಾಗಿದ್ದು ಆ ಕ್ಷೇತ್ರಗಳಲ್ಲಿ ಯಾವುದೇ ಕಾರ್ಯಾಚರಣೆ ನಿಷಿದ್ಧ. ಅಲ್ಲಿದ್ದ ಹಳ್ಳಿಗಳನ್ನು ಸ್ಥಳಾಂತರಿಸಲು ಸೂಕ್ತಕ್ರಮ ಕೈಕೊಂಡಿವೆ. ಈ ಕ್ರಮ ಒಂದು ಮಹಾಸಾಧನೆಯೆಂದೇ ಹೇಳಬೇಕು.

ವ್ಯಾಘ್ರ ಸಂರಕ್ಷಣೆಯ ಈ ಯೋಜನೆಯು ಪ್ರಪಂಚದಾದ್ಯಂತ ನಿಸರ್ಗ ಪ್ರೇಮಿಗಳ ಗಮನವನ್ನು ಸೆಳೆದಿದೆ. ಈ ಶತಮಾನದ ಪ್ರಕೃತಿ ಸಂರಕ್ಷಣೆಯ ಯೋಜನೆಗಳಲ್ಲಿ ಈ ವ್ಯಾಘ್ರಸಂರಕ್ಷಣಾ ಕಾರ್ಯಯೋಜನೆಯು ಅನುಪಮವಾಗಿದೆ. ಯೋಜನೆಯ ಬಲದಿಂದ ಗುಜರಾತಿನ ಗೀರ್ ಸಿಂಹವನ್ನೂ, ಅಸಾಮ್‌ದ ಕಾಝಿರಂಗಾದ ಘೇಂಡಾಮೃಗವನ್ನೂ (ಅಳಿದುಹೋಗಿದೆ ಎಂದು ತಿಳಿಯಲಾಗಿದ್ದ ಘೇಂಡಾಮೃಗಗಳ ಸಂಖ್ಯೆ ಇಂದು 671ಕ್ಕೆ ಏರಿ ಪ್ರಪಂಚದ ಒಟ್ಟು ಘೇಂಡಾಗಳ ಅರ್ಧಸಂಖ್ಯೆಗೆ ಮುಟ್ಟಿದೆ) ಈಗ ಉಳಿಸಿ ಬೆಳೆಸಲು ಸಾಧ್ಯವಾಗಿದೆ. ಪ್ರಸ್ತುತ ಯೋಜನೆಗೆ ವಿದೇಶದ 23 ರಾಷ್ಟ್ರಗಳ ನೆರವು ದೊರೆತಿದೆ; ಭಾರತ ಸರಕಾರ ಕಾನೂನು ಮತ್ತು ವಿಜ್ಞಾನಗಳ ಸಹಾಯದಿಂದ ಹುಲಿ ಸಂತತಿಯನ್ನು ಮುಂದಿನ ಪೀಳಿಗೆಗೆ ಅಸಾಮಾನ್ಯ ಕೊಡುಗೆಯಾಗಿ ನೀಡಲು ಸಿದ್ಧವಾಗಿದೆ. ಈ ದೇಶದ ಅರಣ್ಯಾಧಿಕಾರಿಗಳೂ ಹಾಗೂ ಜನತೆಯು ಹುಲಿ ರಕ್ಷಣೆಗೆ ಸಹಕರಿಸಿ, ಕಳ್ಳ ಬೇಟೆಗಾರರನ್ನು ಮತ್ತು ಚರ್ಮ, ಉಗುರುಗಳ ಕಳ್ಳಸಾಗಾಟ ಹಾಗೂ ಮಾರಾಟಗಾರರನ್ನು ಹಿಡಿದುಕೊಡುವಲ್ಲಿ ಮುಂದೆಬಂದರೆ ತನ್ನ ಏಕೈಕ ಶತ್ರುವಾದ ಮನುಷ್ಯ

ನಿಂದಲೇ ಇಂದು ಅಭಯದಾನಪಡೆದ ಹುಲಿಯು ಭಾರತದ ಅತ್ಯಮೂಲ್ಯ ನಿಸರ್ಗ ಸಂಪತ್ತಾಗಿ ಉಳಿಯಬೇಕೆಂಬ ತನ್ನ ಆಶೆಯನ್ನು ಹೆಚ್ಚಿಸಿಕೊಳ್ಳಬಹುದು.

ಮನುಷ್ಯನಿಗೆ ಪಾಠ

ಹುಲಿ ಹಾಗೂ ಇತರ ವನ್ಯಮೃಗಗಳ ಜೀವನದಿಂದ ಮನುಷ್ಯ ಅನೇಕ ತಾತ್ಪರ್ಯಗಳನ್ನು ತನ್ನ ಜೀವನದಲ್ಲಿ ಉಪಯುಕ್ತವಾಗಿ ಅಳವಡಿಸಿಕೊಳ್ಳಬಹುದು. ಅವು ತಮ್ಮ ಪ್ರಾಂತ್ಯದ ಹಕ್ಕುಗಳನ್ನು ಯಾವ ರೀತಿಯಲ್ಲಿ ಬಗೆಹರಿಸಿ ಕಾಪಾಡಿಕೊಳ್ಳುತ್ತವೆ? ಅವು ಹೇಗೆ ಆಹಾರ ಸಮಸ್ಯೆಯನ್ನು ಪೂರೈಸಿಕೊಳ್ಳುತ್ತವೆ? (ನೈಸರ್ಗಿಕ ಸ್ಥಿತಿಯಲ್ಲಿ ಪ್ರಾಣಿಗಳು ಆಹಾರದ ಪೂರೈಕೆ ಹಾಗೂ ಇತರ ಬೇಡಿಕೆಗಳಿಂದ ಸಸ್ಯ ಸಮೂಹದ ಸಮತೋಲನೆಯನ್ನು ಕಾದುಕೊಳ್ಳುವುದರಲ್ಲಿ ಹಾಗೂ ಮಣ್ಣಿನ ಫಲವತ್ತತೆಯನ್ನು ಉಳಿಸಿಕೊಳ್ಳುವಲ್ಲಿ ಸಹಾಯಮಾಡುತ್ತವೆ. ಅವು ಯಾವ ರೀತಿಯಲ್ಲಿ ಸಂತತಿ ನಿಯಂತ್ರಣವನ್ನು ನಿಭಾಯಿಸುತ್ತವೆ? ತಮ್ಮ ಮರಿಗಳ ಸ್ವಾಮ್ಯ ಇಚ್ಛಿಸದೆ ಹೇಗೆ ಶಿಸ್ತುಪಾಲನೆಯನ್ನು ಬೋಧಿಸುತ್ತವೆ ಹಾಗೂ ತರಬೇತು ಕೊಡುತ್ತವೆ? ಅವು ಒಂದನ್ನೊಂದು ಅರಿತುಕೊಂಡು ಯಾವ ವಿಧದಲ್ಲಿ ವ್ಯವಹರಿಸುತ್ತವೆ? ಇವೇ ಮೊದಲಾದ ವಿಷಯುಗಳನ್ನು ಮನುಷ್ಯ ಕಲಿತುಕೊಳ್ಳಬೇಕಾದ್ದು ಅತ್ಯಾವಶ್ಯಕ. ಹುಲಿಯ ಪ್ರತಿಯೊಂದು ಚಲನವಲನ ಹಾಗೂ ಕ್ರಿಯೆಗೂ ಒಂದೊಂದು ಅರ್ಥವಿದೆ. ಅದರ ಪ್ರತಿಯೊಂದು ಕ್ರಿಯೆಯಿಂದಲೂ ಮನುಷ್ಯನು ಕಲಿಯುವಂತಹುದು ಬೇಕಾದಷ್ಟಿದೆ.

ಹುಲಿಗಳ ಪ್ರಣಯಾಚರಣೆ ಹಾಗೂ ಮೈಥುನ

ಭಾರತದಲ್ಲಿ ಹುಲಿಗಳು ಸರ್ವಸಾಧಾರಣ ಎರಡರಿಂದ ಎರಡೂವರೆ ವರ್ಷಗಳಿಗೊಮ್ಮೆ ಮೈಥುನಕ್ಕೆಂದು ಜೊತೆಗೂಡುತ್ತವೆ. ಹುಲಿಗಳ ಸಂಭೋಗಕ್ರಿಯೆ ಪ್ರಕೃತಿ ಸ್ಥಾಪಕವಿದ್ದರೂ ಸಾಮಾನ್ಯವಾಗಿ ಸಮಶಿತೋಷ್ಣ ಪ್ರದೇಶ, ಉತ್ತರ ಭಾರತ ಹಾಗೂ ಹಿಮಾಲಯ ಪರ್ವತಗಳಲ್ಲಿ ಹೆಚ್ಚಾಗಿ ಕಾಲಮಾನಕ್ಕನುಗುಣವಾಗಿ ಅಂದರೆ ಚಳಿಗಾಲದಲ್ಲಿ ಜರುಗಿದರೆ ದಕ್ಷಿಣ ಭಾರತದಲ್ಲಿ ಎಲ್ಲ ಸಮಯಗಳಲ್ಲಿ ನವೆಂಬರ್‌ದಿಂದ ಏಪ್ರಿಲ್ ಮಾಹೆವರೆಗೂ ಪ್ರಬಲವಾಗಿರುತ್ತದೆ. ಕಾಮೋದ್ರೇಕದ ಈ ಸ್ವಾರಸ್ಯಮಯ ಅಂಗೀಕಾರ ಸ್ಥಿತಿಯಲ್ಲಿ ಹೆಣ್ಣು ಹುಲಿಗಳು ಸುಮಾರು ಏಳರಿಂದ ಹತ್ತುದಿನಗಳವರೆಗೆ ಇರುತ್ತವೆ. (ಸುಮಾತ್ರದ ಹುಲಿ, ನವೆಂಬರ್–ಮಾರ್ಚ್; ಮಾಂಚೂರಿಯದ ಹುಲಿ, ಅಕ್ಟೋಬರ್-ಡಿಸೆಂಬರ್; ಸೈಬೇರಿಯದ ಹುಲಿ ಮಾರ್ಚ್–ಜೂನ್‌ಗಳಲ್ಲಿ ಸಮಾವೇಶಗೊಳ್ಳುತ್ತವೆ). ಈ ಒಂದು ಸಮಯದಲ್ಲಿ ಮಾತ್ರ ಗಂಡು ಹಾಗೂ ಹೆಣ್ಣು ಹುಲಿಗಳು ಕೂಡಿ ಇರುವುದು ಕಂಡುಬರುತ್ತದೆ. ಈ ಅಲ್ಪ ಸಮಯದಲ್ಲೂ ಅವು ಒಮ್ಮೊಮ್ಮೆ ಬೇರೆ ಹೋಗಿ ಪುನಃ ಕೂಡಿಕೊಳ್ಳುವುದುಂಟು. ಈ ಸಮಯದಲ್ಲಿ ಅವು ಎರಡೂ ಸೇರಿ ಬೇಟೆಯಾಡುತ್ತವೆ. ಗಂಡು ಹುಲಿ ತನ್ನ ಪ್ರಿಯತಮೆಯ ಮೇಲೆ ಪ್ರಭಾವ ಬೀರಿ ಆಕರ್ಷಿಸಲು ಆಗಾಗ ಅಪ್ರಮಾಣಭೂತ ಶಕ್ತಿ ಹಾಗೂ ಧೈರ್ಯಗಳ ಸಾಹಸಕಾರ್ಯಗಳಲ್ಲಿ ತೊಡಗುತ್ತದೆ.

ಪ್ರಾಯದ ಗಂಡುಹುಲಿ ಪ್ರತಿಸ್ಪರ್ಧಿ ಗಂಡುಹುಲಿಗಳಿಗೆ ತನ್ನ ಪ್ರಿಯತಮೆಯಲ್ಲಿ ಪಾಲುಗೊಳ್ಳಲು ಬಿಡುವುದಿಲ್ಲ. ಹೆಣ್ಣು ಹುಲಿಯ ಸ್ವಾಧೀನ ಪಡೆಯಲು ಪ್ರಸಂಗ ಬಂದಲ್ಲಿ ಗಂಡುಹುಲಿ ಕಾದಾಡುತ್ತದೆ. ಕೆಲವು ವೇಳೆ ಸಾಯುವ ವರೆಗೆ ಕಾದಾಡುವುದುಂಟು. ಕೆಲವು ಸಂದರ್ಭಗಳಲ್ಲಿ ಎರಡಕ್ಕಿಂತ ಹೆಚ್ಚು ಪ್ರಾಯದ ಗಂಡು ಹುಲಿಗಳು ಒಂದು ಹೆಣ್ಣುಹುಲಿಯ ಸಮಾಗಮಕ್ಕಾಗಿ ಯತ್ನಿಸುವುದನ್ನು ಕಾಣಬಹುದು. ಅವು ರಹವಾಸಿಗಳಾಗಿರಬಹುದು, ಕ್ಷಣಿಕ ವಾಸಿಯಾಗಿರಬಹುದು ಅಥವಾ ಹೆಣ್ಣು ಹುಲಿ ದಾಟಿ ಬಂದ ಪಕ್ಕದ ವಲಯದ ಪ್ರವಾಸೀ ಗಂಡುಗಳಾಗಿರಬಹುದು. ಹಲವು ಸಂದರ್ಭಗಳಲ್ಲಿ ಹೆಣ್ಣುಹುಲಿ ಅದೇ ಆಗ ಕಾಮೋದ್ರೇಕಗೊಂಡಾಗ ಎರಡರಿಂದ ಐದು ಗಂಡು ಹುಲಿಗಳು ಕೂಡಿಕೊಂಡು ಸ್ಪರ್ಧಿಸಬಹುದು. ಆದರೆ ಅವುಗಳಲ್ಲಿ ಪೌರುಷವನ್ನು ಸ್ಥಾಪಿಸಿದ ಪ್ರಾಯದ ಗಂಡು ಹುಲಿಯನ್ನು ತನ್ನ ಮೆಚ್ಚುಗೆಗೆ ಪಾತ್ರ ಎಂದು ಹೆಣ್ಣು ಪರಿಗಣಿಸುತ್ತದೆ.

ಸಾಮಾನ್ಯವಾಗಿ ಗಂಡುಹುಲಿ ತನ್ನ ಬೇಟೆಯನ್ನು ಸ್ವತಃ ಕೊಂದು ಒಬ್ಬಂಟಿಯಾಗಿ ತಿನ್ನುವ ವಾಡಿಕೆ. ಆದರೆ ಮೈಥುನ ಸಮಯದಲ್ಲಿ ಗಂಡು ಹಾಗೂ ಹೆಣ್ಣು, ಒಮ್ಮೊಮ್ಮೆ ಹೆಣ್ಣಿನೊಂದಿಗೆ ಚಿಕ್ಕಮರಿಗಳಿದ್ದಾಗಲೂ ಬೇಳಿನ ಮೇಲೆ ತಿನ್ನಲು ಪಾಲುಗೊಳ್ಳುತ್ತವೆ. ಗಂಡು ತನ್ನ ಪ್ರಿಯತಮೆಯ ಮೇಲೆ ಪ್ರಭಾವ ಬೀರಿ ಆಕರ್ಷಿಸುವುದಕ್ಕಾಗಿ ಅದು 'ಹೂಂ' ಎಂದು ಒಪ್ಪುವವರೆಗೆ ದಯೆಯಿಲ್ಲದೆ ಬೇಟೆಪ್ರಾಣಿಗಳನ್ನು ಕೊಲ್ಲುತ್ತಲೇ ಇರುತ್ತದೆ. ಆದರೆ ಅವುಗಳ ಕಾಮ ಕ್ರೀಡೆಯ ಉನ್ಮತ್ತತೆ ತೃಪ್ತಿಗೊಳ್ಳುವವರೆಗೆ ಆಹಾರ ಸೇವಿಸುವುದು ಸಾಮಾನ್ಯವಾಗಿ ಕ್ವಚಿತ.

ಹುಲಿ ಸಾಮಾನ್ಯವಾಗಿ ಒಂದೇ ಹೆಣ್ಣುಹುಲಿಯ ಸಂಗಡ ಜೊತೆ ಸೇರುತ್ತದೆ. ಇದರರ್ಥ ಜೀವಮಾನದಲ್ಲಿ ಒಂದೇ ಹೆಣ್ಣುಹುಲಿಯ ಸಂಗಡ ಜೀವನಸಂಗಾತಿಯಾಗಿರುತ್ತದೆಂದಲ್ಲ. ಒಂದು ಗಂಡುಹುಲಿಗೆ ವಲಯ ಅಧಿಕಾರವಿದ್ದಾಗ ಇನ್ನೊಂದು ಗಂಡು ಹುಲಿ ಆ ವಲಯದಲ್ಲಿರುವುದಿಲ್ಲ. ಆ ವಲಯದಲ್ಲಿ ಮೈಥುನಕ್ಕೆ ಬಂದ ಅನೇಕ ಹೆಣ್ಣು ಹುಲಿಗಳು ಇದ್ದಾಗ ಒಂದಕ್ಕಿಂತ ಹೆಚ್ಚು ಹುಲಿಗಳ ಸಂಗ ಅನಿವಾರ್ಯವಾಗುತ್ತದೆ.

ಸಾಮಾನ್ಯ ಪರಿಸ್ಥಿತಿಯಲ್ಲಿ 45 ರಿಂದ 55 ದಿನಗಳಿಗೊಮ್ಮೆ ಹೆಣ್ಣುಹುಲಿ ಕಾಮೋದ್ರೇಕಗೊಳ್ಳುತ್ತದೆ. ಹುಲಿಯಲ್ಲಿ ಅಂಡಾಣು ಉತ್ಪತ್ತಿ ಸ್ವಪ್ರವರ್ತಿತವಾಗಿರದೆ ಸಂಭೋಗಿಸುವುದರಿಂದ ಪ್ರೇರೇಪಿಸಲ್ಪಡುತ್ತದೆ. ಕೆಲವೊಮ್ಮೆ ಯಾವುದೋ ಕಾರಣದಿಂದ ಫಲೋತ್ಪಾದಕವಾಗದಿದ್ದರೆ ಸುಳ್ಳು ಗರ್ಭತೋರಿಬರುತ್ತದೆ. ಅಂದರೆ ಅದರ ಹೊಟ್ಟೆ ಹಾಗೂ ಮೊಲೆಗಳು ದೊಡ್ಡದಾಗಿ 90 ದಿನಗಳು ಪ್ರಸವವಾಗುವ ಸಮಯದವರೆಗೆ ಅದು ನಿಜವಾಗಿ ಗರ್ಭಿಣಿಯಾದಂತೆ ತೋರಿಬರುತ್ತದೆ. ಬಂಜೆ ಗಂಡಿನ ಸಮಾಗಮ ಅಥವಾ ಹೆಣ್ಣಿನ ಅಂಗೀಕಾರ ಸ್ಥಿತಿ ಹಾಗೂ ಅಂಡಾಣುವಿನ ದೈಹಿಕ ಸಿದ್ಧಸ್ಥಿತಿಗಳ ನಡುವೆ ಏಕಕಾಲದಲ್ಲಿ ಸಂಭವಿಸಿದಂತಹ ಕ್ರಿಯೆಯೇ ಇದಕ್ಕೆ ಕಾರಣ.

ಮರಿಗಳು ಚಿಕ್ಕವಿರುವಾಗ ಹೆಣ್ಣುಹುಲಿ ಐಚ್ಛಿಕ ಸಂತಾನ ನಿಯಂತ್ರಣದ ಮೂಲಕ ಕಾಮುನಸೆಯನ್ನು ಮುಂದೂಡುವ ಸಾಮರ್ಥ್ಯ ಹೊಂದಿರುತ್ತದೆ. ಮರಿಗಳು ಬೆಳೆದು ಸ್ವತಂತ್ರವಾಗುವವರೆಗೆ ಅದು ಗಂಡುಹುಲಿಯ ಸಂಗಬಯಸುವುದಿಲ್ಲ.

ವರ್ಷದಲ್ಲಿ ಮೂರು ಸೂಲು: ಹುಲಿಗಳಲ್ಲಿ ಗರ್ಭಧರಿಸುವ ಹೆಚ್ಚಿನ ಸಾಮರ್ಥ್ಯ ಕೂಡ ಇದೆ. ಮೃಗಾಲಯದಲ್ಲಿ ಹುಟ್ಟಿದ ಮರಿಗಳನ್ನು ಕೂಡಲೇ ತಾಯಿಯಿಂದ ಬೇರ್ಪಡಿಸಿದರೆ ಹೆಣ್ಣುಹುಲಿ ವರ್ಷಕ್ಕೆ ಒಂದು ಸೂಲಿನಂತೆ ಮರಿಗಳನ್ನು ಕೊಡಬಹುದು. ಇದಕ್ಕೆ ಅನೇಕ ನಿದರ್ಶನಗಳಿವೆ. ನ್ಯೂಯಾರ್ಕಿನ ಮೃಗಾಲಯದಲ್ಲಿ ಒಂದು ಹೆಣ್ಣು ಹುಲಿ ಕ್ರಿ.ಶ. 1948ರಿಂದ 1959ರ ಸಮಯದಲ್ಲಿ 11 ಬಳಗಗಳಿಗೆ ಜನನವೀಯಿತು. ಅದರಂತೆ ಲಂಡನ್ನಿನ ಪ್ರಾಣಿಸಂಗ್ರಹಾಲಯದಲ್ಲಿ ಒಂದು ಹೆಣ್ಣುಹುಲಿ ಕ್ರಿ.ಶ. 1961 ರಿಂದ 1964ನೇ ಯವರೆಗೆ 4 ಸಲ ಗರ್ಭಿಣಿಯಾಗಿತ್ತು. ಅದು ಒಂದೇ ವರ್ಷದಲ್ಲಿ 3 ಬಳಗಗಳಿಗೆ ಜನ್ಮಕೊಟ್ಟಿತು — 16–1–1962ರಲ್ಲಿ 2 ಮರಿಗಳು; 11–8–1962 ರಲ್ಲಿ 3 ಮರಿಗಳು; ಮತ್ತು 16–12–1962ರಲ್ಲಿ 2 ಮರಿಗಳು. ಏಳು ನಿದರ್ಶನಗಳಲ್ಲಿ ಹೆಣ್ಣುಹುಲಿಗಳು ಕ್ರಮವರಿತು ತಮಗೆ ಜನಿಸಿದ ಬಳಗಗಳ ಮರಿಗಳಿಂದ ಬೇರ್ಪಡಿಸಿದ 16 ದಿನಗಳಿಂದ 56 ದಿನ ಕಳೆದನಂತರ ಮರಳಿ ಬೆದೆಯ ಕಾವಿಗೆ ಬಂದ ನಿದರ್ಶನ ಗಳಿವೆ.


ಮೈಸೂರು ಮೃಗಾಲಯದಲ್ಲಿ ಹುಲಿಗಳ ವೃದ್ಧಿ

ಅದೇ ರೀತಿ ಮೈಸೂರು ಮೃಗಾಲಯದಲ್ಲಿ 5 ವರ್ಷದ'ರಾಧಾ' ಎಂಬ ಹೆಣ್ಣು ಹುಲಿಗೆ 1973ರ ನವೆಂಬರ್ 16ನೇ ತಾರೀಖಿಗೆ ಚೊಚ್ಚಲು ಬಳಗದಲ್ಲಿ ತ್ರಿವಳಿ ಮರಿ ಯಾದವು. ಅವುಗಳಲ್ಲಿ ಎರಡು ಮರಿಗಳು ಸತ್ತು ಒಂದು ಹೆಣ್ಣು ಮರಿ ಮಾತ್ರ ಜೀವಂತವಾಗಿದೆ. ಪುನಃ ಅದೇ 'ರಾಧಾ' ಹೆಣ್ಣುಹುಲಿಗೆ 1974ರ ಅಕ್ಟೋಬರ್ 28ನೇ ತಾರೀಖಿಗೆ ಎರಡನೆ ಸೂಲಿನಲ್ಲಿ ತ್ರಿವಳಿಗಳು ಜನಿಸಿದವು. ಅವುಗಳಲ್ಲಿ ಒಂದು ಗಂಡುಮರಿಯಾಗಿತ್ತು. ಅದೇ ರೀತಿ ರಾಧಾಗೆ ಅದರ ಮೂರನೇ ತಳಿಯಲ್ಲಿ ನಾಲ್ಕು ಮರಿಗಳು 1975 ಅಕ್ಟೋಬರ್ 21ಕ್ಕೆ ಜನಿಸಿದವು. ಅವುಗಳಲ್ಲಿ ಒಂದು ಗಂಡುಮರಿ. ನಾಲ್ಕು ಮರಿಗಳು ಆರೋಗ್ಯವಾಗಿ ಬೆಳೆದವು. ರಾಧಾಗೆ ತನ್ನ ನಾಲ್ಕನೇ ಪ್ರಸವದಲ್ಲಿ ಜನಿಸಿದ 4 ಮರಿಗಳ ಪೈಕಿ ಮೂರು ಮರಿಗಳು ಬದುಕಿವೆ. ಇವು 1976ನೇ ಅಕ್ಟೋಬರ್ 13ನೇ ತಾರೀಖಿಗೆ ಜನಿಸಿದುವು.

ಹೀಗೆ ರಾಧಳಿಗೆ 4 ಸೂಲಿಗೆ 11 ಮರಿಗಳಾಗಿ ಮೈಸೂರು ಮೃಗಾಲಯದಲ್ಲಿ ಒಳ್ಳೆಯ ಶಿಶುವಿಹಾರವನ್ನೇ ಸ್ಥಾಪಿಸಿದೆ. ವರ್ಷದಲ್ಲಿ ಎರಡು ಸೂಲುಗಳಂತೆ ಮರಿ ಗಳನ್ನು ಪಡೆದ ಮೈಸೂರು ಮೃಗಾಲಯ ನಶಿಸುತ್ತಿರುವ ಹುಲಿ ಪೀಳಿಗೆಯನ್ನು ಪೋಷಿಸಿ ಊರ್ಜಿತಗೊಳಿಸಲು ಸೂಕ್ತಸ್ಥಳವೆಂದು ಪರಿಗಣಿಸಲ್ಪಟ್ಟಿದೆ. ಅದೇ ರೀತಿ ಮೃಗಾಲಯದಲ್ಲಿಯ ಇನ್ನೊಂದು ಹುಲಿ 'ತಾರಾ'ಗೆ ತನ್ನ ಮೊದಲನೆಯ

ಮೈಸೂರು ಮೃಗಾಲಯದಲ್ಲಿ ಹುಲಿ ಸಂತಾನಾಭಿವೃದ್ಧಿ

I ರಾಧಾ X ಕೃಷ್ಣ





ಚಿತ್ರ 25 : ಮೈಸೂರು ಮೃಗಾಲಯದ ಶಿಶುವಿಹಾರದಲ್ಲಿ ತ್ರಿವಳಿಗಳು

ಪ್ರಸವದಲ್ಲಿ 1976 ಜುಲೈ 7ನೇ ತಾರೀಖಿಗೆ ಮೂರು ಮರಿಗಳು ಜನಿಸಿದ್ದವು. ಪುನಃ ಅದು 1977ರ ಫೆಬ್ರುವರಿಯಲ್ಲಿ ಕಾವಿಗೆ ಬಂದಿತ್ತು. ಹುಲಿ ಅಳಿವಿನ ಈಗಿನ ಸಂದಿಗ್ಧ ಸಮಯದಲ್ಲಿ ಪರದೇಶಗಳಲ್ಲಿ ಇತರ ಕಾಡುಪ್ರಾಣಿಗಳ ಸಾಕಣೆ ಹಾಗೂ ಉತ್ಪತ್ತಿ ಕೇಂದ್ರಗಳಂತೆ ಭಾರತದಲ್ಲಿ 'ಹುಲಿಸಾಕಣೆ ಹಾಗೂ ಉತ್ಪತ್ತಿ ಕೇಂದ್ರ'ಗಳನ್ನು ತೆರೆಯುವುದು ಅತ್ಯಾವಶ್ಯಕ. ಪ್ರಸ್ತುತ 14 ಹುಲಿಮರಿಗಳನ್ನು ಹೊಂದಿದ ಮೈಸೂರು ಮೃಗಾಲಯದ ನಿರ್ವಾಹಕರು (ಕ್ಯೂರೇಟರ್) ಇದೇ ರೀತಿ ಹುಲಿಮರಿಗಳ ಉತ್ಪತ್ತಿ ಮುಂದುವರೆದರೆ ಇನ್ನೆರಡು ವರ್ಷಗಳಲ್ಲಿ ಅವುಗಳನ್ನು ಇಡಲು ಸ್ಥಳದ ಅಭಾವವಾಗಬಹುದು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆಗ ಹುಲಿಮರಿಗಳನ್ನು ಒಂದೊಂದಾಗಿ ಕಾಡಿನಲ್ಲಿ ಬಿಡುವ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುವುದು. ಇದಕ್ಕೆ ಜಾಯ್ ಆಡಮನ್ಸ್‌ನಂತಹ ದಕ್ಷ ಹಾಗೂ ನಿಷ್ಠಾವಂತ ಪ್ರಕೃತಿ ಶಾಸ್ತ್ರಜ್ಞರು ಅವಶ್ಯಕವಿದ್ದು ಯಾರಾದರೂ ಮುಂದೆ ಬಂದರೆ ಸರಕಾರ ಪ್ರೋತ್ಸಾಹಿಸುವ ಆಶೆ ಇದೆ.

ಕಾಡಿನಲ್ಲಿ ಸ್ವತಂತ್ರವಾಗಿದ್ದ ಹೆಣ್ಣುಹುಲಿ ಕೂಡ ತನ್ನ ಮರಿಗಳನ್ನು ಹಠಾತ್ತನೆ ಕಳೆದುಕೊಂಡಾಗ ಸುಮಾರು 5 ತಿಂಗಳಲ್ಲಿ ಪುನಃ ಅದು ಮರಿಗಳನ್ನು ಪಡೆಯುವ ಸಾಮರ್ಥ್ಯ ಹೊಂದಿರುತ್ತದೆ.

ಹೆಣ್ಣುಹುಲಿಗಳು ಬೆದೆಗೆ ಬಂದಾಗ ಒಮ್ಮೊಮ್ಮೆ ಅವುಗಳ ದಾರಿಯಲ್ಲಿ ಮನುಷ್ಯ ಬಂದರೆ ಅವನ ಮೇಲೆ ಎರಗಿ ಬೀಳುವುದುಂಟು. ಹೆಣ್ಣುಹುಲಿ ತನ್ನ ಚೊಚ್ಚಲು ಮರಿ ಹಾಕುವುದು ಸುಮಾರು ನಾಲ್ಕನೇ ವರ್ಷಕ್ಕೆ. ಗಂಡುಹುಲಿ 5ನೇ ವರ್ಷಕ್ಕೆ ಸಂಪೂರ್ಣ ಬೆಳೆದು ಪ್ರಾಯಕ್ಕೆ ಬರುತ್ತದೆ.

ಭೋಗದ ಕಾವಿನಲ್ಲಿರುವ ಹೆಣ್ಣುಹುಲಿ ಹೊಳಪಿನ ನುಣುಪು ಕೂದಲು ಧರಿಸಿ ಗಂಡುಹುಲಿಗೆ ಬಲು ಆಕರ್ಷಣೀಯವಾಗಿ ತೋರುತ್ತದೆ. ಆಗ ತನ್ನ ಪ್ರಿಯನನ್ನು ಹುಡುಕಲು ಬಹು ದೂರದವರೆಗೆ ಪ್ರಯಾಣ ಮಾಡುವುದುಂಟು. ಅದು ತನ್ನ ಬೆದೆಯ ಮರ್ಮವನ್ನು ತಿಳಿಸಲು ಕ್ಷಣ ಕ್ಷಣಕ್ಕೂ ಗಂಡುಹುಲಿಗೆ ಹಿತವಾದ ಮತ್ತುಮೋಹಗೊಳಿಸುವ ಪರಿಮಳದ ಜಿಡ್ಡು ಗಾಳಿಗೆ ಬೀರುತ್ತದೆ ಮತ್ತು ಬಾಲದಡಿಯಲ್ಲಿರುವ ಗುದದ ಗ್ರಂಥಿಗಳ ಸ್ರಾವ ಮತ್ತು ಬಿಳೀ ಲಿಪ್ಪೋರಿಯ ಜಿಡ್ಡು (ಕಾಮವಾಸನೆ) ಮಿಶ್ರಿತ ಮೂತ್ರವನ್ನು ಕುಂಡಿ ತಗ್ಗಿಸದೆ ಅಥವಾ ಸ್ವಲ್ಪ ಮೇಲಕ್ಕೆತ್ತಿ ಬಾಲದ ಹಿಂಬದಿಯಿಂದ ಹಾದಿಯಲ್ಲಿ ಅಕ್ಕಪಕ್ಕದ ಗಿಡ, ಪೊದೆ, ಹುಲ್ಲಿನ ತೆಕ್ಕೆಗಳ ಮೇಲೆ, ಕಲ್ಲುಗಳ ಮೇಲೆ ನೇರವಾಗಿ 20 ಅಂಗುಲ ದೂರ ವ್ಯಾಪಿಸುವ ಹಾಗೆ ಚಿಲುಕು-ಚಿಲುಕಾಗಿ ಚಿಮ್ಮಿಸಿ ಸಂಕೇತವಿಟ್ಟು ಪ್ರಕಟಿಸುತ್ತ, ತನ್ನ ಗಸ್ತುಸ್ಥಳದಲ್ಲಿ ವಿಹರಿಸುತ್ತದೆ. ಆ ಮೂತ್ರದ ವಾಸನೆ ಎಂದಿನಕ್ಕಿಂತ ಬೇರೆ ಇರುತ್ತದೆ. ಆಗಾಗ್ಗೆ ಒಂದು ವಿಶಿಷ್ಟ ಭ್ರಾಂತಿಯ ತನ್ಮಯಾವಸ್ಥೆಯಲ್ಲಿ 'ಆs ಹೂs ನ್‌ಂ—ಆs ಹೂನ್‌ಂ' ಎಂದು ಮಧುರ ಧ್ವನಿಯಲ್ಲಿ ಅರ್ಧಮುಕ್ಕಾಲು ನಿಮಿಷ ಬಿಡುವು ಕೊಟ್ಟು ನಿರಂತರವಾಗಿ ಘರ್ಜಿಸುತ್ತದೆ; ಮತ್ತು ಒಮ್ಮೊಮ್ಮೆ ತಾನು ಚಿಮ್ಮಿಸಿದ ಮೂತ್ರವನ್ನು ಮೂಗಿಟ್ಟು ಮೂಸುತ್ತ

ಮೋರೆ ಸೊಟ್ಟಮಾಡಿ ಬಾಯಿತೆರೆದು ನಾಲಿಗೆ ಹೊರಚಾಚುತ್ತದೆ. ಅದೇ ಕ್ಷೇತ್ರದಲ್ಲಿರುವ ಪ್ರಮುಖ ಪೌರುಷಯುಕ್ತ ಗಂಡುಹುಲಿ ಆಕರ್ಷಿಸಲ್ಪಟ್ಟು ಕಾಮಾಂಕುರವಾಗಿ 'ಓs ಹ್ಞಂ—ಓs ಹ್ಞಂ—ಓs ಹ್ಞೋ' ಎಂದು ಮೂರು ನಾಲ್ಕುಸಲ ಘರ್ಜನೆ ಮಾಡಿದ ನಂತರ ಬೇಗ ಬೇಗ "ಓs—ಓs—ಓs—ಓs ಹ್ಞೂನ್" ಎಂದು ಏರಿಳಿತ ಶ್ರೇಣಿಯಲ್ಲಿ ಪ್ರತಿಧ್ವನಿಸುವ ಗಂಭೀರ ಘರ್ಜನೆಮಾಡಿ ಆ ಹೆಣ್ಣಿಗೆ ಕರೆಗೊಟ್ಟು ಅಭಿಸಾರಿ ಹೋಗುತ್ತದೆ.

ಆ ಕ್ಷೇತ್ರದ ಗಂಡುಹುಲಿ ಸ್ವಾಭಾವಿಕವಾಗಿ ಅಥವಾ ಶಿಕಾರಿಯ ಗುಂಡಿನೇಟಿನಿಂದ ಸತ್ತರೆ ಬೆದೆಯಲ್ಲಿರುವ ಹೆಣ್ಣುಹುಲಿ ಕೂಡಲೆ ಆ ಕ್ಷೇತ್ರಕ್ಕೆ ಒಡೆಯನಾಗಿ ಬರುವ ಇನ್ನೊಂದು ಗಂಡು ಹುಲಿಯೊಂದಿಗೆ ಕೂಡುತ್ತದೆ. ಕೊನೆಗೆ ಯಾವ ಗಂಡೂ ದೊರಕದಿದ್ದರೆ ಆ ಹೆಣ್ಣುಹುಲಿ ತನ್ನ ಆಶಾಭಂಗದ ರೋಷದಲ್ಲಿ ಎದುರುಸಿಕ್ಕ ಅರಣ್ಯ ಕೆಲಸಗಾರರ ಮೇಲೆ ಬಿದ್ದು ಅವರನ್ನು ಪರಚಿ ಗಾಯಗೊಳಿಸಲೂ ಸಾಧ್ಯ.

ಒಂದು ಕ್ಷೇತ್ರದಲ್ಲಿರುವ ಬೆದೆಗೆ ಬಂದ ಹೆಣ್ಣುಹುಲಿ ತನ್ನ ಕ್ಷೇತ್ರವನ್ನು ಬಿಟ್ಟು ಬೇರೆ ಬೇರೆ ಕ್ಷೇತ್ರಗಳಲ್ಲಿ ತನ್ನ ಮನಮೋಹಕ ಪರಿಮಳವನ್ನು ಪ್ರಸಾರ ಮಾಡುತ್ತ ಮತ್ತು ಸಭ್ಯ ಅರಿಕೆಯ ಘರ್ಜನೆ ಮಾಡುತ್ತ ಹಾದುಹೋಗುತ್ತಿರುತ್ತದೆ. ಆಗ್ಗೆ ನಾಲ್ಕಾರು ಕ್ಷೇತ್ರಗಳ ಮತ್ತು ಪ್ರವಾಸೀ ಗಂಡುಹುಲಿಗಳು ಆ ಹೆಣ್ಣಿನ ಬಗ್ಗೆ ಹಿತಾರ್ಥ, ಉತ್ಸುಕತೆ ತೋರಿಸಿ ತಾವೂ ಗಟ್ಟಿಯಾಗಿ ಕಾಡಿನ ಗಾಢಮೌನವನ್ನು ಭೇದಿಸುವ ಘರ್ಜನೆ ಮಾಡುತ್ತ ಆ ಹೆಣ್ಣು ಹಾದುಹೋದ ಹಾದಿಯಲ್ಲಿ ಗಿಡದ ಎಲೆಗಳ ಮೇಲೆ ಚಿಮುಕಿಸಿರುವ ಮೂತ್ರದ ವಾಸನೆಯನ್ನು ಮೂಗಿಟ್ಟು ಮೂಸಿ ಹಿಡಿದು ಜಾಡು ಅದರ ಹತ್ತಿರ ಹೋಗಿ ಸೇರುತ್ತವೆ. ಕೊನೆಗೆ ಬೆದೆಯಲ್ಲಿರುವ ಹೆಣ್ಣುಹುಲಿ ತನಗೆ ಒಪ್ಪಿಗೆಯಾದ ಒಂದು ಪ್ರತ್ಯೇಕ ಸ್ಥಳದಲ್ಲಿ ಕೂತು ಅಥವಾ ಮೊಣಕಾಲೂರಿ ಮಲಗಿಕೊಂಡು ನಾಲಿಗೆಯಿಂದ ಮೈ, ಮುಖ, ಪಂಜಗಳನ್ನುಜ್ಜಿ ಶುಭ್ರಗೊಳಿಸುತ್ತ ವಿಶ್ರಮಿಸುತ್ತದೆ. ಅಲ್ಲಿ ಕೂಡಿರುವ ಗಂಡುಗಳ ಪೈಕಿ ಒಂದು ಗಂಡು 'ಗ್ರರ್‌ರ್—ಒಹಾಂಕ್' ಎಂದು ಘರ್ಜಿಸಿ ಆ ಹೆಣ್ಣನ್ನು ಪ್ರೀತಿಸಲು ಹತ್ತಿರ ಹೋಗುತ್ತದೆ. ಆಗ ಹೆಣ್ಣು ತನ್ನ ಕಿವಿಗಳನ್ನು ಹಿಂಬಾಗಿಸಿ, ಬಾಲವಾಡಿಸುತ್ತ, ಆ ಗಂಡನ್ನು ನೋಡುತ್ತದೆ. ಪಕ್ಕದ ಪೊದೆಯಿಂದ ಇನ್ನೊಂದು ಗಂಡುಸ್ಪರ್ಧಿ ಅಡ್ಡ ಬಂದು ನಿಲ್ಲುತ್ತದೆ. ಗಕ್ಕನೆ ಘರ್ಜಿಸುತ್ತ ಆ ಎರಡು ಸ್ಪರ್ಧಿಗಳು ತಮ್ಮ ಹಿಂಗಾಲುಗಳ ಮೇಲೆ ಎದ್ದುನಿಂತು ಉಗುರುಗಳನ್ನು ನಿಮಿರಿಸಿ ಒಂದಕ್ಕೊಂದು ಮೈಪರಚುತ್ತವೆ; ಮತ್ತೆ ಕೆಳಕ್ಕೆ ಮುಗ್ಗರಿಸಿ ಬಿದ್ದು ಹಲ್ಲಿನಿಂದ ಹೆಗ್ಗತ್ತು, ಕಿವಿಗಳನ್ನು ಕಚ್ಚಿ ಗಾಯಮಾಡುತ್ತವೆ. ತಳಿವರ್ಧನೆ ಕಾಲಾವಧಿಯಲ್ಲಿ ಹುಲಿಗಳ ವರ್ತನೆಯಲ್ಲಿ ಆರ್ಭಟದ ಘರ್ಜನೆ, ಜಗಳ, ಕುಸ್ತಿಗಳು, ಏದುವಿಕೆ, ಹಿಮ್ಮೆಟ್ಟುವಿಕೆ, ಹೆಣ್ಣಿನ ಸಹವಾಸ ಮಾಡುವುದು ಇವೇ ಮೊದಲಾದ ಪ್ರವೃತ್ತಿಗಳು ಸ್ಪಷ್ಟವಾಗಿ ಕಾಣುತ್ತವೆ. ಆದರೆ ಈ ಕುಸ್ತಿಗಳು ಅಷ್ಟು ಅಪಾಯಕರವಾಗಿರುವುದಿಲ್ಲ. ಸಾವು ನೋವು ತೀರ ಆಕಸ್ಮಿಕವಾಗಿರುತ್ತವೆ. ಅಖಾಡದ

ಅಂಚಿನಲ್ಲಿ ಕುಳಿತಿರುವ ಹೆಣ್ಣುಹುಲಿ ಆ ಸ್ಪರ್ಧಿಗಳ ಸಂಘರ್ಷಣೆಯನ್ನು ಮಳ್ಳಿಯಂತೆ ಕಾದು ಕಿರುಗಣ್ಣುಗಳಿಂದ ನೋಡುತ್ತಿರುತ್ತದೆ. ಸೋತ ಸ್ಪರ್ಧಿಗಳು ಬಂದ ದಾರಿಗೆ ಸುಂಕವಿಲ್ಲವೆಂದು ಹಿಂದಿರುಗುತ್ತವೆ. ಇತ್ತ ವಿಜೇತ ಪೌರುಷವನ್ನು ಸ್ಥಾಪಿಸಿದ ಗಂಡು ಹುಲಿ ಮೈಮಗ್ಗಲು ವಾಲಿಸದೆ ಬಂದು (ಹೆಣ್ಣಿನ ನೆಚ್ಚಿಗೆರಹಿತ ಅನಿರೀಕ್ಷಿತ ಕಾಲಿ ನೇಟನ್ನು ತಪ್ಪಿಸಿಕೊಳ್ಳಲು ಸಾಧ್ಯವಾಗುವಂತೆ) ಪರಗುಟ್ಟಿ ಆ ಹೆಣ್ಣಿಗೆ ತನ್ನ ಪ್ರಣಯದ ಕರೆಕೊಟ್ಟು ಅರೆಗಾಯಿಸಿ ನಿಲ್ಲುತ್ತದೆ ಅಥವಾ ಸ್ವಲ್ಪದೂರ ಸರಿದು ಸೇರುತ್ತದೆ. ಒಡನೆಯೇ ಆ ಹೆಣ್ಣು ಅತ್ಯುನ್ನತ ಉಲ್ಲಾಸದಿಂದ ಎದ್ದುನಿಂತು ಛಂಗನೆ ಕುಪ್ಪಳಿಸಿ ತನ್ನನ್ನು ವರಿಸಲು ಬಂದ ಧೀರ ಗಂಡನ್ನು ಮೆಚ್ಚಿ, ಮುತ್ತಿಕ್ಕಿ ಹಿಂದೆ ಸರಿದು ಬಾಲ ಮೇಲೆತ್ತಿಕೊಂಡು ಗಂಡಿನೆದುರಿಗೆ ಮನವಲಿಸುವ ಚೆಲುವೆಯಂತೆ ಪ್ರದಕ್ಷಿಣೆ ಮಾಡುತ್ತದೆ; ತನ್ನ ರತಿಕ್ರೀಡೆಯ ವೈಖರಿಯನ್ನು ಪ್ರದರ್ಶಿಸುತ್ತದೆ. ನೆಲದ ಮೇಲೆ ಬೆನ್ನಿಟ್ಟು ಮಲಗಿ ಪಾದಗಳನ್ನು ಮೇಲಕ್ಕೆತ್ತಿ ತೂಗಾಡುತ್ತ ಹೊರಳಾಡುತ್ತದೆ; ತನ್ನ ಬಿಳಿಯ ಹೊಟ್ಟೆಯನ್ನು ತೋರಿಸುತ್ತದೆ; ವಿನಯದಿಂದ ಹೂಂಕರಿಸುತ್ತದೆ; ಗೊರಕೆ ಹಾಕುತ್ತದೆ; ಗುರುಕಾಯಿಸುತ್ತದೆ ಮತ್ತು ಗಂಡಿನ ಮೈಪಕ್ಕವನ್ನು ತನ್ನ ನುಣುಪಿನ ಮೆತ್ತನೆಯ ಮೈಯಿಂದ ತಿಕ್ಕಾಡಿ, ನಾಲಿಗೆಯಿಂದ ಅದರ ಮುಖ, ಹೆಗ್ಗತ್ತುಗಳನ್ನು ನೆಕ್ಕಿ ಕಿವಿಯನ್ನು ಹಗುರವಾಗಿ ಕಚ್ಚಿ, ಉಗುರು ನಿಮಿರಿಸಿದ ಹಸ್ತ ತೋರಿಸಿ ಸುಮ್ಮನಾಗುತ್ತದೆ. ಅವುಗಳ 'ಮಧುಚಂದ್ರ' ಆಗ ಪ್ರಾರಂಭವಾಗುತ್ತದೆ.

ಮೈಥುನದಲ್ಲಿದ್ದ ಹೆಣ್ಣುಹುಲಿ ವಯಸ್ಸಾದ ಗಂಡುಹುಲಿಯೊಂದಿಗೆ ಸಮಾಗಮ ಹೊಂದಿ 'ಹಳೆಯಪ್ರೇಮ' ಅನುಭವಿಸುವುದಕ್ಕಿಂತ ಹೆಚ್ಚಾಗಿ ಪ್ರಾಯದ ಗಂಡುಹುಲಿಯನ್ನು ಹೆಚ್ಚು ಇಷ್ಟಪಡುವುದುಂಟು. ರತಿಕ್ರೀಡೆಯಲ್ಲಿ ಗಂಡುಹುಲಿ ಒಂದು ಸಲ ಗುರ್ರೆಂದು ಎದ್ದು, ಆ ಹೆಣ್ಣನ್ನು ಅಡ್ಡಗಟ್ಟಿ ತಡೆಯಲೆತ್ನಿಸುತ್ತದೆ, ಮತ್ತೆ ತನ್ನ ಜಾಗದಲ್ಲಿ ಕೂಡುತ್ತದೆ. ಹೆಣ್ಣು ಮತ್ತಷ್ಟು ಸರಾಗಗೊಂಡು ತನ್ನ ಪಂಜದಿಂದ ಗಂಡಿನ ಬೆನ್ನುತಟ್ಟಿ ಪರಗುಟ್ಟುತ್ತ ಅರಗಾಯಿಸುತ್ತದೆ. ಆದರೆ ಅಷ್ಟು ಹೊತ್ತಿಗೆ ಆ ಹೆಣ್ಣಿನ ಬೆದೆಯ ತಾಪ ಪರಮಾವಧಿ ಮುಟ್ಟಿರುತ್ತದೆ ಮತ್ತು ಗಂಡಿನ ಗುಟುರಿನ ಮರ್ಮವನ್ನರಿತು, ಹೆಚ್ಚು ಸಲಿಗೆಯಿಂದ ಅದಕ್ಕೆ ತನ್ನ ಜೊತೆಗೂಡಲು ಸಮ್ಮತಿಸುತ್ತದೆ. ಗಂಡುಹುಲಿ ಬಂದು ಹೆಣ್ಣಿನ ಮುಖವನ್ನು ತನ್ನ ನಾಲಿಗೆಯಿಂದ ನೆಕ್ಕುತ್ತದೆ. ಮೂತಿಯಿಂದ ಮೆತ್ತಗೆ ದೂಡುತ್ತದೆ ಮತ್ತು ಅದರ ಉಬ್ಬಿದ, ತುಸು ತೆರೆದ, ಒದ್ದೆಯಾಗಿರುವ ಯೋನಿ ತೆರಪ್ಪನ್ನು ಮೋರೆಯಿಂದ ತಿಕ್ಕುತ್ತದೆ. ಆ ಪುಳಕಿತ ಯೋನಿಯಿಂದ ತೊಟ್ಟಿಕ್ಕಿದ ಮೂತ್ರವನ್ನು ತನ್ನ ಮೂತಿಗೆ ಅಂಟಿಸಿಕೊಂಡು ಅರಗಾಯಿಸುತ್ತದೆ. ನಂತರ ಆ ಗಂಡು ತನ್ನ ಮೇಲ್ತುಟಿಗೆ ಅಂಟಿರುವ ಮೂತ್ರವನ್ನು ತನ್ನ ಮೂಗಿನ ಹತ್ತಿರ ಚಾಚಿ, ಮುಖವನ್ನು ಮುರುಕಿಸಿಕೊಂಡು, ಬಾಯಿತೆರೆದು, ಹಲ್ಲು ಕಿರಿದು, ನಾಲಿಗೆಯನ್ನು ತುಟಿಯ ಹೊರಗಡೆ ನೀಳಿಸಿ ಮುಖ ಮೇಲಕ್ಕೆತ್ತಿ ಮೂಗು ಸೊಟ್ಟಮಾಡಿ ಕಣ್ಣು ಸ್ವಲ್ಪ ಮುಚ್ಚಿ ಮತ್ತು ಕಿವಿ ಸ್ವಲ್ಪ ಸಡಿಲವಾಗಿಟ್ಟು ಆ ಮೋಹಕ ಮೂತ್ರದ ಕಂಪನ್ನು ಕಂಡುಹಿಡಿದು ತಾನೂ ತೀವ್ರ ಕಾಮೋನ್ಮತ್ತಗೊಂಡು ಆ ಹೆಣ್ಣಿನೊಂದಿಗೆ ರತಿಸಂಯೋಗ ಯಾಚಿಸುತ್ತದೆ.

ಹೆಣ್ಣುಹುಲಿ ನೆಲದ ಮೇಲೆ ಮೊಣಕಾಲುಗಳನ್ನೂರಿ ಪಾದಗಳನ್ನು ನೇರವಾಗಿಟ್ಟು ಹೆಗಲು, ಎದೆ, ಹೊಟ್ಟೆಗಳನ್ನು ನೆಲಕ್ಕೆ ತಾಕಿಸಿ, ಕುಂಡಿಯನ್ನು ಸ್ವಲ್ಪಮಟ್ಟಿಗೆ ಎತ್ತರಿಸಿ ಮತ್ತು ಬಾಲವನ್ನು ಒತ್ತಟ್ಟಿಗೆ ಅರಗಾಯಿಸಿ, ಸಂಭೋಗಾವಸ್ಥೆ ತಾಳಿಕೊಂಡು ತನ್ನ ಹಿಂಬದಿಯಲ್ಲಿರುವ ಗಂಡುಹುಲಿಯ ಮುಖದೆದುರಿಗೆ ಕೂಡುತ್ತದೆ; ನಂತರ ತನ್ನ ಬಾಯಿತೆರೆದಿಟ್ಟು, ತುಟಿ ಓರೆಮಾಡಿ, ಕಿವಿ ನುಲಿಸಿ, ಕಣ್ಣುಗಳನ್ನು ಅಗಲವಾಗಿ ತೆರೆದು, ಓರೆಮಾಡಿ ಕೊನೆಗೆ ಗಂಡಿಗೆ ಸಂಭೋಗಕ್ಕಾಗಿ ಪರಗುಟ್ಟಿ ಸಂಜ್ಞೆಮಾಡುತ್ತದೆ. ಇದಕ್ಕೆ ತೃಪ್ತಿಕರ ಪ್ರತಿಕ್ರಿಯೆಯಲ್ಲಿ ಗಂಡು ಹುಲಿಯೂ ಸಹ ಮೊರೆತದ ಘರ್ಜನೆ ಮಾಡುತ್ತ, ಬಾಯಿತೆರೆದು, ಕಿವಿ ಹಿಂದಕ್ಕೆ ಚಾಚಿ, ಕಣ್ಣುಗಳನ್ನು ಕಿರಿದು ಮಾಡಿ, ಹೆಣ್ಣಿನ ಹಿಂಬದಿಯಿಂದ ಹತ್ತಿ ತನ್ನ ಮುಂಗಾಲುಗಳನ್ನು ಅದರ ಪ್ಪೈಪಕ್ಕದ ನೆಲದ ಮೇಲಿಟ್ಟು ಮತ್ತು ಹಿಂಗಾಲುಗಳನ್ನು ಅದರ ಕುಂಡಿಯ ಪಕ್ಕದಲ್ಲಿ ನೆಲಕ್ಕೂರಿಕೊಂಡು ತನ್ನ ಕುಂಡಿಯನ್ನು ಕೆಳಗಡೆ ಬಾಗಿಸಿ ನಿಂತುಕೊಂಡು, ಮತ್ತು ಹೆಣ್ಣಿನ ಹೆಗ್ಗತ್ತನ್ನು ತನ್ನ ದವಡೆಯಲ್ಲಿ ಕಚ್ಚಿ ಹಿಡಿದು ತನ್ನ ನಿಮಿರಿದ ಶಿಶ್ನವನ್ನು ಹೆಣ್ಣಿನ ಯೋನಿಯೊಳಗಿಟ್ಟು ರತಿಸಂಯೋಗ ಜರುಗಿಸುತ್ತದೆ. ಸಾಮಾನ್ಯ ಸಂದರ್ಭಗಳಲ್ಲಿ ಹುಲಿಯ ಶಿಶ್ನ ಹಿಮ್ಮುಖವಾಗಿದ್ದ ಸಮಯದಲ್ಲಿ ಅದು ಮುಂದೆ ಬಾಗಿ ಯೋನಿಯನ್ನು ಪ್ರವೇಶಿಸುವುದು ಒಂದು ವಿಶೇಷವಾದ ಸ್ವಾಭಾವಿಕ ಕ್ರಿಯೆ. ಗಂಡು ಹೆಣ್ಣಿನ ಹೆಗ್ಗತ್ತನ್ನು ತನ್ನ ಹಲ್ಲುಗಳಿಂದ ಹಿಡಿದಿಡುವುದರಿಂದ ಹೆಣ್ಣು ತಾತ್ಕಾಲಿಕವಾಗಿ ವಶೀಕರಣಕ್ಕೊಳಗಾಗಿ ಮನಒಲಿಸಲ್ಪಡುತ್ತದೆ. ಮೈಥುನ 2 ಸೆಕೆಂಡಿಗೆ 3 ಜಡಿತಗಳ ಸರಣಿಯಂತೆ 15–20 ಸೆಕೆಂಡುಗಳವರೆಗೂ ಜರುಗುತ್ತದೆ. ಮೈಥುನದ ಸಮಯದಲ್ಲಿ ಗಂಡಿನ ತೊಡೆ, ಕುಂಡಿಯ ಸ್ನಾಯುಗಳು ಮಣಿಯುತ್ತವೆ. ಮೈಥುನದ ತೀವ್ರ ಉದ್ರೇಕಾವಸ್ಥೆಯಲ್ಲಿ ಹೆಣ್ಣಿನ ಅಂಡಾಣುಗಳು ಅಂಡಕೋಶ ಒಡೆದು ಒಳಗಿರುವ ಅಂಡಾಣು ಹೊರಬೀಳುತ್ತದೆ ಮತ್ತು ಗಂಡಿನ ವೀರ್ಯಾಣುಗಳೂ ಸ್ಖಲನಗೊಳ್ಳುತ್ತವೆ. ಆ ಸಮಯಕ್ಕೆ ಗಂಡು ಗರ್ಜಿಸುತ್ತದೆ. ಆಗ್ಗೆ ಗಂಡಿನ ಶಿಶ್ನದ ಸಂಸ್ಪರ್ಶ ಹಠಾತ್ತನೆ ಕೊನೆಗಾಣುವುದರಿಂದ ಗಂಡು ತಕ್ಷಣವೇ ಹೆಣ್ಣನ್ನಗಲಿ ಕೆಳಗೆ ಇಳಿಯುತ್ತದೆ. ಸಂಭೋಗ ಸಮಾಪ್ತಿಯಾದ ನಂತರ ಹೆಣ್ಣುಹುಲಿ ತೃಪ್ತಿಗೊಂಡು ನೆಲದ ಮೇಲೆ ಬೆನ್ನೂರಿ ಪಂಜಗಳನ್ನು ಮೇಲೆತ್ತಿಕೊಂಡು ತನ್ನ ಯೋನಿ ಕಾಣುವ ಹಾಗೆ ಹೊರಳಾಡುತ್ತದೆ ಮತ್ತು ಸ್ವಲ್ಪಹೊತ್ತು ವಿಶ್ರಮಿಸಿಕೊಳ್ಳುತ್ತದೆ ಅಥವಾ ಆ ಸ್ಥಳವನ್ನು ಬಿಟ್ಟು ಮುಂದೆ ಹೋಗಿ ತನಗೆ ಹಿತವಾದ ದಟ್ಟವಾಗಿ ಬೆಳೆದ ಹುಲ್ಲಿರುವ ಮೆತ್ತನೆಯ ಜಾಗವನ್ನು ಆರಿಸಿಕೊಂಡು ಅಲ್ಲಿ ಕುಳಿತುಕೊಳ್ಳುತ್ತದೆ. ಆ 'ಮಧುಚಂದ್ರ'ದಲ್ಲಿಯ ವಿರಾಮ ವೇಳೆಯಲ್ಲಿ ಗಂಡು ಮತ್ತು ಹೆಣ್ಣು ಸೇರಿ ತಾಳಬದ್ಧವಾಗಿ ವಿಪರೀತ ಮೊರೆತದ ಘರ್ಜನೆ ಮಾಡುತ್ತವೆ; ಪರಗುಟ್ಟುತ್ತವೆ; ಮತ್ತೆ 30 ನಿಮಿಷದಿಂದ 100 ನಿಮಿಷಗಳ ವಿರಾಮದ ಬಿಡುವು ಬಿಟ್ಟು ಸಂಭೋಗದಲ್ಲಿ ನಿರತವಾಗುತ್ತವೆ.

ಮೈಥುನ ಕ್ರಿಯೆಯಲ್ಲಿ ವ್ಯತ್ಯಾಸ, ತಪ್ಪು, ತಿವಿತ ಮುಂತಾದ ಕೊರತೆಗಳು ಕಂಡುಬಂದರೆ ಗಂಡುಹುಲಿ ಒಂದು ಉಚ್ಚಸ್ವರದಲ್ಲಿ ಘರ್ಜಿಸಿ ಹೆಣ್ಣಿನ ಮೈಬಿಟ್ಟು ಥಂಗನೆ ಹಾರಿ ದೂರ ಅರಗಾಯಿಸಿ ಏದುತ್ತ ನಿಂತುಕೊಳ್ಳುತ್ತದೆ. ಆಗ ಸಂಭೋಗದ

ವಿಫಲತೆಯ ತೀವ್ರ ಉದ್ರೇಕದಲ್ಲಿರುವ ಹೆಣ್ಣು ಗುರುಗುಟ್ಟುತ್ತ ಮಿಂಚಿನಂತೆ ತಲೆ ತಿರುಗಿಸಿ ಬಲವಾದ ಏಟುಕೊಡುವ ರೀತಿಯಲ್ಲಿ ಮುಂಗಾಲು ಪಂಜನ್ನು ಮೇಲಕ್ಕೆತ್ತುತ್ತದೆ. ಹಾಗೆ ಮೈಥುನೇಚ್ಛೆಯ ಆವೇಶದಲ್ಲಿ ತಿರಸ್ಕೃತವಾದ ಗಂಡು ಮಂಕಾಗಿ, ಆ ಹೆಣ್ಣಿನ ಬಾಲದ ಹತ್ತಿರ ನಿಲ್ಲುತ್ತದೆ; ತನ್ನ ಸೊಂಟದ ಮೇಲೆ ಕೂರುತ್ತದೆ ಅಥವಾ ಸುತ್ತುವರಿಯುತ್ತದೆ. ಇಂಥ ನ್ಯೂನತೆಯ ಅವಸ್ಥೆಯಲ್ಲಿ ಗಂಡು ಕೆಲಸಮಯ ತನ್ನ ಶಿಶ್ನವನ್ನು ನಿಮಿರಿಸಿ ಬಿಳಿಯ ರೇತಸ್ಸನ್ನು (ವೀರ್ಯಾಣು) ಹೊರಗೆಡಹುತ್ತದೆ. ಏಕ ಲೈಂಗಿಕ ಕಾಮಪ್ರವೃತ್ತಿಯ ಪ್ರಕಾರ ಬಾಲ ಮೇಲೆತ್ತಿ ಪದೇ ಪದೇ ಶಿಶ್ನವನ್ನು ಬಾಲದ ಕಡೆ ತಿರುಗಿಸಿಕೊಂಡು ಮೂತ್ರ ಚಿಮ್ಮಿಸುತ್ತದೆ. ಒಂದು ಗಂಡುಹುಲಿ ಬೆದೆಯ ಕಾವಿನಲ್ಲಿದ್ದ ಹೆಣ್ಣಿನ ಸಂಗಡ ಅವಿರತ ಸಂಧಾನಮಾಡಿ ಕೊನೆಗೆ ಸಂಭೋಗಕ್ಕೆ ಅಂಗೀಕಾರ ಪಡೆಯುತ್ತದೆ. ಜೊತೆಗೂಡಿದ ಗಂಡು ಮತ್ತು ಹೆಣ್ಣು ದಿನಂಪ್ರತಿ 24 ಘಂಟೆಗಳಲ್ಲಿ 26ರಿಂದ 36 ಸಲ ಸಂಭೋಗ ಮಾಡುತ್ತವೆ. ಬೆಳಗಿನ ಝಾವ ಮತ್ತು ರಾತ್ರಿ 11 ಗಂಟೆಯವರೆಗೂ ನಿಶ್ಶಬ್ದ ಜಂಗಲಿಯಲ್ಲಿ ಕಂಪನಗೊಳಿಸುವ ದೀರ್ಘ ಮೊರೆತ ಮಾಡುತ್ತವೆ. ಈ ಮೊರೆತ ಸುಮಾರು 2 – 2½ ಮೈಲಿ ದೂರ ಕೇಳಿಸುತ್ತದೆ. ಈ ಮಧ್ಯೆ ಗಂಡುಹುಲಿ, ಹೆಣ್ಣನ್ನು ತನ್ನ ಎದೆ, ಹೊಟ್ಟೆಗಳಿಗೆ ತಗುಲಿಸಿ ಆಲಂಗಿಸಿಕೊಂಡು ಮಲಗುವುದುಂಟು.

ದಿಲ್ಲಿಯ ಮೃಗಾಲಯದಲ್ಲಿ ತಮ್ಮ 12ನೆಯ ವರ್ಷ ವಯಸ್ಸಿನಲ್ಲಿದ್ದ ಒಂದು ಜೊತೆ ಹೆಣ್ಣು ಗಂಡು ಹುಲಿಗಳು ಒಂದು ದಿನದ 24 ಘಂಟೆಗಳಲ್ಲಿ 36 ಸಲ ಸಂಭೋಗ ಮಾಡಿದವು. (ಸಂಭೋಗದ ಅವಧಿ 5–36 ಸೆಕೆಂಡುಗಳು). ಆ ಜೋಡಿ 8 ದಿವಸಗಳಲ್ಲಿ 120 ನಿಮಿಷ 57 ಸೆಕೆಂಡುಗಳಲ್ಲಿ 181 ಸಲ (ಸರಾಸರಿ ಸಂಭೋಗದ ಅವಧಿ 39 ಸೆಕೆಂಡುಗಳು) ಸಂಭೋಗ ಕ್ರಿಯೆ ನಡೆಸಿದವು. ಇದು ಮುಂದಿನ ಪುಟದ ಕೋಷ್ಟಕ 5ರಲ್ಲಿ ವಿವರವಾಗಿ ತಿಳಿಯುವುದು.

ಬೆಳೆದ ಗಂಡು ಹಾಗೂ ಹೆಣ್ಣು ಮರಿಗಳಲ್ಲಿಯೂ ಮೈಥುನ ಕ್ರೀಡೆಯನ್ನು ಕಾಣಬಹುದು. ಆದರೆ ಅದು ಪ್ರತ್ಯಕ್ಷ ಪ್ರಣಯಾಸಕ್ತ ಸಂಯೋಗವಾಗಿರದೆ ಕೇವಲ ಕಿಶೋರ ಚೇಷ್ಟೆ ಎಂದು ಹೇಳಬಹುದು.

ಸಾಮಾನ್ಯವಾಗಿ ಗಂಡು ಮರಿ ತನ್ನ 5ನೇ ವರ್ಷಕ್ಕೆ ಸಂಪೂರ್ಣ ಪ್ರೌಢಾವಸ್ಥೆಯನ್ನು ತಲುಪಿ ಹೆಣ್ಣಿನೊಂದಿಗೆ ಸಂಯೋಗ ಹೊಂದಿ ಸಂತತಿ ಉತ್ಪತ್ತಿಮಾಡಲು ಸಾಧ್ಯತೆಯನ್ನು ಪಡೆದರೆ ಹೆಣ್ಣುಮರಿ ನಾಲ್ಕುವರ್ಷಕ್ಕೆ ಬೆದೆಗೆ ಬರುತ್ತದೆ. ಕೆಲವು ಸಮಯ ಮೃಗಾಲಯಗಳಲ್ಲಿ ಸಾಮಾನ್ಯ ಸ್ಥಿತಿಯಲ್ಲಿ ಎರಡೂವರೆ ವರ್ಷಕ್ಕೆ ಹೆಣ್ಣುಮರಿ ಕಾವಿಗೆ ಬಂದು ಗಂಡಿನ ಸಂಪರ್ಕ ಹೊಂದಿದ ದಾಖಲೆ ಇದೆ.

ಕೋಷ್ಟಕ 5

ದಿಲ್ಲಿಯ ಮೃಗಾಲಯದಲ್ಲಿ ಹುಲಿಗಳ ಸಂಭೋಗದ ಕಾಲದ ವಿವರಗಳು

ಸಂಭೋಗ ನಡೆಸಿದ ತಾರೀಖು	ಜೊತೆಗೂಡಿಸಿದ ಸಮಯ	ಜೊತೆಗೂಡಿ ಇದ್ದ ಸಮಯ (ಘಂಟೆಗಳು)	ಸಂಭೋಗ ಮುಗಿಸಿ ಬೇರ್ಪಟ್ಟಕಾಲ	ಸಂಭೋಗಗಳ ಒಟ್ಟು ಸಂಖ್ಯೆ	ಸಂಭೋಗದಲ್ಲಿ ನಿರತವಾಗಿದ್ದ ಕಾಲಾವಧಿ		ಶರಾ
					ನಿಮಿಷ	ಸೆಕೆಂಡು	
6–11–1966	9–00 ಮುಂಜಾನೆ	10	7–00 ರಾತ್ರಿ	22	9	10	
7–11–1966	8–45 ,,	7	3–45 ,,	14	4	18	
8–11–1966	8–30 ,,	7	3–45 ,,	22	9	7	
9–11–1966	8–22 ,,	7	3–31 ,,	23	19	15	
20–11–1966	9–11 ,,	5	2–16 ,,	14	15	29	ಸರಾಸರಿ ಒಂದು
21–11–1966	8–19 ,,	14	10–48 ,,	36	35	1	ಸಂಭೋಗದ ಅವಧಿ
22–11–1966	8–25 ,,	8	4–50 ,,	23	21	47	15 ನಿಮಿಷಗಳು
23–11–1966	9–05 ,,	6	3–44 ,,	4	6	40	5 ಸೆಕೆಂಡುಗಳು.
ಒಟ್ಟು 8 ದಿನಗಳು		64 ಘಂಟೆಗಳು	—	158 ಸಂಭೋಗಗಳು	120	47	

ಅಧ್ಯಾಯ 8

ಮರಿಗಳ ಜೀವನ

ಹುಲಿ ಮರಿಗಳು ಹುಟ್ಟಿದಾಗ ಅಸಹಾಯಕವಾಗಿ ಹುಟ್ಟುಗುರುಡರಂತೆ ಕಣ್ಣು ಮುಚ್ಚಿರುತ್ತವೆ. ಅವು ಬೇರೆ ಮಾಂಸಭಕ್ಷಕ ಪ್ರಾಣಿಗಳ ಮರಿಗಳಂತೆ ಯಾವುದೇ ವಿಚಾರ ಅಥವಾ ಬುದ್ಧಿಶಕ್ತಿಯನ್ನು ಪ್ರದರ್ಶಿಸದೆ ಮೊಲೆಕುಡಿದು ಜೀರ್ಣಿಸುವುದು ಹಾಗೂ ನಿದ್ರಿಸುವುದು ಅವುಗಳ ಕಾರ್ಯಕ್ರಮ. ಮರಿಗಳು ತಾಯಿಯ ಹೊಟ್ಟೆಯಿಂದ ಹುಟ್ಟುವಾಗ ತೆಳುವಾದ ಪೊರೆಯಿಂದ ಮುಚ್ಚಲ್ಪಟ್ಟಿರುತ್ತವೆ. ಹೆಣ್ಣು ಹುಲಿ ಮೈ ಎಲ್ಲ ನೆಕ್ಕಿ ಸ್ವಚ್ಛಮಾಡಿದಾಗ ಅವುಗಳಲ್ಲಿ ಜೀವಕಳೆ ತುಂಬಿ ಕಿರಿಚಿಕೊಳ್ಳಲಾರಂಭಿಸುತ್ತವೆ. ಕಣ್ಣುಗಳು ತೆರೆಯದಿದ್ದರೂ ತಮ್ಮ ಸ್ವಾಭಾವಿಕ ಸಹಜ ಪ್ರವೃತ್ತಿಯಿಂದ ಮರಿಗಳು ತಾಯಿಯ ಮೊಲೆಗಳನ್ನು ಹುಡುಕಿ ಚೀಪಲು ಪ್ರಯತ್ನಿಸುತ್ತವೆ. ಈ ಸಮಯದಲ್ಲಿ ಮರಿಗಳ ವಸಡೆಗಳು ನುಣುಪಾಗಿದ್ದು ನಾಲಿಗೆ ಮಾತ್ರ ಉಸುಕಿನ ಕಾಗದದಂತೆ ಒರಟಾಗಿರುತ್ತದೆ. ಅದೇ ಆಗ ಹುಟ್ಟಿದ ಮರಿಯ ತೂಕ ಒಂದೂವರೆ ಕಿಲೋದಷ್ಟು ಇರುತ್ತದೆ.

ಹುಟ್ಟಿ ಎರಡು ಮೂರು ದಿನಗಳವರೆಗೆ ಹೆಣ್ಣುಹುಲಿ ಮರಿಗಳನ್ನಗಲಿ ಹೆಚ್ಚು ಸಮಯ ಎಲ್ಲಿಯೂ ಹೋಗುವುದಿಲ್ಲ. ತನ್ನ ಆಹಾರಕ್ಕಿಂತ ಮರಿಗಳ ಸಂರಕ್ಷಣೆ ಹಾಗೂ ಪೋಷಣೆ ಅದಕ್ಕೆ ಪ್ರಾಮುಖ್ಯ. ಏಕೆಂದರೆ ಅವು ಅಸಹಾಯಕ ಹಾಗೂ ಕುರುಡು ಎಂಬುದು ಅದಕ್ಕೆ ಗೊತ್ತು. ಆದ್ದರಿಂದ ಮರಿಗಳನ್ನು ಹೆತ್ತ ತಾಯಿ ಹುಲಿ ಕೆಲವು ದಿನಗಳವರೆಗೆ ಅತಿ ಬಡಕಲಾಗಿ ತೋರುತ್ತದೆ.

ಹೆಣ್ಣುಹುಲಿ ತನ್ನ ಮರಿಗಳ ಮೈ ನೆಕ್ಕುವುದರಿಂದ ಮಮತೆ ತೋರಿಸುವುದರ ಜೊತೆಗೆ ಮರಿಗಳ ದೇಹ ಹಾಗೂ ಅಂಗಾಂಗಗಳ ಸ್ವಚ್ಛತೆಯನ್ನು ಕಾಪಾಡುತ್ತದೆ. ಬೆಕ್ಕಿನ ಜಾತಿಗೆ ಸೇರಿದ ಎಲ್ಲ ಪ್ರಾಣಿಗಳೂ ಸ್ವಚ್ಛತೆಗೆ ಆದ್ಯತೆಯನ್ನು ಕೊಡುತ್ತವೆ. ಹುಲಿಯ ಬಾಯಲ್ಲಿ ಆಮ್ಲದ ಅಂಶ ಇದ್ದು ಆದರಿಂದ ಯಾವುದೇ ತೆರನಾದ ರೋಗರುಜಿನಗಳು ಮರಿಗಳಿಗೆ ಸೋಂಕದಂತೆ ನೋಡಿಕೊಳ್ಳಲು ನಿಸರ್ಗದ ವ್ಯವಸ್ಥೆ ಇರುತ್ತದೆ. ಮೇಲಾಗಿ ಮರಿಗಳ ಹೊಟ್ಟೆ, ಜನನೇಂದ್ರಿಯ ಹಾಗೂ ಗುದದ್ವಾರಗಳನ್ನು ನೆಕ್ಕುವುದರಿಂದ ಅನುಕ್ರಮವಾಗಿ ಅವುಗಳ ಪಚನಕ್ರಿಯೆಗೆ ಉತ್ತೇಜನ ದೊರೆತು ಮೂತ್ರವಿಸರ್ಜನೆ ಹಾಗೂ ಮಲಬದ್ಧತೆಯ ತೊಂದರೆಗಳು ದೂರವಾಗುತ್ತವೆ. ತಾಯಿ ಇಲ್ಲದ ಹುಲಿಮರಿಗಳನ್ನು ಇಲ್ಲವೆ ಬೇರೆ ಯಾವುದೇ ಪ್ರಾಣಿಯ ಮರಿಗಳನ್ನು ಮೃಗಾಲಯದಲ್ಲಿ ಅಥವಾ ಮನೆಗಳಲ್ಲಿ ಅಥವಾ ಸರ್ಕಸ್ಸುಗಳಲ್ಲಿ ಸಾಕಿ ಪೋಷಣೆ ಮಾಡುವುದಾದರೆ ಉಗುರು ಬೆಚ್ಚಗಿನ ನೀರಿನಿಂದ ಅವುಗಳ ಹೊಟ್ಟೆಗೆ ಕಾವು

ಕೊಟ್ಟು ಅಂಗಮರ್ಧನ ಮಾಡಬೇಕು. ಇದರಿಂದ ಪಚನಕ್ರಿಯೆಗೆ ಉತ್ತೇಜನ ದೊರೆಯುವುದು; ಮರಿಗಳ ಜನನೇಂದ್ರಿಯಗಳಿಗೆ ಅಂಗಮರ್ಧನದಿಂದ ಉತ್ತೇಜನ ದೊರೆತು ಮೂತ್ರವಿಸರ್ಜನೆ ಸುಲಭವಾಗಿ ಆಗುವುದು. ಒದ್ದೆ ಬಟ್ಟೆಯಿಂದ ಗುದದ್ವಾರ ತಿಕ್ಕುವುದರಿಂದ ಮರಿಗಳಲ್ಲಿ ಮಲಬದ್ಧತೆಯ ತೊಂದರೆಯನ್ನು ದೂರಮಾಡಬಹುದು.

ಹುಲಿ ಮರಿಗಳು ಅತಿ ಚಿಕ್ಕವಯಸ್ಸಿನವಾದರೂ ಒಂದೆರಡು ದಿನಗಳಲ್ಲಿ ತಮ್ಮ ಸಹಜ ಪ್ರವೃತ್ತಿಯಿಂದ ಹಾಗೂ ವಾಸನೆಯಿಂದ ಸಂರಕ್ಷಕನಾರು, ಅಪಾಯ ಯಾವುದು ಎಂದು ಕಂಡುಕೊಳ್ಳುವ ಶಕ್ತಿಯನ್ನು ಹೊಂದಿರುತ್ತವೆ. ಬೇರೆ ಮಾಂಸಭಕ್ಷಕ ಪ್ರಾಣಿಗಳಂತೆ ಹುಲಿ ಮರಿಗಳಿಗೂ ದೃಷ್ಟಿ ಇಲ್ಲದಿದ್ದರೂ ವಾಸನೆಯಿಂದ ಕಂಡುಕೊಳ್ಳುವ ಜ್ಞಾನ ಬಹುಬೇಗ ವೃದ್ಧಿಹೊಂದುತ್ತದೆ. ಹೆಣ್ಣುಹುಲಿ ಹೊರಗಿನಿಂದ 'ಮ್ಯಹಂ-ಮ್ಯಹಂ' ಎಂದು ಪ್ರೀತಿಯಿಂದ ಕರೆಯುತ್ತ ಹತ್ತಿರ ಬಂದಾಗ ಮರಿಗಳು 'ವ್ಯಾವೂಂ-ವ್ಯಾವೂಂ' ಎಂಬ ಉಚ್ಛಸ್ವರದಿಂದ ಸಂರಕ್ಷಕತಾಯಿ ಬಂದದ್ದು ಗೊತ್ತಾಗಿ ಕಿರುಚಲು ಆರಂಭಿಸುತ್ತವೆ. ಮಲಗುವಾಗ ತಮ್ಮ ಮಡಿಲುಗಳಲ್ಲಿ ಮುಖ ಮುಚ್ಚಿಕೊಂಡು ಮಲಗಿದ್ದ ಮರಿಗಳು ಚಿಕ್ಕಪಟ್ಟೆಗಳಿಂದ ಕೂಡಿದ ತುಪ್ಪಳದಲ್ಲಿ ಸುತ್ತಲ್ಪಟ್ಟ ಪುಟ್ಟ ಚೆಂಡುಗಳಂತೆ ಕಾಣುತ್ತವೆ. ತಾಯಿ ಸಮೀಪದಲ್ಲಿರುವಾಗ ಬಳುಕುತ್ತ ಹೊಟ್ಟೆಯ ಮೇಲೆ ತೆವಳುತ್ತ ತಾಯಿಯ ಪಕ್ಕದಲ್ಲಿಯೇ ಇರುತ್ತವೆ. ತಾಯಿ ಹುಲಿ ಹೊರಗೆ ಹೋದೊಡನೆ ಮರಿಗಳು ತಾವಿದ್ದ ಸ್ಥಾನವನ್ನು ಬಿಟ್ಟು ಕದಲುವುದಿಲ್ಲ. ಮರಿಗಳು ಜನಿಸಿ ಸುಮಾರು ಮೂರು ದಿವಸಗಳನಂತರ ಮೊದಲಿನ ಸ್ಥಾನ – 'ಶಿಶುವಿಹಾರ'ದಿಂದ ತಾಯಿ ಹುಲಿ ಮರಿಗಳನ್ನು ಬೇರೆ ಸ್ಥಾನಕ್ಕೆ ಬದಲಾಯಿಸುತ್ತದೆ. ಹುಟ್ಟಿದ ಏಳರಿಂದ ಎಂಟನೇ ದಿನದಲ್ಲಿ ಹೆಣ್ಣುಮರಿಗಳು ಕಣ್ತೆರೆದರೆ ಹತ್ತರಿಂದ ಹನ್ನೊಂದನೆಯ ದಿನಕ್ಕೆ ಗಂಡುಮರಿಗಳು ಕಣ್ತೆರೆಯುತ್ತವೆ.

ಪ್ರಾಣಿಗಳ ಜೀವನದಲ್ಲಿ ಅತಿ ನಾಜೂಕು ಸ್ಥಿತಿಯೆನಿಸಿದ ಮೊಟ್ಟಮೊದಲಿಗೆ ಕಣ್ಣುತೆರೆದ ಸಮಯದಲ್ಲಿ ಅದು ನೋಡಿದ್ದನ್ನೇ ತನ್ನ ಸಂರಕ್ಷಕನೆಂದು ಮನಸ್ಸಿನಲ್ಲಿ ಮುದ್ರಿಸಿಕೊಂಡು ಅಂಗೀಕರಿಸುತ್ತದೆ. ಆದ್ದರಿಂದ ಅದೇ ಆಗ ಜನಿಸಿದ ಪ್ರಾಣಿಗಳನ್ನು ಅವು ಕಣ್ಣು ತೆರೆಯುವ ಮೊದಲೇ ದತ್ತು ತೆಗೆದುಕೊಂಡು, ಪೋಷಣೆಮಾಡಿ, ಸಾಧುಮಾಡುವುದು ಬಹಳ ಸುಲಭ.

ಮರಿಗಳ ಕಣ್ಣುಗಳು ಪೂರ್ಣ ತೆರೆದಿದ್ದಾಗ್ಯೂ ಮುಂದಿನ ಎರಡುವಾರಗಳವರೆಗೆ ಅವುಗಳ ಮೇಲಿರುವ ತಿಳಿನೀಲಿ ಪೊರೆಗಳಿಂದಾಗಿ ಸ್ಪಷ್ಟವಾಗಿ ತೋರದೆ, ವಸ್ತುಗಳ ಅಂತರವನ್ನು ಊಹಿಸುವುದು ಮರಿಗಳಿಗೆ ಕಷ್ಟವಾಗುತ್ತದೆ. ಅನೇಕ ಸಾರಿ ಅವು ಗುರಿತಪ್ಪಿ ಅನಿಶ್ಚಿತವಾಗಿ ಅಲೆದಾಡುತ್ತವೆ. ಕೆಲವು ಬಾರಿ ಯಾವುದಾದರೊಂದು ವಸ್ತುವಿನ ಮೇಲೆ ಜಗಿಯಲಿಕ್ಕೆ ಹೋಗಿ ತಪ್ಪು ಅಂತರವನ್ನು ಊಹಿಸಿದಾಗ ಅವು ಮಗಚಿ ಬೀಳುವುದುಂಟು.

ಮರಿಗಳೊಂದಿಗಿದ್ದ ಹೆಣ್ಣುಹುಲಿ ಮರಿಗಳ ಸಂರಕ್ಷಣೆ ಮಾಡುವಾಗ ಹತ್ತಿರ ಯಾರನ್ನೂ ಸೇರಿಸುವುದಿಲ್ಲ. ಕಿಂಚಿತ್ ಅಪಾಯದ ಸಂಶಯ ಉಂಟಾದರೂ ಮರಿಗಳನ್ನು ಬೇರೆ ಕಡೆ ಸಾಗಿಸುತ್ತದೆ. ಹಸಿದ ಮರಿಗಳಲ್ಲಿ ತಾಯಿಯ ಒಳ್ಳೆಯ ಹಾಗೂ ದೊಡ್ಡ ಮೊಲೆಚೀಪಲು ಪೈಪೋಟಿ ನಡೆಯುತ್ತಿರುತ್ತದೆ. ಮೊಲೆ ಚೀಪುತ್ತಿದ್ದಂತೆ ಇನ್ನೂ ಜಾಸ್ತಿ ಹಾಲುಗಿಟ್ಟಿಸಲು ಮರಿಗಳು ತಮ್ಮ ಮೃದುವಾದ ಮೂಗಿನಿಂದ ತಾಯಿಯ ಹೊಟ್ಟೆಗೆ ಒತ್ತುತ್ತವೆ. ತಾಯಿಯು ಸಂಗಡ ಇರುವವರೆಗೆ ಮರಿಗಳು ತಮ್ಮ ಹೊಟ್ಟೆತುಂಬಿದಾಗ ಅದರ ದೇಹದ ಮೇಲೆ ಬಳಕಾಡುತ್ತ ದಟ್ಟಗಾಲಿನಿಂದ ತಮ್ಮ ಮೃದುವಾದ ಪಂಜಗಳಿಂದ ಪರಚುತ್ತಿರುತ್ತವೆ. ತಾಯಿ ಹುಲಿಯು ಮರಿಗಳ ಎಲ್ಲ ಕುಚೇಷ್ಟೆಯನ್ನು ತಾಳ್ಮೆಯಿಂದ ಸಹಿಸಿ ತನ್ನ ಮೂಗಿನಿಂದ ಒತ್ತುತ್ತ ಅಕ್ಕರೆಯಿಂದ ಮುದ್ದಿಸುವುದು ವಾಡಿಕೆ.

ಸಾಮಾನ್ಯವಾಗಿ ಹೆಣ್ಣುಹುಲಿ ತನ್ನ ಮರಿಗಳನ್ನು ಯಾವುದೇ ರೀತಿಯ ತೊಂದರೆ, ಸಂಪರ್ಕ, ಅಪಾಯ ಇಲ್ಲದ ಸ್ಥಳಗಳಲ್ಲಿ ಇಡುತ್ತದೆ. ಗುಹೆಗಳು, ಕಲ್ಲು ಬಂಡೆಗಳಲ್ಲಿದ್ದ ಬಿರುಕು, ದಟ್ಟಮೆಳೆ, ಮರಗಳ ಬೊಡ್ಡೆಯಲ್ಲಿದ್ದ ತೂತುಗಳು ಇವೇ ಮೊದಲಾದವು ಮರಿಗಳನ್ನು ಬಚ್ಚಿಡುವ ಯೋಗ್ಯಸ್ಥಾನಗಳು; ಅರ್ಥಾತ್ ಶಿಶುವಿಹಾರಗಳು. ಮರಿಗಳು ಹುಟ್ಟಿದ ಹತ್ತುಹನ್ನೆರಡು ದಿನಗಳ ನಂತರ ಎರಡನೆಯ ಶಿಶುವಿಹಾರವನ್ನು ತ್ಯಜಿಸಿ ಮೂರನೇ ಶಿಶುವಿಹಾರಕ್ಕೆ ಬದಲಾಯಿಸುತ್ತದೆ. ಮರಿಗಳು ಬೆಳೆದಂತೆ ಶಿಶುವಿಹಾರಗಳ ರಚನೆ, ಅಳತೆ, ಆಕಾರ ಮುಂತಾದುವುಗಳೂ ಬದಲಾಗುತ್ತವೆ. ಈ ರೀತಿ ತನ್ನ ಮರಿಗಳು ಆರು ತಿಂಗಳಿನವಾಗುವವರೆಗೆ ಅಂದರೆ ಮರಿಗಳು ತಾಯಿಯ ಸಂಗಡ ಬೇಟೆಗೆ ಹೋಗುವವರೆಗೆ ಶಿಶುವಿಹಾರಗಳು ಬದಲಾಯಿಸುತ್ತಲೇ ಇರುತ್ತವೆ.

ಶಿಶುವಿಹಾರದ ನೈರ್ಮಲ್ಯತೆಯನ್ನು ಕಾಯ್ದುಕೊಂಡು ಬೇರೆ ಮಾಂಸಭಕ್ಷಕ ಹಾಗೂ ಬೇಟೆ ಪ್ರಾಣಿಗಳಾದ ಕತ್ತೆಕಿರುಬ, ತೋಳಗಳಿಂದ ತನ್ನ ಅಸಹಾಯಕ ಮರಿಗಳನ್ನು ಸಂರಕ್ಷಿಸುವ ಉದ್ದೇಶದಿಂದ ಹೆಣ್ಣುಹುಲಿ ಸ್ಥಳ ಬದಲಾಯಿಸುತ್ತಿರಬೇಕೆಂದು ತೋರುತ್ತದೆ. ಚಿಕ್ಕ ಮರಿಗಳಲ್ಲಿ ದೇಹದ ವಾಸನೆ ಅತಿ ಕಡಮೆ ಇರುವುದರಿಂದ ಅವು ಯಾವುದೇ ಚಲನವಲನ ಹಾಗೂ ಸದ್ದುಮಾಡದೆ ಇದ್ದರೆ ಬೇರೆ ಮಾಂಸಾಹಾರಿ ಪ್ರಾಣಿಗಳ ಕಣ್ಣಿಗೆ ಬೀಳದೆ ತಪ್ಪಿಸಿಕೊಳ್ಳುತ್ತವೆ.

ಹೆಣ್ಣುಹುಲಿಗೆ ಒಂದು ಸೂಲಿಗೆ ಎರಡರಿಂದ ಏಳುಮರಿಗಳು ಹುಟ್ಟುವುದುಂಟು. ಅವುಗಳಲ್ಲಿ ಕೆಲವು ಹುಟ್ಟುವ ಮೊದಲೆ ಗರ್ಭದಲ್ಲಿ ಸತ್ತು ಹೊರಗೆ ಬರಬಹುದು; ಕೆಲವನ್ನು ಹುಟ್ಟಿದನಂತರ ತಾಯಿ ಹುಲಿ ತಿನ್ನಬಹುದು: ಮತ್ತೆ ಕೆಲವನ್ನು ಮರಿಗಳ ಮೈಮೇಲಿನ ಪೊರೆಯನ್ನು ನೆಕ್ಕುವಾಗ ಹಾಗೂ ಸಂಗಡ ಬಂದಿದ್ದ ಮಾಂಸವನ್ನು ತಿನ್ನುವಾಗ ಆಕಸ್ಮಾತ್ ಮರಿಯನ್ನೂ ತಾಯಿ ಹುಲಿ ತಿಂದುಬಿಡಬಹುದು.

ಇವಲ್ಲದೆ ಮರಿಗಳನ್ನು ತಿನ್ನಲು ಇನ್ನೂ ಬೇರೆ ಕಾರಣಗಳು ಇವೆ. ಮರಿಗಳನ್ನು ಹಾಕುವಾಗ ತಾಯಿಗೆ ಅಪರಿಮಿತ ಶಕ್ತಿ ಬೇಕಾಗುತ್ತದೆ. ಆ ಶಕ್ತಿಯನ್ನು ಪಡೆಯುವು ದಕ್ಕೋಸ್ಕರ ಹಾಗೂ ಮರಿಗಳನ್ನು ಹಾಕುವಾಗ ಅದಕ್ಕೆ ಆಗುವ ಭಯಂಕರ ಪ್ರಸವ ವೇದನೆಯನ್ನು ಶಮನಗೊಳಿಸುವ ಉದ್ದೇಶದಿಂದ ಎಲ್ಲ ಜಾತಿಯ ಕೋರೆಹಲ್ಲುಗಳುಳ್ಳ ಮಾಂಸಭಕ್ಷಕ ಪ್ರಾಣಿಗಳಾದ ಹುಲಿ, ಸಿಂಹ, ಚಿರತೆ, ಕತ್ತೆಕಿರುಬ, ನಾಯಿ, ಬೆಕ್ಕು ಮೊದಲಾದವುಗಳು ತಮ್ಮ ನೈಸರ್ಗಿಕ ಸಹಜ ಪ್ರವೃತ್ತಿಯಿಂದ ಹುಟ್ಟಿದ ಮರಿಗಳಲ್ಲಿ ಒಂದು, ಎರಡು ಅಥವಾ ಎಲ್ಲವುಗಳನ್ನೂ ತಿನ್ನಬಹುದು. ಮರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹುಟ್ಟಿದರೆ ಮೊಲೆಯ ಹಾಲಿನ ಮೇಲೆ ಆಗಬಹುದಾದ ಪೈಪೋಟಿಯನ್ನು ತಪ್ಪಿಸುವುದಕ್ಕೋಸ್ಕರ, ತನ್ನ ಹಾಲಿನಿಂದ ಎಷ್ಟು ಮರಿಗಳನ್ನು ಪೋಷಣೆಮಾಡಲು ಸಾಧ್ಯವೋ ಅಷ್ಟು ಉಳಿಸಿಕೊಂಡು, ಉಳಿದ ಮರಿಗಳನ್ನು ಹುಟ್ಟುತ್ತಲೇ, ತಾಯಿಹುಲಿ ಕೊಂದು ತಿನ್ನುತ್ತಿರಬೇಕು. ನಿಸರ್ಗವು ಅದಕ್ಕೆ ವಿರೋಧವಾಗಿದ್ದು ಹೆಣ್ಣುಹುಲಿಗೆ ಇಷ್ಟವಿಲ್ಲದೆ ಗರ್ಭಧಾರಣವಾಗಿದ್ದರೆ, ಕಾಡಿನಲ್ಲಿ ಮರಿಗಳ ಪೋಷಣೆಗೆ ಅತ್ಯಾವಶ್ಯಕ ವಾದ ಸುರಕ್ಷತೆ, ಸಾಕಷ್ಟು ಆಹಾರ ಮತ್ತು ನೀರಿನ ಕೊರತೆ ಕಂಡುಬಂದಾಗ ಹಾಗೂ ಗಂಡು ಹುಲಿಗಳಿಂದ ಸುರಕ್ಷತೆ ಇಲ್ಲವೆಂದು ತಿಳಿದಾಗ ಹುಟ್ಟಿದ ಎಲ್ಲ ಮರಿಗಳನ್ನೂ ತಾಯಿ ಹುಲಿ ಕೊಂದು ತಿನ್ನಬಹುದು ಅಥವಾ ಮರಿಗಳು ಹುಟ್ಟುವ ಮೊದಲೆ ಗರ್ಭದಲ್ಲಿ ಸತ್ತು ಹೊರಗೆ ಬರಬಹುದು.

ಹೆಚ್ಚಾಗಿ ಹೆಣ್ಣು ಹುಲಿಗಳು ತಮ್ಮ ಮರಿಗಳನ್ನು ಶಿಶುವಿಹಾರದಲ್ಲಿ ಬಿಟ್ಟು ಬೇಟೆಗೆಂದು ದೂರಹೋದಾಗ ಇತರ ಮಾಂಸಭಕ್ಷಕ ಪ್ರಾಣಿಗಳು ಅಸಹಾಯಕ ಮರಿಗಳ ಮೇಲೆ ಬೇಟೆಯಾಡಿ ತಿನ್ನುವುದುಂಟು. ಕೆಲವು ಸಮಯ ಆಹಾರದ ಕೊರತೆಯುಂಟಾದಾಗ ಪೀಳಿಗೆಯಲ್ಲಿ ಕ್ಷೀಣ ಮರಿಗಳಿದ್ದರೆ ಅವು ಉಪವಾಸ ದಿಂದ ಸಾಯುವ ಸಂದರ್ಭವೂ ಇರುತ್ತದೆ. ಕೆಲವು ಸಮಯಗಳಲ್ಲಿ ಹೆಣ್ಣುಹುಲಿ ಗಂಡಿನೇಟಿಗೆ ಆಹುತಿ ಆದಾಗ ಮರಿಗಳು ಅಕಾಲ ಮೃತ್ಯುಗೀಡಾಗಬಹುದು. ಅನೇಕ ಸಲ ಗಂಡು ಹುಲಿಗಳು ಮರಿಗಳನ್ನು ಕೊಂದುಹಾಕಬಹುದು. ಈ ರೀತಿ ಹೆಚ್ಚಿನ ಸಂಖ್ಯೆಯಲ್ಲಿ ಮರಿಗಳ ಸಾವು, ಹುಲಿ ಸಂಖ್ಯೆಗಳನ್ನು ಹತೋಟಿಯಲ್ಲಿಡಲು ಸಹಾಯ ವಾಗುವ ನಿಸರ್ಗದ ರೀತಿಯಲ್ಲೊಂದು ಎಂದು ಹೇಳಬಹುದು.

ನಿಸರ್ಗದಲ್ಲಿ ಗಂಡು-ಹೆಣ್ಣುಗಳ ಪ್ರಮಾಣ ಸರ್ವಸಾಧಾರಣವಾಗಿ ಒಂದು ಗಂಡಿಗೆ ಒಂದು ಹೆಣ್ಣಿನಂತೆ ಇದ್ದದ್ದು ಕಂಡುಬರುತ್ತದೆ. ಹೆಣ್ಣು ಹುಲಿಗಳಲ್ಲಿ ಹೆಚ್ಚು ಉತ್ಪತ್ತಿಮಾಡುವ ಸಾಮರ್ಥ್ಯ ಇದ್ದರೂ ಅತಿ ಕಡಮೆ ಪ್ರಮಾಣದಲ್ಲಿದ್ದ ಹುಲಿಗಳ ಸಂಖ್ಯೆಗೆ ಸರಿಯಾಗಿ ಗರ್ಭಧಾರಣವಾಗದಿರುವಿಕೆ ಹಾಗೂ ಹುಟ್ಟುವ ಮೊದಲು ಮತ್ತು ಹುಟ್ಟಿದ ನಂತರ ಸಂಭವಿಸುವ ಮರಿಗಳ ಮೃತ್ಯುಗಳೇ ಕಾರಣಗಳು. ಕೆಲವು ಸ್ಥಳಗಳಲ್ಲಿ ಗಂಡು ಹುಲಿಗಳ ಪ್ರಮಾಣ ಹೆಣ್ಣಿನ ಸಂಖ್ಯೆಗಿಂತ, ಕಡಮೆ ಇದ್ದದ್ದು ಕಂಡುಬರುತ್ತದೆ. ಗಂಡುಮರಿಗಳು ಹೆಣ್ಣುಮರಿಗಳಿಗಿಂತ ಬೇಗ ತಾಯಿಯಿಂದ ಬೇರ್ಪಟ್ಟು ಸ್ವತಂತ್ರವಾಗಿರುವುದುಂಟು. ಅವುಗಳಿಗೆ ಆಗ ಬೇಟೆ

ಪ್ರಾಣಿಗಳನ್ನು ಕೊಲ್ಲುವುದರಲ್ಲಿ ಸಾಕಷ್ಟು ಅನುಭವ ಇಲ್ಲದಿರುವುದರಿಂದ ಕಾಡುಹಂದಿಗಳಿಂದಾಗಲೀ, ಕಾಟಿಮೃಗಗಳಿಂದಾಗಲಿ ಪೆಟ್ಟು ತಿಂದು ಅಥವಾ ಹಳ್ಳಿಗಳ ದನಕರುಗಳ ಮೇಲೆ ಆಕ್ರಮಣಮಾಡಿ ತೊಂದರೆ ಕೊಟ್ಟಾಗ ಅವು ಕೊಲ್ಲಲ್ಪಡುತ್ತವೆ. ರೋಗರುಜಿನಗಳಿಂದಲೂ ಹಲವು ಹುಲಿಗಳು ಸಾಯುವುದುಂಟು.

ಹುಲಿಮರಿಗಳನ್ನು ಹಿಡಿದು ಬಹುದೂರ ಕೊಂಡೊಯ್ದು ಮೃಗಾಲಯಕ್ಕಾಗಲಿ ಅಥವಾ ಸರ್ಕಸ್ಸಿಗೇ ಆಗಲೀ ಮಾರಾಟ ಮಾಡಿದ ಅನೇಕ ಉದಾಹರಣೆಗಳುಂಟು. ಕಷ್ಟಪಟ್ಟು ಮರಿಯನ್ನು ಎತ್ತಿಕೊಂಡು ಗಂಡಾಂತರದಿಂದ ಪಾರಾಗಿ ಸಮೀಪದ ಪೇಟೆಯಲ್ಲಿ ಮಾರಿದವನಿಗೆ ಒಂದು ಮರಿಗೆ ಸುಮಾರು 15 ರೂ.ಗಳಷ್ಟು ಬೆಲೆ ಬಂದರೆ ಅವು ಪ್ರಾಣಿಸಂಗ್ರಹಾಲಯಕ್ಕೆ ಅಥವಾ ಸರ್ಕಸ್ಸಿಗೆ ತಲುಪಿದಾಗ ಅದರ ಬೆಲೆ 2000 ರೂ.ಗಳಿಗೂ ಮಿಕ್ಕಬಹುದು. ಹುಲಿಮರಿಗಳನ್ನು ಶಿಶುವಿಹಾರದಲ್ಲಿ ಬಿಟ್ಟು ತಾಯಿಹುಲಿ ದೂರ ಬೇಟೆಗೆ ಹೋದಾಗ ಇಲ್ಲವೆ ಮಡುವಿಗೆ ನೀರು ಕುಡಿಯಲು ಹೊರಬಿದ್ದಾಗ ಅದನ್ನು ತೀವ್ರವಾಗಿ ಗಾಯಗೊಳಿಸಿ ಇಲ್ಲವೆ ದೂರ ಓಡಿಸಿ ಇಲ್ಲವೆ ಉರುಲು ಹಾಕಿ ಅಲ್ಲಿಯೇ ಬಿದ್ದು ಒದ್ದಾಡುವಂತೆ ಮಾಡಿ ಇಲ್ಲವೆ ಗುಂಡಿಕ್ಕಿ ಕೊಂದು ಮರಿಗಳನ್ನು (ಮರಿ ಹಿಡಿಯುವವರು) ಎತ್ತಿಕೊಂಡು ಹೋಗುತ್ತಾರೆ. ಇದು ಒಂದು ಮಹಾ ವಿಧ್ವಂಸಕ ಕೃತ್ಯ. ಸಾಮಾನ್ಯವಾಗಿ ಹುಟ್ಟುವಾಗಲೇ ಶೇಕಡಾ ಐವತ್ತರಷ್ಟು ಮರಿಗಳು ನಿಸರ್ಗ ನಿಯಮದಂತೆ ಸಾಯುತ್ತವೆ. ಅದರಲ್ಲೂ ತಾಯಿಯನ್ನು ಕೊಂದು ಮರಿಗಳನ್ನು ಎತ್ತಿಕೊಂಡು ಹೋಗುವುದು ಹುಲಿಗಳ ವಂಶಕ್ಕೆ ವಿನಾಶಕಾರಿಯೇ ಸರಿ. ಜಾಗತಿಕ ಯುದ್ಧದ ನಂತರ ವನ್ಯಮೃಗಗಳಿಗೆ ಮೃಗಾಲಯಗಳಿಂದ ಬೇಡಿಕೆ ಹೆಚ್ಚಿದೆ. ಇದು ಅಪಾಯಕ್ಕೀಡಾಗಿರುವ ವನ್ಯಪ್ರಾಣಿಗಳಿಗೆ ಇನ್ನೊಂದು ರೀತಿಯ ಭಯ ಪರಿಣಮಿಸಿತು. ಅಂತೂ ಇತ್ತೀಚೆಗೆ ವಿಶ್ವದ ಪ್ರಮುಖ ಮೃಗಾಲಯಗಳು ಈ ದಿಶೆಯಲ್ಲಿ IUCN ದ ಅಪಾಯಕ್ಕೀಡಾದ ಪ್ರಾಣಿಗಳ ಕೆಂಪು ಗ್ರಂಥದಲ್ಲಿಯ ಸೇರಿದ ಪಟ್ಟಿಯ ಪ್ರಾಣಿಗಳನ್ನು ಕೊಳ್ಳದೆ ಅವುಗಳ ಸಂರಕ್ಷಣೆಯ ಸಲುವಾಗಿ ಅತಿ ಜವಾಬ್ದಾರಿಯಿಂದ ನಡೆದುಕೊಳ್ಳುವಂತಾಗಿದೆ.

ಈ ರೀತಿ ತಾಯಿಯಿಂದ ಬೇರ್ಪಡಿಸಿ ಎತ್ತಿಕೊಂಡು ಹೋದ ಹುಲಿಮರಿಗಳಿಗೆ ನಿಸರ್ಗದ ಸುತ್ತಮುತ್ತಣ ಪ್ರದೇಶ, ತಾಯಿಹುಲಿಯ ಪ್ರೇಮಾಶ್ರಯ, ಹಾಗೂ ಪೋಷಣೆ ಲಭಿಸದೆ ಮಲಬದ್ಧತೆ ಹಾಗೂ ಮೂತ್ರವಿಸರ್ಜನೆಯ ತೊಂದರೆಗಳಿಂದ ಅಕಾಲ ಮೃತ್ಯುಗೀಡಾಗಬಹುದು. ನೈಸರ್ಗಿಕ ಪರಿಸರ ಹಾಗೂ ತಾಯಿಯಿಂದ ಬೇರ್ಪಟ್ಟ ಹುಲಿಮರಿಗಳನ್ನು ಎತ್ತಿಕೊಂಡು ಹೋಗುವಾಗ ಚಿಕ್ಕಮರಿಗಳು ಪ್ರವಾಸದ ಕಷ್ಟ ಹಾಗೂ ಆಘಾತಗಳಿಗೆ ಬಲಿಯಾಗುತ್ತವೆ. ಹಿಡಿಯುವಾಗ ಹಲವಕ್ಕೆ ಹಿಂಸೆಯೂ ಆಗಬಹುದು. ಇದರಿಂದ ಭೂಮಿಯ ಮೇಲೆ ಕೆಡವಿ ಇಷ್ಟೆಲ್ಲ ದುರಂತಗಳನ್ನು ದಾಟಿ, ಹಿಡಿದು ಕೊಂಡೊಯ್ದು ಹುಲಿಮರಿಗಳಲ್ಲಿ ಕೆಲವು ಮಾತ್ರ ಪ್ರಾಣಿಸಂಗ್ರಹಾಲಯ ಅಥವಾ ಸರ್ಕಸ್ಸುಗಳಲ್ಲಿ ದೊಡ್ಡವಾಗುತ್ತವೆ. ಬೆಕ್ಕಿನ ವಂಶದ ಎಲ್ಲ ಪ್ರಾಣಿಗಳಲ್ಲಿ ಕಂಡುಬರುವ ಒಂದು ಸಂತೋಷದ ನೈಸರ್ಗಿಕ ಪ್ರವೃತ್ತಿಯೇನೆಂದರೆ. ಅಕಸ್ಮಾತ್ ಹಿಡಿದು ತಂದ

ಮರಿಗಳನ್ನು ವಾಪಸ್ ಕೊಂಡೊಯ್ದು ತಾಯಿಯ ಹತ್ತಿರ ಬಿಟ್ಟರೆ ತನ್ನ ಮರಿಗಳಿಗೆ ಮನುಷ್ಯನ ವಾಸನೆ ಅಂಟಿದೆಯೆಂದು ತಾಯಿ ಅವುಗಳನ್ನು ಹಿಂಸಿಸದೆ ಅಥವಾ ಕೊಲ್ಲದೆ ಅಥವಾ ತ್ಯಜಿಸದೆ ಪುನಃ ಮೊದಲಿನಂತೆ ಪ್ರೀತಿಸಿ ಪೋಷಿಸುತ್ತಿರುವುದು ಗಮನಾರ್ಹವಾದ ವಿಷಯ.

ಆದರೆ ಸಾಮಾನ್ಯವಾಗಿ ಬೇರೆ ಪ್ರಾಣಿಯ ಮರಿಗಳನ್ನು ಹೆಣ್ಣುಹುಲಿ ದತ್ತು ತೆಗೆದುಕೊಂಡು ಜೋಪಾನ ಮಾಡುವುದಿಲ್ಲ. ಏಕೆಂದರೆ ಮಾಂಸ ಭಕ್ಷಕ ಪ್ರಾಣಿಗಳು ಅತಿ ಕಷ್ಟಪಟ್ಟು ಸತತ ಪ್ರಯತ್ನದಿಂದ ಬೇರೆ ಪ್ರಾಣಿಗಳ ಮೇಲೆ ಬೇಟೆಯಾಡಿ ಜೀವಿಸಬೇಕಾಗಿರುವುದರಿಂದ ತನ್ನ ಮರಿಯಲ್ಲದೆ ಮತ್ತೊಂದು ಮರಿಯ ಹೊಟ್ಟೆತುಂಬಿಸಿ ಪೋಷಣೆ ಮಾಡಿ ಬೆಳೆಸುವುದೆಂದರೆ ಹೆಣ್ಣು ಹುಲಿಗಳಿಗೆ ಹೆಚ್ಚು ಭಾರವೇ ಸರಿ. ಮನುಷ್ಯ ಮುಟ್ಟಿದ ಅಥವಾ ಜೋಪಾನ ಮಾಡಿದ ಹುಲಿಯ ಮರಿಯನ್ನು ಕಾಡಿನಲ್ಲಿಯ ಹೆಣ್ಣುಹುಲಿ ಬಳಿಯಲ್ಲಿ ಬಿಟ್ಟರೆ ಅದು ತನ್ನ ಮರಿಯಾಗಿರದಿದ್ದರೆ ಹತ್ತಿರ ಸೇರಿಸುವುದಿಲ್ಲ. ಆದರೆ ಸಸ್ಯಾಹಾರಿ ಪ್ರಾಣಿಗಳು ಬೇರೆ ಮರಿಗಳನ್ನಾಗಲೀ ಇಲ್ಲವೇ ಮನುಷ್ಯ ಜೋಪಾನ ಮಾಡಿದವುಗಳನ್ನಾಗಲೀ ಸ್ವೀಕರಿಸಿ ಜೋಪಾನ ಮಾಡದಿದ್ದರೂ ಅವುಗಳನ್ನು ಹಿಂಡಿನಲ್ಲಿ ಸೇರಿಸಿಕೊಳ್ಳಲು ಏನೂ ಅಭ್ಯಂತರವಿರುವುದಿಲ್ಲ. ಇವುಗಳಲ್ಲಿ ಮಾಂಸಭಕ್ಷಕ ಪ್ರಾಣಿಗಳಂತೆ ಬೇರೆ ಪ್ರಾಣಿಗಳ ಮೇಲೆ ಬೇಟೆಯಾಡಿ ಜೀವಿಸುವ ಪ್ರಮೇಯವಿರುವುದಿಲ್ಲವಾದ್ದರಿಂದ ಹಾಗೆ ಮಾಡುತ್ತಿರಬೇಕು.

ಹುಲಿಗಳ ಮರಿಗಳ ಕಿವಿಗಳು ಅಗಲವಾಗಿದ್ದು ಕಣ್ಣುಗಳ ಮಟ್ಟದಲ್ಲಿ ತಲೆಗೆ ಹೊಂದಿಕೊಂಡಿರುತ್ತವೆ. ಅವುಗಳ ಮುಖ ಮನುಷ್ಯರಂತೆ ತೋರುತ್ತದೆಯಲ್ಲದೆ ಕಿವಿಗಳಿಂದ ಮರಿಗಳ ಸೌಂದರ್ಯ ಹೆಚ್ಚಿದಂತೆ ತೋರುತ್ತದೆ. ಮರಿಗಳು ಚಿಕ್ಕವಿದ್ದಾಗ ತಮ್ಮ ಸುತ್ತಮುತ್ತಲಿನ ಹೊಸ ವಸ್ತುಗಳನ್ನು ಕಂಡುಹಿಡಿದಾಗ ಒಮ್ಮೆಲೆ ಬೆಚ್ಚಿಬೀಳುವುದುಂಟು. ದಿನಗಳುರುಳಿದಂತೆ ಮರಿಗಳ ಚಲನವಲನಗಳು ಹೆಚ್ಚೆಚ್ಚು ಉದ್ದೇಶಪೂರ್ವಕವಾಗಿದ್ದು ಇನ್ನೂ ನಡುಗುತ್ತಿರುವ ಹಿಂಗಾಲುಗಳ ಮೇಲೆ ನಿಂತು ಒಂದರ ಮೇಲೊಂದು ಪಂಜ ಬೀಸಿದಾಗ ಪರಿಣಾಮಕಾರಿಯಾಗಿ ಮೃದುವಾದ ಪೆಟ್ಟುಕೊಟ್ಟಂತೆ ಪ್ರಯತ್ನಿಸುತ್ತವೆ. ಅವು ಬೆಳೆದಂತೆ ಹೆಚ್ಚು ಚಂಚಲವಾಗುತ್ತ ತಾಯಿಗೆ ಅವುಗಳ ಗುದದ್ವಾರ ನೆಕ್ಕುವುದರಲ್ಲಿ ಕಷ್ಟವೆನಿಸುವುದುಂಟು.

ಹುಲಿ ಮರಿಗಳು ಸುಮಾರು ಮೂರು ವಾರದವುಗಳಾದಾಗ ಅವುಗಳಲ್ಲಿ ಒಂದು ರೀತಿಯ ಚಂಚಲತೆಯುಂಟಾಗುತ್ತದೆ. ವಸಡೆಗಳು ಚುಚ್ಚುವಂತೆ ಭಾಸವಾಗಿ ಅಕ್ಕಪಕ್ಕದಲ್ಲಿ ಸಿಕ್ಕ ಕಟ್ಟಿಗೆ ತುಂಡು, ಮುಂತಾದುವುಗಳನ್ನು ಬಾಯಲ್ಲಿ ಕಚ್ಚಿ ಅಗಿಯುತ್ತಿರುತ್ತವೆ. ಈ ವೇಳೆಗೆ ಮರಿಗಳಿಗೆ ಹಾಲು ಹಲ್ಲುಗಳು ಹುಟ್ಟಲಾರಂಭಿಸುತ್ತವೆ. ಮುಂದಿನ ವಸಡಿ ಹಲ್ಲುಗಳು ಹುಟ್ಟಲು ಆರಂಭವಾದ ಒಂದು ವಾರದ ನಂತರ ಮೇಲಿನ ಕೋರೆಹಲ್ಲುಗಳು ಕಾಣಿಸಿಕೊಳ್ಳುವುವು. ನಂತರ ಕೆಳಗಿನ ಕೋರೆ ಹಲ್ಲುಗಳು ಕಾಣಿಸಿಕೊಳ್ಳುತ್ತವೆ. ಅವುಗಳ ಜೊತೆಗೆ ಮುಂದಿನ ಎಲ್ಲ ಹಲ್ಲುಗಳು

ಕಾಣಿಸಿಕೊಳ್ಳಲಾರಂಭಿಸುತ್ತವೆ. ಸುಮಾರು ಎಂಟು ವಾರಗಳಲ್ಲಿ ಮರಿಗಳ ಹಾಲು ಹಲ್ಲುಗಳು ಬೆಳೆದು ಪೂರ್ಣಗೊಳ್ಳುತ್ತವೆ. ಗಂಡು ಹುಲಿಮರಿಯ ಹಲ್ಲುಗಳು ಒಂಭತ್ತನೆಯ ವಾರಕ್ಕೆ ಬೆಳೆದು ಪೂರ್ಣಗೊಳ್ಳುವುವು. ಹೆಣ್ಣು ಹುಲಿಮರಿಗಳು ಗಂಡು ಮರಿಗಳಿಗಿಂತ ತೀವ್ರಗತಿಯಲ್ಲಿ ಬೆಳೆದು ಪ್ರಾಯಕ್ಕೆ ಬರುತ್ತವೆ. ಇದು ನಿಸರ್ಗದ ವ್ಯವಸ್ಥೆ.

ಹುಲಿಮರಿಗಳು ಸುಮಾರು ನಾಲ್ಕುವಾರದವುಗಳಿದ್ದಾಗ ಅವುಗಳ ಶಿಶು ವಿಹಾರದ ಹತ್ತಿರ ಒಮ್ಮೊಮ್ಮೆ ತಾಯಿಯೊಂದಿಗೆ ಮತ್ತೊಂದು ಹುಲಿಯನ್ನು ಕಾಣಬಹುದು. ಅದು ಗಂಡುಹುಲಿ—ಹೆಣ್ಣುಹುಲಿಯ ಪ್ರಿಯತಮ. ಸಾಮಾನ್ಯ ವಾಗಿ ಅದು ಮರಿಗಳ ತಂದೆಯಾಗಿರುತ್ತದೆ. ಹೆಣ್ಣುಹುಲಿ ತನ್ನ ಹೆಮ್ಮೆಯ ಮರಿಗಳನ್ನು ತೋರಿಸಲು ಪ್ರಿಯತಮನನ್ನು ಕರೆತರುವುದು ವಾಡಿಕೆ. ಗಂಡುಹುಲಿ ಶಿಶುವಿಹಾರದ ಹತ್ತಿರ ಸ್ವಲ್ಪಸಮಯ ಅಥವಾ ಒಂದೆರಡು ದಿನಗಳವರೆಗೆ ಮಾತ್ರ ಇರುತ್ತದೆ. ಮರಿಗಳನ್ನು ಹೊಂದಿದ ಹೆಣ್ಣುಹುಲಿ, ತನ್ನ ದೊರೆ—ಗಂಡುಹುಲಿ ಯಲ್ಲಿ ನಂಬಿಕೆ ಇಡದೆ ಸಾಮಾನ್ಯವಾಗಿ ಮರಿಗಳು ಸಾಕಷ್ಟು ದೊಡ್ಡವಾಗುವವರೆಗೆ ಅವುಗಳನ್ನು ಸಮೀಪಿಸಲು ಅನುಮತಿ ಕೊಡುವುದಿಲ್ಲ. ಕೆಲವು ವೇಳೆ ಮರಿಗಳಲ್ಲಿಯ ದಿಟ್ಟಮರಿ ತಾಯಿಯೊಂದಿಗೆ ಬಂದ ಅಪರಿಚಿತ ಹುಲಿಯನ್ನು ಕಂಡು ಗುರುಗುಟ್ಟುವು ದುಂಟು. ಸಾಮಾನ್ಯವಾಗಿ ಗಂಡುಹುಲಿ ಸುಮಾರು ಅಂತರದಲ್ಲಿಯೇ ತನ್ನದೇ ಸಿಂಹನಾರಿಯ ಭಂಗಿಯಲ್ಲಿ ಕುಳಿತು ಮರಿಗಳ ಆಟಪಾಠಗಳನ್ನು ನೋಡಿ ಸಂತೋಷಪಟ್ಟು ತನ್ನ ಪಾಡಿಗೆ ತಾನು ಹೊರಟುಹೋಗುತ್ತದೆ.

ಮರಿಗಳನ್ನು ಹಾಕಿದ ಹೆಣ್ಣುಹುಲಿ ಹಾಗೂ ಅದರ ಪ್ರಿಯತಮನಾದ ಗಂಡು ಹುಲಿ ಇವುಗಳ ಮೈಕಟ್ಟಿನಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರುವುದುಂಟು. ಒಳ್ಳೆ ತಾರುಣ್ಯಾ ವಸ್ಥೆಯಲ್ಲಿದ್ದ ಗಂಡುಹುಲಿಯ ಮೈಕಟ್ಟು ಬಂಗಾರವರ್ಣದ ಮೇಲೆ ಕಪ್ಪುಪಟ್ಟೆಗಳಿಂದ ವಿಚ್ಛಿನ್ನ ರೀತಿಯಲ್ಲಿ ಮುದ್ರಿಸಲ್ಪಟ್ಟ ಸುಂದರ ತುಪ್ಪಳದಿಂದ ಬಿಗಿಯಾಗಿ ಸುತ್ತಲ್ಪಟ್ಟಿರು ತ್ತದೆ. ಅದೇ ಮರಿಹಾಕಿದ ಹೆಣ್ಣಿನ ದೇಹದ ಕವಚ ಸಡಿಲಾಗಿರುತ್ತದೆ. ದೇಹವು ಸ್ವಲ್ಪ ಬಡಕಲಾಗಿರುತ್ತದೆ. ಗಂಡು ಹುಲಿಯಲ್ಲಿ ಕಿವಿ, ಕುತ್ತಿಗೆ, ಕೊರಳುಸುತ್ತು ಹಾಗೂ ಕೆನ್ನೆಗಳ ಮೇಲೆ ಬೆಳೆದ ಕೇಸರಗಳು ಹೆಣ್ಣಿಗಿಂತ ಹೆಚ್ಚು ಹಾಗೂ ಉದ್ದ ಬೆಳೆದದ್ದನ್ನು ಕಾಣಬಹುದು. ಗಂಡಿನ ಬಂಗಾರವರ್ಣದ ಕಣ್ಣುಗಳು ಹೆಚ್ಚು ಆಕರ್ಷ ಣೀಯವಾಗಿರುತ್ತವೆ. ಹುಲಿಗಳ ಮೈಬಣ್ಣದಲ್ಲಿಯೂ ಈ ಮೊದಲು ಹೇಳಿದಂತೆ ಒಂದು ಪ್ರಾಣಿಯಿಂದ ಮತ್ತೊಂದು ಪ್ರಾಣಿಗೆ ಭೇದ ಕಂಡುಬರುತ್ತದೆ.

ಹುಲಿಮರಿಗಳು ನಾಲ್ಕರಿಂದ ಐದು ವಾರದವುಗಳಾದಾಗ ಹೆಣ್ಣುಹುಲಿ ತನ ಬೇಟೆಯಿಂದ ವಾಪಸ್ಸಾದನಂತರ ಶಿಶುವಿಹಾರದಲ್ಲಿದ್ದ ಮರಿಗಳ ಎದುರಿಗೆ ಉದ್ಗರಿಸುವುದುಂಟು. ಹಾಗೆ ಉದ್ಗೀರ್ಣ ಮಾಡಿದ ವಸ್ತು ತಾನು ತಿಂದು ಅಪೂರ್ಣ ವಾಗಿ ಜೀರ್ಣಿಸಿದ ಮಾಂಸದ ತುಣುಕುಗಳು ಅವು. ಮಾಂಸದ ತುಣುಕು

ಗಳನ್ನು ತಿನ್ನಲು ಮರಿಗಳಿಗೆ ತಾಯಿ ಪ್ರಚೋದಿಸುತ್ತದೆ. ಒಮ್ಮೊಮ್ಮೆ ಮರಿಗಳ ತಂದೆಯೆನಿಸಿಕೊಂಡ ಗಂಡುಹುಲಿಯೂ ಈ ಕಾರ್ಯಕ್ರಮದಲ್ಲಿ ಪಾಲುಗೊಳ್ಳಬಹುದು. ಇದು ಕ್ವಚಿತ್ತಾಗಿ. ಸಾಮಾನ್ಯವಾಗಿ ಗಂಡುಹುಲಿ ಮರಿಗಳ ಮೇಲೆ ಅಷ್ಟೊಂದು ಪ್ರೀತಿಯನ್ನು ತೋರಿಸುವುದಿಲ್ಲ. ಆದರೆ ಪ್ರಸಂಗ ಬಂದಾಗ ಮರಿಗಳನ್ನು ಕೊಂದು ತಿನ್ನಲೂ ಅಥವಾ ಗಂಡುಮರಿಗಳನ್ನು ಕೊಂದು ಬಿಸಾಕಲು ಹೇಸುವುದಿಲ್ಲ. ಆದ್ದರಿಂದ ಹೆಚ್ಚಾಗಿ ತಾಯಿಹುಲಿ ಗಂಡು ಹುಲಿಯನ್ನು ಹತ್ತಿರ ಸೇರಿಸುವುದಿಲ್ಲ. 'ಒಂದು ವೇಳೆ, ಕೆಲವು ಸಮಯದಲ್ಲಿ ಹೆಣ್ಣುಹುಲಿ ಕೊಲ್ಲಲ್ಪಟ್ಟಾಗ ಗಂಡುಹುಲಿ ಮರಿಗಳನ್ನು ತನ್ನ ಆಶ್ರಯದಲ್ಲಿ ಜೋಪಾನ ಮಾಡುತ್ತದೆ' ಎಂದು ಕರ್ನಲ್ ಫ್ರೆಸರ್ ಬರೆದಿದ್ದಾನೆ.

ಹೆಣ್ಣುಹುಲಿಗೆ ನಾಲ್ಕು ನಿಜವಾದ ಮೊಲೆಗಳಿದ್ದು, ಇನ್ನೊಂದು ಇನ್ನೂ ಬೆಳೆದಿರಲಾರದ ಮೊಲೆಯಾಗಿ ತೋರುತ್ತದೆ. ಆದ್ದರಿಂದ ಸಾಮಾನ್ಯವಾಗಿ ಹುಲಿಗಳಿಗೆ ನಾಲ್ಕಕ್ಕಿಂತ ಹೆಚ್ಚು ಮರಿಗಳನ್ನು ಜೋಪಾನ ಮಾಡುವುದು ಸಾಧ್ಯವಾಗುವುದಿಲ್ಲ. ಮರಿಗಳಿದ್ದ ಹೆಣ್ಣುಹುಲಿ ತಾನು ಬೇಟೆಯಾಡುವಾಗ ತನ್ನ ಮೊಲೆಗಳನ್ನು ಬತ್ತಿಸಿಕೊಳ್ಳುತ್ತದೆ. ಏಕೆಂದರೆ ಅದು ಮುಳ್ಳುಕಂಟಿಗಳುಳ್ಳ ಕಾಡಿನಲ್ಲಿ ಬೇಟೆಯಾಡುವಾಗ ಹೊಟ್ಟೆಯ ಹೊರಗೆ ಇಳಿಬಿದ್ದ ಮೊಲೆಗಳಿಗೆ ಅಪಾಯವಾಗುವ ಸಂಭವವಿರುತ್ತದೆ. ಇದು ನಿಸರ್ಗದ ಅಗತ್ಯತೆ.

ಹುಲಿಮರಿಗಳ ಆಟಗಳಲ್ಲಿ ಕಾಣುವ ಮುಖ್ಯ ಮೂಲವಸ್ತು ಎಂದರೆ 'ಅನಿರೀಕ್ಷಿತವಾಗಿ ಹಾರಿಹಿಡಿಯುವುದು'. ಅನೇಕ ಸಾರಿ ಅವು ಹಿಂದಿನಿಂದ ಬಂದು ಒಂದನ್ನೊಂದು ಅನಿರೀಕ್ಷಿತವಾಗಿ ಹಾರಿಹಿಡಿಯುವುದು ಸಹಜ ಪ್ರವೃತ್ತಿಯಿಂದಲೇ ಬಂದ ಸ್ವಭಾವವಾಗಿರುತ್ತದೆ.

ಹುಲಿಮರಿಗಳು ಸುಮಾರು ಆರು ವಾರದವುಗಳಾದಾಗ ಅವುಗಳ ಬೇಬಿ ತಲೆಗಳು ಉದ್ದವಾಗಿ ಬೆಳೆಯಲಾರಂಭಿಸುತ್ತವೆ. ಇದುವರೆಗೆ ತಲೆಯಬದಿಗೆ ಹಾಗೂ ಕಣ್ಣುಗಳ ಮಟ್ಟಕ್ಕೆ ಇದ್ದ ಅಗಲವಾದ ಕಿವಿಗಳು ಈಗ ತಲೆಯ ಮೇಲೆ ಚಿಕ್ಕವಾಗಿ ಹಾಗೂ ಉದ್ದವಾಗಿ ಕಾಣಿಸಿಕೊಳ್ಳುತ್ತವೆ. ಆಗ ಅವುಗಳಲ್ಲಿ ನಿಜವಾದ ಹುಲಿಯ ಆಕಾರ ಹಾಗೂ ರೂಪ ಕಾಣಿಸಿಕೊಳ್ಳುತ್ತದೆ. ಈ ಸಮಯಕ್ಕೆ ಹುಲಿ ಮೊಲೆಯುಣ್ಣಿಸುವುದನ್ನು ಸಂಪೂರ್ಣ ಬಿಡಿಸುತ್ತದೆ.

ಹುಲಿಮರಿಗಳು ಅನೇಕ ಪ್ರಕಾರದ ಕೂಗುಗಳಿಂದ ತಮ್ಮ ಮನೋಭಾವವನ್ನು ಸೂಚಿಸುವುದುಂಟು. ಅವು ಸಂತೋಷದಿಂದ ಇದ್ದಾಗ 'ಪರ್-ಪರ್' ಎಂದು ಪರಗುಟ್ಟುತ್ತವೆ. ತಾಯಿಗೆ ಉತ್ತರಿಸುವಾಗ ಅವು ಉಚ್ಚಸ್ವರದಲ್ಲಿ ಚಿಲಿಪಿಲಿ ಸದ್ದುಮಾಡುತ್ತವೆ. ಅವು ಭಯಪಟ್ಟಾಗ ಧ್ವನಿ ಕರ್ಕಶವಾಗಿ ಪಕ್ಷಿಯ ಶಿಳ್ಳಿನ ಸ್ವರದಂತೆ ಕೇಳಿಬರುತ್ತದೆ. ಅವು ಆಹಾರಕ್ಕೆಂದು ಪೈಪೋಟಿ ನಡೆಸಿದಾಗ ದೀರ್ಘವಾಗಿ 'ಗುರ್-ಗುರ್' ಎಂದು ಗುರುಕಾಯಿಸುತ್ತವೆ ಅಥವಾ ಕಿವಿಗಳನ್ನು ಬಾಗಿಸಿ ಹೆದರಿಸು

ವಂತೆ ಶೀನುತ್ತವೆ. ಈ ರೀತಿ ಬಾಯಿಂದ ಅನೇಕ ವಿಧವಾಗಿ ಶಬ್ದ ಮಾಡಲು ಹಲ್ಲುಗಳು ಸಹಾಯ ಮಾಡುತ್ತವೆ. ಹೆಣ್ಣುಹುಲಿ ಬೇಟೆಗೆಂದು ಹೊರಗೆ ಹೋಗುವಾಗ ಶಿಶು ವಿಹಾರದಲ್ಲಿದ್ದ ಮರಿಗಳಿಗೆ 'ಸ್ಥಳವನ್ನು ಬಿಟ್ಟು ಕದಲದಿರಿ' ಎಂದು ಕಟ್ಟಪ್ಪಣೆ ಮಾಡುವು ದುಂಟು. ಇದಕ್ಕೆ ಪ್ರಾಣಿಗಳಲ್ಲಿಯು ತಮ್ಮ ಭಾವಪ್ರೋಷಣೆ ಸಹಜ ಪ್ರವೃತ್ತಿಯಿಂದ ಒಂದರ ಮನಸ್ಸಿನಲ್ಲಿಯು ಕ್ರಿಯೆ ಬೇರೊಂದು ಮನಸ್ಸಿನ ಮೇಲೆ ಆಗುವ ಶಕ್ತಿಯೇ ಕಾರಣ. ತಾಯಿ ವಾಪಸ್ ಬರುವವರೆಗೆ ತಮ್ಮ ಹೊಂಚಿಕೊಳ್ಳುವ ಸ್ಥಳಬಿಟ್ಟು ಕದಲದೆ ಮರಿಗಳು ಒಂದನ್ನೊಂದು ಅಪ್ಪಿಕೊಂಡು ಮಲಗುವ ರೂಢಿ. ಸಾಮಾನ್ಯವಾಗಿ ಮರಿಗಳ ಮೈಬಣ್ಣ ಸುತ್ತಮುತ್ತಲ ಪ್ರದೇಶದೊಂದಿಗೆ ವಿಲೀನವಾಗಿ ಬೇರೆ ಮಾಂಸ ಭಕ್ಷಕ ಪ್ರಾಣಿಗಳಿಗೂ, ವೈರಿಗಳಿಗೂ ಕಾಣಿಸದಂತೆ ಅಡಗಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಅವುಗಳ ತಾಯಿ ಬರುತ್ತಿದ್ದುದು ಭಾವಪ್ರೇರಣೆಯಿಂದ ಖಚಿತ ವಾದಾಗ ಅಥವಾ ಬಂದಾಗ ಮಾತ್ರ ಹೊರಗೆ ಬರುತ್ತವೆ.

ಹುಲಿಯ ಮರಿಗಳು ಸುಮಾರು ಎಂಟು ವಾರದವುಗಳಾದಾಗ ಅವು ಬಲವಾದ ಭಂಜಗಳನ್ನೂ ಹಾಗೂ ಬಲಿಷ್ಠ ಕಾಲುಗಳನ್ನೂ ಹೊಂದಿರುತ್ತವೆ. ಆಗ ಅವುಗಳ ಚಲನವಲನ ಬಹು ಆಕರ್ಷಕ. ಹುಲ್ಲಿನ ಗಡ್ಡೆಗಳ ಮಧ್ಯೆ ನೆಗೆಯುತ್ತ ಅಡಗಿ ಹುಡುಕುವ ಆಟವಾಡಿದಂತೆ, ಕುಸ್ತಿ ಆಡಿದಂತೆ, ತಮ್ಮ ಮುಂದಿನ ಪಂಜಗಳಿಂದ ಒಂದನ್ನೊಂದು ತಟ್ಟುತ್ತ ತಾವೇ ತಾಯಿಯಿಂದ ಸ್ವಲ್ಪದೂರ ನಡೆದುಹೋಗಲು ಧೈರ್ಯಮಾಡುತ್ತವೆ. ನಂತರ ಪಂಥದ ಓಟದಿಂದ ಹಿಂದಕ್ಕೆ ಹೋಗಿ ತಾಯಿ ಯಿಂದ ತಪ್ಪಿಸಿಕೊಂಡು ಸುತ್ತಲಿದ್ದ ಮೆಳೆಯಲ್ಲಿ ಹೊಕ್ಕು ಅಡಗಿಕೊಳ್ಳುವುದುಂಟು.

ಈ ಸಮಯಕ್ಕೆ ಹೆಣ್ಣುಹುಲಿ ತನ್ನ ಬೇಟೆಯಿಂದ ವಾಪಸ್ ಬರುವಾಗ ಅದೇ ಆಗ ಹುಟ್ಟಿದ ಜಿಂಕೆ ಮರಿಯಾಗಲಿ, ಕಾಡುಹಂದಿಯ ಮರಿಯಾಗಲಿ, ಕಡವೆಯ ಮರಿಯಾಗಲಿ, ಅವುಗಳನ್ನು ಕೊಂದು ಎತ್ತಿಕೊಂಡು ತರು ವುದುಂಟು. ಅದನ್ನು ನರ್ಸರಿಯಲ್ಲಿ ಮರಿಗಳ ಎದುರಿಗೆ ಚೆಲ್ಲಿದಾಗ ಮರಿಗಳಿಗೆ ಅದನ್ನು ಏನು ಮಾಡಬೇಕೆಂಬುದು ಗೊತ್ತಾಗದೆ ತಮ್ಮ ಪಂಜದಿಂದ ಕೆದರಿ, ಅದರ ಮೇಲೆ ಹತ್ತಿ ಜಿಗಿದು ಆಟವಾಡುವುದುಂಟು. ನಂತರ ತಾಯಿಯೇ ಬಂದು ಬೇಟೆ ಯನ್ನು ಹರಿದು ತೆರೆದಾಗ ಮರಿಗಳಿಗೆ ತಿನ್ನಲು ಪ್ರೇರೇಪಿಸಿದಂತಾಗುತ್ತದೆ. ಮರಿಗಳು ಹರಿದು ತಿಂದಾಗ ತಾಜಾ ಮಾಂಸ ಹಾಗೂ ರಕ್ತದ ರುಚಿ ಅವುಗಳನ್ನು ಆಕರ್ಷಿಸುತ್ತದೆ. ಮುಂದೆ ಇಂತಹ ಪ್ರಾಣಿಗಳನ್ನು ತಾವೇ ಮೇಲಿನ ತೊಗಲು ಹರಿದು ತಿನ್ನಲು ಪ್ರಾರಂಭಿಸುತ್ತವೆ. ಮಾಂಸವನ್ನು ಅಗಿದು ತಿನ್ನಲು ತಮ್ಮ ದವಡೆ ಹಲ್ಲುಗಳನ್ನು ಉಪಯೋಗಿಸಿ ಮುಂದಿನ ಹಲ್ಲುಗಳಿಂದ ಮೂಳೆಯಿಂದ ಮಾಂಸ ಬಿಡಿಸಿ ಕೊಳ್ಳಲು ಹಾಗೂ ಹರಿಯಲು ಉಪಯೋಗಿಸಿಕೊಳ್ಳುತ್ತವೆ. ನಾಲಿಗೆಯಿಂದಲೂ ಮೂಳೆಯಿಂದ ಮಾಂಸ ಬಿಡಿಸಿಕೊಳ್ಳಲೂ ಹಾಗೂ ಮೂಳೆ ನೆಕ್ಕಲೂ ಉಪಯೋಗ ವಾಗುತ್ತದೆ.

ಮರಿಗಳ ಸುಮಾರು ಹತ್ತುವಾರದ ವಯಸ್ಸಿಗೆ ಹೆಣ್ಣುಹುಲಿ ಚಿಕ್ಕಪ್ರಾಣಿಗಳನ್ನು ಹಾಗೂ ನವಿಲು, ಕಾಡುಕೋಳಿಗಳನ್ನು ಅಂಗಹೀನ ಮಾಡಿ, ಅವು ಓಡಿ ತಪ್ಪಿಸಿಕೊಳ್ಳದಂತೆ ಅಥವಾ ಹಾರಿಹೋಗದಂತೆ ಕಾಲು ಮುರಿದಾಗಲಿ ಅಥವಾ ಪಕ್ಕಗಳನ್ನು ಕಿತ್ತಾಗಲಿ ತಂದು ಮರಿಗಳ ಎದುರಿಗೆ ಚೆಲ್ಲುವುದುಂಟು. ಮರಿಗಳು ಅವುಗಳನ್ನು ಕೊಲ್ಲದೆ ತಿನ್ನಲು ಪ್ರಾರಂಭಿಸಬಹುದು; ಇಲ್ಲವೆ ಕೊಲ್ಲುವುದು ಗೊತ್ತಾಗದೆ ಅವುಗಳನ್ನು ಆಕಡೆ ಈಕಡೆ ಎಳೆದು, ಪೀಡಿಸಿ, ಉಗುರುಗಳಿಂದ ಹರಿದು ತಿನ್ನಬಹುದು. ನಂತರ ತಾಯಿ ಬಂದು ಅದನ್ನು ಹೇಗೆ ಕೊಲ್ಲಬೇಕೆಂಬ ತರಬೇತು ಕೊಡುವುದುಂಟು. ತಾಯಿ ಒದಗಿಸಲ್ಪಟ್ಟ ಮುಂದಿನ ಅಂಗಹೀನ ಪ್ರಾಣಿಗಳನ್ನಾಗಲಿ ಅಥವಾ ಪಕ್ಷಿಗಳನ್ನಾಗಲಿ ಮರಿಗಳೇ ಕೊಂದು ತಿಂದಾಗ ಪ್ರಾಣಿಗಳ ಬಿಸಿರಕ್ತದ ರುಚಿ ಮರಿಗಳಲ್ಲಿ ಒಂದು ರೀತಿಯ ತೀಕ್ಷ್ಣತೆಯನ್ನುಂಟು ಮಾಡುತ್ತದೆ. ಮರಿಗಳು ರಕ್ತದಿಂದ ಕೂಡಿದ ಮಾಂಸವನ್ನು ತಿನ್ನುವುದರಿಂದ ಅವುಗಳ ಮಲವಿಸರ್ಜನೆ ಕಪ್ಪು ಬಣ್ಣದ್ದಾಗಿ ಕಂಡುಬರುತ್ತದೆ. ಈ ವೇಳೆಗೆ ಹೆಣ್ಣುಹುಲಿಯ ಮೊಲೆಗಳು ಬತ್ತಿದಂತಾಗಿ ಸಣ್ಣವಾಗುತ್ತವೆ. ತಾಯಿ ಮೊಲೆಯಲ್ಲಿ ಹಾಲು ಇರದಿದ್ದರೂ ಮರಿಗಳಿಗೆ ಆಶೆಯಾದಾಗ ನೆಮ್ಮದಿಗೋಸ್ಕರ ಮೊಲೆ ಚೀಪುವುದುಂಟು. ಆಗ ತಾಯಿಗೆ ನೋವಾಗುವುದರಿಂದ 'ಉರ್‍-ಉರ್‍' ಎಂದು ಗರ್ಜಿಸಿ ಅವುಗಳಿಂದ ಬಿಡಿಸುತ್ತಿರುತ್ತದೆ.

ಹನ್ನೆರಡು ವಾರದ ವಯಸ್ಸಿಗೆ ಹುಲಿಮರಿಗಳು ತೀವ್ರಗತಿಯಲ್ಲಿ ನಡೆಯುವುದು ಹಾಗೂ ಸುಲಭವಾಗಿ ಜಿಗಿಯುವುದನ್ನು ಕಲಿಯುತ್ತವೆ. ಈ ವಯಸ್ಸಿಗೆ ಅವು ಮೂಗಿನಿಂದ ಬಾಲದ ತುದಿಯವರೆಗೆ 3½ಯಿಂದ 4 ಅಡಿ ಉದ್ದ ಬೆಳೆದಿರುತ್ತವೆ. ಮೈಕಟ್ಟು ದುಂಡಗೆ ಹಾಗೂ ದಪ್ಪನಾಗಿ ಕಂಡುಬರುತ್ತದೆ. ತಮ್ಮ ತಾಯಿಯ ಸಂಗಡ ಶಿಶುವಿಹಾರದ ಹೊರಗೆ ಅಲೆದಾಡುವುದೆಂದರೆ ಅವುಗಳಿಗೆ ತುಂಬ ಇಷ್ಟ. ಮರಿಗಳ ಚಿಕ್ಕ ವಯಸ್ಸಿನಲ್ಲಿ ಒಂದು ನರ್ಸರಿಯಿಂದ ಮತ್ತೊಂದು ನರ್ಸರಿಗೆ ಬದಲಾಯಿಸುವಾಗ ತಾಯಿ ತನ್ನ ಬಾಯಿಂದ ಅವುಗಳ ಕುತ್ತಿಗೆಯನ್ನು ನೋವಾಗದಂತೆ ಕಚ್ಚಿ ಬೆಕ್ಕಿನಂತೆ ಎತ್ತಿಕೊಂಡು ಹೋಗುತ್ತದೆ. ಆದರೆ ಈ ವಯಸ್ಸಿನಲ್ಲಿ ಮರಿಗಳನ್ನು ನಡೆಸಿಕೊಂಡೇ ಹೆಣ್ಣುಹುಲಿ ನರ್ಸರಿಯಿಂದ ನರ್ಸರಿಗೆ ಬದಲಾಯಿಸುತ್ತಿರುತ್ತದೆ. ಶಿಶುವಿಹಾರದ ಸುತ್ತಮುತ್ತಲಿನ ಪ್ರದೇಶದಲ್ಲಿ ಆಗಾಗ ಮರಿಗಳೊಂದಿಗೆ ತಾಯಿ ಬೇಟೆಯಾಡುವುದುಂಟು. ಚಿಕ್ಕಪುಟ್ಟ ಬಲಿಗಳನ್ನು ಹಿಡಿದು ಅಂಗಹೀನಮಾಡಿ ಅವುಗಳನ್ನು ಕೊಂದುತಿನ್ನಲು ಮರಿಗಳಿಗೆ ಒಪ್ಪಿಸುತ್ತದೆ. ಮರಿಗಳಿಗೆ ನೀರು ಕುಡಿಯುವುದನ್ನು ಕಲಿಸುವುದು ತಾಯಿ ಕೊಡುವ ತರಬೇತುಗಳಲ್ಲಿ ಮತ್ತೊಂದು ಮುಖ್ಯವಾದ ಘಟಕ. ಹುಲಿ ಹಾಗೂ ಹುಲಿಮರಿಗಳಿಗೆ ನೀರಾಟವೆಂದರೆ ಹೆಚ್ಚು ಮೋಜು.

ಹೆಣ್ಣುಹುಲಿ ವಿಶ್ರಾಂತಿ ಪಡೆಯುತ್ತಿರುವಾಗ ಮರಿಗಳು ಆಗಾಗ ತಾಯಿಯನ್ನು ಬಿಟ್ಟು ಸುತ್ತಲೂ ಅಲೆದಾಡುತ್ತ ಹೋಗಬಹುದು. ಇಲಿ, ಮೊಲ, ಇಣಚಿ ಮುಂತಾದ ಚಿಕ್ಕ ಪ್ರಾಣಿಗಳು ಹಾಗೂ ಪಕ್ಷಿಗಳು ಕಂಡಾಗ ಅವುಗಳನ್ನು ಅವಿತು ಹಾರಿ ಹಿಡಿಯಲು

ಪ್ರಯತ್ನಿಸುತ್ತವೆ. ಅವು ಸಿಗದೇ ಇದ್ದಾಗ ದಾರಿಯಲ್ಲಿದ್ದ ಸಗಣಿಯಲ್ಲಿ ಕಂಡುಬರುವ ದುಂಬಿಹುಳಗಳನ್ನು ಆರಿಸಿ ತಿನ್ನಬಹುದು. ಮರಿಗಳು ಸುತ್ತಲೂ ಅಲೆದಾಡುವಾಗ ವಿಷಯುಕ್ತ ಹಾವುಗಳಿಂದಾಗಲಿ ಹಾಗೂ ಇನ್ನಿತರ ವೈರಿಗಳಿಂದಾಗಲಿ ಅನಿರೀಕ್ಷಿತ ಅಪಾಯಗಳಿಂದ ಪಾರುಮಾಡುವ ಶಕ್ತಿಯನ್ನು ತಾಯಿ ತನ್ನ ಸಹಜ ಪ್ರವೃತ್ತಿಯಿಂದ ಪಡೆಯುತ್ತದೆ.

ಹುಲಿಮರಿಗಳು ಎರಡು ವರ್ಷದವುಗಳಾಗುವವರೆಗೆ ಬೇಟೆಯಲ್ಲಿ ತರಬೇತು ಕೊಟ್ಟು ಚಿಕ್ಕಪುಟ್ಟ ಪ್ರಾಣಿಗಳನ್ನು ತಾವೇ ಕೊಂದು ತಿನ್ನುವ ಪ್ರಾವೀಣ್ಯತೆ ಮರಿಗಳಲ್ಲಿ ಬರುವವರೆಗೆ ತಾಯಿ ಸತತವಾಗಿ ಅವಲೋಕಿಸುತ್ತದೆ. ಕೇವಲ ಪ್ರಾಣಿಗಳನ್ನು ಕೊಲ್ಲುವುದು ಹುಲಿಮರಿಗಳಿಗೆ ತಮ್ಮ ಜೀವನದಲ್ಲಿ ಕಲಿಯುವಂಥ ಒಂದು ಅತಿ ಚಿಕ್ಕ ಅಂಶವಾಗಿದೆ. ಆದರೆ ಬೇಟೆ ಪ್ರಾಣಿಗಳನ್ನು ಕೊಲ್ಲುವ ಮೊದಲು ಅವುಗಳನ್ನು ಕಂಡುಹಿಡಿಯುವುದು, ಗುರುತಿಸುವುದು, ಸದ್ದುಮಾಡದೆ ಕಾಣಿಸಿಕೊಳ್ಳದಂತೆ ಸಮೀಪಿಸುವುದು, ತಕ್ಷಣ ಆಕ್ರಮಣಮಾಡಿ ನೆಲಕ್ಕುರುಳಿಸುವುದು ಇವೆಲ್ಲ ಕೊಲ್ಲುವುದಕ್ಕಿಂತ ಮೊದಲು ಕಲಿಯಬೇಕಾದ ಅತಿ ಮುಖ್ಯ ಬೇಟೆಯ ಪಾಠಗಳು. ಈ ಪಾಠಗಳನ್ನೆಲ್ಲ ಚಿಕ್ಕಮರಿಗಳು ತಮ್ಮೊಳಗೆ ಹಾಗೂ ಸೈರಣೆಯುಳ್ಳ ತಮ್ಮ ತಾಯಿಯ ಸಂಗಡ ಹೆಚ್ಚಿನ ಸಮಯ ಚಿನ್ನಾಟವಾಡಿ, ನಂತರ ಕಟ್ಟಿಗೆಯ ತುಂಡುಗಳು, ಬಿದ್ದ ಎಲೆಗಳು, ಸಣ್ಣಸಣ್ಣ ಕಲ್ಲುಗಳು ಹಾಗೂ ಶಿಶುವಿಹಾರದ ಸಾನ್ನಿಧ್ಯದಲ್ಲಿ ಸಿಗುವಂತಹ ಬೇರೆ ಬೇರೆ ವಸ್ತುಗಳ ಸಂಗಡ, ಕೊನೆಗೆ ತಾಯಿ ಕೊಂದ ಪ್ರಾಣಿಗಳ ದೇಹದ ಸಂಗಡ ಆಟವಾಡುತ್ತ ಬೇಟೆಯ ಪಾಠ ಕಲಿಯುತ್ತವೆ. ಅನೇಕಸಾರಿ ಮರಿಗಳ ಮೊದಲಿನ ಕೆಲವು ಪ್ರಯತ್ನಗಳು ವಿಕಾರವಾಗಿದ್ದು ಅಷ್ಟೊಂದು ಪ್ರಯೋಜನಕಾರಿಯಾಗಿರದೆ ತಾಯಿಯೇ ಕೊಲ್ಲಬೇಕಾಗುತ್ತದೆ. ಹುಲಿಮರಿಗಳು ಸಂಪೂರ್ಣ ಬೆಳೆದು ದೊಡ್ಡವಾಗಿದ್ದರೂ ಅನೇಕ ಪ್ರಸಂಗಗಳಲ್ಲಿ ಅವುಗಳಲ್ಲಿ ಸಾಕಷ್ಟು ಬೇಟೆಯಾಡುವ ಅನುಭವ ಇಲ್ಲದಾಗ ಕಾಡುಹಂದಿ ಅಥವಾ ಮುಳ್ಳುಹಂದಿಗಳಿಂದ ಕೊಲ್ಲಲ್ಪಡುತ್ತವೆ. ಕ್ಷೀಣವಿದ್ದ ಮರಿಗಳು ತಮ್ಮ ಬಳಗದ ಗುಂಪಿನೊಂದಿಗೆ ಜೀವಿಸಲು ಅಸಮರ್ಥವಾಗಿ ಕೂಡಲೇ ಸತ್ತುಹೋಗುತ್ತವೆ. ಕೆಲವು ಮರಿಗಳು ಕಾಡುನಾಯಿ, ತೋಳ, ಕತ್ತೆಕಿರುಬ ಹಾಗೂ ಮೊಸಳೆಗಳಿಗೆ ತುತ್ತಾಗುತ್ತವೆ; ಹಾಗೂ ದನಗಳ ಗುಂಪುಗಳಿಂದ ತಿವಿದಾಗಲಿ, ತುಳಿದಾಗಲಿ ಕೊಲ್ಲಲ್ಪಡುತ್ತವೆ. ಇನ್ನೂ ಕೆಲವು ಮರಿಗಳನ್ನು ಗಂಡುಹುಲಿಗಳು ಕೊಂದು ತಿನ್ನುತ್ತವೆ. ಕಾಡಿನಲ್ಲಿ ಹುಟ್ಟಿಬೆಳೆದ ಮರಿಗಳ ಪೈಕಿ ಶೇಕಡಾ 50ರಷ್ಟು ಮಾತ್ರ ದೊಡ್ಡವಾಗಿ ಪ್ರೌಢಾವಸ್ಥೆಗೆ ತಲುಪುತ್ತವೆ.

ಈ ತರಬೇತಿಯ ಸಮಯ ಪ್ರತಿಯೊಂದು ಹುಲಿಮರಿಯ ಜೀವನದಲ್ಲಿ ಹೆಚ್ಚು ಆಪತ್ತಿನ ಹಾಗೂ ಅತಿ ಪ್ರಾಮುಖ್ಯವಾದ ವಿಷಯ, ಏಕೆಂದರೆ ತಾಯಿ ತನಲ್ಲಿ ಯಾವ ಸ್ವಭಾವಗಳು ಅಭ್ಯಾಸವಾಗಿರುತ್ತವೆಯೋ ಅವುಗಳನ್ನೇ ತನ್ನ ಮರಿಗಳಿಗೂ ಬೋಧಿಸುತ್ತದೆ. ಹೆಣ್ಣುಹುಲಿ ದನಗಳನ್ನು ಕೊಂದು ತಿನ್ನುವಂತಹ ಪ್ರಾಣಿಯಾಗಿದ್ದರೆ ಅದರ ಮರಿಗಳೂ ದನಗಳನ್ನು ಬೆನ್ನಟ್ಟಿ ಕೊಲ್ಲುವುದರಲ್ಲಿ ತರಬೇತಿ ಪಡೆಯುತ್ತವೆ. ಆದ್ದ

ರಿಂದಲೇ ಕೆಲವು ಪ್ರದೇಶಗಳಲ್ಲಿ ವಿಶೇಷವಾಗಿ ಹುಲಿಗಳು ದನಗಳನ್ನು ಕೊಳ್ಳೆಹೊಡೆದು ತಿನ್ನುವಂತಹ ಪ್ರಾಣಿಗಳಾಗಿರುತ್ತವೆ. ಒಮ್ಮೆ ಸುಲಭವಾಗಿ ಸಿಕ್ಕುವಂತಹ ದನಗಳನ್ನು ಕೊಂದು ತಿನ್ನುವ ಅಭ್ಯಾಸವನ್ನು ಹುಲಿ ತನ್ನಲ್ಲಿ ಅಳವಡಿಸಿಕೊಂಡರೆ ಕಾಡುಪ್ರಾಣಿಗಳನ್ನು ಹಿಡಿದು ಕೊಲ್ಲುವ ಪ್ರಯತ್ನ ಮಾಡುವುದಿಲ್ಲ. ಅದೇ ಪ್ರಕಾರ ಹೆಣ್ಣುಹುಲಿ ನರಭಕ್ಷಕ ವಾಗಿದ್ದರೆ ಅದರ ಮರಿಗಳೂ ಮನುಷ್ಯರನ್ನು ಕೊಂದು ತಿನ್ನುವುದರಲ್ಲಿ ತರಬೇತಿ ಪಡೆದು, ಅದರಿಂದ ಸಂಪಾದಿಸಿದ ಸ್ವಭಾವ ಹಾಗೂ ರುಚಿಯಿಂದ ಅವು ನರಹತ್ಯ ಹಾಗೂ ನರಭಕ್ಷಕ ಹುಲಿಗಳಾಗಿ ಬೆಳೆದದ್ದು ಅನೇಕ ಪ್ರದೇಶಗಳಲ್ಲಿ ಕಂಡುಬಂದಿದೆ. ಈ ರೀತಿ ಅತಿ ಸುಲಭವಾಗಿ ಕೊಂದು ತಿಂದ ಮನುಷ್ಯನ ರಕ್ತ ಹಾಗೂ ಮಾಂಸದ ರುಚಿಗೆ ಮಾರುಹೋದ ಹುಲಿ ಪುನಃ ದನಗಳನ್ನಾಗಲಿ, ಕಾಡುಪ್ರಾಣಿಗಳನ್ನಾಗಲಿ ಕೊಲ್ಲುವ ಗೋಜಿಗೆ ಹೋಗುವುದೇ ಇಲ್ಲ.

ಹೆಣ್ಣುಹುಲಿಯನ್ನು ತನ್ನ ಮರಿಗಳೊಂದಿಗೆ ಇದ್ದ ಸ್ಥಾನ (ನರ್ಸರಿ)ದಲ್ಲಿ ತೊಂದರೆ ಗೀಡುಮಾಡಿದರೆ ಅದರಂತಹ ಉಗ್ರ ಹಾಗೂ ಅಪಾಯಕಾರಿ ಪ್ರಾಣಿ ಭೂಮಿಯ ಮೇಲೆ ಬೇರೊಂದು ಇರಲಾರದು. ಅದರಂತೆ ಗಾಯಗೊಳಿಸಿದ ಅಥವಾ ಗಾಯಗೊಂಡ ಹೆಣ್ಣು ಅಥವಾ ಗಂಡು ಹುಲಿಗಳು ಎಲ್ಲಿಯೇ ಇರಲಿ, ಯಾವ ಸಮಯವೇ ಇರಲಿ, ಅಷ್ಟೇ ಅಪಾಯಕಾರಿಯಾಗಿರುತ್ತವೆ.

ಹೆಣ್ಣುಹುಲಿ ತನ್ನ ಮರಿಗಳು ಆರುತಿಂಗಳ ವಯಸ್ಸಿನವಾದನಂತರ ಬೇಟೆಗೆಂದು ಸಂಗಡ ಕರೆದುಕೊಂಡು ಕಾಡಿನ ತನ್ನ ಬೀಟಿನಲ್ಲಿ ಅಲೆದಾಡುವುದುಂಟು. ಈ ಸಮಯಕ್ಕೆ ನಿಶ್ಚಿತವಾದ ಶಿಶುವಿಹಾರ ಎಂಬುದು ಇರದೆ ತಾಯಿ ಹೋದಲ್ಲೆಲ್ಲ ಮರಿಗಳನ್ನು ಕರೆದೊಯ್ದು ಪರಿಶ್ರಮ ಪೂರ್ವಕವಾಗಿ ಎಲ್ಲ ವಿವಿಧ ಬೇಟೆಯಲ್ಲಿ ತರಬೇತು ಕೊಡು ತ್ತದೆ. ಮರಿಗಳು ಕಲಿಸಿದ್ದನ್ನೆಲ್ಲ ತಾಯಿ ಎದುರಿಗೆ ಮಾಡಿ ತೋರಿಸಿ ಅದರಿಂದ ಶಾಭಾಶ್ ಪಡೆಯುವುದುಂಟು. 'ತಾಯಿ ಒಳ್ಳೆಯವಳಾಗಿದ್ದರೆ ಮಕ್ಕಳೂ ಒಳ್ಳೆ ತಂದೆ-ತಾಯಿಗಳಾಗುತ್ತಾರೆಂದು' ನಮ್ಮ ಹಿರಿಯರು ಹೇಳುವುದಿಲ್ಲವೆ? ತರಬೇತಿ ಪಡೆದ ಮರಿಗಳು ಸ್ವಾತಂತ್ರ್ಯಜೀವನದ ಮೊದಲು ಗುಣಗಳನ್ನು ತೋರಿಸಲಾರಂಭಿ ಸುತ್ತವೆ. ದೇಹದ ಮೇಲಿನ ಉದ್ದವಾದ 'ಬೇಬಿ ಕೂದಲು' ಉದುರಿ ಗಿಡ್ಡ ಹಾಗೂ ನುಣುಪಾದ ಕೂದಲು ಹೊಂದಾಗಿ ನಿಬಿಡವಾಗಿ ಬೆಳೆದಿರುತ್ತದೆ. ಅತಿ ಸುಂದರವಾದ ಕಂದುಬಣ್ಣದ ಹಿನ್ನೆಲೆಯಲ್ಲಿ ಕಪ್ಪುಬಣ್ಣದ ಪಟ್ಟೆಗಳು ಸ್ಪಷ್ಟವಾಗಿ ಕಾಣಿಸಿಕೊಳ್ಳು ತ್ತವೆ. ದೇಹ ಸದೃಢ ಹಾಗೂ ಶಕ್ತಿದಾಯಕವಾಗಿದ್ದು ನೀಳವಾಗಿದ್ದ ಮೂಗು ಅಗಲ ವಾಗಿ ಗುಲಾಬಿ ಬಣ್ಣದ ರೇಷ್ಮೆಯಂತೆಯೂ ಕಾಣಿಸಿಕೊಳ್ಳುತ್ತದೆ.

ಹೆಣ್ಣುಹುಲಿ ತನ್ನ ಮರಿಗಳನ್ನು ಸಾಕಿಸಲಹಿ ಪೋಷಣೆಮಾಡುವು ದೆಂದರೆ ಸಾಮಾನ್ಯ ಜವಾಬ್ದಾರಿಯ ಕರ್ತವ್ಯವೇನಲ್ಲ. ಮರಿಗಳನ್ನು ಹೆತ್ತನಂತರ

ಅವುಗಳ ಸಂರಕ್ಷಣೆ, ಪೋಷಣೆ, ಆರೋಗ್ಯರಕ್ಷಣೆ, ತಾಯಿಯ ವಾತ್ಸಲ್ಯ, ಬೇಟೆಯಲ್ಲಿ ತರಬೇತು ಮುಂತಾದ ವಿಷಯಗಳಲ್ಲಿ ಕಾಳಜಿಪೂರ್ವಕವಾಗಿ ಬೆಳೆಸುವುದೆಂದರೆ ಹೆಣ್ಣು ಹುಲಿಗೆ ಅಸಾಮಾನ್ಯ ಶಕ್ತಿ ಹಾಗೂ ದೃಢಮನಸ್ಸು ಬೇಕಾಗುತ್ತದೆ. ನಿಸರ್ಗದ ಕಾನೂನು ಬಹು ಕಟುವಾಗಿದ್ದು ಹುಲಿಗಳು ಚಿಕ್ಕಂದಿನಿಂದಲೇ ಕಷ್ಟದ ಜೀವನ ಸಾಗಿಸುವುದನ್ನು ಕಲಿಯಬೇಕಾಗುತ್ತದೆ. ಹುಲಿಮರಿಗಳ ಜೀವನದಲ್ಲಿ ಅತಿಕಷ್ಟದ ಸಮಯವೆಂದರೆ ಅವು ಪರಿಣಾಮಕಾರಿಯಾಗಿ ಬೇಟೆಯಾಡಿ ಕೊಲ್ಲುವುದನ್ನು ಕಲಿಯುವುದು; ವಿವಿಧ ಕಾರಣಾಂತರದಿಂದ ತಾಯಿಯಿಂದ ಬೇರ್ಪಡಿಸಲ್ಪಟ್ಟಾಗ ಅರ್ಧಮರ್ಧ ಸ್ವಾತಂತ್ರ್ಯದಿಂದ ಸಂಪೂರ್ಣ ಸ್ವಾತಂತ್ರ್ಯ ಹೊಂದುವ ಸಮಯ ಬಹಳ ವಿಪತ್ತಿನದು. ಸಾಮಾನ್ಯವಾಗಿ ಹುಲಿಮರಿಗಳು ಎರಡು ವರ್ಷದವಿದ್ದಾಗ ತಾಯಿಂದ ಬೇರೆಯಾಗುತ್ತವೆ.

ಹುಲಿಮರಿಗಳು ಹುಟ್ಟಿದಾಗ ಬಹಳ ಚಿಕ್ಕವಿದ್ದರೂ ಎಂಥ ಅಸಹಾಯಕ ಸ್ಥಿತಿಯಲ್ಲಿಯೂ ಬಹಳ ತೀವ್ರವಾಗಿ ಬೆಳೆಯುತ್ತವೆ. ಆರು ತಿಂಗಳ ವಯಸ್ಸಿಗೆ ಅವು 'ಬುಲ್‌ಟೆರಿಯರ್' ನಾಯಿಯಷ್ಟಿದ್ದು ಒಂದು ವರ್ಷಕ್ಕೆ ಚಿರತೆಯಷ್ಟು ಬೆಳೆದು ದೊಡ್ಡವಾಗುತ್ತವೆ. ಎರಡು ವರ್ಷಕ್ಕೆ ಹೆಚ್ಚುಕಡಮೆ ತಾಯಿಯಷ್ಟು ಎತ್ತರ ಬೆಳೆದರೂ ಮೂರು ವರ್ಷಕ್ಕೆ ಅವು ಸಂಪೂರ್ಣ ಬೆಳೆದು ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಸ್ಥಿತಿಯಲ್ಲಿದ್ದು ದೊಡ್ಡಪ್ರಾಣಿಗಳನ್ನು ಕೊಲ್ಲುವ ಶಕ್ತಿಯನ್ನು ಪಡೆಯುತ್ತವೆ.

ಕಾಡಿನಲ್ಲಿ ಮರಿಗಳು ಬದುಕಿ ಜೀವಿಸಿದರೆ ಹೆಣ್ಣುಹುಲಿ ಸಾಮಾನ್ಯವಾಗಿ ಎರಡರಿಂದ ಎರಡೂವರೆ ವರ್ಷಗಳಿಗೊಮ್ಮೆ ಮರಿಹಾಕುತ್ತದೆ. ಪರಿಸ್ಥಿತಿ ಅನುಕೂಲವಾಗಿದ್ದು ಲೆಕ್ಕಾಚಾರವಾಗಿ ಪ್ರತಿಯೊಂದು ಸೂಲಿನಿಂದ ಸಾಮಾನ್ಯವಾಗಿ ಎರಡು ಮರಿಗಳು ಬೆಳೆದು ದೊಡ್ಡವಾದಾಗ ಒಂದು ಹೆಣ್ಣುಹುಲಿ ವರ್ಷಕ್ಕೆ ಸುಮಾರು ಒಂದು ಮರಿಯನ್ನು ಪೋಷಿಸಿ ಬೆಳಸಿದಂತಾಗುತ್ತದೆ. ಮೃಗಾಲಯದಲ್ಲಿ ಹೆಚ್ಚೆಂದರೆ ಸುಮಾರು ಇಪ್ಪತ್ತು ವರ್ಷಗಳವರೆಗೆ ಹುಲಿ ಜೀವಿಸಬಲ್ಲದು. ಈ ವಯಸ್ಸಿಗಿಂತ ಹೆಚ್ಚುಕಾಲ ಕಾಡಿನಲ್ಲಿಯ ಹುಲಿಗಳು ಬದುಕಲಾರವು. ಕಾಡಿನಲ್ಲಿಯ ಹೆಣ್ಣುಹುಲಿ ತನ್ನ ನಾಲ್ಕನೇ ವಯಸ್ಸಿನಲ್ಲಿ ಮೊದಲನೆಯ ಸೂಲಿನ ಮರಿಗಳನ್ನು ಹಾಕಿ ಸಾಮಾನ್ಯವಾಗಿ ವರ್ಷಕ್ಕೆ ಒಂದರಂತೆ ಮರಿಗಳನ್ನು ಬೆಳಸಿದರೆ ಅದು ಸಾಯುವುದರೊಳಗೆ ತನ್ನ ಜೀವನದ ಹದಿನೆಂಟನೆಯ ವಯಸ್ಸಿಗೆ ಹದಿನಾಲ್ಕು ಪ್ರಾಣಿಗಳನ್ನು ಬೆಳೆಸಬಹುದು. ಹುಲಿಯ ಉತ್ಪತ್ತಿಯ ಈ ಸಾಧ್ಯತೆಯನ್ನು ನಿಜವಾಗಿ ಅತ್ಯಂತ ಅನುಕೂಲವಾದ ಪರಿಸ್ಥಿತಿಗಳಲ್ಲಿ ಮಾತ್ರ ಪಡೆಯಬಹುದು. ನಮ್ಮ ಭಾರತದಲ್ಲಿಯ ಈಗಿದ್ದ ಪರಿಸ್ಥಿತಿಗನುಗುಣವಾಗಿ ಇಂದು ಒಂದು ಹೆಣ್ಣುಹುಲಿ ತನ್ನ ಜೀವಮಾನದಲ್ಲಿ ಮೇಲಿನ ಸಂಖ್ಯೆಯ ಅರ್ಧದಷ್ಟು ಮರಿಗಳನ್ನು ಬೆಳೆಸಿದರೆ ಅದು ಸರ್ವಸಾಧಾರಣಕ್ಕಿಂತ ಮಿಗಿಲೆನ್ನಬಹುದು.

ಆದರೆ ಸೆರೆವಾಸದಲ್ಲಿಯ ಹೆಣ್ಣುಹುಲಿ ಸುಲಭವಾಗಿ ಗರ್ಭಧಾರಣಹೊಂದಿ ಮೇಲಿಂದ ಮೇಲೆ ಮರಿಗಳನ್ನು ಹಾಕುತ್ತದೆಂಬ, ಮರಿಗಳನ್ನು ಹುಟ್ಟಿದ ಕೆಲವೇ

ದಿನಗಳಲ್ಲಿ ತಾಯಿಯಿಂದ ಬೇರ್ಪಡಿಸಿದರೆ ಹೆಣ್ಣುಹುಲಿ ವರ್ಷದಲ್ಲಿ 3 ತಳಿಗಳಿಗೆ ಜನ್ಮವಿತ್ತ ದಾಖಲೆ ಇದೆ. ಸೆರೆವಾಸದಲ್ಲಿಯ ಹುಲಿಗೆ ಆಹಾರಕ್ಕೆಂದು ಬೇಟೆಯಾಡುವ ಜವಾಬ್ದಾರಿ ಹಾಗೂ ತವಕ ಇರದೆ ಇನ್ನಿತರ ಮಾಂಸಭಕ್ಷಕ ಪ್ರಾಣಿಗಳಿಂದ, ವೈರಿಗಳಿಂದ ಅಪಾಯವಿಲ್ಲದಿರುವುದೇ ಇದಕ್ಕೆ ಮುಖ್ಯ ಕಾರಣವೆಂದು ಹೇಳಬಹುದು.

ಹುಲಿಮರಿಗಳು ಬೆಳೆದು ಒಂದು ವರ್ಷದವುಗಳಾದಾಗ ಅವುಗಳ ಕಿವಿಗಳ ಒಳಭಾಗದಲ್ಲಿ ಹಾಗೂ ಅಂಚಿನಲ್ಲಿ ಬಿಳಿಕೂದಲುಗಳು ಉದ್ದವಾಗಿ ಬೆಳೆದಿರುತ್ತವೆ. ಅವು ಈಗ ಅರ್ಧ ಸ್ವಾತಂತ್ರ್ಯ ಹಾಗೂ ಯೌವನಾವಸ್ಥೆಯನ್ನು ಹೊಂದಿದ್ದು ತಾಯಿಗಿಂತ ಸ್ವಲ್ಪ ಚಿಕ್ಕವಾಗಿರುತ್ತವೆ. ಅವುಗಳ ತೂಕ ಸುಮಾರು ಒಂದು ನೂರು ಕಿಲೋಗ್ರಾಮ್ ಇರಬಹುದು. ಗಂಡುಮರಿಗಳು ಹೆಣ್ಣುಮರಿಗಳಿಗಿಂತ ಹೆಚ್ಚು ದೊಡ್ಡವಿರುತ್ತವೆ. ಆಗಾಗ ತಾವೇ ಹೋಗಿ ಸಣ್ಣಪುಟ್ಟ ಪ್ರಾಣಿಗಳನ್ನು ಕೊಲ್ಲುವ ಸಾಮರ್ಥ್ಯ ಹೊಂದಿರುತ್ತವೆ. ಕೆಲವು ವೇಳೆ ಗಂಡುಮರಿಗಳು ತಮ್ಮ ತಾಯಿಂದ ಬೇರೆ ಹೋಗಿ ಸ್ವತಂತ್ರವಾಗಿ ನವಿಲು, ಕಾಡುಕುರಿ, ಜಿಂಕೆಗಳ ಮರಿಗಳ ಮೇಲೆ ಬೇಟೆಯಾಡಿ ಜೀವಿಸುವುದುಂಟು. ಈ ವಯಸ್ಸಿಗೆ ಅವು ಆರರಿಂದ ಏಳು ಅಡಿ ಉದ್ದ ಬೆಳೆದಿರುತ್ತವೆ. ತಮ್ಮ ತಾಯಿಗೆ ಬೇಟೆ ಪ್ರಾಣಿಗಳನ್ನು ಕಂಡುಹಿಡಿಯುವಲ್ಲಿ, ಆಕ್ರಮಣಮಾಡಿ ಕೊಲ್ಲುವುದರಲ್ಲಿ ನೆರವಾಗುತ್ತವೆ. ತಮ್ಮ ಸಹಜ ಪ್ರವೃತ್ತಿಯಿಂದ ಕೆಲವು ಒರಟಾದ ತೊಗಟೆಯುಳ್ಳ ಮರಗಳ ಹತ್ತಿರ ಹೋಗಿ ತಮ್ಮ ಪಂಜಗಳ ಉಗುರುಗಳಿಂದ ಸಮಾಧಾನವಾಗುವವರೆಗೆ ಮರಿಗಳು ಪರಚುತ್ತವೆ. ಹುಲಿಗಳಿರುವ ಕಾಡಿನಲ್ಲಿ ಕೆಲವು ಮರಗಳ ತೊಗಟೆಯಲ್ಲಿ ಆಳವಾಗಿ ಪರಚಿದ ಗುರುತುಗಳು ಮೂಡಿರುವುದು ಅಲ್ಲಲ್ಲಿ ಕಂಡುಬರುತ್ತವೆ. ಹೀಗೆ ಮಸೆಯುವುದರಿಂದ ಉಗುರು ಹರಿತಗೊಳಿಸುವುದಲ್ಲದೆ ಸ್ನಾಯುಗಳನ್ನು ವಿಸ್ತಾರ ಮಾಡಿಕೊಳ್ಳುತ್ತವೆ.

ಎರಡು ವರ್ಷದವುಗಳಾದಾಗ ಮರಿಗಳ ಬೆಳವಣಿಗೆ ಪೂರ್ಣಗೊಂಡು ಹೆಚ್ಚುಕಡಮೆ ತಮ್ಮ ತಾಯಿಯಷ್ಟು ಎತ್ತರ ಬೆಳೆದು ದೊಡ್ಡವಾಗುತ್ತವೆ. ಅವು ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಿರುತ್ತವೆ. ತಾಯಿಯಿಂದ ಬೇರೆ ಹೋಗಿ ತಮ್ಮ ಬೇಟೆಯನ್ನು ಕಂಡುಹಿಡಿದು ಆಕ್ರಮಣಮಾಡಿ ಕೊಂದು ತಿನ್ನುವ ಸಾಮರ್ಥ್ಯವನ್ನು ಹೊಂದಿರುತ್ತವೆ. ತಾಯಿ ತನ್ನ ಮರಿಗಳೊಂದಿಗೆ ಸಂಬಂಧ ಮುರಿಯುವ ಮೊದಲು ಸುತ್ತಮುತ್ತಲಿನ ಪ್ರದೇಶವನ್ನು ಅವುಗಳ ಭಾವೀ ಬೇಟೆ ಮೈದಾನವೆಂದು ಪರಿಚಯ ಮಾಡಿಕೊಡುತ್ತದೆ. ಕೊನೆಕೊನೆಗೆ ತಾಯಿ ತನ್ನ ಮರಿಗಳನ್ನು ಬಹು ಒರಟಾಗಿ ಹಿಂಸಿಸಿ, ಅನೇಕಸಾರೆ ಸಿಟ್ಟಿನಿಂದ ಅವುಗಳ ಮೇಲೆ ಎರಗಿ ಬೀಳುವುದುಂಟು. ಇದು ಬಹುಶಃ ಕಾಡಿನ ಕಟುವಾದ ನಿಯಮಗಳಿಗೆ ಹೊಂದಿಕೊಂಡು ತಮ್ಮನ್ನು ತಾವು ಕಾಪಾಡಿಕೊಳ್ಳುವುದನ್ನು ಕಲಿಯತಕ್ಕದ್ದೆಂದು ಮರಿಗಳಿಗೆ ಇನ್ನೊಂದು ರೀತಿಯ ತರಬೇತು ಇರಬೇಕು. ಮೇಲಾಗಿ ತನ್ನ ಮರಿಗಳನ್ನು ಪ್ರೀತಿಸುವುದಕ್ಕಾಗಲಿ, ಹಿಂಸಿಸುವುದಕ್ಕಾಗಲಿ ತಾಯಿಯೊಂದಕ್ಕೇ ಅಧಿಕಾರವಲ್ಲವೆ? 'ಶಿಕ್ಷಿಸುವ ಅಧಿಕಾರ ಪ್ರೀತಿ

ಸುವವರದು ಮಾತ್ರ' ಎಂದು ಹಿರಿಯರು ಹೇಳುವುದಿಲ್ಲವೆ? ಇದು ಕಾಡಿನ ಪ್ರಾಣಿವರ್ಗಕ್ಕೂ ಅನ್ವಯಿಸುತ್ತದೆಂದು ಹೇಳಬಹುದು. ತಾಯಿ ಹುಲಿ ಮೃದು ಸ್ವಭಾವ ಗುಣಗಳನ್ನು ಹೊಂದಿದ್ದರೂ 'ಬೆತ್ತವನ್ನು ಬದಿಗಿರಿಸಿ ಮರಿಯನ್ನು ಹಾಳು ಮಾಡುವ' ತತ್ವದಲ್ಲಿ ಅದಕ್ಕೆ ನಂಬಿಕೆ ಇಲ್ಲ.

ಈಗ ಅವು ಮರಿಗಳೆನಿಸದೆ ಯೌವನದ ಹೊಸ್ತಿಲಲ್ಲಿ ಕಾಲಿಡುತ್ತಿರುವುದನ್ನು ಕಂಡ ತಾಯಿಹುಲಿಗೆ ತುಂಬಾ ಹರ್ಷವಾಗುವುದುಂಟು. ಗಂಡುಮರಿಗಳು ಹೆಣ್ಣುಮರಿಗಳಿಗಿಂತ ದಪ್ಪ ಹಾಗೂ ಎತ್ತರವಿದ್ದು ಗಂಡಿನ ಕುತ್ತಿಗೆ ಹಾಗೂ ತಲೆ ದಪ್ಪ ಕಾಣಿಸುತ್ತದೆ. ಅವು ಪ್ರಾಯದ ಹುಲಿಗಳಂತೆ ಗಾಂಭೀರ್ಯ ಹಾಗೂ ಗೌರವ ಹೊಂದಿದಾಗ್ಯೂ ಸಣ್ಣಮರಿಗಳಂತೆ ಇನ್ನೂ ತಮ್ಮ ಪುಕ್ಕಲುತನದಿಂದ ಕುತೂಹಲಕಾರಕ ಭಾವಗಳನ್ನು ತುಂಟತನದಿಂದ ಪ್ರದರ್ಶಿಸುತ್ತವೆ. ಯೌವನಾವಸ್ಥೆಯಲ್ಲಿ ಹುಲಿಗಳ ತೂಕ 150ರಿಂದ 175 ಕಿಲೋಗ್ರಾಮಿನಷ್ಟಿರುತ್ತದೆ. ಆಗ ಅವುಗಳ ಎಲ್ಲ ಸ್ಥಿರಹಲ್ಲು ಹಾಗೂ ಕೋರೆಹಲ್ಲುಗಳು ಬೆಳೆದು ಬಿರುಸಾಗಿ ಚೂಪಾಗಿರುತ್ತವೆ.

ಅಧ್ಯಾಯ 9

ಕೆಲವು ಹೆಚ್ಚಿನ ಸಂಗತಿಗಳು

ಹುಲಿಯ ವಿಶೇಷ ಉಪಯೋಗಗಳು

ಹುಲಿಯ ಅನೇಕ ಭಾಗಗಳ ಮಹತ್ವ ಹೆಚ್ಚು ಪ್ರಮಾಣದಲ್ಲಿ ಬಹಿರಂಗವಾಗಿಲ್ಲ ಅನೇಕ ಜನರು ಅಂಧವಿಶ್ವಾಸದಿಂದ ಇವುಗಳನ್ನು ಔಷಧೋಪಚಾರಗಳಲ್ಲಿ ಹೆಚ್ಚು ಉಪಯೋಗ ಮಾಡುತ್ತಾರೆ. ಮಲಾಯಾ ಹಾಗೂ ಚೀನ ಜನರಲ್ಲಿ ಈ ಮೂಢನಂಬಿಕೆಹೆಚ್ಚು ಬೆಳೆದದ್ದು ಕಂಡುಬರುತ್ತದೆ. ಹುಲಿಯ ಮಾಂಸ ನಿಃಶಕ್ತಿಯನ್ನು ಹೋಗಲಾಡಿಸುವಲ್ಲಿ, ಕಣ್ಣುಗುಡ್ಡೆಗಳಿಂದ ತಯಾರಿಸಿದ ಮಾತ್ರೆಗಳು ಬಾಲಗ್ರಹ ಹಾಗೂ ಅಂಧತೆಗಳನ್ನು ಗುಣಪಡಿಸುವಲ್ಲಿ ಉಪಯೋಗಿಸಲ್ಪಡುತ್ತವೆ. ಸುಟ್ಟ ಅಥವಾ ಕರಿದ ಹುಲಿ ಚರ್ಮವನ್ನು ನೀರಲ್ಲಿ ಮಿಶ್ರಣಮಾಡಿ ಕುಡಿಸಿದಾಗ ಮನುಷ್ಯನ ಸಾಮಾನ್ಯ ರೋಗ ರುಜಿನಗಳನ್ನು ಗುಣಪಡಿಸುತ್ತದೆ. ಹುಲಿಗಳ ಜನನೇಂದ್ರಿಯ ಭಾಗಗಳು ಕಾಮೋತ್ತೇಜಕ ಗುಣಗಳನ್ನು ಹೊಂದಿರುತ್ತವೆಂದು ಹೇಳಲ್ಪಟ್ಟಿದೆ. ಮೂಳೆಗಳು (ಮುಖ್ಯವಾಗಿ ತಲೆಯ ಬುರುಡೆಗೆ ಸಂಬಂಧಪಟ್ಟ) ಚೀನದ ಜನರಿಂದ ಬಹುಬೆಲೆ ಕಟ್ಟಲ್ಪಡುತ್ತವೆ. ಏಕೆಂದರೆ ಮನುಷ್ಯರಂತೆ ಅವು ಆತ್ಮವಸ್ತು ಅಥವಾ ಜೀವನಕ್ಕೆ ಅಗತ್ಯವಾದ ದ್ರವವನ್ನು ಹೊಂದಿರುತ್ತವೆಂದು ಹೇಳುತ್ತಾರೆ. ಹುಲಿಯ ಕೊಬ್ಬು ಸಂಧಿವಾತಕ್ಕೆ ರಾಮಬಾಣ. ಭುಜದೊಳಗೆ ಇದ್ದ ಅದೃಷ್ಟ ಮೂಳೆಗಳು, ಮೀಸೆಗಳು, ಉಗುರುಗಳು ಬಂಗಾರದಲ್ಲಿ ಕೂಡ್ರಿಸಿದಾಗ ಒಳ್ಳೆಯ ಆಭರಣಗಳಂತೆ ಉಪಯೋಗವಾಗಿ ಅದೃಷ್ಟ, ಪ್ರಣಯದಲ್ಲಿ ಮೋಹಗೊಳಿಸುವ ಶಕ್ತಿ ಇರುತ್ತದೆಂದು ನಂಬಿಕೆ. ಅದರ ಯಕೃತ್ತು ಹೆಚ್ಚು ರುಚಿಕರವಿದ್ದು ಧೈರ್ಯವನ್ನು ಸಂಪಾದಿಸಿಕೊಡುತ್ತದೆ. ಹುಲಿಯ ಹಾಲು ಕಣ್ಣುಬೇನೆಗೆ ಅತಿ ಉಪಯುಕ್ತ. ಹುಲಿಯ ಚರ್ಮ ಅತಿ ಹೆಚ್ಚು ಬೆಲೆಬಾಳುವಂತಹ ಭಾಗವಾಗಿದ್ದು, ಜನರು ಅತಿ ಆಶೆಪಟ್ಟು ಹೆಚ್ಚಾಗಿ ಚರ್ಮದ ಸಲುವಾಗಿ ಹುಲಿಗಳನ್ನು ಬೇಟೆಯಾಡಿ ಕೊಲ್ಲುತ್ತಾರೆ. ಇದನ್ನು ಹೆಚ್ಚಾಗಿ ಅಲಂಕಾರಕ್ಕೆಂದು ಉಪಯೋಗಿಸುವುದೇ ಜಾಸ್ತಿ.

ಹದಗೊಳಿಸಿದ ಹುಲಿ ಚರ್ಮ ಹಾಗೂ ಚರ್ಮದಿಂದ ತಯಾರಿಸಿದ ಅನೇಕ ಅಲಂಕಾರಿಕ ವಸ್ತುಗಳನ್ನು ಹೆಚ್ಚಾಗಿ ಗೃಹ ಅಲಂಕಾರಕ್ಕಾಗಿ ಉಪಯೋಗಿಸುತ್ತಾರೆ. ಅವುಗಳಲ್ಲಿ ಗೋಡೆಗೆ ನೇತುಹಾಕಲು ಚರ್ಮ, ಶೋಭೆಗೆ ಇರಿಸಿದ ತುಂಬಿದ ಪೂರ್ಣ ಹುಲಿ ದೇಹ, ಮೇಜು ಹಾಗೂ ಸ್ಟೂಲ್ ಆಸನಗಳು ಇತ್ಯಾದಿಗಳು ಸೇರಿವೆ. ಇವುಗಳನ್ನು ಬಂಗಲೆ ಹಾಗೂ ಕಛೇರಿಗಳಲ್ಲಿ ಉಪಯೋಗಿಸುವುದೆಂದರೆ ಅನೇಕರಿಗೆ ಹೆಮ್ಮೆ. ಭಾರತದ ಹಿಂದಿನ ಪ್ರತಿಯೊಬ್ಬ ರಾಜಮಹಾರಾಜ, ದಿವಾನ, ರಾಯಭಾರಿಗಳಿಗೆ ತಮ್ಮ ಭಾರೀ ಬಂಗಲೆಗಳಲ್ಲಿ ಹುಲಿಗಳ ಚರ್ಮ ಹಾಗೂ ಚರ್ಮಗಳಿಂದ ತಯಾರಿಸಿದ

ಅಲಂಕಾರಿಕ ವಸ್ತುಗಳನ್ನು ಇಡುವುದು ಪ್ರತಿಷ್ಠೆಯು ಹಾಗೂ ಶೌರ್ಯದ ಸಂಕೇತವೂ ಆಗಿತ್ತು. ಈಗಲೂ ಸಮಾಜದ ಅನೇಕ ಮಹಾವ್ಯಕ್ತಿಗಳು ಹಾಗೂ ಸಭ್ಯಗೃಹಸ್ಥರು ಕಾಳಸಂತೆಯಲ್ಲಿ ಯಥೇಚ್ಛ ಹಣಕೊಟ್ಟು ಇವುಗಳನ್ನು ಕೊಂಡು ತಂದು ಬಂಗಲೆ ಗಳನ್ನು ಅಲಂಕರಿಸುವುದನ್ನು ಕಾಣಬಹುದಾಗಿದೆ.

ಚರ್ಮ ಸುಲಿದನಂತರ ದೇಹದ ಉಳಿದ ಭಾಗವನ್ನು ಬಿಸಾಡದೆ ಬಾಲ, ಕಾಲು, ದೇಹಗಳನ್ನು ಸಣ್ಣ ತುಂಡುಗಳಾಗಿ ಕತ್ತರಿಸಿ ಗುಡ್ಡಗಾಡು ಜನರು ಹಂಚಿಕೊಳ್ಳುತ್ತಾರೆ. ಮಾಂಸದ ಹಾಗೂ ಮೂಳೆಯ ತುಂಡುಗಳ ಸರಗಳನ್ನು ಮಾಡಿಸಿ ಸಣ್ಣಮಕ್ಕಳ ಕೊರಳಲ್ಲಿ ಹಾಕುತ್ತಾರೆ. ಹುಲಿಯ ದೇಹದ ಯಾವುದಾದರೂ ಒಂದು ತುಂಡನ್ನು ಮೈಮೇಲೆ ಧರಿಸಿದರೆ ಒಂದು ರೀತಿಯ ಮಾಟಮಾಡಿಸಿದ ಪರಿಣಾಮದಂತೆ ಕಾಡು ಪ್ರಾಣಿಗಳ ಬಗ್ಗೆ ಧೈರ್ಯ ಹಾಗೂ ಅವುಗಳ ಆಕ್ರಮಣದಿಂದ ರಕ್ಷಣೆ ಧರಿಸಿದವರಿಗೆ ದೊರೆಯುತ್ತದೆಂಬ ಬಲವಾದ ನಂಬಿಕೆ. ಕಾಡಿನ ಹಳ್ಳಿಗಳ ಜನರಲ್ಲಿ ಬೇರೂರಿದೆ.

ಸತ್ತ ಹುಲಿಯಿಂದ ಪೂರ್ಣ ಆಕಾರದ ಹುಲಿಮಾದರಿಯನ್ನು ತಯಾರಿಸುವು ದಾದರೆ ಮುಂದಿನ ಕಾಲುಗಳ ಸಂಪೂರ್ಣ ಮೂಳೆಗಳ ಅವಶ್ಯಕತೆ ಇದೆ. ಹುಲಿಯ ಬಾಲದ ತುದಿಯ ಕೂದಲುಗಳನ್ನು ಅಲಂಕಾರಕ್ಕಾಗಿ ಆಭರಣಗಳಲ್ಲಿ ಉಪಯೋಗಿಸು ತ್ತಾರೆ.

ಹುಲಿಗಳ ಅಳತೆಮಾಡುವಿಕೆ ಹಾಗೂ ಗಾತ್ರ

ಕೊಂದ ಹುಲಿ ಹಾಗೂ ಚಿರತೆಯ ಉದ್ದವನ್ನು ಒಂದು ಸರಳರೇಖೆಯಲ್ಲಿ ಬಾಲದ ತಂದಿಯಿಂದ ಮೂಗಿನ ತುದಿಯವರೆಗಿನ ಅಳತೆ ಮಾಡಲ್ಪಡುತ್ತದೆ. ಅಳತೆ ಮಾಡು ವಾಗ ಪ್ರಾಣಿಯನ್ನು ಅದರ ಬೆನ್ನಮೇಲೆ ಆರಾಮಾಗಿ ವಿಶ್ರಮಿಸುವ ಸ್ಥಿತಿಯಲ್ಲಿ ಮಲಗಿಸಿ ಅದರ ಗದ್ದವನ್ನು ಹಿಂದಕ್ಕೆ ಎಳೆದು ಮೂಗು ನೆಲಕ್ಕೆ ಮುಟ್ಟುವಂತೆ ಮಾಡ ಬೇಕು. ಹುಲಿಯ ಅಳತೆಯಲ್ಲಿ ದೇಹದ ಉದ್ದ, ಬಾಲದ ಉದ್ದ ಬಾಲಸಹಿತ ಒಟ್ಟು ಉದ್ದ, ಭುಜದ ಹಿಂದಿನ ಭಾಗದ ದೇಹದ ಸುತ್ತಳತೆ, ಮುಂದಿನ ಭುಜದ ಎತ್ತರ ಹಾಗೂ ತೂಕಗಳು ಸೇರಿರುತ್ತವೆ.

ಪ್ರಾಣಿಗಳ ಎತ್ತರ ಭುಜದಿಂದ ಕಾಲಿನ ಪಾದದವರೆಗಿನ ಅಳತೆ, ಮುಂದಿನ ಎರಡೂ ಕಾಲು ಸೇರಿಸಿ ನಿಲ್ಲಿಸಿದ ದೇಹಸ್ಥಿತಿಯಲ್ಲಿ ಪ್ರಾಣಿಯ ಅಳತೆ ತೆಗೆದುಕೊಳ್ಳ ಬೇಕು.

ಹುಲಿಯ ಆಕಾರದ ಬಗ್ಗೆ ಅನೇಕ ಶಿಕಾರಿಗಳು ಬಗೆಬಗೆಯಾಗಿ ಅಭಿಪ್ರಾಯ ಪಟ್ಟಿದ್ದಾರೆ. ಕೆಲವು ವರ್ಷಗಳ ಹಿಂದೆ ಕಂಸ್ವರ ಸಾಹೇಬ ಎಂಬುವನು 16 ಅಡಿ ಉದ್ದಳತೆಯ ಹುಲಿಯನ್ನು ಕೊಂದ ಸುದ್ದಿ ಪ್ರಕಟವಾಗಿತ್ತು. ಮೈಸೂರು ಸಂಸ್ಥಾನದ ಹೈದರಅಲಿ ಅರ್ಕಾಟದ ನವಾಬನಿಗೆ 18 ಅಡಿ ಉದ್ದದ ಹುಲಿಯ ಚರ್ಮವನ್ನು ಉಡುಗೊರೆಯಾಗಿ ಕೊಟ್ಟ ಸಂಗತಿ ಇತಿಹಾಸದಲ್ಲಿದೆ. ಕ್ಯಾಂಪ್‌ಬೆಲ್ ಸಾಹೇಬರಿಗೆ

20 ಅಡಿ ಉದ್ದ ಹುಲಿಯ ಕಥೆಯನ್ನು ಹೇಳಿದ ಉಲ್ಲೇಖವೂ ಇದೆ. ಕ್ರಿ.ಶ. 1944 ಆಗಸ್ಟ್ 2ನೇ ತಾರೀಖಿನ ಅಮೃತ ಬಝಾರ ಪತ್ರಿಕೆಯಲ್ಲಿ 18 ಅಡಿ ಉದ್ದದ ಹುಲಿಯನ್ನು ಗುಂಡಿಕ್ಕಿ ಕೊಂದ ಸಮಾಚಾರ ಪ್ರಕಟಣೆಯಾಗಿತ್ತು.

ಹೆಚ್ಚಾಗಿ 12 ಅಡಿ ಉದ್ದದ ಹುಲಿ ಚರ್ಮವನ್ನು ನಾವೆಲ್ಲರೂ ಕೇಳಿದ್ದೇವೆ. ಇದು ಸಾಮಾನ್ಯವಾಗಿ ಹಸಿ ಚರ್ಮವನ್ನು ಹೀಚಿ ಎಳೆದು ಒಣಗಿಸಿದಾಗ ಅಳತೆ ಮಾಡಿದ್ದಾಗಿರುತ್ತದೆ. ಅನೇಕ ಬಾರಿ ಶಿಕಾರಿಗಳು ಕೊಂದ ಹುಲಿಗಳ ಬಗ್ಗೆ ಹೆಚ್ಚಾಗಿ ನಿಜವಾಗಿರುವುದಕ್ಕಿಂತಲೂ ಜಾಸ್ತಿ ಅಳತೆ ತೋರಿಸಿ ಪತ್ರಿಕೆಗಳಲ್ಲಿ ಪ್ರಚಾರ ಪಡೆಯುವುದುಂಟು. ಕ್ರಿ.ಶ. 1932ರ ಮಾರ್ಚಿಯಲ್ಲಿ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಅಮೆರಿಕದ ಕರ್ನಲ್‌ವಾಹ 11 ಅಡಿ ಉದ್ದ, 4 ಅಡಿ ಎತ್ತರ ಹಾಗೂ 1,000 ಪೌಂಡ್ ತೂಕದ ಹುಲಿಯನ್ನು ಕೊಂದುದಾಗಿ ಹೇಳಿಕೆಯಿತ್ತುದು ಪ್ರಕಟವಾಗಿದೆ.

ನೂರು ವರ್ಷಗಳಿಂದೀಚಿನ ಶಿಕಾರ ಸಾಹಿತ್ಯವನ್ನು ಪರೀಕ್ಷಿಸಿದಾಗ 11 ಅಡಿಗಿಂತ ಹೆಚ್ಚು ಉದ್ದದ ಹುಲಿಗಳನ್ನು ಅನೇಕ ಜನರು ಕೊಂದುದುಂಟು. ಬಿಹಾರದ ಪೂರ್ಣಿಯ ಜಿಲ್ಲೆಯಲ್ಲಿ ಶಿಲ್ಲಿಂಗ ಫೋರ್ಡ ತನ್ನ ಸಂಬಂಧಿಕರು ಹಾಗೂ ಸಂಗಡಿಗರೊಂದಿಗೆ ಹದಿಮೂರು ವರ್ಷಗಳಲ್ಲಿ (ಕ್ರಿ.ಶ. 1865ರಿಂದ 1878) 170ಕ್ಕಿಂತಲೂ ಹೆಚ್ಚು ಹುಲಿಗಳನ್ನು ಕೊಂದಿದ್ದಾನೆ. ಅವುಗಳಲ್ಲಿ ದೊಡ್ಡದು ಎಂದರೆ 11 ಅಡಿ, 5 ಅಂಗುಲ. ಅದೇ ಕುಟುಂಬದ ಇನ್ನೊಬ್ಬ ಶಿಲ್ಲಿಂಗ ಫೋರ್ಡ, ಅದಕ್ಕೂ ಮೊದಲು ಕ್ರಿ.ಶ. 1849ರಲ್ಲಿ ಅದೇ ಜಿಲ್ಲೆಯಲ್ಲಿ 12 ಅಡಿ 4 ಅಂಗುಲ ಅಳತೆಯ ಹುಲಿಯನ್ನು ಕೊಂದಿದ್ದನು. ಕಾಸಿಮ್ ಬಝಾರದಲ್ಲಿ ವಿಲಿಯಮ್ಸನ್ 13 ಅಡಿ ಉದ್ದ ಹಾಗೂ4 ಅಡಿ ಎತ್ತರವಿದ್ದ ಹುಲಿಯನ್ನು ಕೊಂದಿದ್ದನು. ಕುಮಾಂವೂ ಪ್ರದೇಶದಲ್ಲಿ(ಉ.ಪ.) ಸರ್ ಹೆನ್ರಿ ರಾಮ್ಸೆ ಹಾಗೂ ಆವುಂಧದಲ್ಲಿ ಕರ್ನಲ್ ಬೆಯಲ್ (1861) 12 ಅಡಿ ಉದ್ದದ ಹಲವು ಹುಲಿಗಳನ್ನು ಕೊಂದಿದ್ದರು. ಮಧ್ಯಪ್ರದೇಶದಲ್ಲಿ ಕ್ರಿ.ಶ. 1850ರಿಂದ 1854ರವರೆಗೆ ಕ್ಯಾಪ್ಟನ್ ರೈಸ್ ಕೊಂದ 68 ಹುಲಿಗಳ ಪೈಕಿ ಅತಿ ದೊಡ್ಡದೆಂದರೆ 12 ಅಡಿ $7\frac{1}{2}$ ಅಂಗುಲ ಉದ್ದವಾಗಿತ್ತು. ಗೋರಖಪುರದಲ್ಲಿ ಕೊಂದ ಹುಲಿ 11 ಅಡಿ ಉದ್ದ ಹಾಗೂ 4 ಅಡಿ 10 ಅಂಗುಲ ಎತ್ತರವಿದ್ದಿತು.

ಹಿಂದಿನ ಕಾಲದಲ್ಲಿ ಕೊಂದ ಹುಲಿಗಳ ದೇಹಗಳನ್ನು ಅಳತೆಮಾಡದೆ ಚರ್ಮವನ್ನು ಅಳತೆಮಾಡುವ ರೂಢಿಯಿತ್ತು. ಮಾಸಿಕ ಪತ್ರಿಕೆಯೊಂದರಲ್ಲಿ ಒಬ್ಬ ಶಿಕಾರಿ 10 ಅಡಿ 6 ಅಂಗುಲ ಉದ್ದವುಳ್ಳ ಚರ್ಮವನ್ನು 12 ಅಡಿ ಅಳೆಯುವಂತೆ ಹೇಗೆ ಮಾಡುವುದು ಎಂಬ ವಿಧಾನವನ್ನು ವಿವರಿಸಿದ್ದ. ಅದೇ ಆಗ ಸುಲಿದ ಚರ್ಮವನ್ನು ಹೀಚುವುದರಿಂದ ಎರಡರಿಂದ ಮೂರು ಅಡಿಗಳವರೆಗೆ ಹೆಚ್ಚಿಸಬಹುದು. ಆದ್ದರಿಂದ 12 ಅಡಿ ಉದ್ದವೆಂದು ಹೇಳುವ ಹುಲಿಗಳೆಲ್ಲ 10 ಅಡಿಯವುಗಳಾಗಿರಬಾರದೇಕೆ?

ರೋಲ್ಯಾಂಡ್ ವಾರ್ಡ್ ಎಂಬುವವನು ಅತಿ ದೊಡ್ಡ ಹುಲಿಗಳ ವಿವರ ಕೊಟ್ಟಿದ್ದಾನೆ. ಗ್ವಾಲಿಯರ್‌ದಲ್ಲಿ ಹಾರ್ಡಿಂಗ್ ಕೊಂದ ಹುಲಿ 11ಅಡಿ $5\frac{1}{2}$ ಅಂಗುಲ ಅಳತೆಯುದಾ

ಗಿತ್ತು. ಅದರ ಚರ್ಮ 11ಅಡಿ 4ಅಂಗುಲ ಉದ್ದವಾಗಿತ್ತು. ಇನ್ನೊಂದು ಹುಲಿ ಸುಮಾರು 11 ಅಡಿ 5 ಅಂಗುಲ ಉದ್ದವಾಗಿದ್ದರೆ ಅದರ ಚರ್ಮ 11ಅಡಿ 7 ಅಂಗುಲ ಉದ್ದವಾಗಿತ್ತು. ನೇಪಾಳದಲ್ಲಿ ಜನರಲ್ ಸರ್ ಕೇಸರ್ ಶಮಶೇರ್ ಜಂಗ್ ಕೊಂದ ಹುಲಿಯು 11 ಅಡಿ ಉದ್ದವಾಗಿದ್ದರೆ ಅದರ ಚರ್ಮ 12 ಅಡಿ ಉದ್ದವಾಗಿತ್ತು. ಸಿನ್ನಾಡಾದ ದಾತಿಯಾ ಮಹಾರಾಜ 11 ಅಡಿ ಉದ್ದದ ಹುಲಿ ಕೊಂದಿದ್ದನು. ಅದರ ಚರ್ಮದ ಉದ್ದ 11ಅಡಿ 6 ಅಂಗುಲ ಆಗಿತ್ತು.

ಮೇಲೆ ತಿಳಿಸಿದ ಚರ್ಮಗಳ ಅಂಕಿಗಳ ಬಗ್ಗೆ ಯಾವುದೇ ಸಂಶಯಕ್ಕೆ ಎಡೆ ಇಲ್ಲ. ಆದರೆ ಹುಲಿಗಳ ಬಗ್ಗೆ ಅಂಕಿಗಳನ್ನು ನೀಡಿದ್ದು ಸ್ವಲ್ಪ ಕಾವ್ಯಾತ್ಮಕ ವರ್ಣನೆಯಾಗಿರಲಿಕ್ಕೆ ಸಾಕು. ರೋಲ್ಯಾಂಡ್ ವಾರ್ಡನೇ ಸ್ವತಃ ಖುದ್ದಾಗಿ ಚರ್ಮಗಳ ಬಗ್ಗೆ ಅಭ್ಯಸಿಸಿದಾಗ ಈ ಅಂಕಿಗಳು ನಂಬಲರ್ಹವೇ ಎಂಬ ಸಂಶಯವನ್ನು ವ್ಯಕ್ತಪಡಿಸಿದ್ದನು. ಹತ್ತು ಹುಲಿಗಳ ಸರಾಸರಿ ಉದ್ದಳತೆ 10 ಅಡಿ 5½ ಅಂಗುಲ ಇದ್ದಾಗ ಅವುಗಳ ಚರ್ಮಗಳ ಸರಾಸರಿ ಉದ್ದಳತೆ 11 ಅಡಿ 8 ಅಂಗುಲದಷ್ಟು ಇದ್ದದ್ದು ಕಂಡುಬಂದಿದೆ. ಅಂದರೆ ಈ ಮಟ್ಟದಲ್ಲಿ ಮೇಲಿನ ಚರ್ಮಗಳ ಉದ್ದಳತೆಯ ಸರಾಸರಿ ತೆಗೆದಾಗ ಹುಲಿಗಳ ಸರಾಸರಿ ಉದ್ದ 10 ಅಡಿ 6 ಅಂಗುಲಕ್ಕಿಂತ ಜಾಸ್ತಿ ಇರಲಿಕ್ಕಿಲ್ಲ ಅನ್ನಿಸುತ್ತದೆ. ಲಾರ್ಡ್ ಮೇಯೋ ಎಂಬ ವಾಯಿಸರಾಯನು ಪೂರ್ಣಿಯಾದಲ್ಲಿ 11 ಅಡಿ ಉದ್ದಳತೆಯ ಹುಲಿಯನ್ನು ಕೊಂದಿದ್ದನು. ವಾಯಿಸ್‌ರಾಯರ ಸಲುವಾಗಿ ಮೀಸಲಾಗಿಟ್ಟ ಹುಲಿಗಳು ಸಾಮಾನ್ಯವಾಗಿ ದೊಡ್ಡವಿರುತ್ತಿದ್ದವು. ಅವುಗಳನ್ನು ಅಳತೆ ಮಾಡಿದಾಗ ಇನ್ನೂ ದೊಡ್ಡವಾಗುವ ಸಾಧ್ಯತೆಯನ್ನು ಪಡೆದಿದ್ದವು. ಗ್ವಾಲಿಯರ ಸಿಂಧೆ ಮಹಾರಾಜನೇ ಖುದ್ದಾಗಿ 800 ಹುಲಿಗಳನ್ನು ಕೊಂದಿದ್ದನು. ಅವನು 1400 ಬೇಟೆಗಳಲ್ಲಿ ಹಾಜರಿದ್ದನು. ಆದರೆ ಅವುಗಳಲ್ಲೊಂದೂ 11 ಅಡಿ 6 ಅಂಗುಲ ಉದ್ದವಿರಲಿಲ್ಲ. ಬಹುಶಃ ಅತಿಉದ್ದ ಹುಲಿಗಳು ಲಾರ್ಡ್ ಹಾರ್ಡಿಂಗ್ ಮತ್ತು ಲಾರ್ಡ್ ರೀಡಿಂಗ್‌ರ ಆಗಮನದ ದಾರಿಯನ್ನೇ ಕಾಯುತ್ತಿದ್ದವೇನೋ?

ಹುಲಿಗಳನ್ನು ಅಳತೆ ಮಾಡುವ ಹಳೆಯ ಪದ್ಧತಿಯೆಂದರೆ ಮೂಗಿನ ತುದಿಯಿಂದ ಪ್ರಾರಂಭಿಸಿ ತಲೆಬುರುಡೆ, ಬೆನ್ನು, ಮುಖಾಂತರ ಬಾಲದ ತುದಿಯವರೆಗೆ ಟೇಪನ್ನು ಹಿಡಿಯುವುದು. ಸ್ವಾಭಾವಿಕವಾಗಿ ಈ ರೀತಿ ಸುತ್ತಳತೆ ತೆಗೆಯುವಾಗ ಕಾಲ್ಪನಿಕ ಅಳತೆಯಾಟಕ್ಕೆ ಸಾಧ್ಯತೆ ಇತ್ತು. ರೋಲ್ಯಾಂಡ್ ವಾರ್ಡನ ರೀತಿಯ ಪ್ರಕಾರ ಹುಲಿ ಅಳತೆ ಮಾಡುವ ವಿಧಾನವೆಂದರೆ, ಹುಲಿಯನ್ನು ನೇರವಾಗಿ ಭೂಮಿಯ ಮೇಲೆ ಅಂಗಾತ ಮಲಗಿಸಿ ಮೂಗಿನ ತುದಿ ಹಾಗೂ ಬಾಲದ ತುದಿಗಳ ಅಂಚಿನಲ್ಲಿ ಗೂಟಗಳನ್ನು ನೆಡಬೇಕು. ಎರಡೂ ಗೂಟಗಳ ನಡುವಿನ ಅಂತರವನ್ನು ಅಳೆಯುವುದು. ಈ ರೀತಿ ಗೂಟಗಳ ಸಹಾಯದಿಂದ ಅಳೆದ ಲೆಕ್ಕ ಸುತ್ತಳತೆ ರೀತಿಯಲ್ಲಿ ಮಾಡಿದ ಲೆಕ್ಕಕ್ಕಿಂತ 1 ಅಡಿಗೆ ¾ ಅಂಗುಲದಷ್ಟು ಕಡಮೆ ಬರುತ್ತದೆ. ಸುತ್ತಾಗಿ ಅಳೆದು 10 ಅಡಿ ಇದೆ ಎಂದು ಘೋಷಿಸಿದ ಹುಲಿ ಗೂಟಗಳ ಸಹಾಯದಿಂದ ಅಳೆದಾಗ ಅದು 9 ಅಡಿ 5 ಅಂಗುಲಕ್ಕಿಂತ ಕಡಮೆ ಇರುತ್ತದೆ.

ಸರ್ ಜೋಸೆಫ್ ಫರ್ರೇರಾ, ಡಾ॥ ಗೋರ್ಡಾನ್ ಮತ್ತು ಸ್ಯಾಂಡರ್ಸನ್ ಇವರ ಶಬ್ದಗಳಲ್ಲಿ ಹೇಳುವುದಾದರೆ 10 ಅಡಿ ಉದ್ದಳತೆಯ ಹುಲಿಯೆಂದರೆ ಅದೇ ಅತಿ ದೊಡ್ಡದು. ಸರ್ ಜಾನ್ ಹಾಗೂ ಅವನ ಪರಿವಾರದವರು 247 ಹುಲಿಗಳನ್ನು ಕೊಂದ ಪೈಕಿ, ಅತಿ ದೊಡ್ಡ ಹುಲಿಯೆಂದರೆ 10 ಅಡಿ 5½ ಅಂಗುಲ. ಉದ್ದಳತೆಯುಳ್ಳದ್ದು. ಅತಿ ಭಾರದ (9 ಅಡಿ 7½ ಅಂಗುಲ)ಗಂಡು ಹುಲಿಯೆಂದರೆ 570 ಪೌಂಡು ತೂಕ ಇದ್ದು ಅತಿ ಭಾರದ ಹೆಣ್ಣು ಹುಲಿಯ ತೂಕ 347 ಪೌಂಡುಗಳು. ಬೇಕರ್ ಎಂಬುವನು ಅಸ್ಸಾಮ ಹಾಗೂ ಬಂಗಾಲದ ಕಾಡುಗಳಲ್ಲಿ ನೂರಾರು ಹುಲಿಗಳನ್ನು ಕೊಂದಿದ್ದರ ಪೈಕಿ ಅತಿ ದೊಡ್ಡವೆಂದರೆ 10 ಅಡಿ 4 ಅಂಗುಲ ಉದ್ದವಿತ್ತು. ವಿಂಧಾಮ್ ಎಂಬುವವನು ನಾನೂರರಿಂದ ಐನೂರು ಹುಲಿಗಳ ಬೇಟೆಗಳಲ್ಲಿ ಪಾಲ್ಗೊಂಡಿದ್ದರೂ 10 ಅಡಿ 2 ಅಂಗುಲಕ್ಕಿಂತ ಹೆಚ್ಚು ದೊಡ್ಡ ಹುಲಿಯನ್ನು ಅವನು ಕಂಡಿರಲಿಲ್ಲ. ಸರ್ ಇಯರ್ಡಲೆ ವಿಲ್‌ಮೊಟ್‌ನ 200 ಹುಲಿಗಳ ಪೈಕಿ 10 ಅಡಿ 3½ ಅಂಗುಲ ಅಳತೆಯದೇ ಅತಿ ದೊಡ್ಡದು. 400 ಹುಲಿಗಳನ್ನು ಕೊಂದ ಸಿಮ್ಸನ್‌ನ ಶಿಕಾರಿಯು ಹುಲಿಯ ಉದ್ದ ಹೆಚ್ಚೆಂದರೆ 11 ಅಡಿ ಎಂದು ಹೇಳಿದ್ದಾನೆ. ಕೂಚಬಿಹಾರನ ಮಹಾರಾಜನು ತನ್ನ 37 ವರ್ಷಗಳ ಬೇಟೆಯ ಜೀವನದಲ್ಲಿ 365 ಹುಲಿಗಳಿಗಿಂತ ಕಡಮೆಯೇನೂ ಕೊಂದಿರಲಿಲ್ಲ. ಅವನ ಅತಿ ದೊಡ್ಡ ಗಂಡು ಹುಲಿಯೆಂದರೆ 10 ಅಡಿ 5 ಅಂಗುಲ ಮತ್ತು ಅತಿ ದೊಡ್ಡ ಹೆಣ್ಣು ಹುಲಿಯ ಅಳತೆ 9 ಅಡಿ 5½ ಅಂಗುಲ.

ಹುಲಿಗಳ ಅಳತೆಯಲ್ಲಿ ಬಾಲವೂ ಸೇರಿರುವುದರಿಂದ ಅತಿ ಹೆಚ್ಚು ಅಥವಾ ಅತಿ ಗಿಡ್ಡ ಉದ್ದದ ಬಾಲದಿಂದ ಹುಲಿಯ ಅಳತೆಯ ಮೇಲೆ ಪರಿಣಾಮವೆಸಗುತ್ತದೆ. ಅಂತರ ಹೆಚ್ಚುಕಡಮೆ ಒಂದು ಅಡಿಯಷ್ಟಾದರೂ ಇರುತ್ತದೆ. ಆದರೆ ಬಾಲದ ಅಳತೆ ಹುಲಿಯ ಆಕಾರವನ್ನು ಅವಲಂಬಿಸಿರುವುದಿಲ್ಲ. ಬಾಲದ ಅಳತೆ ಅತಿ ಕಡಮೆ 2 ಅಡಿ 9 ಅಂಗುಲದಿಂದ ಅತಿ ಹೆಚ್ಚು 3 ಅಡಿ 8 ಅಂಗುಲದವರೆಗೆ ಇರುತ್ತದೆ.

ಮನುಷ್ಯನ ಎತ್ತರ ಕೇಳಿದರೆ 6 ಅಡಿ ಎಂದು ಹೇಳುವಂತೆ ಹುಲಿಯ ಉದ್ದ 10 ಅಡಿ. 12 ಅಡಿ ಉದ್ದವಿದ್ದ ಹುಲಿಯ ಉಲ್ಲೇಖ 8 ಅಡಿ ಉದ್ದವಿದ್ದ ಮನುಷ್ಯನ ಉಲ್ಲೇಖದಂತೆಯೆ. ಹೆಣ್ಣು ಹುಲಿ ಸಾಮಾನ್ಯವಾಗಿ ಗಂಡಿಗಿಂತ 1 ಅಡಿ ಗಿಡ್ಡವಿರುತ್ತದೆ. ಸಂಪೂರ್ಣವಾಗಿ ಬೆಳೆದ ಹುಲಿಯ ಭುಜದ ಎತ್ತರ 3 ಅಡಿ 6 ಅಂಗುಲ ಇದ್ದು ಅದರ ತೂಕ 575 ಪೌಂಡುಗಳು. ಕುತ್ತಿಗೆಯು ಸಾಮಾನ್ಯವಾಗಿ 3 ಅಡಿಯಷ್ಟು ದಪ್ಪವಿರುತ್ತದೆ. ಹೆಣ್ಣು ಹುಲಿಯ ತಲೆ ತನ್ನ ಕುತ್ತಿಗೆ ದಪ್ಪದಷ್ಟಿದ್ದು ಗಂಡು ಹುಲಿಯದು ತನ್ನ ಕುತ್ತಿಗೆಗಿಂತ ದೊಡ್ಡದಿರುತ್ತದೆ ಹಾಗೂ ಕೆನ್ನೆಗಳು ಗಾತ್ರವಿದ್ದು ಊದಿದಂತೆಯೇ ಕಾಣುತ್ತವೆ.

ಕೆಲವು ಹಳ್ಳಿಯ ಜನರ ದೃಷ್ಟಿಯಲ್ಲಿ ಹುಲಿಯು ದೇವತೆ, ಭೂತ ಹಾಗೂ ಪ್ರೇತ. ಹಳ್ಳಿಯ ಶಿಕಾರಿಗಳು ಹುಲಿಯ ಬೇಟೆಗೆ ಹೊರಡುವ ಮುನ್ನ ಕೊಡಲಿಯನ್ನು

ಬೇವಿನ ಮರದಲ್ಲಿ ಸಿಕ್ಕಿಸುವುದಲ್ಲದೆ ಕುರಿ ಅಥವಾ ಆಡನ್ನು ಬಲಿಕೊಡುವುದುಂಟು. ಮಧ್ಯಭಾರತದ ಗುಡ್ಡಗಾಡು ಜನರಾದ 'ಭಿಲ್' ಹಾಗೂ 'ಗೊಂಡ'ರು ಹುಲಿಯನ್ನು ಪೂಜಿಸುತ್ತಾರೆ.

ಗುಂಡಿನೇಟು ತಿಂದು ಹುಲಿ ಮಾಯವಾದರೆ ಅದು ಭೂತವಾಗಿ ಕಾಡಲಾರಂಭಿಸುತ್ತದೆಂದು ಇಂದಿಗೂ ಹಲವು ಜನರ ನಂಬಿಕೆ.

ಕೆಲವು ಹಳ್ಳಿಗರಿಗೆ ಹುಲಿ ಒಳ್ಳೆಯ 'ವಾಚ್‌ಮನ್'. ಅವರು ಅದನ್ನು ಕೊಲ್ಲುವುದಿಲ್ಲ. ಹುಲಿ ಆಗಾಗ ಹಳ್ಳಿಗೆ ಭೇಟ್ಟಿಕೊಡುತ್ತಿದ್ದರೆ ವನ್ಯಮೃಗ ಹಾಗೂ ಪೋಲಿದನಗಳ ಹಾವಳಿಯಿಂದ ಬೆಳೆಗಳನ್ನು ರಕ್ಷಿಸಲು ಸಹಾಯವಾಗುತ್ತದೆಂದು ಅವರ ನಂಬುಗೆ.

ನಿಸರ್ಗದ ನಿಯಮದ ಪ್ರಕಾರ ಹುಲಿ ತಾನಾಗಿಯೇ ಮನುಷ್ಯನನ್ನು ಕೆಣಕುವುದಿಲ್ಲ. ಅದು ಹಳ್ಳಿಗಳಿಗೆ ನುಗ್ಗಿ ಸಾಕಿದ ದನಕರುಗಳನ್ನು ಕೊಲ್ಲುವುದು ಕ್ವಚಿತ್ತಾಗಿ. ಒಟ್ಟಿನಲ್ಲಿ ಹುಲಿ ಮನುಷ್ಯನಿಗೆ ದ್ರೋಹವನ್ನೆಸಗುವ ಪ್ರಾಣಿಯಲ್ಲ.

ಕಾಡಿನಲ್ಲಿ ಚರ್ಮ ಹದಮಾಡುವಿಕೆ

ಶಿಕಾರಿ ಬೇಟೆಯು ಸಂಪೂರ್ಣ ಸಂತೋಷ ಹಾಗೂ ಪ್ರಯೋಜನ ಪಡೆಯಬೇಕಾದರೆ ಹಲವಾರು ವಿಷಯು ತಿಳಿದಿರಬೇಕು. ಅವುಗಳಲ್ಲಿ ಶೀಘ್ರದಲ್ಲಿ ಚರ್ಮ ಸುಲಿಯುವಿಕೆ ಹಾಗೂ ಚರ್ಮ ಹದಮಾಡುವವನ ಕಡೆ ತಲುಪಿಸುವಿಕೆಗಳು ಸೇರಿವೆ. ಮೂಲಭೂತವಾಗಿ ಎಲ್ಲ ಪ್ರಾಣಿಗಳ ಚರ್ಮ ಸುಲಿಯುವುದು ಒಂದೇ ರೀತಿಯದಾಗಿದೆ. ತಳಭಾಗದ ಮಧ್ಯದಲ್ಲಿ ಹರಿತವಾದ ಕತ್ತಿಯಿಂದ ಅಥವಾ ಚಾಕುವಿನಿಂದ ಕೊರೆಯುವುದರಿಂದ, ಬಾಲದ ತುದಿಯಿಂದ ಗುದದ್ವಾರದ ಮುಖಾಂತರ ಗಲ್ಲದವರೆಗೆ ಮತ್ತು ಸಹಾಯಕ ಕೊರೆತಗಳಿಂದ ಪ್ರತಿಯೊಂದು ಕಾಲಿನ ಒಳಭಾಗದಿಂದ ಪಾದ ಅಥವಾ ಪಂಜದವರೆಗೆ ವಿಶೇಷವಾಗಿ ಹುಲಿಗಳಲ್ಲಿ ಅಥವಾ ಚಿರತೆಗಳಲ್ಲಿ ಅವಯವಗಳ ಒಳಭಾಗದ ಬಿಳಿಭಾಗವನ್ನು ಸಮನಾಗಿ, ಅಚ್ಚುಕಟ್ಟಾಗಿ, ಕಾಳಜಿಯಿಂದ, ವಿನಾಕಾರಣ ತಡಮಾಡದೆ ಸುಲಿದು ತೆಗೆಯಬೇಕು.

ಎಲ್ಲ ಮಾಂಸ, ಕೊಬ್ಬು, ಎಳೆ ಎಲುಬು ಮತ್ತು ಚರ್ಮದ ಒಳಬದಿಯಲ್ಲಿ ಹೊಂದಿ ಇರುವ ತೆಳುವಾದ ಪೊರೆಯನ್ನು ತೆಗೆದು ಹರಿಯುವ ನೀರಿನಲ್ಲಿ ಉಳಿದ ರಕ್ತದ ಕಣಗಳು ಸ್ವಚ್ಛವಾಗುವಂತೆ ತೊಳೆಯುವುದು ಅತಿ ಮುಖ್ಯ. ಕೂದಲುಗಳಿದ್ದ ಪ್ರಾಣಿಯ ಚರ್ಮದ ಒಳಬದಿಗೆ ರಕ್ಷಣ ಸಾಧಕಗಳನ್ನು ಸಿಂಪಡಿಸುವುದು ಅವಶ್ಯ. ಕಾಡಿನಲ್ಲಿ ಚರ್ಮ ಹದಮಾಡುವಾಗ್ಗೆ ಯಥೇಚ್ಛವಾಗಿ ಉಪ್ಪು ಅಥವಾ ಪಟಿಕದ ಪುಡಿ ಅಥವಾ ಇವುಗಳ 1 : 2 ಪ್ರಮಾಣದ ಮಿಶ್ರಣಮಾಡಿ ಮಾಂಸಕ್ಕೆ ಹೊಂದಿ ಇದ್ದಬದಿಗೆ ಹಚ್ಚಿ, ಕೂದಲಿದ್ದ ಭಾಗ ಮಾಂಸದೊಂದಿಗೆ ಸಂಪರ್ಕ ಬರದಂತೆ ಮಡಿಕೆ ಮಾಡಿ ಇಡತಕ್ಕದ್ದು.

ತುಟಿಗಳು, ದವಡೆಗಳು, ಮೂಗು, ಕಿವಿ, ಪಂಜಗಳು ಹಾಗೂ ಬಾಲ ಈ ಭಾಗಗಳಲ್ಲಿ ಹೆಚ್ಚು ದಪ್ಪವಾಗಿ ಮಾಂಸವಿರುವುದರಿಂದ ವಿಶೇಷವಾಗಿ ಲಕ್ಷ್ಯ ಕೊಡಬೇಕಾಗುವುದು. ತುಟಿಗಳನ್ನು ವಸಡೆಯ ಕಡೆಯಿಂದ ಸೀಳಿ ಅಗಲವಾಗಿ ತೆರೆಯಬೇಕು. ದವಡೆಯಲ್ಲಿಯ ಮಾಂಸವನ್ನು ಅಡ್ಡಡ್ಡಾಗಿ ಸೀಳಿ ರಕ್ಷಣ ಸಾಧಕಗಳು ಸರಿಯಾಗಿ ನಾಟುವಂತೆ ಮಾಡಬೇಕು ಮತ್ತು ಮೂಗಿನಲ್ಲಿಯ ಎಳೆ ಮೂಳೆಯನ್ನು ಸಾಧ್ಯವಾದಷ್ಟು ಹೊರಗೆ ತೆಗೆಯಬೇಕು. ಕಿವಿಗಳ ಒಳಗಿನ ಹಾಗೂ ಹೊರಗಿನ ಚರ್ಮದ ಮಧ್ಯ ಇರುವ ಎಳೆಮೂಳೆಯನ್ನು ಕಿವಿಯ ಅಂಚಿನ (ಕಾಲು ಇಂಚು ಬಿಟ್ಟು) ಚರ್ಮ ಸುಲಿದು ಹೊರತೆಗೆಯಬೇಕು ಮತ್ತು ಕಿವಿಯ ಒಳಭಾಗವನ್ನು ಹೊರಗೆ ತಿರುಗಿಸಬೇಕು. ಪಂಜಗಳ ಮೃದು ಭಾಗಗಳ ಮಧ್ಯ ಕೊಯ್ದು ಮಾಂಸವನ್ನು ಕೆತ್ತಿ ತೆಗೆಯಬೇಕು. ಒಂದು ವೇಳೆ ತೆಗೆಯಲಾಗದಿದ್ದರೆ ಮಡಿಕೆ ಹಾಕುವಾಗ ಕೂದಲಿದ್ದ ಭಾಗಕ್ಕೆ ಅದು ಸ್ಪರ್ಶಿಸಕೂಡದು. ಬಾಲವನ್ನು ಅತಿ ಕಾಳಜಿಯಿಂದ ಸುಲಿದು ಎಳ್ಳಷ್ಟೂ ಮಾಂಸದ ಕಣಗಳು ಇಲ್ಲದಂತೆ ಸ್ವಚ್ಛಮಾಡಬೇಕು. ಚರ್ಮದ ಮಾಂಸದ ಬದಿಗೆ ಇದ್ದ ಎಲ್ಲ ಭಾಗಕ್ಕೆ ರಕ್ಷಣ ಸಾಧಕವನ್ನು ಚೆನ್ನಾಗಿ ತಿಕ್ಕಬೇಕು. ಅದು ಹಸಿ ಇದ್ದಾಗಲೆ ಪೆಟ್ಟಿಗೆಯಲ್ಲಿ ಮುಚ್ಚಿ, ಚರ್ಮ ಹದಮಾಡುವವನ ಕಡೆ ಕಳಿಸಿಕೊಡುವುದು ಸಾಧ್ಯವಾಗದೇ ಹೋದರೆ ಅದನ್ನು ನೆರಳಲ್ಲಿ ಎಳೆದು ಹರಡಿ ಒಣಗಿಸತಕ್ಕದ್ದು. ನಂತರ ಮಡಿಕೆ ಮಾಡಿ ಗೋಣಿಬಟ್ಟೆಯಲ್ಲಿ ಹೊಲಿದಿಡಬೇಕು. ತಲೆಬುರುಡೆಯನ್ನು ನೀರಿನಲ್ಲಿ ಸಾಧಾರಣವಾಗಿ ಕುದಿಸಿ ಅದರಲ್ಲಿದ್ದ ಮಾಂಸ ಹಾಗೂ ಮೆದುಳಿನ ತುಣುಕುಗಳನ್ನು ತೆಗೆದು ಸ್ವಚ್ಛಮಾಡಿ ಬೇರೆ ಕಟ್ಟಿ ಕಳಿಸಬೇಕು.

ಹುಲಿಗಳನ್ನು ಸೆರೆಹಿಡಿಯುವ ಎರಡು ಪದ್ಧತಿಗಳು

(i) **ಗುಂಡಿ ಪದ್ಧತಿ:** ಹುಲಿಗಳನ್ನು ಜೀವಂತ ಸೆರೆಹಿಡಿಯಲು ಭಾರತದಲ್ಲಿ ಕೆಲವು ವಿಧಾನಗಳು ಮಾತ್ರ ಪರಿಣಾಮಕಾರಿಯಾಗಿ ಉಪಯೋಗಿಸಲ್ಪಟ್ಟಿವೆ. ಅವುಗಳಲ್ಲಿ ಮುಖ್ಯವಾದುದು 'ಗುಂಡಿ ವಿಧಾನ'. ಇದು ಪರಿಣಾಮಕಾರಿ ಪದ್ಧತಿಯೂ ಆಗಿದೆ. ಕಾಡಿನಲ್ಲಿ ಹೆಚ್ಚಾಗಿ ಓಡಾಡಿದ ಹುಲಿಯು ದಾರಿಯನ್ನು ಆಯ್ದುಕೊಂಡು ಆದರ ಬದಿಯಲ್ಲಿ ಯೋಗ್ಯ ಹಾಗೂ ಆಯಕಟ್ಟಿನ ಸ್ಥಳವನ್ನು ಗುರುತಿಸಬೇಕು. ಅಲ್ಲಿ $2\frac{1}{2}$ ಮೀಟರ್ ಚಚ್ಚೌಕ ಅಥವಾ ವರ್ತುಳಾಕಾರದ 8 ಮೀಟರ್ ಆಳದ ಗುಂಡಿಯನ್ನು ಅಗೆದು ತೆಗೆಯಬೇಕು. ಅಗೆದ ಮಣ್ಣನ್ನು ಹುಲಿಗೆ ಯಾವುದೇ ರೀತಿಯ ಸಂಶಯ ಬರದಂತೆ ಗುಂಡಿಯಿಂದ ದೂರಹಾಕುವುದು ಒಳಿತು. ಗುಂಡಿಯ ಅಂಚಿನಲ್ಲಿ ಒಂದು ಕ್ಷೀಣ ಹಾಗೂ ಅನೇಕ ದಿನಗಳಿಂದ ಮೈತೊಳೆಯದ ಎಮ್ಮೆಕರುವನ್ನು ಹಿಡಿದು ತಂದು ಅದರ ಕಾಲನ್ನು ಬಿಗಿಯಾಗಿ ಗೂಟಕ್ಕೆ ಕಟ್ಟತಕ್ಕದ್ದು. ಅದಕ್ಕೆ 'ಗೋರಿ' (ಬೇಟ್) ಎಂದು ಹೇಳುತ್ತಾರೆ. ಎಮ್ಮೆಕರುವಿನ ಕ್ಷೀಣತೆಯಿಂದ ಗೂಟವನ್ನು ಕೀಳಲು ಅಶಕ್ತವಿದ್ದು, ಮೈತೊಳೆಯದ ಕಾರಣ ವಾಸನೆಯಿಂದ ಬಹುದೂರದಿಂದ ಹುಲಿಯನ್ನು ಆಕರ್ಷಿಸುವುದೇ ಇದರ ಉದ್ದೇಶ. ಅವಶ್ಯ ಬಿದ್ದರೆ ಎಮ್ಮೆಯ ಕರುವಿನ ಮೈಗೆ ಸ್ವಲ್ಪ ಸಗಣಿಯ ರಾಡಿಯನ್ನು ಹಚ್ಚುವುದು

ಉತ್ತಮ. ಗುಂಡಿಯ ಬಾಯಿಗೆ ಬಿದಿರಿನ ಚಾಪೆಯಿಂದ ಮುಚ್ಚಿ ಅದರ ಮೇಲೆ ಸುಳಿವು ಹತ್ತದಂತೆ ಸುತ್ತಮುತ್ತಲಿದ್ದ ಒಣಗಿದ ಎಲೆ, ಹುಲ್ಲು ಹರಡಿ ಸಾಧ್ಯವಾದಷ್ಟು ನೈಸರ್ಗಿಕ ಭೂಮಿಯಂತೆ ಕಾಣಲು ವ್ಯವಸ್ಥೆ ಮಾಡಬೇಕು. ಮಳೆಗಾಲದಲ್ಲಿ ಈ ಕಾರ್ಯ ಕೈಗೊಂಡರೆ ಸುತ್ತಲಿನ ಹಸಿರುಮಯ ಪ್ರದೇಶಕ್ಕೆ ಹೋಲುವಂತೆ ರಾಗಿ ಕಾಳನ್ನು ನೀರಲ್ಲಿ ನೆನಸಿ ಚಾಪೆಯ ಮೇಲೆ ಹರಡಿದ ತೆಳುವಾದ ಮಣ್ಣಲ್ಲಿ ಬಿತ್ತಿದರೆ ಬೀಜ ಮೊಳಕೆಯೊಡೆದು ಹಸಿರುಮಯವಾಗಿ ತೋರುತ್ತದೆ. ಗುಂಡಿಯ ಸುತ್ತಲೂ ಸಾಕಷ್ಟು ಎತ್ತರವಾಗಿ ಪರಗಿ ಮುಳ್ಳುಗಳಿಂದ ಕೂಡಿದ ಹಸಿಸೊಪ್ಪಿನ ಬೇಲಿಯನ್ನು ಭದ್ರವಾಗಿ ನಿಲ್ಲಿಸಬೇಕು. ಅದರ ಒಂದು ಸ್ಥಳದಲ್ಲಿ ಮಾತ್ರ ಮೊಳಕಾಲಿನಷ್ಟು ಎತ್ತರ ಬೇಲಿ ಏರಿಸಿ ಅದರ ಮೈಮೇಲೆ ಒಂದು ಕಿಂಡಿಯನ್ನು ಬಿಡಬೇಕು. ಆ ಕಿಂಡಿಯಿಂದ ಹುಲಿಯ ಹೊರತು ಬೇರೆ ಪ್ರಾಣಿಗಳಿಗೆ ಒಳಬರಲು ಸಾಧ್ಯವಾಗಬಾರದು; ಹುಲಿಯು ಆ ಕಿಂಡಿಯಿಂದ ಕಟ್ಟಿದ ಎಮ್ಮೆಕರುವನ್ನು ನೋಡಿ ನಂತರ ಅದರ ಮೇಲೆ ಜಿಗಿಯಲು ಅನುಕೂಲವಾಗಲೆಂದು ಈ ರೀತಿಯ ವ್ಯವಸ್ಥೆ. ಕೆಲವು ಬಾರಿ ಹುಲಿಗೆ ಸಂಶಯ ಬಂದರೆ ಸುತ್ತಲೂ ಅಡ್ಡಾಡಿ ನೆಲವನ್ನು ಕೆದರಿ ಬೇರೆ ಕಡೆಗೆ ಹೊರಟುಹೋಗಬಹುದು. ಆದ್ದರಿಂದ ಹುಲಿಗೆ ಯಾವುದೇ ರೀತಿಯ ಸಂಶಯಬಾರದ ರೀತಿಯಲ್ಲಿ ವ್ಯವಸ್ಥೆ ಮಾಡುವಲ್ಲಿ ಕುಶಲತೆ ಪಡೆದಿರಬೇಕು.

ತನ್ನ ದೈನಂದಿನ ಅಲೆದಾಟದಲ್ಲಿ ಹುಲಿ 'ಗೋರಿ'ಯಿಂದ ಆಕರ್ಷಿಸಲ್ಪಟ್ಟು ಕಿಂಡಿಯ ಮುಖಾಂತರ ಜಿಗಿದಾಗ ಗೋರಿಯನ್ನು ತಲುಪುವ ಮೊದಲೇ ತನ್ನ ಭಾರ ದಿಂದ ಬಿದಿರಿನ ತಟ್ಟೆಯೊಂದಿಗೆ ಗುಂಡಿಯೊಳಗೆ ಬೀಳುತ್ತದೆ. ಆಗ ಅದು ರೋಷದಿಂದ ಘೋರ ಗರ್ಜನೆ ಗೈಯುತ್ತ ತನ್ನ ಹಿಂದಿನ ಕಾಲುಗಳ ಸ್ಪ್ರಿಂಗಿನಂತಹ ಅದ್ಭುತ ಶಕ್ತಿಯಿಂದ ಮೇಲೆ ಜಿಗಿದು ತಪ್ಪಿಸಿಕೊಳ್ಳಲು ಪ್ರಯತ್ನಿಸುವುದುಂಟು. ಹುಲಿ ತನ್ನ ಈ ಪ್ರಯತ್ನದಲ್ಲಿ 7 ಮೀಟರ್ ಎತ್ತರದವರೆಗೆ ಜಿಗಿದು ಉಗುರಿನ ಗುರುತು ಗಳನ್ನು ಮೂಡಿಸಿದ ದಾಖಲೆಗಳಿವೆ. ಹುಲಿ ತಪ್ಪಿಸಿಕೊಂಡು ಹೋಗದಂತೆ ಗುಂಡಿಯ ಬಾಯಿಯನ್ನು ಬಿದಿರುಗಳಗಳಿಂದ ಅಥವಾ ಸಾಗುವಾನಿ ಅಥವಾ ನೀಲಗಿರಿ ಮರದ ಬಲ್ಲಿಗಳಿಂದ ಮುಚ್ಚುವುದೊಳ್ಳೆಯದು.

ಹುಲಿ ಬಿದ್ದನಂತರ ಗುಂಡಿಯ ಮೇಲ್ಬದಿಯಲ್ಲಿ ಸುತ್ತಲೂ 4 ಮೀಟರ್ ಎತ್ತರವಾದ ಭದ್ರವಾದ ಮಂಡಿಗೆ ಕೋಟೆಯನ್ನು ನಿಲ್ಲಿಸುವ ವ್ಯವಸ್ಥೆಯಾಗಬೇಕು. ಅದರ ಮೇಲ್ಬದಿಗೆ $\frac{3}{4} \times \frac{3}{4}$ ಮೀಟರ್ ಒಂದು ಕಿಂಡಿಯನ್ನು ಬಿಟ್ಟು ಮುಚ್ಚಬೇಕು. ಕೆಳಗೆ ಒಂದು ಬದಿಯಲ್ಲಿ 1×1 ಮೀಟರ್‌ದ ಮತ್ತೊಂದು ಕಿಂಡಿಯನ್ನು ಬಿಟ್ಟು ಇದರ ಹೊರಗೆ $2 \times 1 \times 1$ ಮೀಟರ್‌ದ ಒಂದು ಬೋನು ಅಥವಾ ಬಲೆ ಇಡಬೇಕು. ಇದು ಇಲಿಯ ಬೋನಿನಂತೇ ಇದ್ದು ಅದೇ ರೀತಿಯಲ್ಲಿ ಕೆಲಸಮಾಡು ತ್ತದೆ.

ಹುಲಿ ಗುಂಡಿಯಲ್ಲಿ ಬಿದ್ದನಂತರ ಇದೆಲ್ಲ ವ್ಯವಸ್ಥೆಮಾಡಲು ಸುಮಾರು ಎರಡು ದಿನಗಳು ಹಿಡಿಯುತ್ತವೆ. ಈ ಸಮಯದಲ್ಲಿ ಹುಲಿಗೆ ಮಾಂಸದ ತುಂಡುಗಳು ಹಾಗೂ

ನೀರಿನ ಸರಬರಾಜು ಮಾಡಬೇಕಾಗುತ್ತದೆ. ಹಗಲಿನಲ್ಲಿ ಮೇಲಿಂದ ಮೇಲೆ ಅದರ ಮೈಮೇಲೆ ನೀರು ಸುರುವಿದಾಗ ತಂಪಾಗುವುದಲ್ಲದೆ ಮೈನೆಕ್ಕುವುದರಿಂದ ನೀರಡಿಕೆಯನ್ನು ಇಂಗಿಸಿಕೊಳ್ಳಲು ಅನುಕೂಲವಾಗುವುದು. ಅಷ್ಟರಲ್ಲಿ ಅದರ ರೋಷವು ತಗ್ಗಿರುತ್ತದೆ.

ಮೂರನೇ ದಿನ ಹುಲಿಯನ್ನು ಬಲೆಯಲ್ಲಿ ಸೇರಿಸುವ ಮೊದಲು ಬೋನಿನ ಒಳಗೆ ಸಂಪೂರ್ಣ ಕತ್ತಲಾಗುವಂತೆ ಸೊಪ್ಪಿನಿಂದ ಮುಚ್ಚಬೇಕು. ಸುಮಾರು ಎರಡು ಗಾಡಿಗಳಷ್ಟು ಹುಲ್ಲುತಂದು ಸಣ್ಣ ಪೆಂಡಿಗಳನ್ನು ಕಟ್ಟಿ ಮುಂಡಿಗೆ ಕೋಟೆಯ ಮೇಲಿನ ಕಿಂಡಿಯಿಂದ ಗುಂಡಿಯೊಳಕ್ಕೆ ಇಳಿಸಬೇಕು. ಗುಂಡಿಯು ಸುಮಾರು 5 ಮೀಟರ್ ಎತ್ತರದವರೆಗೆ ಹುಲ್ಲಿನಿಂದ ತುಂಬಬೇಕು. ಈ ಸಮಯದಲ್ಲಿ ಸಂಪೂರ್ಣ ಸ್ತಬ್ಧತೆಯನ್ನು ಕಾಯ್ದುಕೊಳ್ಳುವುದು ಒಳ್ಳೆಯದು. ಹುಲಿಗೆ ಬೋನು ಇಟ್ಟ ಕಿಂಡಿಯೊಂದನ್ನು ಬಿಟ್ಟರೆ ತಪ್ಪಿಸಿಕೊಳ್ಳಲು ಯಾವ ಸಾಧ್ಯತೆಯೂ ಇರುವುದಿಲ್ಲ. ಅದಕ್ಕೆ ಸಂಶಯ ಉಂಟಾಗಿ ಕಿಂಡಿಯ ಮುಖಾಂತರ ಬೋನು ಸೇರಲು ಸ್ವಲ್ಪ ಹಿಂಜರಿಯಬಹುದು. ಕೆಲವು ಸಮಯದ ನಂತರ ಅದು ಕಿಂಡಿಯ ಮುಖಾಂತರ ಬೋನು ಸೇರಿ ವ್ಯವಸ್ಥಿತ ರೀತಿಯಂತೆ ಒಳಗಿದ್ದ ಹಲಗೆಯ ಮೇಲೆ ಅದರ ಮುಂಗಾಲು ಇಟ್ಟ ಕೂಡಲೇ ಬೋನಿನ ಬಾಗಿಲು ಜಾರಿ ಮುಚ್ಚಲ್ಪಡುತ್ತದೆ. ಆಗ ಹುಲಿ ಸೆರೆಹಿಡಿಯಲ್ಪಟ್ಟಿತೆನ್ನಬಹುದು. ಅಲ್ಲಿಗೆ ಅದರ ಸ್ವಾತಂತ್ರ್ಯ ಮುಕ್ತಾಯವಾದಂತೆ. ಈ ಎಲ್ಲ ಕಾರ್ಯಗಳನ್ನು ಹೆಚ್ಚು ದಕ್ಷತೆಯಿಂದ ವಹಿಸಿ ಹುಲಿಗೆ ಸಾಧ್ಯವಾದಷ್ಟು ಹೆಚ್ಚು ಗಾಯಗಳಾಗದಂತೆ, ಅಥವಾ ಯಾವುದೇ ಅನಾಹುತವಾಗದಂತೆ ಮುಂಜಾಗ್ರತೆ ವಹಿಸತಕ್ಕದ್ದು. ಸೆರೆಹಿಡಿದ ಹುಲಿಗಳನ್ನು ಕೂಡಲೆ ಇಚ್ಛಿಸಿದ ಸ್ಥಳಗಳಿಗೆ ಅಂದರೆ ಸಫಾರಿ ಪಾರ್ಕ್ ಅಥವಾ ಆಧುನಿಕ ಮೃಗಾಲಯಗಳಿಗೆ ರವಾನಿಸಬೇಕು.

(ii) **ಮೂರ್ಛೆಬರಿಸುವ ಪದ್ಧತಿ:** ಹಲವು ವರ್ಷಗಳಿಂದ ಔಷಧದ ಗುಂಡು ಹೊಡೆದು ಪ್ರಾಣಿ ಮೂರ್ಛೆ ಹೋಗುವಂತೆ ಮಾಡಿ ಜೀವಂತ ಸೆರೆ ಹಿಡಿಯುವುದನ್ನು ಕಂಡುಹಿಡಿದಿದ್ದಾರೆ. ಅದು ಒಂದು ನೂತನ ಬಂದೂಕು (ಟ್ರಾಂಕ್ವಿಲೈಜರ್). ಇದರಿಂದ ದಪ್ಪ ಸೂಜಿಯನ್ನು ಲಗತ್ತಿಸಿದ ಔಷಧ ಗುಂಡನ್ನು ಪ್ರಾಣಿಗಳ ದಿಕ್ಕಿನಲ್ಲಿ ಹಾರಿಸಿದಾಗ ಅದು ವೇಗದಿಂದ ಎಸೆಯಲ್ಪಡುತ್ತದೆ. ಸೂಜಿ ಪ್ರಾಣಿಗಳ ದೇಹವನ್ನು ಚುಚ್ಚಿದಾಗ ಹಿಂದಿರುವ ಔಷಧಿ ಪಿಚಕಾರಿಯಂತೆ ನೂಕಲ್ಪಟ್ಟು ಸೂಜಿಯು ಮುಖಾಂತರ ಇಂಜೆಕ್ಷನ್ ಕೊಟ್ಟಂತೆ ಮೈಯನ್ನು ಸೇರುತ್ತದೆ. ಬಹಳ ದೂರದಿಂದ ಈ ಕಾರ್ಯ ನಿರ್ವಹಿಸಲ್ಪಡುತ್ತದೆ. ಔಷಧಿ ಪ್ರಾಣಿಗಳಿಗೆ ಮೂರ್ಛೆ ಬರಿಸುವಂತಹದಿದ್ದು ಅದು ಮಾರಕವಲ್ಲ. ಇದರಿಂದ ಬಹಳ ಅನುಕೂಲವಿದೆ. ಹುಲಿಯಂತಹ ಭಯಾನಕ ಕಾಡುಪ್ರಾಣಿಗಳನ್ನು ಸುಲಭವಾಗಿ ಹಿಡಿದು ತರಬಹುದು. ಅದು ಮೂರ್ಛೆ ಸ್ಥಿತಿಯಿಂದ ಎಚ್ಚರವಾಗುವುದರೊಳಗೇ ಅದನ್ನು ಗೂಡಿನಲ್ಲಿ ಸೇರಿಸಬಹುದು. ಈಗ ಮೃಗಾಲಯಗಳಲ್ಲಿ ವಿವಿಧ

ಪ್ರಾಣಿಗಳಿಗೆ ಖಾಯಿಲೆಯಾದಾಗ ಚಿಕಿತ್ಸೆಮಾಡಲು ಈ ವಿಧಾನವನ್ನೇ ಅನುಸರಿಸ ಲಾಗುತ್ತದೆ.

ಮಾದರಿಯ ಮೃಗಾಲಯದ ಕಲ್ಪನೆ

ಸಮಾಜದಲ್ಲಿ ಮನುಷ್ಯನನ್ನು ಸೆರೆವಾಸದಲ್ಲಿಡುವುದು ಅವನು ಸಮಾಜದ ವಿರುದ್ಧ ಅಪರಾಧ ಮಾಡಿದಾಗ. ಆದರೆ ವನ್ಯಮೃಗಗಳು ಯಾವುದೇ ತಪ್ಪುಮಾಡದೆ ಇದ್ದಾಗ್ಯೂ ಅವುಗಳ ನೈಸರ್ಗಿಕ ಪರಿಸರದ ತವರು ಕಾಡಿನಿಂದ ಸೆರೆಹಿಡಿದು ತಂದು ದಪ್ಪದಪ್ಪ ಕಬ್ಬಿಣ ಸಲಾಕೆಗಳಿಂದ ಮಾಡಿದ ಬೋನಿನಲ್ಲಿ ಇಡುತ್ತೇವೆ. ನಮ್ಮ ಆನಂದಕ್ಕೆಂದು ಅನೇಕ ಪ್ರಾಣಿಗಳನ್ನು ಸೆರೆಹಿಡಿದಿಟ್ಟು ಅದಕ್ಕೆ ಮೃಗಾಲಯ ಅಥವಾ ಪ್ರಾಣಿಸಂಗ್ರಹಾಲಯವೆಂದು ಕರೆಯುತ್ತೇವೆ.

ಪ್ರಾಣಿಗಳೇನು ತಪ್ಪುಮಾಡಿವೆ, ಅವುಗಳನ್ನು ಸೆರೆವಾಸದಲ್ಲಿಡಲು? 'ಸಿಮೆಂಟ್-ಜಂಗಲ್' ಎನಿಸಿಕೊಂಡ ಪಟ್ಟಣಗಳಿಂದ ಅವನು ತಲುಪಲಾಗದ ದೈವದತ್ತ ವಾಸಸ್ಥಳ ಗಳಾದ ಕಾಡಿನಲ್ಲಿ ಅವು ಜೀವಿಸುವುದು ತಪ್ಪೆ? ಈ ಅಲ್ಪ ಕಾರಣಕ್ಕಾಗಿ ಮೃಗಗಳನ್ನು ಸೆರೆಹಿಡಿದು ಮೃಗಾಲಯದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುವಂತೆ ಮಾಡುವುದು ಯಾವ ಧರ್ಮ? ಅವು ಮೃಗಾಲಯದಲ್ಲಿ ಹೆಚ್ಚಿನ ಚಿತ್ರಹಿಂಸೆಗೊಳಗಾಗುತ್ತವೆ. ಹಲವಾರು ದೃಷ್ಟಾಂತಗಳಲ್ಲಿ ಬಿರುಸಾದ ಸಿಮೆಂಟ್ ಅಥವಾ ಕಲ್ಲಿನ ಮೇಲೆ ಅಲೆದಾಡಿ ದಾಗ ಮಾಂಸಾಹಾರಿ ಪ್ರಾಣಿಗಳಾದ ಹುಲಿ, ಚಿರತೆ, ಸಿಂಹಗಳು ಹಾಗೂ ಆನೆಗಳು ಡಾಂಬಾರ್ ರಸ್ತೆಗಳಲ್ಲಿ ನಡೆದಾಗ ಕುಂಟುತ್ತಿರುವುದನ್ನು ಕಾಣುತ್ತೇವೆ. ಕಾಡಿನಲ್ಲಿ ಅವುಗಳಿಗೆ ಅಲೆದಾಡಲು ಮೆದುಹುಲ್ಲಿನ ಆಚ್ಛಾದಿತ ಪ್ರದೇಶ ಇರುತ್ತದೆಂಬುದನ್ನು ಮರೆತುಬಿಡುತ್ತೇವೆ.

ದೇವನಿರ್ಮಿತ ಈ ಮಹಾಪ್ರಾಣಿಗಳನ್ನು ಮನುಷ್ಯ ತನ್ನ 'ಸಿಮೆಂಟುಜಂಗಲ್'ದ ಸಮೀಪ ನೋಡಿ ಆನಂದ ಪಡೆಯಲೇಬೇಕೆಂದರೆ ಅವುಗಳ ಪಿತ್ರಾರ್ಜಿತವಾಗಿ ಬಂದ ವಿಶಾಲ ಪರಿಸರಕ್ಕೆ ಅವಮಾನಮಾಡದೆ ಅದೇ ರೀತಿಯ ಅರಣ್ಯಪರಿಸರವನ್ನು ನಿರ್ಮಿಸಿ ಅನುಕೂಲತೆಗಳನ್ನು ಮಾಡಬೇಕು. ಪಶುಪಕ್ಷಿಗಳು ಬೆಳೆದು ಬಂದ ಕಾಡಿನಂತೆ ಅವಕ್ಕೆ ಹೊಂದಾಣಿಕೆಯಾಗುವ ಕಾಡು ಹಾಗೂ ನಿರ್ಭಯ ಸ್ಥಳಗಳ ವ್ಯವಸ್ಥೆ ಮಾಡುವುದು ಅಷ್ಟೊಂದು ಕಷ್ಟದ್ದಲ್ಲ. ಹುಲಿಗಳು ತಮ್ಮ ನೈಸರ್ಗಿಕ ಕಾಡಿನಲ್ಲಿ ಹೆಚ್ಚು ಅಲೆದಾಡು ವಂತೆ ಮೃಗಾಲಯಗಳಲ್ಲಿಯೂ ಅವುಗಳಿಗೆ ಅತ್ಯಾವಶ್ಯಕವಿದ್ದ ಸಾಕಷ್ಟು ಕಾಡಿನ ವ್ಯವಸ್ಥೆ ಯಾಗಬೇಕು.

ವನ್ಯಮೃಗಗಳನ್ನು ಸೆರೆಹಿಡಿದು ತನ್ನ ಆನಂದಕ್ಕೆಂದು ಕಂಬಿಗಳೊಳಗೆ ಕೂಡಿ ಹಾಕಲು ಯಾವ ಹಕ್ಕೂ ಅವನಿಗಿಲ್ಲವೆಂಬುದನ್ನು ಮನುಷ್ಯ ಮನವರಿಕೆ ಮಾಡಿಕೊಂಡರೆ ಈ ಸಮಸ್ಯೆ ಸುಲಭವಾಗಿ ಬಗೆಹರಿಯುತ್ತದೆ. ಅವನು ಈಗಾಗಲೆ ಮಾಡಿದ ಘೋರ

ಕೃತ್ಯಗಳಿಂದ ವಾತಾವರಣ ಮಲಿನಮಾಡಿದ ತಪ್ಪಿಗೆ ಅವನನ್ನು ಕಂಬಿಗಳುಳ್ಳ ಲಾರಿ ಅಥವಾ ವ್ಯಾನುಗಳಲ್ಲಿ ಕೂಡಿಹಾಕಿ ನೈಸರ್ಗಿಕ ಕಾಡುಗಳಂತೆ ನವೀನ ರೀತಿಯಲ್ಲಿ ತಯಾರಿಸಿದ ಮೃಗಾಲಯಗಳಲ್ಲಿ ಸ್ವೇಚ್ಛೆಯಾಗಿ ಅಲೆದಾಡುವ ವನ್ಯಮೃಗಗಳನ್ನು ತೋರಿಸಬೇಕಾದುದು ತರ್ಕಬದ್ಧವಾಗಿದೆ. ಇದಕ್ಕೆ 'ಸಫಾರಿ ಪಾರ್ಕ್' ಎಂದು ಕರೆಯುತ್ತೇವೆ.

ಸಫಾರಿ ಪಾರ್ಕ್

ಹುಲಿಗಳನ್ನು ಹಿಂದೆ ಹೇಳಿದ ವಿಧಗಳನ್ನು ಅನುಸರಿಸಿ ಸೆರೆಹಿಡಿದು ಅಥವಾ ಸೆರೆವಾಸದಲ್ಲಿ ಹುಟ್ಟಿಬೆಳೆದ ಹುಲಿಗಳನ್ನು ಅತಿ ಉಪಯುಕ್ತವಾಗಿ ಉಪಯೋಗಿಸುವ ಹೊಸ ಕಲ್ಪನೆಯೆಂದರೆ ಆಧುನಿಕ ಮೃಗಾಲಯವೆಂದು ಕರೆಯಲ್ಪಡುವ ಸಫಾರಿ ಪಾರ್ಕ್‌ಗಳಲ್ಲಿ ಅವುಗಳನ್ನು ಕಾಪಾಡಿಕೊಂಡು ಬರುವುದು.

ಇಂತಹ ಒಂದು ಸಫಾರಿ ಪಾರ್ಕನ್ನು ಕರ್ನಾಟಕ ಅರಣ್ಯ ಇಲಾಖೆ ಬೆಂಗಳೂರಿನಿಂದ ಸುಮಾರು 22 ಕಿಮೀ ಅಂತರದಲ್ಲಿರುವ ಬನ್ನೇರುಘಟ್ಟ ಅರಣ್ಯ ಪ್ರದೇಶದಲ್ಲಿ ನಿರ್ಮಿಸುವ ಹೊಸ ಯೋಜನೆಯನ್ನು ಹಾಕಿಕೊಂಡಿದೆ. ಈಗಾಗಲೆ ಸಸ್ಯಾಹಾರಿ ಪ್ರಾಣಿಗಳ ಸಫಾರಿ ಪ್ರಾರಂಭವಾಗಿದೆ. ಆಂಧ್ರಪ್ರದೇಶದಲ್ಲಿ ನಿರ್ಮಿಸಿದ ಸಫಾರಿ ಪಾರ್ಕ್ ಈಗಾಗಲೆ ಸಾವಿರಾರು ಪ್ರೇಕ್ಷಕರನ್ನು ಆಕರ್ಷಿಸುತ್ತಿದೆ. ಅದು ಭಾರತದಲ್ಲಿ ಮೊದಲನೆಯ ಸಫಾರಿ ಪಾರ್ಕ್ ಎನಿಸಿಕೊಂಡಿದೆ.

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿಯ ಸಫಾರಿ ಪಾರ್ಕ್ ಸುಮಾರು 1400 ಹೆಕ್ಟೇರುಗಳಷ್ಟು ವಿಸ್ತೃತವಾಗಿದೆ. ಅಲ್ಲಿ ಬೇರೆ ಬೇರೆ ಪ್ರಾಣಿಗಳಿಗೆ ವಿಶಾಲ ಆವರಣಗಳ ಅನುಕೂಲತೆಗಳನ್ನು ಮಾಡುವ ಉದ್ದೇಶವಿದೆ. ಇಲ್ಲಿ ಪ್ರವಾಸಿಗರು ತಮ್ಮ ಕಾರು ಅಥವಾ ಮಿನಿ ಬಸ್ಸುಗಳಿಂದಲೆ ಪ್ರಾಣಿಗಳನ್ನು ವೀಕ್ಷಿಸುವ ಏರ್ಪಾಡಾಗಿರುತ್ತದೆ. ಅವರನ್ನು ತರಬೇತಿ ಪಡೆದ ಸಿಬ್ಬಂದಿ ವರ್ಗದವರಿಂದ ತಂತಿ ಹಾಗೂ ಗ್ಲಾಸುಗಳಿಂದ ಮುಚ್ಚಲ್ಪಟ್ಟ ವಾಹನಗಳಲ್ಲಿ ಸಫಾರಿ ವಿಹಾರಕ್ಕೆಂದು ಕರೆದುಕೊಂಡು ಹೋಗಿ ತೋರಿಸುವ ವ್ಯವಸ್ಥೆ ಇದೆ. ಅವುಗಳಿಗೆ ಒಗ್ಗುವ ಸಹಜ ವಾತಾವರಣದಲ್ಲಿ ವನ್ಯ ಪ್ರಾಣಿ ಸಮೂಹ ಜೀವಿಸುವುದನ್ನು ಕಾಣಲು ಜನರಿಗೆ ಅನುಕೂಲವಾಗುವುದಲ್ಲದೆ ಅವುಗಳನ್ನು ಸಮೀಪದಿಂದಲೆ ನೋಡಿ ಆನಂದಿಸಿ ಉದ್ರಿಕ್ತರಾಗಬಹುದು. ಮೃಗಾಲಯಗಳಲ್ಲಿಯ ಬೋನುಗಳಲ್ಲಿ ಇಟ್ಟ ಕಾಡುಪ್ರಾಣಿಗಳನ್ನು ಜನ ಹೊರಗಡೆ ಅಡ್ಡಾಡಿ ನೋಡುವುದಕ್ಕಿಂತ ಇದು ಬೇರೆ ರೀತಿಯಿದ್ದು, ಪ್ರಾಣಿಗಳು ಸ್ವತಂತ್ರವಾಗಿರುತ್ತವೆ. ಆದರೆ ಅವುಗಳನ್ನು ನೋಡಲು ಬಂದ ಪ್ರವಾಸಿಗರು ಬೋನುಗಳ ರೀತಿಯಲ್ಲಿದ್ದ ವಾಹನಗಳಲ್ಲಿರುತ್ತಾರೆ. ಇಷ್ಟೆ ಇದರಲ್ಲಿಯ ಅಂತರ.

ಭಾರತದಲ್ಲಿ ಈಚೆಗೆ ನಿರ್ಮಿಸಿದ ಕೆಲವು ಮೃಗಾಲಯಗಳನ್ನು ಬಿಟ್ಟರೆ ಅನೇಕ ಇತರ ಮೃಗಾಲಯಗಳಲ್ಲಿ ಸಾಮಾನ್ಯವಾಗಿ ಪ್ರಾಣಿಗಳಿಗೆ ಅಲೆದಾಡಲು ಸಾಕಷ್ಟು ಸ್ಥಳ ಇರದೆ ಅವು ಬೋನುಗಳಲ್ಲಿಯ ಇರುಕಿನಲ್ಲಿ ಸೆರೆಹಿಡಿಯಲ್ಪಟ್ಟಿರುತ್ತವೆ. ನೈಸರ್ಗಿಕ

ಪ್ರದೇಶವಾದ ಕಾಡಿನಲ್ಲಿದ್ದ ಅನುಕೂಲತೆಗಳು ಮೃಗಾಲಯದ ಪ್ರಾಣಿಗಳಿಗೆ ಇರುವುದಿಲ್ಲ. ಈಗಿನ ಹದಗೆಟ್ಟ ಪರಿಸ್ಥಿತಿಯಲ್ಲಿ ಜನರು ನೈಸರ್ಗಿಕ ಸ್ಥಿತಿಗಳಲ್ಲಿ ಕಾಡುಪ್ರಾಣಿಗಳನ್ನು ನೋಡುವುದು ಕಷ್ಟವಿದ್ದು, ಈಗಿದ್ದ ಮೃಗಾಲಯಗಳು ಜನರಿಗೆ ಅಷ್ಟೊಂದು ಮನೋರಂಜನೆ, ಹೃದಯಂಗಮ ನೋಟ ಹಾಗೂ ಉದ್ರೇಕ ದೊರಕಿಸಲಾರವು. ಈ ಕೊರತೆಗಳನ್ನು 'ಸಫಾರಿ ಪಾರ್ಕ್' ತುಂಬಿಕೊಡುತ್ತದೆ. ಆದ್ದರಿಂದ 'ಸಫಾರಿ ಪಾರ್ಕ್' ಅತ್ಯಾಧುನಿಕ ಮೃಗಾಲಯವೆಂದು ಹೇಳಬಹುದು.

'ಸಫಾರಿ ಪಾರ್ಕ್'ನಲ್ಲಿ ಮಾಂಸಭಕ್ಷಕ ಪ್ರಾಣಿಗಳಾದ ಹುಲಿ, ಸಿಂಹ ಹಾಗೂ ಇನ್ನಿತರ ಕಾಡುಂಪ್ರಾಣಿಗಳಿಗೆ ಬೇರೆ ಬೇರೆ ವಿಶಾಲ ಆವರಣಗಳಿರುತ್ತವೆ. ಯೋಜನೆಯಂತೆ ಹುಲಿ, ಸಿಂಹಗಳಿಗೆ. ಕೋತಿಗಳಿಗೆ ಹಾಗೂ ಇನ್ನಿತರ ಕಾಲುಕೊಳಗಗಳುಳ್ಳ ಪ್ರಾಣಿಗಳಿಗೆ ಸೇರಿದಂತೆ ಪ್ರತಿಯೊಂದು ಜಾತಿಗೂ 150ರಿಂದ 500 ಎಕರೆಗಳವರೆಗೆ ವಿಶಾಲ ಆವರಣಗಳನ್ನು ನಿರ್ಮಿಸಿ ಪ್ರಾಣಿಗಳನ್ನು ಇಡಲಾಗುವುದು. ಪ್ರತಿಯೊಂದು ಆವರಣದಲ್ಲಿಯೂ ಒಳ್ಳೆಯ ರಸ್ತೆಗಳನ್ನು ನಿರ್ಮಿಸಿ ಪೂರ್ಣ ಆವರಣದಲ್ಲಿ ಹಾದು ಹೋಗುವ ವ್ಯವಸ್ಥೆ ಇದೆ. ಪ್ರವೇಶದ್ವಾರಕ್ಕೆ ಡಬ್ಬಲ್ ಗೇಟಿನ ವ್ಯವಸ್ಥೆ ಇದ್ದು ಒಂದನ್ನು ತೆರೆದು ವಾಹನ ಒಳಗೆ ಹೋದಾಗ ಇನ್ನೊಂದು ಮುಚ್ಚಿಯೇ ಇರುತ್ತದೆ. ಹಿಂದಿನಿಂದ ಮೊದಲನೆಯ ಗೇಟನ್ನು ಮುಚ್ಚಿ ಎರಡನೆಯ ಗೇಟನ್ನು ತೆರೆದು ಸಫಾರಿ ಪಾರ್ಕಿನಲ್ಲಿ ಹೋಗಬಹುದು. ಪಾರ್ಕಿನಿಂದ ಹೊರಗೆ ಬರುವಾಗಲೂ ಅದೇ ರೀತಿಯ ತತ್ವವನ್ನು ಅನುಸರಿಸಬೇಕು. ಪ್ರಾಣಿಗಳನ್ನು ಅವಲಂಬಿಸಿ ಆವರಣಗಳ ವಿಸ್ತಾರವನ್ನು ನಿರ್ಧರಿಸಿ ಆಳವಾದ ಕಂದಕಗಳಿಂದ ಬೇರ್ಪಡಿಸಲಾಗುವುದು. ಪ್ರಾಣಿಗಳು ತಪ್ಪಿಸಿಕೊಂಡು ಹೋಗದಂತೆ ಸೂಕ್ತ ವ್ಯವಸ್ಥೆ ಇರುತ್ತದೆ. ಪ್ರವಾಸಿಗರ ರಕ್ಷಣೆಗೆ ಹಾಗೂ ಅವರಿಗೆ ತೋರಿಸಿ ವಿವರಣೆ ನೀಡಲು ವನ್ಯಪ್ರಾಣಿಗಳ ಕಾರ್ಯನಿರ್ವಹಣೆಯಲ್ಲಿ ತರಬೇತಿ ಪಡೆದ ಹಾಗೂ ಪ್ರಾಣಿಗಳ ಸ್ವಭಾವ, ನಡತೆಗಳ ಬಗ್ಗೆ ಬಲ್ಲ ಸಫಾರಿಯ ವ್ಯವಸ್ಥೆ ಇದ್ದು ಅವನು ಅಸ್ತ್ರಗಳಿಂದ ನೂತನ ಬಂದೂಕು ಹಾಗೂ ಪ್ರಾಣಿಗಳನ್ನು ಮೂರ್ಛೆಗೊಳಿಸುವ ಔಷಧಿಯುಳ್ಳ ಗುಂಡುಗಳಿಂದ ಸುಸಜ್ಜಿತನಾಗಿರುತ್ತಾನೆ.

ಸರ್ಕಸ್ಸಿನ ಹುಲಿ

ಹುಲಿಗಳಿಲ್ಲದ ಸರ್ಕಸ್ಸುಗಳೇ ಇರಲಾರವು. ಸೆರೆವಾಸದಲ್ಲಿ ಹುಟ್ಟಿಬೆಳೆದ ಹುಲಿಗಳಿಗೆ ಜಿಗಿಯಲು, ಹೊರಳಾಡಲು ಹಾಗೂ ಇತರ ತಮಾಷೆ ಕಾರ್ಯಗಳನ್ನು ಮಾಡಲು ತರಬೇತಿ ಕೊಡುವುದು ಅಷ್ಟೇನು ಕಷ್ಟದ ಕಾರ್ಯವಲ್ಲ. ಸರ್ಕಸ್ಸಿನಲ್ಲಿಯ ಹುಲಿಯಿಂದ ಪ್ರೇಕ್ಷಕರಿಗೆ ಅತೀವ ಮನರಂಜನೆ. ಮಕ್ಕಳಿಗೆ ಹುಲಿಯನ್ನು ನೋಡುವುದು ಬಲು ಇಷ್ಟ. ಸರ್ಕಸ್ಸಿನಲ್ಲಿಯ ಹುಲಿಯ ಸ್ವಾತಂತ್ರ್ಯವೇ ಹರಣವಾಗಿರುತ್ತದೆ. ಹುಲಿಯನ್ನು ಪಂಜರದಲ್ಲಿರಿಸಿ ಹಿಂಸಿಸುವುದು ಕ್ರೂರಕಾರ್ಯವೆಂದು ಪ್ರಾಣಿದಯಾಸಂಘದವರ ವಾದ. ಸರ್ಕಸ್ಸುಗಳಲ್ಲಿ ಅದರಲ್ಲಿಯೂ ಗಲಾಟೆಯಿಂದ ಕೂಡಿದ ಪ್ರೇಕ್ಷಕರ ಎದುರಿನಲ್ಲಿ ಹುಲಿಗೆ ನೈಸರ್ಗಿಕ ಚಲನವಲನ ಸಾಧ್ಯವಿಲ್ಲ. ಪಂಜರದಲ್ಲಿಯ ಹುಲಿಗಳು ಅತಿ ಆಲಸಿಗಳಾಗಿದ್ದು ಕಾಡಿನಲ್ಲಿಯ ಹುಲಿಗಳಂತೆ ಉಜ್ವಲ

ವಾದ ನೋಟ ಹೊಂದಿರುವುದಿಲ್ಲ. ಇಂತಹ ಹುಲಿಗಳು ಪ್ರೇಕ್ಷಕರಿಗೆ ಎಷ್ಟರಮಟ್ಟಿಗೆ ಮನೋರಂಜನೆಯನ್ನು ನೀಡಿಯಾವು ?

ಹುಲಿಗಳ ರೋಗ ರುಜಿನಗಳು

ದೊಡ್ಡ ಹುಲಿಗಳು ರೋಗಗಳಿಂದ ಸಾಯುವುದು ಕಡಮೆ. ಅಪರೂಪವಾಗಿ ಕೆಲವು ಹುಲಿಗಳು 'ರೇಬೀಸ್' (ಹುಚ್ಚು) ರೋಗದಿಂದ ನರಳುತ್ತವೆ. ಕ್ರಿ.ಶ. 1943ರಲ್ಲಿ ಅಸ್ಸಾಮಿನ ನೌಗಾಂ ಕಾಡಿನಲ್ಲಿ 'ರೇಬೀಸ್' ರೋಗಪೀಡಿತ ಒಂದು ಹುಲಿ 36 ಘಂಟೆಗಳಲ್ಲಿ 19 ಜನರ ಮೇಲೆ ಬಿದ್ದು ಗಾಯಗೊಳಿಸಿತು. ಆ ಜನರ ಪೈಕಿ 11 ಜನ ಸತ್ತರು. ಸುಲಭ ಪ್ರಸವ ಆಗದೆ ಅನೇಕ ಹುಲಿಗಳು ಸಾಯುವುದುಂಟು. ಹುಲಿಗಳು ಸಾಮಾನ್ಯವಾಗಿ ಕರುಳಿನ ಊತ ಹಾಗೂ ಕಶೇರುಕ ಅನ್ನನಾಳದಲ್ಲಿ ಸೇರುವ ಲಾಡಿ ಹುಳುಗಳಿಂದ ಹೆಚ್ಚಾಗಿ ಬಳಲುತ್ತವೆ. ಕರುಳಿನ ಊತದಿಂದಾಗಿ ಹಠಾತ್ ಭೇದಿಯುಂಟಾಗಿ ಹೆಚ್ಚಿನ ಪ್ರಮಾಣದಲ್ಲಿ ಸಾಯುತ್ತವೆ.

ಹುಲಿಯ ಶತ್ರುಗಳು

ಕೆಲವು ಹುಲಿಗಳು ಬೇಟೆಯಾಡುವಾಗ ಹರಿತವಾದ ಕೋರೆಹಲ್ಲುಗಳುಳ್ಳ ಕಾಡುಹಂದಿ, ಮೈತುಂಬ ಕೋಡು ವಸ್ತುವಿನ ಮೊನಚಾದ ಉದ್ದನೆಯ ಗಟ್ಟಿ ಮುಳ್ಳುಗಳನ್ನು ಹೊಂದಿದ ಮುಳ್ಳುಹಂದಿ, ಹರಿತವಾದ ಬಾಚಿ ಹಲ್ಲು ಹಾಗೂ ಉದ್ದನೆಯ ಬಾಗಿದ ದಪ್ಪ ನಖಗಳುಳ್ಳ ಕರಡಿ, ಬಲವಾದ ಕೊಂಬುಳ್ಳ ಕಾಡೆಮ್ಮೆ ಮತ್ತು ಗೌರ್ (ಕಾಟಿಮೃಗ), ಹರಿತವಾದ ಕೊಂಬು ಹೊಂದಿದ ಖಡ್ಗಮೃಗ, ಆನೆ, ಕೆನ್ನಾಯಿಗಳ ಗುಂಪು ಮೊದಲಾದ ಕಾಡುಪ್ರಾಣಿಗಳ ಹಿಡಿತಕ್ಕೆ ಸಿಕ್ಕಿ ಗಾಯ ಗೊಂಡು ಸಾಯುತ್ತವೆ. ಹುಲಿಮರಿಗಳು ನದಿಗಳಲ್ಲಿ ನೀರು ಕುಡಿಯುವಾಗ ಮೊಸಳೆ ಗಳು ಅವುಗಳನ್ನು ನೀರಲ್ಲಿ ಸೆಳೆದು ಮುಳುಗಿಸಿ ಕೊಂದು ತಿನ್ನುತ್ತವೆ.

ಪಾರಿಭಾಷಿಕ ಶಬ್ದಕೋಶ

ಅಗಿಯುವುದು	Gnawing
ಅಂಗುಲಪಾದಿ	Digitigrade
ಅಟ್ಟಣಿಗೆ	Machan, platform
ಅಧಿಕ ವಿಕಸನ	Expansion
ಅದೃಷ್ಟ ಮೂಳೆ	Lucky bone
ಅಪಧಮನಿ	Artery
ಅಭಿಧಮನಿ	Vein
ಅವಶೇಷ	Fossil
ಅಸ್ಥಿಬಂಧಕ	Ligament
ಆಕುಂಚನ	Contraction
ಆಮೆ	Tortoise
ಉಗುರು	Claw
ಉಪತರಗತಿ	Sub-order
ಉಪಬಗೆ	Sub-species
ಉಪವರ್ಗ	Sub-class
ಉಪಾಸ್ಥಿ	Cartilege
ಉಪ್ಪುನೆಕ್ಕುವ ಗುಂಡಿ	Salt lick
ಎಚ್ಚರ ತಪ್ಪಿಸುವ ಲಸಿಕೆಯಿಂದ ತುಂಬಿದ ಗುಂಡು	Tranquilizer
ಐಚ್ಛಿಕ ಸಂತತಿ ನಿಯಂತ್ರಣ	Voluntary birth control
ಒತ್ತಾಯದಿಂದ ಗರ್ಭಧರಿಸು	Forced pregnancy
ಒಳಕ್ಕೆಳೆದುಕೊ	Retractable
ಕಡವೆ, ಸಾರಗ	Sambar
ಕಣಕಾಲು	Fibula
ಕಣ್ಣುಗೊಂಬೆ	Pupil
ಕರ್ಣೋಪಾಂತ ಗ್ರಂಥಿ	Parotids
ಕತ್ತುಹಿಸುಕು	Strangulate
ಕತ್ತೆಕಿರುಬ	Hyena
ಕಪ್ಪುಕೋತಿ, ಮುಂಗ	Langur monkey
ಕಬಂಧ	Trunk
ಕರಡಿ	Sloth bear
ಕಶೇರು	Vertebra
ಕಸ್ತೂರಿ ಮೃಗ	Musk deer
ಕಳಪೆ	Roughage
ಕಾಟಿಮೃಗ	Gour
ಕಾಡುಬೀಡು	Wilderness
ಕಾಡುಹಂದಿ	Wild boar
ಕಾಡು ಕುರಿ	Barking deer
ಕಾಡು ಕೋಳಿ	Jungle fowl
ಕಾಡುನಾಯಿ	Wild dog, dhole
ಕಾಡಾನೆ	Wild elephant
ಕಾಡಿನ ಕಾನೂನು	Law of bush
ಕಾಡಿನ ಮನುಷ್ಯ	Man of bush
ಕಾಡೆಮ್ಮೆ	Wild buffalo
ಕಾಲುಕೊಳಗಗಳುಳ್ಳ	Hoofed
ಕುಟುಂಬ	Family
ಕುಹರ	Cavity
ಕೃಷ್ಣಮೃಗ	Black buck
ಕೊಳ್ಳೆ ಹೊಡೆಯುವ ಪ್ರಾಣಿ	Predator
ಖಡ್ಗಮೃಗ	Rhynoceros
ಗಲಗು	Reeds
ಗಂಟಲ್ಕುಳಿ	Noose
ಚಪ್ಪೆರೋಗ	Rinder pest disease
ಚಿರತೆ	Leopard, panther
ಚೀರುನಾಯಿ	Wild dog, dhole
ಜವಳು (ಜೌಗು)	Marsh
ಜಾಡಮಾಲಿ	Scager ven
ಜಾತಿ	Genus
ಜಿಂಕೆ	Spotted deer, chital
ಜೀವಿ ಪರಿಸ್ಥಿತಿ ಶಾಸ್ತ್ರ	Ecology, oecology
ತಮಾಷೆ ಮೂಳೆ	Funny bone

ತರಗತಿ	Order
ತರಂಗದಾಟಿ	Rhythemic
ತಳಿ	Variety
ತಿನ್ನುವ	Voro-eat
ತ್ರಿಕಾಸ್ಥಿ	Sacrum
ತೋಳ	Wolf
ತೋಳುಮೂಳೆ, ಡುಬ್ಬದೆಲುಬು	Scapula
ದನಗಳ್ಳ ಹುಲಿ	Cattle lifter
ದ್ವೀಪಕಲ್ಪ, ಪರ್ಯಾಯ ದ್ವೀಪ	Island
ದೃಷ್ಟಿಭ್ರಮೆ	Camoflage or optical illusion
ನರಭಕ್ಷಕ	Man-eater
ನರರಜ್ಜು	Strangulate
ನರಿ	Fox
ನರಹತ್ಯ	Homicide
ನರಹತ್ಯಗಾರ	Mankiller
ನವಿಲು	Peacock
ನಿಗುರುಸ್ನಾಯು	Ejecting muscle
ನಿಷಿದ್ಧ ಬಂದೂಕ,	Illicit gun
ನಿಸರ್ಗದ ಸಮತೋಲನೆ	Balance of nature
ನೀಲಮೃಗ	Nilgai
ಪಂಜ, ಉಗುರು	Claw
ಪರಿಸರ	Surroundings, environment
ಪಾದ	Paw
ಪಿಚಕಾರಿಯಂತೆ ಚಿಮ್ಮು	Jetting
ಪ್ರಕೃತಿ ಛಾಯೆ	Natural shading
ಪ್ರತಿಕೂಲ ಛಾಯೆ	Counter shading
ಪ್ರಭೇದ, ಬಗೆ	Species
ಪ್ರೇತ ಹರಿಯುವ	Flowing past of phantom
ಭಂಗವರ್ಣವಿನ್ಯಾಸ	Disruptive colouration
ಬಲಿ ಪ್ರಾಣಿ	Bait, victim
ಬಾಗುಕತ್ತಿ ಹಲ್ಲುಳ್ಳ	Sabre toothed

ಭಾವ ಪ್ರೇಷಣೆ	Telepathy
ಬೀಳು	Kill
ಬೆಕ್ಕುಗಳ ಕುಟುಂಬ	Felidae (cat) family
ಬೆದೆ	Oestrous
ಬೆಳೆರಕ್ಷಣೆ ಬಂದೂಕು	Crop protection gun
ಬೇಟೆಗಳ್ಳ	Poacher
ಬೇಟೆ ಪ್ರಾಣಿ	Prey animal
ಮಡುವು	Water hole
ಮೃಗರಾಜ	King of beasts
ಮೃದುಅಸ್ಥಿ	Cartilege
ಮನ್ನಾ ಜಂಗಲಿ	Reserve forest
ಮಾಂಸಾಹಾರಿ, ಮಾಂಸಭಕ್ಷಕ	Carnivora
ಮಾಂಸ	Caro, flesh
ಮಿಶ್ರತಳಿ	Cross-breed
ಮೀಸೆ	Whisker
ಮೀಸಲುಧಾಮ	Reserved area
ಮುಖಭೂಮಿ	Delta
ಮುಳ್ಳು (ಏದ)	Quill
ಮುಳ್ಳುಹಂದಿ(ಏದ)	Parcupine
ಮೂರು ಪರಿಮಾಣದ ತೋರಿಕೆ	Three dimension appearance
ಮೇಘಚಿರತೆ	Clouded leopard
ಮೊಸಳೆ	Crocodile
ರಗಟೆಯಲ್ಲಿರುವ	Cortex
ರಂಜಕ	Pigment granules
ರಜ್ಜುಗೊಳಿಸು	Hamstring
ರಣಹದ್ದು	Vulture
ರಸಗ್ರಂಥಿ	Glands
ರಹದಾರಿ	Licence
ರಾಜವೈಭವ	Royal
ರುಚಿಮೊಗ್ಗು	Taste bud
ರೇತ್ರನಾಳ	Sperm duct
ವರ್ಗ	Class
ವರ್ಣದ್ರವ್ಯ	Concealment of shadow

ವರ್ಣಸಾಮರಸ್ಯ	Colour harmony	ಸಸ್ತನಿ	Mammalia
ವನರಾಜ	King of forests	ಸ್ಥಳಬಿಟ್ಟು ಕದಲದಿರು	Stay-put
ವಂಶ	Species	ಸಹಜ ಪ್ರವೃತ್ತಿ	Instinct
ವಾಹಕಯಂತ್ರ	Transmitter	ಸಾರಗ, ಕಡವೆ	Sambar
ವಿಜಯಿ ಚಿಹ್ನೆ	Trophy	ಸಿಗಿದುಹಾಕು	Laceration
ವಿಭಾಜಕ, ವಪೆ	Diaphragm	ಸಿಂಹನಾರಿ	Sphynx
ವಿಭೇದ	Strain	ಸೂಚಿಪರ್ಣ ಅರಣ್ಯ	Pine forest
ವಿವಿಕ್ತ	Recessive	ಹಾನಿಕಾರಿ ಪ್ರಾಣಿ	Vermin
ಶಕ್ತಿವರ್ಧಕ	Aphrodisiac	ಹಾವಸೆ	Algae
ಶೀತಕಯಂತ್ರ	Refrigirator	ಹುದುಗು	Fermentation
ಶುಕ್ರರಜ್ಜು	Vas deferens	ಹುರುಪುರೋಗ	Mange, mangy
ಶುದ್ಧತಳಿ	Pure breed	ಹುಲಿಗಣತಿ	Tiger census
ಸಂತಾನೋತ್ಪತ್ತಿ	Breeding	ಹೆಜ್ಜೆಗುರ್ತು	Pug mark
ಸ್ರವಿಕೆ	Secretion		

ಆಧಾರ ಗ್ರಂಥಗಳು

1. Adamson, Joy, **Born Free.** London & Glasgow: Collins, Fontana books, 1970.
2. Adamson, Joy, **Living Free.** London & Glasgow: Collins, Fontana books, 1970.
3. Adamson, Joy, **Forever Free.** London & Glasgow: Collins, Fontana books, 1970.
4. Adamson, Joy, **The Spotted Sphinx.** London & Glasgow: Collins, Fontana books, 1971.
5. Adamson, Joy, **Pippa's Challenge.** London: Collins and Haevill Press, 1972.
6. Arjan Singh, **Tiger Heaven.** London: Macmillan London Ltd., 1973.
7. Adamson, George, **Bwana Game.** London & Glasgow: Collins, Fontana books, 1971.
8. Augustus Somerville, **The passing of the Forest Gods.** Calcutta: Thacker Spink and Co. Pvt. Ltd., 1965.
9. Balakrishna Seshadri, **The Twilight Of India's Wild Life.** Bombay: Oxford University Press, 1969.
10. Chaturvedi, M. D., **The Felines.** New Delhi: National Book Trust of India, 1968.
11. Carrington Turner, J. E., **Man Eaters and Memories.** Bombay: Jaico Publishing House, 1967.
12. Gee, E. P., **The Wild Life Of India.** London & Glasgow: Collins Press, 1969.
13. Guy Mount Fort, **Tigers.** New York: Crescent Books, 1973.
14. Hugh Gantze, **The Man-eater of Nunihat.** Delhi: Hind Pocket Books Pvt. Ltd., 1974.
15. James Fisher and Others, **The Red Book-Wild Life in Danger.** London: Collins Press, 1972.
16. Jack Denton Scott, **Forests of the Nights.** Bombay: Jaico Publishing House, 1959.

17. Jim Corbett, **Man Eaters of Kumaon,** Calcutta: Oxofrd University Press, 1952.

18. Jim Corbett, **Jungle Lore.** Calcutta: Oxford University Press, 1967.

19. Jit Roy, **Shikar Tales by the Barrel.** Bombay: Ashok Printing Press, 1968.

20. Kailash Sankhala, **Tigerland.** London: Collins Press, 1975.

21. Khan Saheb Jamshed Batte, **Shikar.** Bombay: Jaico Publishing House, 1967.

22. Kesri Singh, Col., **The Tiger of Rajastan.** Bombay: Jaico Publishing House, 1975.

23. Kesri Singh, Col., **Hints on Tiger Shooting.** Bombay: Jaico Publishing House, 1975.

24. Kenneth Anderson, **Nine Man Eaters and One Rogue.** London: George Allen and Unwin Ltd., 1961.

25. Mackay, R. D., **Have You Shot An Indian Tiger?** New Delhi: Laxmi Book Store, 1967.

26. Prince Philip and James Fisher, **Wild Life Crisis.** London: Hamish Hamilton Ltd., 1970.

27. Prater, S. H., **Indian Animals.** Bombay: Bombay Natural History Society, 1971.

28. Sher Jung, **Trist With Tigers.** Delhi: Hind Pocket Books Pvt. Ltd.

29. Sher Jung, **Ramblings in Tigerland.** New Delhi: Orient Longmans Ltd., 1970.

30. Storer and Usinger, **General Zoology.** Tokyo: Kogakusha & Co., Ltd., 1965.

31. Stracy, P. D., **Tigers.** London & New York: Arthur Barker and Golden Press Ltd., 1968.

32. Schaller George, B., **Tigers and Deers.** Chicago and London: The University of Chicago Press, 1972.

33. — **Project Tiger.** Dehradun: Indian Board for Wild Life, Govt. of India, 1972.

34. Basappanavar, C. H., 1974. Siezure of Wild Life Skins. *My Forest,* June 1974; **10**(2), 43–44.

35. Feroze Gheyara, 1973. Foul Murder of Our Wild Animals—Spot It Now. *Illustrated Weekly of India.* Jan. 14, 1973; 36–41.

36. Krishnan, M., 1972. An Ecological Survey of the Larger Mammals of Peninsular India. *Journal of the Natural History Society,* April 1972; 69(1), 26–32.

37. Padma Rao, 1973. Albino Animals. *Illustrated Weekly of India,* Feb. 11, 1973; 50–51.

38. Ramesh Chandran, 1973. Death of the Tiger. *Illustrated Weekly of India,* May 20, 1973; 20–27.

39. Shankaraiah, G. M., 1971. Capture of Live Tiger. *The Indian Forester,* Aug. 1971; 87(8), 493–95.

40. Zafer Futehally, 1972. Saving the Indian Tiger. *Illustrated Weekly of India,* Dec. 17, 1972; 51.

ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದ ಪ್ರಕಟಣೆಗಳು

1.	ಸುಭಿಕ್ಷತೆಗೆ ತೆರೆದ ಬಾಗಿಲು	(ಪ್ರತಿಗಳು ತೀರಿವೆ)	ರೂ.	2–00
2.	ಪೀಡೆ ನಿರ್ವಹಣೆ	(,,)		5–00
3.	ಕೀಟ ವಿಂಗಡಣೆ			15–00
4.	ಕೀಟ ಹತೋಟಿ	(ದ್ವಿತೀಯ ಮುದ್ರಣ)		12–50
5.	ಸಾಕುಪ್ರಾಣಿಗಳ ಶರೀರಕ್ರಿಯಾ ಶಾಸ್ತ್ರ (ಭಾಗ I)		ಸಾದಾ ಪ್ರತಿ	16–25
6.	ತರಕಾರಿ ಬೇಸಾಯ	(ಪ್ರತಿಗಳು ತೀರಿವೆ)		12–50
7.	ಕೃಷಿ ರಸಾಯನ ಶಾಸ್ತ್ರ ಶಬ್ದಾರ್ಥ ನಿರೂಪಣಾವಳಿ		ಸಾದಾ ಪ್ರತಿ	6–25
			ಕ್ಯಾಲಿಕೊ ಪ್ರತಿ	10–00
8.	ಮಣ್ಣು ಮತ್ತು ನೀರು ಸಂರಕ್ಷಣಾ ಕೈಪಿಡಿ		ಸಾದಾ ಪ್ರತಿ	15–00
			ಕ್ಯಾಲಿಕೊ ಪ್ರತಿ	19–00
9.	ರೈತರ ನೆಚ್ಚು ಮೆಚ್ಚಿನ ಮರಗಳು		ಸಾದಾ ಪ್ರತಿ	15–00
			ಕ್ಯಾಲಿಕೊ ಪ್ರತಿ	19–00
10.	ಸಾಕುಪ್ರಾಣಿಗಳ ಶರೀರಕ್ರಿಯಾ ಶಾಸ್ತ್ರ (ಭಾಗ II)		ಸಾದಾ ಪ್ರತಿ	11–25
			ಕ್ಯಾಲಿಕೊ ಪ್ರತಿ	15–00
11.	ಮೈಸೂರು ರಾಜ್ಯದಲ್ಲಿ ಕೃಷಿ	(ಪ್ರತಿಗಳು ತೀರಿವೆ)		12–50
12.	ಮಣ್ಣು ಮತ್ತು ನೀರು ನಿರ್ವಹಣೆ		ಸಾದಾ ಪ್ರತಿ	15–00
			ಕ್ಯಾಲಿಕೊ ಪ್ರತಿ	19–00
13.	ಮಣ್ಣು		ಸಾದಾ ಪ್ರತಿ	11–25
			ಕ್ಯಾಲಿಕೊ ಪ್ರತಿ	15–00
14.	ಕೃಷಿ ಸಹಕಾರ		ಸಾದಾ ಪ್ರತಿ	6–25
			ಕ್ಯಾಲಿಕೊ ಪ್ರತಿ	10–00
15.	ಕಳೆಗಳು ಮತ್ತು ಕಳೆಗಳ ನಿಯಂತ್ರಣ		ಸಾದಾ ಪ್ರತಿ	15–00
			ಕ್ಯಾಲಿಕೊ ಪ್ರತಿ	19–00
16.	ಗೋಸಂಪತ್ತು		ಸಾದಾ ಪ್ರತಿ	6–00
			ಕ್ಯಾಲಿಕೊ ಪ್ರತಿ	10–00
17.	ಧಾನ್ಯ ದಾಸ್ತಾನು ತತ್ವ ಮತ್ತು ಪದ್ಧತಿಗಳು		ಸಾದಾ ಪ್ರತಿ	7–50
			ಕ್ಯಾಲಿಕೊ ಪ್ರತಿ	11–25
18.	ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆ		ಸಾದಾ ಪ್ರತಿ	17–50
			ಕ್ಯಾಲಿಕೊ ಪ್ರತಿ	21–25
19.	ಪಶುವೈದ್ಯಕೀಯ ವಿಜ್ಞಾನ		ಸಾದಾ ಪ್ರತಿ	7–50
			ಕ್ಯಾಲಿಕೊ ಪ್ರತಿ	11–25
20.	ಹೊಲದ ಬೆಳೆಗಳಿಗೆ ಬೀಳುವ ಕೆಲವು ಕೀಟಗಳು		ಸಾದಾ ಪ್ರತಿ	8–25
			ಕ್ಯಾಲಿಕೊ ಪ್ರತಿ	12–00

21. ಟ್ರಾಕ್ಟರು ಹಾಗೂ ಟ್ರಾಕ್ಟರುಗಳನ್ನು ಸುಸ್ಥಿತಿಯಲ್ಲಿಡುವ ಕ್ರಮಗಳು — ಸಾದಾ ಪ್ರತಿ 7–50; ಕ್ಯಾಲಿಕೊ ಪ್ರತಿ 12–50

22. ಸಾಕುಪ್ರಾಣಿಗಳ ಶರೀರಕ್ರಿಯಾ ಶಾಸ್ತ್ರ (ಭಾಗ III) — ಸಾದಾ ಪ್ರತಿ 10–00; ಕ್ಯಾಲಿಕೊ ಪ್ರತಿ 15–00

23. ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳು — ಸಾದಾ ಪ್ರತಿ 11–25; ಕ್ಯಾಲಿಕೊ ಪ್ರತಿ 16–25

24. ಕಣಜದ ಪೀಡೆಗಳು ಮತ್ತು ಅವುಗಳ ಹತೋಟಿ — ಸಾದಾ ಪ್ರತಿ 15–00; ಕ್ಯಾಲಿಕೊ ಪ್ರತಿ 19–00

25. ಸಸ್ಯವರ್ಗೀಕರಣ ಶಾಸ್ತ್ರ — ಸಾದಾ ಪ್ರತಿ 15–00; ಕ್ಯಾಲಿಕೊ ಪ್ರತಿ 20–00

26. ಪೌಷ್ಟಿಕ ಆಹಾರ — ಸಾದಾ ಪ್ರತಿ 9–00; ಕ್ಯಾಲಿಕೊ ಪ್ರತಿ 14–00

27. ಕಡಲ ಮೀನುಗಾರಿಕೆ — ಸಾದಾ ಪ್ರತಿ 5–00; ಕ್ಯಾಲಿಕೊ ಪ್ರತಿ 10–00

28. ಧಾನ್ಯದ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ — 10–75

29. ಕಬ್ಬಿನ ಬೆಳೆಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ — 4–50

30. ಶಿಶುವಿಹಾರ — ಸಾದಾ ಪ್ರತಿ 9–50; ಕ್ಯಾಲಿಕೊ ಪ್ರತಿ 13–25

31. ಬೇಳೆಕಾಳು ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ — 7–50

32. ಕೃಷಿ ಎಂಜಿನಿಯರಿಂಗ್ ಪಠ್ಯಪುಸ್ತಕ ಸಮೀಕ್ಷಣೆ — ಸಾದಾ ಪ್ರತಿ 9–50; ಕ್ಯಾಲಿಕೊ ಪ್ರತಿ 14–00

33. ಇಲಿಗಳು ಹಾಗೂ ಅವುಗಳ ನಿಯಂತ್ರಣ — ಸಾದಾ ಪ್ರತಿ 9–50; ಕ್ಯಾಲಿಕೊ ಪ್ರತಿ 13–25

34. ತರಕಾರಿ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ — 12–50

35. ಹಣ್ಣಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ — 16–25

36. 'ಕ್ಯಾನಿಂಗ್' ಆಹಾರ ಜೋಪಾಸನೆಯ ಒಂದು ಆಧುನಿಕ ವಿಧಾನ — ಸಾದಾ ಪ್ರತಿ 16–25; ಕ್ಯಾಲಿಕೊ ಪ್ರತಿ 21–00

37. ಅಲಂಕಾರ ಸಸ್ಯಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ — 10–75

38. ಜೀವಕೋಶ ಕ್ರಿಯಾಶಾಸ್ತ್ರ ಮತ್ತು ಜೀವರಸಾಯನಶಾಸ್ತ್ರ — ಸಾದಾ ಪ್ರತಿ 20–00; ಕ್ಯಾಲಿಕೊ ಪ್ರತಿ 25–00

39. ಎಲುಬು ಶಾಸ್ತ್ರ	ಸಾದಾ ಪ್ರತಿ	11–25
	ಕ್ಯಾಲಿಕೊ ಪ್ರತಿ	16–25
40. ಕಡಲೆಕಾಯಿ (ಶೇಂಗಾ)	ಸಾದಾ ಪ್ರತಿ	10–00
	ಕ್ಯಾಲಿಕೊ ಪ್ರತಿ	15–00
41. ಗಣಿತಶಾಸ್ತ್ರ ಪ್ರವೇಶಿಕೆ (ಭಾಗ I)	ಸಾದಾ ಪ್ರತಿ	25–00
	ಕ್ಯಾಲಿಕೊ ಪ್ರತಿ	30–00
42. ತೆಂಗು, ಅಡಿಕೆ ಹಾಗೂ ಇತರ ಗರಿಮರಗಳ ಕೀಟಗಳು ಹಾಗೂ ಅವುಗಳ ಹತೋಟಿ		9–00
43. ಪ್ಲಾಂಟೇಶನ್ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		12–00
44. ಭಾರತದಲ್ಲಿ ಕೋಳಿಸಾಕಣೆ	ಸಾದಾ ಪ್ರತಿ	22–50
	ಕ್ಯಾಲಿಕೊ ಪ್ರತಿ	27–50
45. ಕಲ್ಲಿಂನಾರು (ಭೂತಾಳೆ)ಗಿಡಗಳು	ಸಾದಾ ಪ್ರತಿ	5–00
46. ಎಣ್ಣೆಬೀಜ (ಕಾಳು)ಗಳ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		7–50
47. ಭಾರತೀಯ ಗ್ರಾಮೀಣ ಯುವಕ ರೈತ ಸಂಘಗಳ ಸಂಘಟನೆ	ಸಾದಾ ಪ್ರತಿ	8–25
	ಕ್ಯಾಲಿಕೊ ಪ್ರತಿ	13–25
48. ಹತ್ತಿ (ನೂಲು) ಮತ್ತು ನಾರಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		10–00
49. ಪಶುರೋಗಗಳು ಮತ್ತು ಸಾರ್ವಜನಿಕ ಆರೋಗ್ಯ	ಸಾದಾ ಪ್ರತಿ	12–50
	ಕ್ಯಾಲಿಕೊ ಪ್ರತಿ	17–50
50. ಮೀನುಗಾರಿಕೆ	ಸಾದಾ ಪ್ರತಿ	10–00
	ಕ್ಯಾಲಿಕೊ ಪ್ರತಿ	15–00
51. ಹಸುರೆಲೆ ಗೊಬ್ಬರ, ಮೇವು ಹಾಗೂ ಉಪ್ಪುನೇರಳೆ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		5–00
52. ಸಾಕುಪ್ರಾಣಿ ಮೂಲದ ಸೋಂಕು ರೋಗಗಳು	ಸಾದಾ ಪ್ರತಿ	7–50
	ಕ್ಯಾಲಿಕೊ ಪ್ರತಿ	12–50
53. ಮಾದಕ (ಹೊಗೆಸೊಪ್ಪು, ಗಾಂಜ) ಹಾಗೂ ಸಾಂಬಾರ (ಅರಿಶಿನ ಇತ್ಯಾದಿ) ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		3–75
54. ಕೃಷಿ ಉಪಯೋಗಿ ಕೆಲವು ವೃಕ್ಷಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		4–25

55.	ಸಸ್ಯ ಸಾಮ್ರಾಜ್ಯ	ಸಾದಾ ಪ್ರತಿ 52–00
		ಕ್ಯಾಲಿಕೊ ಪ್ರತಿ 30–00
56.	ಜೇನುಸಾಕಣೆ	ಸಾದಾ ಪ್ರತಿ 17–50
		ಕ್ಯಾಲಿಕೊ ಪ್ರತಿ 22–50
57.	ಬೆಳೆಕೀಟಗಳು ಮತ್ತು ಅವುಗಳ ಹತೋಟಿ	ಕ್ಯಾಲಿಕೊ ಪ್ರತಿ 125–00
58.	ಮೂಲ ಅರ್ಥಶಾಸ್ತ್ರ	ಸಾದಾ ಪ್ರತಿ 19–00
		ಕ್ಯಾಲಿಕೊ ಪ್ರತಿ 24–00
59.	ಕೃಷಿ ರಸಾಯನಶಾಸ್ತ್ರ ಪಾರಿಭಾಷಿಕ ಶಬ್ದಕೋಶ	ಸಾದಾಪ್ರತಿ 3–25
60.	ತರಕಾರಿ ಬೆಳೆಗಳ ಕೀಟನಿಯಂತ್ರಣ	ಸಾದಾಪ್ರತಿ 12–50
		ಕ್ಯಾಲಿಕೊ ಪ್ರತಿ 19–00
61.	ಹುಲಿ-ಭಾರತದ ರಾಷ್ಟ್ರೀಯ ಮೃಗ	ಸಾದಾ ಪ್ರತಿ 20–00
		ಕ್ಯಾಲಿಕೊ ಪ್ರತಿ 24–00
62.	ಭಾರತದಲ್ಲಿ ಜೇನುಸಾಕಣೆ	ಸಾದಾ ಪ್ರತಿ 20–00
		ಕ್ಯಾಲಿಕೊ ಪ್ರತಿ 25–00
63.	ದೊಡ್ಡರೋಗ	(ಅಚ್ಚಿನಲ್ಲಿದೆ)
64.	ಬೀಜಗಣಿತ ಪರಿಚಯ	(,,)
65.	ರೇಖಾತ್ಮಕ ಬೀಜಗಣಿತ	(,,)
66.	ಸಂಸ್ಕೃತಿಯ ರೂಪಿಕೆಗಳು	(,,)
67.	ಸಹಕಾರಿ ಬೇಸಾಯ	(,,)
68.	ಕೋಶ	(,,)
69.	ಮಣ್ಣು ಶಿಲೀಂಧ್ರ ಕೈಪಿಡಿ	(,,)
70.	ನೀರಾವರಿ ತತ್ವ ಹಾಗೂ ಪದ್ಧತಿಗಳು	(,,)
71.	ಪ್ರಾಣಿಗಳ ವರ್ತನೆ	(,,)
72.	ಸಾಕುಪ್ರಾಣಿಗಳ ಭ್ರೂಣಶಾಸ್ತ್ರ	(..)
73.	ಸಾವಯುವ ರಸಾಯನಶಾಸ್ತ್ರ	(,,)
74.	ಕೃಷಿ ಅನಿಲಯಂತ್ರ ಹಾಗೂ ಟ್ರಾಕ್ಟರುಗಳು	(,,)
75.	ಮಣ್ಣು–ನಿರ್ವಹಣೆ. ಸಂರಕ್ಷಣೆ ಹಾಗೂ ಬೆಳೆ ಉತ್ಪಾದಕತೆ	(,,)
76.	ಸಸ್ಯ ತಳಿಅಭಿವೃದ್ಧಿ ವಿಧಾನಗಳು	(,,)
77.	ಕೆಲವು ಸಸ್ಯಗಳ ವೈಜ್ಞಾನಿಕ ಇಂಗ್ಲಿಷ್ ಹಾಗೂ ಕನ್ನಡ ಹೆಸರುಗಳು	(,,)
78.	ಪ್ರಾಣಿ ಕ್ರಿಯಾಶಾಸ್ತ್ರ	(,,)